ಭಲವಾದಿ ಸಮುದಾಯ : ಸಮಾಜಶಾಸ್ತ್ರೀಯ ಅಧ್ಯಯನ

(ಗದಗ ಜಿಲ್ಲೆಯನ್ನು ಪರಿಗಣಿಸಿ)

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಎಸ್. ವಾಯ್. ಹೊನ್ನುಂಗರ
ಸಹಪ್ರಾಧ್ಯಾಪಕರು
ಎಸ್.ಎಸ್. ಎಮ್.ಎಸ್. ಮಹಾವಿದ್ಯಾಲಯ
ಅಥಣಿ

ಮಾರ್ಗದರ್ಶಕರು
ಡಾ. ಚಲುವರಾಜು
ಸಹಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ಸಮಾಜ ವಿಜ್ಞಾನಗಳ ನಿಕಾಯ,
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬
೨೦೧೩

ಛಲವಾದಿ ಸಮುದಾಯ : ಸಮಾಜಶಾಸ್ತ್ರೀಯ ಅಧ್ಯಯನ

(ಗದಗ ಜಿಲ್ಲೆಯನ್ನು ಪರಿಗಣಿಸಿ)

ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಮಹಾಪ್ರಬಂಧ

ಸಂಶೋಧಕರು
ಎಸ್. ವಾಯ್. ಹೊನ್ನುಂಗರ
ಸಹಪ್ರಾಧ್ಯಾಪಕರು
ಎಸ್.ಎಸ್. ಎಮ್.ಎಸ್. ಮಹಾವಿದ್ಯಾಲಯ
ಅಥಣಿ

ಮಾರ್ಗದರ್ಶಕರು
ಡಾ. ಚಲುವರಾಜು
ಸಹಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ಸಮಾಜ ವಿಜ್ಞಾನಗಳ ನಿಕಾಯ,
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

೨೦೧೩

ಘೋಷಣಾ ಪತ್ರ

"ಛಲವಾದಿ ಸಮುದಾಯ : ಸಮಾಜಶಾಸ್ತ್ರೀಯ ಅಧ್ಯಯನ" (ಗದಗ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಸಂಶೋಧನ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಡಾ. ಚಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರ ಪಡಿಸುತ್ತಿದ್ದೇನೆ.

ಈ ಸಂಶೋಧನ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ, ಇತರ ಉದ್ದೇಶಗಳಿಗಾಗಲಿ ಸಲ್ಲಿಸಿರುವದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ದಿನಾಂಕ :

ಸ್ಥಳ : ವಿದ್ಯಾರಣ್ಯ

ಎಸ್. ವಾಯ್. ಹೊನ್ನುಂಗರ

ದೃಢೀಕರಣ ಪತ್ರ

"ಛಲವಾದಿ ಸಮುದಾಯ : ಸಮಾಜಶಾಸ್ತ್ರೀಯ ಅಧ್ಯಯನ" (ಗದಗ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಸಂಶೋಧನ ಮಹಾಪ್ರಬಂಧವನ್ನು ಶ್ರೀ ಶಾಂತಮಲ್ಲಪ್ಪ ಯಶ್ವಂತರಾಯ ಹೊನ್ನುಂಗರ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದಾರೆ.

ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು
ಡಾ. ಚಲುವರಾಜು
ಸಹ ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ–ವಿದ್ಯಾರಣ್ಯ–೫೮೩೨೭೬

ಪರಿವಿಡಿ

ಅಧ್ಯಾಯ – ೧

ಅಧ್ಯಯನ ಉದ್ದೇಶ, ವ್ಯಾಪ್ತಿ, ಮಹತ್ವ, ಮತ್ತು ವಿಧಾನ ಹಾಗೂ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮತ್ತು ಅಧ್ಯಯನದ ಸ್ವರೂಪ

೧.೧ ಪ್ರಸ್ತಾವನೆ

೧.೨ ಅಧ್ಯಯನ ಉದ್ದೇಶ

೧.೩ ವ್ಯಾಪ್ತಿ

೧.೪ ಮಹತ್ವ

೧.೫ ವಿಧಾನಗಳು

೧.೬ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೭ ಅಧ್ಯಯನದ ಸ್ವರೂಪ

ಅಧ್ಯಾಯ–೧

ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ವಿಧಾನ ಮತ್ತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಪ್ರಸ್ತಾವನೆ :

ಸಮುದಾಯದ ಅಧ್ಯಯನವು ಮಾನವಶಾಸ್ತ್ರದ ಚಟುವಟಿಕೆಯ ಭಾಗವಾಗಿ ರೂಪುಗೊಂಡಿದೆ. ಭಾರತದಲ್ಲಿ ನಡೆದಿರುವ ಸಮುದಾಯ ಅಧ್ಯಯನಗಳಿಗೆ ಸರಿಸುಮಾರು ನೂರೈವತ್ತು ವರ್ಷಗಳ ಇತಿಹಾಸವಿದೆ. ೧೭೭೪ರಲ್ಲಿ ಕಲ್ಕತ್ತಾದಲ್ಲಿ ಪ್ರಾರಂಭವಾದ 'ಏಶಿಯಾಟಿಕ ಸೊಸೈಟಿ ಬೆಂಗಾಲ್' ಸಂಸ್ಥೆಯ ಮೂಲಕ ಈ ಅಧ್ಯಯನ ಪ್ರಾರಂಭವಾಯಿತು. ಮೊದಲಿಗೆ ಅಧ್ಯಯನ ಕೈಗೊಂಡ ಓರಿಯಂಟಲಿಸ್ಟರು ಮುಂದೆ ಭಾರತದಲ್ಲಿ ನಡೆದ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳ ಮೇಲೆ ನಿರ್ಣಾಯಕವಾಗಿ ಪ್ರಭಾವ ಬೀರಿದರು. ಜೊತೆಗೆ ಯುರೋಪಿನಲ್ಲಿ ಸಾಕಷ್ಟು ಜನಪ್ರಿಯವಾಗಿದ್ದ ವಿಜ್ಞಾನದ ವಿಧಾನ ಮತ್ತು ಓರಿಯಂಟಲಿಸ್ಟರ ವೈಧಾನಿಕತೆ ಎರಡೂ ಭಾರತದಲ್ಲಿ ನಡೆದ ಸಮಾಜ ವಿಜ್ಞಾನಗಳ ಸಂಶೋಧನೆಗಳ ಮೇಲೆ ಪ್ರಭಾವ ಬೀರಿದವು.

"ವಸಾಹತುಶಾಹಿ ಕಾಲಘಟ್ಟದಲ್ಲಿ ಸಮಾಜವಿಜ್ಞಾನ ಸಂಬಂಧಿತ ಜ್ಞಾನಶಿಸ್ತುಗಳು ಸಂಚಯನಗೊಂಡವು. ಇಂದಿನ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳಂತಹ ಜ್ಞಾನಶಿಸ್ತುಗಳು ವಸಾಹತುಶಾಹಿ ಕಾಲಘಟ್ಟದಲ್ಲಿಯೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡವು. ವಸಾಹತುಶಾಹಿ ಆಳ್ವಿಕೆಗೂ ಸಮಾಜ ವಿಜ್ಞಾನಗಳ ಜ್ಞಾನಶಿಸ್ತುಗಳು ಭಾರತದಲ್ಲಿ ಪ್ರಚಲಿತಗೊಂಡ ಪ್ರಕ್ರಿಯೆಗೂ ಒಂದು ಅರ್ಥದಲ್ಲಿ ನೇರ ಸಂಬಂಧವಿದೆ. ಹೀಗಾಗಿ ಭಾರತದ ಸಾಮಾಜಿಕ ಅಧ್ಯಯನಗಳ ಚರಿತ್ರೆಯೆಂದರೆ ವಸಾಹತುಶಾಹಿ ಆಡಳಿತದ ಏಳುಬೀಳು ಹಾಗೂ ಚಾರಿತ್ರಿಕ ಬೆಳವಣಿಗೆಯ ಅಧ್ಯಯನವೆ ಆಗುತ್ತದೆ. ಭಾರತದಲ್ಲಿ ಸಾಮಾಜಿಕ ಅಧ್ಯಯನಗಳಿಗೆ ಶಾಸ್ತ್ರರೂಪ ಪ್ರಾಪ್ತವಾಗುವಲ್ಲಿ ಪಾಶ್ಚಿಮಾತ್ಯ ದೇಶಗಳು ಪ್ರಮುಖ ಕಾರಣವಾಗಿವೆ. ಅವು ಭಾರತವನ್ನು ಆಳಲಾರಂಭಿಸಿದ ಮೇಲೆ ಸಾಮಾಜಿಕ ಅಧ್ಯಯನಶಾಸ್ತ್ರ ಮತ್ತು ಜ್ಞಾನಶಿಸ್ತುಗಳ ಉಗಮ ಕೂಡ ಯುರೋಪಿನಲ್ಲಿ ಸಂಭವಿಸಿತು. ಈ ಶಿಸ್ತುಗಳ ಅಧ್ಯಯನ ವಿಧಾನಗಳೂ ರೂಪುಗೊಂಡಿದ್ದು ಪಾಶ್ಚಿಮಾತ್ಯರ ಆಕ್ರಮಣಕಾರಿ ಪ್ರವೃತ್ತಿಯ ಕುಲುಮೆಯಲ್ಲಿ. ಈ ಕಾರಣದಿಂದ ಸಮಾಜ ವಿಜ್ಞಾನಗಳ ಹುಟ್ಟು ಮತ್ತು ವಿಧಾನಗಳನ್ನು ಅಧ್ಯಯನ ಮಾಡುವುದೆಂದರೆ ಪರೋಕ್ಷವಾಗಿ ಆಧುನಿಕ ಯುರೋಪಿನ ರಾಜಕಾರಣವನ್ನು ಅಧ್ಯಯನ ಮಾಡಿದಂತೆಯೆ ಆಗುತ್ತದೆ. ಸಮುದಾಯ ಅಧ್ಯಯನದ ದೆಸೆಯಿಂದ ಮಾನವಶಾಸ್ತ್ರ ಯಾವಾಗ ಹುಟ್ಟಿಕೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ಪ್ರಾಯಶಃ ಇಂದು ಕಾಣುವ ಸಮಾಜ ವಿಜ್ಞಾನಗಳ ಮೂಲಕ ಮಾನವ ತನ್ನ ಸಮಾಜವನ್ನು ತಾನೇ ವಿವರಿಸಿಕೊಳ್ಳಲು

ತೊಡಗಿರಬೇಕು. ಆದರೆ ಸಮಾಜ ವಿಜ್ಞಾನದ ಶಿಸ್ತೊಂದು ಹುಟ್ಟಿಕೊಂಡ ಕಾಲವನ್ನು ಆಧಾರ ಸಹಿತ ಹೇಳುವುದು ಕಷ್ಟ.

ಇಂದಿಗೂ ಸಮುದಾಯದ ಅಧ್ಯಯನಗಳಿಗೆ ಮೂಲವಾಗಿರುವ ಮಾನವಶಾಸ್ತ್ರ ಯುರೋಪಿನ ಯಾವ ಚಾರಿತ್ರಿಕ ಕಾಲಘಟದಲ್ಲಿ ಹುಟ್ಟಿಕೊಂಡಿತು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಇವಾನ್ಸ್ ಪ್ರಿಚೌರ್ಡ್ ಅವರು 'ಮಾನವಶಾಸ್ತ್ರ ಹದಿನೆಂಟನೆಯ ಶತಮಾನದಲ್ಲಿ ಜನ್ಮ ತಾಳಿತು. ಇದು ಯುರೋಪಿನ 'ಎನ್‌ಲೈಟ್‌ಮೆಂಟ್ ಯುಗದ ಕೂಸು' (ಇವಾನ್ಸ್ ಪ್ರಿಚಾರ್ಡ್ ೨೧-೨೦೦೦.) ಎಂದಿದ್ದಾರೆ.

ವಸಾಹತುಶಾಹಿ ಕಂಪನಿ ಸರಕಾರ ಭಾರತವನ್ನು ಪೂರ್ವಭಾರತ, ಮಧ್ಯ ಭಾರತ, ದಕ್ಷಿಣ ಭಾರತ ಮತ್ತು ಉತ್ತರ ಭಾರತಗಳೆಂದು ನಾಲ್ಕು ವಿಭಾಗಗಳೆಂದು ವಿಭಜಿಸಿತು. ಪ್ರತಿಯೊಂದು ಪ್ರಾಂತ್ಯಕ್ಕೂ ತಜ್ಞ ಆಡಳಿತಗಾರರನ್ನು ನೇಮಿಸಿತು. ಪೂರ್ವ ಭಾರತಕ್ಕೆ ಹರ್ಬಟ್ ರಿಸ್ಲೆ, ಡಾಲ್ಟನ್, ಓಮಲ್ಲೇ ಅವರನ್ನೂ ಮಧ್ಯಭಾರತಕ್ಕೆ ರಸೆಲ್, ದಕ್ಷಿಣ ಭಾರತಕ್ಕೆ ಥರ್ಸ್ಟನ್, ಮತ್ತು ಉತ್ತರ ಭಾರತಕ್ಕೆ ಕ್ರೂಕ್‌ರವರನ್ನೂ ನೇಮಿಸಿದ್ದರು. ಮುಂದೆ ಇವರ ಸಂಪಾದಕತ್ವದಲ್ಲಿ ಎನ್‌ಸೈಕ್ಲೋಪಿಡಿಯಾ ಮಾದರಿಯ ಹಲವು ಸಂಪುಟಗಳಲ್ಲಿ ಭಾರತದ ಬುಡಕಟ್ಟು ಸಮುದಾಯಗಳ ಕುರಿತು ಮಾಹಿತಿ ಪ್ರಕಟವಾಯಿತು. ಇದಕ್ಕೂ ಮೊದಲು ವಸಾಹತು ಆಡಳಿತಾಧಿಕಾರಿಗಳು ಮತ್ತು ಕೆಲವು ಮಿಶನರಿಗಳು ಭಾರತದಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ಮಾಡಲು ಪ್ರಾರಂಭಿಸಿದ್ದರು. ಹಾಗೆ ನೋಡಿದರೆ ಮದ್ರಾಸ್‌ನಿಂದ ಮಲಬಾರ್‌ವರೆಗೆ ಪ್ರಯಾಣ ಮಾಡಿ ರಚಿಸಿದ 'ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರ ಆಂಡ್ ಮಲ್ಬಾರ್' ಎಂಬ ಕೃತಿ ದಕ್ಷಿಣ ಭಾರತದ ಸಾಮಾಜಿಕ ಮತ್ತು ಭೌಗೋಳಿಕ ವಿವರಗಳನ್ನು ನೀಡುತ್ತದೆ. ಈ ಕೃತಿ ೧೮೦೭ರಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟವಾಯಿತು. ಅಂದಿನ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯ ಸೂಚನೆಯ ಮೇರೆಗೆ ಫ್ರಾನ್ಸಿಸ್ ಬುಕಾನಿನ್ ತನ್ನ ಅಧ್ಯಯನ ಪ್ರವಾಸ ಕೈಗೊಂಡನು. ಇದು ಬ್ರಿಟಿಷ್ ಆಡಳಿತ ಕಾಲದಲ್ಲಿ ಭಾರತದ ಸಾಮಾಜಿಕ ಅಧ್ಯಯನಗಳಲ್ಲಿ ಕಂಡುಬಂದ ಪ್ರಥಮ ಪ್ರಯತ್ನವಾಗಿದೆ.

೧೭೯೨ರಲ್ಲಿ ಭಾರತಕ್ಕೆ ಬಂದ ಫ್ರೆಂಚ್ ಪಾದ್ರಿ ಅಬ್ಬೆದುಬಾಯಿಸ್ ಎಂಬುವನು ಹಳೆಯ ಮೈಸೂರು ಭಾಗದ ಸಮುದಾಯಗಳನ್ನು ತನ್ನ ಅಧ್ಯಯನ ಕೇಂದ್ರವನ್ನಾಗಿ ಮಾಡಿಕೊಂಡನು. ಈತನ 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆಂಡ್ ಸೆರಿಮೋನೀಸ್' ಎಂಬ ಗ್ರಂಥವನ್ನು ವಸಾಹತು ಆಡಳಿತವು ೧೮೧೬ರಲ್ಲಿ ಪ್ರಕಟಿಸಿತು. ಅಬ್ಬೆದುಬಾಯಿಸ್ ಇದನ್ನು ಫ್ರೆಂಚ್ ಭಾಷೆಗೂ ಭಾಷಾಂತರಿಸಿದನು. ಈ ಎರಡೂ ಕೃತಿಗಳು ಭಾರತದಲ್ಲಿ ಸಾಮಾಜಿಕ ಅಧ್ಯಯನಗಳಿಗೆ ನಾಂದಿ ಹಾಡಿದವು. ವಸಾಹತುಶಾಹಿ ಆಡಳಿತದಲ್ಲಿ ಹರ್ಬರ್ಟ್‌ರಿಸ್ಲೆ ನಾಯಕತ್ವದಲ್ಲಿ ರೂಪುಗೊಂಡ 'ಎಥ್ನೋಗ್ರಫಿ ಸರ್ವೇ ಆಫ್ ಇಂಡಿಯಾ' ಸಂಸ್ಥೆಯ ಮೂಲಕ ಅಧಿಕೃತವಾಗಿ ಇಂಡಿಯಾದ ಬುಡಕಟ್ಟುಗಳನ್ನು ಮತ್ತು ಜಾತಿ ಸಮುದಾಯಗಳನ್ನು ಅಧ್ಯಯನ ಮಾಡಲು ಕೈಗೆತ್ತಿಕೊಂಡಿತು.

ಈ ಮಾಲಿಕೆಯಲ್ಲಿ ರೆವರೆಂಡ್ ಎಂ.ಎ.ಶೆರ್ರಿಂಗ್ ಅವರು ೧೮೭೯ರಲ್ಲಿ "ಹಿಂದೂ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್"[೧] ಎಂಬ ಕೃತಿಯನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಿದರು.

ಪ್ರಾಚೀನ ಸಮಾಜ ಸಂಚಾರಿ ಸ್ವರೂಪವನ್ನು ಪಡೆದುಕೊಂಡಿತ್ತಾದರೂ ಸಂಚಾರಿಯೂ ಆಗಿರಲಿಲ್ಲ ಅಥವಾ ತನ್ನ ನಿರ್ದಿಷ್ಟ ಮನೋಭಾವದ ಪ್ರತೀಕವೂ ಆಗಿರಲಿಲ್ಲ. ಅದರ ಅತ್ಯಂತ ಪ್ರಾಚೀನ ಸಂಪತ್ತು ಕಾಲನಡೆಗಳು (ಹಸು ಇತ್ಯಾದಿ) ಆಗಿತ್ತು. ಆದ್ದರಿಂದ ಅದರ ಸಂಪತ್ತೆನಿಸಿದ ಹಸುಗಳು ಸಂಚಾರಿಯಾಗಿದ್ದ ಪರಿಣಾಮವಾಗಿ ಪ್ರಾಚೀನ ಸಮಾಜವೂ ಸಂಚಾರಿಯಾಗಿತ್ತು. ಪ್ರಾಚೀನ ಸಮಾಜ ಹಸುಗಳನ್ನು ಪ್ರೀತಿಸುತ್ತಿದ್ದರಿಂದ ಅವರು ಹೋದೆಡೆಗೆ ಹಸುಗಳು ಸಾಗುತ್ತಿದ್ದವು. ನೂತನ ಬಗೆಯ ಸಂಪತ್ತನ್ನು ತಿಳಿದುಕೊಂಡ ಒಡನೆಯೇ ಮಾನವ ಸಮಾಜ ತನ್ನ ವಾಸವನ್ನು ಸ್ಥಿರಗೊಳಿಸಿಗೊಂಡಿತು. ಆ ಹೊಸ ಬಗೆಯ ಸಂಪತ್ತು ಭೂಮಿಯಾಗಿತ್ತು. ಹಸಿವು ನೀಗಿಸುವ ಭೂಮಿಯ ಸಂಪತ್ತು ಪಡೆದು ಕೃಷಿಯನ್ನು ಕಲಿತೊಡನೆ ಪ್ರಾಚೀನ ಸಮಾಜ ಒಂದೇ ಸ್ಥಳದಲ್ಲಿ ನೆಲೆ ನಿಂತಿತೆಂದು ಹೇಳಬಹುದು.

ಭಾರತ ವಿವಿಧ ಭಾಷೆ, ಧರ್ಮ, ನಂಬಿಕೆ ಮತ್ತು ಸಂಪ್ರದಾಯಗಳಿಂದ ಕೂಡಿದ ವಿಭಿನ್ನ ಸಂಸ್ಕೃತಿಗಳ ನೆಲೆಯಾಗಿದೆ. ಸಾಮಾಜಿಕ ಜೀವನ ವ್ಯವಸ್ಥೆಯ ಬಗ್ಗೆ ಹೇಳುವುದು ಕಷ್ಟಕರವಾಗಿದೆ. ಸಮಾಜ ಹಾಗೂ ಮಾನವಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಸುಮಾರು ೩,೦೦೦ಕ್ಕಿಂತ ಅಧಿಕ ಜಾತಿ ಉಪಜಾತಿಗಳಿವೆ. ಇವು ವಿವಿಧ ಸಂಪ್ರದಾಯ ಹಾಗೂ ಆಚರಣೆಗಳನ್ನು ಹೊಂದಿವೆ. ವಿವಿಧ ವರ್ಣ, ಜನಾಂಗ, ಧರ್ಮ ಮತ್ತು ಭಾಷೆಗಳು ಮೈಪಡೆದುಕೊಂಡ ಹಿನ್ನೆಲೆಯಲ್ಲಿ ಜಾತಿಗಳ ಮಧ್ಯೆ ವ್ಯತ್ಯಾಸಗಳು ಇಂದಿಗೂ ಉಳಿದುಕೊಂಡಿವೆ.

ಬ್ರಿಟಿಷರ ಆಡಳಿತದಲ್ಲಿ ಎಥ್ನೊಗ್ರಫಿಕ್ ಸರ್ವೆಯರ್‌ಗಳು ವಿವಿಧ ಜಾತಿ–ಜನಾಂಗಗಳನ್ನು, ಅರೆ ವೃತ್ತಿ–ಸಂಪ್ರದಾಯಗಳನ್ನು, ಸಾಮಾಜಿಕ ವ್ಯವಸ್ಥೆ ಮತ್ತು ವಿಧಿ–ನಿಷೇಧಗಳನ್ನು ಅಧ್ಯಯನ ಮಾಡಿದ್ದಾರೆ. ಬ್ರಿಟಿಷ್ ಆಡಳಿತಾಧಿಕಾರಿಗಳು ಸುಗಮವಾದ ಆಡಳಿತ ನಡೆಸಲು ಮತ್ತು ಭಾರತೀಯರನ್ನು ಹಿಡಿತದಲ್ಲಿಟ್ಟುಕೊಂಡು ತಮ್ಮ ರಾಜಕೀಯ ಉದ್ದೇಶ ಈಡೇರಿಸಿಕೊಳ್ಳಲು ಪ್ರಯತ್ನಿಸಿದರು. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಭಾರತೀಯ ಸಮಾಜಗಳನ್ನು ಅಧ್ಯಯನ ಮಾಡುವುದರ ಮೂಲಕ ಮಹತ್ವದ ಕಾಣಿಕೆ ಸಲ್ಲಿಸಿದ್ದಾರೆ. ಹಿಂದಿನಿಂದಲೂ ಸಮಾಜಶಾಸ್ತ್ರಜ್ಞರು ಮತ್ತು ಸಾಮಾಜಿಕ ಮಾನವಶಾಸ್ತ್ರಜ್ಞರು ಅಸಂಖ್ಯ ಜಾತಿಗಳ ಬಗೆಗೆ ಅಧ್ಯಯನ ಮಾಡಿದ್ದಾರೆ.

ಹಿಂದೂ ಜಾತಿ ಪದ್ಧತಿ ಕಠಿಣ ವ್ಯವಸ್ಥೆಯನ್ನು ಹೊಂದಿತ್ತು. ಅದು ಪವಿತ್ರತೆ ಮತ್ತು ಸಂಕೀರ್ಣತೆಯನ್ನು ನಿರ್ಧರಿಸುತ್ತದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಪದ್ಧತಿಗಳು ಸಾಮಾಜಿಕ ಪುರೋಭಿವೃದ್ಧಿ ಮತ್ತು ಸಾಮಾಜಿಕ ಅಸಮಾನತೆಗಳನ್ನು ನಿಯಂತ್ರಿಸುತ್ತವೆ. ಸಾಮಾಜಿಕ ಅಸಮಾನತೆ ಜಾತಿಯನ್ನು ಆಧರಿಸಿದ್ದು ಜಾತಿಯ ಸಾಂಪ್ರದಾಯಿಕ ಗುಣಗಳನ್ನು ಹೊಂದಿಕೊಂಡಿದೆ. ಹೀಗಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ಎಲ್ಲಾ ಕ್ಷೇತ್ರಗಳಲ್ಲಿ ಕಂಡು ಬರುತ್ತದೆ.

ಜಾತಿ ಪದ್ಧತಿ ಮೂಲತಃ ವರ್ಣ ವ್ಯವಸ್ಥೆಯಿಂದ ಬಂದಿದೆ. 'ವರ್ಣ' ಪದದ ಮೂಲ 'ಬಣ್ಣ' ಎಂದಾಗುತ್ತದೆ. ಆರ್ಯರು ಮತ್ತು ದ್ರಾವಿಡರು ಪರಸ್ಪರ ಸಂಪರ್ಕ ಪಡೆದಿರುವುದರಿಂದಾಗಿ 'ವರ್ಣ' ಉಗಮವಾಗಿದೆ. ಋಗ್ವೇದದಲ್ಲಿ ಹೇಳಿರುವಂತೆ ಸಾಮಾಜಿಕವಾಗಿ ವರ್ಣವನ್ನು ನಾಲ್ಕು ಪ್ರಕಾರಗಳನ್ನಾಗಿ ವಿಂಗಡಿಸಿದೆ. ಅವುಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ, ಆದರೆ ಅಸ್ಪೃಶ್ಯರಿಗೆ ಯಾವುದೇ ಸ್ಥಾನಮಾನವಿಲ್ಲ. ಅವರನ್ನು ಪಂಚಮರು, ಅಸ್ಪೃಶ್ಯರು, ಅತಿಶೂದ್ರರು ಎಂದು ವಿವಿಧ ಹೆಸರುಗಳಿಂದ ಕರೆಯಲಾಯಿತು. ನೋಡಬಾರದ ಹಾಗೂ ಮುಟ್ಟಬಾರದ ಇವರನ್ನು ೧೯೩೦ಕ್ಕಿಂತ ಪೂರ್ವದಲ್ಲಿ ತಳವರ್ಗಗಳೆಂದು ಕರೆಯಲಾಗಿದೆ.

ಜಗತ್ತಿನೆಲ್ಲೆಡೆ ಆಯಾ ದೇಶದ ಮೂಲ ನಿವಾಸಿಗಳು, ಬುಡಕಟ್ಟು ಸಮುದಾಯದವರು ಬಹಳ ಶೋಷಣೆ, ದೌರ್ಜನ್ಯಗಳಿಗೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಭಾರತದಲ್ಲಿ ಹಲವು ಸಮುದಾಯಗಳು ನೆಲೆಸಿವೆ. ಕರ್ನಾಟಕ ರಾಜ್ಯವೊಂದರಲ್ಲೆ ಸುಮಾರು ೫೦ಕ್ಕೂ ಹೆಚ್ಚು ಬುಡಕಟ್ಟು ಮತ್ತು ಸುಮಾರು ೧೦೧ ಪರಿಶಿಷ್ಟ ಜಾತಿ ಸಮುದಾಯಗಳಿವೆ ಅವುಗಳಲ್ಲಿ ಛಲವಾದಿ ಸಮುದಾಯವು ಒಂದಾಗಿದೆ..

ಕರ್ನಾಟಕದ ಎಲ್ಲಾ ಗ್ರಾಮ, ಪಟ್ಟಣ, ನಗರ ಪ್ರದೇಶಗಳಲ್ಲಿ ಛಲವಾದಿ ಸಮುದಾಯ ನೆಲೆಸಿದೆ. ಇವರು ಹೆಚ್ಚಿನ ಜನಸಂಖ್ಯೆಯಲ್ಲಿ ಇವರು ಕಂಡು ಬರುತ್ತಾರೆ.

ಬ್ರಿಟಿಷರಿಂದ ಭಾರತ ದೇಶ ಸ್ವಾತಂತ್ರ ಪಡೆದ ಬಳಿಕ ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅಗಾಧ ಪರಿವರ್ತನೆ ಉಂಟಾಯಿತು. ಶತಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸರ್ವತೋಮುಖ ಅಭಿವೃದ್ಧಿಗಾಗಿ, ಮತ್ತು ಕಲ್ಯಾಣ ರಾಜ್ಯದ ಸ್ಥಾಪನೆಗಾಗಿ ಭಾರತ ಸರ್ಕಾರ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿತು.

೧೯೫೦ರಲ್ಲಿ ಭಾರತದ ಸಂವಿಧಾನ ಪರಿಶಿಷ್ಟಜಾತಿ, ಪಂಗಡದವರನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ಹಿಂದುಳಿದವರೆಂದು ಘೋಷಿಸಿತು. ಹಲವಾರು ಕ್ಷೇತ್ರಗಳಲ್ಲಿ ಅನೇಕ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರಲ್ಲಿ ಸಾಕಷ್ಟು ಬದಲಾವಣೆ ತರಲು ಯತ್ನಿಸಿತು. ಪರಿಶಿಷ್ಟ ಜಾತಿಯ ಜನರಲ್ಲಿ ಉಂಟಾದ ಬದಲಾವಣೆ ಸಮಾಜಶಾಸ್ತ್ರಜ್ಞರ ಗಮನ ಸೆಳೆಯುವುದರೊಂದಿಗೆ ಸಮಾಜಶಾಸ್ತ್ರೀಯ ಅಧ್ಯಯನ ನಡೆಯಲು ಕಾರಣವಾಯಿತು. ನಂತರದಲ್ಲಿ ನಡೆದ ಅಧ್ಯಯನಗಳು ಸಮಾಜೋ-ಆರ್ಥಿಕ, ಧರ್ಮ-ರಾಜಕೀಯ, ಶೈಕ್ಷಣಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದವು. ಗದಗ ಜಿಲ್ಲೆಯ ಛಲವಾದಿ ಸಮುದಾಯ ಕುರಿತ ಪ್ರಸ್ತುತ ಅಧ್ಯಯನ ಸಮಾಜೋ-ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಗಳು ಹಾಗೂ ಸಮಸ್ಯೆಗಳು, ಸಂಘಟನೆ ಮತ್ತು ಪರಿಹಾರೋಪಾಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಒಂದು ಕಾಲದ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯ ಸ್ವರೂಪವನ್ನು ಕುರಿತು ಇಂದು ವಿಶ್ಲೇಷಿಸುವ ಅಗತ್ಯವಿದೆ. ವಿವಿಧ ಸಂಸ್ಕೃತಿಯನ್ನು ಒಳಗೊಂಡ ವಿಶಾಲ ಭಾರತದ ಜನ ಹತ್ತು ಹಲವು

ಭಾಷೆ, ಧರ್ಮ, ಸಂಸ್ಕೃತಿ, ವೃತ್ತಿಗಳಿಂದ ಕೂಡಿ ವೈವಿಧ್ಯತೆಯಲ್ಲಿ ಏಕತೆ ಹೊಂದಿದ ಸಮಾಜವಾಗಿದೆ. ಇದು ಬಹುಮುಖಿ ಸಂಸ್ಕೃತಿಯ ಮೂರ್ತರೂಪವಾಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಭಿನ್ನ ಪ್ರಾದೇಶಿಕ ಸನ್ನಿವೇಶಗಳಲ್ಲಿ ವಿವಿಧ ಜನಸಮುದಾಯಗಳು ಹಲವು ಬಗೆಯ ಜೀವನ ಕ್ರಮಗಳಲ್ಲಿ ಸಮ್ಮಿಲನಗೊಂಡು ನೆಲೆಸಿವೆ. ಪ್ರತಿಯೊಂದು ಸಮುದಾಯವೂ ತನ್ನದೇ ಆದ ಅನನ್ಯತೆಯನ್ನು ಹೊಂದಿದೆ. ನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ತಮ್ಮ ಅಮೂಲ್ಯ ಕಾಣಿಕೆ ನೀಡಿದೆ. ಅವುಗಳಲ್ಲಿನ ಆಚರಣೆ ಪದ್ಧತಿ, ಧಾರ್ಮಿಕ ನಂಬಿಕೆಗಳು, ಹಬ್ಬ ಹರಿದಿನಗಳು, ಉತ್ಸವ ಮುಂತಾದ ಎಲ್ಲ ಬಗೆಯ ಆಚರಣೆಗಳಲ್ಲಿ ತಮ್ಮದೇ ಪರಂಪರೆಯನ್ನು ಉಳಿಸಿಕೊಂಡಿವೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಜಾತಿ ಸಮುದಾಯಗಳು, ಆದಿವಾಸಿ ಬುಡಕಟ್ಟುಗಳು, ಮತ್ತು ನಾಗರಿಕರು ವಾಸಿಸುತ್ತಿದ್ದಾರೆ. ಅದೇ ಕ್ರಮದಲ್ಲಿ ಕರ್ನಾಟಕದಲ್ಲಿಯೂ ವಿವಿಧ ಬಗೆಯ ಜನ ಸಮುದಾಯಗಳು ವಾಸಿಸುತ್ತಿರುವುದನ್ನು ಕಾಣಬಹುದು. ಛಲವಾದಿ ಸಮುದಾಯವನ್ನು ಬಹುಮುಖ್ಯವಾಗಿ ಅಧ್ಯಯನಕ್ಕೆ ಆಯ್ದುಕೊಂಡು ಅದರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳು, ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರೋಪಾಯ ಗಳನ್ನು ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಭಾರತದಲ್ಲಿ ಸಮುದಾಯಗಳ ಅಧ್ಯಯನ ಈ ಹಿಂದಿನ ವಸಾಹತುಶಾಹಿ ಆಡಳಿತದಿಂದಲೆ ಆರಂಭವಾಯಿತು. ವಸಾಹತುಶಾಹಿಯುಗ ಭಾರತದಲ್ಲಿ ಕಾಲಿಟ್ಟ ಕ್ಷಣದಿಂದಲೆ ಅಧ್ಯಯನ ಪ್ರಾರಂಭವಾಯಿತು. ಪಾಶ್ಚಾತ್ಯರಿಗೆ ಇಲ್ಲಿನ ಜನಜೀವನದ ಪದ್ಧತಿಗಳನ್ನು ಇಂಚಿಂಚೂ ಬಿಡದೆ ಅಧ್ಯಯನ ಮಾಡುವ ಆಸೆ ತ್ವರಿತ ಗತಿಯಲ್ಲಿ ನಡೆಯಿತು. ಇದರ ಆರಂಭ ಕ್ರೈಸ್ತ ಮಿಷನರಿಗಳಿಂದಲೆ ಆಯಿತು. ಅವು ತಮ್ಮ ಧರ್ಮ ಪ್ರತಿಷ್ಠಾಪನೆಗೋಸ್ಕರ ಜನಮನ ಸೆಳೆಯಲು ಅಧ್ಯಯನ ಪ್ರಾರಂಭಿಸಿದರು. ಮೊದಲಿಗೆ ಅಲ್ಲಲ್ಲಿ ಚದುರಿ ಹೋಗಿದ್ದ ಬುಡಕಟ್ಟು ಸಮುದಾಯಗಳನ್ನು, ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾದ ಜನಸಮುದಾಯಗಳ ಸ್ಥಿತಿಗತಿಗಳನ್ನು ಅವರು ಮೊದಲು ಆಯ್ಕೆ ಮಾಡಿಕೊಂಡರು. ತರುವಾಯ ಒಂದೊಂದೇ ಸಮುದಾಯದ ಜನರ ಜೀವನವನ್ನು ಆಲಿಸಿ, ಶೋಧಿಸಿ ಅಧ್ಯಯನಕ್ಕೆ ಒಳಪಡಿಸಿದರು. ಭಾರತಕ್ಕೆ ವಲಸೆ ಬಂದ ಪ್ರವಾಸಿಗರು, ಸಂಶೋಧಕರು, ವಿದ್ವಾಂಸರು, ಅಧಿಕಾರಿಗಳು ತಮ್ಮ ತಮ್ಮ ಚಿಂತನೆಗಳಲ್ಲಿ ಇಲ್ಲಿನ ಜನರ ಜೀವನ ಕ್ರಮಗಳನ್ನು ಅಭ್ಯಾಸ ಮಾಡಿ ಅದನ್ನು ದಾಖಲಿಸಿದರು. ಇದೇ ಮಾರ್ಗ ಅನುಸರಿಸಿದ ಭಾರತೀಯರು ಮುಂದೆ ಸಂಶೋಧನೆಗೆ ಒಂದು ಮುಖ್ಯ ವೇದಿಕೆ ನಿರ್ಮಾಣ ಮಾಡಿಕೊಂಡರು. ಇದರ ಅಡಿಯಲ್ಲಿ ಹಲವಾರು ವಿಷಯಗಳ ಬಗೆಗೆ ಅಧ್ಯಯನ ನಡೆಸಿದರು.

ಒಂದು ಕಾಲದಲ್ಲಿ ರಾಜ ಯಾವ ಧರ್ಮದ ಸಂಪ್ರದಾಯ ಪಾಲಿಸುವನೋ ಆ ಧರ್ಮವನ್ನು ಪ್ರಜೆಗಳು ಅನುಸರಿಸಬೇಕಾದದ್ದು ರಾಜನೀತಿಯಾಗಿದ್ದ ಅಂಶ ಇತಿಹಾಸದಲ್ಲಿ ಕಾಣುತ್ತೇವೆ. ರಾಜನನ್ನು ಅನುಸರಿಸಿದ ಜನತೆ ತಮ್ಮ ರಾಜನಿಷ್ಠೆಗೆ ತಕ್ಕಂತೆ ನಡೆದ ಎಷ್ಟೋ ಪ್ರಸಂಗಗಳಿವೆ. ಗ್ರಾಮದ ಪ್ರತಿಯೊಬ್ಬರೂ ತಮ್ಮ ತಮ್ಮ ಮೂಲ ಕಸುಬನ್ನು ಮಾಡಬೇಕಾಗಿತ್ತು. ಮೇಲ್ವರ್ಗದವರು ರಾಜರಿಗೆ ಹತ್ತಿರವಾಗಿ ಆಸ್ಥಾನದ

ಕೆಲಸಗಳಲ್ಲಿ ಭಾಗಿಯಾದರೆ, ಕೆಳವರ್ಗದವರು ಆಸ್ಥಾನದ ಹೊರಗೆ ರಾಜರನ್ನು, ಮೇಲ್ವರ್ಗದವರ ಸೇವೆ ಮಾಡಬೇಕಾಗಿತ್ತು. ಈ ಶೋಷಣೆ ಅನಾದಿಕಾಲದಿಂದಲೂ ನಡೆಯುತ್ತಲೇ ಬಂದಿದೆ. ಈ ವ್ಯವಸ್ಥೆಯನ್ನು ಇಂದೂ ಸಹ ಕಾಣುತ್ತೇವೆ.

'ಛಲವಾದಿ' ಸಮುದಾಯದ ಜನ ರಾಜರು, ಸಾಮಂತರು ಮತ್ತು ಭೂ ಒಡೆಯರಾಗಿ ಹಿಂದೆ ಬದುಕಿ ಬಾಳಿದ್ದಾರೆ. ರಾಜಪ್ರಭುತ್ವದ ಕಾಲದಿಂದಲೂ ರಾಜ ವ್ಯವಸ್ಥೆಯೊಂದಿಗಿದ್ದು ಅವರ ಸೇವೆ ಮಾಡುತ್ತ ಬದುಕಿದ್ದು ಕಂಡು ಬರುತ್ತದೆ. ಶತ್ರುಗಳಿಂದ ರಾಜ್ಯವನ್ನು ರಕ್ಷಿಸುವ ಮತ್ತು ಸೈನಿಕರಿಗೆ ಮುನ್ನೆಚ್ಚರಿಕೆ ನೀಡುವ ಕೆಲಸ ಈ ಸಮುದಾಯದ್ದಾಗಿತ್ತು. ಹೊಲೆಯ, ಛಲವಾದಿ, ಆದಿದ್ರಾವಿಡ, ಆದಿಕರ್ನಾಟಕ ಎಂಬೆಲ್ಲ ಹೆಸರುಗಳಿಂದ ಕರೆಯಿಸಿಕೊಂಡಿದೆ. ಈ ಸಮುದಾಯ ರಾಜ್ಯವನ್ನಾಳುತ್ತಿದ್ದ ರಾಜಪ್ರಭುಗಳಿಗೆ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದುದು ಚರಿತ್ರೆಯಿಂದ ತಿಳಿದು ಬರುತ್ತದೆ.

ಅಧ್ಯಯನದ ಉದ್ದೇಶ

ಗದಗ ಜಿಲ್ಲೆಯಲ್ಲಿ ಛಲವಾದಿ ಸಮುದಾಯ ಕುರಿತಂತೆ ಇದುವರೆಗೆನ ಅಧ್ಯಯನ ಮುಖ್ಯವಾಗಿ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ನಡೆದಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ಛಲವಾದಿ ಸಮುದಾಯದ ಹಿನ್ನೆಲೆ, ಅವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳು ಮುಂತಾದ ವಿಷಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುವುದು, ಪರಿಹಾರೋಪಾಯಗಳನ್ನು ಸೂಚಿಸುವುದು ಮತ್ತು ಇತ್ತಿಚೀಸ ದಿನಗಳಲ್ಲಿ ಉಂಟಾಗುತ್ತಿರುವ ಬದಲಾವಣೆಯ ಗತಿಯನ್ನು ಅಧ್ಯಯನದಲ್ಲಿ ಮಾಡಲಾಗಿದೆ. ಹಾಗೆಯೇ ಛಲವಾದಿ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಅವರು ಸ್ಥಾಪಿಸಿಕೊಂಡಿರುವ ಸಂಘ ಸಂಸ್ಥೆಗಳು ವಹಿಸುತ್ತಿರುವ ಪಾತ್ರ ಕುರಿತು ಅಧ್ಯಯನದಲ್ಲಿ ಚರ್ಚಿಸಿದ್ದೇನೆ ಹಾಗೂ ಸಮುದಾಯದ ಪರಿವರ್ತನೆಯ ಬಗೆಯನ್ನು ಇಲ್ಲಿ ಮುಖ್ಯವಾಗಿ ಗಮನಿಸಿದ್ದೇನೆ.

೧. ಛಲವಾದಿ ಸಮುದಾಯದ ಮೂಲ ಮತ್ತು ಪ್ರಸಾರ ಕುರಿತು ಚರ್ಚಿಸಲಾಗಿದೆ.

೨. ಈ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಕುರಿತು ಅಧ್ಯಯನ ಮಾಡಲಾಗಿದೆ.

೩. ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೪. ಛಲವಾದಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳಾವವು ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಅದರ ಜೊತೆಗೆ ಪರಿಹಾರೋಪಾಯಗಳನ್ನು ಈ ಪ್ರಬಂಧದಲ್ಲಿ ಸೂಚಿಸಲಾಗಿದೆ.

೫. ಛಲವಾದಿ ಸಮುದಾಯದ ಬದುಕಿನಲ್ಲಾದ ಸ್ಥಿತ್ಯಂತರವನ್ನು ಸೂಕ್ಷ್ಮವಾಗಿ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಗದಗ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗದಗ ಜಿಲ್ಲೆಯಲ್ಲಿ ಛಲವಾದಿ ಸಮುದಾಯ ಕಂಡುಬರುವ ತಾಲೂಕುಗಳೆಂದರೆ ಗದಗ, ರೋಣ, ನರಗುಂದ, ಶಿರಹಟ್ಟಿ ಮತ್ತು ಮುಂಡರಗಿಗಳಲ್ಲಿ ನೆಲೆಸಿದ್ದಾರೆ. ಗದಗ, ರೋಣ, ನರಗುಂದ ತಾಲೂಕುಗಳಲ್ಲಿ ಹೆಚ್ಚಿನ ಜನಸಂಖ್ಯೆ ಹೊಂದಿದ್ದಾರೆ. ಶಿರಹಟ್ಟಿ ಮತ್ತು ಮುಂಡರಗಿ ತಾಲೂಕುಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಗದಗ ಜಿಲ್ಲೆಯಲ್ಲಿ ಕಂಡುಬರುವ ಛಲವಾದಿ ಸಮುದಾಯವನ್ನು ಪ್ರಸ್ತುತ ಸಂಶೋಧನೆಯ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ನನ್ನ ಸಂಶೋಧನೆಯ ಮುಖ್ಯ ವ್ಯಾಪ್ತಿಯನ್ನಾಗಿ ಆಯ್ಕೆ ಮಾಡಿಕೊಂಡು ಮಹಾಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ಪ್ರಮೇಯ

೧. ಪ್ರಸಕ್ತ ಅಧ್ಯಯನ ಗದಗ ಜಿಲ್ಲೆಯಲ್ಲಿ ವಾಸಿಸುವ ಛಲವಾದಿ ಸಮುದಾಯದ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಗಂಭೀರವಾಗಿ ಪರಿಗಣಿಸುವುದು.

೨. ಅಧಿಕ ಸಂಖ್ಯೆಯ ಛಲವಾದಿ ಸಮುದಾಯದ ಜನರು ಕೆಳಸಾಮಾಜಿಕ ಸ್ಥರವನ್ನು ಹೊಂದಿರುವರು. ಶೈಕ್ಷಣಿಕ ಕ್ಷೇತ್ರದಲ್ಲಿ ಇವರ ಸಾಧನೆ ತುಂಬಾ ಕಡಿಮೆಯಿರುವುದು. ಇದರಿಂದಾಗಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ಸಂಘಟನಾತ್ಮಕ ಮತ್ತು ರಾಜಕೀಯ ಸಮಸ್ಯೆಗಳ ಕುರಿತು ಅಧ್ಯಯನದಲ್ಲಿ ಗಂಭೀರವಾಗಿ ಚರ್ಚಿಸುವದು.

೩. ಛಲವಾದಿ ಸಮುದಾಯದ ಜೀವನಶೈಲಿ, ಸಾಮಾಜಿಕ ಪರಿವರ್ತನೆಯಲ್ಲಿ ಹೊಸ ವಿಚಾರಗಳ ಕೊರತೆಗೆ ಕಾರಣವಾಗಿದೆ.

೪. ಛಲವಾದಿ ಸಮುದಾಯ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು ಮೀಸಲಾತಿ ಸೌಲಭ್ಯದಿಂದ ಸುಧಾರಣೆಗೊಂಡಿದ್ದರೂ ಧಾರ್ಮಿಕ ಆಚರಣೆಗಳು ಹಾಸುಹೊಕ್ಕಾಗಿರುವುದು.

೫. ಸರಕಾರದ ಸೌಲಭ್ಯಗಳು ಸಮುದಾಯದ ಅಭ್ಯುದಯಕ್ಕೆ ಆಸರೆಯಾಗಿಲ್ಲದಿರುವುದು.

೬. ಛಲವಾದಿ ಸಮುದಾಯ ಪರಂಪರಾಗತ ಹಿನ್ನೆಲೆಯನ್ನು ತನ್ನ ಒಳರಚನೆಯ ಪರಿವರ್ತನೆಗೆ ಆಗು ಮಾಡಿಕೊಳ್ಳುವತ್ತ ಸಾಗುತ್ತದೆ. ಇಂತಹ ಮಹತ್ವದ ವಿಚಾರಗಳನ್ನು ಸಮಾಜ ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಮಹತ್ವ :

ಸಮುದಾಯದ ಪರಂಪರೆ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು, ರಾಜಕೀಯ ಜೀವನ, ಧಾರ್ಮಿಕ ಜೀವನ, ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು, ಇತ್ತೀಚಿನ ಪರಿವರ್ತನೆ ಪ್ರಕ್ರಿಯೆ ಕುರಿತು ಅಧ್ಯಯನ ಮಾಡುವ ಮೂಲಕ ಗಮನ ಸೆಳೆಯಲಾಗಿದೆ. ಸಮಾಜದ ಗತಿಶೀಲ ಪ್ರಕ್ರಿಯೆಯಲ್ಲಿ ಹಿಂದಿನಿಂದ ಇಂದಿನವರೆಗೆ ಸಮಗ್ರ ಸ್ಥಿತಿಗತಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

* ಭಾರತಕ್ಕೆ ಸ್ವತಂತ್ರ್ಯ ಬಂದು ೬೬ ವರ್ಷಗಳಾಗಿದ್ದರೂ ಗದಗ ಜಿಲ್ಲೆಯ ಛಲವಾದಿ ಸಮುದಾಯದ ಸಮಗ್ರ ಅಧ್ಯಯನ ನಡೆದಿಲ್ಲ. ಹೀಗಾಗಿ ಸಮುದಾಯದ ಅಧ್ಯಯನವನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯ ಅಧ್ಯಯನ ಮಾಡುವುದು ಅಧ್ಯಯನದ ಮಹತ್ವವಾಗಿದೆ.
* ಛಲವಾದಿ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಅಂಶಗಳು ಅಧ್ಯಯನ ಮಾಡುವುದರ ಮೂಲಕ ಸಂಸ್ಕೃತಿಯ ಚಹರೆಯನ್ನು ಪರಿಚಯಿಸುವುದಾಗಿದೆ.
* ಛಲವಾದಿ ಸಮುದಾಯ ನಿರಂತರವಾಗಿ ವಿವಿಧ ಕ್ಷೇತ್ರಗಳಲ್ಲಿ ನಿರ್ಲಕ್ಷತೆಗೆ ಒಳಗಾಗಿರುವುದರಿಂದ ಅವುಗಳ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.
* ಛಲವಾದಿ ಸಮುದಾಯದ ಸಮಗ್ರ ಅಧ್ಯಯನದಿಂದ ಸರಕಾರಕ್ಕೆ, ಅಧಿಕಾರಿಗಳಿಗೆ, ಸಾರ್ವಜನಿಕ ಸಂಘಸಂಸ್ಥೆಗಳಿಗೆ, ಯೋಜನಾಕಾರರಿಗೆ, ವಿಶೇಷವಾಗಿ ದಲಿತ ಸಂಘಟನೆಗಳಿಗೆ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲು ತುಂಬಾ ಸಹಾಯಕವಾಗುತ್ತದೆ.
* ಛಲವಾದಿ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಮುಂತಾದ ಸ್ಥಿತಿಗತಿಗಳನ್ನು ಸುಧಾರಿಸಲು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಡಿಯಲ್ಲಿ ವಿಶೇಷ ಆದ್ಯತೆ ನೀಡಲು ನೆರವಾಗುತ್ತದೆ.
* ಛಲವಾದಿ ಸಮುದಾಯದ ಜನರಲ್ಲಿ ನಾಗರಿಕ ಪ್ರಜ್ಞೆ ಮೂಡಿಸುವುದು. ಅವರನ್ನು ಪ್ರಗತಿಪಥದ ಕಡೆಗೆ ಸಾಗಿಸಲು ಅನುಕೂಲವಾಗುತ್ತದೆ.

ಪ್ರಸ್ತುತ ಸಮಾಜದಲ್ಲಿ ಸಾಕಷ್ಟು ಸಮಸ್ಯೆಗಳು ಸಮಾಜವನ್ನು ಅಸ್ತಿರಗೊಳಿಸಿವೆ. ಸಮಗ್ರ ಭಾರತದ ಅಭಿವೃದ್ಧಿ, ಸಮಸ್ಯೆ ಎದುರಿಸುತ್ತಿರುವ ಸಮುದಾಯಗಳು ಸಮಗ್ರ ಅಭಿವೃದ್ಧಿ ಸಾಧಿಸಿದಾಗ ಮಾತ್ರ ಸಾಧ್ಯವಾಗಬಹುದು. ಛಲವಾದಿ ಸಮುದಾಯ ಎದುರಿಸುತ್ತಿರುವ ಇಂದಿನ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸುವುದು. ಸಂವಿಧಾನಾತ್ಮಕ ಸೌಲಭ್ಯಗಳು ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅನುವು ಮಾಡಿಕೊಡುವುದು. ಸಮಸ್ಯೆಗಳ ಪರಿಹಾರಕ್ಕೆ ಅನುಕೂಲವಾಗುವಂತೆ ಅಧ್ಯಯನ ಮಾಡಲಾಗಿದೆ.

* ಛಲವಾದಿ ಸಮುದಾಯದ ಸಾಮಾಜಿಕ ಜೀವನದ ಅಧ್ಯಯನ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.
* ಛಲವಾದಿ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಹಾಗೂ ಆರ್ಥಿಕ ಸ್ಥಿತಿಗತಿ ಮತ್ತು ಪ್ರಗತಿಯ ಕುರಿತು ಚರ್ಚಿಸುವುದು ಅಧ್ಯಯನದ ಮಹತ್ವದ ಅಂಶವಾಗಿದೆ.
* ಒಟ್ಟಿನಲ್ಲಿ ಈ ಅಧ್ಯಯನ ಸರ್ಕಾರಕ್ಕೆ, ಆಡಳಿತಗಾರರಿಗೆ, ಸಮಾಜಸೇವಕರಿಗೆ, ವಿವಿಧ ತಳವರ್ಗದ ಸಮುದಾಯಗಳಿಗೆ, ಜನ ಪ್ರತಿನಿಧಿಗಳಿಗೆ, ಸಮಾಜಕ್ಕೆ, ಛಲವಾದಿ ಸಮುದಾಯದ ಜನರಿಗೆ, ಸಮಾಜಶಾಸ್ತ್ರಜ್ಞರಿಗೆ ಹಾಗೂ ಸಾಮಾಜಿಕ ಚಿಂತಕರಿಗೆ ಉಪಯುಕ್ತವಾಗಲಿದೆ.

ಅಧ್ಯಯನದ ವಿಧಾನ

ಅಧ್ಯಯನದಲ್ಲಿ ಅನುಸರಿಸುವ ವೈಧಾನಿಕ ಪದ್ಧತಿಯೇ ಸಂಶೋಧನೆಯ ಮೂಲ ಸಮಸ್ಯೆಯೂ ಆಗಿರುತ್ತದೆ. ಅಧ್ಯಯನಕ್ಕೆ ಅವಶ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಕುಟುಂಬದ ಮುಖ್ಯಸ್ಥರನ್ನು ಸಂದರ್ಶಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಗ್ರಂಥಗಳು ಹಾಗೂ ಸರ್ಕಾರಿ ಪ್ರಕಟಣೆಗಳು, ಪತ್ರಿಕಾ ಲೇಖನಗಳು ಮತ್ತು ಜಿಲ್ಲೆಯ ಅಂಕಿಅಂಶಗಳನ್ನು ಬಳಸಿಕೊಳ್ಳಲಾಗಿದೆ. ಅವನ್ನು ತಾಲೂಕುವಾರು ತುಲನೆ ಮಾಡುವದರೊಂದಿಗೆ, ಇನ್ನಿತರ ಸಮುದಾಯದೊಂದಿಗೆ ತನ್ನ ಸಂಸ್ಕೃತಿ ಉಳಿಸಿಕೊಳ್ಳುವ ಬಗೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಹಲವಾರು ಕೋಷ್ಟಕ ರಚಿಸಲಾಗಿದೆ. ಈ ಸಮುದಾಯದ ಸಮಸ್ಯೆಗಳನ್ನೂ ಬದಲಾವಣೆಗಳನ್ನೂ ಅರಿಯಲು ಪ್ರಯತ್ನಿಸಲಾಗಿದೆ.

ಏಕ ವಿಷಯಕ ಅಧ್ಯಯನ ಅಥವಾ ಸಮಗ್ರ ವಿಷಯಕ ಅಧ್ಯಯನ : ಛಲವಾದಿ ಸಮುದಾಯದ ಸಮಗ್ರ ಅರಿವಿನ ಸಂಬಂಧದಲ್ಲಿ ವಿದ್ವಾಂಸರನ್ನು, ಸಮುದಾಯದ ಹಿರಿಯರನ್ನು, ಅನುಭವವುಳ್ಳ ವ್ಯಕ್ತಿಗಳನ್ನು ಭೇಟಿಮಾಡಲಾಗಿದೆ. ಸಮುದಾಯದ ಮೂಲ, ಬೆಡಗು, ಹಬ್ಬ, ಹರಿದಿನಗಳ ಹಿನ್ನೆಲೆಯಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ವಿಷಯಗಳನ್ನು ಅರಿಯಲು ಪ್ರಯತ್ನಿಸಲಾಗಿದೆ. ಜಿಲ್ಲೆಯ ಐದು ತಾಲೂಕುಗಳಲ್ಲಿ ಹಲವಾರು ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿಮಾಡಿ ವಿಷಯವನ್ನು ಸಮಗ್ರವಾಗಿ ಸಂಗ್ರಹಿಸಲಾಗಿದೆ.

ಸಹಭಾಗಿತ್ವ ವಿಧಾನ : ಛಲವಾದಿ ಸಮುದಾಯದಲ್ಲಿ ನಡೆಯುವ ಹಬ್ಬ ಹರಿದಿನಗಳು, ವಿವಾಹ, ಹಿರಿಯರ ಹಬ್ಬ, ದೇವಿಗೆ ಹರಕೆ ಸಲ್ಲಿಸುವುದು, ಜಾತ್ರೆ, ಉತ್ಸವ, ಸಭೆ-ಸಮಾರಂಭಗಳು ಜನನದಿಂದ ಮರಣದವರೆಗಿನ ವಿವಿಧ ಸಂಸ್ಕಾರಗಳು, ಸಂಪ್ರದಾಯಗಳು, ವಿಚಾರಗಳು ಮೊದಲಾದವನ್ನು ಸಂಗ್ರಹಿಸಲು ಸಹಭಾಗಿತ್ವ ವಿಧಾನವನ್ನು ಬಳಸಲಾಗಿದೆ. ಹಬ್ಬ ಹರಿದಿನ, ಜಾತ್ರೆ ಉತ್ಸವ, ವಿವಾಹ, ಜಯಂತಿ, ಪುಣ್ಯತಿಥಿ

ಮೊದಲಾದ ಕಾರ್ಯಕ್ರಮಗಳಂಥ ಕೆಲವು ವಿಶೇಷ ಸಂದರ್ಭದಲ್ಲಿ ಹಾಡುವವರ ಹಾಡುಗಳನ್ನೂ ಧ್ವನಿಮುದ್ರಣ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಅವಲೋಕನ ವಿಧಾನ : ಕ್ಷೇತ್ರಕಾರ್ಯದಲ್ಲಿ ಮಾಹಿತಿಯನ್ನು ಕೆಲವೊಮ್ಮೆ ಅವಲೋಕನ ವಿಧಾನದ ಮೂಲಕ ಸಂಗ್ರಹಿಸಲಾಗುವುದು. ಜಿಲ್ಲೆಯ ಐದು ತಾಲೂಕುಗಳಲ್ಲಿ ಜನರ ಧರ್ಮ, ಸಂಪ್ರದಾಯ, ಆಚಾರ-ವಿಚಾರ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನ ಮೊದಲಾದ ಬಗ್ಗೆ ಸಂಗ್ರಹಿಸಲಾಗಿದೆ.

ಪ್ರಶ್ನಾವಳಿ ವಿಧಾನ : ಈ ವಿಧಾನದ ಅಡಿಯಲ್ಲಿ ಕೆಲವೊಂದು ಪ್ರಶ್ನೆಗಳನ್ನು ತಯಾರಿಸಿಕೊಂಡು ಗದಗ ಜಿಲ್ಲೆಯ ಐದು ತಾಲೂಕುಗಳಲ್ಲಿನ ಛಲವಾದಿ ಕುಟುಂಬಗಳನ್ನು ಸಮೀಕ್ಷಿಸಿ ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

ಸಂದರ್ಶನ ವಿಧಾನ : ಗದಗ ಜಿಲ್ಲೆಯ ಛಲವಾದಿ ಸಮುದಾಯದ ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಜನರ ನಡೆ-ನುಡಿ, ಆಚಾರ-ವಿಚಾರ, ಸಂಸ್ಕಾರ, ಸಂಸ್ಕೃತಿ, ನಂಬಿಕೆ, ಮೊದಲಾದ ವಿಷಯಗಳನ್ನು ಅರಿಯಲು ಈ ವಿಧಾನವನ್ನು ಅನುಸರಿಸಲಾಗಿದೆ. ಈ ಮೂಲಕ ಹೆಚ್ಚು ಅನುಭವವುಳ್ಳ ಹಿರಿಯರು, ವಿದ್ವಾಂಸರು, ಸಂಘಟನಾಕಾರರು, ನೌಕರಸ್ಥರು, ಜನಪ್ರತಿನಿಧಿಗಳು, ಪೂಜಾರಿಗಳು, ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಕಲಾವಿದರು, ಹಾಗೂ ಆಧುನಿಕ ಯುವಜನಾಂಗವನ್ನು ಸಂದರ್ಶನ ಮಾಡಲಾಗಿದೆ. ಹಾಗೆಯೇ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರು, ಅಕ್ಷರಸ್ಥರು, ಸರಕಾರಿ ನೌಕರರು, ಹಾಗೂ ನಿವೃತ್ತ ನೌಕರರನ್ನು ಪ್ರಶ್ನೆ ಕೇಳಿ ಮಾಹಿತಿ ಸಂಗ್ರಹಿಸಲಾಗಿದೆ.

ಸಂದರ್ಶನ ತಪಶೀಲು : ಕೆಲವೊಂದು ಪ್ರಶ್ನೆಗಳನ್ನು ತಯಾರಿಸಿಕೊಂಡು ಕುಟುಂಬಗಳನ್ನು ಸಮೀಕ್ಷೆ ಮಾಡಿ ವಿದ್ವಾಂಸರು, ಸಂಗೀತಗಾರರು, ಕಲಾವಿದರ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪ್ರಾಥಮಿಕ ಹಾಗೂ ಅನುಷಂಗಿಕ ಎಂಬ ಎರಡು ಮೂಲಗಳಿಂದ ಪಡೆಯಲಾಗಿದೆ.

ಅ) **ಪ್ರಾಥಮಿಕ ಮೂಲಗಳು :** ಪ್ರಾಥಮಿಕ ಮೂಲಗಳಾದ ಕ್ಯಾಮರಾ, ಸಿ.ಡಿ., ಟೇಪರಿಕಾರ್ಡರ್ ಮುಂತಾದವನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಬ) **ಅನುಷಂಗಿಕ ಮೂಲಗಳು :** ಸರ್ಕಾರದ ದಾಖಲೆಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು, ಲೇಖನಗಳು, ಪುಸ್ತಕಗಳು, ಜನಗಣತಿ ವರದಿಗಳು, ಸಾಹಿತಿಗಳ ಸಾಹಿತ್ಯಗಳು, ಸಂಶೋಧನಾ ಮಹಾಪ್ರಬಂಧಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೀಗೆ ಹಲವು ವಿಧಾನದಿಂದ ಪಡೆದ ಮಾಹಿತಿಯ ಗುಣಾತ್ಮಕ ವಿಂಗಡಣೆ, ಪರೀಶೀಲನೆ, ವರ್ಗೀಕರಣ, ಸರಳೀಕರಣ ಮೊದಲಾದವುಗಳ ಮೂಲಕ ಸಮಾಜಶಾಸ್ತ್ರೀಯ ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ.

ಕ್ಷೇತ್ರಾನುಭವ: ಕ್ಷೇತ್ರಕಾರ್ಯಕ್ಕಾಗಿ ಪ್ರಶ್ನಾವಳಿಯನ್ನು ತಯಾರಿಸಿ, ಕ್ಷೇತ್ರಕಾರ್ಯವನ್ನು ಪ್ರಾರಂಭಿಸಿದಾಗ ಮೊದಲಿಗೆ ಅಡೆತಡೆಗಳು, ಅಡ್ಡಿ ಆತಂಕಗಳು ಎದುರಾದವು. ಸಮುದಾಯದ ಅನಕ್ಷರಸ್ಥರು, ಸಂಪ್ರದಾಯವಾದಿಗಳು, ಸಮುದಾಯದ ಹಿರಿಯರು, ಗ್ರಾಮ ಪಂಚಾಯತಿ ಸದಸ್ಯರು, ಡಿ.ಎಸ್.ಎಸ್. ಕಾರ್ಯಕರ್ತರು, ಛಲವಾದಿ ಮಹಾಸಭಾ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳನ್ನು ಭೇಟಿಯಾಗಿ ಮಾಹಿತಿ ಪಡೆಯಲಾಯಿತು. ಪ್ರಶ್ನಾವಳಿಯಲ್ಲಿ ಛಲವಾದಿ ಸಮುದಾಯದವರ ಮನೆ ದೇವರು, ಬೆಡಗು, ಕುಲದೇವರು, ಕಸಬು, ಭೂಮಿ, ಪಶುಸಂಪತ್ತು, ಮನೆಯ ಮಾದರಿ, ಶೈಕ್ಷಣಿಕ, ಕುಟುಂಬ ಸದಸ್ಯರ ಸಂಖ್ಯೆ, ವಯಸ್ಸು ಇತರ ಸೌಲಭ್ಯಗಳನ್ನು ಒಳಗೊಂಡ ಪ್ರಶ್ನೆಗಳಿಗೆ ಉತ್ತರ ಪಡೆಯುವುದು ಸಾಹಸದ ಕೆಲಸವೆ ಆಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸುಶಿಕ್ಷಿತ ಕುಟುಂಬಗಳು ಸರಿಯಾಗಿ ಉತ್ತರ ನೀಡುತ್ತಿದ್ದರೆ ಕೆಲವು ಶಿಕ್ಷಣ ಪಡೆಯದ ಕುಟುಂಬಗಳು ಸರಿಯಾದ ಉತ್ತರ ನೀಡುತ್ತಿರಲಿಲ್ಲ. ಹೆಚ್ಚಿನ ಕುಟುಂಬಗಳು ಕೃಷಿ ಕಾರ್ಮಿಕರಾಗಿದ್ದು, ಕೃಷಿ ಕೆಲಸಗಳಿಗೆ ಹೋಗುತ್ತಿದ್ದರು. ಅವರು ಹೇಳಿದಂತೆ ಸಂಜೆ ಹಾಗೂ ಮುಂಜಾನೆಯ ಸಮಯದಲ್ಲಿ ಮಾಹಿತಿ ಸಂಗ್ರಹಿಸಲು ಗ್ರಾಮಗಳಿಗೆ ಭೇಟಿ ಕೊಟ್ಟು ಅಧ್ಯಯನದ ವಿಷಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಇಲ್ಲಿವರೆಗೆ ನಡೆದ ಅಧ್ಯಯನ ಸಮೀಕ್ಷೆ

ಗದಗ ಹೊಸ ಜಿಲ್ಲೆಯಾದ್ದರಿಂದ ಈ ಜಿಲ್ಲೆಯ ಸಮಗ್ರ ಇತಿಹಾಸ ಕುರಿತು ಅಲ್ಪಸ್ವಲ್ಪ ಬಿಡಿಬಿಡಿ ಅಧ್ಯಯನಗಳಾಗಿವೆ. ಇದುವರೆಗೆ ಯಾವುದೇ ಸಮಗ್ರ ಅಧ್ಯಯನ ನಡೆದಿಲ್ಲ. ಇತಿಹಾಸದ ಪುಟಗಳಲ್ಲಿ ಸಂಸ್ಕೃತಿಯ ಪ್ರತೀಕವಾಗಿ ಗದಗ ಜಿಲ್ಲೆಯು ಬಿಂಬಿತವಾಗಿದೆ. ಕರ್ನಾಟಕದ ಬೇರೆ ಬೇರೆ ಐತಿಹಾಸಿಕ, ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ವಿವಿಧ ಬ್ರಿಟಿಷ್ ವಿದ್ವಾಂಸರು ಗದುಗಿನ ದೇವಾಲಯ ಮತ್ತು ಶಾಸನಗಳನ್ನು ಅಭ್ಯಾಸ ಮಾಡಿದ್ದಾರೆ. ರಾಬರ್ಟ್ ಬ್ರೂಸ್ ಫೂಟ್, ಬುಕನಾನ್, ಹೆನ್ರಿ ಕಝಿನ್ಸ್, ಜೇಮ್ಸ್ ಬರ್ಗಸ್, ಬಿ.ಎಲ್. ರೈಸ್, ಕಿಟೆಲ್ ಮುಂತಾದವರು ಗದುಗಿನ ಪುರಾತತ್ವ ಅವಶೇಷಗಳ ಕುರಿತು ಅಧ್ಯಯನ ಕೈಗೊಂಡಿದ್ದಾರೆ. ಅವರಲ್ಲಿ ಕಝಿನ್ಸ್‌ರವರ 'ಚಾಲುಕ್ಯನ್ ಆರ್ಕಿಟೆಕ್ಚರ್' ಅತಿ ಮಹತ್ವಪೂರ್ಣವಾದುದಾಗಿದೆ. ಈ ಗ್ರಂಥದಲ್ಲಿ ಗದಗ ಹಾಗೂ ಲಕ್ಕುಂಡಿಯ ದೇವಾಲಯಗಳ ವಾಸ್ತುಶಿಲ್ಪವನ್ನು ವಿದ್ವತ್‌ಪೂರ್ಣವಾಗಿ ವಿಶ್ಲೇಷಿಸಲಾಗಿದೆ.

"ವಿವಿಧ ವಿದ್ವಾಂಸರು ಕರ್ನಾಟಕದ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಬರೆದ ಗ್ರಂಥಗಳಲ್ಲಿ ಗದಗ ಜಿಲ್ಲೆಯ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಉಲ್ಲೇಖವಿದೆ. ಅವುಗಳಲ್ಲಿ ಕೆ. ಟಿ. ಶಿವತಾರಕರವರ 'ಕರ್ನಾಟಕದ ಪುರಾತತ್ವ ನೆಲೆಗಳು', ಹಾ. ಮಾ. ನಾಯಕರವರ 'ಕರ್ನಾಟಕ ಕನ್ನಡ ವಿಶ್ವಕೋಶ', ಎಂ. ಎಂ. ಕಲಬುರ್ಗಿಯವರ 'ಧಾರವಾಡ ಜಿಲ್ಲಾ ಶಾಸನ ಸೂಚಿ', ಎಸ್. ರಾಜಶೇಖರರವರ 'ಕರ್ನಾಟಕ ವಾಸ್ತುಶಿಲ್ಪ ಮತ್ತು ಕಲೆ', ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ಬಿ. ವೆಂಕೋಬರಾವ್‌ರವರ 'ಶಾಸನಗಳಲ್ಲಿ ಸ್ತ್ರೀ ಸಮಾಜ', ಎಸ್. ಕೆ. ಜೋಷಿಯವರ 'ಅರ್ಲಿ ಡಿಫೆನ್ಸ್

ಆರ್ಕಿಟೆಕ್ಚರ್ ಇನ್ ಕರ್ನಾಟಕ', ಶಿವರಾಮ ಕಾರಂತರ 'ಕರ್ನಾಟಕ ಶಿಲ್ಪ', ಶೇಷಶಾಸ್ತ್ರಿಯವರ 'ಕರ್ನಾಟಕ ವೀರಗಲ್ಲುಗಳು', ಚನ್ನಕ್ಕ ಎಲಿಗಾರರವರ 'ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ', ಜಿ. ಆರ್. ಕುಪ್ಪಸ್ವಾಮಿಯವರ 'ಎಕನಾಮಿಕ್ ಕಂಡಿಷನ್ ಇನ್ ಕರ್ನಾಟಕ', ಬಿ. ಎಸ್. ಶೇರೆರವರ 'ಕರ್ನಾಟಕದಲ್ಲಿ ಸತಿ ಪದ್ಧತಿ', ಎಮ್. ಎಸ್. ನಾಗರಾಜರಾವ್ ಸಂಪಾದಿಸಿದ 'ದಿ ಚಾಲುಕ್ಯಾಸ್ ಆಫ್ ಕಲ್ಯಾಣ', ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಅವರೇ ಸಂಪಾದಿಸಿದ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು' ಪ್ರಮುಖವಾಗಿವೆ. ಕರ್ನಾಟಕದ ಅನೇಕ ಸಂಶೋಧನ ಗ್ರಂಥಗಳು ಗದುಗಿನ ಇತಿಹಾಸ ಪುರಾತತ್ವ ಮತ್ತು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ."[೨]

"ಗದುಗಿನ ಇತಿಹಾಸವನ್ನು ನೇರವಾಗಿ ವಿವರಿಸುವ ಅನೇಕ ಪುಸ್ತಕಗಳು ಪ್ರಕಟಗೊಂಡಿವೆ. ಸಿಂಡಿಕೇಟ್ ಬ್ಯಾಂಕ್‌ನವರು ೧೯೬೧ ರಲ್ಲಿ ಪ್ರಕಟಿಸಿದ ಚಿಕ್ಕ ಪುಸ್ತಿಕೆ (ಬುಕ್‌ಲೆಟ್) 'ಗದಗ' ಇದು ಆಂಗ್ಲ ಭಾಷೆಯಲ್ಲಿದ್ದು ಅನೇಕ ಮಾಹಿತಿಗಳನ್ನು ಒದಗಿಸಿದ ಪ್ರಥಮ ಪುಸ್ತಕವಾಗಿದೆ.

ಹೋಟೆಲ್ ಉದ್ಯಮಿ ಬಿ. ಮಹಾಬಲರಾವ್ ಮೊಟ್ಟಮೊದಲ ಬಾರಿಗೆ ಗದುಗಿನ ಬಗೆಗೆ 'ನಮ್ಮ ಗದಗ-ಬೆಟಗೇರಿ' ಎಂಬ ಗ್ರಂಥವನ್ನು ರಚಿಸಿದರು. ಗದುಗಿನ ಬಗೆಗೆ ಮಾಹಿತಿ ಒದಗಿಸಿದ ಈ ಕೃತಿಯನ್ನು ಪ್ರಥಮ ಪ್ರಯತ್ನ ಎನ್ನಬಹುದು. ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಅ.ದ. ಕಟ್ಟೀಮನಿಯವರು ಗದುಗಿನ ಇತಿಹಾಸ ಹಾಗೂ ಅವಶೇಷಗಳ ಅಧ್ಯಯನ ಹಾಗೂ ಸಂಗ್ರಹಣೆ ಮಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅವರ 'ಗದುಗು ದೇಶ ಗತವೈಭವ' ಎಂಬ ಪುಸ್ತಕ ವಿಜಯನಗರ ಕಾಲದ ಗದುಗಿನ ಇತಿಹಾಸವನ್ನು ವಿವರಿಸುತ್ತದೆ. ಹನುಮಾಕ್ಷಿ ಗೋಗಿಯವರು ಗದುಗಿನ ಅನೇಕ ಶಾಸನಗಳನ್ನು ಸಂಪಾದಿಸಿದ್ದಾರೆ. ಗದಗ ಭಾಗದ ಇತಿಹಾಸ ಕುರಿತ ಹಲವು ಹೊಸ ಅಂಶಗಳು ಬೆಳಕಿಗೆ ಬರುವಂತೆ ಮಾಡಿದ್ದಾರೆ. ಎಸ್. ಎಚ್. ರಿತ್ತಿಯವರ 'ಮುಳಗುಂದ ನಾಡು' ಈ ಪ್ರದೇಶದ ಮಹತ್ವದ ಐತಿಹಾಸಿಕ ರೂಪುರೇಷಗಳನ್ನು ನೀಡಿ ಮುಳಗುಂದದ ಬಗೆಗೆ ಅಧ್ಯಯನ ಕೈಗೊಳ್ಳುವವರಿಗೆ ಮಹತ್ವಪೂರ್ಣ ಮಾಹಿತಿ ಒದಗಿಸುತ್ತದೆ.

ಇಂಗ್ಲಿಷ್ ಪ್ರಾಧ್ಯಾಪಕರಾದ ಗದುಗಿನ ಎಂ. ಎಚ್. ಹರಿದಾಸರವರ 'ಲಕ್ಕುಂಡಿ ಕಲೆಯ ಬಲೆ' ಲಕ್ಕುಂಡಿ ದೇವಾಲಯಗಳ ಕಲಾ ಸೊಬಗನ್ನು ವರ್ಣಿಸುತ್ತದೆ. ಅವರ 'ಗದುಗಿನ ವೀರನಾರಾಯಣ ಮತ್ತು ಕುಮಾರವ್ಯಾಸ' ಮತ್ತು 'ತ್ರಿಕೂಟೇಶ್ವರ' ಗ್ರಂಥ ಗದುಗಿನ ಎರಡು ಪ್ರಮುಖ ದೇವಾಲಯಗಳ ಬಗೆಗಿನ ಪೌರಾಣಿಕ ಕಥೆಗಳು, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕೆಲವು ಶಾಸನಗಳ ಪಾಠ ಹಾಗೂ ಛಾಯಾಚಿತ್ರ ನಕ್ಷೆಗಳಿಂದ ಕೂಡಿದ ಉತ್ತಮ ಆಕರವಾಗಿದೆ.

ಲಕ್ಕುಂಡಿ ಉತ್ಸವ ಹಾಗೂ ವಿವಿಧ ಸಂದರ್ಭಗಳಲ್ಲಿ ಬಿಡುಗಡೆಯಾದ ಸ್ಮರಣ ಸಂಚಿಕೆಗಳಲ್ಲಿ ಲಕ್ಕುಂಡಿಯ ಇತಿಹಾಸ, ವಾಸ್ತುಶಿಲ್ಪ ಮತ್ತು ಸಂಸ್ಕೃತಿ ಬಗೆಗಿನ ವಿವಿಧ ಲೇಖನಗಳು ವಿಶಿಷ್ಟ ಬೆಳಕು ಚೆಲ್ಲುತ್ತವೆ. ಚಂದ್ರಶೇಖರ ವಸ್ತ್ರದ ಅವರ ಸಂಪಾದಕತ್ವದಲ್ಲಿ ೧೯೯೭ರಲ್ಲಿ ಹೊರಬಂದ ಲಕ್ಕುಂಡಿ ಉತ್ಸವ

ಸ್ಮರಣ ಸಂಚಿಕೆ 'ಲೊಕ್ಕಿಗುಂಡಿ', ೧೯೯೯ ಉತ್ಸವದಲ್ಲಿ ಸಿ. ಜಿ. ಬೆಟಸೂರಮಠರವರ ಸಂಪಾದಕತ್ವದಲ್ಲಿ ಪ್ರಕಟವಾದ 'ಕೀರ್ತಿಮುಖ' ಹಾಗೂ ಅತ್ತಿಮಬ್ಬೆಯ ೨೦೦೨ರ ಸಹಸ್ರಮಾನೋತ್ಸವ ಹಾಗೂ ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮಾವೇಶದ ಸ್ಮರಣ ಸಂಚಿಕೆ 'ಸ್ತ್ರೀ ಸಾಹಿತ್ಯ ಸೌರಭ' ಲೇಖನಗಳು ಲಕ್ಕುಂಡಿ ಬಗೆಗೆ ಮಾಹಿತಿ ನೀಡುತ್ತವೆ.

ಇದರೊಂದಿಗೆ ಅನೇಕ ಮಹತ್ವಪೂರ್ಣ ಜರ್ನಲ್‌ಗಳು, ಸ್ಮರಣ ಸಂಚಿಕೆಗಳು, ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ವಿವಿಧ ಲೇಖನಗಳು ಗದಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ವೈಶಿಷ್ಟ್ಯಪೂರ್ಣ ವಿಚಾರಗಳನ್ನು ವ್ಯಕ್ತಪಡಿಸಿವೆ. ೧೯೫೫ರ ಜ.ತೋ. ಮಹಾವಿದ್ಯಾಲಯದ ವಾರ್ಷಿಕ ಪತ್ರಿಕೆಯಲ್ಲಿ ಎಸ್. ಎಚ್. ರಿತ್ತಿಯವರ 'ಬೆಳವೊಲ ನಾಡು' ಲೇಖನ ಪ್ರಕಟವಾಗಿದೆ. ೧೯೬೧ರಲ್ಲಿ ಗದಗನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ಪ್ರಸಾದ'ದಲ್ಲಿ ಪಿ. ಬಿ. ದೇಸಾಯಿ ಹಾಗೂ ಕೆ. ಎಂ. ಕುಲಕರ್ಣಿ ಗದಗ ಇತಿಹಾಸ ಕುರಿತು ಲೇಖನಗಳನ್ನು ಬರೆದಿದ್ದಾರೆ. ೧೯೫೫ರಲ್ಲಿ ಗದಗ-ಬೆಟಗೇರಿ ನಗರಸಭೆ ಶತಮಾನೋತ್ಸವದ ಸ್ಮರಣ ಸಂಚಿಕೆಯಲ್ಲಿ ಗದುಗಿನ ಬಗೆಗೆ ಅಪಾರ ಮಾಹಿತಿ ದೊರೆಯುತ್ತದೆ."[೨]

'ಇತಿಹಾಸ ದರ್ಶನ'ದ ವಿವಿಧ ಸಂಪುಟಗಳು ಹಾಗೂ ಸಂಚಿಕೆಗಳಲ್ಲಿ ಪ್ರಕಟವಾದ ಅನೇಕ ಲೇಖನಗಳು ಗದಗಿನ ಇತಿಹಾಸ ಹಾಗೂ ಪುರಾತತ್ವದ ಮೇಲೆ ಬೆಳಕು ಚೆಲ್ಲುತ್ತದೆ. ೧೯೯೦ರ ೫ನೇ ಸಂಚಿಕೆಯಲ್ಲಿ ಪ್ರಕಟಗೊಂಡ ವ್ಹಿ. ಎಸ್. ಪಾಟೀಲರ 'ಗದಗ ತಾಲ್ಲೂಕ ಶಾಸನಗಳ ಲಿಪಿಕಾರ ರೂವಾರಿಗಳು' ಎಂಬ ಲೇಖನ ಇಲ್ಲಿನ ಲಿಪಿಕಾರರು ಹೊಯ್ಸಳ ದೇವಾಲಯಗಳ ಶಿಲ್ಪಿಗಳಾಗಿದ್ದರು ಎಂಬುದನ್ನು ತಿಳಿಯಪಡಿಸುತ್ತದೆ. ಅದೇ ಸಂಚಿಕೆಯಲ್ಲಿನ ಕೆ. ವಸಂತಲಕ್ಷ್ಮೀಯವರ 'ಕರ್ನಾಟಕದ ಸರಸ್ವತಿ ಶಿಲ್ಪಗಳು' ಗದುಗಿನ ಸರಸ್ವತಿ ವಿಗ್ರಹವನ್ನು ವರ್ಣಿಸುತ್ತದೆ. ಅದೇ ಸಂಚಿಕೆ, 'ಮುಂಡರಗಿ ಭೀಮರಾವ' ಎಂಬ ಲೇಖನ ಮುಂಡರಗಿ ಭೀಮರಾಯನ ಬಗೆಗೆ ಮಾಹಿತಿ ನೀಡುತ್ತದೆ.

ದಿ ಜನರಲ್ ಆಫ್ ಕೆ.ಯು.ಡಿ. ಸೋಷಿಯಲ್ ಸಾಯಿನ್ಸ್ ೯ನೇ ವ್ಯಾಲ್ಯೂಮಿನಲ್ಲಿ (೧೯೭೩) ಅ. ಸುಂದರವರು 'ಸಮ್ ಟೆಂಪಲ್ಸ್ ಆಫ್ ನಾರ್ತ್ ಧಾರವಾಡ ಡಿಸ್ಟ್ರಿಕ್ಟ್ ಅಂಡ್ ಹೊಯ್ಸಳ ಆರ್ಕಿಟೆಕ್ಚರ್'ನಲ್ಲಿ ಉತ್ತರ ಕರ್ನಾಟಕದ ದೇವಾಲಯಗಳು ಹೊಯ್ಸಳ ವಾಸ್ತುಶಿಲ್ಪ ಕಲೆಯ ಮೇಲೆ ಬೀರಿದ ಪ್ರಭಾವವನ್ನು ವಿವರಿಸುತ್ತದೆ. ಆರನೆಯ ಸಂಚಿಕೆಯಲ್ಲಿ (೧೯೭೦) ಪಿ. ಬಿ. ದೇಸಾಯಿಯವರ 'ಕುಮಾರವ್ಯಾಸನನ್ನು ಕೀರ್ತಿಸುವ ಗದುಗಿನ ಶಿಲಾಶಾಸನ' ಎಂಬ ಲೇಖನ ಕುಮಾರವ್ಯಾಸನ ಕಾಲ ನಿರ್ಣಯ ಮಾಡುತ್ತದೆ. ಹಾಗೂ ಅವನು ವೀರನಾರಾಯಣ ದೇವಸ್ಥಾನದಲ್ಲಿ 'ಕರ್ನಾಟಕ ಭಾರತ ಕಥಾಮಂಜರಿ'ಯನ್ನು ರಚಿಸಿದ ಕುರಿತು ಮಾಹಿತಿ ನೀಡುತ್ತದೆ. ಇದೇ ಜರ್ನಲ್‌ನಲ್ಲಿ ನಾಲ್ಕನೆ ಸಂಪುಟದ ಜೂನ್ ೧೯೬೦ರ ಸಂಚಿಕೆಯಲ್ಲಿ ಕೆ. ಆರ್. ಬಸವರಾಜರವರ 'ಅಗ್ರಹಾರಾಸ್ ಇನ್ ಮೆಡಿವೆಲ್ ಕರ್ನಾಟಕ' ಲೇಖನದಲ್ಲಿ ಗದಗ ಜಿಲ್ಲೆಯ ಕೆಲವು ಅಗ್ರಹಾರಗಳ ಉಲ್ಲೇಖವಿದೆ.

"ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ 'ಕರ್ನಾಟಕ ಭಾರತಿ'ಯ ನಾಲ್ಕನೇ ಸಂಪುಟ ಸಂಚಿಕೆ ಎರಡರಲ್ಲಿ (೧೯೭೧) ಪ್ರಕಟಗೊಂಡ ಎಸ್. ಎಲ್. ಶಾಂತಕುಮಾರಿಯವರ ಅಗ್ರಹಾರ ಕೋಟುಮಚಗಿ ಎಂಬ ಲೇಖನವು ಕೋಟಮಚಗಿ ಅಗ್ರಹಾರ ಒಂದು ಹೆಸರಾಂತ ವಿದ್ಯಾ ಕೇಂದ್ರ ವಾಗಿತ್ತೆಂದು ಅದರ ಮಹತ್ವವನ್ನು ವರ್ಣಿಸುತ್ತದೆ. ಇದೇ ಪತ್ರಿಕೆಯ ೧೯೬೮ರ ಸಂಪುಟ ಒಂದು, ಸಂಚಿಕೆ ನಾಲ್ಕರಲ್ಲಿ ಎಸ್. ಎಚ್. ರಿತ್ತಿಯವರ 'ಬೆಳವೊಲ ೩೦೦' ಎಂಬ ಲೇಖನ ಗದಗ ಪ್ರದೇಶ ಬೆಳವೊಲ ನಾಡಿನ ಪ್ರಮುಖ ಭಾಗವಾಗಿತ್ತೆಂದು ಸ್ಪಷ್ಟಪಡಿಸುತ್ತದೆ. ಇದೇ ಪತ್ರಿಕೆ ಸಂಪುಟ ೯ ಸಂಚಿಕೆ ೨ರಲ್ಲಿ ಎಸ್. ರಾಜಶೇಖರ್‌ರವರ 'ಅಗ್ರಹಾರ ನೀಲಗುಂದ' ಎಂಬ ಲೇಖನ ಅಂದಿನ ಕಾಲದ ನೀಲಗುಂದ ಗ್ರಾಮದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ವರ್ಣಿಸುತ್ತದೆ. ಇದೇ ಪತ್ರಿಕೆಯ ಸಂಪುಟ ೯ರ ಸಂಚಿಕೆ ೩ (೧೯೭೭)ರಲ್ಲಿ 'ಉಗುರು ಮೂನೂರ್ವರು' ಎಂಬ ಆರ್. ಎನ್. ಗುರವ ರವರ ಲೇಖನದಲ್ಲಿ ಗದಗ ಜಿಲ್ಲೆಯಲ್ಲಿನ ಕೆಲವು ಗ್ರಾಮಗಳ ಎಲೆದೋಟಗಳಲ್ಲಿ ವೀಳೆಯದೆಲೆ ಕೊಯ್ಯುವ ವ್ಯವಸಾಯ ಮಾಡುವವರ ಸಂಘವನ್ನು ಕುರಿತು ವಿಶಿಷ್ಟ ಮಾಹಿತಿಗಳನ್ನು ನೀಡುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಸಾಹಿತ್ಯಿಕ ಪತ್ರಿಕೆಯಾದ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಯಲ್ಲಿ ಗದಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ ಕುರಿತ ಹಲವು ಲೇಖನಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ೧೯೭೬ರ ಸಂಪುಟ ೬೧, ಸಂಚಿಕೆ ೧ರ 'ಮುಂಡರಗಿಯ ಪ್ರಾಚೀನ ಚರಿತ್ರೆ' ಹಾಗೂ ಸಂಪುಟ ೨೭ರ ಸಂಚಿಕೆ ೨ರ 'ಕುಮಾರವ್ಯಾಸ' ಲೇಖನಗಳು."[೪]

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೆಯಾದ 'ಮಾನವಿಕ ಕರ್ನಾಟಕ'ದಲ್ಲಿ ಗದಗ ಜಿಲ್ಲೆಯ ಕುರಿತು ಕೆಲವು ವಿಶಿಷ್ಟ ಲೇಖನಗಳು ಪ್ರಕಟಗೊಂಡಿವೆ. ಸಂಪುಟ ೪ ಸಂಚಿಕೆ ೪ರಲ್ಲಿ ಪ್ರಕಟಗೊಂಡ ಸೀತಾರಾಮ ಜಾಗೀರ್‌ದಾರರ 'ಘಟಾಂತಕಿಯ ಬಸದಿಗಳು ಹಾಗೂ ಘಟಾಂತಕಿ' ಲೇಖನ ಲಕ್ಕುಂಡಿಯಲ್ಲಿರುವ ಅಪರೂಪದ ಘಟಾಂತಿಕ ಬಸದಿಯ ಕುರಿತು ವಿವರಣೆ ನೀಡುತ್ತದೆ. ಇದೇ ಪತ್ರಿಕೆಯ ೧೯೭೬ರ ಸಂಪುಟ ೬ ಸಂಚಿಕೆ ೨ರಲ್ಲಿ ಸಿ. ಬಿ. ರಾಮಚಂದ್ರಪ್ಪನವರ 'ಸೊರಟೂರಿನ ಕದನ' ಲೇಖನ ಚಾಲುಕ್ಯರ ಅವನತಿಯ ಕಾಲದಲ್ಲಿ ಕುಂತಳ ದೇಶವನ್ನು ವಶಪಡಿಸಿಕೊಳ್ಳಲು ಹೊಯ್ಸಳ-ಸೇವುಣರು ನಡೆಸಿದ ಸಂಘರ್ಷ ಹಾಗೂ ಅದಕ್ಕೆ ರಣಭೂಮಿಯಾದ ಸೊರಟೂರನ್ನು ಕುರಿತಿದೆ. ಇದೇ ರೀತಿಯಲ್ಲಿ ಸಂಪುಟ ೭ ಸಂಚಿಕೆ ೪ರಲ್ಲಿ ಬಾ.ರಾ.ಗೋಪಾಲ್‌ರವರ 'ಲಕ್ಕುಂಡಿ' ಲೇಖನ ಲಕ್ಕುಂಡಿಯ ಐತಿಹಾಸಿಕ ಮಹತ್ವವನ್ನು ವಿವರಿಸುತ್ತದೆ. 'ಕನ್ನಡ ನುಡಿ' ಪತ್ರಿಕೆ(೧೯೭೦) ೩೯ನೇ ಸಂಪುಟದಲ್ಲಿ ಬೆಳ್ಧುಡೆಯ ಶಾಸನ ಹಾಗೂ ಸೊರಟೂರ ಶಾಸನ ಕುರಿತು ಉಪಯುಕ್ತ ಲೇಖನಗಳಿವೆ.

೧೯೭೫ರಲ್ಲಿ ಪ್ರಕಟಗೊಂಡ ಹ. ರಾ. ಕಿದಿಯೂರ ಸಂಪಾದಕತ್ವದ 'ನಮ್ಮ ಗದಗ-ಬೆಟಗೇರಿ ಡೈರಕ್ಟರಿ' ಗದಗ ಕುರಿತು ಎಲ್ಲಾ ಮಾಹಿತಿಯನ್ನೊಳಗೊಂಡ ಅತ್ಯುತ್ತಮ ಗ್ರಂಥವಾಗಿದೆ. ಇದರಲ್ಲಿ ವಿವಿಧ ಲೇಖಕರ ಗದುಗಿನ ಇತಿಹಾಸ, ಸಂಸ್ಕೃತಿ, ದೇವಾಲಯ, ಸಮುದಾಯಗಳ, ಹಾಗೂ ಸಂಘ-ಸಂಸ್ಥೆಗಳ

ಕುರಿತು ೨೦೦ಕ್ಕೂ ಹೆಚ್ಚು ಲೇಖನಗಳಿವೆ. ಇವುಗಳಲ್ಲಿ ಗದುಗಿನ ದೇವಾಲಯಗಳ ನಿರ್ಮಾಣ, ವಾಸ್ತುಶಿಲ್ಪ ಅವುಗಳ ಧಾರ್ಮಿಕತೆ ಕುರಿತು ವಿವರಿಸುವ ಅತಿ ಮಹತ್ವದ ಗದಗ ಕುರಿತು ಐತಿಹಾಸಿಕ ಮೂಲ ಆಕರದಂತಿರುವ ಲೇಖನವೆಂದರೆ ಸುಪ್ರಸಿದ್ಧ 'ಗದಗ–ಬೆಟಗೇರಿ ದೇವಾಲಯಗಳು'. ಇನ್ನುಳಿದಂತೆ ಗದುಗಿನ ಬಗೆಗೆ ಐತಿಹಾಸಿಕ ದೃಷ್ಟಿಯಿಂದ ಮಾಹಿತಿ ನೀಡುವ ಇತರ ಲೇಖನವೆಂದರೆ ಇತಿಹಾಸಜ್ಞ ಸಿ. ವಿ. ರಂಗಸ್ವಾಮಿಯವರದು. ಡಾ. ಅ. ಸುಂದರವರ 'ಗದಗ ಬೆಟಗೇರಿಯ ಐತಿಹಾಸಿಕ ಸಮೀಕ್ಷೆ', ಶಂಕರ ಪಾಟೀಲರ 'ಹಿರಿಯ ಇತಿಹಾಸವುಳ್ಳ ಗದಗ–ಬೆಟಗೇರಿ', ಶಿವಾನಂದ ಶೆಟ್ಟಿಯವರ 'ಗದುಗಿನ ಶಾಸನ ಸಂಪತ್ತು', ಜಯರಾಮಾಚಾರ್ಯರ 'ಗದಗ–ಬೆಟಗೇರಿ ದೇವಸ್ಥಾನ ಮಠಮಾನ್ಯಗಳು', ಶಾಂತಾಕುಮಾರಿಯವರ 'ಅಗ್ರಹಾರ ಗದಗು', ಕೆ. ಎಮ್. ಕುಲಕರ್ಣಿಯವರ 'ಕೀರ್ತಿವೆತ್ತ ಕೃತಪುರ', ಶಕುಂತಲಾ ಜನ್ನುರವರ 'ವಿಜಯನಗರ ಕಾಲದ ಗದಗು' ಮುಂತಾದವು.

ಮುಂಡರಗಿಯ ಎಸ್.ಜೆ.ಜೆ.ವಿ. ಮಹಾವಿದ್ಯಾಲಯದ ಸ್ಮರಣ ಸಂಚಿಕೆ 'ಮೃಡದೀಪ್ತಿ'ಯಲ್ಲಿ ಮಹಾಲಿಂಗ ಯಳಗಿಯವರ ಲೇಖನ 'ಶಾಸನಗಳ ಇಣುಕು ನೋಟದಲ್ಲಿ ಮುಂಡರಗಿ' 'ಮುಂಡರಗಿ ಭೀಮರಾವ್' ಗಮನಾರ್ಹ. ಬಿ. ಎಸ್. ಪಾಟೀಲರ 'ಸ್ವಾತಂತ್ರ್ಯ ಆಂದೋಲನದಲ್ಲಿ ಮುಂಡರಗಿಯ ಪಾತ್ರ' ಮುಂಡರಗಿಯಲ್ಲಿ ನಡೆದ ಸ್ವಾತಂತ್ರ್ಯ ಆಂದೋಲನವನ್ನು ವಿವರಿಸುತ್ತದೆ. ಅನ್ನದಾನೇಶ್ವರ ಮಠ ಪ್ರಕಟಿಸಿರುವ ಸ್ಮರಣ ಸಂಚಿಕೆ 'ಕಪೋತಗಿರಿ' ಮುಂಡರಗಿಯ ಇತಿಹಾಸ ಹಾಗೂ ಸಂಸ್ಕೃತಿ ಕುರಿತು ವಿವರಿಸುತ್ತದೆ.

"ರೋಣದ ಇತಿಹಾಸ ಹಾಗೂ ಸಂಸ್ಕೃತಿ ಬಗ್ಗೆ ಅನೇಕ ಗ್ರಂಥಗಳು ಹೊರಬಂದಿವೆ. ಅ. ದ. ಕಟ್ಟೀಮನಿಯವರ 'ಕಿಸುಗಾಡು ಗತವೈಭವ' ಎಂಬ ಗ್ರಂಥ ಶಾಸನಗಳ ಆಧಾರದ ಮೇಲೆ ರೋಣ ಪ್ರದೇಶದ ಐತಿಹಾಸಿಕ ಬೆಳವಣಿಗೆಯನ್ನು ಹಂತಹಂತವಾಗಿ ವಿವರಿಸುತ್ತದೆ. ಪ್ರಾಚೀನಕಾಲದಲ್ಲಿ ಪುಲಿಗೆರೆ ಎಂದೇ ಪ್ರಸಿದ್ಧವಾಗಿದ್ದ ಲಕ್ಷ್ಮೇಶ್ವರ ಕುರಿತ ಸದಾನಂದ ಕನವಳ್ಳಿ ಅವರ 'ಪುಲಿಗೆರೆ' ಎಂಬ ಪುಸ್ತಕ ಲಕ್ಷ್ಮೇಶ್ವರದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ವಿವರಿಸುತ್ತದೆ. ಸಿ. ವಿ. ಕೆರಿಮನಿಯವರ 'ಲಕ್ಷ್ಮೇಶ್ವರ' ಎಂಬ ಗ್ರಂಥ ಆ ಗ್ರಾಮದ ಪ್ರಾಥಮಿಕ ಮಾಹಿತಿಗಳನ್ನು ನೀಡುತ್ತದೆ.

ನರಗುಂದ ಇತಿಹಾಸ ಮತ್ತು ಸಂಸ್ಕೃತಿ ಕುರಿತು ಅನೇಕ ಗ್ರಂಥಗಳು ಪ್ರಕಟಗೊಂಡಿವೆ. ಎಸ್. ಎಸ್. ಶಾಂತಾಕುಮಾರಿಯವರ 'ನರಗುಂದ ಇತಿಹಾಸ' ನರಗುಂದ ಕುರಿತ ಪ್ರಾಥಮಿಕ ಸ್ಥಿತಿಯನ್ನು ನೀಡುತ್ತದೆ. ಪಿ. ವಿ. ಹೂಗಾರವರ 'ನರಗುಂದ' ನರಗುಂದ ಕಲೆ, ವಾಸ್ತು, ಹಾಗೂ ಇತಿಹಾಸ ಕುರಿತು ಮಾಹಿತಿ ನೀಡುತ್ತದೆ."೫

"ಗದುಗಿನ ಬಗೆಗೆ ಪ್ರಕಟಗೊಂಡಿರುವ ಈ ಎಲ್ಲಾ ಗ್ರಂಥಗಳಲ್ಲದೆ ಶಾಸನ ಹಾಗೂ ಪ್ರಾಚ್ಯಾವಶೇಷಗಳು ಕುರಿತ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೊರತಂದಿರುವ ಪತ್ರಿಕೆ, ಪುಸ್ತಕಗಳು ಗದಗ ಜಿಲ್ಲೆಯ ಕುರಿತು ಅಧಿಕೃತ ವಿಶೇಷ ಮಾಹಿತಿಯನ್ನು ನೀಡುತ್ತವೆ. 'ಎಪಿಗ್ರಾಫಿಯಾ ಇಂಡಿಯಾ' ಮಾಲಿಕೆಯ ಸಂಪುಟಗಳು III, IV, VI, XII, XVI, XIX, XX, XXI, XXVI, ಗದುಗಿನ ಕುರಿತು ಗದಗ

ಜಿಲ್ಲೆಯ ಐತಿಹಾಸಿಕ ಮಹತ್ವವಿರುವ ಶಾಸನಗಳ ಮಾಹಿತಿ ನೀಡುತ್ತದೆ. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್ XI ರ ಭಾಗ–೧, ಭಾಗ–೨ ಹಾಗೂ XV ಸಂಪುಟಗಳು ಗದಗ ಜಿಲ್ಲೆಯ ಬಹುತೇಕ ಶಾಸನಗಳ ಪಠ್ಯ ಸಾರಾಂಶ ಕುರಿತು ವಿವರಣೆ ನೀಡುತ್ತದೆ.

ವಿವಿಧ ಸಮಯಗಳಲ್ಲಿ ಪ್ರಕಟಗೊಂಡ ಸರ್ಕಾರದ ಗೆಜೆಟಿಯರ್‌ಗಳು ಗದಗ ಕುರಿತು ಅತ್ಯಮೂಲ್ಯ ಮಾಹಿತಿ ನೀಡುತ್ತವೆ. ೧೮೮೪ರಲ್ಲಿ ಧಾರವಾಡ ಜಿಲ್ಲೆ ಕುರಿತ 'ಬಾಂಬೆ ಗೆಜೆಟಿಯರ್', ೧೯೯೫ರಲ್ಲಿ ವೆಂಕಟರಂಗೋ ಕಟ್ಟಿಯವರು ಸಂಪಾದಿಸಿ ಕನ್ನಡ ಭಾಷೆಯಲ್ಲಿ ಪ್ರಕಟಗೊಂಡ ಧಾರವಾಡ ಜಿಲ್ಲೆ ಕುರಿತ 'ಬಾಂಬೆ ಗೆಜೆಟಿಯರ್' ಗದಗ ಕುರಿತು ಅತ್ಯಮೂಲ್ಯ ಮಾಹಿತಿ ನೀಡುತ್ತವೆ. ಸೂರ್ಯನಾಥ ಕಾಮತ್ ಸಂಪಾದಕತ್ವದ 'ಕರ್ನಾಟಕ ಸ್ಟೇಟ್ ಗೆಜೆಟಿಯರ್' (೧೯೯೫) ಧಾರವಾಡ ಜಿಲ್ಲೆಯ ಗದುಗಿನ ಕುರಿತು ಆಧುನಿಕ ಶೋಧನೆಗಳನ್ನೊಳಗೊಂಡಂತೆ ವಿವರವಾದ ಮಾಹಿತಿ ನೀಡುತ್ತದೆ.

ಗದಗ ಕುರಿತ ವಿವಿಧ ಸಂಶೋಧನ ಪ್ರಬಂಧಗಳಲ್ಲಿ ಈಶ್ವರ ಕಾಟ್ಕರ್‌ರವರ 'ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಕಲ್ಯಾಣಿ ಚಾಲುಕ್ಯಾಸ್', ದ್ಯಾಮನಗೌಡರ 'ಡಂಬಳ ಅಂಡ್ ಇಟ್ಸ್ ಎನ್‌ವಾಯರಸ್', ಹಾಜವಗೋಳರ 'ಮುಳಗುಂದ ನಾಡು' ಮುಂತಾದ ಪಿಹೆಚ್.ಡಿ. ಪ್ರಬಂಧಗಳು ಹಾಗೂ ಎಂ.ಫಿಲ್. ಪ್ರಬಂಧಗಳು ಗದಗ ಜಿಲ್ಲೆಯ ಕುರಿತು ಹೊಸ ವಿಷಯಗಳನ್ನು ಬೆಳಕಿಗೆ ತರುತ್ತವೆ. ಇದಲ್ಲದೆ ಚಂದ್ರಶೇಖರ ವಸ್ತ್ರದ ಹಾಗೂ ಅರ್ಜುನ ಗೊಳಸಂಗಿಯವರು ಸಂಪಾದಿಸಿದ 'ಕೃತಪುರ' ಹಾಗೂ ಸಿ. ವಿ. ಕೆರೆಮನಿಯವರು ಸಂಪಾದಿಸಿದ 'ಗದಗ ಒಂದು ಅಧ್ಯಯನ' ಕೃತಿಗಳು ಗದುಗಿನ ಸಾಹಿತ್ಯಕ, ಸಾಂಸ್ಕೃತಿಕ, ಐತಿಹಾಸಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲು ಮೌಲಿಕ ಆಕರ ಕೃತಿಗಳಾಗಿವೆ.[೭]

ಗದಗ ಜಿಲ್ಲೆಯ ಛಲವಾದಿ ಸಮುದಾಯದ ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲ. ಆದರೆ ಇತರೆ ಜಿಲ್ಲೆಯಲ್ಲಿ ಸಮುದಾಯದ ಕುರಿತು ಅಧ್ಯಯನಗಳಾಗಿದ್ದರೂ ಪರಿಪೂರ್ಣವಾಗಿ ಕಂಡುಬರಲಾರವು. ಸಮುದಾಯ ಕುರಿತು ಕೆಲವೊಂದು ಬಿಡಿಬಿಡಿಯಾದ ಲೇಖನಗಳು ಗದಗ ಜಿಲ್ಲೆಯ ಕುರಿತು ಅಲ್ಲಲ್ಲಿ ಗೋಚರಿಸುತ್ತವೆ.

ಸದ್ಯ ಆದಿಕರ್ನಾಟಕ, ಛಲವಾದಿಗಳೆಂದು ಹಾಗೂ ಹೊಲೆಯ ಕರೆಯಲಾಗುವ ಸಮುದಾಯದ ಪ್ರಾಚೀನತೆ ಮತ್ತು ಅದರ ಅರ್ಥ ಕುರಿತಂತೆ ಬುಕನನ್ ತಮ್ಮ 'ಮೈಸೂರು, ಕೆನರಾ ಮತ್ತು ಮಲಬಾರ್‌ಗಳ ಯಾತ್ರೆ' ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಬುಡಕಟ್ಟುಗಳಲ್ಲಿ ಹೊಲೆಯ ಬುಡಕಟ್ಟು ಒಂದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಕನ್ನಡದ ಆದಿ ಕರ್ನಾಟಕದ ಜನವರ್ಗ ಹಿಂದೆ ಯೋಧರ ಕುಲವಾಗಿತ್ತು. ಅವರು ಬಾರಕೂರು ಸಂಸ್ಥಾನದಲ್ಲಿ ರಾಣಾರ ಎಂಬ ಹೆಸರಿನ ದೊರೆಗಳಾಗಿದ್ದರು ಎಂಬ ವಿವರ ನೀಡಿದ್ದಾರೆ. ಆದಿ ಕರ್ನಾಟಕದ ಜನತೆ ಶತಮಾನಗಳ ಹಿಂದೆಯೆ ಅರಸರೂ, ಸಣ್ಣಪುಟ್ಟ ಸಾಮಂತರೂ, ಪಾಳೆಗಾರರೂ ಆಗಿದ್ದಾರೆಂಬುದನ್ನು ದಾಖಲಿಸಿದ್ದಾರೆ. ಇದಕ್ಕೆ ಪೂರಕವಾಗಿ ಅಂಬೇಡ್ಕರ್ ಅಸ್ಪೃಶ್ಯ ಕುಲಗಳು ಯೋಧರ ಕುಲಗಳಾಗಿದ್ದವು. ಹೊರಗಿನ ಆಕ್ರಮಣಕಾರರಿಗೆ

ಅವರು ಸೋತ ಪರಿಣಾಮವಾಗಿ ತೊತ್ತುಗಳಾಗಿ ಮುಂದುವರೆದರು. ತದನಂತರದಲ್ಲಿ ಬಹಿಷ್ಕೃತ ಸಮುದಾಯವಾಗಿ ಗ್ರಾಮದ ಹೊರಗೆ ವಾಸಿಸಬೇಕಾಗಿ ಬಂತೆಂದು ಅಭಿಪ್ರಾಯ ಪಡುತ್ತಾರೆ.

ಎಡ್ಗರ್ ಥರ್ಸ್ಟನ್ ಎಂಬ ಇತಿಹಾಸಕಾರರು 'ಹೊಲೆದೊಡೆಯರು ಹುಟ್ಟು ಹೋರಾಟಗಾರರು ಈ ನೆಲವನ್ನು ರಕ್ಷಣೆ ಮಾಡಿದವರು' ಎಂದು ಹೇಳುತ್ತಾರೆ. ಹೈದರಾಲಿಯ ಸೈನಿಕರನ್ನು ತನ್ನ ಒನಕೆಯಿಂದ ಬಗ್ಗುಬಡೆದ 'ವೀರ ಒನಕೆ ಓಬವ್ವ' ಹಾಗೂ ಟಿಪ್ಪೂಸುಲ್ತಾನ ಸೇನೆಯಲ್ಲಿ ದಂಡನಾಯಕನಾಗಿದ್ದ ಮೈಸೂರು ಮೂಲದ 'ಸಿಪಾಯಿ ಸೂರಪ್ಪ' ಹೊಲೆಯ ಸಮುದಾಯದವರು ಎನ್ನುತ್ತಾರೆ ಥರ್ಸ್ಟನ್.

ಹೊಲ-ಭೂಮಿ-ಮಣ್ಣು ಎಂಬುದರ ದ್ಯೋತಕವಾಗಿ ಹೊಲೆಯ ಪದದ ಅರ್ಥವಿದೆ. ಹೊಲೆಯರೆ ಈ ನೆಲದ ಮೂಲ ನಿವಾಸಿಗಳು. ಅವರೇ ಹಳ್ಳಿಗಳನ್ನು ಸ್ಥಾಪಿಸಿದವರು ಆಗಿದ್ದಾರೆ ಎಂಬ ವಿಚಾರವನ್ನು ಥರ್ಸ್ಟನ್ ಹೇಳಿದ್ದಾರೆ. ಮೊಟ್ಟ ಮೊದಲು ಬೇಸಾಯ ಮಾಡಿದವರೆ ಹೊಲೆಯರು ಎಂಬುದನ್ನು ತಮ್ಮ 'ದಿ ಕಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಕೃತಿಯ ಏಳು ಸಂಪುಟಗಳಲ್ಲಿ ಬಹಿರಂಗ ಪಡಿಸಿದ್ದಾರೆ.

ಮೈಸೂರಿನ ಜಾತಿ ಮತ್ತು ಬುಡಕಟ್ಟುಗಳು ಎಂಬ ಗ್ರಂಥದಲ್ಲಿ ಅನಂತಕೃಷ್ಣ ಐಯ್ಯರ್ ಅವರು ಛಲವಾದಿ ಅವರ ಮೂಲ, ದಂತ ಕತೆಗಳು, ಕರ್ನಾಟಕದಲ್ಲಿ ಅವರ ಜನಸಂಖ್ಯೆ ಹಂಚಿಕೆ, ಅವರು ನೆಲೆ ನಿಂತ ಗ್ರಾಮಗಳು, ಕುಲದೇವರು, ವಿವಾಹ ಪದ್ಧತಿಗಳು, ವಿಧವಾ ವಿವಾಹ, ವಿವಾಹ ವಿಚ್ಛೇದನ ಮತ್ತು ಧರ್ಮ ಮುಂತಾದ ವಿಷಯಗಳ ಕುರಿತು ವಿಶ್ಲೇಷಿಸಲಾಗಿದೆ.

ಎಸ್. ಎಸ್. ಹಿರೇಮಠ ಅವರು ತಮ್ಮ 'ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ (ಭಾಗ-೨) ಜಾತ್ರೆಗಳು' ಎಂಬ ಗ್ರಂಥದಲ್ಲಿ ಮೂರು ಅಂಶಗಳತ್ತ ಗಮನ ಕೇಂದ್ರಿಕರಿಸಿದ್ದಾರೆ. ೧. ಹೊಲೆ ಮಾದಿಗರೇ ಮೊದಲ ಕೃಷಿಕರು. ಇದಕ್ಕೂ ಮೊದಲು ಅವರು ಬೇಟೆಗಾರರಾಗಿದ್ದರು. ಇವರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಿತ್ತು. ೨. ನಂತರದ ಹಂತದಲ್ಲಿ ಪಶುಪಾಲಕರಾಗಿದ್ದ ದ್ರಾವಿಡರು ದಕ್ಷಿಣಕ್ಕೆ ವಲಸೆ ಬಂದರು, ಆನಂತರ ಕೃಷಿಕರಾಗಿ ಮಾರ್ಪಟ್ಟರು. ೩. ಇವರು ಹೊಲೆಯ ಮಾದಿಗರೊಂದಿಗೆ ಸಮನ್ವಯತೆ ಏರ್ಪಡಿಸಿಕೊಂಡರು. ಇವರು ಸಿದ್ಧ ಪರಂಪರೆಯವರು. ಜನಪದ ದೈವಗಳ ಆಚರಣೆ ವಿಧಿ-ವಿಧಾನಗಳೊಂದಿಗೆ ದ್ರಾವಿಡರ ಆಚರಣೆಗಳನ್ನು ಇಲ್ಲಿ ಚರ್ಚಿಸಿದೆ.

'ಧರೆಗೆ ದೊಡ್ಡವರು' ಎಂಬ ಗ್ರಂಥದಲ್ಲಿ ಸುಭಾಷ ಭರಣಿ ಅವರು ಆದಿ ಕರ್ನಾಟಕ (ಛಲವಾದಿ) ಸಮುದಾಯದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನೆಲೆ, ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಮೈಸೂರು ಸಂಸ್ಥಾಪನೆ, ರಾಜ ಪ್ರಭುತ್ವ ಮತ್ತು ಆದಿ ಕರ್ನಾಟಕ ಜನವರ್ಗ, ಸಾಹಿತ್ಯ ಮತ್ತು ಸಂಸ್ಕೃತಿ ಇತ್ಯಾದಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

'ಅಸ್ಪ್ರಶ್ಯರು ಒಂದು–ಪರಿಶೀಲನೆ' ಗ್ರಂಥದ ಲೇಖಕರಾದ ಎಂ. ವೆಂಕಟಸ್ವಾಮಿ, ಪ್ರಾಚೀನ ಕಾಲದಲ್ಲಿ ಬೇಸಾಯ ವೃತ್ತಿಯನ್ನು ಮಾಡಿಕೊಂಡು ಹಗಲು ರಾತ್ರಿ ದುಡಿಯುತ್ತಿದ್ದ ಈ ಹೊಲದ ಕೆಲಸಗಾರರನ್ನು ಹೊಲದ ಆಳುಗಳು ಎಂದೂ ನಂತರದಲ್ಲಿ ಹೊಲೆಯರು (ಛಲವಾದಿ) ಎಂದೂ ಕರೆಯಲಾಯಿತೆಂದು ಚರ್ಚಿಸಿದ್ದಾರೆ. ಹೊಲೆಯ ರಾಜನಾದ ನಂದ (ಉತ್ತುಂಗಮಿನ)ನ ವಿವರಣೆಯಿದೆ.

ಪ್ರಕಾಶ ಖಾಡೆಯವರ 'ಛಲವಾದಿ ಗೌರಮ್ಮ' ಗ್ರಂಥದಲ್ಲಿ ಚಲವಾದಿ ಗೌರಮ್ಮನ ಜೀವನ ಚರಿತ್ರೆ, ಛಲವಾದಿ ಬಟ್ಟಲು ಕಾಯಕದ ಬಗೆಗೆ ವಿವರಿಸಲಾಗಿದೆ. ಸಾವುಕಾರ ಎಸ್. ಕಾಂಬಳೆ ಅವರ 'ಲಿಂಗಾಯತ ಅಸ್ಪೃಶ್ಯರು : ಒಂದು ಅಧ್ಯಯನ', 'ಉರಿಲಿಂಗ ಪೆದ್ದಿ ಸಂಪ್ರದಾಯದ ಅಧ್ಯಯನ' ಗ್ರಂಥಗಳಲ್ಲಿ ಶರಣರ ಸಮಕಾಲೀನವರಾದ ಹೊಲೆಯ ಜಾತಿಯ ವಚನಕಾರರ ಪಾಂಡಿತ್ಯಕ್ಕೆ ಇನ್ನೊಂದು ಹೆಸರು ಎನಿಸಿದ 'ಉರಿಲಿಂಗ ಪೆದ್ದಿ'ಯ ಚರಿತ್ರೆಯನ್ನು ವಿವರಿಸಿದ್ದಾರೆ.

ಅರ್ಜುನ ಗೊಳಸಂಗಿಯವರ 'ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ'ದಲ್ಲಿ ಛಲವಾದಿ ಸಮುದಾಯದ ಸಂಪ್ರದಾಯಗಳು ಅವರ ಧಾರ್ಮಿಕ ಆಚರಣೆ ಪದ್ಧತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಎಸ್. ಆರ್. ಸಿಂಗೆಯವರ 'ಹೊಲೆಯರು ಒಂದು ಅಧ್ಯಯನ'ದಲ್ಲಿ ಬಿಜಾಪುರ ಜಿಲ್ಲೆಯ ಛಲವಾದಿಯರ ಚರಿತ್ರೆ, ಸಾಮಾಜಿಕ ಆರ್ಥಿಕ, ಧಾರ್ಮಿಕ, ರಾಜಕೀಯ ಜೀವನವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಬಿ. ಡಿ. ಗಟ್ಟಿಣ್ಣವರ 'ಗದಗ ಜಿಲ್ಲೆಯ ದಲಿತರ ಸಂಪ್ರದಾಯ ಹಾಗೂ ಆಚರಣೆಗಳು' ಗ್ರಂಥದಲ್ಲಿ ಅವರು ಹೊಲೆ–ಮಾದಿಗ ಸಮುದಾಯಗಳ ಸಂಪ್ರದಾಯಗಳು ಹಾಗೂ ಆಚರಣೆಗಳನ್ನು ವಿವರಿಸಲಾಗಿದೆ. ಇವು ಸಮುದಾಯದ ಸಾಂಸ್ಕೃತಿಕ ಜೀವನ ಕುರಿತು ಅಧ್ಯಯನ ಮಾಡಿದ ಕೃತಿಗಳಾಗಿವೆ.

ಸಿ. ಎನ್. ಗೊಳಸಂಗಿಯವರು ಬರೆದ 'ಬಿಜಾಪುರ ಜಿಲ್ಲೆಯ ಹೊಲೆಯರ ಸಾಂಸ್ಕೃತಿಕ ಒಂದು ಅಧ್ಯಯನ' ಎಂಬ ಗ್ರಂಥದಲ್ಲಿ ಸಾಂಸ್ಕೃತಿಕ ಜೀವನವನ್ನು ಸಂಪೂರ್ಣವಾಗಿ ವಿವರಿಸಿದ್ದಾರೆ. ಮಾರುತಿಯವರು ಬರೆದ 'ದಿ ಹೊಲೆಯಾಸ್ ಎ ಸ್ಟಡಿ ಇನ್ ಸೋಶಿಯಲ್ ಚೇಂಜ್' ಗ್ರಂಥದಲ್ಲಿ ಹೊಲೆಯರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಶೈಕ್ಷಣಿಕ ಅಂಶಗಳ ಬದಲಾವಣೆಗಳನ್ನು ಕುರಿತು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಕಾ.ವೆಂ.ಶ್ರೀನಿವಾಸಮೂರ್ತಿ, ಕುಮಾರ ಸಮತಳ ನಾರಾಯಣ, ಕೆ. ಕ್ಯಾಸಂಬಳಿಯವರು 'ಹೋರಾಟದ ಹಾಡು' ಗ್ರಂಥದಲ್ಲಿ ಛಲವಾದಿಗಳ ದೈನಂದಿನ ಕೆಲಸಗಳಾದ ಬೀದಿ ಗುಡಿಸುವುದು, ಹೆಣ ಹೊರುವುದು, ಸತ್ತ ನಾಯಿ ಎತ್ತುವುದು ಮುಂತಾದ ವಿವಿಧ ಉದ್ಯೋಗಗಳನ್ನು ವಿವರಿಸಲಾಗಿದೆ. 'ಮಾದಿಗನಾದರೇನು ಮಾನವನೇ ಅವ, ಮಾನವೀಯತೆಯ ಪೊರೆದವ ಹೊಲೆಯ' ಎಂಬ ಹಾಡಿನಲ್ಲಿ ಹೊಲೆಯನ ಮಾನವೀಯ ಗುಣಗಳನ್ನು ಕುರಿತು ಹೇಳಲಾಗಿದೆ.

Chalavadi

"The censues of 1981 gave the population figure of chalavadis as 32,593. They work as agriculture labourers, and coolies. Chalavadis speak Kannada. There are few division among them. 'Tera' to the girl (bride), widow re-marriage and divorce are the practices in social life. They worship Yellamma, mylaralinga and Basaveshwara. They are meat eaters. The population at birth is all death as 'Ugadi', 'Nagara Panchami', 'Kara Hunnime', 'Mahanavami', 'Basava Jayanthi', and 'Ananta Hunnime'. During Mahanavami Chalavadis do the service of holding the burning wick (Deevatige) to gods procession at Devaragudda and it is their traditional right the burning of 'Kama' during the holi. It is by the fire coming from the lane of chalavadi settlement. It is traditional way of observing 'Kama Dahana' the deal among these people are burried.[7]"

Holeya

"Traditionally the Holeyas are the village servants and watchmen. In these days holeyas are working as agriculturist. Some of them have their own lands. They are into the occupations. Almost of these people in Dharwad District lives in rural areas. They are Genarally Kannada speaking. But the Marathi speaking Holeyas are known as Mahars. They have caste council. Widow remarriage and divorce may be seen among the holeyas. They worship Durgavva, Dyamavva, Yellamma and Anjaneya. These people are Meet eaters. Ugadi, Nagar Panchami, Dasara and Deepawali are the Important festivals. Usually the dead are buried"[8]

ಶಿವರಾಮ ಅಸುಂಡಿಯವರು 'ದಲಿತ ಸಾಂಸ್ಕೃತಿಕ ಲೋಕ' ಎಂಬ ಗ್ರಂಥದಲ್ಲಿ ಹೊಲೆಯರು ದೇವರನ್ನು ಮೆಚ್ಚಿಸಲು ಕೋಣ, ಕುರಿ, ಕೋಳಿಗಳನ್ನು ಬಲಿ ಕೊಡುವುದರ ಜೊತೆಗೆ ಸಿಡಿ ಆಡುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ ಎಂದು ಹೇಳಿದ್ದಾರೆ.

'ವೈಶಾಖ' ಕಾದಂಬರಿಯಲ್ಲಿ ಹೊಲೆಯರು ತಮ್ಮ ಕೇರಿಯಿಂದ 'ಮೂಡೆ' ಆರತಿಯ ತಂದು ದೇವರಿಗೆ ಪೂಜೆ ಸಲ್ಲಿಸುವ ವಿವರಗಳಿವೆ.

ಜಾತಿಪದ್ಧತಿಯ ಆರು ಸಾಂಪ್ರದಾಯಿಕ ಲಕ್ಷಣಗಳನ್ನು ಕುರಿತು ಜಿ. ಎಸ್. ಘುರ್ಯೆ ಹೇಳಿದ್ದಾರೆ. ಅವನ್ನು ಏಣಿಶ್ರೇಣಿ ಸಮೂಹದ ಊಟೋಪಚಾರ ಮತ್ತು ಸಾಮಾಜಿಕ ನಿರ್ಬಂಧನೆ, ನಾಗರಿಕ ಹಾಗೂ ಧಾರ್ಮಿಕ ದೌರ್ಬಲ್ಯ; ವಿವಿಧ ವರ್ಣಗಳ ಸಾಮಾಜಿಕ ಸೌಲಭ್ಯಗಳು; ಉದ್ಯೋಗದ ಮೇಲಿನ ನಿರ್ಬಂಧನೆಗಳು; ಮತ್ತು ವಿವಾಹದ ಮೇಲಿನ ನಿರ್ಬಂಧನೆಗಳು (೧೯೫೦-೧೭೬) ಎಂದು ಗುರುತಿಸಲಾಗಿದೆ. ಜಾತಿ ಅನುವಂಶಿಕತೆ ಸದಸ್ಯರ ಮೇಲೆ ನಿರ್ಬಂಧ ಹೇರುತ್ತದೆ. ಮತ್ತು ಸಾಮಾಜಿಕ ಚಲನೆಗೆ ಅವಕಾಶವಿರುವದಿಲ್ಲ ಎಂದು ಕೇತ್ಕರ್ (೧೯೯೦), ಭೊಗ್ಲೆ ಮತ್ತು ಡ್ಯೆಮೊಂಟ್ (೧೯೭೨) ಗುರುತಿಸಿದ್ದಾರೆ. ಜಾತಿ ಪದ್ಧತಿಯ ಲಕ್ಷಣಗಳನ್ನು ವೃತ್ತಿಯಲ್ಲಿ ವಿಶೇಷ ಪರಿಣಿತಿ, ಪ್ರತ್ಯೇಕತೆ, ಒಳಬಾಂಧವ್ಯ ಮುಂತಾದ ವಿಚಾರಧಾರೆಗಳ ಮೂಲಕ ಗುರುತಿಸಲಾಗಿದೆ.

"ಆಧುನಿಕ ಕಾಲದಲ್ಲಿ ಹಿಂದೂ ಸಾಂಪ್ರದಾಯಿಕ ಜಾತಿ ಸಮಾಜ ಒಂದು ಮುಚ್ಚಿಸಲ್ಪಟ್ಟ ವ್ಯವಸ್ಥೆಯಾಗಿರದೆ ಪಾಶ್ಚಾತ್ಯೀಕರಣದಿಂದ ಸಾಕಷ್ಟು ಬದಲಾವಣೆಗಳಿಗೆ ಒಳಗಾಗಿರುವುದು ಕಂಡು ಬರುತ್ತದೆ. ಎಮ್. ಎನ್. ಶ್ರೀನಿವಾಸ್ (೧೯೬೬), ಬರ್ನಾಡ್ ಬಾಂಬರ್ (೧೯೬೮), ಮತ್ತು ಬುಚನ್ ಸ್ಟೇಯಿನ್ (೧೯೬೮) ಅವರ ಪ್ರಕಾರ ಸಾಮಾಜಿಕ ಚಲನೆಗೆ ಅವಕಾಶವಿದೆ. ಸಾಂಪ್ರದಾಯಿಕ ಕಠಿಣ ಸಮಾಜದಲ್ಲಿ ಸಡಲಿಕೆ ಕಂಡುಬರುತ್ತಿದೆ. ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಸಾಮಾಜಿಕ ಚಲನೆ ಮೇಲಿನಿಂದ ಕೆಳಗೆ ಮತ್ತು ಕೆಳಗಿನಿಂದ ಮೇಲೆ ಉಂಟಾಗುತ್ತದೆ. ಸಾಂಪ್ರದಾಯಿಕ ಸಮಾಜ ವ್ಯಕ್ತಿಗೆ ಕೆಳಗಿನಿಂದ ಮೇಲಕ್ಕೆ ಏರಲು ಮತ್ತು ಮೇಲಿನಿಂದ ಕೆಳಗೆ ಇಳಿಯಲು ಅವಕಾಶ ನೀಡುತ್ತದೆ."[೯]

ಛಲವಾದಿ ಸಮುದಾಯದ ಸ್ಥಿತಿಗತಿ ಕುರಿತ ವಿವಿಧ ಅಧ್ಯಯನಕಾರರ ಅಭಿಪ್ರಾಯಗಳು ಹೀಗಿವೆ.

ಮಹರ್:

The Mahars were and remain the largest untouchable caste in Maharastra. Every village in the marathi speaking are had its maharwadi; It has even been suggested that the name Maharastra is derived from this caste, whose members have been Identified by some of the original in habitants.-[೧೦]

ಹೊಲೆಯ :

"ಗ್ರಾಮದ ನೈರ್ಮಲ್ಯವನ್ನು ಕಾಪಾಡುವ ಕೆಲಸ ಇವರ ಪಾಲಾಗಿರುವುದು. ಸತ್ತ ಪ್ರಾಣಿಗಳನ್ನು ಗ್ರಾಮದಿಂದ ಹೊರಗೆ ಹೊತ್ತೊಯ್ಯುವದು, ಸತ್ತ ಸುದ್ದಿಯನ್ನು ಮುಟ್ಟಿಸುವದು, ಗ್ರಾಮದ ಕೊಳೆಯನ್ನೆಲ್ಲ ಸ್ವಚ್ಛ ಗೊಳಿಸುವದು ಇವರ ದಿನನಿತ್ಯದ ಕೆಲಸ."[೧೧]

ಕಪ್ಪೆ ಹೊಲೆಯ :

"ಒಮ್ಮೆ ಭೂಲೋಕದಲ್ಲಿ ಯಜ್ಞಗಳು ನಡೆಯುತ್ತಿರುವಾಗ ಕಪ್ಪೆಗಳ ಕಿರುಚಾಟದಿಂದ ತೊಂದರೆಯಾಗಿ ದೇವಲೋಕದ ತ್ರಿಮೂರ್ತಿಗಳು ಯಜ್ಞಕ್ಕೆ ತೊಂದರೆ ಮಾಡಿದ ಕಪ್ಪೆಗಳನ್ನು ತಿನ್ನಲು

ಕಳುಹಿಸಿದ ಓರ್ವ ಸೇವಕನಿಂದ ಈ ಸಮುದಾಯ ಬೆಳೆಯಿತೆನ್ನುವ ನಂಬಿಕೆ ಇದೆ. ಅವರೇ ಇಂದಿನ ಕಪ್ಪೆ ಹೊಲೆಯರು."[೧೨]

"ಗುಲಬರ್ಗಾ ಜಿಲ್ಲೆಯ ಗೋಳ ಎಂಬ ಊರಲ್ಲಿ ನಡೆಯುವ ಹಿರಿಗೆಪ್ಪನ ಹಬ್ಬದಲ್ಲಿ ಹೊಲೆಯರು ಪ್ರತಿ ಮನೆಗಳ ಮುಂದೆ ನಿಂತು ನಾಯಿಯಂತೆ ಬೊಗಳುವರು."[೧೩]

ವಿವಿಧ ಗ್ರಂಥಗಳಲ್ಲಿ ಛಲವಾದಿ ಸಮುದಾಯದ ಬಗೆಗೆ ಉಲ್ಲೇಖಗೊಂಡಿರುವದು ಗಮನಿಸಬಹುದಾಗಿದೆ. ರಾಜ್ಯದಲ್ಲಿ ಈ ಸಮುದಾಯ ಕುರಿತು ಅಧ್ಯಯನಗಳನ್ನು ನಡೆದಿರುವದು ತುಂಬಾ ಕಡಿಮೆ ಎನ್ನಬಹುದು. ನನ್ನ ಸಂಶೋಧನೆಗೆ ಈ ಗ್ರಂಥಗಳಲ್ಲಿ ಛಲವಾದಿ ಸಮುದಾಯದ ಬಗ್ಗೆ ಉಲ್ಲೇಖಗೊಂಡಿರುವ ವಿಷಯಗಳನ್ನು ಪಡೆದುಕೊಳ್ಳಲಾಗಿದೆ. ಗದಗ ಜಿಲ್ಲೆಯಲ್ಲಿ ಹೊರಬಂದಿರುವ ಎಲ್ಲಾ ಗ್ರಂಥಗಳನ್ನು ಓದಿ ನೋಡಿದಾಗ ಈ ಛಲವಾದಿ ಸಮುದಾಯದ ಬಗ್ಗೆ ಸಾಕಷ್ಟು ಮಾಹಿತಿಗಳು ಲಭ್ಯವಾಗಿರುವದಿಲ್ಲ. ಕೆಲವೇ ಕೆಲವು ಮಹಾಪ್ರಬಂಧಗಳಲ್ಲಿ ಮಾತ್ರ ಈ ಸಮುದಾಯದ ಸಂಸ್ಕೃತಿಯನ್ನು ಕುರಿತು ವಿವರಿಸಲಾಗಿದೆ. ಹೀಗಾಗಿ ಸಮಗ್ರ ಅಧ್ಯಾಯನವು ನಡೆದಿರುವದಿಲ್ಲ. ನನ್ನ ಮಹಾಪ್ರಬಂಧದಲ್ಲಿ ವಿಶೇಷವಾಗಿ ಅವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿ ಗತಿಗಳನ್ನು ವಿಶ್ಲೇಷಿಸಲಾಗಿದೆ. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಹಾಗೂ ಅವರ ಸಂಘಟನೆಗಳನ್ನು ವಿವರಿಸಲಾಗಿಡೆ. ಅಲ್ಲದೆ ಪರಿಹಾರೋಪಾಯಗಳನ್ನು ಮುಂತಾದ ವಿಷಯಗಳನ್ನು ಸಮಾಜಶಾಸ್ತ್ರಿಯ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ಸ್ವರೂಪ :

ಮೂಲ ಅಧ್ಯಯನದ ಆಶಯ, ಉದ್ದೇಶವನ್ನು ಪೂರೈಸಲು ಪ್ರಸ್ತುತ ಮಹಾಪ್ರಬಂಧವನ್ನು ಒಂಭತ್ತು ಅಧ್ಯಾಯಗಳಾಗಿ ರೂಪಿಸಿಕೊಳ್ಳಾಗಿದೆ. ಮುಖ್ಯವಾಗಿ ಈ ಅಧ್ಯಾಯಗಳು ಈ ಕೆಳಗಿನ ವಸ್ತು-ವಿಷಯಗಳನ್ನು ಒಳಗೊಂಡಿರುತ್ತವೆ.

ಅಧ್ಯಾಯ ೧ : ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ವಿಧಾನ ಮತ್ತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮತ್ತು ಅಧ್ಯಯನದ ಸ್ವರೂಪ

ಮೊದಲ ಅಧ್ಯಯವು ಒಟ್ಟಾರೆ ಮಹಾಪ್ರಬಂಧದ ನಿಲುವನ್ನು ಸ್ಥೂಲವಾಗಿ ವಿವರಿಸುತ್ತದೆ. ಅಧ್ಯಯನದ ಪರಿಚಯ, ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನದ ವಿಧಾನ, ಸ್ವರೂಪ ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಚರ್ಚಿಸಲಾಗಿದೆ.

ಅಧ್ಯಾಯ ೨ : ಗದಗ ಜಿಲ್ಲೆಯ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

ನಿಸರ್ಗದ ಮಡಿಲಲ್ಲಿ ಹಗಲಿರುಳು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವ ಛಲವಾದಿ ಸಮುದಾಯದ ಜನರ ಬದುಕಿನ ಮೇಲೆ ಭೌಗೋಳಿಕ ಅಂಶಗಳು ಅವರ ಜನಜೀವನದ ಮೇಲೆ ಸಾಕಷ್ಟು

ಪ್ರಭಾವ ಬೀರಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಭೌಗೋಳಿಕ ಮತ್ತು ಐತಿಹಾಸಿಕ, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಶೈಕ್ಷಣಿಕ ಹಾಗೂ ರಾಜಕೀಯ ಮೊದಲಾದ ವಿಷಯಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ೩ : ಛಲವಾದಿ ಸಮುದಾಯದ ಹಿನ್ನೆಲೆ

ಅಧ್ಯಾಯ ಮೂರರಲ್ಲಿ ಛಲವಾದಿ ಪದದ ನಿಷ್ಪತ್ತಿ, ಪೌರಾಣಿಕ ಕಥೆ, ಐತಿಹ್ಯ, ಶಾಸನ, ಸಾಹಿತ್ಯದಲ್ಲಿ ಬರುವ ಛಲವಾದಿ ಸಮುದಾಯದ ಹಿನ್ನೆಲೆಯ ಬಗೆಗೆ ವಿವರಿಸಲಾಗಿದೆ. ಪ್ರಾಚೀನ ಕಾಲದ ರಾಜ–ಮಹಾರಾಜರು, ಸಾಂಸ್ಕೃತಿಕ ನಾಯಕರು, ಪೌರಾಣಿಕ ಪುರುಷರು, ಇತಿಹಾಸ ಪ್ರಸಿದ್ಧ ನಾಯಕರು, ದೇಶ ಮತ್ತು ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರ ಚರಿತ್ರೆಯನ್ನು ಕೊಡಲಾಗಿದೆ.

ಅಧ್ಯಾಯ ೪ : ಸಾಮಾಜಿಕ ಜೀವನ

ಅಧ್ಯಾಯ ನಾಲ್ಕರಲ್ಲಿ ಸಮುದಾಯದ ದಾಂಪತ್ಯ ಜೀವನ, ವಧು ಪರೀಕ್ಷೆ, ಕನ್ಯೆ ನಿಶ್ಚಯ, ವರದಕ್ಷಿಣೆ ಪದ್ಧತಿ, ಹಿರಿಯರ ಪೂಜೆ, ಒಳಕಲ್ಲು ಪೂಜೆ, ಹಿಟ್ಟಿನ ಗಂಟು ಕಟ್ಟುವದು, ಆರತಕ್ಷತೆ ಕಳಿಸುವುದು, ಬಳಗದ ಬಳೆ ಹಾಕಿಸುವುದು, ಹಾಲಗಂಬ ಹೂಡುವುದು, ಹಂದರ ಹಾಕುವುದು, ಎಣೆಪತ್ಲ ಒಯ್ಯುವುದು, ಬೀಗರನ್ನು ಎದುರುಗೊಳ್ಳುವುದು, ಐರಾಣಿ ತರುವುದು, ಸುರಿಗೆ ಸುತ್ತುವುದು, ಅಕ್ಷತಾರೋಹಣ, ಊಟೋಪಚಾರ, ಮೆರವಣಿಗೆ, ಸುರಿಗೆ, ಬಾಂಡೆ ಸಾಮಾನು ಒಪ್ಪಿಸುವುದು, ಬೀಗರಿಗೆ ಬೀಳ್ಕೊಡುವುದು, ಹಂದರ ಇಳಿಸುವುದು, ಬಾಸಿಂಗ ಬಿಡುವುದು, ಗೃಹಸ್ಥಾಶ್ರಮ ಸೇರುವುದು, ಗರ್ಭಧಾರಣೆ, ವಿಧಿ ನಿಷೇಧ, ಗ್ರಹಣ ಹಿಡಿಯುವ ದಿನದ ವಿಧಿ ಮತ್ತು ನಿಷೇಧದ ಬಯಕೆ, ಸೀಮಂತಕಾರ್ಯ, ಕಳ್ಳಕುಬಸ, ಬಯಕೆಬುತ್ತಿ, ದೊಡ್ಡಕುಬಸ, ಹೆರಿಗೆ ಸೂಚನೆ, ಜನನ ಸಂಸ್ಕಾರ, ಕೆಲವು ನಂಬಿಕೆಗಳು, ಐದೇಸಿ, ನಾಮಕರಣ, ಗಂಗೆಪೂಜೆ, ಬಾಣಂತಿ ಮತ್ತು ಕೂಸಿನ ಆರೈಕೆ, ತೊಟ್ಟಿಲು ಬಟ್ಟಲು ದಿಬ್ಬಣ ಕಾರ್ಯ, ಜವಳ ತೆಗೆಸುವುದು, ಹಲ್ಲು ಬರುವ ಸಂದರ್ಭ, ಮರಣ ಅಥವಾ ಶವಸಂಸ್ಕಾರ, ಋತುಮತಿ ಕಾರ್ಯ, ಪಾನೀಯಗಳು, ಉಡುಗೆ ತೊಡುಗೆಗಳು, ವಾಸಸ್ಥಾನ, ಭಾಷೆ, ಕೌಟುಂಬಿಕ ಜೀವನ, ಸ್ತ್ರೀಯರ ಸ್ಥಾನಮಾನ, ಸಮುದಾಯದ ಬೆಡಗುಗಳು, ಹಬ್ಬಗಳು, ಹಿರಿಯರ ಹಬ್ಬ ಮತ್ತು ನ್ಯಾಯ ವ್ಯವಸ್ಥೆ ಮುಂತಾದ ವಿಷಯಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಛಲವಾದಿ ಕುಟುಂಬಗಳ ಸಂಖ್ಯಾವಾರು ಪರಿಗಣಿಸಿ ಅವರ ಸ್ಥಿತಿಗತಿಯನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಅಧ್ಯಾಯ ೫ : ಆರ್ಥಿಕ ಜೀವನ

ಅಧ್ಯಾಯ ಐದರಲ್ಲಿ ವೃತ್ತಿಗಳಲ್ಲಿ ಕೂಲಿ, ಒಕ್ಕಲುತನ, ವ್ಯಾಪಾರ, ಅರೆಕಾಲಿಕ ವೃತ್ತಿಗಳು, ವಲಸೆ ಹೋಗುವುದು, ಜೀತಪದ್ಧತಿ, ಜನಪದ ವೈದ್ಯ, ಹವ್ಯಾಸಿ ವೃತ್ತಿಗಳು, ಬಯಲಾಟ, ಹಂತಿಮೇಳ,

ಚೌಡಕಿಮೇಳ, ಕರಡಿ ಮಜಲು, ಗೀಗೀಪದ ಮೇಳ, ಭಜನಾಮೇಳ, ಜಿಲ್ಲೆಯ ಪ್ರಮುಖ ಭಜನಾ ಮೇಳಗಳು, ಕೊಂಬು ಕಹಳೆ ಊದುವುದು, ಬ್ಯಾಂಡ್ ಮೇಳ, ಬ್ಯಾಂಜೋ ಮೇಳ, ಕಲಾತಂಡಗಳು, ಡೊಳ್ಳಿನ ಮೇಳ, ಜಗ್ಗಲಿಗೆ ಮೇಳ, ಹೆಜ್ಜೆ ಮೇಳ, ಕಸೂತಿ, ಕೌದಿ ಹೊಲೆಯುವ ಕಲೆ, ನೌಕರರು, ಬಡಿಗೆತನ, ಗಾರೆ ಕೆಲಸಗಾರರಾಗಿ, ಚಾಲಕ ವೃತ್ತಿ, ಹಮಾಲಿ ಕೆಲಸ, ಸ್ತ್ರೀಶಕ್ತಿ ಸಹಾಯಕ ಸಂಘಗಳು ಮುಂತಾದವನ್ನು ಅಧ್ಯಯನ ಮಾಡಲಾಗಿದೆ. ಹಿಡುವಳಿ ಹೊಂದಿರುವವರ ಆರ್ಥಿಕ ಸ್ಥಿತಿಗತಿ ಕುರಿತು ಚರ್ಚಿಸಿದ್ದೇನೆ.

ಅಧ್ಯಾಯ ೬ : ಧಾರ್ಮಿಕ ಜೀವನ

ಅಧ್ಯಾಯ ಆರರಲ್ಲಿ ದೈವದ ಕಲ್ಪನೆ ಮತ್ತು ನಂಬಿಕೆ, ದೇವರಿಗೆ ಸಲ್ಲಿಸುವ ಪೂಜೆ ಪುನಸ್ಕಾರಗಳು, ದೇವತಾರಾಧನೆ ಮತ್ತು ಆಚರಣೆ, ಕುಟುಂಬದಲ್ಲಿ ನಡೆಯುವ ಆಚರಣೆಗಳು, ಪುಣ್ಯತಿಥಿಗಳು, ಕರಿಲಕ್ಷ್ಮೀ ಪೂಜೆ, ಪ್ರತಿನಿತ್ಯದ ಪೂಜಾ, ರೋಗ ನಿವಾರಕ ಆಚರಣೆ, ಮಳೆ-ಬೆಳೆ, ಭೂಮಿ ಸಂಬಂಧದ ಆಚರಣೆಗಳು, ಜಾತ್ರೆಗಳು, ಗ್ರಾಮದೇವತೆಗಳು, ಸಸ್ಯಹಾರಿ ದೇವತೆಗಳು, ಮಾಂಸಹಾರಿ ದೇವತೆಗಳು, ಬೊಮ್ಮಸಾಗರದ ದುರ್ಗವ್ವ, ಕನಕಮ್ಮದೇವಿ, ದ್ಯಾಮವ್ವ, ಕರಿಕೆಂಚವ್ವ, ಸೌದತ್ತಿ ಎಲ್ಲಮ್ಮ, ಜೋಗತಿ ಸಂಪ್ರದಾಯ, ಮೈತುಂಬುವಿಕೆ, ಮುತ್ತು ಕಟ್ಟುವುದು, ಮೈಲಾರಲಿಂಗೇಶ್ವರ, ಹುಲಿಗೆಮ್ಮ, ಹನುಮಪ್ಪ, ಹೋಳಿ ಹಬ್ಬ, ಮೊಹರಂ ಹಬ್ಬ, ಶ್ರೀ ಲಿಂಗಬಸವದೇವರ ಜಾತ್ರೆ ಮುಂತಾದವನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ. ಪಂ.ಪುಟ್ಟರಾಜ ಗವಾಯಿಗಳು, ಸರ್ವಧರ್ಮ ಸಮನ್ವಯದ ಶ್ರೀ ತೋಂಟದಾರ್ಯಮಠ, ಶ್ರೀ ಲಿಂಗ ಬಸವ ದೇವರು, ಅಂಬೇಡ್ಕರ ಜಯಂತಿ ಹಾಗೂ ಅಂಬೇಡ್ಕರ ಮಹಾಪರಿನಿರ್ವಾಣ ದಿವಸ, ಬೌದ್ಧ ಪೂರ್ಣಿಮೆ, ಬಸವಜಯಂತಿ, ಕೋರೆಗಾಂವ ಮಹಾರ ಯೋಧರ ವಿಜಯೋತ್ಸವ ದಿನಾಚರಣೆ ಮುಂತಾದವುಗಳನ್ನು ವಿವರಿಸಲಾಗಿದೆ.

ಅಧ್ಯಾಯ ೭ : ಶಿಕ್ಷಣ ಮತ್ತು ರಾಜಕೀಯ ಜೀವನ

ಅಧ್ಯಾಯ ಏಳರಲ್ಲಿ ಶೈಕ್ಷಣಿಕ ಸ್ಥಿತಿಯನ್ನು ತಾಲೂಕು, ಜಿಲ್ಲಾವಾರು ವಿಂಗಡಿಸಲಾಗಿದೆ. ಇವರ ಸಾಕ್ಷರತೆ ಪ್ರಮಾಣ ಶೇ.೩೨ ಇದೆ. ಲಿಂಗಕ್ಕನುಗುಣವಾಗಿ ತಾಲೂಕು ಸಾಕ್ಷರತೆಯನ್ನು ವಿಶ್ಲೇಷಿಸಲಾಗಿದೆ. ಪುರುಷರ ಸಾಕ್ಷರತೆ ಪ್ರಮಾಣ ಶೇ. ೩೪.೪೪ ಹಾಗೂ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ. ೨೯.೫ ಇದೆ. ಇವರ ಶಿಕ್ಷಣ ಮಟ್ಟ ಜಿಲ್ಲೆಯಲ್ಲಿ ಶೇ. ೩೯.೫ ಇರುತ್ತದೆ. ಇವೆಲ್ಲವನ್ನು ಕೋಷ್ಟಕಗಳಲ್ಲಿ ವಿಶ್ಲೇಷಿಸಲಾಗಿದೆ. ರಾಜಕೀಯ ಜೀವನ, ಗ್ರಾಮಪಂಚಾಯತಿ, ದಿ.ಶ್ರೀಮಾನ್ ರುದ್ರಪ್ಪ ಈರಪ್ಪ ದೊಡಮನಿ, ಬಸವರಾಜ ಮುದುಕಪ್ಪ ಕಡೇಮನಿ, ಜಿಲ್ಲೆಯ ಗ್ರಾಮಪಂಚಾಯತಿ ಹಾಗೂ ತಾಲೂಕ ಪಂಚಾಯತಿ ಸದಸ್ಯರುಗಳ ವಿವರಗಳನ್ನು ನೀಡಲಾಗಿದೆ.

ರಾಜಕೀಯ ಜೀವನದಲ್ಲಿ ಅವರು ಪಡೆದುಕೊಂಡ ಮತದಾನ ಗುರುತಿನ ಚೀಟಿಗಳ ಕೋಷ್ಟಕಗಳು, ಜನಪ್ರತಿನಿಧಿಗಳು ಹಾಗೂ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವ ಕೆಲವು

ಮಹನೀಯರ ಜೀವನ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸೇವೆಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ೮ : ಸಮಸ್ಯೆಗಳು, ಸಂಘಟನೆ ಮತ್ತು ಪರಿಹಾರೋಪಾಯಗಳು

ಅಧ್ಯಾಯ ಎಂಟರಲ್ಲಿ ಗದಗ ಜಿಲ್ಲೆಯ ತಾಲೂಕು ಕೇಂದ್ರಗಳಾದ ರೋಣ, ನರಗುಂದ, ಶಿರಹಟ್ಟಿ, ಮತ್ತು ಮುಂಡರಗಿ ತಾಲೂಕುಗಳಲ್ಲಿ ಹಂಚಿಹೋದ ಛಲವಾದಿ ಸಮುದಾಯದ ಜನರ ಸಮಸ್ಯೆಗಳು, ಸಂಘಟನೆ ಮತ್ತು ಪರಿಹಾರೋಪಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಕ್ಷೇತ್ರಕಾರ್ಯದ ಮಾಹಿತಿ ಆಧರಿಸಿ ಅವರ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಅಸ್ಪೃಶ್ಯತೆಯ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇವರ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ ನಂತರ ಸಂಘಟನೆಗಳಲ್ಲಿ ಕೆಲಸ ಮಾಡುವ ನಾಯಕರು ಮತ್ತು ಪರಿಹಾರೋಪಾಯಗಳನ್ನೂ ಚರ್ಚಿಸಲಾಗಿದೆ. ಪ್ರಸ್ತುತ ಸರ್ಕಾರದ ಯೋಜನೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳು ಹಾಗೂ ಸಂವಿಧಾನ ಸೌಲಭ್ಯಗಳು, ಅವುಗಳ ಅನುಕೂಲ ಮತ್ತು ಅನಾನುಕೂಲಗಳನ್ನು ಚರ್ಚಿಸಲಾಗಿದೆ. ಅದರಂತೆ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸಲಾಗಿದೆ.

ಅಧ್ಯಾಯ ೯ : ಸಮಾರೋಪ

ಕೊನೆಯ ಅಧ್ಯಾಯ ಒಂಬತ್ತು ಸಮಾರೋಪಕ್ಕೆ ಮೀಸಲಾಗಿದ್ದು, ಇದು ಎಲ್ಲಾ ಅಧ್ಯಾಯನಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಇಲ್ಲಿ ಸಂಶೋಧನೆಯಲ್ಲಿ ಕಂಡುಕೊಂಡ ಅಧ್ಯಾಯನಗಳ ಫಲಿತತೆಗಳನ್ನು ದಾಖಲಿಸಲಾಗಿದೆ. ಅವರ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ಕೊಡಲಾಗಿದೆ. ಛಲವಾದಿ ಸಮುದಾಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಹರೆಯನ್ನು ಅಧ್ಯಯನದಲ್ಲಿ ಸಾದರಪಡಿಸುತ್ತ ಅದರ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ

ಅಡಿಟಿಪ್ಪಣಿಗಳು

೧) ಡಾ. ಎ. ಎಸ್. ಪ್ರಭಾಕರ, ಕರ್ನಾಟಕದ ಡೊಂಬರು, ಪುಟ-೩, ೪, ೫.

೨) ಆರ್. ಗೋಪಾಲ, ಇತಿಹಾಸ ಮತ್ತು ಪುರಾತತ್ವ, ಪುಟ-೫೫.

೩) ಅದೇ ಪುಟ-೫೭.

೪) ಅದೇ ಪುಟ-೫೭

೫) ಅದೇ ಪುಟ-೫೮, ೫೯.

೬) ಅದೇ ಪುಟ-೫೯.

೭) ಮಾರುತಿ ಆಯ್. ಹೊಲೆಯರು : ಸಾಮಾಜಿಕ ಬದಲಾವಣೆಯ ಅಧ್ಯಯನ, ಪುಟ-೩.

೮) ಡಿಸ್ಟ್ರಿಕ್ಟ್ ಗೆಜೆಟಿಯರ್ ಧಾರವಾಡ ಪುಟ-೧೯೦

೯) ಡಿಸ್ಟ್ರಿಕ್ಟ್ ಗೆಜೆಟಿಯರ್ ಧಾರವಾಡ ಪುಟ-೧೯೦

೧೦) ವಿಜಯಶ್ರೀ ಇಟ್ಟಣ್ಣವರ, ಹದಿನೆಂಟು ಜಾತಿಗಳು, ಪುಟ-೨೭

೧೧) ಎಸ್. ಎಸ್. ಹಿರೇಮಠ, ಜನಪದ-ಸಮಾಜ-ಸಂಸ್ಕೃತಿ, ಪುಟ-೧೩೩.

೧೨) ಅದೇ ಪುಟ-೧೨೭

೧೩) ಅದೇ ಪುಟ – ೧೨೭

ಅಧ್ಯಾಯ – ೨

ಗದಗ ಜಿಲ್ಲೆಯ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನಲೆ

೨.೧ ವಿಸ್ತೀರ್ಣ

೨.೨ ಪ್ರಾದೇಶಿಕ ಬದಲಾವಣೆಗಳು

೨.೩ ನೀರಾವರಿ

೨.೪ ಪಶುಸಂಗೋಪನೆ

೨.೫ ಮೀನುಗಾರಿಕೆ

೨.೬ ರೇಷ್ಮೆ

೨.೭ ಖನಿಜ ಸಂಪತ್ತು

೨.೮ ಹವಾಮಾನ

೨.೯ ವಿದ್ಯಾರ್ಥಿನಿಲಯಗಳು

೨.೧೦ ಸಮುದಾಯಗಳು

೨.೧೧ ಜಿಲ್ಲೆಯ ಇತಿಹಾಸ

೨.೧೨ ಗದಗ ಜಿಲ್ಲೆಯ ಕೋಟೆ–ಕೊತ್ತಲಗಳು

೨.೧೩ ಪ್ರಾಚೀನ ಬಾವಿಗಳು

೨.೧೪ ರಾಜಕೀಯ ಇತಿಹಾಸ

೨.೧೫ ಕೃಷಿ ಪದ್ಧತಿ

೨.೧೬ ಜಾನಪದ

ಅಧ್ಯಾಯ–೨

ಗದಗ ಜಿಲ್ಲೆಯ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನೆಲೆ

ಕನಾಟಕದ ಚರಿತ್ರೆಯಲ್ಲಿ ಗದಗ ಜಿಲ್ಲೆಯು ತನ್ನದೇ ಆದ ಸ್ಥಾನಮಾನ ಹೊಂದಿದೆ. ಹಲವು ಜನ ಸಾಹಿತಿಗಳಿಗೆ ಕವಿಪುಂಗವನ್ನು ಜನ್ಮ ನೀಡಿದ ಒಂದು ಪವಿತ್ರ ಕೇಂದ್ರ, ಅನೇಕ ಜನಸಮುದಾಯಗಳಿಗೆ ಆಶ್ರಯ ನೀಡಿದ ಪುಣ್ಯಭೂಮಿ ಇದಾಗಿದೆ.

ಇದು ಹೊಸ ಜಿಲ್ಲಾ ಕೇಂದ್ರವಾಗಿ ೧೯೯೭ರ ನವೆಂಬರ್ ೧ರಂದು ಅಸ್ತಿತ್ವಕ್ಕೆ ಬಂದಿತು. ಈ ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರಕ್ಕಿದೆ. ಉತ್ತರ ಕರ್ನಾಟಕದ ದಕ್ಷಿಣ ಭಾಗಕ್ಕೆ ಕಂಡುಬರುವುದು. ಇದು ೧೫° ೧೫° ಉತ್ತರ ಆಕ್ಷಾಂಶದಿಂದ ೧೫°೪೫ ದಕ್ಷಿಣ ಆಕ್ಷಾಂಶದ ವರೆಗೂ ಮತ್ತು ೭೫°೨೦ ಪೂರ್ವ ರೇಖಾಂಶದಿಂದ ೭೫°೪೭ ಪಶ್ಚಿಮ ರೇಖಾಂಶಗಳ ಮಧ್ಯದಲ್ಲಿ ಹರಡಿರುವುದು. ಈ ಜಿಲ್ಲೆಯ ಪೂರ್ವಕ್ಕೆ ಕೊಪ್ಪಳ ಜಿಲ್ಲೆ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆ, ಉತ್ತರಕ್ಕೆ ಬಾಗಲಕೋಟೆ ಜಿಲ್ಲೆ, ದಕ್ಷಿಣಕ್ಕೆ ಹಾವೇರಿ ಜಿಲ್ಲೆ, ಆಗ್ನೇಯಕ್ಕೆ ಬಳ್ಳಾರಿ ಜಿಲ್ಲೆ, ವಾಯುವ್ಯಕ್ಕೆ ಬೆಳಗಾವಿ ಜಿಲ್ಲೆಗಳ ಗಡಿಮೇರೆಯನ್ನು ಹೊಂದಿ ಸುತ್ತುವರೆದಿವೆ. ಈ ಜಿಲ್ಲೆಯ ಪ್ರಮುಖ ಭೌಗೋಳಿಕ ಲಕ್ಷಣವಾಗಿ ಏರಿಳಿತದಿಂದ ಕೂಡಿದ ಕಪ್ಪತಗುಡ್ಡ ಸರಣಿ ದಕ್ಷಿಣೋತ್ತರವಾಗಿ ಸುಮಾರು ೬೦ ಕಿ. ಮೀ. ಹಬ್ಬಿದೆ. ಅದರ ತಳಭಾಗ ವ್ಯವಸಾಯಕ್ಕೆ ಯೋಗ್ಯವಾಗಿದೆ. ಪ್ರಮುಖ ನದಿಗಳನ್ನೂ ಝರಿಗಳನ್ನೂ ಜಿಲ್ಲೆ ಹೊಂದಿರುವುದು. ಜಿಲ್ಲೆಯ ಉತ್ತರ ಭಾಗದಲ್ಲಿ ಮಲಪ್ರಭ ನದಿ ಮತ್ತು ದಕ್ಷಿಣ ಭಾಗದಲ್ಲಿ ತುಂಗಭದ್ರ ನದಿಗಳು ಗಡಿರೇಖೆಯಾಗಿವೆ.

೨.೧ ವಿಸ್ತೀರ್ಣ

ಗದಗ ಜಿಲ್ಲೆಯು ಕರ್ನಾಟಕ ರಾಜ್ಯದ ವಿಸ್ತೀರ್ಣದಲ್ಲಿ ೪೬೫೬ ಚ.ಕಿ.ಮೀ. ಹೊಂದಿದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ೨.೪೮ ರಷ್ಟು ಭಾಗ ಒಳಗೊಂಡಿದೆ. ಈ ಜಿಲ್ಲೆಯಲ್ಲಿ ೫ ತಾಲ್ಲೂಕುಗಳಿದ್ದು ರೋಣ ಭೌಗೋಳಿಕ ದೃಷ್ಟಿಯಿಂದ ಇದು ೧೨೯೧ಚ.ಕಿ.ಮೀ. ಒಳಗೊಂಡು ಮೊದಲನೆ ಸ್ಥಾನ ಪಡೆದಿದೆ. ಗದಗ ತಾಲ್ಲೂಕು ೧೦೯೭ ಚ.ಕಿಮೀ. ವಿಸ್ತೀರ್ಣವನ್ನು ಹೊಂದಿ ನಂತರದ ಸ್ಥಾನದಲ್ಲಿದೆ. ಜಿಲ್ಲೆಯ ಇನ್ನುಳಿದ ತಾಲೂಕುಗಳಾದ ಶಿರಹಟ್ಟಿ, ಮುಂಡರಗಿ, ನರಗುಂದ ಕ್ರಮವಾಗಿ ೯೪೯ ಚ.ಕಿಮೀ., ೮೮೪ ಚ.ಕಿಮೀ., ೪೩೫ ಚ.ಕಿಮೀ.ಗಳನ್ನು ಹೊಂದಿವೆ ಹಾಗೂ ೩, ೪, ೫ನೇ ಸ್ಥಾನ ಪಡೆದಿವೆ. ನರಗುಂದ ತಾಲ್ಲೂಕು ಗದಗ ಜಿಲ್ಲೆಯಲ್ಲಿ ಅತಿ ಚಿಕ್ಕದು ಎಂದು ಪರಿಗಣಿಸಲಾಗಿದೆ. ಜಿಲ್ಲಾ ಕೇಂದ್ರಸ್ಥಳ ಗದಗ ಆಗಿದೆ.

ಗದಗ ಜಿಲ್ಲಾ ನಕ್ಷೆ



ಗದಗ ಜಿಲ್ಲಾ ಆಡಳಿತಾತ್ಮಕ ದೃಷ್ಟಿಯಿಂದ ಬೆಳಗಾವಿ ವಿಭಾಗಕ್ಕೆ ಸೇರುತ್ತದೆ. ಈ ಜಿಲ್ಲೆ ೫ ತಾಲೂಕುಗಳನ್ನು ಒಳಗೊಂಡಿದೆ. ಆಡಳಿತ ವಿಕೇಂದ್ರಿಕರಣದ ದೃಷ್ಟಿಯಿಂದ ಜಿಲ್ಲೆಯೊಂದು ಕಂದಾಯ ಉಪವಿಭಾಗವಾಗಿದ್ದು ಗದಗ, ಮುಂಡರಗಿ, ನರಗುಂದ, ರೋಣ, ಶಿರಹಟ್ಟಿ ತಾಲೂಕು ಕೇಂದ್ರಗಳನ್ನು ಹೊಂದಿದೆ. ಹಾಗೆಯೇ ೧೧ ಹೋಬಳಿ ಕೇಂದ್ರಗಳು, ೩೨೯ ಜನವಸತಿ ಗ್ರಾಮಗಳು, ೧೨ ಜನವಸತಿಯಿಲ್ಲದ ಗ್ರಾಮಗಳು ಭೌಗೋಳಿಕವಾಗಿ ಕಂಡುಬರುತ್ತವೆ.

೨೦೦೧ರ ಜನಗಣತಿಯ (೨೦೦೫-೨೦೦೬ರ ಗದಗ ಜಿಲ್ಲೆಯ ಅಂಕಿ ಅಂಶಗಳ) ಪ್ರಕಾರ ಜನವಸತಿ ವಿವರಗಳು ಹೀಗಿವೆ.

ಕ್ರಸಂ.	ತಾಲ್ಲೂಕುಗಳು	ಹೋಬಳಿ	ಗ್ರಾಮ ಪಂಚಾಯ್ತಿ	ಜನವಸತಿ ಇರುವ ಪ್ರದೇಶ	ಜನವಸತಿ ಇಲ್ಲದಿರುವ	ಒಟ್ಟು ಗ್ರಾಮಗಳ ಪ್ರದೇಶ
೦೧	ಗದಗ	೨	೨೫	೬೧	೩	೬೪
೦೨	ಮುಂಡರಗಿ	೨	೧೫	೫೭	೧	೫೮
೦೩	ನರಗುಂದ	೨	೧೨	೩೪	೧	೩೫
೦೪	ರೋಣ	೩	೩೦	೯೩	–	೯೩
೦೫	ಶಿರಹಟ್ಟಿ	೨	೨೪	೮೦	೭	೮೭
	ಒಟ್ಟು	೧೧	೧೦೬	೩೨೫	೧೨	೩೩೭

೨.೨ ಪ್ರಾದೇಶಿಕ ಬದಲಾವಣೆಗಳು

೧೯೫೬ರ ಭಾಷಾವಾರು ರಾಜ್ಯ ಪುನರ್ ವಿಂಗಡಣಾ ಶಾಸನದ ಪ್ರಕಾರ ರಾಜ್ಯದ ಪ್ರಾಕೃತಿಕ ಮೇರೆಯಲ್ಲಿ ಮಾತ್ರ ಬದಲಾವಣೆಯಾಗಿದೆ. ೧೯೫೬ ನವೆಂಬರ್ ೧ ರ ಶಾಸನದಂತೆ ಮುಂಬೈ ಪ್ರಾಂತ್ಯ, ಹೈದ್ರಾಬಾದ್ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ, ಕೊಡಗು ರಾಜ್ಯ ವಿಲೀನಗೊಂಡು ವಿಶಾಲ ಮೈಸೂರು ರಾಜ್ಯ ಉದಯವಾಯಿತು. ಭಾಷಾವಾರು ಪುನರ್ ವಿಂಗಡಣೆಯ ಪೂರ್ವದಲ್ಲಿ ಗದಗ ಮುಂಬೈ ಪ್ರಾಂತ್ಯದಲ್ಲಿತ್ತು. ಇದು ಕರ್ನಾಟಕ ರಾಜ್ಯದ ಬೆಳಗಾವಿ ವಿಭಾಗದಲ್ಲಿ ಕಂಡುಬರುವುದು. ೧೯೯೬ರ ಪೂರ್ವದಲ್ಲಿ ಇದ್ದ ಜಿಲ್ಲೆಗಳು ಪುನರ್ ವಿಂಗಡಣೆ ಬೇಡಿಕೆಯ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಕೆಲವು ಹೊಸ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಹಳೆಯ ಧಾರವಾಡ ಜಿಲ್ಲೆಯಲ್ಲಿ ಗದಗ ಮತ್ತು ಹಾವೇರಿ ಜಿಲ್ಲೆಗಳು, ರಾಯಚೂರು ಜಿಲ್ಲೆಯಲ್ಲಿ ಕೊಪ್ಪಳ ಜಿಲ್ಲೆ, ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ ಜಿಲ್ಲೆ ೧೯೯೭ ನವೆಂಬರ್ ೧ರಂದು ನೂತನ ಜಿಲ್ಲೆಯಾಗಿ ಕಾರ್ಯ ನಿರ್ವಹಿಸಿತು.

ಪ್ರಾಕೃತಿಕ ವಿಚಾರಕ್ಕೆ ಸಂಬಂಧಪಟ್ಟಂತೆ ತುಂಗಭದ್ರಾ ನದಿಯ ಮೈದಾನ ಪ್ರದೇಶವನ್ನು ಎರಡು ಭಾಗಗಳಾಗಿ ವಿಭಜಿಸಿ ನೋಡಬಹುದು. ನದಿಯ ಉತ್ತರ ಭಾಗ 'ಉತ್ತರ ಮೈದಾನ' ಎಂದೂ ದಕ್ಷಿಣ

ಭಾಗ 'ದಕ್ಷಿಣ ಮೈದಾನ' ಎಂದೂ ಕರೆಯಬಹುದು. ಉತ್ತರ ಮೈದಾನದಲ್ಲಿ ಬರುವ ಗದಗ ಜಿಲ್ಲೆಯ ಗುಡ್ಡಗಾಡು ಮತ್ತು ಪ್ರಸ್ಥಭೂಮಿ ವಿಶಾಲವಾಗಿದ್ದು ಬೆಲ್ಪ್ ಶಿಲೆಯಿಂದ ಕೂಡಿದ ಕಪ್ಪುಮಣ್ಣಿನ ಪ್ರದೇಶವಾಗಿದೆ. ಉತ್ತರ ಮೈದಾನ ಮಳೆಯ ನೆರಳಿನ ಪ್ರದೇಶವಾಗಿದೆ. ವಾರ್ಷಿಕ ಮಳೆ ಸರಾಸರಿ ಬೀಳುತ್ತದೆ. ಇಲ್ಲಿಯ ಮಣ್ಣು ಫಲವತ್ತಾಗಿದ್ದರೂ ಕಡಿಮೆ ಪ್ರಮಾಣದ ಮಳೆಯಿಂದಾಗಿ ವ್ಯವಸಾಯ ಲಾಭದಾಯಕವಾಗಿಲ್ಲ. ಈ ಜಿಲ್ಲೆ ಬಹುಮಟ್ಟಿಗೆ ಮಳೆ ಅವಲಂಬಿತ ಒಣಬೇಸಾಯ ಪದ್ಧತಿ ಅನುಸರಿಸಿದೆ.

ಜಿಲ್ಲೆಯ ಬಹುತೇಕ ಭೂಮಿ ಸಾವಯವ ಕೃಷಿಗೆ ಒಳಪಟ್ಟಿದೆ. ಮನುಷ್ಯನ ಮೂಲಭೂತ ಆದಾಯಗಳಲ್ಲಿ ಕೃಷಿಯೂ ಒಂದಾಗಿದೆ. ವ್ಯವಸಾಯದಿಂದಲೇ ಒಂದು ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂಬುದು ಅನೇಕ ವಿದ್ವಾಂಸರ ಹೇಳಿಕೆ. ಒಂದು ರಾಷ್ಟ್ರ ಎಲ್ಲ ರೀತಿಯಿಂದಲೂ ತನ್ನ ಅಭಿವೃದ್ಧಿಯನ್ನು ತೋರಿಸಬೇಕಾದರೆ ಅಲ್ಲಿ ವ್ಯವಸಾಯವನ್ನು ಮೂಲವಾಗಿ ಪರಿಗಣಿಸಲಾಗುತ್ತದೆ.

ಸಾವಯವ ಕೃಷಿ ಪದ್ಧತಿಯಿಂದ ಕಾಲಕಾಲಕ್ಕೆ ತಕ್ಕಂತೆ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ಜೋಳ, ಗೋಧಿ, ಶೇಂಗಾ, ಸಜ್ಜೆ, ನವಣೆ, ಇರುಳ್ಳಿ, ಸಾಸಿವೆ, ಹತ್ತಿ, ಎಣ್ಣೆಕಾಳುಗಳನ್ನು ಬೆಳೆಯಲಾಗುತ್ತದೆ. ಇಲ್ಲಿಗೆ ಸಮೀಪದಲ್ಲಿ ಮಲಪ್ರಭಾ ನದಿಯ ಜಲಾನಯನವಿದೆ. ವ್ಯವಸಾಯಕ್ಕೆ ಯೋಗ್ಯವಾದ ರೀತಿಯಲ್ಲಿ ಅದನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ.

ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚು ಇದ್ದಾರೆ. ಜಿಲ್ಲೆಯ ಒಟ್ಟಾರೆ ಶೇ. ೮೩.೩ ಭೂಮಿ ಬಿತ್ತನೆಗೆ ಸೂಕ್ತವಾಗಿದೆ. ಶೇ. ೦೭.೦ರಷ್ಟು ಭೂಮಿ ಅರಣ್ಯ ಪ್ರದೇಶಕ್ಕೆ ಮೀಸಲಾಗಿದೆ. ಸುಮಾರು ಶೇ. ೨.೫೦ ರಷ್ಟು ಭೂಮಿ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯಿದೆ. ಇನ್ನು ಶೇ. ೩.೫೪ ರಷ್ಟು ಭೂಮಿ ಬೀಳುಭೂಮಿಯಿದೆ. ಹೀಗೆ ಜಿಲ್ಲೆಯ ಒಟ್ಟಾರೆ ಭೂಪ್ರದೇಶ ವ್ಯವಸಾಯ, ಅರಣ್ಯ, ಗೋಮಾಳ ಮುಂತಾಗಿ ಹಂಚಿಕೆಯಾಗಿರುವುದು ಕಂಡುಬರುತ್ತದೆ. ಈ ಗದಗ ಜಿಲ್ಲೆಯ ಆರ್ಥಿಕತೆಗೆ ಇದು ಪೂರಕವಾಗಿದ್ದು ಇಲ್ಲಿನ ಆದಾಯದ ಮೂಲವನ್ನು ತಿಳಿಸುವಂತದ್ದಾಗಿದೆ. ಒಟ್ಟಾರೆ ಗದಗ ಜಿಲ್ಲೆಯ ಭೌಗೋಳಿಕತೆಯನ್ನು ಈ ಎಲ್ಲಾ ಅಂಶಗಳಿಂದ ಅವಲೋಕಿಸಬಹುದಾಗಿದೆ.

೨.೩ ನೀರಾವರಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮಲಪ್ರಭ ಆಣೆಕಟ್ಟಿನಿಂದ ಈ ಜಿಲ್ಲೆಯ ನರಗುಂದ ಮತ್ತು ರೋಣಾ ತಾಲ್ಲೂಕುಗಳು ನೀರಾವರಿ ಪ್ರಯೋಜನ ಪಡೆಯುತ್ತಿವೆ. ೨೦೦೮-೨೦೦೯ನೇ ಸಾಲಿನಲ್ಲಿ ಜಿಲ್ಲೆಯ ಸುಮಾರು ೯೧.೫೨೮ ಹೆಕ್ಟೇರು ಭೂಮಿ ಎಲ್ಲ ಮೂಲಗಳಿಂದ ನೀರಾವರಿಯಾಗಿದೆ ಮತ್ತು ಶೇ. ೨೧.೦೩ ರಷ್ಟು ಬಿತ್ತನೆಯಾಗದ ಪ್ರದೇಶವಾಗಿದೆ.

೨.೪ ಪಶುಸಂಗೋಪನೆ

ಪಶುಸಂಪತ್ತು ವ್ಯವಸಾಯ ಮತ್ತು ಹೈನುಗಾರಿಕೆ ಅಭಿವೃದ್ಧಿಗೆ ಅತಿಅವಶ್ಯಕವಾಗಿದೆ. ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸೌಲಭ್ಯಗಳು ಆರ್ಥಿಕ ಅಭಿವೃದ್ಧಿಯ ಒಂದು ಮುಖ್ಯ ಅಂಗವಾಗಿದೆ. ೨೦೦೭ರ ಜಾನುವಾರುಗಳ ತಾತ್ಕಾಲಿಕ ಪಟ್ಟಿ ಪ್ರಕಾರ ಒಟ್ಟು ೭.೬೨ಲಕ್ಷ ಜಾನುವಾರುಗಳು ಮತ್ತು ೧.೫೮ ಲಕ್ಷ ಕುಕ್ಕಟಗಳಿರುತ್ತವೆ. ಒಟ್ಟು ೭.೬೨ ಲಕ್ಷ ಜಾನುವಾರುಗಳಲ್ಲಿ ೨.೩೮ ಲಕ್ಷ ದನಗಳು ೦.೮೦ ಲಕ್ಷ ಎಮ್ಮೆಗಳು, ೩.೧೩ ಲಕ್ಷ ಕುರಿಗಳು ೧.೭೨ ಲಕ್ಷ ಆಡುಗಳು ೦.೪೩ ಲಕ್ಷ ಹಂದಿಗಳು, ೦.೩೩ ಲಕ್ಷ ನಾಯಿಗಳು, ೦.೦೫ ಲಕ್ಷ ಇತರೆ ಜಾನುವಾರುಗಳು ಇವೆ.

ಸಾಂಕ್ರಾಮಿಕ ರೋಗದಿಂದ ಪಶು ಸಂಪತ್ತನ್ನು ರಕ್ಷಿಸುವ ಸಲುವಾಗಿ ಪಶುವೈದ್ಯಕೀಯ ಸೌಲಭ್ಯಗಳು ಅತಿ ಅವಶ್ಯಕವಾಗಿವೆ. ಜಿಲ್ಲೆಯಲ್ಲಿ ೮ ಪಶುವೈದ್ಯ ಆಸ್ಪತ್ರೆಗಳು, ೫೫ ಪಶು ಚಿಕಿತ್ಸಾಲಯಗಳು, ೧೦ ಪಶುವೈದ ಕೇಂದ್ರಗಳು, ೫ ಸಂಚಾರಿ ಚಿಕಿತ್ಸಾಲಯಗಳು, ೧೧ ಕೃತಕ ಗರ್ಭಧಾರಣ ಕೇಂದ್ರಗಳು ಒಟ್ಟಾರೆ ೮೯ ಪಶುವೈದ್ಯಕೀಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

೨.೫ ಮೀನುಗಾರಿಕೆ

ರಾಜ್ಯದ ಒಳನಾಡು ಪ್ರದೇಶದಲ್ಲಿ ಗದಗ ಜಿಲ್ಲೆ ಇದೆ. ಯಾವುದೇ ಬೃಹತ್ ಜಲಾಶಯಗಳು, ಈ ಜಿಲ್ಲೆಯಲ್ಲಿಲ್ಲ. ಆದರೂ ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಕೃತಕವಾಗಿ ನಿರ್ಮಿಸಿದ ಹೊಂಡಗಳಲ್ಲಿ ಮೀನುಗಾರಿಕೆ ಅಲ್ಪ ಪ್ರಮಾಣದಲ್ಲಿ ಮಾಡಲಾಗುತ್ತದೆ.

೨.೬ ರೇಷ್ಮೆ

ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ರೇಷ್ಮೆ ಹುಳುಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಾಕಾಣಿಕೆ ಮಾಡಲು ೧೧ ಜಾಕಿ ಸಾಕಾಣಿಕೆ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು ೧೪೨.೭೦ ಹೆಕ್ಟೇರು ಪ್ರದೇಶ ಹಿಪ್ಪುನೇರಳೆ ಬೆಳೆಯಲ್ಲಿ ೧೦೦.೮೧ ಟನ್ ರೇಷ್ಮೆ ಗೂಡು ಉತ್ಪಾದನೆ ಮಾಡಲಾಗಿದೆ. ಜಿಲ್ಲೆಯಲ್ಲಿ ನೀರಾವರಿ ಇರುವ ಭಾಗದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಆದಾಯದ ದೃಷ್ಟಿಯಿಂದ ಮಹತ್ವದ ಬೆಳೆಯಾಗಿದೆ. ರೈತರು ಕೃಷಿಯಲ್ಲಿ ವಾಣಿಜ್ಯ ರೂಪದ ಇಂತಹ ಬೆಳೆಗಳನ್ನು ಬೆಳೆಯುವರು.

೨.೭ ಖನಿಜ ಸಂಪತ್ತು

ಜಿಲ್ಲೆಯ ಕಪ್ಪತಗುಡ್ಡದಲ್ಲಿ ಕಬ್ಬಿಣ ಮತ್ತು ಚಿನ್ನ ಹಾಗೂ ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದ ಹತ್ತಿರ ಸುಣ್ಣದ ಕಲ್ಲು ದೊರೆಯುತ್ತದೆ. ಉತ್ತಮ ದರ್ಜೆಯ ಮ್ಯಾಂಗನೀಸ್ ಜಿಲ್ಲೆಯಲ್ಲಿ ದೊರೆಯುತ್ತದೆ.

೨.೮ ಹವಾಮಾನ

ಜಿಲ್ಲೆಯ ಹವಾಮಾನ ಸಾಮಾನ್ಯವಾಗಿ ಉಷ್ಣಾಂಶದಿಂದ ಕೂಡಿದೆ. ಫೆಬ್ರುವರಿಯಿಂದ ಮೇ ತಿಂಗಳವರೆಗೆ ಬೇಸಿಗೆ ಕಾಲವಾಗಿದೆ. ಜೂನ್‌ನಿಂದ ಸಪ್ಟೆಂಬರ್‌ವರೆಗೆ ಮಳೆಗಾಲವಾಗಿದ್ದರೂ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಈಶಾನ್ಯ ಮಾರುತಗಳು ಜಿಲ್ಲೆಯಲ್ಲಿ ಮಳೆ ತರುವ ಸಾಧ್ಯತೆಗಳಿವೆ. ಡಿಸೆಂಬರ್‌ನಿಂದ ಫೆಬ್ರುವರಿವರೆಗೆ ಚಳಿಗಾಲವಿರುತ್ತದೆ. ಎಪ್ರಿಲ್–ಮೇ ತಿಂಗಳುಗಳಲ್ಲಿ ಗರಿಷ್ಠ ಉಷ್ಣಾಂಶ ೪೨ ಸೆಂ.ಗ್ರೆ ಇದ್ದರೆ, ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಕನಿಷ್ಠ ೧೬ ಸೆಂ. ಗ್ರೇ. ಇರುತ್ತದೆ.

೨.೯ ವಿದ್ಯಾರ್ಥಿನಿಲಯಗಳು

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಅದರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂದೆ ಬರಲು ಸುಮಾರು ೫೨ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ. ಪ್ರಸ್ತುತ ಪ.ಜಾ., ಪ.ಪಂಗಡಗಳ ಸರ್ಕಾರಿ ಮೆಟ್ರಿಕ್ ಪೂರ್ವ ೨೭ ಹಾಗೂ ಮೆಟ್ರಿಕ್ ನಂತರದ ೧೧ ವಿದ್ಯಾರ್ಥಿ ನಿಲಯಗಳಿವೆ. ಅವುಗಳಲ್ಲಿ ಅನುದಾನಿತ ಮೆಟ್ರಿಕ್ ಪೂರ್ವ ೮ ಹಾಸ್ಟೆಲ್‌ಗಳು ಹಾಗೂ ಮೆಟ್ರಿಕ್ ನಂತರದ ೬ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ.

ಆಶ್ರಯ ಯೋಜನೆ ಹಾಗೂ ಅಂಬೇಡ್ಕರ್ ಯೋಜನೆ ಅಡಿಯಲ್ಲಿ ೨೦೦೮–೦೯ನೇ ಸಾಲಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ವಸತಿ ಯೋಜನೆ ಗುರಿ ನಿಗದಿಪಡಿಸಿರುವುದಿಲ್ಲ.

"ಜಿಲ್ಲೆಯಾದ್ಯಂತ ಒಟ್ಟು ೧೦೨೨ ಅಂಗನವಾಡಿ ಕೇಂದ್ರಗಳಿವೆ. ಅವುಗಳೆಲ್ಲ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಚಿಕ್ಕಮಕ್ಕಳ ಊಟ–ವಿದ್ಯಾಭ್ಯಾಸ, ಮಹಿಳೆಯರ ಸರ್ವತೋಮುಖ ಬೆಳವಣಿಗೆ ಸುಮಾರು ೩೩೬೭ ಸ್ತ್ರೀಶಕ್ತಿ ಯೋಜನೆಗಳು ಮತ್ತು ೮೯ ಯುವತಿ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಇದುವರೆಗೂ ೧೯೪೫ ವಿಧವಾ ಪಿಂಚಣಿಗಾರರು ಇದ್ದಾರೆ. ೨೦೦೮–೦೯ನೇ ಸಾಲಿನಲ್ಲಿ ೫೪೩೯ ಸ್ತ್ರೀಯರು ಹೆರಿಗೆ ಭತ್ಯೆ ಫಲಾನುಭವಗಳು ಅನುಕೂಲ ಪಡೆದಿದ್ದಾರೆ."[೧]

೨.೧೦ ಸಮುದಾಯಗಳು

ಗದಗ ಜಿಲ್ಲೆಯಲ್ಲಿ ವಿವಿಧ ಜಾತಿ ಸಮುದಾಯಗಳಿವೆ. ಬ್ರಾಹ್ಮಣ, ಲಿಂಗಾಯತ, ಪಂಚಮಸಾಲಿ, ಬಣಜಿಗ, ವೀರಶೈವ, ಹೂಗಾರ, ಹಡಪದ, ಕಂಬಾರ, ಕುಂಬಾರ, ಅಕ್ಕಸಾಲಿಗ, ಕೊರವ, ಭಜಂತ್ರಿ, ವಾಲ್ಮಿಕಿ, ತಳವಾರ, ಕುರುಬ, ರೆಡ್ಡಿ, ವಡ್ಡ, ಕೊಮ್ಮಟಿಗ, ಗೌಳಿಗ, ಮುಸ್ಲಿಂ, ಐನೋರು, ಸಾಧರು, ಒಕ್ಕಲಿಗ, ಲಮಾಣಿ, ನೇಕಾರ, ಉಪ್ಪಾರ, ಛಲವಾದಿ, ಮಾದಿಗ, ಮಚಗಾರ, ಕ್ರೈಸ್ತರು, ದೇವಾಂಗ, ಸಮಗಾರ, ಡೋರ, ಹರಣಿಶಿಕಾರಿ, ಗಂಟಿಚೋರ, ಕಾರವಾರ ಬ್ರಾಹ್ಮಣ, ಚಿಕ್ಕಲಗೇರು, ಜೈನ, ಇರಾಣಿ, ದಾಸರು,

ಬುಡಬುಡಕಿ, ರಾಮಕುಂಡಡಿ, ಹಾಗೂ ಡೊಂಬರು ಹೀಗೆ ವಿವಿಧ ಜನಸಮುದಾಯಗಳು ನೆಲೆಯೂರಿರುವುದನ್ನು ಗಮನಿಸಬಹುದು.

೨.೧೧ ಜಿಲ್ಲೆಯ ಇತಿಹಾಸ

" 'ಗದಗ್' ಎಂಬ ಪದದ ನಿಷ್ಪತ್ತಿಯನ್ನು ಹೀಗೆ ನೋಡಬಹುದು. ಇಲ್ಲಿನ ಸ್ಥಳ ಪುರಾಣದ ಪ್ರಕಾರ ಗದುಗಿನ ಪೂರ್ವ ಹೆಸರು 'ಕೃತಕ', ಕೃತಪುರ, ಕರ್ದುಗು, ಗದುಗು, ಕರ್ದುಗು, ಗಳ್ದುಗು, ಕ್ರತುಕ, ಕರ್ತಕ, ಕಲ್‌ದುರ್ಗ, ಗಲದುರ್ಗ ಎಂಬುದಾಗಿದೆ. ಅದು ಕಾಲಕ್ರಮದಲ್ಲಿ ಗಳದುಗ, ಗಳ್ದುಗ, ಗರ್ದುಗ, ಕೃತಪುರ, ಗದುಗ, ಗದಗ ಎಂಬ ಹೆಸರು ಪಡೆದುಕೊಂಡಿತು. ಈ 'ಕೃತಪುರ ಮಹಾತ್ಮೆ'ಯ ಬಗ್ಗೆ ಸುಮಾರು ೧೮ ಅಧ್ಯಾಯಗಳ ಒಂದು ಸಂಸ್ಕೃತ ಪುರಾಣ ಇದೆ. ಈ ಕೃತಪುರ 'ಲೋಹ ಖಂಡಪುರ' ಅಥವಾ 'ಲಕ್ಷಕುಂಡಲಿ' ಹಾಕಿ ಯಾಗ ಮಾಡಿದ ಸ್ಥಳ ಎಂದು ಪ್ರಸ್ತುತ ಪುರಾಣದಲ್ಲಿ ವಿವರಿಸಿದೆ. ಇದು 'ಶಿಬಿ' ಚಕ್ರವರ್ತಿಯ ರಾಜಧಾನಿ (ಈಗಿನ ಲಕ್ಕುಂಡಿ) ಆಗಿತ್ತು. ಕೋಟಿ ಯಜ್ಞ ಮಾಡಿದ ಸ್ಥಳ ಕುರ್ತಕೋಟಿ, ಅಣ್ಣಿಗೇರಿ, ಹೊಂಬಳ, ಮುಳಗುಂದ (ಮುನಿವೃಂದ) ಮೊದಲಾದ ವರ್ಣನೆ ಈ 'ಕೃತಪುರ ಮಹಾತ್ಮೆ'ಯಲ್ಲಿ ಬರುತ್ತದೆ."[೨]

ಗದಗು ಇತಿಹಾಸ ಪ್ರಸಿದ್ಧವಾಗಿದ್ದು ಪುರಾಣ ಪ್ರಸಿದ್ಧ ಮಹಾಭಾರತದಷ್ಟು ಪ್ರಾಚೀನವಾದ ಪಟ್ಟಣವಾಗಿದೆ. ಭೀಷ್ಮಾಚಾರ್ಯ ಈ ಸ್ಥಳಗಳಲ್ಲಿ ಯಜ್ಞ ಮಾಡಿದನೆಂದು ಹೇಳಲಾಗುತ್ತದೆ. ಆದ್ದರಿಂದ ಆಗಿನ ಕಾಲಕ್ಕೆ 'ಕೃತಕಪುರ' ಎಂದಿತ್ತೆಂದು ಇತಿಹಾಸವಿದೆ. ಅವನ ಹೆಸರಿನ ಭೀಷ್ಮಕೆರೆ ಎಂಬುದು ಇಂದಿಗೂ ಪ್ರಚಲಿತದಲ್ಲಿದೆ.

'ಕೃತಪುರ' ಎಂಬುದು ಈಗ ಗದಗ್, ಗದುಗು ಎಂಬ ರೀತಿಗಳಲ್ಲಿ ಬಳಕೆಯಲ್ಲಿದೆ. ಈಚೆಗೆ ಉಪಯೋಗದಲ್ಲಿರುವ ಗದುಗೆಂಬ ಹೆಸರು ಇಲ್ಲಿರುವ ತೋಂಟದಾರ್ಯರ (ಸಿದ್ಧಲಿಂಗೇಶ್ವರರ) ಗದ್ದುಗೆಯಿಂದ ಬಂದಿರಬಹುದೆಂದು ಒಂದು ಹೇಳಿಕೆ ಇದೆ. ಗಜಗ, ಕಲ್ಲುಗ, ಗವ್ದಿಗು ಇತ್ಯಾದಿ ಹೆಸರಿನಿಂದ ಬಂದಿರಬಹುದೆಂದೂ ಅಭಿಪ್ರಾಯಗಳಿವೆ. ಗದಗ ಒಂದು ಕಾಲದಲ್ಲಿ ಮಹಾ ಅಗ್ರಹಾರವಾಗಿ ಮೆರೆದ ಪಟ್ಟಣವೆಂಬುದು ಇಲ್ಲಿ ದೊರೆತಿರುವ ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ ಕಾಲದ ಹಲವು ಶಾಸನಗಳಿಂದ ತಿಳಿದುಬರುತ್ತದೆ. ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನಾದ 'ಕೃತು' ಗದುಗಿನ ಸಮೀಪದಲ್ಲಿರುವ ಕಪ್ಪತ್ತುಗುಡ್ಡದಲ್ಲಿ ತಪಸ್ಸುಮಾಡಿದ. 'ಕಪೋತರೋಮ' ಎಂಬ ರಾಕ್ಷಸನ ಕಿರುಕುಳವನ್ನು ತಪ್ಪಿಸಲು ವೀರನಾರಾಯಣನ ರೂಪದಲ್ಲಿ ಕಾಣಿಸಿಕೊಂಡು ರಾಕ್ಷಸನನ್ನು ವಧಿಸಿದ. ಕೃತುವಿನ ಪ್ರಾರ್ಥನೆಯಂತೆ ನಾರಾಯಣನಿಲ್ಲಿ ಜನಮೇಜಯ ಸರ್ಪಯಾಗ ಮಾಡಿ ಅಗ್ರಹಾರ ಸ್ಥಾಪಿಸಿದ. ರಾಷ್ಟ್ರಕೂಟ ದೊರೆ ೩ನೇ ಇಂದ್ರನ ಒಂದು ಶಾಸನ ಇಲ್ಲಿ ದೊರೆತಿರುವ ಶಾಸನಗಳಲ್ಲಿ ಅತಿ ಪ್ರಾಚೀನವಾದುದಾಗಿದೆ.

ಸುಮಾರು ೧೪ನೆಯ ಶತಮಾನದವರೆಗೆ ಗದಗ ಜಿಲ್ಲೆ ಬೆಳುವಲ ೩೦೦ ಎಂಬ ಪ್ರಾಚೀನ ವಿಭಾಗದಲ್ಲಿತ್ತು. ೧೧ ರಿಂದ ೧೬ನೆಯ ಶತಮಾನಗಳಲ್ಲಿ ಹೊಂಬಳ ಅಗ್ರಹಾರವಾಗಿತ್ತು. ಅಲ್ಲಿ ಉತ್ತಮ

ಶಿಲ್ಪಗಳಿಂದ ಕೂಡಿದ ಶಂಕರಲಿಂಗ ದೇವಾಲಯವಿದೆ. ೧೧-೧೨ನೆಯ ಶತಮಾನದಲ್ಲಿ ದೇವಾಲಯಗಳಿರುವ ಕೋಟುಮಚಗಿ ಪ್ರಾಚೀನ ಕಾಲದಲ್ಲಿ ವಿದ್ಯಾಕೇಂದ್ರವೆನಿಸಿತ್ತು. ಬೌದ್ಧ ನಾಗಾರ್ಜುನನ ಸಂಬಂಧವಿತ್ತೆಂದು ಹೇಳುವ ನಾಗಾವಿಯ ೧೨ನೇ ಶತಮಾನದ ಶಾಸನಗಳು ಲಭ್ಯವಿವೆ. ವೀರನಾರಾಯಣನ ದೇವಾಲಯವಿರುವ ನೀಲಗುಂದ, ಪ್ರಾಚೀನ ಅಗ್ರಹಾರವಿರುವ ಸೊರಟೂರು ಮತ್ತು ಅನೇಕ ದೇವಾಲಯಗಳಿಂದ ಪ್ರಸಿದ್ಧವಾದ ಲಕ್ಕುಂಡಿಯ ಸ್ಥಳ ಕವಿ ನಯಸೇನನಿಗೆ ಸಂಬಂಧಿಸಿವೆ. ಅಲ್ಲದೆ ಅಜಿತಪುರಾಣ ಬರೆಯಿಸಿ ರನ್ನನಿಗೆ ಆಶ್ರಯ ನೀಡಿದ 'ಅತ್ತಿಮಬ್ಬೆ'ಗೂ ಸಂಪರ್ಕವಿತ್ತು. ಈ ಜಿಲ್ಲೆಯ ಮುಳಗುಂದ ಇವೆಲ್ಲವುಗಳಿಂದಾಗಿ ಖ್ಯಾತಿ ಪಡೆದಿದೆ. ಗದಗದಿಂದ ೯ ಕಿ. ಮೀ. ದೂರವಿರುವ ಬೆಳಧಡಿಯಲ್ಲಿ ಶ್ರೀರಾಮಚಂದ್ರನ ದೇವಾಲಯವಿದೆ, ೧೬ ಕಿ. ಮೀ. ದೂರದಲ್ಲಿ ತಿರುಪತಿಯೆಂದು ಖ್ಯಾತಿ ಗಳಿಸಿರುವ ವೆಂಕಟಾಪುರದಲ್ಲಿ ವೆಂಕಟರಮಣ ಹಾಗೂ ಮಹಾಲಕ್ಷ್ಮಿ ದೇವಾಲಯವಿದೆ, ಮತ್ತು ಬ್ರಹ್ಮಾನಂದರ ಸಮಾಧಿ ಮುಂತಾದ ಹಲವು ಚಾರಿತ್ರಿಕ ಸ್ಥಳಗಳು ಈ ಜಿಲ್ಲೆಯಲ್ಲಿವೆ.

ದಂತಕಥೆಯೊಂದರ ಪ್ರಕಾರ ಜನಮೇಜಯನಿಂದ ಸ್ಥಾಪಿತವಾದ ಮಹಾ ಅಗ್ರಹಾರಗಳಲ್ಲಿ 'ಗದುಗು' ಒಂದು. ಎಪ್ಪತ್ತೆರಡು ಮಹಾಜನರು ಇಲ್ಲಿ ನೆಲೆಸಿದ್ದು ಅತ್ಯಂತ ಉನ್ನತ ಶಿಕ್ಷಣ ಕೇಂದ್ರವಾಗಿತ್ತೆಂದು ಹೆಸರು ಪಡೆದಿದೆ. 'ತ್ರಿಕೂಟೇಶ್ವರ' ಮತ್ತು 'ವೀರನಾರಾಯಣ' ದೇವಾಲಯದಲ್ಲಿ ದೊರೆತಿರುವ ३ಳ ಶಾಸನಗಳು ಬಹು ಉಪಯುಕ್ತ ದಾಖಲೆಗಳಾಗಿವೆ. ಸಮೀಪದ ಲಕ್ಕುಂಡಿಯ ಬಳಿ ಹಾಗೂ ಬೆಟಗೇರಿಯ ಬಳಿ ದೊರೆತಿರುವ ಶಾಸನಗಳು ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಕಲಚೂರಿ, ಸೇವುಣ, ಹೊಯ್ಸಳ ಮತ್ತು ವಿಜಯನಗರ ಅರಸರುಗಳ ಬಗ್ಗೆ ಐತಿಹಾಸಿಕ ಮಾಹಿತಿಯನ್ನು ನೀಡುತ್ತವೆ. ಕ್ರಿ.ಶ. ೧೩೭೯ರ ಒಂದು ತಾಮ್ರ ಶಾಸನದಲ್ಲಿ ವಿಜಯನಗರದ ಅರಸನಾದ ಇಮ್ಮಡಿ ಹರಿಹರನು ತ್ರಿಕೂಟೇಶ್ವರ ಮತ್ತು ವೀರನಾರಾಯಣ ದೇವಾಲಯಗಳಿಗೆ ೨೨ ಹಳ್ಳಿಗಳನ್ನು ದಾನವಾಗಿ ನೀಡಿರುವ ವಿಷಯ ಸೂಚಿತವಾಗಿದೆ. ಈ ವೇಳೆಯಲ್ಲಿ ಹಂಪೆ, ಹಸ್ತಿನಾವತಿ ಪ್ರಾಂತ್ಯದ ಲಕ್ಕುಂಡಿ ಪೇಂಟೆಯ ತೋರಗಲ್ಲು ನಾಡಿನ ೬೬ ಹಳ್ಳಿಗಳಲ್ಲಿ ಗದಗಿನ ಪ್ರದೇಶವೂ ಒಂದಾಗಿತ್ತು. ವೀರನಾರಾಯಣ ದೇವಾಲಯದಲ್ಲಿ ೧೫೧೯ರ ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಿಸಿದಂತೆ ಒಂದು ಶಾಸನ ಹಾಗೂ ೧೫೩೯ರ ಅಚ್ಯುತರಾಯನ ಆಳ್ವಿಕೆಗೆ ಸಂಬಂಧಿಸಿದಂತೆ ಮತ್ತೊಂದು ಶಾಸನವೂ ಲಭ್ಯವಾಗಿವೆ. ಈ ಶಾಸನದಲ್ಲಿ 'ಆನಂದನಿಧಿ' ಕೊಡುಗೆಯನ್ನು ಅಚ್ಯುತರಾಯನು ಗದುಗಿನ ವೀರನಾರಾಯಣನ ದೇವಾಲಯಕ್ಕೆ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ಇದರಲ್ಲಿ ಗದುಗಿನ ವೀರನಾರಾಯಣನು ಕುಮಾರವ್ಯಾಸನಿಗೆ ವರವನ್ನು ನೀಡಿದನೆಂದು ಹೇಳಿದೆ. ಅಲ್ಲದೆ ತನ್ನ ಕೃತಿಯಲ್ಲಿ ಕವಿ ಕುಮಾರವ್ಯಾಸ ವೀರನಾರಾಯಣನನ್ನು ಸ್ಮರಿಸಿದ್ದನ್ನು ಕಾಣುತ್ತೇವೆ. ಇದು ಪ್ರಸಿದ್ಧ ಕವಿ ಕುಮಾರವ್ಯಾಸನ ಬಗ್ಗೆ ದೊರೆತಿರುವ ಉಲ್ಲೇಖವಾಗಿದೆ.

"ಗದಗ ಜಿಲ್ಲೆಯಲ್ಲಿ ಅನೇಕ ಅರಸು ಮನೆತನಗಳು ಆಡಳಿತ ನಡೆಸಿಹೋಗಿವೆ. ಗದುಗಿನ ಹೊರವಲಯದಲ್ಲಿ ಕಂಡುಬಂದಿರುವ ೧೦೭೭ರ ಶಾಸನ ಮುಳಗುಂದದಲ್ಲಿ ಕಲ್ಯಾಣ ಚಾಲುಕ್ಯ ಅರಸ ಎರಡನೆಯ ಸೋಮೇಶ್ವರನ ರಾಣಿ ಕಾಂಚಲದೇವಿ ಆಡಳಿತ ನಿರ್ವಹಣೆ ಮಾಡುತ್ತಿದ್ದಳೆಂದು ತಿಳಿಸುತ್ತದೆ.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಗದಗ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು. ನಂತರ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರ ಆಡಳಿತ ಸಾಗಿಬಂದು ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ವಿಶೇಷ ಖ್ಯಾತಿಯನ್ನು ಪಡೆಯಿತು. ಕೃಷ್ಣದೇವರಾಯನ ಕಾಲದಲ್ಲಿ ೧೬೧೫ರ ಶಾಸನದಲ್ಲಿ ವೀರನಾರಾಯಣ ದೇವರಿಗೆ ನೀಡಿದ ಹಲವಾರು ದತ್ತಿದಾನಗಳ ಬಗ್ಗೆ ಉಲ್ಲೇಖವಿದೆ. ಅವುಗಳು ೧೭೬೩ರಲ್ಲಿ ಗದಗ ಬಿಜಾಪುರದ ಅರಸರ ವಶವಾಯಿತು. ವೆಲ್ಲಸ್ಲಿ ೧೭೯೯ರಲ್ಲಿ 'ಡಂಬಳ' ಕೋಟೆಯನ್ನು ವಶಪಡಿಸಿಕೊಂಡ ನಂತರ ಆತನ ಆಳ್ವಿಕೆಗೆ ಒಳಪಟ್ಟಿತು. 'ಡಂಬಳ-ಗದಗ' ಪ್ರದೇಶಗಳನ್ನು ಪೇಶ್ವೆಯ ದಂಡಾಧಿಕಾರಿಗೆ ಮರಳಿ ನೀಡಲಾಯಿತು. ಕೊನೆಗೆ ಮರಾಠ ಯುದ್ಧದಲ್ಲಿ ಸರ್ ಥಾಮಸ್ ಮನ್ರೋ ಕ್ರಿ.ಶ. ೧೮೧೮ರಲ್ಲಿ ಗದುಗಿನ ಮೇಲೆ ಎರಗಿದಾಗ ಗದಗಿನ ಕೋಟೆ ಅವನ ವಶವಾಯಿತು. ಆನಂತರ ಈ ಪ್ರದೇಶ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು." ಕಲೆ, ಸಾಹಿತ್ಯ, ಸಂಸ್ಕೃತಿಯ ನೆಲೆವೀಡಾಗಿ, ವಾಸ್ತು ಮೂರ್ತಿಶಿಲ್ಪಗಳ ತಾಣವಾಗಿ, ಸರಸ್ವತಿಯ ತವರು ಮನೆಯಾಗಿ, ಗದಗ ಜಿಲ್ಲೆ ಕರ್ನಾಟಕ ಸಾಂಸ್ಕೃತಿಕ ರಂಗದಲ್ಲಿ ಶ್ರೀಮಂತವಾಗಿ ವಿಶಿಷ್ಠ ಸ್ಥಾನ ಪಡೆದುಕೊಂಡಿದೆ. ಗದಗ ಜಿಲ್ಲೆ ತನ್ನದೆ ಪ್ರಾಕೃತಿಕ ಲಕ್ಷಣಗಳನ್ನು ಒಳಗೊಂಡಿದೆ. ಉತ್ತರದಲ್ಲಿ ಮಲಪ್ರಭಾನದಿ, ಆಗ್ನೇಯ ಭಾಗದಲ್ಲಿ ತುಂಗಭದ್ರಾ ನದಿಗಳಿವೆ, ಮತ್ತೆ ಕೆಲವು ನೀರಿನಾಸರೆ ಗಳಿರುವುದನ್ನು ಗುರುತಿಸಬಹುದು. ಅವುಗಳಲ್ಲಿ ಬೆಣ್ಣೆಹಳ್ಳ, ಆಲೂರುಹಳ್ಳ, ಹಂದಿಗನಹಳ್ಳಿ ಮತ್ತು ಶಿರಹಟ್ಟಿ ಹೊಳೆ ಪ್ರಮುಖವಾದವು. ಪಶ್ಚಿಮ ಘಟ್ಟದಲ್ಲಿ ಹುಟ್ಟುವ ಮಲಪ್ರಭಾ ನದಿ ಉತ್ತರದ ಗಡಿಯಲ್ಲಿ ಹಾದುಹೋಗುತ್ತದೆ. ಈ ನದಿ ಹರಿಯುವಲ್ಲಿ ಮೆದು ಮಣ್ಣು ಇರುವುದರಿಂದ ಕೆಲವೊಮ್ಮೆ ನದಿ ತನ್ನ ಪಾತ್ರ ಬದಲಿಸಿರುವುದನ್ನು ಕಾಣಬಹುದು. ಇದು ನರಗುಂದ ಮತ್ತು ಮುಂಡರಗಿ ತಾಲೂಕಿನ ಲಕ್ಷ್ಮಾಪುರ ಹಾಗೂ ರೋಣ ತಾಲೂಕಿನ ಹಡಗಲಿ ಗ್ರಾಮದ ಹತ್ತಿರ ೩೭ ಕಿ.ಮೀ.ಗಳವರೆಗೆ ಹರಿಯುತ್ತದೆ. ಈ ಜಲಸಂಪತ್ತಿನಿಂದಾಗಿ ನದಿ ಬಯಲು ಫಲವತ್ತಾಗಿದೆ. ಹಲವಾರು ಜಿಲ್ಲೆಗಳ ಮೂಲಕ ಹರಿದು ಬರುವ ತುಂಗಭದ್ರಾ ನದಿ ಗದಗ ಜಿಲ್ಲೆಯ ಆಗ್ನೇಯದಲ್ಲಿ ಶಿರಹಟ್ಟಿ ತಾಲೂಕಿನಲ್ಲಿ ಗಡಿಯಾಗಿ ಹರಿಯುತ್ತದೆ. ಬೆಣ್ಣೆಹಳ್ಳ ರೋಣ ತಾಲೂಕಿನಲ್ಲಿ ಉತ್ತರಾಭಿಮುಖವಾಗಿ ಹರಿದು ಮೆಣಸಗಿ ಹತ್ತಿರ ಮಲಪ್ರಭಾ ನದಿಯನ್ನು ಸೇರುತ್ತದೆ. ಜೊತೆಗೆ ಇನ್ನೂ ಹಲವು ರೀತಿಯ ನೀರಿನಾಸರೆಗಳಿದ್ದು ಕಾಲಮಾನದುದ್ದಕ್ಕೂ ಇವು ನೀರನ್ನುಣಿಸುತ್ತಿದ್ದುದು ತಿಳಿದುಬರುತ್ತದೆ.

"ಗದಗ ಜಿಲ್ಲೆ ಬಯಲುನಾಡು ಪ್ರದೇಶವಾಗಿದೆ. ಅಲ್ಲಲ್ಲಿ ಗುಡ್ಡಗಾಡುಪ್ರದೇಶ ಮತ್ತು ಗುಡ್ಡಬೆಟ್ಟಗಳ ಸಾಲುಗಳಿವೆ. ಅದರಂತೆ ಗಜೇಂದ್ರಗಡ, ನರಗುಂದ ಮತ್ತು ಕಪ್ಪತಗುಡ್ಡಗಳು ಪ್ರಮುಖವಾಗಿವೆ. ಕಪ್ಪತಗುಡ್ಡ ಗದಗದ ಆಗ್ನೇಯಕ್ಕೆ ೪೮ ಕಿ.ಮೀ. ಉದ್ದವಾಗಿ ಹರಡಿದೆ. ಈ ಗುಡ್ಡ ೬ ರಿಂದ ೧೬ ಕಿ.ಮೀ. ಅಗಲವಾಗಿದ್ದು, ಅದರ ಅತ್ಯುನ್ನತ ಶಿಖರ ೯೩೭ ಮೀಟರ್ ಎತ್ತರವಿದೆ. ಈ ಗುಡ್ಡ ಏಕಶ್ರೇಣಿಯಾಗಿ ಆರಂಭವಾಗಿ ಮಧ್ಯದಲ್ಲಿ ಡಂಬಳದ ಹತ್ತಿರ ೩-೪ ಸಮಾನಾಂತರ ಶ್ರೇಣಿಗಳಾಗಿ ಕವಲೊಡೆದಿದೆ. ಉಳಿದಂತೆ ನರಗುಂದ, ರೋಣ, ಗದಗ, ಮುಂಡರಗಿ ಮತ್ತು ಶಿರಹಟ್ಟಿ ತಾಲೂಕುಗಳು ಬಯಲು ಸೀಮೆಯ ಪ್ರದೇಶಗಳಾಗಿವೆ. ಅಲ್ಲಲ್ಲಿ ಹಲವು ಗುಡ್ಡಗಳಿದ್ದು ನರಗುಂದ ಮತ್ತು ಚಿಕ್ಕನರಗುಂದ ಗುಡ್ಡಗಳು ಪ್ರಮುಖವಾಗಿವೆ.

ಗದಗ ಜಿಲ್ಲಾ ಪ್ರದೇಶ ಧಾರವಾಡ ಮಾದರಿಯ ಶಿಲಾ ಪ್ರಬೇಧಗಳಿಂದ ಒಳಗೊಂಡಿದೆ. ಅದೇ ರೀತಿ ಕಲಾದಗಿ ವರ್ಗ ನರಗುಂದ ತಾಲ್ಲೂಕು ಪ್ರದೇಶದಲ್ಲಿ ಕಂಡುಬಂದಿದೆ. ಇದರಲ್ಲಿ ಬೆಣಚುಕಲ್ಲು, ಸುಣ್ಣದ ಕಲ್ಲು ಮತ್ತು ಜೇಡಿಯ ಚಿಪ್ಪುಕಲ್ಲುಗಳು ದೊರೆಯುತ್ತವೆ. ಬೆಣಚುಕಲ್ಲು ಮತ್ತು ಪದರ ಶಿಲೆ ರೂಪಗೊಂಡಿರುವುದನ್ನು ಕಾಣಬಹುದು. ಇವು ಅಗ್ನಿ ಮತ್ತು ಜಲಶಿಲೆಗಳ ಸಂಯೋಗದಿಂದ ರೂಪಾಂತರ ಹೊಂದಿ ಪಸರಿಸಿವೆ. ಈ ಶಿಲಾಭಾಗವನ್ನು ಭೇದಿಸಿಕೊಂಡು ಕಣಶಿಲೆ (ಗ್ರಾನೈಟ್) ಮತ್ತು ನೀಸ್ ಶಿಲಾ ಮಾದರಿಗಳು ಹರಡಿವೆ. ಧಾರವಾಡ ಪ್ರಭೇದದ ಪದರ ಶಿಲೆ, ಗ್ರಾನೈಟ್ ಬೆಣಚುಕಲ್ಲು, ಸುಣ್ಣಕಲ್ಲುಗಳನ್ನೊಳಗೊಂಡಿರುವುದನ್ನು ಕಾಣಬಹುದು.

ಜಿಲ್ಲೆಯ ಹಲವು ಭಾಗಗಳಲ್ಲಿ ಖನಿಜ ನಿಕ್ಷೇಪವಿದೆ. ಕಪ್ಪತಗುಡ್ಡ ಪ್ರದೇಶದಿಂದ ಹರಿಯುವ ಡೋಣಿ ಹೊಳೆಯಲ್ಲಿ ತಾಮ್ರದ ಅದಿರು ನಿಕ್ಷೇಪ ಕಂಡುಬರುತ್ತದೆ. ಕಪ್ಪತಗುಡ್ಡ ಶ್ರೇಣಿಯಲ್ಲಿ ಕಬ್ಬಿಣದ ಅದಿರು ಅಧಿಕವಾಗಿರುವುದೆಂದು ತಿಳಿದುಬಂದಿದೆ. ಕೆಲವೆಡೆ ಚಿನ್ನದ ಅದಿರು ಕಂಡುಬಂದಿದ್ದರೂ ಅದು ಆರ್ಥಿಕವಾಗಿ ಲಾಭದಾಯಕವಲ್ಲವೆಂದು ತಿಳಿಯಲಾಗಿದೆ.

ಶಿಲಾ ಮಿಶ್ರಿತ ವಿವಿಧ ಮಾದರಿ ಮಣ್ಣು ಜಿಲ್ಲೆಯ ಹಲವು ಭಾಗದಲ್ಲಿದೆ. ರೋಣ, ಗದಗ ಮತ್ತು ನರಗುಂದಗಳ ಮಡಿಕಟ್ಟು ಮತ್ತು ರೇವು ಮಣ್ಣಿನ ಭೂಗುಣವನ್ನು ಹೊಂದಿವೆ. ಶಿರಹಟ್ಟಿಯ ಪಶ್ಚಿಮ ಭಾಗ ಮುಂಡರಗಿಯ ಉತ್ತರ ಭಾಗದ ಪ್ರದೇಶಗಳು ಎರೆಮಣ್ಣಿನ ಪ್ರದೇಶಗಳಾಗಿವೆ. ಅಲ್ಲಲ್ಲಿ ಇರುವ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಲ್ಯಾಟರೈಟ್ ಶಿಲೆಯಿಂದುಂಟಾದ ಕೆಂಪು ಮಣ್ಣು ಇದೆ. ಕೆಲವು ಭಾಗಗಳಲ್ಲಿ ಮರಳು ಮಿಶ್ರಿತ ಮಣ್ಣಿನ ಭೂಮಿಯಿದೆ. ನೀರಿನಾಸರೆಯ ಪ್ರದೇಶಗಳಲ್ಲಿ ರೇವೆ ಮಣ್ಣನ್ನೊಳಗೊಂಡಿರುವುದನ್ನು ಕಾಣಬಹುದು.

ಜಿಲ್ಲೆಯ ಹವಾಗುಣ ಸಾಮಾನ್ಯವಾಗಿ ಹಿತಕರವೆಂದೆ ಹೇಳಬಹುದು. ಏಪ್ರಿಲ್–ಮೇ ತಿಂಗಳಲ್ಲಿ ಅಧಿಕ ಉಷ್ಣಾಂಶವಿರುತ್ತದೆ. ಜೂನ್‌ನಲ್ಲಿ ಮಳೆಗಾಲ ಆರಂಭವಾಗಿ ಉಷ್ಣತೆ ಕಡಿಮೆಯಾಗುತ್ತದೆ. ನವೆಂಬರ್–ಜನವರಿ ತಿಂಗಳು ಚಳಿಗಾಲವಾಗಿದೆ. ಫೆಬ್ರುವರಿಯಲ್ಲಿ ಹವೆ ಶುಷ್ಕವಾಗಿರುತ್ತದೆ. ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಜಿಲ್ಲೆಯಲ್ಲಿ ಮಳೆ ಬೀಳುವುದು. ಸರಾಸರಿ ಮಳೆ ಪ್ರಮಾಣ ೬೯೧ ಮಿ. ಮೀ. ನಷ್ಟಿದೆ.

ಜಿಲ್ಲೆಯ ಹಲವು ಭಾಗ ಅರಣ್ಯ ಪ್ರದೇಶವಾಗಿದೆ. ಇದು ಪರ್ಣಪಾತಿ ವೃಕ್ಷಗಳ ಕಾಡು, ಮುಳ್ಳು ಕಾಡು ಹಾಗೂ ಕುರುಚಲು ಗಿಡಗಳಿರುವ ಭೂಪ್ರದೇಶವಾಗಿದೆ. ನದಿ ದಂಡೆಗಳುದ್ದಕ್ಕೂ ಬಿದಿರು ಮೆಳೆಗಳುಂಟು. ರೋಣ ಮತ್ತು ನರಗುಂದ ತಾಲೂಕುಗಳಲ್ಲಿ ಗೋಮಾಳ ಮೀಸಲು ಪ್ರದೇಶಗಳಿವೆ. ಇಲ್ಲಿನ ಕಾಡುಗಳಲ್ಲಿ ಶ್ರೀಗಂಧ, ತೇಗ, ಮತ್ತಿ, ಹಲಸು, ಬಿಳಿನಂದಿ, ಬೀಟೆ, ದಿಂಡಲು, ಬೇವು, ಹುಣಿಸೆ, ಈಚಲು, ಬಿದಿರು ಮೊದಲಾದವು ಬೆಳೆಯುತ್ತವೆ. ಇಂತಹ ಕಾಡುಗಳಲ್ಲಿ ಚಿರತೆ, ಕರಡಿ, ಜಿಂಕೆ, ಕಾಡುಹಂದಿ, ಕಾಡುಕೋಣ ಮೊದಲಾದ ಪ್ರಾಣಿಗಳು ಮುಖ್ಯವಾಗಿವೆ. ಅಲ್ಲಲ್ಲಿ ಉರಗಗಳು ಕಾಣಸಿಗುತ್ತವೆ.

ಒಟ್ಟಾರೆ ಗದಗ ಜಿಲ್ಲೆಯ ಪ್ರಾಕೃತಿಕ ಸಂಪತ್ತು ಕಾಲಮಾನದುದ್ದಕ್ಕೂ ಈ ಪ್ರದೇಶದಲ್ಲಿ ಮಾನವ ಜೀವಿಸಲು ಸಹಾಯಕವಾಗಿರುವುದರಿಂದ ಪೂರಕ ಪ್ರದೇಶವೆನಿಸುತ್ತದೆ."[೪]

೨.೧೨ ಗದಗ ಜಿಲ್ಲೆಯ ಕೋಟೆ-ಕೊತ್ತಲಗಳು

"ಬೀಸುವ ಗಾಳಿಗೆ ಗಿಡ-ಮರಗಳಂತೆ ಪರ್ವತವೂ ಅಲ್ಲಾಡಿದರೆ ಅವೆರಡರ ನಡುವೆ ಅಂತರವೇನು ಉಳಿಯಿತು ಎಂಬ ಸಿದ್ಧಾಂತ ಕೋಟೆಗಳನ್ನು ನಿರ್ಮಾಣ ಮಾಡಿದ ಪುರುಷರ ಬದುಕನ್ನು ಕಟ್ಟಿಕೊಡುತ್ತದೆ. ಪ್ರಾಚೀನ ಹಾಗೂ ಮಧ್ಯಯುಗದಲ್ಲಿ ವಿವಿಧ ರಾಜ್ಯಗಳನ್ನು ಕಟ್ಟಿ, ಆಳ್ವಿಕೆ ನಡೆಸಿ, ಮೆರೆದ ರಾಜಧಾನಿಗಳು, ಅವುಗಳನ್ನು ಸುತ್ತುವರಿದ ಕೋಟೆ-ಕೊತ್ತಲಗಳು ಮಹತ್ತರ ರಕ್ಷಣಾ ವ್ಯವಸ್ಥೆಯ ವಿಶೇಷತೆಗಳನ್ನು ತೋರಿಸುತ್ತವೆ.

ಗದಗ ಜಿಲ್ಲೆಯ ಐದೂ ತಾಲ್ಲೂಕುಗಳಲ್ಲಿ ಪ್ರಾಚೀನ ಹಾಗೂ ಮಧ್ಯಯುಗೀನ ಇತಿಹಾಸ ಹೊಂದಿದ ತಾಣಗಳು ಬಹಳಷ್ಟು ಇವೆ. ಅವುಗಳಲ್ಲಿ ಶಿಲಾಶಾಸನಗಳು, ಗುಡಿ-ಗುಂಡಾರಗಳು, ಕೆರೆ-ಬಾವಿ, ಪುಷ್ಕರಣಿಗಳು, ರಕ್ಷಣಾ ಗೋಡೆಗಳು ಇತಿಹಾಸದ ಮಹತ್ವದ ಪರಿಕರಗಳಾಗಿವೆ. ಗದಗ, ರೋಣ, ನರಗುಂದ, ಶಿರಹಟ್ಟಿ, ಮುಂಡರಗಿ, ಸವಡಿ, ಸೂಡಿ, ಕೊಣ್ಣೂರು, ಡಂಬಳ, ಹೊಂಬಳ, ಲಕ್ಕುಂಡಿ, ಬೆಟಗೇರಿ, ಲಕ್ಷ್ಮೇಶ್ವರ, ಮುಳಗುಂದ, ಗಜೇಂದ್ರಗಡ, ಬೆಳಧಡಿ, ಶ್ರೀಮಂತಗಡ, ವೆಂಕಟಾಪುರ, ಹುಲಕೋಟಿ, ಅಣ್ಣಿಗೇರಿ, ಕುರ್ತಕೋಟಿ, ಸೊರಟೂರು, ಅಬ್ಬಿಗೆರೆ ಹಾಗೂ ಇಟಗಿ- ಇಲ್ಲೆಲ್ಲ ಕೋಟೆ-ಕೊತ್ತಲುಗಳ ಅವಶೇಷಗಳು ಈಗಲೂ ಕಾಣಸಿಗುತ್ತವೆ. ಅವುಗಳ ಪೂರ್ತಿ ವಿನ್ಯಾಸ ದೊರೆಯದಿದ್ದರೂ ಅಲ್ಲಲ್ಲಿ ಅಳಿದುಳಿದ ಗೋಡೆಗಳ ಭಾಗ ಹಾಗೂ ನೀರಿನ ಅಗಳು ಜೋಡಿಸಿದಲ್ಲಿ ಒಂದು ಕಾಲ್ಪನಿಕ ನಕ್ಷೆ ದೊರೆಯುತ್ತದೆ. ಈ ಕೋಟೆಗಳಲ್ಲಿ ಬಹುವಾಗಿ ಕಲ್ಯಾಣ ಚಾಲುಕ್ಯರ ಬೆಳವಣಿಗೆಯಾದುದು ಸಮೀಕ್ಷೆಯಿಂದ ತಿಳಿದುಬರುತ್ತದೆ."[೫]

೨.೧೩ ಪ್ರಾಚೀನ ಬಾವಿಗಳು

"ಕೆಲವು ಸಲ ವಿಪರೀತ ಮಳೆಯಾಗಿ ಬೆಳೆಗಳು ನಾಶವಾಗುವುದು, ಕೆಲವು ಸಲ ಸಮಯಕ್ಕೆ ಸರಿಯಾಗಿ ಮಳೆ ಬಾರದೆ ಬರಗಾಲ ಉಂಟಾಗಿ ಜೀವನ ನಿರ್ವಹಣೆಯೇ ದುಸ್ತರವಾಗುವುದು. ಜೊತೆಗೆ ಜನಸಂಖ್ಯೆ ಹೆಚ್ಚಿದಂತೆಲ್ಲ ಕೃತಕ ನೀರಾವರಿ ವಿಧಾನಗಳನ್ನು ಆರಂಭಿಸುವುದು ಹಿಂದಿನ ಕಾಲದಿಂದಲೂ ನಡೆದುಬಂದಿದೆ. ಮಳೆಯ ವೈಫಲ್ಯದಿಂದ ಪರ್ಯಾಯ ವ್ಯವಸ್ಥೆಯಾಗಿ ಬಾವಿ-ಕೆರೆ, ಕಾಲುವೆ ಮುಂತಾದವುಗಳಿಂದ ಜೀವನಾವಶ್ಯಕ ನೀರನ್ನು ಪಡೆಯುವ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ಮನುಷ್ಯ ಹುಟ್ಟುಹಾಕಿದ್ದು ಶಾಸನಗಳಿಂದ ಮತ್ತು ಸಾಹಿತ್ಯ ಕೃತಿಗಳಿಂದ ತಿಳಿಯುತ್ತದೆ. ಅಂದಿನ ಕಾಲದಲ್ಲಿ ಅರಸರು, ಅಧಿಕಾರಿಗಳು ಮತ್ತು ಶ್ರೀಮಂತರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಕೆರೆ-ಬಾವಿಗಳನ್ನು ಕಟ್ಟಿಸಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ವಿಜಯನಗರದ ಕಾಲದವರೆಗಿನ ಅನೇಕ ಶಾಸನಗಳಲ್ಲಿಯೂ ಇಂಥ ವಿವರಗಳು

ದೊರೆಯುತ್ತವೆ. ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿರುವ ಸಿದ್ಧರ ಬಾವಿಯಲ್ಲಿರುವ ಶಾಸನ ವಿಷ್ಣುಭಟ್ಟರ ಮಗ ಕೇಶವ ಮತ್ತು ಆದಿಕೇಶವರ ಒಪ್ಪಿಗೆ ಪಡೆದು ನಾಗರಬಾವಿಯ ಧರ್ಮಾರ್ಥ ಸಂರಕ್ಷಣೆಗಾಗಿ ಪ್ರತಿವರ್ಷ ಕೇರಿಯಿಂದ ಸಂಗ್ರಹಿಸಿದ ೧೨ ಗದ್ಯಾಣಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿರುವ ಒಂದು ಶಾಸನ ಜನ ಮತ್ತು ದನಗಳಿಗಾಗಿ ಗಿಡ ಬೆಳೆಸಲು ಮತ್ತು ಧರ್ಮಶಾಲೆ ಕಟ್ಟಿಸಲು ಅಗತ್ಯವಾದ ಬಾವಿ ತೋಡಿಸಲು ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.

ಬಾವಿ, ಕೆರೆ ಕಟ್ಟಿಸುವುದರಲ್ಲಿ ಅರಸರ ರಾಜಕೀಯ ತಂತ್ರ ಅಡಗಿತ್ತು. ಅರಸರು ಒಳ್ಳೆಯ ಹೆಸರು ಪಡೆಯಲು, ಜನಪ್ರೀತಿಗಳಿಸಲು ಜನಹಿತ ಕಾರ್ಯಕ್ಕಾಗಿ ಕೆರೆ-ಬಾವಿಗಳನ್ನು ಕಟ್ಟಿಸುತ್ತಿದ್ದರು. ಅರಸರಲ್ಲಿ ಮತ್ತು ಜನರಲ್ಲಿ ಇದ್ದ ಧಾರ್ಮಿಕ ಭಾವನೆಗಳೂ ಇದಕ್ಕೆ ಕಾರಣವಾಗಿದ್ದವು. ಅನ್ನದಾನ ಮತ್ತು ವಸ್ತ್ರದಾನದಷ್ಟೇ ಜಲದಾನವೂ ಪುಣ್ಯಕರವಾದದ್ದೆಂದು ನಂಬಲಾಗಿತ್ತು. ತಂದೆ-ತಾಯಿಗಳಿಗೆ ಪುಣ್ಯ ದೊರೆಯಲೆಂದು ಮಕ್ಕಳು ಅಥವಾ ಮಕ್ಕಳಿಗೆ ಪುಣ್ಯ ದೊರೆಯಲೆಂದು ತಂದೆ-ತಾಯಿಗಳು ಕೆರೆ, ಬಾವಿಗಳನ್ನು ಕಟ್ಟಿಸುತ್ತಿದ್ದರು. ನೀರಿನ ವ್ಯವಸ್ಥೆಗಾಗಿ ಕೆರೆ ಕಾಲುವೆ ಬಾವಿಗಳನ್ನು ಕಟ್ಟಿಸುವ ಪದ್ಧತಿ ಪ್ರಾಚೀನ ಕಾಲದಿಂದಲೂ ಇದ್ದರೂ ಕಾಲಕ್ರಮದಲ್ಲಿ ಹೀಗೆ ಅದೊಂದು ಸಂಪ್ರದಾಯ ರೂಪ ತಾಳಿತೆಂದು ಹೇಳಬಹುದು. ಭಿನ್ನ ಕಾರಣಗಳಿಂದ ರೂಪಗೊಂಡ ಅನೇಕ ಸುಂದರವಾದ ಕೆತ್ತನೆಯುಳ್ಳ ವಿಶಾಲವಾದ ಬಾವಿಗಳು ಕರ್ನಾಟಕದಾದ್ಯಂತ ಇವೆ. ಇಲ್ಲಿ ಗದಗ ಜಿಲ್ಲೆಯಲ್ಲಿ ಕಂಡುಬರುವ ಕೆಲವು ಮುಖ್ಯ ಬಾವಿಗಳನ್ನು ಮಾತ್ರ ತಿಳಿಸಲಾಗಿದೆ.[೬]

ಗಜೇಂದ್ರಗಡ: ಜಿಲ್ಲೆಯ ರೋಣ ತಾಲೂಕಿನಲ್ಲಿ ಕಂಡುಬರುವ ಗಜೇಂದ್ರಗಡದಲ್ಲಿ 'ಮಾಲೋಜಿ' ಎಂಬ ಸುಂದರವಾದ ಬಾವಿಯಿದೆ. ಇದು ಘೋರ್ಪಡೆ ಮನೆತನದವರು ಕಟ್ಟಿಸಿದ ಬಾವಿ. ಸರ್ವಧರ್ಮ ಸಹಿಷ್ಣುಗಳಾಗಿದ್ದ ಇವರು ಅನೇಕ ಮಸೀದಿ, ಮಠ ಮತ್ತು ಬಾವಿಗಳನ್ನು ಕಟ್ಟಿ ಜನಮನ್ನಣೆಗೆ ಪಾತ್ರರಾಗಿದ್ದರು.

ಸೂಡಿ : ಸೂಡಿಯಲ್ಲಿರುವ 'ನಗರಬಾವಿ' (ನಾಗಗೊಂಡ)ಯನ್ನು ಸೂಂಡಿ (ಸೂಡಿ) ಎಂದೇ ಕರೆಯಲಾಗುತ್ತದೆ. ರಾಷ್ಟ್ರಕೂಟರು ಮತ್ತು ಚಾಲುಕ್ಯರು ತಮ್ಮ ಕಾಲದಲ್ಲಿ ಅನೇಕ ಜನಹಿತ ಕಾರ್ಯಗಳನ್ನು ನಡೆಸಿರುವುದು ಈ ಗ್ರಾಮದಲ್ಲಿ ಕಂಡುಬರುತ್ತದೆ. ಈ 'ನಗರಬಾವಿ'ಯನ್ನು ನಾಗದೇವ ಕಟ್ಟಿಸಿದನೆಂದು ಇಲ್ಲಿನ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಇದು ಕ್ರಿ.ಶ.೧೦೬೦ಕ್ಕಿಂತ ಪೂರ್ವದಲ್ಲಿ ಕಟ್ಟಿಸಿರಬಹುದೆಂದು ಊಹೆ ಮಾಡಲಾಗಿದೆ.

ಲಕ್ಕುಂಡಿ : ಗದಗ ತಾಲ್ಲೂಕಿಗೆ ಸಂಬಂಧಪಡುವ ಲಕ್ಕುಂಡಿ ಗ್ರಾಮ ಐತಿಹಾಸಿಕ ಪ್ರಸಿದ್ಧ ಸ್ಥಳ. ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಅನೇಕ ದೇವಾಲಯಗಳು-ಬಸದಿಗಳು ನಿರ್ಮಾಣಗೊಂಡಿವೆ. ಅದೇ ರೀತಿ ಕೋಟೆ, ಕೆರೆ, ಬಾವಿಗಳು ಸಹ ನಿರ್ಮಾಣವಾಗಿವೆ. ಅವುಗಳಲ್ಲಿ ಮಾಣಿಕೇಶ್ವರಕುಂಡ, ಸಿದ್ದರಬಾವಿ, ಕನ್ನರಬಾವಿ, ಪತ್ರೆಯವರ ಬಾವಿ, ಮಜ್ಜನ ಬಾವಿ ಮುಂತಾದವು ಇವೆ.

ಮಾಣಿಕೇಶ್ವರ ಕುಂಡ : ಇದು ಚಾಲುಕ್ಯ ಶೈಲಿಯಲ್ಲಿ ಮಾಣಿಕೇಶ್ವರ ದೇವಾಲಯದ ಮುಂದೆ ಇದೆ.

ಸಿದ್ದರ ಬಾವಿ : ಹೊಯ್ಸಳರ ವೀರಬಲ್ಲಾಳನ ಕಾಲದ ಈ ಬಾವಿಯನ್ನು ವಿಷ್ಣುಭಟ್ಟನ ಮಗ ಕೇಶವ ಮತ್ತು ಅಡಕೆಯವರ ಕೇಶವ ದೇವರುಗಳ ಸಾಸಿರ್ವರ ಒಪ್ಪಿಗೆ ಪಡೆದು ನಗರಬಾವಿ ಧರ್ಮೇತದ ಸಂರಕ್ಷಣೆಗೆ ಪ್ರತಿವರ್ಷ ದೇಣಿಯಿಂದ ಸಂಗ್ರಹವಾದ ೧೨ ಗದ್ಯಾಣಗಳನ್ನು ದಾನ ನೀಡಿದ್ದಾರೆಂದು ತಿಳಿಯುತ್ತದೆ.

ಕನ್ಯಾರ ಬಾವಿ : ಈ ಬಾವಿ ಲಕ್ಕುಂಡಿಯಲ್ಲಿರುವ ವಸ್ತುಸಂಗ್ರಹಾಲಯದ ದಕ್ಷಿಣ ದಿಕ್ಕಿನಲ್ಲಿದೆ.

ಪತ್ರೇಯವರ ಬಾವಿ : ಈ ಬಾವಿ ವಸ್ತುಸಂಗ್ರಹಾಲಯದ ಪಶ್ಚಿಮ ದಿಕ್ಕಿನಲ್ಲಿದೆ.

ಮಜ್ಜನ ಬಾವಿ : ಈ ಬಾವಿ ಕಾಶಿ ವಿಶ್ವೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿದೆ. ಚಿಕ್ಕ ಬಾವಿಯಾಗಿದ್ದರೂ ಸುಸ್ಥಿತಿಯಲ್ಲಿದೆ.

ಸೊರಟೂರು : ಗದಗ ತಾಲ್ಲೂಕಿನ ಮತ್ತೊಂದು ಗ್ರಾಮವಾದ ಸೊರಟೂರು ರಾಷ್ಟ್ರಕೂಟರ ಶಾಸನಗಳು, ಬಾದಾಮಿ ಚಾಲುಕ್ಯರ ದೇವಾಲಯಗಳಿಂದ ಕೂಡಿದ ಪ್ರದೇಶವಾಗಿದೆ. ಇಲ್ಲಿ 'ಪಲ್ಲೇದವರ ಬಾವಿ' ಎಂಬುದು ಅತಿಮುಖ್ಯವಾದ ಬಾವಿಯಾಗಿದೆ."[೭]

೨.೧೪ ರಾಜಕೀಯ ಇತಿಹಾಸ

"ಕರ್ನಾಟಕದ ಇತಿಹಾಸದಲ್ಲಿ ಇಂದಿನ ಗದಗ ಜಿಲ್ಲೆ ಮಹತ್ವದ ಸ್ಥಾನ ಗಳಿಸಿದೆ. ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ತನ್ನದೇ ಕೊಡುಗೆ ನೀಡಿರುವುದು ಇದರ ವಿಶೇಷ. ಸುಮಾರು ಕ್ರಿ.ಶ. ೭೫೦ ರಿಂದ ಇಂದಿನವರೆಗೂ ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಈ ಪ್ರದೇಶದಲ್ಲಿ ರಾಜರುಗಳ ಆಳ್ವಿಕೆ ನಡೆಸುತ್ತಿದ್ದುದು ಅನೇಕ ಶಾಸನಗಳಿಂದ ಇತಿಹಾಸಕಾರರಿಂದ ತಿಳಿದುಬರುತ್ತದೆ. ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳರ ಕಾಲಘಟ್ಟದ ರಾಜಕೀಯ ಸ್ಥಿತಿಗತಿಯಲ್ಲಿ ಮಾಂಡಲಿಕರು, ಗಾವುಂಡರು, ಪಟೇಲರು, ಗ್ರಾಮ ಮುಖ್ಯಸ್ಥರು ಹೀಗೆ ಹಂತಹಂತವಾಗಿ ಕೆಳಗಿನಿಂದ ಮೇಲಕ್ಕೆ ಕ್ರಮಬದ್ಧ ಅಧಿಕಾರಿಗಳಿಂದ ಕೂಡಿದ ಆಳ್ವಿಕೆ ನಡೆಯುತಿತ್ತು. ಅವರೆಲ್ಲರೂ ರಾಜನಿಗೆ ವಿಧೇಯರಾಗಿ ತಮಗೊಪ್ಪಿಸಿದ ಕಾರ್ಯಗಳನ್ನು ತಪ್ಪದೇ ಪಾಲಿಸುತ್ತಿದ್ದರು. ಇವರೆಲ್ಲರಿಗೂ ಚಕ್ರವರ್ತಿಯೇ ಮುಖ್ಯಾಧಿಕಾರಿಯಾಗಿರುತ್ತಿದ್ದ. ಸ್ಥಳೀಯ ಅಧಿಕಾರ ಗ್ರಾಮದ ಮುಖ್ಯಸ್ಥರ ಕೈಯಲ್ಲಿದ್ದು ಅವರು ಗ್ರಾಮಗಳ ರಕ್ಷಣೆ, ಹಿತ ಕಾಯ್ದುಕೊಂಡು ಹೋಗುತ್ತಿದ್ದರು. ರಾಜರ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸಲೇಬೇಕಾಗಿತ್ತು. ಕೆಲವು ಸಂದರ್ಭದಲ್ಲಿ ಗೆದ್ದ ರಾಜರ ಆದೇಶಗಳನ್ನೂ ಪಾಲಿಸಬೇಕಾಗಿತ್ತು.

ಇಂದು ಅನೇಕ ಪ್ರಾದೇಶಿಕ ಮತ್ತು ರಾಷ್ಟ್ರೀಯ ಪಕ್ಷಗಳು ಭಾರತದ ಕಾನೂನಿನ ಪ್ರಕಾರ ಜನಸಾಮಾನ್ಯರ ಅಮೂಲ್ಯ ಮತದಾನದ ಮುಖಾಂತರ ತಮ್ಮ ಅಭ್ಯರ್ಥಿಯ ಆಯ್ಕೆ ಬಯಸುತ್ತಿದ್ದಾರೆ.

ಹಿಂದಿಗಿಂತ ಇಂದಿನ ರಾಜಕೀಯ ಸ್ಥಿತಿಗತಿಯಲ್ಲಿ ಸ್ವಾತಂತ್ರ್ಯ ಹೊರತುಪಡಿಸಿದರೆ ಜನಸಾಮಾನ್ಯರ ಕಾಳಜಿ ಬಗ್ಗೆ ಯಾರೂ ಗಮನ ಕೊಡದಿರುವುದನ್ನು ಇಂದು ಗಮನಿಸಬಹುದು."[೮]

೨.೧೫ ಕೃಷಿ ಪದ್ಧತಿ

ಪ್ರಕೃತಿ ಎಂಬುದು ಮಾನವನಿಗೆ ಉದಾರವಾಗಿ ದೊರೆತಿರುವ ನಿಧಿಯಾಗಿದೆ. ಮಾನವನ ನಾಗರಿಕತೆಯ ಪ್ರತಿ ಹಂತದಲ್ಲಿಯೂ ಪ್ರಕೃತಿಯೇ ಪ್ರಧಾನವಾಗಿದೆ. ಪ್ರಕೃತಿಯಿಂದ ಮಾನವ ಪಡೆದಿರುವ ಅಪೂರ್ವ ವರ 'ಭೂಮಿ'ಯಾಗಿದೆ. ಪ್ರಕೃತಿ ಮಾನವನಿಗೆ ನೀಡುವ ವಸ್ತು ಹಾಗೂ ಶಕ್ತಿಗಳಿಗೆ ಭೂಮಿ ಒಂದು ಮೂಲಾಧಾರ ನೆಲೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಮಾರ್ಷಲ್ ಹೇಳಿದ್ದಾರೆ. ಕೃಷಿಗೆ ಫಲವತ್ತಾದ ಭೂಮಿಯಲ್ಲಿ ಸಸ್ಯ ಸಂಪತ್ತನ್ನು ಸಾಗುವಳಿ ಮಾಡಿ 'ಅನ್ನ ಆಹಾರವನ್ನು ಉತ್ಪನ್ನ ಮಾಡಿ ಪಡೆಯುವುದೇ ಕೃಷಿ' ಆಗಿದೆ.

ಕೃಷಿಯ ಆರಂಭ ನಾಗರಿಕತೆಯಷ್ಟೇ ಪ್ರಾಚೀನವಾದುದು. ಮಾನವ ಜನಾಂಗದ ವಿಕಾಸದೊಂದಿಗೆ ಬೆಳೆದು ಬಂದುದೆಂದೂ ಮಾನವ ಕಂಡುಕೊಂಡ ಮೊದಲ ಕಸಬು ಎಂದೂ ಹೇಳಬಹುದು.

ಕೃಷಿ ವಿಶ್ವವ್ಯಾಪಕ ಉದ್ದಿಮೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಬಹುತೇಕ ಜನರಿಗೆ ಉದ್ಯೋಗ ಕಲ್ಪಿಸಿದೆ. ಜಗತ್ತಿನ ಪ್ರತಿಯೊಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಮಹತ್ವದ ಪಾತ್ರವಹಿಸಿದೆ. ಆದ್ದರಿಂದ ಕೃಷಿಯನ್ನು 'ರಾಷ್ಟ್ರದ ಕಣ್ಣು', 'ಬದುಕಿನ ಬೆನ್ನೆಲುಬು', 'ಜೀವನದೊಂದು ಕ್ರಮ' ಇತ್ಯಾದಿಯಾಗಿ ವರ್ಣಿಸಿದ್ದಾರೆ. ಭಾರತದಲ್ಲಂತೂ ಕೃಷಿ ಸಹಸ್ರಾರು ವರ್ಷಗಳಿಂದಲೂ ಪವಿತ್ರವಾದ ವೃತ್ತಿಯಾಗಿ ಬೆಳೆದುಕೊಂಡು ಬಂದಿದೆ. ಇಂದಿಗೂ ಕೃಷಿ ಭಾರತದ ಬಹುಸಂಖ್ಯಾತರ ಜೀವನಾಧಾರವಾದ ಮುಖ್ಯ ವೃತ್ತಿಯಾಗಿ ಮೊದಲಿಗಿಂತಲೂ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಇಂದು ಕೃಷಿ ಎಂದಿಗಿಂತಲೂ ಹೆಚ್ಚಿನ ಹೊಣೆಗಾರಿಕೆ ಮತ್ತು ಗೌರವಯುತವಾದ ವೃತ್ತಿಯಾಗಿ ಪರಿಣಮಿಸಿದೆ. ಕೃಷಿ ಹಿಂದಿನಂತೆ ಕೇವಲ ಸಂಪ್ರದಾಯಬದ್ಧ ಜೀವನ ಮಾರ್ಗದ ಕಸುಬಾಗಿರದೆ ಇಂದು ವಿಜ್ಞಾನದ ಹಾದಿಯಲ್ಲಿ ಭರದಿಂದ ಮುನ್ನುಗ್ಗುತ್ತಿರುವ ಕ್ರಾಂತಿಕಾರಿ ಉದ್ಯಮವಾಗಿದೆ.

ಪ್ರಾಚೀನ ಕಾಲದಲ್ಲಿ ಕೃಷಿಯ ಮೂಲ ಧ್ಯೇಯ ಬಹಳ ಸರಳವಾಗಿತ್ತು. ಆಗ ಕುಟುಂಬದ ಜನರ ನಿರ್ವಹಣೆಗಾಗಿ 'ಆಹಾರ'ವನ್ನು ಉತ್ಪಾದಿಸುವುದಕ್ಕಷ್ಟೇ ಕೃಷಿ ಸೀಮಿತವಾಗಿತ್ತು. ಆದರೆ ಇಂದು ಕೈಗಾರಿಕಾ ಕ್ರಾಂತಿ, ವಾಣಿಜ್ಯದ ಬೆಳವಣಿಗೆ ಮತ್ತು ಸಾರಿಗೆ ಸಂಪರ್ಕಗಳ ಅಭಿವೃದ್ಧಿಗಳಿಂದಾಗಿ ಕೃಷಿಯೂ 'ವಾಣಿಜ್ಯ'ವಾಗಿದೆ.

'ಸಹಕಾರಿ ರಂಗದ ಕಾಶಿ' ಎಂದೇ ಹೆಸರಾದ 'ಗದಗ' ಕೃಷಿ ಹಾಗೂ ಕೈಗಾರಿಕೆಯಲ್ಲಿ ತನ್ನದೇ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಕೃಷಿ ಗದಗ ಜಿಲ್ಲೆಯ ಜೀವನದ ಜೀವಾಳವಾಗಿದ್ದು ಅದರಿಂದ

ದೊರೆಯುವ ಪ್ರಯೋಜನಗಳು ಅಪಾರವಾಗಿದೆ. ಜನತೆಗೆ ಆಹಾರ, ಜಾನುವಾರುಗಳಿಗೆ ಮೇವು, ಕೈಗಾರಿಕೆ, ವ್ಯಾಪಾರ ಮತ್ತು ಸಾರಿಗೆ ರಂಗ ಇವುಗಳಿಗೆ ಕೃಷಿಯೇ ಮೂಲಾಧಾರವಾಗಿದೆ. ಉಳಿದ ಎಲ್ಲ ಉದ್ಯಮಗಳ ಪೂರಕ ಬೇಡಿಕೆಗಳನ್ನು ಕೃಷಿ ಒದಗಿಸುತ್ತದೆ. ಈ ದಿಸೆಯಲ್ಲಿ ತೃಣಮಾತ್ರ ಅಲಕ್ಷ್ಯವಾದರೂ ಕೃಷಿ ಉತ್ಪಾದನೆ ಮೇಲಷ್ಟೇ ಅಲ್ಲದೆ ಉಳಿದೆಲ್ಲ ಉದ್ಯಮಗಳ ಮೇಲೂ ಗಂಭೀರ ಪರಿಣಾಮ ಉಂಟಾಗುತ್ತದೆ. ಕೃಷಿಕ್ಷೇತ್ರದ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಅನೇಕ ದಿಕ್ಕುಗಳಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಸರ್ಕಾರದ ಈ ಪ್ರಯತ್ನಗಳಿಂದಾಗಿ ಕೃಷಿ ಅಭಿವೃದ್ಧಿಯ ಹಾದಿಯಲ್ಲಿ ಇಂದು ಬೆಳೆಯುತ್ತಿದೆ, ಕೊರತೆಯಲ್ಲೂ ಸಮೃದ್ಧಿ ಕಾಲಿಟ್ಟಿದೆ. ನೆಲ ಮತ್ತು ಶ್ರಮದೊಂದಿಗೆ ಬಂಡವಾಳ ಕೂಡಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದಾಗ ಕೃಷಿಯಲ್ಲಿ ಗೆಲುವು ಸಾಧಿಸಲು ಸಾಧ್ಯವಿದೆ. ಇತರ ಕ್ಷೇತ್ರಗಳಂತೆ ಕೃಷಿಕ್ಷೇತ್ರದಲ್ಲೂ ಬಂಡವಾಳದ ಪಾತ್ರ ಹಿರಿದಾಗಿದೆ.[೯]

ಗದಗ ಜಿಲ್ಲೆಯ ಒಟ್ಟು ದುಡಿಮೆಗಾರರಲ್ಲಿ ಶೇ. ೨.೧೬ರಷ್ಟು ಜನ ಕೃಷಿ ಅವಲಂಬಿಸಿದ್ದಾರೆ. ವೈವಿಧ್ಯಮಯವಾದ ಭೌಗೋಳಿಕ ಮತ್ತು ಹವಾಮಾನವನ್ನು ಹೊಂದಿರುವ ಗದಗ ಜಿಲ್ಲೆಯ ತಾಲ್ಲೂಕುಗಳು ಫಲವತ್ತಾದ ಕೆಂಪು ಮತ್ತು ಎರೆಮಣ್ಣಿನಿಂದ ಕೂಡಿವೆ. ಈ ಜಿಲ್ಲೆ ಹಿಂಗಾರು ಬೆಳೆಯ ಒಣ ಬೇಸಾಯ ವಲಯಕ್ಕೆ ಸೇರಿದೆ. ಶಿರಹಟ್ಟಿ ತಾಲ್ಲೂಕು ಮಾತ್ರ ಅರೆಮಲೆನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನಿಂದ ಕೂಡಿದೆ. ಇದು ನಿಶ್ಚಿತ ಮಳೆ ಬರುವ ಪ್ರದೇಶವಾಗಿರುವುದರಿಂದ ಮುಂಗಾರು ಪ್ರಧಾನ ವಲಯವಾಗಿದೆ. ಜಿಲ್ಲೆಯ ನೀರಾವರಿ ಪ್ರದೇಶದ ವಿಸ್ತೀರ್ಣ ೫೬,೪೪೦ ಹೆಕ್ಟೇರು ಅಂದರೆ ಶೇ. ೧೯.೫೮ರಷ್ಟಿದೆ. ಜೋಳ, ಹತ್ತಿ, ಮತ್ತು ಶೇಂಗಾ ಇಲ್ಲಿಯ ಮುಖ್ಯ ಬೆಳೆಗಳಾಗಿವೆ.

ಭೂಮಿ ಬಳಕೆ

* ಭೌಗೋಳಿಕ ವಿಸ್ತೀರ್ಣ	–	೪.೬೫.೭೧೫
* ಅರಣ್ಯಕ್ಷೇತ್ರ	–	೩೨೬೧೪ (೭.೦೦)
* ಸಾಗುವಳಿಗೆ ಲಭ್ಯವಿಲ್ಲದ ಭೂಮಿ	–	೨೧೮೪೧ (೪.೬೯)
* ಸಾಗುವಳಿ ಮಾಡದಿರುವ ಇತರೆ ಬೀಳು ಭೂಮಿ	–	೩೮೩೭ (೦.೮೨)
* ಬೀಳು ಭೂಮಿ	–	೧.೧೭೯೬೯ (೨೫.೩೩)
* ಬಿತ್ತನೆಯಾಗುವ ನಿವ್ವಳ ಪ್ರದೇಶ	–	೨.೮೮-೨೫೪ (೬೧.೮೯)
* ಹೆಚ್ಚುವರಿ ಬಿತ್ತನೆಯಾದ ಪ್ರದೇಶ	–	೩೭೧೧೪
* ಬಿತ್ತನೆಯಾದ ಭೂಪ್ರದೇಶ	–	೨೨೫೩೬೮
* ಬೆಳೆಸಾಂದ್ರತೆ	–	೧೭೨.೮೮

ಗದಗ ಜಿಲ್ಲೆಯ ಬೆಳೆ ಪದ್ಧತಿ

ಬೆಳೆಗಳು	ಬೆಳೆಗಳ ಪ್ರದೇಶ	ಶೇಕಡಾ ಪ್ರಮಾಣ
* ಭತ್ತ	೮೦೧	೦.೨೭
* ರಾಗಿ	೧೧೫	೦.೦೪
* ಜೋಳ	೧೧೬೨೯೩	೩೯.೨೯
* ಗೋಧಿ	೩೩೪೩೧	೧೧.೨೯
* ಏಕದಳ ಧಾನ್ಯಗಳು	೧೫೦೬೪೦	೫೦.೮೯
* ಕಡಲೆ	೧೩೦೮೨	೪.೪೨
* ದ್ವಿದಳ ಧಾನ್ಯಗಳು	೧೭೦೬೨	೫.೭೬
* ತೊಗರಿ	೩೯೮೦	೧.೩೪
* ಶೇಂಗಾ	೮೨೨೬೧	೨೭.೭೯
* ಕಬ್ಬು	೭೪	೦.೦೨
* ಹತ್ತಿ	೪೫೯೭೮	೧೫.೫೩
* ವಾಣಿಜ್ಯ ಬೆಳೆಗಳು	೧೨೮೩೧೨	೪೨.೩೪
ಒಟ್ಟು ಪ್ರದೇಶ	೨೯೬೦೧೫	೧೦೦-೦೦

೨.೧೬ ಜಾನಪದ

"ಕವಿರಾಜ ಮಾರ್ಗಕಾರ ತಿಳಿಸಿರುವ ತಿರುಳ್ಗನ್ನಡ ನಾಡಿನ ಭಾಗವನ್ನು ಒಳಗೊಂಡಿರುವ ಗದಗ ಜಿಲ್ಲೆ ಪ್ರಾಚೀನ ಕಾಲದಿಂದಲೂ ಮಹತ್ವವನ್ನು ಪಡೆದಿದೆ. ಈ ಪ್ರದೇಶದ ಜನಪದ ಪರಂಪರೆಯೂ ತುಂಬ ಪ್ರಾಚೀನವಾದುದು. ಕವಿರಾಜ ಮಾರ್ಗಕಾರನಿಂದ ಹಿಡಿದು ಪಂಪ, ರನ್ನ, ನಯಸೇನ, ದುರ್ಗಸಿಂಹ, ಶ್ರೀಧರಚಾರ್ಯ, ಕುಮಾರವ್ಯಾಸ, ಸುರಂಗ ಕವಿ ಮೊದಲಾದ ಆಧುನಿಕ ಪೂರ್ವ ಪ್ರಸಿದ್ಧ ಈ ನೆಲದ ಕವಿಗಳು ನೆಲದ ಜನವಾಣಿಯನ್ನು ಸಮರ್ಥವಾಗಿ ಬೆಳಸಿಕೊಂಡು ಚಿರಂತನವಾದ ಕವಿವಾಣಿಯನ್ನಾಗಿ ಪರಿವರ್ತಿಸಿ ಸಹಕರಿಸಿದ್ದಾರೆ."[೧೦]

ಧಾರವಾಡ ಜಿಲ್ಲೆಯಿಂದ ಗದಗ ಪ್ರತ್ಯೇಕಗೊಂಡ ನಂತರ ಜನಪದ ಕಲೆಗಳ ದೃಷ್ಟಿಯಿಂದ ಹೆಸರುವಾಸಿಯಾಗಿದೆ. ಎಂದೇ ಹೇಳಬೇಕು. ಗದಗ ಜಿಲ್ಲೆಯಲ್ಲಿ ಗದಗ, ರೋಣ, ಶಿರಹಟ್ಟಿ, ನರಗುಂದ, ಮುಂಡರಗಿ ತಾಲ್ಲೂಕುಗಳು ಸಮಾವೇಶವಾಗಿವೆ. ಗದಗ ಮತ್ತು ರೋಣ ತಾಲ್ಲೂಕುಗಳಂತೂ ಜನಪದ ಕಲೆಗಳಿಂದ ಸಂಪತ್‌ಭರಿತವಾಗಿವೆ. ಗದಗ ತಾಲೂಕಿನಲ್ಲಿ ದೊಡ್ಡಾಟದ ಕಲಾವಿದರು ಬಹು ಸಂಖ್ಯೆಯಲ್ಲಿದ್ದಾರೆ. ಗೀಗೀಪದ, ತೊಗಲುಗೊಂಬೆ ಆಟಗಳು ಪ್ರಸಿದ್ಧವಿವೆ. ಬಿಂಕದಕಟ್ಟಿಯ ತೊಗಲು

ಗೊಂಬೆಯಾಟದ ವಿರೂಪಾಕ್ಷ ಕ್ಷತ್ರಿಯವರು ತಮ್ಮ ತೊಗಲುಗೊಂಬೆ ಆಟವನ್ನು ಯುರೋಪಿಯನಾದ್ಯಾಂತ ಪ್ರದರ್ಶಿಸಿ ಬಂದಿದ್ದಾರೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಕಣಿ ವಾದನದವರು, ವೀರಗಾಸೆ, ಮರವಂತಿಕೆ ಮೇಳದವರು, ಸೋಬಾನೆ ಹಾಡುವವರು, ಲಾವಣಿ-ಗೀಗೀ ಮೇಳದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ರೋಣ ತಾಲೂಕಿನಲ್ಲಿ ತತ್ವಪದ, ಗೀಗೀಪದ, ಭಜನೆ ಹಾಡುಗಳು, ಸೋಬಾನೆ ಹಾಡುಗಳು, ರಿವಾಯತ ಹಾಡುಗಳನ್ನು ಹಾಡುವರಲ್ಲದೆ, ದೊಡ್ಡಾಟ. ಕೋಲಾಟ ಡೊಳ್ಳು ಮೇಳದವರು. ಕರಡಿ ಮಜಲು, ಕಣಿ ವಾದನ ನುಡಿಸುವವರು ಕಂಡುಬರುತ್ತಾರೆ. ರೋಣ ತಾಲೂಕಿನ ಶಂಕ್ರಣ್ಣ ಸಂಕಣ್ಣವರು ರಾಜ್ಯ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಡೋಣಿಯ ನೀಲಪ್ಪನ ತೋಟಗಂಟೆಯವರು ಗೊರವ ನೃತ್ಯಕ್ಕೆ ಪ್ರಸಿದ್ಧಿಯಾಗಿದ್ದಾರೆ. ಅಡವಿ ಸೋಮಾಪುರದ ಅಂಗಡಿ ಮನೆತನ ಗೀಗಿ ಪದಕ್ಕೆ ಹೆಸರಾಗಿದೆ. ನರಗುಂದ ತಾಲೂಕಿನಲ್ಲಿ ಬಯಲಾಟ, ಹೆಜ್ಜೆ ಮೇಳಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ನರಗುಂದದ ಮಾನೆಕರಡೆ ಕೋಲಾಟಕ್ಕೆ ಪ್ರಸಿದ್ಧವಾಗಿದೆ. ಮುಂಡರಗಿ ತಾಲೂಕಿನಲ್ಲಿ ಗೀಗೀ ಪದ, ಚೌಡಕಿಪದ, ರಿವಾಯತ ಪದ, ಡೊಳ್ಳಿನ ಪದ ಹಾಡುವರಿದ್ದಾರೆ. ದೊಡ್ಡಾಟ, ವೀರಗಾಸೆ, ಹಗಲುವೇಷ ಮುಂತಾದ ಜನಪದ ಕಲಾ ಪ್ರಕಾರಗಳು ಅಸ್ತಿತ್ವದಲ್ಲಿವೆ. ಮುಂಡರಗಿಯ ಸಂಗಪ್ಪ ಕಲೆಗಾರ ಇವರ ಗಂಟಾತರಂಗ ವಿಶಿಷ್ಟವಾದ ಕಲೆಯಾಗಿದೆ. ಮುಂಡರಗಿ ತಾಲೂಕಿನ ದಾಂಬವೆಪ್ಪ ಜಂಪಲೆಪ್ಪ ಲಮಾಣಿ ದೊಡ್ಡಾಟದ ಕಲೆಗಾರರಾಗಿದ್ದು ರಾಜ್ಯಪ್ರಶಸ್ತಿ ಪಡೆದುಕೊಂಡಿದ್ದಾರೆ.

ಗದಗ ಜಿಲ್ಲೆ ಶಿಲ್ಪ-ಸಂಗೀತ, ಸಾಹಿತ್ಯಗಳಿಗೂ ಹೆಸರಾಗಿದೆ. ಅನೇಕ ಪ್ರತಿಭಾವಂತ ಕಲಾವಿದರನ್ನು ನಾಡಿಗೆ ನೀಡಿದೆ. ಗದಗ ಜಿಲ್ಲೆಯ ಪರಂಪರಾಗತ ಜನಪದ ಕಲೆ ಸಂಪದ್ಭರಿತವಾಗಿದೆ. ಅದು ಇಲ್ಲಿರುವ ಶಿಲ್ಪ-ಸಂಗೀತ, ಮುಂತಾದ ಶಿಲ್ಪಕಲೆಗಳ ಮೇಲೆ ಪರಿಣಾಮ ಬೀರಿದ್ದು ಅವುಗಳ ಅಧ್ಯಯನ ವಿಶೇಷವಾಗಿ ನಡೆಯಬೇಕಾಗಿದೆ. ಜೊತೆಗೆ ವಿಶೇಷ ಪ್ರೋತ್ಸಾಹದಿಂದ ಕಲೆ ಮತ್ತು ಕಲಾವಿದರ ಪೋಷಣೆ ಮಾಡಬೇಕಾದ ಅವಶ್ಯಕತೆ ಇದೆ.[೧೧]

ಭೌಗೋಳಿಕ ಪರಿಸರವು ಮಾನವ ಸಮುದಾಯದ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ. ಪರಿಸರ ಪ್ರಭಾವದಿಂದ ಸಮುದಾಯದ ಸಂಸ್ಕೃತಿ ರೂಪುಗೊಳ್ಳುತ್ತದೆ. ಛಲವಾದಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುವುದರಿಂದ ಹೆಚ್ಚಾಗಿ ಕೃಷಿ ಕೆಲಸಗಳ ಮೇಲೆ ಅವಲಂಬಿತರಿರುವುದರಿಂದ ಅವರ ಜೀವನ ಮುಕ್ತವಾಗಿ ಕೃಷಿ ಕ್ಷೇತ್ರದ ಮೇಲೆ ಅವಲಂಬಿತವಾಗಿದೆ. ಭೌಗೋಳಿಕ ಅಂಶಗಳು ಮನುಷ್ಯನಿಗೆ ಸಾಕಷ್ಟು ವರದಾನವಾಗಿವೆ. ಆದರೆ ಕೆಲವೊಮ್ಮೆ ಅನಾನುಕೂಲತೆಯನ್ನು ಮಾಡುತ್ತವೆ. ಹೀಗಾಗಿ ಇವರ ಜನಜೀವನದ ಮೇಲೆ ತುಂಬಾ ಪರಿಣಾಮಗಳನ್ನುಂಟುಮಾಡಿವೆ. ಇಲ್ಲಿ ಸಂಭವಿಸುವ ಮಹಾ ಪ್ರವಾಹದಿಂದ ನಾನಾ ರೀತಿ ತೊಂದರೆಗಳು

ಅನುಭವಿಸುತ್ತಿದ್ದಾರೆ. ಈ ಸಮುದಾಯದವರ ಗದಗ ಜಿಲ್ಲೆ ವಿವಿಧ ಕ್ಷೇತ್ರಗಳ ಐತಿಹಾಸಿಕ ದಾಖಲೆಗಳಲ್ಲಿ, ಸಾಹಿತ್ಯಗಳಲ್ಲಿ, ಶಾಸನಗಳಲ್ಲಿ, ಕಲಾಕ್ಷೇತ್ರಗಳಲ್ಲಿ, ರಾಜಕೀಯದಲ್ಲಿ ಈ ಸಮುದಾಯದ ದಾಖಲೆ ತುಂಬಾ ಕಡಿಮೆ ಇದೆ. ಜಿಲ್ಲೆಯಾದ್ಯಂತ ಹರಡಿರುವ ಛಲವಾದಿ ಸಮುದಾಯದವರು ತಮಗೆ ಅನುಕೂಲಕ್ಕೆ ತಕ್ಕಂತೆ ಕೆಲವೊಂದು ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಆದರೆ ಹೆಚ್ಚು ಜನರ ಮುಖ್ಯ ಕಸಬು ಕೃಷಿಯಾಗಿದೆ. ಕೃಷಿಕರಾಗಿ, ಕೂಲಿಕಾರ್ಮಿಕರಾಗಿ ಬದುಕನ್ನು ಕಟ್ಟಿಕೊಂಡು ಇವರಲ್ಲಿ ಹಲವು ಜನರು ಜನಪದಿಯ ಕಲೆಗಾರರಾಗಿದ್ದಾರೆ. ಹೀಗಾಗಿ ಗದಗ ಜಿಲ್ಲೆಯ ಭೌಗೋಳಿಕ ಪರಿಸರವು ವಿವಿಧತೆಯಲ್ಲಿ ಏಕತೆ ಎಂಬಂತೆ ಮಹತ್ವದ ಅಂಶಗಳನ್ನು ಒಳಗೊಂಡಿದೆ.

ಅಡಿಟಿಪ್ಪಣಿಗಳು

೧) ಗದಗ ಜಿಲ್ಲೆಯ ಅಂಕಿ-ಅಂಶಗಳ ನೋಟ

೨) ಆರ್. ಗೋಪಾಲ, (ಸಂ.) ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು-೧೬೩.

೩) ಟಿ. ಆರ್. ಚಂದ್ರಶೇಖರ, (ಸಂ.), ಗದಗ ಜಿಲ್ಲೆಯ ಅಭಿವೃದ್ಧಿ, ಪು.೨೪

೪) ಡಾ.ಆರ್.ಗೋಪಾಲ, (ಸಂ.), ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ-೮, ೯.

೫) ಅದೇ ಪುಟ-೬೨.

೬) ಅದೇ ಪುಟ-೬೮

೭) ಅದೇ ಪುಟ-೭೮, ೮೩.

೮) ಅದೇ ಪುಟ-೧೨೫.

೯) ಅದೇ ಪುಟ-೧೭೯.

೧೦) ಅದೇ ಪುಟ-೪೩೦.

೧೧) ಅದೇ ಪುಟ-೪೩೧.

ಅಧ್ಯಾಯ – ೩

ಛಲವಾದಿ ಸಮುದಾಯದ ಹಿನ್ನಲೆ

೩.೬ ಕರ್ನಾಟಕ ರಾಜ್ಯ

- ೩.೬.೧ ರಾಜಕೀಯ ರಂಗ
- ೩.೬.೨ ಪತ್ರಿಕಾರಂಗ
- ೩.೬.೩ ಕುಸ್ತಿ ಮತ್ತು ಇತರೆ ಕ್ರೀಡೆಗಳು
- ೩.೬.೪ ಚಲನಚಿತ್ರ

೩.೭ ಆಂಧ್ರಪ್ರದೇಶ ರಾಜ್ಯ

- ೩.೭.೧ ಪ್ರಾಚೀನ ವಿದ್ವಾಂಸರು
- ೩.೭.೨ ಸಾಮಾಜಿಕ ಸುಧಾರಕರು
- ೩.೭.೩ ಸಾಮಾಜಿಕ ಸೇವೆ ಕ್ಷೇತ್ರ
- ೩.೭.೪ ಚಿತ್ರಕಲೆ
- ೩.೭.೫ ಸಾಹಿತ್ಯ ಕ್ಷೇತ್ರ
- ೩.೭.೬ ರಾಜಕೀಯ ಕ್ಷೇತ್ರ
- ೩.೭.೭ ಆಡಳಿತ ಕ್ಷೇತ್ರ
- ೩.೭.೮ ನ್ಯಾಯಾಂಗ ಕ್ಷೇತ್ರ
- ೩.೭.೯ ಆಯ್. ಎ. ಎಸ್. ಅಧಿಕಾರಿಗಳು

ಅಧ್ಯಾಯ – ೩

ಸಮುದಾಯದ ಹಿನ್ನೆಲೆ

ಕರ್ನಾಟಕದ ಛಲವಾದಿ ಸಮುದಾಯದ ಬಗೆಗೆ ಸಾಹಿತ್ಯಿಕ, ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯಲ್ಲಿ ಅನೇಕ ವಿಚಾರಗಳು ಪ್ರಸ್ತಾಪವಾಗಿವೆ. ಛಲವಾದಿ ಎನ್ನುವುದು ಪರ್ಯಾಯ ಜಾತಿಯ ಹೆಸರು. ಮೂಲ ಜಾತಿಸೂಚಕ ಹೆಸರಾದ 'ಹೊಲೆಯ' ಪದ ಕುರಿತು ಈ ಸಂದರ್ಭದಲ್ಲಿ ಚರ್ಚಿಸಬೇಕಾಗಿದೆ. ಇದುವರೆಗೂ ವಿದ್ವಾಂಸರೆಲ್ಲ 'ಹೊಲೆಯ' ಹೆಸರಿನ ಮೂಲ ಶೋಧಿಸುವ ಮೂಲಕವೆ ಜಾತಿಯ ಪ್ರಾಚೀನತೆ ಮತ್ತು ಅರ್ಥವನ್ನು ಸೂಚಿಸಲು ಪ್ರಯತ್ನಿಸಿರುವರು. ಈ ಅಧ್ಯಯನದ ಆರಂಭದಲ್ಲಿ ಛಲವಾದಿ ಮತ್ತು ಜಾತಿಸೂಚಕ ಮೂಲ ಹೆಸರಾದ 'ಹೊಲೆಯ' ಪದದ ಮೂಲಕವೆ ಅದರ ಪ್ರಾಚೀನತೆ ಮತ್ತು ಅರ್ಥ ವಿಶೇಶತೆಯನ್ನು ಪಡೆಯಲು ಪ್ರಯತ್ನಿಸಲಾಗಿದೆ.

ಭಾರತ ದೇಶದಲ್ಲಿ ಯಾವುದೇ ಮೂಲೆಯಲ್ಲಿರುವ ಅಸ್ಪೃಶ್ಯ ಸಮುದಾಯದ ಬಹುತೇಕ ಸಮಸ್ಯೆಗಳು, ಜೀವನ ವಿಧಾನ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳು ಹೆಚ್ಚು ಕಡಿಮೆ ಒಂದೇ ತೆರನಾಗಿರಬಲ್ಲದು. ದಕ್ಷಿಣ ಭಾರತದ ಮಟ್ಟದಲ್ಲಿ ಇನ್ನಷ್ಟು ಹೆಚ್ಚಿನ ಸಾಮ್ಯತೆ ಕಾಣಬಹುದು. ಈ ಬಗೆಯಲ್ಲಿ ವ್ಯಾಪಕವೂ ವಿಸ್ತಾರವೂ ಆದ ಅಧ್ಯಯನದ ಹೊರತಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಛಲವಾದಿ ಸಮುದಾಯದ ಅಭಿವೃದ್ಧಿ, ಜೀವನ ವಿಧಾನ, ಸಂಸ್ಕೃತಿಯಂತಹ ಭಿನ್ನ ವಿಷಯ ಕುರಿತು ಅಭ್ಯಾಸ ಮಾಡಿದಾಗ ಅನೇಕ ರೀತಿಯ ಸೂಕ್ಷ್ಮವ್ಯತ್ಯಾಸಗಳು ಕಂಡು ಬರುವುದು ಸಹಜವೂ ಸಾಧ್ಯವೂ ಇದೆ. ಈ ಮಾತು ಗದಗ ಜಿಲ್ಲೆಯ ಮಟ್ಟಿಗೆ ಇನ್ನಷ್ಟು ಸತ್ಯ. ಈ ಹಿನ್ನೆಲೆಯಲ್ಲಿ ಇದುವರೆಗೆ ಅಸ್ಪೃಶ್ಯ ಸಮುದಾಯಗಳ ಬಗ್ಗೆ ನಡೆದಿರುವ ಅಧ್ಯಯನಗಳ ಲಾಭ ಗದಗ ಜಿಲ್ಲೆಯ ಛಲವಾದಿ ಸಮುದಾಯಕ್ಕೂ ಅನ್ವಯವಾಗುವಂತಹದೆ ಆಗಿದೆ. ಇಂತಹ ಸಾಮಾನ್ಯ ಅಂಶಗಳಿಗೆ ಹೊರತಾಗಿ ಗದಗ ಜಿಲ್ಲೆಯ ಛಲವಾದಿ ಸಮುದಾಯದ ವಿಶೇಷವಾದ ಅಂಶಗಳಿಗೆ ಪ್ರಸ್ತುತ ಅಧ್ಯಯನದಲ್ಲಿ ಮಹತ್ವ ಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ 'ಛಲವಾದಿ' ಸಮುದಾಯ ರಾಜ ಪ್ರಭುತ್ವದ ಕಾಲದಿಂದಲೂ ಆಡಳಿತದೊಂದಿಗೆ ಗುರುತಿಸಿಕೊಂಡು ಕಹಳೆಯವರಾಗಿ ಜೀವನ ನಡೆಸಿದ್ದು ಕಂಡು ಬರುತ್ತದೆ. ರಾಜ್ಯ ರಕ್ಷಿಸುವ ಸೈನಿಕರಿಗೆ ಮುನ್ನೆಚ್ಚರಿಕೆ ನೀಡುವ ಕೆಲಸ ಈ ಸಮುದಾಯದವರಾಗಿತ್ತು. ಇದು ಬೇರಾವ ಸಮುದಾಯದ ಸಂಸ್ಕೃತಿಗಿಂತ ಭಿನ್ನವಾಗಿದ್ದು, ಕೆಲವು ವಿಭಿನ್ನ ಆಚಾರ ಪದ್ಧತಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ಹೊಲೆಯ, ಛಲವಾದಿ, ಆದಿದ್ರಾವಿಡ, ಎಂಬೆಲ್ಲ ಹೆಸರುಗಳಿಂದ ಕರೆಯಿಸಿಕೊಳ್ಳುವ ಈ ಸಮುದಾಯ ಒಂದು ಕಾಲದಲ್ಲಿ ರಾಜ್ಯವನ್ನಾಳುತ್ತಿದ್ದ ರಾಜಪ್ರಭುಗಳಿಗೆ ಸೇವೆ ಸಲ್ಲಿಸುತ್ತಿದ್ದುದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ.

ಯಾವುದೇ ಸಮುದಾಯ ಇಡೀ ಮಾನವ ಕುಲಕ್ಕೆ ತನ್ನದೇ ಆದ ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆ ನೀಡಿರುವಂತೆ ಛಲವಾದಿ ಸಮುದಾಯವೂ ತನ್ನ ಕೊಡುಗೆ ನೀಡಿದೆ. ಸಮುದಾಯಗಳು ನಿಂತ

ನೀರಿನಂತಿರದೆ ಸದಾ ಪರಿವರ್ತನಶೀಲವಾದುದು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಬಯಸುತ್ತಿದೆ. ಆಧುನಿಕ ಕಾಲದಲ್ಲಿ ಆಧುನೀಕರಣದ ಪ್ರಭಾವಕ್ಕೆ ಒಳಗಾಗಿ ಇಂದು ಈ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢಗೊಂಡು ನೆಲೆ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಭಾರತೀಯ ಸಮಾಜ ಅನೇಕ ಸಂಸ್ಕೃತಿಗಳನ್ನು ಒಳಗೊಂಡ ಒಂದು ಬಹುದೊಡ್ಡ ಸಮಾಜವಾಗಿದೆ. ವಿವಿಧ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಸಮ್ಮಿಶ್ರದಿಂದ ಇಡೀ ಪ್ರಪಂಚಕ್ಕೆ ತನ್ನದೇ ಕೊಡುಗೆ ನೀಡಿದೆ. ಸಹಜವಾಗಿ ಇಲ್ಲಿ ಹಲವಾರು ಸಮುದಾಯಗಳು ವಾಸಿಸುತ್ತಿದ್ದು, ಆ ಎಲ್ಲ ಸಮುದಾಯಗಳು ತಮ್ಮದೇ ಆದ ಪಾರಂಪರಿಕ ಪದ್ಧತಿಗಳು, ಸಂಪ್ರದಾಯ ಆಚರಣೆಗಳನ್ನು ಹೊಂದಿರುವುದು ಕಾಣುತ್ತೇವೆ. ಇತಿಹಾಸಕಾರರು ಇಡೀ ಭಾರತ ಮುಖ್ಯವಾಗಿ ಎರಡು ರೀತಿಯ ಸಂಸ್ಕೃತಿಗಳನ್ನು ಹೊಂದಿದೆ ಎಂದು ತಿಳಿಸುತ್ತಾರೆ. ಅವೆಂದರೆ, ಆರ್ಯ ಸಂಸ್ಕೃತಿ ಮತ್ತು ದ್ರಾವಿಡ ಸಂಸ್ಕೃತಿ. ಈ ಎರಡೂ ಸಂಸ್ಕೃತಿಗಳು ಪರಸ್ಪರ ಎಲ್ಲಾ ವಿಚಾರಗಳಲ್ಲಿ ಭಿನ್ನವಾಗಿದ್ದರೂ ಅವು ಇಡೀ ಭಾರತವನ್ನು ಬಿಂಬಿಸುತ್ತವೆ. ಪರಕೀಯ ಮೂಲದ ಸಂಸ್ಕೃತಿಯನ್ನು 'ಆರ್ಯ ಸಂಸ್ಕೃತಿ' ಎಂದು ಕರೆದರೆ, ದೇಶೀಯ ಸಂಸ್ಕೃತಿಯನ್ನು 'ದ್ರಾವಿಡ ಸಂಸ್ಕೃತಿ' ಎಂದು ಹೆಸರಿಸಲಾಗಿದೆ. ಶ್ರೀಮಂತ ದ್ರಾವಿಡ ಸಂಸ್ಕೃತಿಯೇ ಭಾರತ ದೇಶದ ಮೂಲ ಸಂಸ್ಕೃತಿಯ ಜೀವಾಳ ಎನ್ನಬಹುದು. ದ್ರಾವಿಡ ಸಂಸ್ಕೃತಿಯಲ್ಲಿ ಅನೇಕ ಉಪಸಂಸ್ಕೃತಿಗಳು ಸೇರಿಕೊಂಡಿವೆ. ದ್ರಾವಿಡರಿಗೂ ಆರ್ಯರಿಗೂ ಪರಸ್ಪರ ಕೊಡುಕೊಳ್ಳುವ ಸಂಬಂಧವಿದ್ದು ಎರಡೂ ಸಂಸ್ಕೃತಿಗಳನ್ನು ಒಂದುಗೂಡಿಸುವ ಕೆಲಸ ಸಾಗಿದೆ. ಇತಿಹಾಸಿಕಾರರ ಪ್ರಕಾರ ಸಿಂಧೂ ನದಿಯ ತೀರದಿಂದ ಹುಟ್ಟಿಕೊಂಡ ಸಂಸ್ಕೃತಿ ಸಿಂಧೂ ಅಥವಾ ಹಿಂದೂ ಸಂಸ್ಕೃತಿಯಾಗಿದೆ. ಒಟ್ಟಾರೆ ಭಾರತಕ್ಕೆ ಒಂದೇ ಸಂಸ್ಕೃತಿ, ಅದುವೇ ಭಾರತೀಯ ಹಿಂದೂ ಸಂಸ್ಕೃತಿ ಎಂದು ಹೇಳುತ್ತಾರೆ.

ಯಾವುದೇ ಒಂದನ್ನು ರಾಷ್ಟ್ರದ-ರಾಜ್ಯದ-ಸಮುದಾಯದ ಸಂಸ್ಕೃತಿಯೆಂದು ಹೇಳುವದು ಅಷ್ಟೊಂದು ಸುಲಭವಲ್ಲ. ಒಂದು ಸಮುದಾಯದ ಎಲ್ಲ ರೀತಿ-ನೀತಿಗಳನ್ನು ಅರಿಯಲು ಅದರ ಮೂಲವನ್ನು ಹುಡುಕಬೇಕು. ಮಾನವನ ಇತಿಹಾಸ-ಪ್ರಾಚೀನತೆ ತಿಳಿಯಬೇಕೆಂದರೆ ಆದಿಮಾನವನ ಉಗಮವನ್ನು ಪರಿಶೀಲಿಸಿ ನೋಡುವ ಹಾಗೆ ಒಂದು ಸಮುದಾಯದ ಸಮಗ್ರ ವಿಷಯ ತಿಳಿಯಲು ಅಗತ್ಯವಾದ ಮೂಲವನ್ನು ನೋಡಬೇಕಾಗುತ್ತದೆ. ಹಾಗೆಯೇ ಭಾರತದ ಸಂಸ್ಕೃತಿಯನ್ನೂ ಅರಿತುಕೊಳ್ಳಬೇಕು. ಸಿಂಧೂ ನದಿ ತೀರದಿಂದ ಭಾರತದ ದಕ್ಷಿಣದ ಕಡೆಗೆ ವಲಸೆ ಬಂದು ಫಲವತ್ತಾದ ಪ್ರದೇಶದಲ್ಲಿ ನೆಲೆಯೂರಿ ಅಲ್ಲಿಂದ ಗುಂಪಾಗಿ-ಸಮುದಾಯವಾಗಿ ಜೀವಿಸತೊಡಗಿದರು. ಉತ್ತರ ಭಾರತದವರು ದ್ರಾವಿಡರ ಸಂಪತ್ತನ್ನು ಲೂಟಿ ಮಾಡಲು ದರೋಡೆಕೋರರಾಗಿ ಬಂದರೆಂದು ಕೆಲವು ಕೃತಿಗಳು ಉಲ್ಲೇಖಿಸಿವೆ. ದ್ರಾವಿಡರ ಪದ್ಧತಿ-ಆಚಾರ-ವಿಚಾರಗಳಿಗೆ ಮನಸೋತು ಪರಸ್ಪರ ಕೊಡುಕೊಳ್ಳುವಿಕೆ ಸಂಬಂಧ ಏರ್ಪಡಿಸಿಕೊಂಡರು. ಹೀಗೆ ಪ್ರಾರಂಭವಾದ ಈ ಸಂಬಂಧ ದೊಡ್ಡ ಹೆಮ್ಮರವಾಗಿ ಬೆಳೆದು ರಾಷ್ಟ್ರವೊಂದು ಹುಟ್ಟಿಕೊಳ್ಳಲು ಕಾರಣವಾಯಿತು. ಆನಂತರ ನೂರಾರು ವರ್ಷಗಳ

ರಾಜ ಮನೆತನಗಳ ಆಳ್ವಿಕೆಯಲ್ಲಿ ಸ್ವಕೀಯ ಮತ್ತು ಪರಕೀಯ ದಾಳಿಗಳಿಂದ ನುಚ್ಚುನೂರಾಗಿ ಮತ್ತೆ ಮತ್ತೆ ಏಳುತ್ತ ಬೀಳುತ್ತ ಒಂದು ನಿರ್ದಿಷ್ಟ ರಾಷ್ಟ್ರವಾಗಿ ನೆಲೆಯೂರಿ ನಿಂತಿತು.

ಭಾರತೀಯ ಸಮಾಜದಲ್ಲಿ ಉಚ್ಚ-ನೀಚ ಸಮುದಾಯಗಳೆಂದು ಪರಿಭಾವಿಸಿದೆ. ಉತ್ತಮ ಕೆಲಸ ಮಾಡುವರೆಲ್ಲರೂ ಉಚ್ಚ ಕುಲದವರು, ತೀರ ಕೆಳಮಟ್ಟದ ಕೆಲಸ ಮಾಡುವವರು ನೀಚರೆಂಬ ಚಿಂತನೆ ಭಾರತೀಯ ಸಂಸ್ಕೃತಿಯಲ್ಲಿ ನೆಲೆ ನಿಂತಿದೆ. ಅನೇಕ ಬುಡಕಟ್ಟು ಸಮುದಾಯಗಳು ತಮ್ಮದೇ ನಿರ್ದಿಷ್ಟ ಪ್ರದೇಶವನ್ನು ಗುರುತಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡು ಜೀವನ ಸಾಗಿಸುತ್ತಿವೆ. ಈ ಎಲ್ಲ ವಿಭಿನ್ನ ಸಂಸ್ಕೃತಿಯ ಜನತೆ ಇಡೀ ಭಾರತೀಯ ಸಮಾಜದಲ್ಲಿ ನಿರ್ದೇಶಿಸುತ್ತ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಛಲವಾದಿ ಸಮುದಾಯ ಭಾರತೀಯ ಸಮಾಜದಲ್ಲಿ ನಾನಾ ಹೆಸರುಗಳಿಂದ ಕರೆಯಿಸಿಕೊಳ್ಳುವ ಒಂದು ತಳವರ್ಗದ ಸಮುದಾಯವಾಗಿದೆ. ಅನಾದಿಕಾಲದಿಂದಲೂ ಮೇಲ್ವರ್ಗದವರಿಂದ ಈ ಕೆಳವರ್ಗ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ಅನುಭವಿಸುತ್ತಲೆ ಬಂದಿದೆ. ಇದಕ್ಕೆ ಪೂರಕವಾಗಿ ಪುರೋಹಿತಶಾಹಿವರ್ಗ ಮತ್ತು ಆಡಳಿತವರ್ಗ ವರ್ಣಭೇದವನ್ನು-ಜಾತಿ ಭೇದವನ್ನು ಕಟ್ಟುನಿಟ್ಟಾಗಿ ರೂಢಿಸಿಕೊಂಡು ಬಂದು ಕೆಳಮಟ್ಟದ ಜನರನ್ನು ನಿರಂತರವಾಗಿ ತುಳಿಯುತ್ತಲೆ ಇದೆ. ಹೀಗಾಗಿ ಶೋಷಣೆ ಎನ್ನುವುದು ಇಲ್ಲಿ ಆಳವಾಗಿ ಬೇರೂರಿದೆ. ಸಮಾಜದ ಎಲ್ಲ ಅವಕಾಶಗಳನ್ನು ಮೇಲ್ವರ್ಗದವರು ಪಡೆದರೆ, ಕೆಳವರ್ಗದವರು ಸದಾ ಅವಕಾಶ ವಂಚಿತರಾಗಿ ಅಮಾನವೀಯವಾಗಿ ಬದುಕಿರುವುದನ್ನು ಕಾಣುತ್ತೇವೆ. ಹೀಗಾಗಿ ಈ ಕೆಳಸಮುದಾಯಗಳು ಮುಖ್ಯ ವಾಹಿನಿಗೆ ಬಾರದೆ ಇರುವ ಸ್ಥಿತಿಯಲ್ಲೇ ಹೊರಳಾಡುವ ಸ್ಥಿತಿ ಕಂಡುಬರುತ್ತದೆ.

ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಉಚ್ಚ-ನೀಚ, ಮೇಲು-ಕೀಳು, ಕರಿಯ-ಬಿಳಿಯ ಮುಂತಾದ ತಾರತಮ್ಯಗಳು ಇರುವುದನ್ನು ಕಾಣುತ್ತೇವೆ. ಕೆಲವು ರಾಷ್ಟ್ರಗಳಲ್ಲಿ ಕೇವಲ ಎರಡು ರೀತಿಯ ವರ್ಗಗಳು ಕಂಡುಬಂದರೆ ಇನ್ನೂ ಕೆಲವು ರಾಷ್ಟ್ರಗಳಲ್ಲಿ ಅನೇಕ ರೀತಿಯ ವರ್ಗಗಳು ಕಾಣುತ್ತೇವೆ. ಇದಕ್ಕೆ ಉತ್ತಮ ಉದಾಹರಣೆ ಭಾರತವೇ ಆಗಿದೆ. ತಲೆತಲಾಂತರದಿಂದ ವರ್ಣಭೇದ ನೀತಿಯನ್ನು ಅನುಸರಿಸಿಕೊಂಡು ಬಂದ ಭಾರತದಲ್ಲಿ ನಂತರ ವಿಭಿನ್ನ ವರ್ಗ-ಜನಾಂಗಗಳು ಸೃಷ್ಟಿಯಾಗಿ ಇನ್ನೂ ಹೆಚ್ಚು ಶ್ರೇಣೀಕರಣ ಮತ್ತು ತಾರತಮ್ಯತೆ ಬೆಳೆಯಿತು. ಭಾರತದಲ್ಲಿ ಜಾತೀಯತೆ ಮನುಷ್ಯನ ದೇಹಕ್ಕಂಟಿಕೊಂಡಿರುವ ಚರ್ಮದಂತೆ ಅದರಿಂದ ಮುಕ್ತವಾಗಲು ಅವಕಾಶವೆ ಇಲ್ಲದಂತೆ ಬಹುದೊಡ್ಡ ಹೆಮ್ಮರವಾಗಿ ಬೆಳೆದು ನಿಂತಿದೆ. ಭಾರತ ವಸಾಹತುಶಾಹಿ, ಬಂಡವಾಳಶಾಹಿ, ಆಧುನೀಕರಣ, ಹೈಟೆಕ್ ಸಂಸ್ಕೃತಿಯಿಂದ ಬದಲಾವಣೆಗೆ ಒಳಪಟ್ಟಿದ್ದರೂ ಜಾತೀಯತೆಯಿಂದ ಬಂಧಮುಕ್ತವಾಗುವ ಯಾವುದೆ ದಾರಿ ಇನ್ನೂ ತೆರೆದುಕೊಳ್ಳದಿರುವುದು ವಿಪರ್ಯಾಸದ ಸಂಗತಿಯಾಗಿದೆ. 'ದಲಿತ'ರ ಬಗ್ಗೆ ಶಿಷ್ಟ ಜನರಲ್ಲಿ ಒಂದು ರೀತಿಯ ಅಸೂಯೆ ಮತ್ತು ತಾತ್ಸಾರ ಭಾವನೆ ಮೂಡುತ್ತದೆ. ಶಿಷ್ಟರ ಕಣ್ಣಿನಲ್ಲಿ ದಲಿತರು-ಅಸ್ಪೃಶ್ಯರು ಇನ್ನೂ

ಮನುಷ್ಯರಂತೆಯೆ ಕಾಣುವುದಿಲ್ಲ. ಅವರನ್ನು ಮನುಷ್ಯ ರೂಪಿ ಪ್ರಾಣಿಗಳು ಅಥವಾ ಉಸಿರಾಡುತ್ತಿರುವ ವಸ್ತುಗಳು ಎಂದೇ ಶಿಷ್ಟರು ಭಾವಿಸಿ ನಡೆಸಿಕೊಳ್ಳುತ್ತಾರೆ. ಶತಶತಮಾನಗಳಿಂದ ಅಸ್ಪೃಶ್ಯರ ಮೇಲಾಗುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಶೋಷಣೆಗಳಿಗೆ ಅಂತ್ಯವೇ ಇಲ್ಲದಾಗಿದೆ. ಅಸ್ಪೃಶ್ಯತೆಯನ್ನು ತೊಲಗಿಸಲು ಭಾರತದಲ್ಲಿ ಬಹುದೊಡ್ಡ ಹೋರಾಟ ನಡೆದಿದೆ. ಆದರೆ ಅಸ್ಪೃಶ್ಯತೆಯನ್ನು ಇನ್ನೂ ತೊಲಗಿಸಲು ಸಾಧ್ಯವಾಗಿಲ್ಲ. ಭಾರತೀಯರ ಮನದಲ್ಲಿ ಆಳವಾಗಿ ಬೇರೂರಿರುವ 'ಜಾತಿ' ಬಾಂಧವ್ಯ ಇದಕ್ಕೆ ಕಾರಣವಾಗಿದೆ.

ಭಾರತದ ತುಂಬ ಹರಡಿಕೊಂಡಿರುವ ದಲಿತ–ಅಸ್ಪೃಶ್ಯ ಸಮುದಾಯಗಳು ನಾಗರೀಕ ಸಮಾಜದಿಂದ ದೂರ ವಾಸಿಸುತ್ತಿರುವುದು ಇಂದಿಗೂ ವಾಸ್ತವ ಸತ್ಯವಾಗಿದೆ. 'ದಲಿತ'ರಲ್ಲಿ ಹೊಲೆಯ–ಮಾದಿಗರು ಜಾತಿ ಸ್ವರೂಪ ಪಡೆದುಕೊಂಡಿರುವ ಸಮುದಾಯಗಳಾಗಿವೆ. ಹೊಲೆಯ ಅಥವಾ ಛಲವಾದಿ ಸಮುದಾಯದ ಉಗಮ ವೇದಕಾಲದಿಂದಲೆ ಆಗಿದ್ದು ಬಹು ದೀರ್ಘಕಾಲದ ಪ್ರಾಚೀನತೆಯನ್ನು ಹೊಂದಿದೆ. ಆ ಕಾಲದಲ್ಲಿ ಪುರೋಹಿತ ವರ್ಗದ ಸೇವೆ ಮಾಡುತ್ತ ಗ್ರಾಮದ ಹೊರವಲಯದಲ್ಲಿ ವಾಸಿಸುತ್ತಿದ್ದುದು ತಿಳಿದುಬರುತ್ತದೆ. ಇದು ಕಾಲಾನಂತರದಲ್ಲಿ ಹೇಗೆ ಪರಿವರ್ತನೆ ಹೊಂದುತ್ತಾ ಬಂದಿತು ಎಂಬುದು ಊಹೆಗೆ ನಿಲುಕದ ಮಾತು. ಸದಾ ಬೇರೆಯವರ ಸೇವೆ ಮಾಡುತ್ತ ಬಂದ ಈ ಸಮುದಾಯ ಹೇಗೆ ತನ್ನ ಸಂಸ್ಕೃತಿಯನ್ನು ಭಾರತೀಯ ಸಮಾಜದಲ್ಲಿ ಗುರ್ತಿಸಿಕೊಂಡಿದೆ ಎಂಬುದು ಇನ್ನೂ ಕುತೂಹಲಕರ. ಕೇವಲ ಸೇವೆಯಿಂದಷ್ಟೇ ಅಲ್ಲದೆ ಕಲೆಯಲ್ಲಿ, ಪದ್ಧತಿಗಳಲ್ಲಿ, ಆಚಾರ–ವಿಚಾರಗಳಲ್ಲಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ತನ್ನತನ ಉಳಿಸಿಕೊಂಡಿದೆ. ಇತರೆ ಕೆಳವರ್ಗದಿಂದ ಛಲವಾದಿ ಸಮುದಾಯವು ತನ್ನದೇ ಆದ ಕುರುಹುಗಳಿಂದ ವಿಭಿನ್ನ ಮಾದರಿಯ ಬದುಕನ್ನು ಕಟ್ಟಿಕೊಂಡಿದೆ.

ಭಾರತೀಯ ಸಮಾಜದಲ್ಲಿ ಜಾತಿಯ ಹೆಸರು ಕಸುಬನ್ನು ಅಥವಾ ಧಾರ್ಮಿಕ ಹಿನ್ನೆಲೆಯನ್ನು ಇಲ್ಲವೆ ಐತಿಹ್ಯಗಳ ಮೂಲವನ್ನು ಸೂಚಿಸುವಂತಿದೆ. ಈ ಮಾತನ್ನು ಯಾವ ಜಾತಿಗೂ ಅನ್ವಯಿಸಿ ನೋಡಬಹುದು. ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದ ಬಂದಿರುವ ಈ ಪದ್ಧತಿ ಜಾತಿಯನ್ನು ಹುಟ್ಟಿನ ಆಧಾರದ ಮೇಲೆ ನಿರ್ಧರಿಸುತ್ತದೆ. ಅದೇ ರೀತಿ 'ಛಲವಾದಿ' ಸಮುದಾಯದ ಪ್ರಾಚೀನತೆ ಅನೇಕ ವರ್ಷಗಳ ಇತಿಹಾಸ ಹೊಂದಿರುವುದು ಕಂಡುಬರುತ್ತದೆ. ಈ ಸಂಬಂಧದಲ್ಲಿ ಚಾರಿತ್ರಿಕವಾಗಿ ಅಷ್ಟೇ ಅಲ್ಲದೆ ಪೌರಾಣಿಕ, ಐತಿಹಾಸಿಕ ಜನಪದೀಯ ಹಿನ್ನೆಲೆಗಳು, ಧಾರ್ಮಿಕ ಇತಿಹಾಸ, ಶಾಸನ, ಸಾಹಿತ್ಯ ಚರಿತ್ರೆಯ ಆಕರಗಳು ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ಪರಿಶೀಲಿಸಬಹುದು.

೩.೧. ಛಲವಾದಿ ಪದದ ನಿಷ್ಪತ್ತಿ

ಛಲವಾದಿಗೆ 'ಛಲವಾದಿ' ಎಂಬುವದು ಸಮಾನಾರ್ಥಕ ಶಬ್ದವನ್ನು ಸೂಚಿಸಿ ಇದಕ್ಕೆ ಹಿಂಜರಿಯದ, ಪಟ್ಟು ಹಿಡಿದ ಅಥವಾ ಮೊಂಡುತನದ ಮತುಗಾರಿಕೆ ಉಳ್ಳವನು, ದೃಢ ಸಂಕಲ್ಪ ಮತ್ತು

ನಿಷ್ಠೆಯಿಂದ ಶಿವನ ಸೇವೆ ಮಾಡುವ, ಭಿಕ್ಷೆ ಬೇಡಿ ಬದುಕುವ ಮತ್ತು ಲಿಂಗವಂತರಿಂದ ಬಹುವಾಗಿ ಗೌರವಿಸಲ್ಪಡುವ ಒಬ್ಬ ಛಲವಾದಿ ಎಂದು ಕಿಟ್ಟೆಲ್ ವಿಚಾರಿಸಿದ್ದಾರೆ.

ವಾದ್ಯಗಳನ್ನು ಛಲದಿಂದ ವಾದನ (ನುಡಿಸುವಿಕೆ) ಮಾಡುವುದರಿಂದ 'ಛಲವಾದಿ' ಎಂಬ ಹೆಸರು ಬಂದಿರಬಹುದು. ಛಲವಾದಿ ನಾಮಪದವಾಗಿದೆ. ಛಲವನ್ನು ಹಿಡಿದವನು, ದೃಢ ಸಂಕಲ್ಪವುಳ್ಳವನು, ಕಡುಚಾಗಿ ಮತ್ತು ಛಲವಾದಿ ಪದಗಳನ್ನು ಕೇಶಿರಾಜನ 'ಶಬ್ದಮಣಿ ದರ್ಪಣ'ದಲ್ಲಿ ಬಳಕೆಯಾಗಿದೆ. ಕ್ರಿ.ಶ. ೧೫೩೦ರ ಶಾಸನದಲ್ಲಿ ಸುಂಕತಳವಾರ ಅನುಪಮಗೇಶ ಛಲವಾದಿ ಸಂಗಡ ಪತಂಗಾರರಿಗೂ ಇದೇ ಭಾಷೆ ಎಂದು (ಸೌ.ಇ.ಇ.೫೩೨–೨ರಲ್ಲಿ ಉಲ್ಲೇಖಿತವಾಗಿದೆ.) "ಛಳಿಗಂಡವೊಲು ಮೂರ್ಛೆ ಗೈವಧಿಸಿಡಿಲೆ ಛಲವಾದಿ ಚಂದವಿಡೆನ್ನ" [೧] ಎಂದು ಚಿಕ್ಕುಪಾಧ್ಯಾಯ ತನ್ನ ಶತಕ ಸಾಹಿತ್ಯದಲ್ಲಿ ಛಲವಾದಿ ಪದ ಬಳಸಿದ್ದಾನೆ.

ಇವನು ವೀರಶೈವ ಪೀಠಾಧ್ಯಕ್ಷರಿಂದ ಶಿವದೀಕ್ಷೆಯನ್ನು ಪಡೆದು ಲಿಂಗಧಾರಿಯಾಗಿದ್ದು, ಶರಣ ಮಾರ್ಗದಲ್ಲಿ ನಡೆಯುವದು, ಬಸವ ತತ್ವವನ್ನು ಪ್ರಸಾರ ಮಾಡುವದು ಛಲವಾದಿಯ ನೇಮವಾಗಿದೆ. ಭಾರತೀಯ ದಲಿತ 'ವಾಯ್ಸ್' ಮಾಸಪತ್ರಿಕೆಯಲ್ಲಿ ನೆಲ್ಲಿಕಟ್ಟೆ ಸಿದ್ಧೇಶರವರು ಹೇಳಿದ್ದಾರೆ.

'ಹೊಲೆಯ' ಪದದ ಸರಳ ಅರ್ಥ ಹೊಲಸನ್ನು–ಕೊಳಕನ್ನು ಹೊಂದಿರುವವನು ಎಂದಿದೆ. ಹೊಲಸು ತಿನ್ನುವವನೇ ಹೊಲೆಯ, ಊರ ಹೊರಗೆ ವಾಸಿಸುವ ಜನಸಮುದಾಯವೆ ಹೊಲೆಯ ಸಮುದಾಯ ಎಂಬುದಾಗಿ ಮೇಲ್ವರ್ಗದ ಸಮುದಾಯಗಳು ಗುರ್ತಿಸಿವೆ. ಪುರೋಹಿತಶಾಹಿ ವರ್ಗ ಸಮಾಜದ ಅತ್ಯಂತ ತಳಮಟ್ಟದ ಜನರನ್ನು ತಮ್ಮ ಸೇವೆಗೆ ಸೀಮಿತಗೊಳಿಸಿಕೊಂಡಿತು. ಅವರಿಂದ ಎಲ್ಲ ಬಗೆಯ ಕೆಲಸಗಳನ್ನು ಮಾಡಿಸಿಕೊಂಡಿತು. ಅಂದಿನ ದಿನಗಳಲ್ಲಿ ಕೆಳವರ್ಗದ ಜನತೆ ಬದುಕುವುದು ಅಸಾಧ್ಯವೂ ಆಗಿತ್ತು. ಹಸಿವು ನೀಗಿಸಿಕೊಳ್ಳಲು ಪುರೋಹಿತಶಾಹಿಗಳು ಸೂಚಿಸಿದ ಕೆಲಸಗಳನ್ನು ಮಾಡುವುದು ಅನಿವಾರ್ಯವೂ ಆಗಿತ್ತು. ಉನ್ನತ ಸಮುದಾಯಗಳಿಗೆ ಸದಾ ಸೇವೆ ಗೈಯುವವರಿಗೆ 'ಛಲವಾದಿ' ಎಂಬ ಕರೆದು ದುಡಿಸಿ ಕೊಳ್ಳತೊಡಗಿದರು. ಪುರೋಹಿತರ ಅನುಕೂಲಕ್ಕೆ ತಕ್ಕಂತೆ ದುಡಿಯುವ ವರ್ಗ ಅಂದು ಇಲ್ಲದಿದ್ದರೆ ಅವರೇನು ಮಾಡಲು ಸಾಧ್ಯವಿತ್ತು ಎಂಬ ಸಂದೇಹ ತಲೆದೋರುತ್ತದೆ. ಆದರೆ ಇಲ್ಲಿ 'ಹೊಲೆಯ' ಅಥವಾ 'ಛಲವಾದಿ' ಎಂಬ ಪದದ ನಿಷ್ಪತ್ತಿಯ ಕುರಿತು ವಿವೇಚಿಸಬೇಕಾಗಿದೆ.

" 'ಹೊಲೆಯ' ಪದಕ್ಕೆ ಹಲವಾರು ಪರ್ಯಾಯ ಹೆಸರುಗಳಿವೆ. ಮೈಸೂರು ಭಾಗದಲ್ಲಿ ಛಲವಾದಿ, ಆದಿದ್ರಾವಿಡ, ಆದಿಕರ್ನಾಟಕ ಎಂಬ ಹೆಸರುಗಳಿವೆ. ಭಾರತದ ವಿವಿಧ ರಾಜ್ಯಗಳಲ್ಲಿ ಇವರನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಆರ್ಯಮಾಲಾ, ಛಲವಾದಿ, ಹೊಲೆಯ; ಆಸ್ಸಾಂದಲ್ಲಿ ಮಹಾರ್; ಬಿಹಾರದಲ್ಲಿ ಹಲಾಲಕೋರ್, ಗುಜರಾತದಲ್ಲಿ ಛಲವಾದಿ, ಚೆನ್ನಯಾ, ಹೊಲರ್, ಹೊಲಯ, ವಲರ್, ಹೊಲರ; ತಮಿಳುನಾಡಿನಲ್ಲಿ 'ಪರ್ರೈಯನ್'; ಕೇರಳದಲ್ಲಿ ಆದಿದ್ರಾವಿಡ, ಚಾಂಡಾಲ, ಹೊಲೆಯ, ಪುಲೆಯನ್; ಮಧ್ಯಪ್ರದೇಶದಲ್ಲಿ ಹೊಲೆಯ; ಮಹಾರಾಷ್ಟ್ರದಲ್ಲಿ ಆರ್ಯಮಾಲಾ, ಛಲವಾದಿ, ಚೆನ್ನಯ್ಯ,

ಹೊಲೆಯ, ಹೊಲೆಯರ, ಮಹರ್; ಮೇಘಾಲಯದಲ್ಲಿ ಮಹಾರ್; ಒರಿಸ್ಸಾದಲ್ಲಿ ಚಾಂಡಾಲ, ಮೆಹರ್, ಮಹಾರಾ; ರಾಜಸ್ಥಾನದಲ್ಲ ಮಹಾರ್, ತರಲ್, ದೇಗುಮೆಗು, ಮೆಹರ; ಮಿಜೋರಾಂನಲ್ಲಿ ಮಹಾರ್ ಮತ್ತು ಅರುಣಾಚಲ ಪ್ರದೇಶದಲ್ಲಿ ಮಹಾರ್ ಎಂದು ಅಲ್ಲಿನ ಪ್ರಾದೇಶಿಕತೆಗೆ ಅನುಗುಣವಾಗಿ ಆಯಾ ರಾಜ್ಯ ಭಾಷೆಯಲ್ಲಿ ನಾನಾ ಹೆಸರುಗಳಿಂದ ಕರೆಯಲಾಗುತ್ತಿದೆ."[೨]

ಹೊಲ-ಭೂಮಿ, ಮಣ್ಣು ಎಂಬ ಪದದಿಂದ ಹೊಲೆಯ ಪದ ನಿಷ್ಪತ್ತಿ ಹೊಂದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ಇದರಿಂದ ಇವರು ಹೊಲದ-ಭೂಮಿಯ ಒಡೆಯರಾಗಿದ್ದಿರಬಹುದು ಎಂಬ ಅನುಮಾನ ಸುಳಿಯುತ್ತದೆ. ಮೊದಲಿಗೆ ಹೊಲವನ್ನು ಉಳುತ್ತಿದ್ದ ಸಮುದಾಯವನ್ನು ಈ ರೀತಿ ಕರೆದಿರಬಹುದು. ಎಸ್. ಎಸ್. ಹಿರೇಮಠ ಅಭಿಪ್ರಾಯ ಗಮನಿಸಿದಾಗ "ಹೊಲೆಯರೇ ಈ ನೆಲದ ಮೂಲ ಒಡೆಯರಾಗಿದ್ದರು, ಅವರೇ ಹಳ್ಳಿಗಳನ್ನು ಸ್ಥಾಪಿಸಿಕೊಂಡವರೂ ಆಗಿದ್ದಾರೆಂಬುದು ಗಮನಾರ್ಹವಾಗಿದೆ." ಶವ ಸಂಸ್ಕಾರದ ಭೂಮಿಯನ್ನು ಸತ್ತವರ ಸಂಬಂಧಿಕರು 'ನೆಲಹಾಗ'ವೆಂಬ ಶುಲ್ಕ ನೀಡಿ ಕುಳವಾಡಿಗಳಿಂದ ಖರೀದಿಸಬೇಕೆಂಬ ಆಚರಣೆ 'ಹೊಲದೊಡೆಯರೇ ಹೊಲೆಯರು' ಎಂಬ ಥರ್‌ಸ್ಟನ್‌ನ ಅರ್ಥವನ್ನು ಸಮರ್ಥಿಸುವಂತಿದೆ. ಮೊದಲಿಗೆ ಬೇಸಾಯವನ್ನು ಆರಂಭಿಸಿದವರು ಹೊಲೆಯ ಮತ್ತು ಮಾದಿಗ ಮಹಿಳೆಯರು, ಕುರುಬರು, ಬೇಡರು, ಗೊಲ್ಲರು, ಕೊರಚರು, ಗೌಡರು ಮೊದಲಾದವರು. ಪಶುಪಾಲಕ ಕುಲಗಳಾದ ಪರ್ಯೆಯಾನ್, ಪುಲಿಯನ್, ಮಾಲ-ಮಾದಿಗ (ತಮಿಳು-ಮಲೆಯಾಳಿ-ತೆಲುಗು) ಹಾಗೂ ಕರ್ನಾಟಕದ ಹೊಲೆಯ-ಮಾದಿಗ ದಲಿತ ಕೃಷಿಕ ಜಾತಿಗಳು ಎಂದು ಥರ್‌ಸ್ಟನ್ ತಮ್ಮ 'ದಿ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಕೃತಿಯಲ್ಲಿ ತಿಳಿಸುತ್ತಾರೆ.

೩.೨ ಹೊಲೆಯ ಎಂಬ ಪದದ ಬಗ್ಗೆ ಎಡ್ಗರ್ ಥರ್ಸ್ಟನ್ ಅವರ ವಿಚಾರ

ಎಡ್ಗರ್ ಥರ್ಸ್ಟನ್ ಅವರು 'ದಿ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' (Edgar Thurson's Castes and Tribes of Southern India) ಎಂಬ ಪುಸ್ತಕದಲ್ಲಿ ಆಯ್ದ ಭಾಗವನ್ನು ಈ ಕೆಳಗೆ ನೀಡಿದೆ. ಅದು ವಿವರವಾಗಿ ಹೊಲೆಯ ಪದದ ವ್ಯುತ್ಪತ್ತಿ ಹಾಗೂ ಹೊಲೆಯ ಸಮುದಾಯದ ಇತಿಹಾಸ ಕುರಿತು ಈ ರೀತಿ ಮಾಹಿತಿ ನೀಡಿದ್ದಾರೆ.

Derivation of word holeya : ಹೊಲೆಯ ಎಂಬ ಪದದ ವ್ಯುತ್ಪತ್ತಿ - ಹೊಲದ ಒಡೆಯ ಹೊಲೆಯ : ರಾಜ್ಯದ ಒಡೆಯ ರಾಜ

"Holeyas are the field labourers, and former agrestic serfs of South Canara, Pulayan being the Malayalam and Paraiyan the Tamil form of the same word. The name is derived by Brahmins from hole pollution, and by others from hola, land or soil, in recognition of the fact that, as in the case of the paraiyan, there are coustoms remaining which seem to indicate that the

Holeyas were once masters of the land; but, whatever the derivation may be, it is no doubt the same as that of Paraiyan and Pulayan. The Holeyas are divided into many sub-divisions, but the most important are Mari, Mera, and Mundala of Bakudu."[3]

"ದಕ್ಷಿಣ ಕನ್ನಡದಲ್ಲಿ ಹಿಂದೆ ಹಳ್ಳಿ ಜೀತದಾಳುಗಳಾಗಿದ್ದು ಹೊಲದಲ್ಲಿ ಕೆಲಸ ಮಾಡುವನೇ ಹೊಲೆಯ ಎಂಬ ಪದರೂಪ ಮಳಯಾಳಂನಲ್ಲಿ ಪುಲಯನ್ ಎಂದೂ ತಮಿಳಿನಲ್ಲಿ ಪರೈಯನ್ ಎಂದೂ ಆಗಿದೆ. ಬ್ರಾಹ್ಮಣರು ಹೊಲೆ, ಹೊಲಸು ಪದದಿಂದ ಹೊಲೆಯ ಪದವನ್ನು ಪಡೆದಿದ್ದಾರೆ. ಇತರರು ಹೊಲ ಅಂದರೆ ಭೂಮಿ, ಜಮೀನು ಎಂಬ ಪದದಿಂದ ಪಡೆದಿದ್ದಾರೆ. ಪರೈಯನ್‌ಗೆ ಸಂಬಂಧಿಸಿ ಕೆಲವು ಆಚರಣೆಗಳಿದ್ದು ಅವು ಒಂದು ಕಾಲದಲ್ಲಿ ಹೊಲೆಯರೇ ಭೂಒಡೆಯರಾಗಿದ್ದರೆಂದು ಸೂಚಿಸುವಂತೆ ತೋರುತ್ತವೆ. ಹೊಲೆಯ ಪದದ ಅರ್ಥವನ್ನು ಯಾರು ಯಾವ ರೂಪದಲ್ಲಾದರೂ ಪಡೆದಿರಲಿ ಅದು ಪರೈಯನ್ ಮತ್ತು ಪುಲಯನ್‌ಗಳಿಗೆ ಸಮಾನವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಹೊಲೆಯರು ಹಲವು ಒಳಪಂಗಡಗಳಾಗಿ ವಿಭಜನೆಯಾಗಿದ್ದು ಅವುಗಳಲ್ಲಿ ಮಾರಿ, ಮೆರ, ಮತ್ತು ಬಕುಡು ಮುಂಡಾಳ ಮುಖ್ಯವಾಗಿವೆ."[೪]

ಈ ಪದಕ್ಕೆ ಪರ್ಯಾಯವಾಗಿ ಆದಿದ್ರಾವಿಡ ಎಂಬ ಪದವಿದೆ. ದ್ರಾವಿಡರು ಭಾರತದ ಮೂಲನಿವಾಸಿಗಳು. ಇವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಿ ಕೊನೆಗೆ ದಕ್ಷಿಣ ಭಾರತದಲ್ಲಿ ನೆಲೆನಿಂತರು. ದಕ್ಷಿಣ ಭಾರತದ ಮೂಲ ನಿವಾಸಿಗಳೆಂದರೆ ದ್ರಾವಿಡರೇ ಆಗಿದ್ದಾರೆ. ಆ ಸಮುದಾಯವನ್ನು ಆದಿದ್ರಾವಿಡರು ಎಂದು ಕರೆಯುವುದು ಸಾಮಾನ್ಯ.

ಆದಿದ್ರಾವಿಡರಿಗೆ 'ಛಲವಾದಿ' ಎಂಬ ಪದವೂ ಬಳಕೆಯಲ್ಲಿದೆ. ಛಲ ಉಳ್ಳವನು ಯಾವನೋ ಅವನೇ 'ಛಲವಾದಿ' ಎಂಬ ಗುಣವಾಚಕ ಪದವೂ ಅನ್ವಯಿಸಬಹುದು. ಪುರಾಣಗಳಲ್ಲಿ ಪ್ರಸಿದ್ಧನಾಗಿರುವ ಛಲದಂಕಮಲ್ಲ ಎಂಬುವನ ವಂಶವನ್ನು ಛಲವಾದಿ ಸಮುದಾಯವೆಂದು ಕರೆಯುವುದು ರೂಢಿಯಲ್ಲಿದೆ. ಪೂರ್ವದಿಂದಲೂ ಈ ಸಮುದಾಯ ರಾಜ ಪ್ರಭುತ್ವದಲ್ಲಿ ರಣಕಹಳೆ ಮೊಳಗಿಸುವ ನಂಬಿಗಸ್ಥ ಸೇವಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ರಾಜಮನೆತನಗಳು ಪತನಗೊಂಡ ಮೇಲೆ ಛಲವಾದಿಯವರು ತಮ್ಮ ಬದುಕಿನ ಜೀವನೋಪಾಯಕ್ಕಾಗಿ ವಿವಿಧ ಉದ್ಯೋಗಗಳನ್ನು ಅವಲಂಬಿಸಿದರು. ನೂಲುವುದು, ನೇಯುವುದು, ಮಂಗಳವಾದ್ಯ ನುಡಿಸುವುದು, ಓಲಗ, ಭಜಂತ್ರಿ ಹಾಗೂ ಕೆಲವು ಕರಕುಶಲ ಅನುಭವದೊಂದಿಗೆ ಅಲ್ಪಸ್ವಲ್ಪ ವ್ಯವಸಾಯ ಮಾಡುವುದನ್ನು ಬೆಳೆಸಿಕೊಂಡು ಬಂದರು. ಈ ರೀತಿ ಛಲವಾದಿ ಸಮುದಾಯ ಬಹುಬಗೆಯ ವೃತ್ತಿ ಅನುಸರಿಸಿದರು. ಇಂದು ಕರ್ನಾಟಕದ ತುಂಬೆಲ್ಲಾ ನೆಲೆಗೊಂಡಿರುವುದನ್ನು ಕಾಣಬಹುದು.

೩.೩ ಪುರಾಣಗಳಲ್ಲಿ ಛಲವಾದಿ ಸಮುದಾಯ

ಛಲವಾದಿ ಸಮುದಾಯದ ಪ್ರಾಚೀನತೆ ಪುರಾಣ ಕಥೆಗಳ ಕಾಲಕ್ಕೆ ಪಸರಿಸಿರುವುದನ್ನು ಪುರಾತನ ಗ್ರಂಥಗಳಾದ ದೇವಿಭಾಗವತ, ಬ್ರಹ್ಮಾಂಡಪುರಾಣ, ಬ್ರಹ್ಮ ಮಹಾಪುರಾಣಗಳು ಖಚಿತಪಡಿಸುತ್ತವೆ. ಉಜ್ಜಯಿನಿ, ಕಾಶಿ, ಶ್ರೀಶೈಲ, ಕೇದಾರ ಸ್ವಾಮಿಗಳ ಪೀಠಗಳಲ್ಲಿ ಇದರ ಪೂರ್ಣ ವಿವರಣೆ ದೊರೆಯುವುದಲ್ಲದೆ ಛಲವಾದಿಗೆ ಪ್ರಥಮ ಸ್ಥಾನ ಕೊಟ್ಟಿರುವುದು ತಿಳಿದುಬರುತ್ತದೆ.

ದಕ್ಷಬ್ರಹ್ಮ ಏರ್ಪಡಿಸಿದ್ದ ಯಾಗಕ್ಕೆ ಪರಮೇಶ್ವರನೊಡನೆ ಸತಿದೇವಿಯನ್ನು ಆಹ್ವಾನಿಸಿದ್ದರೂ ಆಕೆ ನಂದೀಶ್ವರನೊಡನೆ ತನ್ನ ತಂದೆಯ ಯಾಗಕ್ಕೆ ಹೋದಳು. ಅಲ್ಲಿ ತಂದೆತಾಯಿಯರಿಂದಾದ ಅನಿರೀಕ್ಷಿತ ಅವಮಾನ ಸಹಿಸದೆ ಸತಿದೇವಿ ಯಜ್ಞಕುಂಡಕ್ಕೆ ಹಾರಿ ಪ್ರಾಣಬಿಟ್ಟಳು. ಇದರಿಂದ ಕೋಪಗೊಂಡ ನಂದೀಶ್ವರ ತದೇಕಚಿತ್ತದಿಂದ ಆಗಸವನ್ನು ನೋಡುತ್ತಿದ್ದಾಗ ಘನಘೋರ ಶಬ್ದದೊಂದಿಗೆ ವೀರಪುರುಷನೊಬ್ಬ ಹುಟ್ಟಿ ಶಿವಸ್ಮರಣೆ ಮಾಡುತ್ತಾ ಧರೆಗಿಳಿದನು. ನಂದೀಶ್ವರನಿಗೆ ನಮಿಸಿ ಅವನ ಅಪ್ಪಣೆಗಾಗಿ ಕಾದನು. ಈತನಿಗೆ ನಂದಿಜ ಅಥವಾ ಛಲದಂಕಮಲ್ಲನೆಂದು ಹೆಸರಿಟ್ಟರು. ಈತ ನಂದೀಶ್ವರ, ವೀರಭದ್ರರೊಡಗೂಡಿ ದಕ್ಷ ಬ್ರಹ್ಮನೊಡನೆ ಘನಘೋರ ಯುದ್ಧ ಮಾಡಿದ. ಕೊನೆಯಲ್ಲಿ ವೀರಭದ್ರನ ಖಡ್ಗಕ್ಕೆ ಬಲಿಯಾಗಿ ಬಿದ್ದಿದ್ದ ದಕ್ಷಬ್ರಹ್ಮನ ರುಂಡವನ್ನು ಯಜ್ಞಕುಂಡಕ್ಕೆ ತಳ್ಳಿದ. ಶಿವನ ಛಲ ಸಾಧಿಸುವಲ್ಲಿ ತನಗುಂಟಾಗಿದ್ದ ಕೋಪ ನಿವಾರಿಸಿಕೊಂಡನು. ಆದರೆ ಛಲದಂಕನ ವಂಶ ಏಳಿಗೆಯಾಗದಿರಲೆಂದು ದಕ್ಷಬ್ರಹ್ಮನ ರುಂಡ ಭಸ್ಮವಾಗುವ ಮೊದಲೇ ಶಪಿಸಿತು.

ಶಾಪಗ್ರಸ್ತನಾದ ಛಲದಂಕನಿಗೆ ಶಿವಸ್ಮರಣೆ ತಪ್ಪಿದ್ದರಿಂದ ವಿಕಾರರೂಪ ಹೊಂದಿ ವೃಥಾ ಕಾಲಹರಣ ಮಾಡುತ್ತಿದ್ದ. ಕನಿಕರಗೊಂಡ ನಾರದ ಆರು ಜನ ಋಷಿಗಳಿಂದ ಅವನ ಶಾಪ ವಿಮೋಚನೆಗೊಳಿಸಿದ. ಅಲ್ಲದೆ ಸಕಲ ವಿದ್ಯೆಗಳನ್ನು ಬ್ರಹ್ಮಜ್ಞಾನ, ಇಂದ್ರಜಾಲ, ಮಹಾಮಂತ್ರಾಸ್ತ್ರಗಳ ಪ್ರಯೋಗಗಳನ್ನು ಆ ಋಷಿಗಳಿಂದಲೆ ಬೋಧಿಸಿದ. ಅವನನ್ನು ಒಳ್ಳೆಯ ಪರಾಕ್ರಮಿಯನ್ನಾಗಿ ಮಾಡಿದ. ಷಟ್‌ಋಷಿಗಳ ಯಜ್ಞಕ್ಕೆ ಭಂಗ ಉಂಟುಮಾಡುತ್ತಿದ್ದ ಕ್ರೂರ ರಾಕ್ಷಸರನ್ನು ತಾನು ಕಲಿತ ಇಂದ್ರಜಾಲ ಮತ್ತು ಮಹಾಮಂತ್ರಾಸ್ತ್ರಗಳಿಂದ ಸಂಹಾರ ಮಾಡಿ ಗುರುಕಾಣಿಕೆ ನೀಡಿದ. ಆದರೆ ಆ ದುಷ್ಟ ರಾಕ್ಷಸರು ಛಲದಂಕನ ಸಕಲ ವಿದ್ಯೆಗಳು ಮರೆತುಹೋಗಲೆಂದು ಶಪಿಸಿ ತಮ್ಮ ಪ್ರಾಣ ನೀಗಿದ್ದರಿಂದ ಮತ್ತೆ ಶಾಪಗ್ರಸ್ತನಾದ. ತ್ರಿಲೋಕ ಕಂಠಕನಾಗಿಯೂ ತ್ರಿಮೂರ್ತಿಗಳಿಂದಲೂ ಅಜೇಯನಾಗಿಯೂ ಮೆರೆಯುತ್ತಿದ್ದ ತಾರಕಾಸುರನ ಸಂಹಾರಕ್ಕಾಗಿ ಕುಮಾರಸ್ವಾಮಿಯ ಜನನ ಶಿವಪಾರ್ವತಿಯಿಂದಲೇ ನಡೆಯಬೇಕಾಗಿತ್ತು. ಇದಕ್ಕಾಗಿ ದೇವತೆಗಳ ಸೂಚನೆಯಂತೆ ಮನ್ಮಥ ಉಗ್ರ ತಪಸ್ಸಿನಲ್ಲಿದ್ದ ಶಿವನನ್ನು ಎಚ್ಚರಗೊಳಿಸಿ ಪಾರ್ವತಿದೇವಿಯ ಕೈಹಿಡಿಯಲು ಪ್ರೇರೇಪಿಸಿದ್ದರಿಂದ ಶಿವನ ಹಣೆಗಣ್ಣಿನಿಂದ ಸುಟ್ಟು ಬೂದಿಯಾದ. ಮನ್ಮಥನ ಬೂದಿ ಗಂಗೆಯಲ್ಲಿ ವಿಲೀನವಾದೊಡನೆಯೆ ತನ್ನ ಸತಿಯಾದ ರತಿಯನ್ನು ಸೇರುವೆನೆಂದು ಶಿವನ ಆಶೀರ್ವದ ಪಡೆದನು. ಶಿವನ ಅಪ್ಪಣೆಯಂತೆ ರತಿ ತನ್ನ ಪತಿಯ ಬೂದಿಯನ್ನು ಗಂಗೆಯಲ್ಲಿ ವಿಲೀನಗೊಳಿಸಿದಳು. ಆ

ಕಾಲದಲ್ಲಿ ಶಾಪಗ್ರಸ್ತನಾದ ಛಲದಂಕ ಗಂಗೆಯಲ್ಲಿ ಮಿಂದು ಶಾಪ ವಿಮೋಚನೆಗೊಂಡ. ನಂತರ ಆತ ಶಿವನನ್ನು ಕುರಿತು ಉಗ್ರ ತಪಸ್ಸನ್ನಾಚರಿಸಿದ. ಅದರಿಂದ ಮೆಚ್ಚಿದ ಶಿವ ಛಲದಂಕನ ವಿವಾಹವನ್ನು ಬ್ರಹ್ಮಕುಮಾರಿಯಾದ ಮಾಯಾದೇವಿ ಎಂಬುವವಳೊಡನೆ ಪಾರ್ವತಿ ಕಲ್ಯಾಣದ ಸಮಯದಲ್ಲಿ ನಡೆಯುವುದೆಂತಲೂ ಈ ಇಬ್ಬರಿಂದ ಹುಟ್ಟುವ ಸಂತತಿ 'ಛಲವಾದಿ' ಸಮುದಾಯವಾಗಲೆಂದು ವರವನ್ನು ನೀಡಿದ.

ಏಕಕಾಲದಲ್ಲಿ ಶಿವ-ಪಾರ್ವತಿ ಮತ್ತು ಛಲದಂಕಮಲ್ಲ-ಮಾಯಾದರ್ಶಿಕೆಯರ ಮದುವೆ ನಡೆಯಿತು. ಈ ವಿವಾಹಗಳ ಗೌರವಾರ್ಥ ಏರ್ಪಡಿಸಿದ್ದ ದೇವಗಣ, ಋಷಿಗಣಗಳ ಮಹಾಸಭೆಯಲ್ಲಿ ಛಲದಂಕನ ಪರಾಕ್ರಮವನ್ನು ವಿಷ್ಣು ಪ್ರಶಂಸಿಸಿದ. ತನ್ನಲ್ಲಿದ್ದ ಅತಿ ಭಾರವಾದ ಜಂಬೂಕ, ಕಹಳೆಯನ್ನಿತ್ತು ಅದರ ಮರ್ಮವನ್ನು ಬೋಧಿಸಿದ. ಅನಂತರ ಛಲದಂಕಮಲ್ಲನ ಉದಾತ್ತತೆ ಮತ್ತು ಛಲದಿಂದ ಹೋರಾಡುವ ಗುಣ ಕಂಡು ಚಂದ್ರ ಮತ್ತು ಸೂರ್ಯ ಎಂಬ ವಾದ್ಯ ಕೊಟ್ಟು ಅವನ್ನು ನುಡಿಸುವ ಮರ್ಮ ಉಪದೇಶಿಸಿದ. ಅಂದಿನಿಂದ ಸರ್ವ ಮಂಗಳ ಕಾರ್ಯಗಳಲ್ಲಿ, ಮಠಗಳಲ್ಲಿ, ಗುರುಪೀಠಗಳಲ್ಲಿ ಕಂಚಿನ ಕಹಳೆ, ಓಲಗ, ನಗಾರಿಗಳನ್ನು ಶುಭಸೂಚಕವಾಗಿ ಉಪಯೋಗಿಸಬೇಕೆಂತಲೂ ಅವುಗಳಿಲ್ಲದ ಯಾವುದೇ ಪೀಠ, ಸಿಂಹಾಸನಗಳ ಶುಭಕಾರ್ಯಗಳು ಅಪೂರ್ಣ ಹಾಗೂ ಅಶುಭವೆಂದು ಆಶೀರ್ವದಿಸಿದ.

ಈ ವಾದ್ಯಗಳನ್ನು ಛಲದಂಕ ಆ ಸಭೆಯಲ್ಲಿ ತನ್ನೆಲ್ಲ ಪ್ರತಿಭೆಯಿಂದ ನುಡಿಸಿ ನೆರೆದ ಸಭಿಕರನ್ನು ಬೆರಗುಗೊಳಿಸಿದ. ಆ ಸಭೆಯಲ್ಲಿ ಬೇರಾವ ಕ್ರಮಗಳು ನಡೆಯದಂತೆ ಮಾಡಿದ. ಇದರಿಂದ ಕುಪಿತರಾದ ಸುರರು ಛಲದಂಕ ಭೂಮಿಯಲ್ಲಿ ಜನಿಸಲೆಂದು ಶಾಪವಿತ್ತರು. ನಿರಾಶೆಗೊಂಡ ಛಲದಂಕ ಮತ್ತು ಹೆಂಡತಿ ಮಾಯಾದೇವಿ ಇಬ್ಬರೂ ದೇವತೆಗಳೆಲ್ಲ ಭೂಲೋಕದಲ್ಲಿ ಜನಿಸಲೆಂದು ಮರುಶಾಪ ನೀಡಿದ. ಇದರಿಂದ ತ್ರಿಮೂರ್ತಿಗಳಾದಿಯಾಗಿ ಎಲ್ಲರೂ ಭೂಲೋಕದಲ್ಲಿ ಜನಿಸಿದರು.

ಅಪ್ಸರೆ ಸ್ತ್ರೀಯೊಬ್ಬಳು ಗಂಗೆಯಲ್ಲಿ ಮಿಂದ ಕಾರಣ ಆಕೆ ಗರ್ಭ ಧರಿಸಿದಳು. ಅವಳಲ್ಲಿ ಛಲದಂಕ ಹುಟ್ಟಿದ. ಮಗುವನ್ನು ನಾರದ ಆಗಸ್ತ್ಯಾಶ್ರಮಕ್ಕೆ ಕರೆತಂದು ಅವನ ಭವಿಷ್ಯ ಕೇಳಿದಳು. ಇವನು ಛಲದಂಕಮಲ್ಲನೆಂದೂ ಇವನು 'ಛಲವಾದಿ' ಎಂಬ ಹೆಸರಿನಿಂದ ಅಲ್ಲಿಯೇ ಬೆಳೆಯಲೆಂದೂ ಹರಸಿ ಮಗುವನ್ನು ಬಿಟ್ಟುಹೋದ. ಆಶ್ರಮದಲ್ಲಿ ಬೆಳೆದ ಛಲವಾದಿ ರೇವಣಸಿದ್ಧೇಶ್ವರನಾಗಿ ಜನಿಸಿದ ಶಿವನೊಡಗೂಡಿ ಕೊಲ್ಲಾಪುರಿಯಲ್ಲಿ ದುಷ್ಟರಾಗಿ ವರ್ತಿಸುತ್ತಿದ್ದ ನವಕೋಟಿ ಸಿದ್ಧರನ್ನು ಸಂಹರಿಸಿದ. ಮಾಯಾದೇವಿ ಊರ್ವಶಿಯ ಗರ್ಭದಿಂದ ಜನಿಸಿದಳು. ಆಕೆ ಸಿದ್ಧರಲ್ಲಿ ವನದ ಸಿದ್ಧಮ್ಮನೆಂಬ ಹೆಸರಿನಿಂದ ಬೆಳೆದಿದ್ದಳು. ಛಲವಾದಿಗೂ ವನದ ಸಿದ್ದಮ್ಮನಿಗೂ ವಿವಾಹವಾಗಿ ವೀರಕಂಠನೆಂಬುವನು ಜನಿಸಿದ. ಈತ ಬ್ರಹ್ಮಜ್ಞಾನಿಯಾಗಿ ಮಹಾತಪಸ್ಸಿನಿಂದ ಪರಾಶರಮುನಿಯಾದ. ಗಾಯತ್ರಿ ಸೂತ್ರರಿಗೆ ಜನಿಸಿದ ಸುಶೀಲದೇವಿಯೊಡನೆ ವಿವಾಹವಾದ. ಇವರಿಂದ ದೈವಜ್ಞನೆಂಬುವನು ಜನಿಸಿದ. ಪ್ರಾಪ್ತವಯಸ್ಕನಾದ

ಮೇಲೆ ಒಕ್ಕಲುತನ ಮಾಡುವ ನಾಗಮ್ಮನ ಮಗಳು ಕಮಲಾದೇವಿಯೊಡನೆ ವಿವಾಹವಾದ. ಇವರಿಂದ ಶ್ರೀಕಂಠನೆಂಬುವನು ಜನಿಸಿದ. ವಯಸ್ಕನಾದ ನಂತರ ತನ್ನ ತಾಯಿಯ ವಂಶದಲ್ಲಿ ಹುಟ್ಟಿದ ನಾಗಲಾದೇವಿಯನ್ನು ವಿವಾಹವಾದ. ಇವರಿಂದ ದಯಾಸಿಂಧುವೆಂಬುವನು ಜನಿಸಿದ. ದಯಾಸಿಂಧು ಪ್ರಾಪ್ತವಯಸ್ಕನಾದ ನಂತರ ಕೊಲ್ಲಾಪುರಿಗೆ ಬಂದು ಅಲ್ಲಿದ್ದ ಅಗಣಿ ಹೊನ್ನಮ್ಮನೆಂಬುವಳನ್ನು ವಿವಾಹವಾದ. ನಂತರ ನಾಗೇಂದ್ರನೆಂಬುವನು ಜನಿಸಿದ. ಈತ ಅಕ್ಕಮ್ಮನೆಂಬುವಳನ್ನು ವರಿಸಿದ. ನಂತರ ಅವರಿಗೆ ಚನ್ನಪ್ಪನೆಂಬುವನು ಜನಿಸಿದ. ಈ ಚನ್ನಪ್ಪನ ಮಗನೇ ಅಗಣಿಹೊನ್ನಯ್ಯ. ತಂದೆ ಮಕ್ಕಳಿಬ್ಬರೂ ಶಿವಶರಣರಾಗಿ ಭಕ್ತಿಭಂಡಾರಿ ಬಸವಣ್ಣನವರ ಶಿಷ್ಯರಾದರು. ಇವರ ಸಂತತಿಯೇ ಈಗಿನ 'ಛಲವಾದಿ' ಸಮುದಾಯವಾಗಿದೆ.

ಛಲವಾದಿ ಸಮುದಾಯದ ಉಲ್ಲೇಖವನ್ನು ಬ್ರಹ್ಮಾಂಡ ಪುರಾಣದಲ್ಲಿಯೂ ನಿರೂಪಿಸಿದೆ. 'ಕೊಲ್ಲಿ–ಪಾಕಿ, ಶ್ರೀಶೈಲ, ಉಜ್ಜಯಿನಿ, ಹಿಮವತ್ ಕೇದಾರ (ಕಾಶಿ), ಬಾಳೆಹೊನ್ನೂರು ಜಗದ್ಗುರು ಪೀಠಗಳಾಗಿರುತ್ತವೆ. ಛಲಕ್ಕೆ ಛಲವಾದಿಗಳು, ಶೆಟ್ಟಿಗುತ್ತರು, ಏಕಾದಶರುದ್ರರು, ದೇಸಾಯಿಗಳು, ಭಕ್ತ ಬಣಜಿಗರು, ಪಂಚಾಂಗ ರುದ್ರರು, ಹದಿನೆಂಟು ಪಣಕ್ಕೆ ಸೇರಿದ ಶೆಟ್ಟಿ ಪಟ್ಟಣಸ್ಥರು– ಇವರೇ ಪಂಚ ಸಿಂಹಾಸನದಲ್ಲಿ ಗಂಟೆ ಬಟ್ಟಲು ಲಿಂಗ ಮುದ್ರೆಯನ್ನು ಹಿಡಿಯಲು ಕರ್ತವ್ಯಶೀಲರಾಗಿರುವುದರಿಂದ ಆಚಾರಶೀಲರಾಗಿರುವರು'. ಪುರಾಣಗಳಲ್ಲದೆ ಹಲವು ಪ್ರಮುಖ ಗುರುಮಠಗಳು ಕೂಡ ಈ ಸಮುದಾಯದ ಉಲ್ಲೇಖ ಹೊಂದಿದೆ.[೫೨]

೩.೪ ಐತಿಹ್ಯಗಳಲ್ಲಿ ಛಲವಾದಿ ಸಮುದಾಯ

ಐತಿಹ್ಯ–೧ : ಶಿವ–ಪಾರ್ವತಿಯರು ಪ್ರತಿನಿತ್ಯ ನದಿಗೆ ಸ್ನಾನಕ್ಕೆ ಹೋಗುತ್ತಿದ್ದರು. ಒಂದು ದಿನ ಪಾರ್ವತಿಗೆ ಮುಟ್ಟು ಎಂದಿನಂತೆ ಬಹಳಷ್ಟು ಬಂತು. ಅದನ್ನವಳು ತೊಡೆಯಲ್ಲಿ ಜೋಪಾನವಾಗಿ ಇಟ್ಟುಕೊಂಡಳು. ನದಿಗೆ ಹೋಗುವ ಮಾರ್ಗದಲ್ಲಿ ಒಂದು ದೊಡ್ಡ ಬಿರುಕು ಇತ್ತು. ಅದನ್ನು ದಾಟಿ ಹೋಗುವಾಗ ಬಿರುಕಿನಲ್ಲಿ ಮುಟ್ಟಿನ ರಕ್ತ ಬಿತ್ತು. ಅದನ್ನು ಲಕ್ಷಿಸದ ಪಾರ್ವತಿ ನದಿಗೆ ಸ್ನಾನ ಮಾಡಲು ಹೋದಳು. ಶಿವ–ಪಾರ್ವತಿಯರು ಸ್ನಾನ ಮುಗಿಸಿ ಹಿಂದುರುಗಿ ಬರುವಾಗ ಎರಬಿಡಿಯ ಬಿರುಕಿನಲ್ಲಿ ಗಂಡು ಮಗುವೊಂದು ಅಳುತ್ತಿತ್ತು. ಪಾರ್ವತಿ ಮಗುವನ್ನು ಕಂಡು ಎಂಥ ಮುದ್ದಾಗಿದೆ ಎಂದು ಎತ್ತಿಕೊಂಡು ಮನೆಗೆ ಹೋದಳು. ಆ ಮಗುವನ್ನು ಬಾಗಿಲ ಕಾಯಲು ಇರಿಸಿದಳು. ಆ ಮಗುವನ್ನು ಸಂರಕ್ಷಣೆ ಮಾಡಲು ಕಾಮಧೇನುಗೆ ಹೇಳಿದಳು.

ಯಾವುದೇ ಕಾರಣಕ್ಕೂ ಮಗುವಿಗೆ ಹಾಲಿನ ಕೆನೆ, ಬೆಣ್ಣೆ ಮತ್ತು ತುಪ್ಪ ಕೊಡಬೇಡವೆಂದು ಶಿವ ಪಾರ್ವತಿಗೆ ಹೇಳಿದ. ಒಮ್ಮೆ ಹಾಲು ಕಾಯಿಸುವ ಗಡಿಗೆಯಲ್ಲಿ ಕೆನೆಮುಸುರೆ ಇತ್ತು. ಪಾರ್ವತಿ ಆ ಗಡಿಗೆಯನ್ನು ತೊಳೆಯುವಾಗ ಕೆನೆಮುಸುರೆ ಚೆಲ್ಲಿಹೋದಳು. ಬಾಗಿಲ ಕಾಯುವ ಮಗು ಮುಸುರೆ ತೊಳೆಯುವಲ್ಲಿ ಬಂದು ನಿಂತಿತ್ತು. ಕೆನೆಮುಸುರೆ ಅದರ ಕಣ್ಣಿಗೆ ಬಿದ್ದ ತಕ್ಷಣ ಅದನ್ನು ತೆಗೆದುಕೊಂಡು

ತಿಂದಿತು. ಈ ಕೆನೆ ಇಷ್ಟು ರುಚಿಯಾಗಿರಬೇಕಾದರೆ ಅದನ್ನು ಕೊಡುವ ಕಾಮಧೇನು ಇನ್ನೆಷ್ಟು ರುಚಿಕರವಾಗಿರಬೇಕೆಂದು ಮನದಲ್ಲಿ ಅಂದುಕೊಂಡಿತು. ಒಂದು ದಿನ ದನಕಾಯಲು ಹೋದಾಗ ಕಾಮಧೇನುವನ್ನು ಕೊಂದು ತಿಂದಿತು. ಇದು ಶಿವನಿಗೆ ಹೇಗೊ ತಿಳಿಯುತ್ತದೆ. ದನ ಕಾಯುವ ಹುಡುಗ ನೀನು ಚಂಡಾಲನಾಗಿ ಸ್ಮಶಾನದಲ್ಲಿ ಬಿದ್ದಿರು ಎಂದು ಅವನಿಗೆ ಶಾಪ ಕೊಡುತ್ತಾನೆ. ಈ ಕಾರಣದಿಂದ ಛಲವಾದಿಯರು ಚಂಡಾಲರಾಗಿ ಸ್ಮಶಾನದ ಒಡೆತನ ಪಡೆದರು. ಈ ಮಗುವಿನ ಸಂತತಿಯವರೇ ನಂತರದಲ್ಲಿ ಛಲವಾದಿಗಳೆಂದು ಹೇಳಿಕೊಳ್ಳುತ್ತಾರೆ. ಪಾರ್ವತಿಯ ಹೊಲೆಯಿಂದ ಹುಟ್ಟಿದ, ದನ ಕಾಯುವ ಹುಡುಗನೇ ಮುಂದೆ ಹೊಲೆಯರ ಮೂಲ ಪುರುಷನಾದ. ಅವನ ಸಂತತಿಯವರಿಗೆ ಹೊಲೆಯ ಎನ್ನುವ ಹೆಸರು ಬಂದಿತು.

ಐತಿಹ್ಯ-೨ : ಹೊಲೆಯರು ಬೇಡ ಜನಾಂಗದ ಮೂಲವನ್ನು ಸಮರ್ಥಿಸಿಕೊಳ್ಳುತ್ತಾರೆ. ಕಾಮಧೇನು ತಿಂದು ಶಿವನಿಂದ ಶಾಪ ಪಡೆದ ಮಗುವನ್ನು ಶಿವಾಲಯದಿಂದ ಹೊರಹಾಕಲಾಯಿತು. ಆ ಮಗುವಿಗೆ ಯಾರೂ ಆಸರೆ ಇಲ್ಲದಂತಾಗುತ್ತದೆ. ಅವನು ತನ್ನ ಬೇಡ ಗೆಳೆಯನೊಬ್ಬನನ್ನು ಕರೆದುಕೊಂಡು ಶಿವನಲ್ಲಿ ಕ್ಷಮೆಯಾಚನೆಗಾಗಿ ಬರುತ್ತಾನೆ. ಶಿವಮಂದಿರದಲ್ಲಿ ಬಲ ಬಾಗಿಲು ಕಾಯುವ ಅಧಿಕಾರ ಪಡೆದ ಬೇಡನೂ ಎಡ ಬಾಗಿಲು ಕಾಯುವ ಅಧಿಕಾರ ಪಡೆದ ದನಗಾಯಿ ಹುಡುಗನೂ ಪ್ರವೇಶದ್ವಾರ ಹಂಚಿಕೊಂಡು ಕಾಯುತ್ತಾ ಕುಳಿತಿರುತ್ತಾರೆ. ಅವರು ಒಳಹೋಗಲು ಈ ಬಾಗಿಲಲ್ಲಿ ಆ ಹುಡುಗ ಅಡ್ಡ ನಿಲ್ಲುತ್ತಾರೆ. ಬಲ ಮತ್ತು ಎಡಬಾಗಿಲು ಕಾಯುವ ಅವರವರ ಸಂತತಿಯವರಿಗೆ ಕ್ರಮೇಣ ಬಲಗೈ, ಎಡಗೈ ಎಂದು ಹೆಸರು ಬಂದಿತೆಂದು ಹೇಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಛಲವಾದಿಯರು ತಮ್ಮನ್ನು ಬಲಗೈಯವರು ಎಂದು ಕರೆದುಕೊಳ್ಳುತ್ತಾರೆ.

ಐತಿಹ್ಯ ೩ : ಮೂರು ಲೋಕವೂ ನೀರಿನಿಂದ ತುಂಬಿಹೋಗಿತ್ತು. ಆಗ ಸೂರ್ಯ, ಚಂದ್ರ, ನಕ್ಷತ್ರಗಳಾವವೂ ಇರಲಿಲ್ಲ. ಕೇವಲ ಜಾಂಬವಮುನಿ ಒಬ್ಬನಿದ್ದ. ಆತ ಪಾತಾಳದಲ್ಲಿ ಪಾದವಿಟ್ಟು, ಮೃತ್ಯುಲೋಕದಲ್ಲಿ ಹೊಕ್ಕಳನ್ನೂ ಸ್ವರ್ಗಲೋಕದಲ್ಲಿ ತಲೆಯನ್ನೂ ಇಟ್ಟಿದ್ದನು. ಕಾಲಾನಂತರದಲ್ಲಿ ನೀರು ಹೆಪ್ಪುಗಟ್ಟಿ ವಸ್ತುವಾಯಿತು. ಅದರಲ್ಲಿ ಶಂಖವೊಂದು ಉತ್ಪತ್ತಿಯಾಯಿತು. ಈ ಶಂಖದಲ್ಲಿ ತತ್ತಿಗಳು ಉತ್ಪತ್ತಿಯಾಗಿ ಅದರಿಂದ ಕ್ರಮೇಣ ಶಂಕರ, ಮೇಘ, ಬ್ರಹ್ಮ, ನಂದಿ ಜನಿಸಿದರು.

ನಂದೀಶ್ವರ ಪಾರ್ವತಿಯನ್ನು ಹೊತ್ತುಕೊಂಡು ಹೇಳಿದ ಕಡೆ ಇಳಿಸುತ್ತಿದ್ದ. ಪ್ರತಿದಿನ ಇದೇ ರೀತಿ ನಡೆದುಕೊಂಡು ಹೋಗುತ್ತಿರುವಾಗ ನಂದೀಶ್ವರನಿಗೊಂದು ಕನಸು ಬಿತ್ತು. ಜಾಂಬವನ ಏಳು ಜನ ಮಕ್ಕಳನ್ನು ಸಂಹರಿಸಿದರೆ ಈ ಸೃಷ್ಟಿಯನ್ನು ನಿರ್ವಹಿಸಲು ಸಾಧ್ಯವೆಂದು ಅದು ಹೇಳುವಂತಿತ್ತು. ಇದೇ ಸಂದರ್ಭದಲ್ಲಿ ಶಿವನು ನೀರನ್ನೆಲ್ಲ ಮಣ್ಣಾಗಿಸಿ ಭೂಮಿಯನ್ನು ನಿರ್ಮಿಸುವುದರಲ್ಲಿ ಪ್ರಯತ್ನಿಸಿ ವಿಫಲನಾಗಿದ್ದನು. ಜಾಂಬವ ಮುನಿ ತನ್ನ ಜಡೆಗಳನ್ನೆಲ್ಲ ಹಗಲುಹೊತ್ತು ನೀರಿನಲ್ಲಿ ಬಿಟ್ಟಾಗ ಭೂಮಿಯಾಗುತ್ತಿತ್ತು. ರಾತ್ರಿಯ ಹೊತ್ತು ಜಡೆಯನ್ನು ಎಳೆದುಕೊಳ್ಳಲು ಅದು ಮತ್ತೆ ನೀರಾಗುತ್ತಿತ್ತು.

ಇದೊಂದು ಶಿವನಿಗೆ ಬಗೆಹರಿಯದ ಸಮಸ್ಯೆಯಾಗಿತ್ತು. ಆಗ ನಂದಿ ತನ್ನ ಕನಸಿನ ವೃತ್ತಾಂತವನ್ನು ಪ್ರಸ್ತಾಪಿಸಲು ಶಿವನು ಸಭೆಯೊಂದಕ್ಕೆ ಜಾಂಬವ ಮುನಿಯ ಮಕ್ಕಳನ್ನು ಕರೆಯಲು ತೀರ್ಮಾನಿಸಿದನು. ಸಭೆಯ ಸಂಗತಿಯನ್ನು ಜಾಂಬವ ಮುನಿಗೆ ತಿಳಿಸಲು ಶಿವ-ಪಾರ್ವತಿಯರು ನಂದಿಯನೇರಿ ಜಲಮಾರ್ಗ ಪಯಣ ಬೆಳೆಸಿದರು. ಜಲಮಾರ್ಗದ ನಡುವೆ ಪಾರ್ವತಿಗೆ ಮುಟ್ಟಾಗಿ ರಕ್ತದ ಹನಿಯೊಂದು ನಂದಿಯ ಇಣಿಯ ಬದಿಯಿಂದ ಜಾರಿ ಪಾದಕ್ಕಿಳಿದು ಕುರದ ಕೆಳಗೆ ಸೇರಿ ಅಲ್ಲಿಯೇ ನೆಲಸಿ ಮುಂದೆ ಗರ್ಭ ಧರಿಸಿ ಗಂಡು ಮಗು ಜನಿಸಿತು. ಆ ಕೂಸು ನಂದಿಯ ಕಾಲಿಗೆ ತೊಡೆಕಾಲು ಹೊಡೆಯುತ್ತಿರುವಾಗಲೆ ಶಿವ-ಪಾರ್ವತಿ ಜಾಂಬವ ಮುನಿಯ ಆಶ್ರಮ ತಲುಪಿದ್ದರು.

ಗಾಢ ನಿದ್ದೆಯಲ್ಲಿದ್ದ ಜಾಂಬವ ಮುನಿಯನ್ನು ಎಚ್ಚರಿಸಲು ನಂದಿ ತನ್ನ ಹಣೆಯಲ್ಲಿದ್ದ ಮೂರನೆಯ ಕೊಂಬಿನಿಂದ ತಿವಿಯಿತು. ಎಚ್ಚರಗೊಂಡ ಮುನಿ ಕೋಪದಿಂದ ನಂದಿಯ ಕೊಂಬನ್ನು ಮುರಿದ. ಅದು ನೀರಿನಲ್ಲಿ ತೇಲುತ್ತಾ ಬಂದು ನಂದಿಯ ಕಾಲಿಗೆ ಜೋತು ಬಿದ್ದಿರುವ ಮಗುವಿಗೆ ತಲುಪಿತು. ತಂದೆ ನಂದೀಶ್ವರನು ತನಗೆ ತಿನ್ನಲು ಏನೋ ಕೊಟ್ಟನೆಂದು ತಿಳಿದು ಆ ಕೊಂಬನ್ನು ಮಗು ಬಾಯಲ್ಲಿ ಹಿಡಿಯಲು ಒಂದು ಬಗೆಯಾದ ಶಬ್ದ ಹೊರಟಿತು. ಮಗು ಮುಂದೆ ಅದನ್ನೆ ಊದುತ್ತಾ ತಿರುಗಹತ್ತಿದನು. ಅವನ ಸಂತತಿಯವರೇ ಇಂದಿನ ಕಾಳೆಯವರು ಎಂದು ಹೇಳಿಕೊಳ್ಳುತ್ತಾರೆ. ಕಹಳೆ, ಕೊಂಬು ಮುಂತಾದ ತಾಮ್ರದ ವಾದ್ಯ ಊದುವವರು ಕಾಳೆಯವರು. ಇವರನ್ನು ಕಾಳಿ, ಛಲವಾದಿ ಎಂದೂ ಕರೆಯುತ್ತಾರೆ."[೨]

ಈ ರೀತಿಯಲ್ಲಿ ಛಲವಾದಿ ಸಮುದಾಯದ ಪೌರಾಣಿಕ ಹಿನ್ನೆಲೆಯಿದೆ. ಅವರಿಗೆ ಪೌರಾಣಿಕ ಹಿನ್ನೆಲೆಯಷ್ಟೇ ಅಲ್ಲದೆ ಐತಿಹಾಸಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆಯೂ ಇದೆ. ಐತಿಹಾಸಿಕತೆಯನ್ನು ಈ ಮುಂದೆ ಅಭ್ಯಸಿಸಬಹುದು. 'ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು' ಎನ್ನುವ ಮಾತು ಇತಿಹಾಸದ ಅಧ್ಯಯನ ಅಗತ್ಯವೂ ಅನಿವಾರ್ಯವೂ ಆಗಿರುವುದನ್ನು ಸಾರುತ್ತದೆ.

ಋಗ್ವೇದ ಮತ್ತು ಆ ನಂತರದ ವೇದಗಳ ಕಾಲದಲ್ಲಿ, ಮನುಸ್ಮೃತಿಯ ಪುಟಗಳಲ್ಲಿ, ಧರ್ಮ ಗ್ರಂಥಗಳಲ್ಲಿ, ಚರಿತ್ರೆಯ ಪುಟಗಳಲ್ಲಿ ಈ ಸಮುದಾಯ ಕುರಿತ ವಿವರಣೆಗಳು ದೊರೆಯುತ್ತವೆ. ಗೌತಮ ಬುದ್ಧನ ಕಾಲದಲ್ಲಿ 'ಮಾತಂಗ' ಪದರೂಪವನ್ನು ಛಲವಾದಿ ಪದಕ್ಕೆ ಪರ್ಯಾಯವಾಗಿ ಬಳಸಿದಂತಿದೆ. ಈ ಮಾತಂಗರು ಬುದ್ಧನ ಕಾಲಕ್ಕೆ ರಾಜ್ಯಾಧಿಕಾರವನ್ನು ಹೊಂದಿದ್ದರೆಂದು ಇತಿಹಾಸ ತಿಳಿಸುತ್ತದೆ.

೩.೫ ಚರಿತ್ರೆಯಲ್ಲಿ ಛಲವಾದಿ ಸಮುದಾಯ

"ಬಾದಾಮಿ ಚಾಲುಕ್ಯ ದೊರೆ ಮಂಗಳೇಶನು 'ಮಾತಂಗ' ರಾಜರನ್ನು ಸೋಲಿಸಿದ್ದಾಗಿ ಬದಾಮಿ ಗುಹಾ ಶಾಸನಗಳಿಂದ ತಿಳಿದುಬರುತ್ತದೆ. ಮಾತಂಗ ಎಂದರೆ ಛಲವಾದಿ, ಹೊಲೆಯ ಸಮುದಾಯ ಎಂದು ಉಲ್ಲೇಖವಿದೆ."[೭]

ಕ್ರಿ.ಶ. ೧೬೭೪ರ ಕಾಲದ (ಗುಂಡಲ ಪಂಡಿತ ಲಕ್ಷಣಾಚಾರ್ಯರ ವಶದಲ್ಲಿದ್ದ) ತಾಮ್ರಶಾಸನದ ೩೮೨-೮೩ ಸಾಲುಗಳು ಕುಲವಳ್ಳಿ ಕೊಪ್ಪ ಹಾಲದ ಹೊಲೆ ಕೊಜಗನು ಕೆಲವೊಂದು ಕಾಣಿಕೆಗಳನ್ನು ಕೊಟ್ಟುದಾಗಿ ನಿರೂಪಿಸುತ್ತದೆ.

ಚಿತ್ರದುರ್ಗದ ಮದಕರಿ ನಾಯಕನ ಕಹಳೆ ಮಲ್ಲಪ್ಪ ಮತ್ತವನ ಹೆಂಡತಿ ಒನಕೆ ಓಬವ್ವ ಸಹ ಛಲವಾದಿ ಸಮುದಾಯಕ್ಕೆ ಸೇರಿದವರು. ಇವರ ಶೌರ್ಯ, ಸಾಹಸ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧ ಸಂಗತಿಯಾಗಿದೆ. ಆಕೆಯ ಹಿರಿಯ ಸಹೋದರ ಕಹಳೆ ಕುದುರೆಪ್ಪ ಗುಡೇಕೋಟೆ ಸಂಸ್ಥಾನದಲ್ಲಿ ಏಕಾಂಗಿಯಾಗಿ ಹೋರಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿದ ಧೀರನಾಗಿದ್ದ. ಇಂದಿಗೂ ಗೋಸಿಕೆರೆ ಗೋತ್ರಕ್ಕೆ ಅಧಿದೇವತೆಯಾಗಿರುವ ವೀರಹನುಮಕ್ಕ ಈ ಸಮುದಾಯದಲ್ಲಿ ಹುಟ್ಟಿದವಳು. ಈಕೆ ತನ್ನ ಮಡಿಲಲ್ಲಿ ಕೆಂಡವನ್ನು ಕಟ್ಟಿಕೊಂಡು ಜರಡಿಯಲ್ಲಿ ಹೊಳೆಯಿಂದ ನೀರು ತಂದು ತನ್ನ ಪಾತಿವ್ರತ್ಯವನ್ನು ಶ್ರುತಪಡಿಸಿದ ಸಾಧ್ವಿಮಣಿಯಾಗಿದ್ದಾಳೆ. ನವಭಾರತದ ರಾಜ್ಯಾಂಗ ರಚನೆಯ ಕರುಡುಪತ್ರಗಳನ್ನು ಸರ್ವ ಜನರ ಶ್ರೇಯಸ್ಸಿಗಾಗಿ ರಚಿಸಿದ್ದಲ್ಲದೆ ಮಾನವ ಹಕ್ಕುಗಳಿಗಾಗಿ ಹೋರಾಡಿದ ಭಾರತದ ಗಣ್ಯ ವ್ಯಕ್ತಿ ಹಾಗೂ 'ಆಧುನಿಕ ಮನು' ಬಿ. ಆರ್. ಅಂಬೇಡ್ಕರ್ ಈ ಸಮುದಾಯದಲ್ಲಿ ಹುಟ್ಟಿದವರಾಗಿದ್ದಾರೆ.

ಛಲವಾದಿ ಸಮುದಾಯದ ಸಾಮಾಜಿಕ ಹಿನ್ನೆಲೆಯಲ್ಲಿ ಕೆಳವರ್ಗದ ಸಮುದಾಯಗಳ ಸಾಮಾಜಿಕ ಸಂರಚನೆಯನ್ನು ಅರಿಯುವುದೆಂದರೆ ಅದರ ಆಚರಣಾತ್ಮಕ ಜೀವನ ವಿಧಾನವನ್ನು ತಿಳಿಯುವುದೇ ಆಗಿದೆ. ಛಲವಾದಿ ಸಮುದಾಯದ ಹೊಲಗೇರಿಯ ಸಾಮಾಜಿಕತೆ ಕೇವಲ ಮೇಲ್ವರ್ಗದ ಗ್ರಹಿಕೆ ಮಾತ್ರವಾಗಿದೆ. ಅವರ ಜೀತಗಾರಿಕೆ, ಕೃಷಿ ಕೂಲಿ ಬದುಕು, ನೀಗದ ಬಡತನ, ಅಸ್ಪೃಶ್ಯತೆಯ ಮಾನಸಿಕ ಹಿಂಸೆ ಹಾಗೂ ಅಪಮಾನಗಳು ದುಡಿಮೆಯೊಂದಿಗೆ ತಳುಕು ಹಾಕಿಕೊಂಡಿರುವ ಇತ್ಯಾದಿ ಅಂಶಗಳು ಛಲವಾದಿಯವರ ಸಂಸ್ಕೃತಿಯಲ್ಲಿದೆ. ಉನ್ನತ ಸಾಮಾಜಿಕ ಸ್ಥಾನಮಾನಗಳನ್ನು ಅನುಭವಿಸಿ ವಿಲಕ್ಷಣ ಸಾಂಸ್ಕೃತಿಕ ಪಲ್ಲಟಗಳಿಂದ ಇಂದಿನ ಕೆಳಸ್ತರದ ಸಾಮಾಜಿಕ ಬದುಕಿಗೆ ನೂಕಿದವರೆಂಬ ಚರಿತ್ರೆಯ ಅಜ್ಞಾತ ನೆಲೆ ಇವರಲ್ಲಿ ತೆರೆದುಕೊಳ್ಳುತ್ತದೆ.

೩.೫.೧ ನೇಗಿಲ ಒಡೆಯರು, ನೇಗಿಲ ಹೊಡೆಯುವ ಅರಸರು

"ಕರುನಾಡ ಹಳ್ಳಿಗರಲ್ಲಿ 'ಅರ' ಎಂದರೆ ನೇಗಿಲು ಎಂಬ ಅರ್ಥವಿದೆ. "ಕಡಸಗಳ್ನ ಅರಕ್ಕಟ್ಟಿ ಬಾಳ್ತ್ತಾವ್ನಿ" ಎಂಬ ಗಾದೆಮಾತು ಮಾಳವರಲ್ಲಿ ಬಳಕೆಯಲ್ಲಿದೆ. ಇದರರ್ಥ "ಕರುಗಳನ್ನು ನೇಗಿಲಿಗೆ ಕಟ್ಟಿ ನನ್ನ ಬಾಳು ನಡೆಸುತ್ತಿದ್ದೇನೆ" ಎಂಬುದಾಗಿದೆ. ಇಲ್ಲಿ 'ಅರಕ್ಕಟ್ಟಿ' ಎಂಬ ಪದಕ್ಕೆ ನೇಗಿಲು ಎಂಬರ್ಥ ಒಡಮೂಡಿದೆ. ಹಾಗೆಯೆ "ಆರಂಭಗಾರ್ನ ತಂದು ಕಟ್ಟಿದ್ಲ ನಾ ಯಾ ಐಬೋಗ ಕಂಡೇನು?" ಎಂಬ ಈ ಮಾತನ್ನು ಮಾಳವ ರೈತನ ಮಗಳು ತನ್ನ ತಂದೆಗೆ ಹೇಳಿದಂತಿದೆ. ಇದರರ್ಥ "ವ್ಯವಸಾಯ ಮಾಡಿಕೊಂಡಿರುವವನನ್ನು ಕರೆತಂದು ನನಗೆ ನೀನು ಮದುವೆ ಮಾಡಿಸಿರುವೆ, ನಾನು ಯಾವ ವೈಭೋಗವನ್ನು ಕಾಣುವೆ?" ಎಂಬುದಾಗಿದೆ. ಆರಂಭ ಎಂಬ ಪದ ಕೂಡ ನೇಗಿಲು ಹೊಡೆಯುವ ಕೆಲಸ

ಅಥವಾ ವ್ಯವಸಾಯ ವೃತ್ತಿಗೆ ಸಂಬಂಧಿಸಿ ಹುಟ್ಟಿದೆ. 'ಅರ' ಎಂಬ ಪದವೇ 'ಅರಸ' ಎಂಬ ಪದದ ಮೂಲಧಾತುವಾಗಿದೆ. ಆರಂಭಗಾರ ಎಂದರೆ ಈ ಅರ್ಥದಲ್ಲಿ ಅರಸನೇ ಆಗುತ್ತಾನೆ. ಅರಸರ ಭಾಷೆ ವ್ಯವಸಾಯಗಾರರ ಭಾಷೆಯೂ ಹೊಲಯರ ಭಾಷೆಯೂ ಆಗುತ್ತದೆ. 'ಅರವಿಡಂ' ಎಂಬ ಭಾಷೆಗೆ ಸಂಬಂಧ ಪಡುತ್ತದೆ. ವಿಜಯನಗರ ಸಾಮ್ರಾಜ್ಯವನ್ನಾಳಿದ ರಾಜ ಮನೆತನಗಳಲ್ಲಿ ಅರವಿಡು ಮನೆತನವೂ ಒಂದಾಗಿದೆ. ಅದು ವ್ಯವಸಾಯ ಮಾಡಿಕೊಂಡಿದ್ದವರ ಮನೆತನವೆ ಆಗಿದೆ. ಅರವೀಡು ಮನೆತನ ಹೊಲಯರ ಮನೆತನ ಎಂಬುದರಲ್ಲಿ ಎರಡು ಮಾತಿಲ್ಲ."[೮]

೩.೫.೨ ಸಾಗುವಳಿ ಮಾಡುತ್ತಿದ್ದ ಸಾಳುವ ದೊರೆಗಳು

"ಆನೇಕಲ್ ತಾಲ್ಲೂಕಿನಲ್ಲಿ ಹೊಲಯರನ್ನು ಅರ ಹೊಲೆಯರು, ಅರ-ತಿಗಳ ಹೊಲಯರು ಎಂದು ಕರೆಯುತ್ತಾರೆ. ಅವರು ಆಡುವ ಭಾಷೆ ಅರಭಾಷೆಯಾಗಿದೆ. ತಿಗಳ ಜನಾಂಗ ತಿಗಳರ ಭಾಷೆ ಮಾತನಾಡುತ್ತಾರೆ. ತಿಗಳರಿಂದ ತಿಗಳಾರಿ ಲಿಪಿ ಉದಯಿಸಿದೆ ಎಂದು ನಂಬಬಹುದು. ತಿರು ಹಾಗೂ ಗಳ್ ಎಂಬ ಎರಡು ಪ್ರಾಚೀನ ಕನ್ನಡ ಪದಗಳಾಗಿವೆ. ಈ ಪದಗಳು ಮಾಳವ ಅಥವಾ ಸುಮೇರಿಯನ್ ಪದಗಳಾದ ತಿರು ಮತ್ತು ಗಳ್ ಯೊಂದಿಗೆ ಸೇರಿ 'ತಿರುಗಳ್' ಆಗಿದೆ. ಇದರರ್ಥ ಆಸ್ಥಾನದ ಶ್ರೇಷ್ಠ ಎಂದಿದೆ. ನಂತರದಲ್ಲಿ ಅದು ತಿಗಳ ಆಗಿದೆ ಎನ್ನಬಹುದು.

ಕೊಡಗು-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇರುವ ಕೆಲವು ರೈತಾಪಿ ಸಮುದಾಯಗಳು ಆಡುವ ಭಾಷೆಗೆ ಅರ ಭಾಷೆ, ಅರನುಡಿ, ಹಾಗೂ ಅರರ ಮಾತು ಎಂದು ಕರೆಯುತ್ತಾರೆ. 'ಅರ' ಎಂಬ ಮೂಲಧಾತು ಪದ ಅರಸ, ಅರ ಹೊಲಯ ಮತ್ತು ಆರತಿಗಳ ಹೊಲಯ – ಇವೆಲ್ಲ ಒಂದೆಂದು ಸಾರುತ್ತದೆ. ಆ ಕಾಲ ಘಟ್ಟದಲ್ಲಿ ಕನಾಂಗ, ಕನಾಂಡ, ಕನ್ನಡ, ತಮಿಳು ಭಾಷೆಗಳು ಒಂದೇ ಆಗಿದ್ದವು. ಅವನ್ನು ಮಾಳವ ಭಾಷೆ ಎನ್ನಬಹುದು.

ವಿಜಯನಗರ ಆಳಿದ ಮನೆತನಗಳಲ್ಲಿ ಸಾಳುವ ಮನೆತನವೂ ಒಂದಾಗಿದೆ. 'ಸಾ' ಎಂದರೆ 'ಶಾ' ಎಂಬಂತೆ ರಾಜ ಎಂದು ಮಾಳವದಲ್ಲಿ ಹಾಗೂ ಸುಮೇರಿಯನ್ ಭಾಷೆಯಲ್ಲಿ ಅರ್ಥವಿದೆ. ಸುಮೇರಿಯನ್ ಭಾಷೆಯಲ್ಲಿ 'ಳು' ಎಂದರೆ ದೊರೆ. ಸಾಳುವ ಎಂದರೆ ದೊರೆ ಅಥವಾ ದೊಡ್ಡದೊರೆ, ಮಹಾರಾಜ ಎಂದು ಅರ್ಥವಿದೆ.

ಈ ಮೇಲಿನ ಪದಗಳಲ್ಲದೆ ನೂರಾರು ಕನ್ನಡದ ಪದಗಳು ಹೊಲೆಯರು, ಮಾದರು, ಮಾಲಾಗಳು. ಪುಲಯರು, ಕೊರಗರು, ಕುಕ್ಕಗಳು, ಅರಸರು, ದೊರೆಗಳು ಹಾಗೂ ಪಾಳೆಗಾರರು ನೆಲದೊಡೆಯರಾಗಿದ್ದರು, ಹಾಗೂ ವ್ಯವಸಾಯ, ಪಶುಪಾಲನೆಯನ್ನೆ ತಮ್ಮ ಮೂಲ ಕಾಯಕವನ್ನಾಗಿಸಿ ಕೊಂಡಿದ್ದರು ಎಂಬುದನ್ನು ತೋರಿಸುತ್ತವೆ."[೯] Holeya Back bone of cultivation in the country : ಹೊಲೆಯ ಈ ದೇಶದಲ್ಲಿ ವ್ಯವಸಾಯದ ಬೆನ್ನೆಲುಬು.

"Of the Holeyas of the Mysore privince, the following account is given in the Mysore Census Reports, 1891 and 1901. "The Holeyas number 502,493 persons, being 10.53 percent of the total population. They constitute, as their name implies, the back-bone of cultivation in the country. Hola is the Kanarese name for a dry-crop field, and Holeya means the man of such field."[10] ಈ ನಾಡಿನ ಮೂಲ ನಿವಾಸಿಗಳಾದ ಹೊಲೆಯರು ಕೃಷಿ ಕಾಯಕದ ಮೂಲಪುರುಷರೆಂದು ಹಲವು ಮಂದಿ ವಿದ್ವಾಂಸರ ಅಭಿಪ್ರಾಯ. ಹೊಲವನ್ನು ಉಳುಮೆ ಮಾಡುವವರಾದ್ದರಿಂದ ಇವರಿಗೆ ಈ ಹೊಲೆಯ ಎಂಬ ನಾಮಧೇಯ ಲಭಿಸಿತೆಂದು ಕೆಲವರು ಭಾವಿಸುವರು.

೩.೫.೩ ತಿರುಕುಲ

"ಸುಮೇರಿಯನ್ ಭಾಷೆಯಲ್ಲಿ 'ತಿರು' ಎಂದರೆ ರಾಜನ ಆಸ್ಥಾನದವ, ರಾಜನ ಅರಮನೆಗೆ ಸಂಬಂಧಿಸಿದವ ಎಂದು ಅರ್ಥವಿದೆ. ಸುಮೇರಿಯನ್ ಭಾಷೆಯಲ್ಲಿ 'ಕುಲ' ಎಂದರೆ ಗುಂಪು, ಸಂಗ ಎಂದು ಅರ್ಥವಿದೆ. ಇಲ್ಲಿ ತಿರುಕುಲ ಎಂದರೆ ರಾಜನ ಆಸ್ಥಾನದ ಕುಲ ಅಥವಾ ರಾಜನ ಗುಂಪು ಅಥವಾ ರಾಜನ ಜಾತಿ ಅಥವಾ ರಾಜಕುಲ ಎಂದು ಅರ್ಥವಾಗುತ್ತದೆ. ರಾಮಾನುಜಾಚಾರ್ಯರು ಹೊಲೆಯರನ್ನು ತಿರುಕುಲದವರೆಂದು ಹೇಳುವ ಮೊದಲೇ ಅವರು ತಿರುಕುಲದವರಾಗಿದ್ದರು. ಸಾಕ್ಷಿಯಿಲ್ಲದ ಮೂರ್ತಿಯ ಕತೆ ಹುಟ್ಟಿದ ನಂತರ ಅವರು ತಿರುಕುಲದವರಾಗಬೇಕಾದ ಅವಶ್ಯಕತೆಯಿರಲಿಲ್ಲ. ಇತಿಹಾಸದ ಪ್ರಾಮುಖ್ಯತೆಯನ್ನು ಅರಿಯದೆ ಇತಿಹಾಸದ ಬಗ್ಗೆ ಹೇಳುವವರಿಂದ ಈ ಬಗೆಯ ಸಾಕ್ಷೀಕರಿಸಲಾಗದ ದಂತಕತೆಗಳು ಹುಟ್ಟಿಕೊಳ್ಳುತ್ತವೆ. ಹಿಂದಿನ ಜನಜೀವನ, ಆಚರಣೆ, ವಿಚಾರ, ಆಡಳಿತ ವ್ಯವಸ್ಥೆ, ಭಾಷೆ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಊಹಾತ್ಮಕ ವಿಷಯಗಳೇ ಪ್ರಮುಖವೆನಿಸಿ ಜನಸಾಮಾನ್ಯರನ್ನು ಹಾದಿ ತಪ್ಪಿಸಿವೆ. ಶಾಂತ ಮನಸ್ಸಿನ ಇತಿಹಾಸಕಾರನು ಈ ಬಗೆಯ ಊಹೆಗಳಿಂದ ವಿಚಲಿತನಾಗಬೇಕಾಗಿಲ್ಲ. ತಿರುವಳ್ಳುವರ್ ಮೊದಲಿಗೆ ರಾಜಕುಲದವನಾಗಿದ್ದುದರಿಂದ ಆ ರೀತಿ ಕರೆಯಲಾಯಿತು. ತಿರು ಎಂದರೆ ಶ್ರೀ ಎಂಬುದರ ಇನ್ನೊಂದು ರೂಪವೆಂದು ಕೆಲವು ಪಂಡಿತರು ತಿಳಿಯಲಾರಂಭಿಸಿದರು.

ದೇವಸ್ಥಾನಗಳನ್ನು ಹೊಲಯರು, ಹೊಲಯ ದೊರೆಗಳು ಕಟ್ಟಿರದಿದ್ದರೆ ಹೊಲಯರಿಗೆ ಈ ಬಗೆಯ ಗೌರವ ನೀಡಬೇಕಾಗಿರಲಿಲ್ಲ. ಹೊಲಯರು ದೊರೆಗಳಾಗಿದ್ದರು ಎಂದು ಹೇಳಲು ಈ ಆಚರಣೆಯೂ ಸಾಕ್ಷಿಯಾಗಿದೆ."[೧೧]

೩.೫.೪ ಅಪಾರ ಜಮೀನು ಮತ್ತು ತೆರಿಗೆ

"ಮೈಸೂರಿನ ಆಡಳಿತ ವ್ಯವಸ್ಥೆ ಹೊಲೆಮಾದಿಗರು ಜಮೀನುದಾರರಾಗಿದ್ದುದನ್ನು ಸಂಪೂರ್ಣವಾಗಿ ಅನುಮೋದಿಸುತ್ತದೆ. ಅವರು ಜಮೀನಿನ ಮಾಲೀಕರಾಗಿರದ ಕಡೆ ಗುತ್ತಿಗೆದಾರರಾಗಿ ಕಂಡುಬರುತ್ತಾರೆ. ಅಂದು ಅತಿಹೆಚ್ಚು ಹೊಲದ ಕಂದಾಯ ರೂ. ೨೭೭ಗಳನ್ನು ಹೊಲೆಯನೊಬ್ಬ ಬೆಂಗಳೂರು ಜಿಲ್ಲೆಯಲ್ಲಿ

ಕಟ್ಟಿದ್ದಾನೆ. ಕೋಲಾರ ಹಾಗೂ ಮೈಸೂರಿನ ಕೆಲವು ಹೊಲೆಯರು ಅತಿ ಕಡಿಮೆ ಕಂದಾಯ ಆರು ಪೈಸಾ ನೀಡಿದ್ದಾರೆ. ಮೈಸೂರು ಸಂಸ್ಥಾನದ ಒಟ್ಟು ಕಂದಾಯದಲ್ಲಿ ಮೂರು ಲಕ್ಷ ರೂಪಾಯಿ ಕೇವಲ ಹೊಲೆಯ–ಮಾದಿಗರಿಂದ ಬಂದಿದೆ. ಅದರಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಹೊಲೆಯರು ನೀಡಿದ್ದಾರೆ. ಉಳಿದಿದ್ದನ್ನು ಮಾದಿಗರು ಕೊಟ್ಟಿದ್ದಾರೆ. ಈ ಅಂಕಿ ಅಂಶಗಳು ಈ ಜನರ ಸ್ಥಿತಿ–ಗತಿ ಹಾಗೂ ಸಿರಿತನದ ಬಗ್ಗೆ ಹೇಳುತ್ತವೆ. ಕೆಲವು ಹೊಲೆಯರ ಉದಾಹರಣೆಗಳನ್ನು ಸುಲಭವಾಗಿ ಹೇಳಬಹುದು, ಆ ಹೊಲೆಯರು ಸಾಲನೀಡುವ ಸಾಹುಕಾರರಾಗಿ ಬೆಳೆದಿದ್ದಾರೆ ಹಾಗೂ ಸಮಾಜದಲ್ಲಿ ಪ್ರಭಾವಶಾಲಿಗಳಾಗಿದ್ದಾರೆ."[೧೨] ಹೀಗೆ ಹೆಚ್ಚಿನ ಭೂಮಾಲಿಕರಾಗಿ ಹಿಂದೆ ಬದುಕಿದ್ದರೆಂದು ಈ ಮೇಲಿನ ತೆರಿಗೆ ಕಟ್ಟಿದ್ದರ ಆಧಾರದ ಮೂಲಕ ತಿಳಿದುಬರುತ್ತದೆ. ಮೈಸೂರು ಸಂಸ್ಥಾನಕ್ಕೆ ಅಧಿಕ ಪ್ರಮಾಣದ ತೆರಿಗೆಯನ್ನು ಛಲವಾದಿ ಸಮುದಾಯವೇ ಪಾವತಿಸಿದೆ.

೩.೫.೫ ಕುಳವಾಡಿ

"ಇವರು ಹಿಂದಿನ ಹೊಲಯರ (ರಾಜರ) ಸುವರ್ಣಕಾಲದಲ್ಲಿ ಹಳ್ಳಿಗಳ ರಾಜ್ಯಭಾರ ಮಾಡುತ್ತಿದ್ದರು ಅಥವಾ ಆಡಳಿತ ನಡೆಸುತ್ತಿದ್ದರು. ಹಾಗಾಗಿ ಅವರು ತಮ್ಮ ಹಳ್ಳಿಗಳ ಮೇರೆ ಹಾಗೂ ರೈತರ ಹೊಲಗಳ ಬದುಗಳನ್ನು ಚೆನ್ನಾಗಿ ಗುರುತಿಸಬಲ್ಲವರಾಗಿದ್ದರು. ಈ ಬಗ್ಗೆ ಥರ್ಸ್ಟನ್ ಅವರ ಮಾತುಗಳು ಈ ಕೆಳಗಿನಂತಿವೆ.

ಹೊಲೆಯರು ಹಳ್ಳಿಗಳನ್ನು ಕಟ್ಟಿ ಬೆಳೆಸಿ ಆಳುತ್ತಿದ್ದುದರಿಂದ ಅವರಿಗೆ ತಮ್ಮ ಹಳ್ಳಿಗಳ ಮೇರೆಗಳು ಚಿರಪರಿಚಿತವಾಗಿರುತ್ತಿದ್ದವು. ಅವರನ್ನು ಅಧಿಕಾರದಿಂದ ತೆಗೆದು ಹಾಕಿದ ಮೇಲೂ ಹಳ್ಳಿಗಳ ನಡುವಿನ ಮೇರೆ ಗುರುತಿಸಲು ಹಾಗೂ ರೈತರ ಹೊಲಗಳ ನಡುವಿನ ಗಡಿ ಗುರುತಿಸಲು ಹೊಲಯ ಬೇಕೆಬೇಕಿತ್ತು. ಸತ್ತ ಮೇಲಾದರೂ ನ್ಯಾಯಯುತವಾಗಿ ಸಲ್ಲಬೇಕಾದ ನೆಲದಲ್ಲಿ ಮಲಗಬೇಕೆಂಬ ಐಕ್ಯಕ ಕಾರಣದಿಂದ ಸುಡುಗಾಡಿಗೆ ಅಥವಾ ಹೆಣದ ಮಾಳಕ್ಕೆ ಹೊಲಯನಿಗೆ ನೆಲದ ಹಾಗ (ನೆಲಬಾಡಿಗೆ) ನೀಡುತ್ತಾರೆ. ಆತನಿಂದ ಕಿತ್ತುಕೊಂಡ ಯಾವುದೇ ಜಮೀನಿಗೂ ಹಾಗ ನೀಡಿದವರ ಪಾಪಪ್ರಜ್ಞೆ ಇಲ್ಲಿ ಜಾಗೃತವಾಗುತ್ತದೆ."[೧೩] ಅಂದರೆ ಹೊಲೆಯ ಈ ಭೂಮಿಗೆ ಒಡೆಯ, ಹೀಗಾಗಿ ಮಾನವ ಕುಲ ಸತ್ತನಂತರವೂ ಅವನಿಗೆ ತೆರಿಗೆ ನೀಡಬೇಕಾಗಿರುತ್ತದೆ. ಜಗದ ಒಡೆಯನಿಗೆ ಹಣ ಕೊಟ್ಟು ಹೆಣ ನೀಡಬೇಕಾದ ಸಂಗತಿ ಈಗಲೂ ನಮ್ಮಲ್ಲಿದೆ. ಆದರೆ ಇಂದು ಆ ಪರಿಕಲ್ಪನೆ ಬದಲಾಗಿದೆ.

೩.೫.೬ Holodia Gudiya : "A name for the agricultural section of the Oriya Gudiyas." ಒಡಿಸ್ಸಾದಲ್ಲಿ ಜಮೀನ್ನುಳ್ಳ ವ್ಯವಸಾಯಗಾರ ವರ್ಗಕ್ಕೆ ಹೊಲೊದಿಯ ಗುದಿಯ ಎಂಬ ಹೆಸರಿದೆ.

೩.೫.೭ Holuva (holo, plough) : A synonym of Pentiya, and the name of a section of Oriya Brahmans, who plough the land."

ಹೊಲ ಉಳುವ ಒರಿಯಾ ಬ್ರಾಹ್ಮಣರ ವರ್ಗವೊಂದರ ಹೆಸರು ಪೆಂತಿಯಾಗೆ ಸಮಾನವಾಗಿದೆ.[೧೪]

೩.೫.೮ **Gatti** : "A small caste of cultivators, found chiefly near Kumbla and Someswara in the Kasaragod taluk of South Canara. Other names for the caste are Poladava and Holadava, both signifying men of the field. Like the Bants, they follow the aliya Santana law of inheritance (in the female line), have exogamous septs or balis, and, on the day of the final death ceremonies, construct car-like structures, if the deceased was an important personage in the community. The Bants and Gatis interdine, but do not intermarry. The headman of the Gattis is called Gurikara. The God of the Someswara temple is regarded as the caste deity, and every family has to pay an annual fee of four annas to this temple. Failure to do so would entail excommunication."

ಈ ಗತ್ತಿ ಜಾತಿಯವರಿಗೆ ಪೊಲದವ ಮತ್ತು ಹೊಲದವ ಎಂದು ಕೂಡ ಕರೆಯುತ್ತಾರೆ. ಅವರ ಧಾರ್ಮಿಕ ಆಚರಣೆಗಳು ಬಂಟರ ಆಚರಣೆಗಳಂತಿವೆ.[೧೫]

೩.೫.೯ Holeya Kings

"All Tulu Brahmin chronicles," Mr. H. A. Stuart writes "agree in ascribing the creation of Malabar and Canara, or Kerala, Tuluva, and Haiga to Parasu Rama, who reclaimed from the sea as much land as he could cover by hurling his battle-axe from the top of the Western Ghats. A modified form of the tradition states that Parasu Rama gave the newly reclaimed land to Naga and Machi Brahmins, who were ot true Brahmins, and were turned out or destroyed by fishermen and Holeyas, who held the country till the Tulu Brahmins were introduced by Mayur varma (of the Kadamba dynasty). All traditions unite in attributing the introduction of the Tulu Brahmins of the present day to Mayur Varma, but they vary in details connected with the manner in which they obtained a firm footing in the land. One account says that habashika, chief of the Koragas, drove out Mayur Varma, but was in turn expelled by Mayur Varma's son, of son-in-law, Lokaditya of Gokarnam, who brought Brahmins form Ahi-Keshetra, and settled them in thirty-two villages. Anothe makes Mayur Varma himself the invader of the country, which till then had remained in the possession of the Holeya Kings and fishermen who nad turned out Parasu Rama's

Brahmins. Mayur Varma and the Brahmins whom he had brought from Ahi-Kshetra were again driven out by Nanda, a Holeya chief, whose son Chandra Sayana had, however, learned respect for Brahmins from his mother, who had been a dancing-girl in a temple. His admiration for them became so great that he not only brought back the Brahmins, but actually made over all his authority to them, and reduced his people to the position of slaves."

ಹೊಲೆಯರು ರಾಜರಾಗಿದ್ದರು ಎಂಬುದರ ಸಾಕ್ಷಿಯನ್ನು ಇನ್ನಿತರ ಪುಟಗಳಲ್ಲಿರುವುದನ್ನು ಗಮನಿಸಬಹುದು. ಚಾಲುಕ್ಯ, ಪಲ್ಲವ ಹಾಗೂ ಹೊಯ್ಸಳರ ಬಗ್ಗೆ ನೀಡಿರುವ ವಿವರಗಳನ್ನು ನೋಡಬಹುದು."೧೪ ಹೊಲೆಯರು ಈ ನಾಡನ್ನು ಆಳಿದವರು, ರಕ್ಷಿಸಿ ಕಾಪಾಡಿದವರಾಗಿದ್ದಾರೆ. ಆದರೆ ಇಂದು ಹೊಲೆಯನ ಬದುಕು ಹೋಳಾಗಿದೆ. ಸಾಮಾಜಿಕವಾಗಿ ನೈಜ ಸ್ಥಾನಮಾನಗಳಿಲ್ಲದೆ ಮಾನವ ಸಮಾಜದಿಂದ ದೂರೀಕರಿಸಲ್ಪಟ್ಟಿದ್ದಾನೆ. ನಿಜವಾದ ಈ ಸಮಾನತೆ ಒಡೆತನ ಇನ್ನೂ ದೊರಕಿಲ್ಲ.

"ಹೊಲಯರ ಮಹಾನತೆ ಮತ್ತು ದೊರೆತನದ ಬಗ್ಗೆ ೧೮೯೭ರಲ್ಲಿ ಲಂಡನ್‌ನಿಂದ ಪ್ರಕಟಿತವಾದ ಬಿ. ಲಿವಿಸ್ ರೈಸ್ ಅವರ ಮೈಸೂರು ಗೆಜೆಟಿಯರ್‌ನಿಂದ ಆಯ್ದ ಭಾಗವನ್ನು ನೀಡಲಾಗಿದೆ.

ಹೊಲಯರ ಹೆಸರನ್ನು 'ಹೊಲ' ಎಂಬ ಪದದಿಂದ ಉತ್ಪನ್ನ ಮಾಡಬಹುದು. ಅವರು ಪ್ರತಿ ಹಳ್ಳಿಯ ಕಾಲು ಭಾಗ ಜಾಗವಾದ ಹೊಲಗೇರಿ ಎಂಬ ತಮ್ಮದೇ ಜಾಗದಲ್ಲಿ ವಾಸಿಸುತ್ತಾರೆ. ಅವರು ಸಂಸ್ಕೃತ ಬರಹಗಾರರ ಕಣ್ಣಲ್ಲಿ ಚಾಂಡಾಳರೂ ಬಲಗೈ ಪಂಗಡದ ಪ್ರತಿನಿಧಿಗಳೂ ಆಗಿದ್ದಾರೆ. "ಅವರು ರೈತರ ಸಹಾಯಕರು ಅವರು ನೇಗಿಲು ಹೊಡೆಯುವುದರಲ್ಲಿ ಮತ್ತು ದನ-ಕರುಗಳ ಸಾಕಾಣಿಕೆಯಲ್ಲಿ ನಿರತರಾಗಿದವರಾಗಿದ್ದಾರೆ. ಅವರಲ್ಲೊಬ್ಬ ಗ್ರಾಮ ದೇವತೆಯ ಪೂಜಾರಿಯಾಗಿರುತ್ತಾನೆ. ಜಾತ್ರೆಯ ದಿನಗಳಲ್ಲಿ ಎಲ್ಲರೂ ಕಾಣಿಕೆ ನೀಡಲು ಮುಗಿಬೀಳುವಾಗ ಅವನು ದ್ವಿಜ ಬ್ರಾಹ್ಮಣನಿಗಿಂತಲೂ ಮಿಗಿಲಾದ ಸ್ಥಾನಮಾನ ಹೊಂದಿರುತ್ತಾನೆ." (ಈ ವಿಷಯ ಮತ್ತು ಈ ಕೆಳಕಂಡುಬರುವ ಹಲವು ವಿಷಯಗಳನ್ನು ಕ್ಯಾಪ್ಟನ್ ಮ್ಯಾಕೆಂಜಿ ಅವರ "ಹಾಸನ ಜಿಲ್ಲೆಯ ಕುಳವಾಡಿಗಳು" ಎಂಬ ಶೀರ್ಷಿಕೆಯ, ಇಂಡಿಯನ್ ಆಂಟಿಕ್ವರಿ, ಸಂಪುಟ ೨, ಪುಟ ೬೫ರಲ್ಲಿ ಪ್ರಕಟವಾಗಿರುವ ಲೇಖನದಿಂದ ಸಂಗ್ರಹಿಸಲಾಗಿದೆ.)

ರೈತರುಗಳಿಗೆ ಮಾರ್ಗದರ್ಶಕರಾಗಿ ನಿರ್ದೇಶನ ನೀಡುವ ತೋಟಿ ಅಥವಾ ಕುಳವಾಡಿ ಯಾವಾಗಲೂ ಹೊಲಯನಾಗಿರುತ್ತಾನೆ. ಪ್ರತಿಯೊಂದು ಹಳ್ಳಿಯ ಆಡಳಿತ ವ್ಯವಸ್ಥೆಯಲ್ಲಿ ಆತ ಗಮನಾರ್ಹವಾದ ಮತ್ತು ಕಡೆಗಣಿಸಲು ಬಾರದ ಪ್ರಮುಖ ಸದಸ್ಯನಾಗಿದ್ದಾನೆ. ಆತನು ತನ್ನ ಅಧಿಕಾರ ಸ್ಥಾನಮಾನದಿಂದಾಗಿ ಹಳ್ಳಿಯ ಪೋಲಿಸ್ ಅಧಿಕಾರಿಯಾಗಿದ್ದಾನೆ. ಹಳ್ಳಿಯ ಸಮುದಾಯಗಳಲ್ಲಿ ಜಗಳ-ಗಲಾಟೆ-ತಂಟೆ ಮೊದಲಾದವು ನಡೆಯದಂತೆ ನೋಡಿಕೊಳ್ಳುವ ಅಧಿಕಾರಿಯಾಗಿದ್ದಾನೆ. ಹಳ್ಳಿಯ ಜನರ ಸಂದೇಶಗಳನ್ನೂ ಮಾಹಿತಿಯನ್ನೂ ರವಾನಿಸುವ ಹರಿಕಾರನಾಗಿದ್ದಾನೆ. ಹಳ್ಳಿಯ ಮುಖ್ಯಸ್ಥನ

ಬಂಟನಾಗಿದ್ದಾನೆ. ಆತನು ಪಡೆದಿರುವ ಹಕ್ಕುಗಳು ಮತ್ತು ಸವಲತ್ತುಗಳು ಈ ಹಿಂದೆ ಆತ ಹೊಂದಿದ್ದ ಜಮೀನಿನ ಇಣುಕು ನೋಟವನ್ನು ಕಾಣಿಸುತ್ತದೆ, ಹಾಗೂ ಹೊಲಯರೇ ಹಳ್ಳಿ ಸ್ಥಾಪಿಸಿದ ಮಹಾನ್ ಜನರೆಂಬ ಸಾಕ್ಷ್ಯ ಕಂಡುಬರುತ್ತದೆ. ಎಲ್ಲ ಜಾತಿಯವರೂ ಕುಲವಾಡಿಯೆ ಊರಿನ ಮಾಲಿಕನೆಂದು ಯಾವ ಹಿಂಜರಿಕೆಯಿಲ್ಲದೆ ಒಪ್ಪಿಕೊಳ್ಳುತ್ತಾರೆ.

ಇಂದಿಗೂ ಹಳ್ಳಿಯ ಗಡಿರೇಖೆಯ ಜಗಳವನ್ನು ಬಗೆಹರಿಸುವ ವಿಷಯದಲ್ಲಿ ಎರಡು ಹಳ್ಳಿಗಳ ಕುಲವಾಡಿಗಳು ಒಪ್ಪಿ ತೀರ್ಮಾನವಿತ್ತರೆ ಆ ತೀರ್ಮಾನದ ವಿರುದ್ಧವಾಗಿ ಆ ಹಳ್ಳಿಗಳಲ್ಲಿ ಯಾರೂ ಎದುರಾಡುವುದಿಲ್ಲ. ಹಳ್ಳಿಯೊಂದರ ನೆಲೆಯನ್ನು ಮೊದಲು ಸ್ಥಾಪಿಸಿದಾಗ ಆ ಹಳ್ಳಿಯ ಒಳಗಡೆ ಒಂದು ದೊಡ್ಡ 'ಕರುಕಲ್ಲು' ಎಂಬ ಕಲ್ಲನ್ನು ನೆಡುತ್ತಿದ್ದರು. ಆ ಕಲ್ಲಿಗೆ ವರುಷಕ್ಕೊಮ್ಮೆ ಊರ ಪಟೇಲ ತನ್ನ ಕಾಣಿಕೆ, ಗೌರವ ಸಲ್ಲಿಸುತ್ತಿದ್ದನು. ಆ ಕಾಣಿಕೆಯ ವಸ್ತುಗಳೆಲ್ಲ ಕುಳವಾಡಿಗೆ ಸಲ್ಲುತ್ತಿತ್ತು. ಆ ಗ್ರಾಮದಲ್ಲಿ ಪಟೇಲನು ಇಲ್ಲದಿದ್ದರೆ ಈ ವಾರ್ಷಿಕ ಕಾರ್ಯವನ್ನು ಕುಳವಾಡಿಯೆ ನೆರವೇರಿಸುತ್ತಾನೆ.

ಹೊಲಯರೇ ಈ ನಾಡಿನ ಸ್ವಾಮ್ಯವನ್ನು ಮೊದಲು ಪಡೆದವರಾಗಿದ್ದರು ಎಂದು ಹೇಳಲು ಈ ಕೆಳಕಂಡ ಆಚರಣೆ ಸಾಕ್ಷಿಯಾಗಿದೆ. ಹಳ್ಳಿಗಳಲ್ಲಿ ಯಾರೇ ಸತ್ತರೂ ಆತನನ್ನು ಹೂಳಲು ಆತನ ಸಂಬಂಧಿಗಳಿಂದ ಅಥವಾ ಆತನ ಗೆಳೆಯರಿಂದ ಕುಳವಾಡಿ ಶವ ಸಂಸ್ಕಾರಕ್ಕಾಗಿ ನಿರ್ದಿಷ್ಟ ಪಡಿಸಿದ ತೆರಿಗೆ ಅಥವಾ ನೆಲಹಾಗವನ್ನು ನೆಲದ ಬೆಲೆಯಷ್ಟು ತೆರಿಗೆ ರೂಪದಲ್ಲಿ ಪಡೆಯುತ್ತಾನೆ. ಸತ್ತವನ "ಸಂಬಂಧಿಗಳು ಸತ್ತವನಿಗಾಗಿ ಹೊಲಯರಿಂದ ಆ ನೆಲವನ್ನು ಕೊಳ್ಳುತ್ತಾರೆ" ಎಂದು ಹೇಳುವ ಮಾತಿದೆ. ಇಂದಿನ ಮಂಜ್ರಾಬಾದ್‌ನಲ್ಲಿ ಬಳಸುವ ಭಾಷೆ ಏಳೆಂಟು ಸಾವಿರ ವರುಷಗಳ ಹಿಂದೆ ಸುಮೇರಿಯನ್ ಭಾಷಿಕರು ಬಳಸುತ್ತಿದ್ದ ಭಾಷೆಯೊಂದಿಗೆ ಹೋಲುತ್ತದೆ. ಆ ಭಾಷೆಯನ್ನು ಮಾಳವ ಭಾಷೆ ಎಂದು ಕರೆಯಬಹುದು. ಸುಮೇರಿಯನ್ ಭಾಷೆ ಮಾಳವ ಭಾಷೆಯಿಂದ ಬಂದಿದೆಯೋ ಅಥವಾ ಮಾಳವ ಭಾಷೆ ಸುಮೇರಿಯನ್ ಭಾಷೆಯಿಂದ ಬಂದಿದೆಯೋ ಎಂಬ ಬಗ್ಗೆ ಅಧ್ಯಯನ ನಡೆಯಬೇಕಿದೆ. ಏಕೆಂದರೆ ದೇಶದ ಎಲ್ಲ ಕಡೆ ಈಗಲೂ ಮಾಳವನಾಡು, ಮಾಳವರಾಜ್ಯ, ಮಾಳವರಹಳ್ಳಿ, ಮಳವಳ್ಳಿ, ಮಾರರಹಳ್ಳಿ, ಮಾರಿಗಾಂವ್, ಮಲಗಾಂವ್, ಮಾಲಗಾಂವ, ಮಲಪಲ್ಲಿ, ಮಾಲಪಲ್ಲಿ, ಮಾದಳ್ಳಿ ಮಾದೇಹಳ್ಳಿ, ಮಾರನಹಳ್ಳಿ, ಹೊಲೇನಹಳ್ಳಿ, ಹೊಲನಹಳ್ಳಿ ಮತ್ತು ಈ ಬಗೆಯ ಅರ್ಥ ಬರುವ ಸಾವಿರಾರು ಗ್ರಾಮಗಳಿವೆ.."[೬] ಈ ಹೊಲೆಯನ ಹೆಸರಿನ ಮೇಲೆ ಇಷ್ಟೆಲ್ಲ ಗ್ರಾಮಗಳು ಹುಟ್ಟಿವೆಯೆಂದರೆ ಬಹುಸಂಖ್ಯಾತರಾಗಿ ಅದೇ ಸಮುದಾಯ ಅಲ್ಲಿರಬೇಕು. ಇಲ್ಲವಾದರೆ ಹಿಂದೆ ಅತ್ಯಂತ ಶ್ರೀಮಂತ ಭೂ ಒಡೆತನವನ್ನು ಹೊಂದಿದವರಾಗಿದ್ದಾರೆಂದು ಊಹಿಸಲು ಸಾಧ್ಯತೆಗಳಿವೆ.

೩.೫.೧೦ ಹೊಲ-ಸಳಗಳ ಒಡೆಯರು ಹೊಯ್ಸಳರು

"ಸಲ, ಸಳ, ಸಲ್ಲ, ಹಾಗೂ ಸಳ್ಳ-ಇದು ಒಂದು ಬಗೆಯ ನೇಗಿಲನ್ನು ಸೂಚಿಸುತ್ತದೆ. ಸುಮೇರಿಯನ್ ಭಾಷೆಯಲ್ಲಿ ನೇಗಿಲು ಎಂಬುದಕ್ಕೆ ಹಲವಾರು ಪದಗಳಿವೆ. ಅವುಗಳಲ್ಲಿ 'ಸಲ' ಅಥವಾ

'ಸಳ' ಪದ ಕೂಡ ಒಂದಾಗಿದೆ. ಕರ್ನಾಟಕದ ರಾಜಮನೆತನಗಳಲ್ಲಿ ಒಂದಾದ ಹೊಯ್ಸಳರು ಸಲ ಅಥವಾ ಸಳವನ್ನು ಬಳಸುತ್ತಿದ್ದ ರೈತ ಮನೆತನಕ್ಕೆ ಸೇರಿದವರು. ಅವರ ಮೂಲದ ಬಗ್ಗೆ ಊಹಾಪೋಹಗಳು, ದಂತಕತೆಗಳಿವೆ. ಆ ಕತೆಗಳಿಗೆ ಸೂಕ್ತ ಮೂಲವನ್ನರಸಲು ಸುಮೇರಿಯನ್ ಭಾಷೆಯನ್ನು ಆಧರಿಸುವುದು ಒಳಿತು. ಹೊಯ್ಸಳರ ಮನೆತನ ಕೂಡ ಅಚ್ಚ ದ್ರಾವಿಡ ಮನೆತನವಾಗಿದೆ. ಇದರಿಂದ ಅವರ ಮನೆತನದ ಹೆಸರನ್ನು ದ್ರಾವಿಡ ಭಾಷೆಯಿಂದಲೇ ಉತ್ಪತ್ತಿಯಾಗಿರುವುದನ್ನು ಕಾಣಬಹುದು. ಹೊಲಯರಿಗೆ ಹಾಗೂ ಇನ್ನಿತರೆ ದ್ರಾವಿಡ ರಾಜರುಗಳಿಗೆ ಇಂಡೋ-ಯುರೋಪಿಯನ್ ಜನತೆ ತಮ್ಮ ಭಾಷೆಗಳಲ್ಲಿ ಹೆಸರಿಟ್ಟರು ಎಂದು ಅವರ ಭಾಷಾಮೂಲಗಳಲ್ಲಿ ನಮ್ಮ ರಾಜರ ಮೂಲವನ್ನು ಹುಡುಕದೆ ಸ್ಥಳೀಯ ಭಾಷಾ ಮೂಲಗಳಲ್ಲಿ ಅರಸುವುದು ಸಹಾಯಕವಾಗುತ್ತದೆ.

" 'ಹೊಲ' ಮತ್ತು 'ಸಳ' ಪದಗಳು ಸಂಧಿಯಾಗಿ 'ಹೊಯ್ಸಳ' ಪದ ಉದಿಸಿದೆ. ಪ್ರಾಚೀನ ಕನ್ನಡದಲ್ಲಿ ಅಥವಾ ಸುಮೇರಿಯನ್ ಭಾಷೆಯಲ್ಲಿ ಬೆಲ್ ಎಂದರೆ ರಾಜ ಎಂಬ ಅರ್ಥವಿತ್ತು. ಬೆಲ್ ಎಂಬುದನ್ನು ಬೇಲ್ ಎಂದು ಸಹ ಉಚ್ಚರಿಸುತ್ತಾರೆ. ಹೊಯ್ಸಳರ ರಾಜಧಾನಿಯಾಗಿದ್ದ ಬೇಲೂರು ಎಂಬುದರ ಅರ್ಥ ರಾಜನ ಊರು ಅಥವಾ ರಾಜಧಾನಿ ಎಂಬುದಾಗಿತ್ತು. ಹಲ್ಮಿಡಿ ಶಾಸನ ಕಾಲಕ್ಕಿಂತಲೂ ಮೊದಲು ಆ ಭಾಗದ ತುಂಬ ಪ್ರಚಲಿತವಾಗಿದ್ದ ಕನ್ನಡದಲ್ಲಿ ಅಥವಾ ಪ್ರಾಚೀನ ಕನ್ನಡದಲ್ಲಿ ಸಲ(ಸಳ) ಎಂದರೆ ನೇಗಿಲು ಎಂದಿತ್ತು. 'ಹೊಯ್' ಎಂದರೆ ಹೋದ, ಪೊಯ, ಹಿಡಿ, ಮಾಡು, ಹೋಗು, ಹಿಡಿದು ಮಾಡು ಎಂದು ಅರ್ಥಗಳಿವೆ. ಎಫ್. ಕಿಟ್ಟೆಲ್ ಅವರ ಕನ್ನಡ – ಇಂಗ್ಲೀಷ ಡಿಕ್ಷನರಿಯಲ್ಲಿ 'ಪೊಯ್' ಎಂಬ ಪದಕ್ಕೆ To beat, etc; to pour; to cast (ತಾಡನ; ಮೋದು, see the meanings of ಪೊಡೆ. ಪೊಡೆ pode = (ಪುಯ್, ಪೊಯ್ etc.,), ಹೊಡಿ, ಹೊಡೆ, To strike, to beat, to smite; to cast, to throw, as a stone; to shoot, as an arrow; to fire, as a gun; to drive, as cattle, etc; to drive, as a cart, a plough, etc; to drive away as birds; to fall plentifully or pour, as rain; to fall, as a thundrbolt; to smite, as a demon, fever, etc. ಪೊಯ್+ಸಲ (ಸಳ)=ನೇಗಿಲು ಹಿಡಿ, ನೇಗಿಲು ಹಿಡಿದು ಮಾಡು, ನೇಗಿಲು ಹಿಡಿದು ಹೋಗು, ಅಂದರೆ ಹೊಲ ಉಳು, ವ್ಯವಸಾಯ ಮಾಡು ಅಥವಾ ಹೊಲತನ ಅಥವಾ ಹೊಲೆತನ ಮಾಡು ಎಂಬ ಅರ್ಥಗಳಿವೆ.

ಹೊಯ್ಸಳರು (ಅಥವಾ ಕೆಲವು ಶಾಸನಗಳಲ್ಲಿದ್ದಂತೆ ಪೊಯ್ಸಳರು) ಹೊಲತನದವರು. ಅವರು ಹಿಂದೆ ಹೊಲತನ ಮಾಡುತ್ತಿದ್ದವರು, ಊರ ಯಜಮಾನರಾಗಿದ್ದವರು. ಅವರೇ ಮುಂದೆ ದೊರೆಗಳಾಗಿ ಧರೆಯನ್ನು ಆಳಿ ರಾಜ ಮಹಾರಾಜರೂ ಸಾಮ್ರಾಟರೂ ಎನಿಸಿಕೊಂಡರು.

ಆ ಹೊಯ್ಸಳರೆನಿಸಿಕೊಂಡ ಹೊಲಯ ದೊರೆಗಳು ಬೇಲೂರು ಚನ್ನಕೇಶವನ ಗುಡಿ ಹಾಗೂ ಮೇಲುಕೋಟೆ ಚೆಲುವನಾರಾಯಣ ಸ್ವಾಮಿಯ ಗುಡಿಗಳನ್ನು ಕಟ್ಟಿಸಿದ್ದಾರೆ. ಆ ಕಾರಣದಿಂದಾಗಿಯೇ ಆ ಗುಡಿಗಳಲ್ಲಿ ಹೊಲಯರಿಗೆ, ಮಾದಿಗರಿಗೆ ಜಾತ್ರೆಗಳಲ್ಲಿ ಹಾಗೂ ವಿಶೇಷ ಪೂಜಾದಿನಗಳಲ್ಲಿ

ರಾಜಮರ್ಯಾದೆ ನೀಡಲಾಗುತ್ತದೆ. ಅಲ್ಲಿ ರಾಜಮರ್ಯಾದೆ ಪಡೆಯುವ ಹೊಲಯ-ಮಾದಿಗರನ್ನು ತಿರುಕುಲರು ಅಂದರೆ ರಾಜನ ಕುಲದವರು ಅಥವಾ ರಾಜಕುಲರು ಎಂದು ಕರೆಯಲಾಗುತ್ತಿದೆ. ಪ್ರಾಚೀನ ಕನ್ನಡದಲ್ಲಿ ಹಾಗೂ ಮಾಳವದಲ್ಲಿ ಮತ್ತು ಸುಮೇರಿಯನ್ ಭಾಷೆಯಲ್ಲಿ 'ತಿರು' ಎಂದರೆ ರಾಜನ, ರಾಜನ ಆಸ್ಥಾನಕ್ಕೆ ಸಂಬಂಧಿಸಿದ ಎಂದು ಅರ್ಥವಿದೆ. 'ಕುಲ' ಎಂದರೆ ಗುಂಪು, ಸಮೂಹ, ಪಂಗಡ ಎಂಬರ್ಥದಲ್ಲಿ ತಿರುಕುಲ ಹೊಲಯರು ರಾಜನ ಕುಲದವರು, ಆ ಭಾಗದಲ್ಲಿ ಆಳ್ವಿಕೆ ಮಾಡುತ್ತಿದ್ದ ಹೊಯ್ಸಳ ದೊರೆಗಳ ಕುಲದವರು ಎಂದಾಗುತ್ತದೆ.

ಹೊಲಯರ ಹೆಸರುಗಳು ಇಂಡೋ-ಯುರೋಪಿಯನ್ ಭಾಷೆಯನ್ನು ಅನುಸರಿಸಿಲ್ಲ. ಆದರೆ ಅವು ಮಾಳವ ಅಥವಾ ದ್ರಾವಿಡ ಭಾಷೆಯನ್ನು ಅನುಸರಿಸಿವೆ ಎಂದು ಹೇಳಬಹುದು.

ಹೊಯ್ಸಳ ದೊರೆಗಳು ತಮ್ಮ ಮೂಲ ಧರ್ಮವನ್ನು ಬಿಟು ಬೇರೆ-ಬೇರೆ ಧರ್ಮಗಳನ್ನು ಸ್ವೀಕರಿಸಿದ ಬಗ್ಗೆ ಇತಿಹಾಸಕಾರರು ಈಗಾಗಲೇ ಹೇಳಿದ್ದಾರೆ. ಹೊಯ್ಸಳ ದೊರೆಗಳು ಸ್ವೀಕರಿಸಿದ ಧರ್ಮಗಳು ಹಾಗೂ ಆ ಧರ್ಮಗಳ ಜನರ ಪ್ರಭಾವ ಕ್ರಮೇಣ ಹೆಚ್ಚಾಗಿ ಹೊಲಯರ-ಮಾದಿಗರ ಪ್ರಭಾವ ಧರ್ಮ-ಭಾಷೆ-ಆಚಾರ-ವಿಚಾರಗಳಲ್ಲಿ ಕಡಿಮೆ ಆಗದಿದ್ದರೂ ರಾಜಾಶ್ರಯದಿಂದ ಹೊರಗೆ ಉಳಿದದು ಕಂಡುಬರುತ್ತದೆ."[೧೭]

೩.೫.೧೧ ಛಲವಾದಿ ಚಾಲುಕ್ಯರು

"ಪ್ರತಿ ವರುಷ ಕೆಲವು ದೇವಸ್ಥಾನಗಳಲ್ಲಿ (ಉದಾಹರಣೆಗೆ; ಮೇಲುಕೋಟೆ ಚೆಲುವನಾರಾಯಣ ದೇವಸ್ಥಾನ ಹಾಗೂ ಬೇಲೂರು ಚೆನ್ನಕೇಶವ ದೇವಸ್ಥಾನ) ಹೊಲಯನಿಗೆ ನೀಡುವ ಗೌರವ ಕೆಲವೇ ದಿನಗಳಿಗೆ ಮತ್ತು ಆಚರಣೆಗೆ ಸೀಮಿತವಾಗಿದ್ದರೂ ಅದು ರಾಜನಿಗೆ ದೊರಕುವ ಗೌರವದಂತಿದೆ. ಹೊಲಯ ದೊರೆಯಿಂದಲೇ ಆ ದೇವಸ್ಥಾನ ನಿರ್ಮಾಣವಾಗಿರದಿದ್ದರೆ ಹಾಗೂ ಹೊಲಯನಿಂದಲೇ ಆ ಧಾರ್ಮಿಕ ಆಚರಣೆಗಳು ಆರಂಭವಾಗದಿದ್ದರೆ ಈ ಬಗೆಯ ಆಚರಣೆಯನ್ನು ಮಧ್ಯಂತರದಲ್ಲಿ ಯಾವುದೋ ವ್ಯಕ್ತಿ ಆರಂಭಿಸಿದ ಎಂಬುದನ್ನು ಸಾಕ್ಷೀಕರಿಸುವುದು ಕಷ್ಟ. ಒಂದು ಕಾಲದಲ್ಲಿ ರಾಜನಾಗಿದ್ದ ಹೊಲಯನ ಸಂಸ್ಕೃತಿ, ಭಾಷೆ, ಧರ್ಮ ಹಾಗೂ ಸಂಪ್ರದಾಯಗಳನ್ನು ಒಪ್ಪಿ-ಅಪ್ಪಿಕೊಂಡ ಜನರು, ಆತನ ಸ್ಥಿತಿ-ಗತಿಗಳು ಕಳೆಗುಂದಿ ಅಧಿಕಾರ-ಅಂತಸ್ತು ಕಳೆದುಕೊಂಡ ಮೇಲೆ ಅವನನ್ನು ಕೀಳಾಗಿ ಕಾಣಲಾರಂಭಿಸಿದರು. ಮೇಲ್ವರ್ಗಗಳು ಇಂದು ಪಡೆದಿರುವ ಸವಲತ್ತುಗಳು, ಮಾತಾಡುತ್ತಿರುವ ಭಾಷೆ, ಆಚರಿಸುತ್ತಿರುವ ಧರ್ಮ, ಪೂಜಿಸುತ್ತಿರುವ ದೈವ ಹಾಗೂ ನಡೆಸಿಕೊಂಡು ಬರುತ್ತಿರುವ ಸಂಪ್ರದಾಯಗಳೆಲ್ಲ ಹೊಲಯರಿಂದ ಪಡೆದಿದ್ದಾರೆ. ಈ ಜನ ಸಮುದಾಯಗಳು ಒಂದು ಕಾಲದಲ್ಲಿ ಹೊಲಯನು ದೇವಸ್ಥಾನಕ್ಕೆ ಬರುವುದನ್ನೇ ಕಾಯುತ್ತಿದ್ದರು. ಹೊಲಯರು ತಮ್ಮ ಬಡತನದಿಂದಾಗಿ, ತಮ್ಮನ್ನು ಅಪ್ಪಿಕೊಂಡ ಹೀನಸ್ಥಿತಿಯಿಂದಾಗಿ ಕುಗ್ಗಿಹೋದ ನಂತರ ಅವರನ್ನೆ ದೇವಸ್ಥಾನಕ್ಕೆ ಹೋಗುವುದನ್ನು ತಪ್ಪಿಸತೊಡಗಿದರು. ಆದರೂ ಅವರ ಉಪಕಾರ ಸ್ಮರಣಾರ್ಥವಾಗಿ ಅವರನ್ನು ವರುಷಕ್ಕೊಮ್ಮೆಯಾದರೂ

ದೇವಸ್ಥಾನಕ್ಕೆ ಕರೆಯಿಸಿ ಗೌರವಿಸುವ ಸಂಪ್ರದಾಯವಿದೆ. ಇಂದು ಮರೆತುಹೋದ ಆಡಳಿತ ವ್ಯವಸ್ಥೆಯ ಕಾಲದಿಂದ ಆರಂಭವಾಗಿದ್ದು ಇಂದಿಗೂ ಚಾಚೂ ತಪ್ಪದೆ ನಡೆದುಕೊಂಡು ಬಂದಿದೆ.

ಕರ್ನಾಟಕ ರಾಜ್ಯದ ಬಾಗಲಕೋಟೆ ಪಟ್ಟಣದಲ್ಲಿ ಅಲ್ಲಿಯ ದೇಸಾಯಿಗಳು (ರಾಜ ಕುಟುಂಬದವರು) ಹೋಳಿ ಹಬ್ಬದಲ್ಲಿ ಮೆರವಣಿಗೆ ಹೋಗಿ ಕಾಮನ ಸುಡಲು ಬೇಕಾಗುವ ಬೆಂಕಿಯನ್ನು ಹೊಲೆಯರ ಮನೆಯಿಂದ ತರುವ ಸಂಪ್ರದಾಯವಿದೆ. ಆ ರೀತಿ ಬೆಂಕಿ ಕೊಡುವ ಹೊಲೆಯರ ಕುಟುಂಬದವರು 'ಹಿಂದೆ ಈ ನಾಡನ್ನು ಆಳುತ್ತಿದ್ದ ದೊರೆಗಳಾಗಿದ್ದೆವು. ನಾವು ಈಗ ಛಲವಾದಿ ಎನಿಸಿಕೊಳ್ಳುತ್ತೇವೆ. ಹಿಂದೆ ನಮ್ಮನ್ನು ಚಾಲುಕ್ಯರು ಎನ್ನುತ್ತಿದ್ದರು' ಎನ್ನುತ್ತಾರೆ. ಬಾಗಲಕೋಟೆಯ ಛಲವಾದಿ (ಚಲವಾದಿ, ಚಲುವಾದಿ) ಎಂದು ಕರೆಯಿಸಿಕೊಳ್ಳುವ ಹೊಲೆಯರ (ಹೊಲಯರ, ಹೊಲಿಯರ) ಈ ಮಾತನ್ನು ಹಲವಾರು ದಾಖಲಾತಿಗಳ ಮೂಲಕ ಸಾಕ್ಷೀಕರಿಸಬಹುದು.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿರುವ 'ಬದಾಮಿ ಚಾಲುಕ್ಯರು' ಎಂಬ ಲೇಖನ ಗಮನಿಸಿದಾಗ ಎನ್. ಲಕ್ಷ್ಮೀನಾರಾಯಣರಾವ್ ಅವರ 'ಪೊಲೆಕೇಶಿ (ಪುಲಕೇಶಿ, ಪುಲಿಕೇಶಿ) ಎಂಬ ಹೆಸರಿನ ಅರ್ಥವೇನು?' (ಪುಟ:೮೨) ಲೇಖನದಲ್ಲಿ "ಈ ವಂಶದ ಅತಿ ಪ್ರಾಚೀನವಾದ ಶಾಸನಗಳಲ್ಲಿರುವ ಈ ಹೆಸರಿನ ರೂಪವಾದ "ಪೊಲೆಕೇಶಿಯ"ಯೆ ಮೂಲರೂಪವಿರಬೇಕೆಂದು ಡಾ॥ ಫ್ಲೀಟ್ ಹೇಳಿದ್ದಾರೆ. ಈ ರೂಪವನ್ನೇ ಶಾಸನ ಪರಿಶೋಧಕರಲ್ಲಿ ಅಗ್ರಗಣ್ಯರಾದ ಡಾ॥ ಖೀಲ್ ಹಾರ್ನ್ ಅವರೂ ಸಹ ಬಳಸಿದ್ದಾರೆ. ಮೊಟ್ಟ ಮೊದಲಿನ ಈ ಹೆಸರಿನ ರೂಪವಾದ "ಪೊಲಿಕೇಶಿ" ಎಂಬ ಪದವು ನನ್ನ ಅಭಿಪ್ರಾಯದಂತೆ ಪೊಲೆ ಮತ್ತು ಕೇಶಿ ಎಂಬ ಶುದ್ಧ ಕನ್ನಡ ಶಬ್ದಗಳ ಸಂಯೋಗದಿಂದ ಉಂಟಾದ ಪದ. ಇದರ ಪೂರ್ವಾರ್ಧವಾದ "ಪೊಲೆ" ಎಂಬುದಕ್ಕೆ "ಹೊಲೆಮನೆ" ಎಂದರ್ಥ. "ಕೇಶಿ" ಎಂಬುದು "ಕೇಶವ" ಎಂಬ ಹೆಸರಿನ ಸಂಕ್ಷಿಪ್ತರೂಪ. ಈ ರೂಪದಲ್ಲಿ ಈ ಪದವು ಕನ್ನಡ ಸಾಹಿತ್ಯದಲ್ಲಿಯೂ ಶಾಸನಗಳಲ್ಲಿಯೂ ಸಿಕ್ಕುತ್ತದೆ. "ಶಬ್ದಮಣಿದರ್ಪಣ"ವನ್ನು ರಚಿಸಿದ ಕೇಶಿರಾಜನು ತನ್ನ ಹೆಸರಿನ ಕೇಶಿ, ಕೇಶವ ಎಂಬ ಎರಡು ರೂಪಗಳನ್ನು ಈ ಗ್ರಂಥದಲ್ಲಿ ಕೊಟ್ಟಿದ್ದಾನೆಂಬುದು ಗಮನಾರ್ಹವಾಗಿದೆ."[೧೮]

೩.೫.೧೨ ವೀರ ಮಹಾರ್ ಯೋಧರ ಸ್ಮಾರಕ – ವಿಜಯಸ್ಥಂಭ

ಕ್ರಿ.ಶ. ೧೮೦೦ರಲ್ಲಿ ಬ್ರಾಹ್ಮಣರಾದ ಪೇಶ್ವೆಗಳು ಮರಾಠ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದರು. ಅವರ ಆಳ್ವಿಕೆಯಲ್ಲಿ ಅಸ್ಪೃಶ್ಯರ ಬದುಕು ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಅಸ್ಪೃಶ್ಯರಿಗೆ ವಿದ್ಯೆ ನಿಷೇಧಿಸಲಾಗಿತ್ತು. ಅವರು ಗ್ರಾಮದ ಹೊರಗೆ ದೂರದಲ್ಲಿ ವಾಸಮಾಡಬೇಕಿತ್ತು. ಸತ್ತ ದನಗಳನ್ನು ಗ್ರಾಮದಿಂದ ಹೊರಗೆ ಹೊತ್ತು ತಂದು ತಿನ್ನಬೇಕಿತ್ತು. ಅವರ ನೆರಳು ಬೇರೆಯವರ ಮೇಲೆ ಬೀಳದೆ ನಡುಮಧ್ಯಾಹ್ನ ೧೨ ಗಂಟೆಗೆ ಊರಿನ ಮಧ್ಯೆ ಹಾದು ಹೋಗಬೇಕಾಗಿತ್ತು. ಅವರು ಬರುವಾಗ ಜೋರಾಗಿ ಕೂಗಿಕೊಂಡು ಬರಬೇಕಿತ್ತು. ಉಗುಳಲು ಒಂದು ಮಡಿಕೆಯನ್ನು ಕೊರಳಿಗೆ ನೇತು ಹಾಕಿಕೊಳ್ಳಬೇಕಿತ್ತು. ಹೆಂಗಸರು ಚಿನ್ನ ಬೆಳ್ಳಿಗಳ ಆಭರಣಗಳನ್ನು ತೊಡುವಂತಿರಲಿಲ್ಲ. ಅಸ್ಪೃಶ್ಯ ಹೆಣ್ಣು ಮಕ್ಕಳು ಮತ್ತು ಮದುವೆಯಾದ ಹೆಂಗಸರನ್ನು

ಮೇಲ್ವರ್ಗದವರು ಮತ್ತು ಸೈನಿಕರು ಬೇಕೆಂದಾಗ ಅನುಭವಿಸಬಹುದಿತ್ತು. ಈ ರೀತಿ ಜಗತ್ತಿನ ಯಾವ ಮೂಲೆಯಲ್ಲೂ ಇರದಷ್ಟು ಅಮಾನವೀಯ ಸಾಮಾಜಿಕ ಸ್ವಚ್ಛತೆ ಅಸ್ಪೃಶ್ಯರ ವಿರುದ್ಧ ಜಾರಿಯಲ್ಲಿದ್ದವು. ಇವನ್ನು ತೊಡೆದು ಹಾಕುವಂತೆ ಅಸ್ಪೃಶ್ಯರು ಪೇಶ್ವೆ ಎರಡನೇ ಬಾಜೀರಾಯನ ಹತ್ತಿರ ಹೋಗಿ ವಿನಂತಿಸಿಕೊಂಡರು. ಆಗ ಬಾಜೀರಾಯ 'ಅಸ್ಪೃಶ್ಯರು ಹುಟ್ಟಿರುವುದೇ ಬ್ರಾಹ್ಮಣರ ಸೇವೆ ಮಾಡಲು, ಅಸ್ಪೃಶ್ಯ ಹೆಂಗಸರು ಬ್ರಾಹ್ಮಣರನ್ನು ಸುಖಪಡಿಸಲಿಕ್ಕಾಗಿಯೇ ಹುಟ್ಟಿರುವವರು, 'ಮನು ಸಂವಿಧಾನ' ಇದೇ ಹೇಳಿದೆ' ಎಂದು ಹೇಳಿದ. ಈ ಅನ್ಯಾಯಗಳು ಎಲ್ಲೆ ಮೀರಿದಾಗ ಅಸ್ಪೃಶ್ಯ ಯುವಕ "ಸಿದನಾಕ" ಎಂಬುವನು ೫೦೦ ಯುವಕರ ಗುಂಪನ್ನು ರಚಿಸಿಕೊಂಡು ಪ್ರಾಣತ್ಯಾಗ ಮಾಡಿಯಾದರೂ ಸರಿ ಎರಡನೇ ಬಾಜೀರಾಯನ ಆಳ್ವಿಕೆಯನ್ನು ಕೊನೆಗೊಳಿಸಿ ಈ ದೌರ್ಜನ್ಯ ನಿಲ್ಲಿಸಬೇಕೆಂದು ಪಣತೊಟ್ಟನು. ಆಗ ಬ್ರಿಟಿಷರ ಆಡಳಿತ ಇಡೀ ಭಾರತವನ್ನು ಸಂಪೂರ್ಣವಾಗಿ ಇನ್ನೂ ವ್ಯಾಪಿಸಿಕೊಂಡಿರಲಿಲ್ಲ. ಸಿದನಾಕನ ಪಡೆ ನೇರವಾಗಿ ಬ್ರಿಟಿಷರ ಹತ್ತಿರ ಹೋಗಿ 'ನಾವು ಎರಡನೇ ಬಾಜೀರಾಯನನ್ನು ಸೋಲಿಸಿ ಈ ದೊಡ್ಡ ರಾಜ್ಯವನ್ನು ನಿಮಗೆ ಗೆದ್ದು ಕೊಡುತ್ತೇವೆ. ಅದಕ್ಕೆ ಪ್ರತಿಯಾಗಿ ನೀವು ನಮಗೆ ಏನು ಸಹಾಯ ಮಾಡುತ್ತೀರಿ' ಎಂದು ಕೇಳಿದರು. ಆಗ ಬ್ರಿಟಿಷರು ನಿಮಗೆ ನೀವು ಗೆದ್ದ ಅರ್ಧರಾಜ್ಯ ನೀಡುತ್ತೇವೆಂದರು. ಅದಕ್ಕೆ ಸಿದನಾಕ ನಮಗೆ ತುರ್ತಾಗಿ ವಿದ್ಯೆ ಬೇಕಾಗಿದೆ. ನಾವು ಗೆದ್ದ ನಂತರ ಈ ದೇಶದಲ್ಲಿ ನೀವು ಆಡಳಿತ ನಡೆಸುವ ಕಡೆಗಳಲ್ಲೆಲ್ಲ ತೆರೆಯುವ ಶಾಲೆಗಳಲ್ಲಿ ನಮ್ಮ ಅಸ್ಪೃಶ್ಯರ ಮಕ್ಕಳಿಗೆ ಪ್ರವೇಶ ಕಲ್ಪಿಸಿ ವಿದ್ಯೆ ನೀಡಬೇಕು. ಇದೇ ನಮ್ಮ ಬೇಡಿಕೆ' ಎಂದರು. ಈ ಮಾನವೀಯ ಬೇಡಿಕೆಗೆ ಬ್ರಿಟಿಷರು ಒಪ್ಪಿದರು. ೧೮೧೭ ಡಿಸೆಂಬರ್ ೩೧ರ ರಾತ್ರಿ ಸಿದನಾಕನ ೫೦೦ ಯೋಧರ ಪಡೆ ೩ನೇ ಬಾಜೀರಾಯನ ೩೦ ಸಾವಿರ ಸೈನ್ಯದ ಮೇಲೆ ಎರಗಿತು. ಈ ಯುದ್ಧ ಪುನಾದಿಂದ ೧೬ ಕಿ. ಮೀ. ದೂರದಲ್ಲಿರುವ ಕೋರೆಗಾಂವ್ ಎಂಬ ಸ್ಥಳದಲ್ಲಿ ನಡೆಯಿತು.

ಇಡೀ ರಾತ್ರಿ ಯುದ್ಧ ನಡೆಯಿತು. ಸಿದನಾಕನ ಪಡೆಯ ಹತ್ತಿರ ಬ್ರಿಟಿಷರ ತುಪಾಕಿಗಳಿದ್ದವು. ೨ನೇ ಬಾಜೀರಾಯನ ಸುಮಾರು ೨೫ ಸಾವಿರ ಯೋಧರು ಸತ್ತರು. ಆದರೆ ಸಿದನಾಕನ ಪಡೆಯ ೨೧ ಜನರು ಮಾತ್ರ ರಣರಂಗದಲ್ಲಿ ವೀರ ಮರಣವನ್ನಪ್ಪಿದರು. ಪೇಶ್ವೆ ಸೈನಿಕರು ಶರಣಾಗಿ ಇಡೀ ರಾಜ್ಯ ಜನೇವರಿ ೧-೧೮೧೮ರಂದು ಅಸ್ಪೃಶ್ಯ ಯೋಧರ ವಶವಾಯಿತು. ಈ ಜಯದಿಂದ ಬ್ರಿಟಿಷರಿಗೆ ಶಕ್ತಿ ಮತ್ತು ಹುಮ್ಮಸ್ಸು ಹೆಚ್ಚಾಗಿ ಶೌರ್ಯವಂತರೂ ಪ್ರಾಮಾಣಿಕರೂ ಆದ ಅಸ್ಪೃಶ್ಯರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡು ಇಡೀ ಭಾರತವನ್ನು ಗೆದ್ದುಕೊಂಡರು. (ಅದಕ್ಕಾಗಿ ಅರುಣ್ ಶೌರಿ ತನ್ನ ವರ್ಷಿಪಿಂಗ್ ಫಾಲ್ಸ್‌ಗಾಡ್ಸ್ ಪುಸ್ತಕದಲ್ಲಿ ಅಸ್ಪೃಶ್ಯರು ಈ ದೇಶವನ್ನು ಬ್ರಿಟಿಷರಿಗೆ ಗೆದ್ದುಕೊಟ್ಟರು ಎಂದು ಬರೆದಿದ್ದಾನೆ. ಆದರೆ ಯಾತಕ್ಕಾಗಿ ಅಸ್ಪೃಶ್ಯರು ಬ್ರಿಟಿಷರ ಪರವಾಗಿ ಹೋರಾಡಿದರು ಎಂಬುದನ್ನು ಮರೆಮಾಚಿದ್ದಾನೆ. ಆದರೆ ವಾಸ್ತವ ಇತಿಹಾಸವನ್ನು ಅಂಬೇಡ್ಕರ್ ಸಂಪೂರ್ಣವಾಗಿ ಬರೆದಿದ್ದಾರೆ.) ಜನೇವರಿ ೧-೧೮೧೮ರಂದು ಬ್ರಿಟಿಷರು ಪುಣೆಯಲ್ಲಿ ಬ್ರಿಟಿಷರ ಧ್ವಜ ಹಾರಿಸಿ ವಿಜಯೋತ್ಸವ ಆಚರಿಸಿದರು. ಅಸ್ಪೃಶ್ಯ ಯೋಧರ ನೆನಪಿಗಾಗಿ ಭೀಮಾನದಿ

ದಂಡೆಯಲ್ಲಿ (ಕೋರೆಗಾಂವ್) ೭೫ ಅಡಿ ಎತ್ತರದ ವಿಜಯಸ್ತಂಭ ಕಟ್ಟಿಸಲಾಗಿದೆ. ಅದರ ಮೇಲೆ ಮಡಿದ ಯೋಧರ ಹೆಸರುಗಳನ್ನು ಕೆತ್ತಲಾಗಿದೆ. ಈ ಸ್ತಂಭ ಶೋಷಣೆ, ದೌರ್ಜನ್ಯ ವಿರೋಧಿ ಹೋರಾಟದ ಸಂಕೇತದಂತಿದೆ. ಈಗಲೂ ಸಾವಿರಾರು ಜನ ಪ್ರಜ್ಞಾವಂತರು, ವಿಚಾರವಂತರು ಜನವರಿ ೧ನೇ ತಾರೀಖನ್ನು ಹೊಸ ವರ್ಷಾಚರಣೆಯಾಗಿ ಆಚರಿಸದೆ ಈ ವಿಜಯ ಸ್ತಂಭದ ಹತ್ತಿರ ಹೋಗಿ ನಮನ ಸಲ್ಲಿಸುತ್ತಾರೆ.

ಯುದ್ಧದಲ್ಲಿ ಮಡಿದ ಮಹಾರ್ ವೀರರು

೧. ಸೀನನಾಕ ಮಕಲನಾಕ	ನಾಯಕ
೨. ರಾಮನಾಕ ಯಶನಾಕ	ನಾಯಕ
೩. ಗೋದನಾಕ ಮೋಡೆನಾಕ	ಸಿಪಾಯಿ
೪. ರಾಮನಾಕ ಯಶನಾಕ	ಸಿಪಾಯಿ
೫. ಭಾಗನಾಕ ಹರನಾಕ	ಸಿಪಾಯಿ
೬. ಅಂಬನಾಕ ಕಾನನಾಕ	ಸಿಪಾಯಿ
೭. ಗಣನಾಕ ಬಾಳನಾಕ	ಸಿಪಾಯಿ
೮. ಬಾಳನಾಕ ಧೋಂಡನಾಕ	ಸಿಪಾಯಿ
೯. ರೂಪನಾಕ ಲಖನಾಕ	ಸಿಪಾಯಿ
೧೦. ಬಾಲನಾಕ ರಾಮನಾಕ	ಸಿಪಾಯಿ
೧೧. ವಟನಾಕ ಧಾನನಾಕ	ಸಿಪಾಯಿ
೧೨. ಗಜನಾಕ ಗಣನಾಕ	ಸಿಪಾಯಿ
೧೩. ಬಾಪನಾಕ ಹಬನಾಕ	ಸಿಪಾಯಿ
೧೪. ಕೇನಾಕ ಜಾನನಾಕ	ಸಿಪಾಯಿ
೧೫. ಸಮನಾಕ ಯಸನಾಕ	ಸಿಪಾಯಿ
೧೬. ಗಣನಾಕ ಧರಮನಾಕ	ಸಿಪಾಯಿ
೧೭. ದೇವನಾಕ ಅಂನಾಕ	ಸಿಪಾಯಿ
೧೮. ಗೋಪಾಲನಾಕ ಬಾಲಿನಾಕ	ಸಿಪಾಯಿ

೧೯. ಹರನಾಕ ಹರಿನಾಕ ಸಿಪಾಯಿ

೨೦. ಜೇಠನಾಕ ದೌನಾಕ ಸಿಪಾಯಿ

೨೧. ಗಣನಾಕ ಲಖನಾಕ ಸಿಪಾಯಿ

ಯುದ್ಧದಲ್ಲಿ ಗಾಯಗೊಂಡ ೧೭೫ ಸೈನಿಕರ ಹೆಸರುಗಳನ್ನು ಉತ್ತರದ ಕಡೆಯ ಭಾಗದಲ್ಲಿ ಕೆತ್ತಿದೆ.

ಆ ವಿಜಯ ಸ್ಮಾರಕದ ಮೇಲೆ 'One of the prouder truimphs of British Army in the East' (ಬ್ರಿಟಿಷ್ ಸೈನ್ಯ ಪೂರ್ವದೇಶದಲ್ಲಿ ಸಾಧಿಸಿದ ಹೆಮ್ಮೆಯ ವಿಜಯಗಳಲ್ಲೊಂದು) ಎಂದು ಬರೆಸಿ ಮಡಿದ ಯೋಧರನ್ನು ಅಮರರನ್ನಾಗಿಸಿದೆ.

ಅಂಬೇಡ್ಕರ್ ಲಂಡನ್‌ನಲ್ಲಿ ಓದುತ್ತಿದ್ದಾಗ ಕೋರೆಗಾಂವ ಯುದ್ಧದ ಇತಿಹಾಸವನ್ನು ಹೊರ ತೆಗೆದರು.[೧೯]

೩.೫.೧೩ ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್

ತಂದೆ ರಾಮ್‌ಜಿರಾವ್ ಮಾಲೋಜಿ ತಾಯಿ ಭೀಮಾಬಾಯಿ ದಂಪತಿಗಳಲ್ಲಿ ೧೮೯೧ರ ಏಪ್ರಿಲ್ ೧೪ರಿಂದು ಬಹಳಷ್ಟು ಸಾಮಾಜಿಕ ಚಳುವಳಿಗೆ ಹುಟ್ಟುಹಾಕಿದ ಹಾಗೂ ಮಹಾನ್ ನಾಯಕರುಗಳಿಗೆ ಜನ್ಮ ನೀಡಿದ ನೆರೆಯ ರಾಜ್ಯವಾದ ಮಹಾರಾಷ್ಟ್ರದ ರಾಜ್ಯದಲ್ಲಿ ಹುಟ್ಟಿದ ತಂದೆ ರಾಮ್‌ಜಿರಾವ್ ತಾಯಿ ಮಾಲೋಜಿ ಭೀಮಾಬಾಯಿ ದಂಪತಿಗಳಲ್ಲಿ ೧೪ನೇ ಮಗುವಾಗಿ ಇಂದಿನ ಮಧ್ಯಪ್ರದೇಶದಲ್ಲಿರುವ ಮಹು (Mahu-military Head quaters of war) ಎಂಬಲ್ಲಿ ಜನಿಸಿದರು.

ಜಗತ್ತಿನ ಮಾನವ ಹಕ್ಕುಗಳ ಮಹಾನ್ ಪ್ರತಿಪಾದಕ ರಾಷ್ಟ್ರಗುರು, ಜಾತ್ಯಾತೀತ ನವಭಾರತದ ನಿರ್ಮಾತೃ, ಸಮಸಮಾಜ ಸ್ಥಾಪಕ, ಮಾನವೀಯ ಹೋರಾಟಗಳ ಪಿತಾಮಹ, ಸಮಾಜ ಚಿಕಿತ್ಸಕ ಜ್ಞಾನಸೂರ್ಯ, ಸಂವಿಧಾನ ಶಿಲ್ಪಿ, ಭಾರತ ರತ್ನ, ಘನ ವಿದ್ವಾಂಸ, ಬೌದ್ಧ ಬಿಕ್ಕು ಮಾನವತಾವಾದಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಎಂ. ಎ. ಪಿ.ಎಚ್.ಡಿ. ಡಿ.ಎಸ್ಸಿ. ಎಮ್.ಎಸ್ಸಿ. ಬಾರ್ ಆಟ್ ಲಾ; ಎಲ್.ಎಲ್.ಡಿ., ಡಿ.ಲಿಟ್. ವಿಶ್ವವಿಖ್ಯಾತ ಶಿಕ್ಷಣವನ್ನು ಪಡೆದುಕೊಂಡ ಬರೋಡ ರಾಜ್ಯದ ಸೈನ್ಯದಲ್ಲಿ 'ಲೆಫ್ಟಿನೆಂಟ್'ಯಾಗಿ ಮುಂಬೈನ ಸಿಡನ ಹಾಮ್ ಕಾಲೇಜಿನಲ್ಲಿ ಪೊಲಿಟಿಕಲ್ ಎಕಾನಾಮಿಕ್ಸ್ ಪ್ರಾಧ್ಯಾಪಕರಾಗಿ ಮುಂಬೈನ ಉಚ್ಚನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ, ಸರ್ಕಾರಿ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಹಾಗೂ ಪ್ರಾಂಶುಪಾಲರಾಗಿ ಪತ್ರಕರ್ತರು ಮತ್ತು ಸಂಪಾದಕರಾಗಿ

೧. ಮೂಕನಾಯಕ

೨. ಬಹಿಷ್ಕೃತ ಭಾರತ

೩. ಸಮತಾ

೪. ದಿ ಜನತಾ

ಬ್ರಿಟೀಷ ಭಾರತ ಸರ್ಕಾರದ ಕಾರ್ಮಿಕ, ಮತ್ತು ಕಲ್ಲಿದ್ದಲು ಗಣಿ ಸಚಿವರಾಗಿ ಮುಂಬೈ ವಿಧಾನಸಭಾ ಸದಸ್ಯರಾಗಿ, ಬ್ರಿಟಿಷ್ ಭಾರತ ಸರ್ಕಾರದ ಭೂಸೇನಾ ಮಹಾದಂಡನಾಯಕರಾಗಿ, ಬ್ರಿಟೀಷ್ ಭಾರತ ಸರ್ಕಾರದ ಸೆಂಟ್ರಲ್ ಪವರ್ ಬೊರ್ಡನ ಅಧ್ಯಕ್ಷರಾಗಿ ಸೇವೆ, ಭಾರತದ ಗೌರ್‍ನರ್ ಜನರಲ್‌ರವರ ಕಾರ್ಯಕಾರಿ ಕೌನ್ಸಿಲ್ ಸದಸ್ಯರಾಗಿ ಸೇವೆ, ಶೋಷಿತರ ಹಕ್ಕುಗಳಿಗಾಗಿ ನೂರಾರು ಹೋರಾಟಗಳನ್ನು ನಡೆಸಿದ ಪ್ರಚಂಡ ಹೋರಾಟಗಾರರಾಗಿ, ಲೋಕಸಭಾ ಸದಸ್ಯರಾಗಿ, ರಾಜ್ಯಸಭಾ ಸದಸ್ಯರಾಗಿ, ಅನ್ಯಾಯದ ವಿರುದ್ಧ ಸಿಡಿದೇಳುವ ಬಂಡಾಯಗಾರರಾಗಿ, ಭಾರತ ಸರಕಾರದ ಪ್ರಥಮ ಕಾನೂನು ಮಂತ್ರಿಯಾಗಿ, ಭಾರತ ಸರ್ಕಾರದ ಸಂವಿಧಾನ ಶಿಲ್ಪಿಯಾಗಿ, ೨೦ಸಾವಿರ ಪುಟಗಳ ಬರಹಗಾರರಾಗಿ (ವಿಶ್ವದಾಖಲೆಯಾಗಿದೆ), ಇತಿಹಾಸಕಾರರಾಗಿ, ಇತಿಹಾಸದ ಪರಿಪೂರ್ಣ ಸಂಶೋಧಕರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಕಾನೂನು ಪಂಡಿತರಾಗಿ, ರಾಜಕೀಯ ತತ್ವಜ್ಞಾನಿಯಾಗಿ, ಕಾರ್ಮಿಕ ನಾಯಕರಾಗಿ, ಮಹಿಳಾಪರ ಹೋರಾಟಗಾರರಾಗಿ, ಶೋಷಿತರ ವಿಮೋಚಕರಾಗಿ ಬೌದ್ಧ ಬಿಕ್ಕುವಾಗಿ 'ಕ್ಯಾಸ್ಟ್ಸ್ ಇನ್ ಇಂಡಿಯಾ', 'ಅನಿಹಿಲೇಷಿನ್ ಆಪ್ ಕ್ಯಾಸ್ಟ್', 'ದಿ. ಪ್ರಾಬ್ಲಮ್ಸ್ ಆಫ್ ದಿ ಅನ್‌ಟಚ್‌ಬಲ್ಸ್ ಇನ್ ಇಂಡಿಯಾ', 'ವಾಟ ಕಾಂಗ್ರೆಸ್ ಆಂಡ್ ಗಾಂಧಿ ಹ್ಯಾವ್ ಡನ್ ಟು ದಿ ಅನ್‌ಟಚಬಲ್ಸ್', 'ಹೂ ಆರ್‌ರ್ದಿ ಶೂದ್ರಾಸ್', 'ಸ್ಟೇಟ್ಸ್ ಆಂಡ ಮೈನಾರಿಟೀಸ', 'ದ ಅನ್‌ಟಚೇಬಲ್ಸ್', 'ಮಹಾರಾಷ್ಟ್ರ ಆಸ್ ಎ ಲಿಂಗ್ವಿಸ್ಟಿಕ್ ಪ್ರಾಬ್ಲಮ್', 'ದಿ ಬುದ್ಧ ಅಂಡ್ ದಿ ಫ್ಯೂಚರ್ ಆಫ್ ಹೀಸ್ ರಿಲೀಜಿಯನ್', 'ದಿ ಮೆರಿಟ್ಸ್ ಆಫ್ ಬುದ್ಧಿಸಮ್', 'ರಿಡಲ್ಸ್ ಇನ್ ಹಿಂದೂಇಸಮ್', 'ಬುದ್ಧ ಅಂಡ್ ಹಿಸ್ ಧಮ್ಮ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಅಂಬೇಡ್ಕರ್ ವಿದೇಶದಿಂದ ಉನ್ನತ ವಿದ್ಯಾಭ್ಯಾಸ ಗಳಿಸಿಕೊಂಡು ಬಂದ ತಕ್ಷಣ (೧೯೨೩) ಭಾರತದಲ್ಲಿ ಪ್ರಥಮವಾಗಿ ಶೋಷಿತ ವರ್ಗಗಳನ್ನು ಸಂಘಟನೆಯನ್ನು 'ಬಹಿಷ್ಕೃತ ಭಾರತ ಹಿತಕಾರಿಣಿ ಸಭಾ' ಎನ್ನುವ ಸಂಘಟನೆಯನ್ನು ಸ್ಥಾಪಿಸಿದರು. (೨೦-೦೭-೧೯೨೯), ಅಸ್ಪೃಶ್ಯ ವಿದ್ಯಾರ್ಥಿಗಳಾಗಿ ಬರ್ಪ ಎನ್ನುವಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪಿಸಿದರು. ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ILP) ಎಂಬ ಹೊಸ ರಾಜಕೀಯ ಪಕ್ಷ ಸ್ಥಾಪಿಸಿದರು. (೧೯೩೬), 'ಮಹರ್ ಜಾತಿ ಪಂಚಾಯತ್', (೧೯೪೧), 'All India scheduled castes federation', 'ಸಿದ್ದಾರ್ಥ ಕಾಲೇಜ್ ಆಫ್ ಆರ್ಟ್ಸ್ ಆಂಡ್ ಸೈನ್ಸ್' (೧೯೪೬), 'ಸಿದ್ಧಾರ್ಥ ಕಾಮರ್ಸ್ ಕಾಲೇಜು' (೧೯೪೭), 'ಭಾರತೀಯ ಬುದ್ಧ ಜನಸಂಘ' (ಜುಲೈ ೧೯೫೧), 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' (RPI) ಎಂಬ ಮತ್ತೊಂದು ಹೊಸ ರಾಜಕೀಯ ಪಕ್ಷ ಸ್ಥಾಪಿಸಿದರು (೧೯೫೬). ಹಿಂದುಳಿದ ವರ್ಗಗಳಿಗಾಗಿ ಹತ್ತಾರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಹಿಂದುಳಿದ ವರ್ಗಗಳಿಗಾಗಿ ಹತ್ತಾರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. 'ಬಹಿಷ್ಕೃತ ಹಿತಕಾರಿಣಿ ಸಭಾ'ದಿಂದ ಜಳಗಾಂವ್ ಪನವೇಲ್ ಹಾಗೂ ಅಹಮದಾಬಾದ್‌ಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು.

ದೀಕ್ಷಾ ಭೂಮಿಯಲ್ಲಿ ಅಂಬೇಡ್ಕರ ಅನುಯಾಯಿಗಳಿಗೆ ಬೋಧಿಸಿದ ತಾವೇ ಸಿದ್ಧಪಡಿಸಿದ್ದ ೨೨ ಪ್ರತಿಜ್ಞೆಗಳು ಇವುಗಳನ್ನು ಚಾಚು ತಪ್ಪದೇ ಪಾಲಿಸಲು ಸೂಚಿಸಿದರು.

೧. ನಾನು ಬ್ರಹ್ಮ, ವಿಷ್ಣು, ಮಹೇಶ್ವರ, ಇವರುಗಳನ್ನು ದೇವರೆಂದು ಒಪ್ಪುವುದಿಲ್ಲ ಎಂದೂ ಅವರ ಆರಾಧನೆ ಮಾಡುವುದಿಲ್ಲ.

೨. ನಾನು ರಾಮ, ಕೃಷ್ಣ, ಇವರನ್ನು ದೇವರೆಂದು ಒಪ್ಪುವುದಿಲ್ಲ, ಎಂದೂ ಅವರ ಆರಾಧನೆ ಮಾಡುವುದಿಲ್ಲ.

೩. ನಾನು, ಗೌರಿ, ಗಣಪತಿ ಹಾಗು ಯಾವುದೇ ಹಿಂದೂ ಧರ್ಮದ ದೇವ-ದೇವತೆಗಳನ್ನು ನಂಬುವುದಿಲ್ಲ, ಎಂದೂ ಅವರ ಆರಾಧನೆ ಮಾಡುವುದಿಲ್ಲ.

೪. ನಾನು ದೇವತೆಗಳ ಅವತಾರವನ್ನು ನಂಬುವುದಿಲ್ಲ.

೫. ಬುದ್ಧನು ವಿಷ್ಣುವಿನ ಅವತಾರ ಎನ್ನುವುದು ಸಂಪೂರ್ಣ ಸುಳ್ಳು. ಇದು ಮೂಢನಂಬಿಕೆಯಿಂದ ಕೂಡಿದೆ. ಮತ್ತು ಇದೊಂದು ಕುಚೇಷ್ಟೆ.

೬. ನಾನು ಶ್ರಾದ್ಧ ಮತ್ತು ಪಿಂಡದಾನ ಮಾಡುವುದಿಲ್ಲ.

೭. ನಾನು ಬುದ್ಧ ಧರ್ಮದ ತತ್ವಗಳಿಗೆ ಯಾವುದೇ ಅಡಚಣೆ ಮಾಡುವುದಿಲ್ಲ.

೮. ನಾನು ಬ್ರಾಹ್ಮಣರಿಂದ ಯಾವುದೇ ಕ್ರಿಯಾಕರ್ಮ ಮಾಡಿಸಿಕೊಳ್ಳುವುದಿಲ್ಲ.

೯. ಮಾನವ ಜನಾಂಗವನ್ನು ನಾನು ಸಮಾನವೆಂದು ತಿಳಿಯುತ್ತೇನೆ.

೧೦. ನಾನು ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತೇನೆ.

೧೧. ನಾನು ಭಗವಾನ ಬುದ್ಧನ ಅಷ್ಟಾಂಗ ಮಾರ್ಗದ ಪಾಲನೆ ಮಾಡುತ್ತೇನೆ.

೧೨. ಪ್ರಾಣಿ ಜನಾಂಗವನ್ನು ಪ್ರೀತಿಸುವೆ, ಅವುಗಳ ಪಾಲನೆ, ಪೋಷಣೆ ಮಾಡುತ್ತೇನೆ.

೧೩. ನಾನು ಪ್ರಾಣಿಗಳಿಗೆ ಹಿಂಸೆ ಕೊಡುವುದಿಲ್ಲ.

೧೪. ನಾನು ಕಳವು ಮಾಡುವುದಿಲ್ಲ.

೧೫. ನಾನು ವ್ಯಭಿಚಾರ ಮಾಡುವುದಿಲ್ಲ.

೧೬. ನಾನು ಸುಳ್ಳು ಹೇಳುವುದಿಲ್ಲ.

೧೭. ನಾನು ಹೆಂಡ, ಸರಾಯಿ ಇತ್ಯಾದಿ ಮಾದಕ ವಸ್ತುಗಳ ಸೇವನೆ ಮಾಡುವುದಿಲ್ಲ.

೧೮. ನಾನು ಪ್ರಜ್ಞಾ ! ಶೀಲ!! ಕರುಣ!!! ಈ ಮೂರು ಬೌದ್ಧ ಧರ್ಮದ ತತ್ವಗಳನ್ನು ಅಳವಡಿಸಿಕೊಂಡು ನನ್ನ ಜೀವನ ನಡೆಸುವೆ.

೧೯. ನಾನು ಮಾನವ ಜನಾಂಗವನ್ನು ಕೀಳಾಗಿ ಕಂಡ ಹಿಂದೂ ಧರ್ಮವನ್ನು ತೊರೆದು ಬೌದ್ಧ ಧರ್ಮವನ್ನು ಸ್ವೀಕರಿಸುತ್ತೇನೆ.

೨೦. ಬೌದ್ಧ ಧರ್ಮ ಸತ್ಯವೆಂದು ನಂಬುತ್ತೇನೆ. ಇದು ನನಗೆ ನಿಶ್ಚಿತವಾಗಿದೆ.

೨೧. ನನ್ನ ಪುನರ್ ಜನ್ಮ ಅಸಾಧ್ಯವೆಂದು ನಾನು ನಂಬುತ್ತೇನೆ.

೨೨. ನಾನು ಇದುವರೆಗೆ ಬೌದ್ಧ ಧರ್ಮ ಮಾರ್ಗವನ್ನು ಅನುಸರಿಸಿದ್ದೇನೆ. ಇನ್ನು ಮುಂದೆ ಕೂಡ ಬುದ್ಧನ ತತ್ವಗಳನ್ನು ಅನುಸರಿಸಿಕೊಂಡು ಬರುತ್ತೇನೆಂದು ಪ್ರತಿಜ್ಞೆ ಮಾಡುವೆ.

ಡಾ. ಬಿ.ಆರ್. ಅಂಬೇಡ್ಕರ ಅವರು ಮಾಡಿದ ಪ್ರತಿಜ್ಞೆಗಳ ಫಲವಾಗಿ ಇಂದು ಮಹಾರಾಷ್ಟ್ರ ರಾಜ್ಯದಲ್ಲಿ ಬಹಳಷ್ಟು ಮಹರ್ ಸಮುದಾಯವು ಬೌದ್ಧ ಧರ್ಮಕ್ಕೆ ಮತಂತರ ಹೊಂದುತ್ತಿದ್ದಾರೆ.

ಮಹಾರಾಷ್ಟ್ರ ರಾಜ್ಯದಲ್ಲಿ ಛಲವಾದಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಮಹಾರ ಜನರು ಹೆಚ್ಚಾಗಿರುವುದರಿಂದಲೇ ಅದಕ್ಕೆ ಮಹಾರಾಷ್ಟ್ರವೆಂದು ಕರೆದಿರಬಹುದು. ದಕ್ಷಿಣ ಭಾರತದ ರಾಜ್ಯಗಳಾದ ಆಂದ್ರಪ್ರದೇಶ, ಕರ್ನಾಟಕ, ಚನ್ನೈ ಮತ್ತು ಕೇರಳ ರಾಜ್ಯಗಳಲ್ಲಿ ಈ ಸಮುದಾಯ ಕಂಡುಬರುತ್ತದೆ. ಈ ಸಮುದಾಯದವರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿದ ಕೆಲವು ಪ್ರಮುಖರ ಮಹನೀಯರ ಬಗೆಗೆ ವಿವರಿಸಲಾಗಿದೆ.

ಚಿತ್ರದುರ್ಗದ ಒನಕೆ ಓಬವ್ವ

ಕರ್ನಾಟಕ ಚಾರಿತ್ರಿಕ ಕಥಾ ಮಂಜರಿಯಲ್ಲಿ ಚಿತ್ರದುರ್ಗದ ಒನಕೆ ಓಬವ್ವೆಗೂ ಮಹತ್ವಸ್ಥಾನ ಕಲ್ಪಿಸಿರುವುದುಂಟು. ಚರಿತ್ರೆ ಯುಗದ ವೀರವನಿತೆಯರ ಸಾಲಿನಲ್ಲಿ ಈಕೆಯನ್ನೂ ಗುರುತಿಸಿ ಈಕೆಯ ಧೀರೋದತ್ತ ನಿಲುವನ್ನು ಪ್ರಶಂಸಿಸಲಾಗಿದೆ. ಮುಖ್ಯವಾಗಿ ಸ್ವಾಮಿನಿಷ್ಠೆ, ಸಮಯಸ್ಪೂರ್ತಿ, ತ್ಯಾಗ ಇವು ಅವಳು ಪಡೆದಕೊಂಡ ಬಂದಿರುವ ಮೂರು ಗುಣಗಳು. ಚಿತ್ರದುರ್ಗ ನಾಯಕ ಅರಸರ ಚರಿತ್ರೆಯಲ್ಲಿ ಇವಳು ನಿರ್ವಹಿಸಿದ ಪಾತ್ರದ ಬಗೆಗೆ ಚರಿತ್ರೆಯನ್ನಾಧರಿಸಿದ ಕೆಲವು ಗ್ರಂಥಗಳಲ್ಲಿ ಪ್ರಬಂಧಗಳಲ್ಲೂ ಶಾಲಾ ಪಠ್ಯ – ಪುಸ್ತಕಗಳಲ್ಲಿ ಪ್ರಸ್ತಾಪಿಸಲಾಗಿದೆ.

ಓಬವ್ವ ಚಿತ್ರದುರ್ಗದ ಹತ್ತಿರ ಅಗಸನಕಲ್ಲು ಗ್ರಾಮದವಳು; ಚಿತ್ರದುರ್ಗ ಕೋಟೆ ಕಳ್ಳಗಂಡಿಯಲ್ಲಿ ನುಗ್ಗಲೆತ್ನಿಸಿದ ಶತ್ರು ಸೈನಿಕರನ್ನು ಹಿಮ್ಮೆಟ್ಟಿಸುವ ತನ್ನ ಸಾಹಸದಲ್ಲಿ ಅವರಿಂದ ಹತ್ಯೆಗೀಡಾದಳು; ಅವಳ ಕೊಲ್ಲಲ್ಪಟ್ಟ ಶತ್ರು ಸೈನಿಕರ ಸಂಖ್ಯೆ ೨೦೦ ರಿಂದ ೩೦೦ ಎನ್ನಬಹುದು.

ಕ್ರಿ.ಶ. ೧೯೬೧ ಮೇ ೯ ಶನಿವಾರ ಮುದ್ದ ಹನುಮಪ್ಪನೊಡನೆ ಓಬವ್ವೆಯ ವಿವಾಹವಾದರು. ಕ್ರಿ.ಶ. ೧೭೬೬ ಅಕ್ಟೋಬರ್ ೧ ಬುಧವಾರ ಓಬವ್ವ ತನ್ನ ಸಾಹಸ ತೋರಿಸಿದ ಕರ್ನಾಟಕದಲ್ಲಿ ಛಲವಾದಿ ಸಮುದಾಯದ ಕೀರ್ತಿ ಹೆಚ್ಚಿಸಿದ್ದಾಳೆ.

ಬಿ. ಶ್ಯಾಮಸುಂದರ್

ಮಹಾರಾಷ್ಟ್ರದ ಔರಂಗಾಬಾದ ಮೂಲದವರಾದ ಬಿ. ಶ್ಯಾಮಸುಂದರ್ ಅವರು ಹುಟ್ಟಿದ್ದು ಡಿಸೆಂಬರ್ ೨೧ ೧೯೦೮ರಲ್ಲಿ ಅವರ ತಂದೆ ಬದುಲಾ ಮಾಣಿಕಂ ತಾಯಿ ಸುಧಾಬಾಯಿ ಮಧ್ಯಮ

ವರ್ಗದವರಾಗಿದ್ದ ಅಸ್ಪೃಶ್ಯರೆನಿಸಿದ 'ಮಾಲಾ' ಜಾತಿಗೆ ಸೇರಿದವರಾಗಿದ್ದರು. ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿಯನ್ನು ಪಡೆದ ಬಿ. ಶ್ಯಾಮಸುಂದರ್ ಅತ್ಯುನ್ನತವಾದ ಸಾಮಾಜಿಕ ಚಿಂತನೆಯಲ್ಲಿ ತೊಡಗಿಕೊಂಡರು.

ಅವರ ಮುಖ್ಯ ಸಾಮಾಜಿಕ ಕೊಡುಗೆಗಳೆಂದರೆ ವಿನೂತನ ಸಮ್ಮೇಳನವು ೧೯೪೬ರಲ್ಲಿ ಮಹಾರಾಷ್ಟ್ರ ನಾಂದೇಡದಲ್ಲಿ ನಡೆಸಿದರು. ಅಸ್ಪೃಶ್ಯರಿಗೆ ಭೂ ಒಡೆತನ ಸಿಗುವಂತಾಗಬೇಕು. ಮೈಸೂರು ವಿಧಾನ ಸಭೆಗೆ ಆಯ್ಕೆ (೧೯೫೭-೧೯೬೨) ಭಾಲ್ಕಿ ಕ್ಷೇತ್ರ ಬೀದರ ಜಿಲ್ಲೆ ಗೊಂಡರು. ಅವರು ಸಾಮಾಜಿಕ ಹಿತಕ್ಕಾಗಿ ವಿಧಾನಸಭೆಯ ಹೊರಗೂ ಒಳಗೂ ದುಡಿಯಹತ್ತಿದರು. ರಾಜ್ಯದ ಗಡಿ ಪ್ರದೇಶದ ಆಳಂದ ತಾಲೂಕಿಗೆ ಚಿಂಚನಸೂರ ಮಹಾಪುರ ತಾಯಿ ಹಡಲಗಿ ಯಲ್ಲಮ್ಮ ದೇವತೆಗಳ ಪೂಜೆಯ ಹೆಸರಿನಲ್ಲಿ ನಡೆಯುತ್ತಿದ್ದ ಅವಮಾನವೀಯವಾದ ಬೆತ್ತಲೆ ಸೇವೆಯನ್ನು ಸದನದ ಗಮನಕ್ಕೆ ತಂದರು. ಅದನ್ನು ತಡೆಗಟ್ಟುವಂತೆ ಸರಕಾರದ ಮೇಲೆ ಒತ್ತಡ ಹೇರಿದರು. "ಸರಕಾರಿ ಸೇವೆಗಳಲ್ಲಿ ಒಂದೇ ಸಮುದಾಯದ ಜನರು ಇರುವುದನ್ನು ನೇರವಾಗಿ ಸದನದಲ್ಲಿ ಖಂಡಿಸಿ ಇಲ್ಲಿಯ ಜಾತಿ ಪದ್ಧತಿಯನ್ನು ತಾರ್ಕಿಕ ನೆಲೆಯಲ್ಲಿ ಖಂಡಿಸುತ್ತ 'We are mool Bharatis, original son's of the soil' ಎಂದು ದಲಿತರನ್ನು ಬಡಿದೆಬ್ಬಿಸಿದರು. ಅವರ ರಾಜಕೀಯ ಘೋಷಣೆ ಎಷ್ಟು ಸ್ಪಷ್ಟ ಮತ್ತು ಗಂಭಿರವಾಗಿತ್ತೆಂದರೆ 'ಖೋಯಾ ಹುವಾ ರಾಜ್ ಮಾಂಗನೇಸೆ ನಹಿ ಮಿಲ್ತಾ ಉಸೆ ಛೀನಾ ಜಾತಾ ಹೈ' (ಕಳೆದು ಹೋದ ರಾಜ್ಯಾಧಿಕಾರವನ್ನು ಬೇಡವುದರಿಂದ ಅದು ಸಿಗುವುದಿಲ್ಲ. ಬದಲಿಗೆ ಅದನ್ನು ಆಳುವ ವರ್ಗದ ಕೈಯಿಂದ ಕಿತ್ತುಕೊಳ್ಳಬೇಕು) ಎಂದು ಅಭಿಪ್ರಾಯಪಟ್ಟಿದ್ದರ ಮುಂದೆ ಅವರ ಭಾರತೀಯ ಭೀಮಸೇನೆ ಸ್ಥಾಪಿನೆ ಮಾಡಿದರು. 'ದಲಿತಸ್ಥಾನದ' ಬೇಡಿಕೆಯಿಟ್ಟು ಅಸ್ಪೃಶ್ಯರನ್ನು ಬೇರೆ ಹಳ್ಳಿಗಳಿಗೆ ಸ್ಥಳಾಂತರಿಸುವದು ಅವಶ್ಯಕ ಎಂದಿದ್ದಾರೆ. ಇಲ್ಲವೆ ಪ್ರತ್ಯೇಕವಾದ ಹಳ್ಳಿಗಳನ್ನು ನೀಡಿ ಅವರ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸಬೇಕಾಗಿದೆ ಎಂದೆ ಅಭಿಪ್ರಾಯ ಪಟ್ಟಿದ್ದರು."[೨೦]

ಬಿ. ಶ್ಯಾಮರಾವ್‌ರ ಚಿಂತನೆ ಹಾಗೂ ಭೀಮಸೇನೆಯ ಪ್ರಭಾವಕ್ಕೊಳಗಾದವರಲ್ಲಿ ಕರ್ನಾಟಕ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ 'ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆಯ ಸಚಿವರಾದ ಡಾ. ಮಲ್ಲಿಕಾರ್ಜುನ ಖರ್ಗೆ ಹಾಗೂ ಸಂಸದ ಕೆ. ವಿ. ಶಾಣಪ್ಪ ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಮಾರುತಿರಾವ ಮಾಲೆ ಮಾಜಿ ಸಚಿವರಾದ ಜಿ. ರಾಮಕೃಷ್ಣ ಅವರು ಆಗಿದ್ದಾರೆ. ಇವರು ಶ್ರೇಷ್ಠ ಚಿಂತಕ, ಮಾದರಿ ಕ್ರಾಂತಿಕಾರಿ, ದಲಿತಮಾನ್ಯ; ಐಕ್ಯತೆಯ ಹರಿಕಾರ, ಅಂತರರಾಷ್ಟ್ರೀಯ ಖ್ಯಾತಿಯ ದಲಿತ ನಾಯಕ; ಉತ್ಸುಕ ಸಂಸದೀಯ ಪಟು ಹಾಗೂ ಸಾಹಿತ್ಯ ರಚನೆಕರಾಗಿ ಸಮಾಜದಲ್ಲಿ ಚಿಂತನರಾಗಿದ್ದಾರೆ. ಅವರು ಸಾಹಿತ್ಯದ ಅನೇಕ ಭಾಷೆಗಳಲ್ಲಿ ಕೃತಿ ರಚಿಸಿದ್ದಾರೆ. ಹಿಂದಿ, ಮರಾಠಿ, ಉರ್ದು, ಇಂಗ್ಲೀಷ ಭಾಷೆಗಳಲ್ಲದೆ ಫ್ರೆಂಚ್, ಫರ್ಶಿಯನ್ ಭಾಷೆಗಳನ್ನು ಮಾತನಾಡಬಲ್ಲವರಾಗಿದ್ದರು. ಅವರು ಪ್ರಮುಖ ಕೃತಿಗೆ 'The burm (English) Mool Bharatis (English and Hindi) problems of S.C.(English)' ಇಂದು ಛಲವಾದಿಯವರು ಪಡೆದ ಗೌರವಯುಕ್ತ ಸ್ಥಾನಮಾನಗಳಿಗೆ ಪ್ರಮುಖ ಕಾರಣರಾಗಿದ್ದಾರೆ.

ದೇವರಾಯ ಇಂಗಳೆ

ಕರ್ನಾಟಕದಲ್ಲಿ ಛಲವಾದಿ ಸಮುದಾಯವನ್ನು ಹೋರಾಟದ ಮೂಲಕ ಸಶಕ್ತಗೊಳಿಸುವ ಕಾರ್ಯ ಮಾಡುವುದರ ಮೂಲಕ ಗಮನ ಸೆಳೆಯುವಂಥ ಕೆಲವು ಮಹನೀಯರು ಇದ್ದಾರೆ. ವಿಪರ್ಯಾಸದ ಸಂಗತಿ ಎಂದರೆ ದಲಿತ ಸಮುದಾಯದ ಪರಿವರ್ತನೆಗಾಗಿ, ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಇಂತಹ ಮಹನೀಯರ ಇತಿಹಾಸವೇ ಅಸ್ಪಷ್ಟವಾಗಿದೆ. ಇತಿಹಾಸ ನಿರ್ಮಿಸಿದವರ ಇತಿಹಾಸವನ್ನೇ ದುರ್ಲಭ ಮಾಡುವುದು ಇತಿಹಾಸದ ದೊಡ್ಡ ದುರಂತ. ಇಂಥವರಲ್ಲಿ ಕರ್ನಾಟಕದ ದಲಿತ ಪಿತಾಮಹ ಎಂದೇ ಗುರುತಿಸಲ್ಪಡುವ ದೇವರಾಯ ಇಂಗಳೆಯವರೂ ಒಬ್ಬರು.

ಗೌತಮ ಬುದ್ಧ, ಬಸವಣ್ಣ, ಜ್ಯೋತಿಬಾ ಫುಲೆ ಮತ್ತು ಡಾ. ಬಾಬಾಸಾಹೇಬ ಅಂಬೇಡ್ಕರ್ ಮೊದಲಾದವರು, ಹಿಂದೂ ಧರ್ಮದಲ್ಲಿಯ ಜಾತಿ ಪ್ರಧಾನ ವ್ಯವಸ್ಥೆಯ ವಿರುದ್ಧ ಮಾಡಿದ ಹೋರಾಟ ಮತ್ತು ಕ್ರಾಂತಿಕಾರಿ ವಿಚಾರಗಳು ದೇವರಾಯ ಇಂಗಳೆಯವರ ಮೇಲೆ ತುಂಬ ಪ್ರಭಾವ ಬೀರಿದ್ದವು. ಮೊದಲೇ ವಿಚಾರವಾದಿಯಾಗಿದ್ದ ದೇವರಾಯರು ಈ ಪ್ರಭಾವಗಳ ಮೂಲಕ ಮತ್ತಷ್ಟು ಪ್ರೇರಿತವಾಗಿ ಹಿಂದೂ ಧರ್ಮದಲ್ಲಿ ಬೇರು ಬಿಟ್ಟಿರುವ ಅಸ್ಪೃಶ್ಯತೆಯನ್ನು ಬೇರು ಸಮೇತ ಕಿತ್ತಿ ಹಾಕಲು ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ರಾಯಬಾಗ, ಅಥಣಿ ಮತ್ತು ದಕ್ಷಿಣ ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ 'ಇಂಗಳೆ ದೇವು', 'ದೇವಜೀ' ಎಂದೇ ಕರೆಯಲ್ಪಡುತ್ತಿದ್ದ ದೇವರಾಯ ಇಂಗಳೆಯವರು ಚಿಕ್ಕೋಡಿ ತಾಲ್ಲೂಕಿನ ಇಂಗಳಿ ಎನ್ನುವ ಸಣ್ಣ ಹಳ್ಳಿಯಲ್ಲಿ ರಾಮರಾಯ ಇಂಗಳೆ ಎಂಬ ಮಹಾರನೊಬ್ಬನ ಮಗನಾಗಿ ೧೮೮೯ರ ಜುಲೈ ತಿಂಗಳಲ್ಲಿ ಛಲವಾದಿ ಸಮುದಾಯದಲ್ಲಿ ಜನಿಸಿದರು.

ದೇವರಾಯ ಇಂಗಳೆಯವರು, ಡಾ. ಬಾಬಾಸಾಹೇಬ ಅಂಬೇಡ್ಕರರಿಗಿಂತ ವಯಸ್ಸಿನಲ್ಲಿ ಎರಡು ವರ್ಷ ಹಿರಿಯರಾಗಿದ್ದಾರೆ. ಶೈಕ್ಷಣಿಕ ಸಂಗತಿಯನ್ನು ಮುಂದಿಟ್ಟುಕೊಂಡು ನೋಡಿದಾಗ ದೇವರಾಯರು ಡಾ. ಬಾಬಾಸಾಹೇಬರು ಏರಿದ ಎತ್ತರಕ್ಕೆ ಏರಲಿಲ್ಲ ಎಂಬುದೇನೋ ನಿಜ. ಇದಕ್ಕೆ ಕಾರಣವೂ ಇದೆ; ಡಾ. ಬಾಬಾಸಾಹೇಬರಿಗೆ ದೊರೆತ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬಲ ದೇವರಾಯರಿಗೆ ದೊರೆಯಲಿಲ್ಲ. ಈ ಕಾರಣದಿಂದಲೇ ಅವರು ಉನ್ನತ ಶಿಕ್ಷಣದಿಂದ ವಂಚಿತರಾಗಬೇಕಾಯಿತು. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಅವರಿಗಿದ್ದ ಜ್ಞಾನ ಡಾ. ಬಾಬಾಸಾಹೇಬ ಅಂಬೇಡ್ಕರರಿಗಿಂತ ಯಾವುದರಲ್ಲೂ ಕಡಿಮೆ ಇರಲಿಲ್ಲ. ಆದರೆ ದೇವರಾಯರ ಕಾರ್ಯಕ್ಷೇತ್ರ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಪ್ರದೇಶಗಳಿಗೆ ಮಾತ್ರ ಸೀಮಿತಿವಾಗಿ, ವಿಸ್ತಾರತೆಯನ್ನು ಪಡೆಯಲಿಲ್ಲ ಎಂಬುದು ಖೇದದ ಸಂಗತಿಯೇ ಆಗಿದೆ.

ಡಾ. ಬಾಬಾಸಾಹೇಬ ಅಂಬೇಡ್ಕರರಿಗಿಂತ ಮುಂಚೆಯೇ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಕೆಲವೊಂದಿಷ್ಟು ಪ್ರದೇಶಗಳಲ್ಲಿ ಅಸ್ಪೃಶ್ಯತೆ ಆಚರಣೆ ವಿರುದ್ಧ ಚಳುವಳಿ ನಡೆಯುತ್ತಲೇ ಇತ್ತು.

ದೇವರಾಯರು ಸಾಮಾಜಿಕ ವಿಚಾರಗಳ ಮೂಲಕ ಅಸ್ಪೃಶ್ಯ ಸಮುದಾಯದ ಸುಧಾರಣೆ ಮತ್ತು ಸಾಮಾಜಿಕ ಪರಿವರ್ತನೆಗಾಗಿ ಟೊಂಕಕಟ್ಟಿ ನಿಂತರು. ಅವರ ವಿಚಾರಧಾರೆ ಹೊಸ ಹಾದಿಯನ್ನೇ ತೆರೆಯಿತು.

ಜಾತಿವಾಚಕ ಅಡ್ಡಹೆಸರುಗಳನ್ನು ನಿರ್ಮೂಲನೆ ಮಾಡುವುದು, ದೇವದಾಸಿ ಪದ್ಧತಿಯ ವಿರುದ್ಧ ಚಳುವಳಿ ಮಾಡುವುದು, ಸತ್ತದನದ ಮಾಂಸ ತಿನ್ನುವುದನ್ನು ಪ್ರತಿಬಂಧಿಸುವುದು ಮತ್ತು ಅಸ್ಪೃಶ್ಯತೆಯ ವಿರೋಧಿ ಚಳುವಳಿಯನ್ನು ಗಟ್ಟಿಗೊಳಿಸುವುದು ಈ ನಾಲ್ಕು ಪ್ರಮುಖ ಕಾರ್ಯಗಳನ್ನು ಸಾಧಿಸಲು ದೇವರಾಯರು ಮುಂದಾದರು.

೧೮೧೮ರಲ್ಲಿ ಭೀಮಾ ಕೋರೆಗಾಂವದಲ್ಲಿ ಬ್ರಿಟಿಷರು ಮತ್ತು ಪೇಶ್ವೆಗಳ ನಡುವೆ ಕದನ ನಡೆಯಿತು. ಪೇಶ್ವೆಗಳ ಸೇನೆ ೩೦ ಸಾವಿರು ಕಾಲ್ದಳ, ಎರಡು ಸಾವಿರ ಅಶ್ವದಳಗಳನ್ನು ಹೊಂದಿದ್ದರೂ ಬ್ರಿಟೀಷರ ಸೇನೆಯಲ್ಲಿದ್ದ ಕೇವಲ ೫೦೦ ಮಹಾವೀರರ ವಿರುದ್ಧ ಪರಾಭವಗೊಂಡಿತು. ಈ ಕದನದಲ್ಲಿ ಹುತಾತ್ಮರಾದ ಮಹಾವೀರರಲ್ಲಿ ರಾಮನಾಕ, ತಾಮನಾಕ, ಧಾಮನಾಕ, ಮೇಘನಾಕ, ಶೆಟನಾಕ, ಸೋಮನಾಕ, ಭೀಮನಾಕ ಮೊದಲಾದವರು ಇದ್ದರು. ಈ ವೀರರು ಗೆಲವು ಸಾಧಿಸಿ ಹುತಾತ್ಮರಾದರೂ ಮುಂದಿನ ದಿನಗಳಲ್ಲಿ ತಲೆಮರೆಸಿಕೊಂಡು ಪಾರಾಗಿದ್ದ ಪೇಶ್ವೆಗಳು ಸಮಯ ಸಾಧಿಸಿ ಸೇಡು ತೀರಿಸಿಕೊಳ್ಳಲು ತಮ್ಮನ್ನು ನಾಶ ಮಾಡಬಹುದೆಂಬ ಅಂಜಿಕೆಯಿಂದ ಅವರ ಕುಟುಂಬದ ಸದಸ್ಯರು, ಬಂಧು-ಬಾಂಧವರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದು ವಾಸಿಸತೊಡಗಿದರು. ಈ ಮೂಲದ ಅಡ್ಡಹೆಸರುಗಳನ್ನು ಹೊಂದಿರುವ ಕೆಲ ಕುಟುಂಬಗಳು ಚಿಕ್ಕೋಡಿ ಮತ್ತು ಆಸುಪಾಸಿನ ತಾಲೂಕುಗಳಲ್ಲಿ ಕಂಡು ಬರುತ್ತವೆ. ಭೀಮನಾಕನ ಕುಟುಂಬದವರಿಗೆ ಇಂದು ಭೀಮನ್ನವರ ಎಂದು ಕರೆಯಲಾಗುತ್ತದೆ. ಹಾಗೆಯೇ ರಾಯನಾಕ-ರಾಯಣ್ಣವರ ಆಗಿ, ತಾಮನಾಕ-ತಮ್ಮನ್ನವರ ಆಗಿ, ದಾಮನಾಕ-ಧಮನ್ನವರ ಆಗಿ, ಮೇಘನಾಕ-ಮೇಘಣ್ಣವರ ಆಗಿ, ಶೆಟನಾಕ-ಶೆಟ್ಟಿನ್ನವರ ಆಗಿ ಪರಿವರ್ತನೆಯಾಗಿದ್ದರೆ ಇದು ದೇವರಾಯರು ಸೂಚಿಸಿದ ಪರಿಣಾಮವಾಗಿಯೇ ಬದಲಾದ ಅಡ್ಡಹೆಸರುಗಳಾಗಿವೆ. ಇವುಗಳ ಮೂಲಕ ಇತಿಹಾಸವನ್ನು ಜೀವಂತ ಇಡುವ ಕಾರ್ಯಕ್ಕೂ ಚಾಲನೆ ನೀಡಿದಂತಾಗುತ್ತದೆಯಲ್ಲದೇ ಜಾತಿವಾಚಕ ಅಡ್ಡಹೆಸರುಗಳಾಗಿವೆ. ಇವುಗಳ ಮೂಲಕ ಇತಿಹಾಸವನ್ನು ಜೀವಂತ ಇಡುವ ಕಾರ್ಯಕ್ಕೂ ಚಾಲನೆ ನೀಡಿದಂತಾಗುತ್ತದೆಯಲ್ಲದೇ ಜಾತಿವಾಚಕ ಅಡ್ಡಹೆಸರುಗಳಿಂದ ಬಿಡುಗಡೆಯೂ ಆಗುತ್ತದೆ ಎಂಬುವುದು ಅವರ ನಿಲುವಾಗಿತ್ತು.

ದೇವದಾಸಿ ಪದ್ಧತಿ ನಿರ್ಮೂಲನೆ ಚಳುವಳಿ

ದೇವರಾಯ ಇಂಗಳೆಯವರು ದಲಿತ ಸಮುದಾಯದ ಸುಧಾರಣೆಗಾಗಿ ಮಾಡಿದ ಇನ್ನೊಂದು ಪ್ರಮುಖವಾದ ಕಾರ್ಯವೆಂದರೆ ದೇವದಾಸಿ ಪದ್ಧತಿ ನಿರ್ಮೂಲನೆ ಚಳುವಳಿ. ಸಮಾಜದ ಅನಿಷ್ಟವಾಗಿ

ಜಾರಿಯಲ್ಲಿದ್ದ ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದೇ ದೇವರಾಯರ ಉದ್ದೇಶವಾಗಿತ್ತು.

"ಕರ್ನಾಟಕದ ಬೆಳಗಾವಿ, ವಿಜಾಪೂರ, ಧಾರವಾಡ ಮೊದಲಾದ ಜಿಲ್ಲೆಗಳಲ್ಲಿ ಹಾಗೂ ಮಹಾರಾಷ್ಟ್ರದ ಹಲವು ಭಾಗಗಳಲ್ಲಿ ಇರುವ ದಲಿತರು ಮೊದಲಿನಿಂದಲೂ ಸವದತ್ತಿ ಯಲ್ಲಮ್ಮನ ಭಕ್ತರಾಗಿದ್ದಾರೆ. ಭಕ್ತಿಯ ಅತಿರೇಕ ಮತ್ತು ಪುರೋಹಿತ ಶಾಹಿಗಳ ಕುತಂತ್ರದ ಫಲವಾದ ದೇವದಾಸಿ ಅಥವಾ ಜೋಗತಿ ಬಿಡುವ ಅನಿಷ್ಠ ಪದ್ಧತಿ ಭಾರತೀಯ ಸಂಸ್ಕೃತಿಯಲ್ಲಿ ಬಹು ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಈ ಅನಿಷ್ಠ ಪದ್ಧತಿಯ ಹಿಂದೂ ಸಮಾಜದಲ್ಲಿರುವ ದಲಿತರ ಜೀವನಕ್ಕೆ ಮತ್ತು ಸ್ವಾಭಿಮಾನಕ್ಕೆ ಕಳಂಕಪ್ರಾಯವಾಗಿದೆ. ಇದನ್ನು ಬುಡರಹಿತ ಕಿತ್ತಿ ಹಾಕಲು ದೇವರಾಯರು ಕಟಿಬದ್ಧರಾದರು. ಇದಕ್ಕಾಗಿ ಅವರು ಮೊದಮೊದಲು ಪ್ರತಿಯೊಬ್ಬ ದಲಿತರ ಮನೆಗೆ ಹೋಗಿ ದೇವದಾಸಿ ಅಥವಾ ಜೋಗತಿ ಬಿಡುವುದು ಬೇಡ ಎಂದು ಕಳಕಳಿಯಿಂದ ಮನವಿ ಮಾಡಿಕೊಂಡರು. ಮೇಲ್ಜಾತಿಯರೆನ್ನಿಸಿಕೊಂಡ ಜನ ಅನಾಥ ಮತ್ತು ಅವಿದ್ಯಾವಂತ ದಲಿತ ಸ್ತ್ರೀಯರನ್ನು ಮೋಸಗೊಳಿಸಿ ಜೀವನ ಹಾಳು ಮಾಡುತ್ತಿರುವುದನ್ನು ಕಟುವಾಗಿ ಟೀಕಿಸಿದರು; ವಿರೋಧಿಸಿದರು. ಮುಂದುವರಿದ ಅವರು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಭಜನೆ ಮತ್ತು ಹಾಡುಗಳನ್ನು ರಚಿಸಿ, ಹಾಡುತ್ತ ದಲಿತರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು."[೨೧]

"ಹುಚ್ಚರ‍್ಯಾಕೆ ಆಗುತೀರಿ
ಬಂಧುಗಳೇ ಹುಚ್ಚರ‍್ಯಾಕೆ ಆಗುತೀರಿ॥ ಪ ॥
ಅಕ್ಕ-ತಂಗಿ-ಅವ್ವ-ಮಗಳನ್ನು
ಜೋಗತಿ ಬಿಡುತೀರಿ ॥ ೧ ॥
ಮೈಯನು ಮಾರುತ
ವ್ಯಭಿಚಾರ ಮಾಡುತ
ನರಕದಲ್ಲಿ ಯಾಕೆ ಬೀಳುತೀರಿ ॥ ೨ ॥

ಎಂದು ತಮ್ಮ ಛಲವಾದಿ ಬಾಂಧವರಿಗೆ ಸವಾಲು ಹಾಕುತ್ತಾರೆ. ಯಲ್ಲಮ್ಮ ದಲಿತಳಲ್ಲ, ಆಕೆ ಬ್ರಾಹ್ಮಣತಿಯಾಗಿದ್ದಾಳೆ ಎಂದು ಹೇಳುವ ಅವರು,

"ಯಲ್ಲಮ್ಮ ನಮ್ಮವಳಲ್ಲವೋ
ಭರವಸೆ ಇಡಬ್ಯಾಡ
ಆಕೆಯೊಬ್ಬ ಹೊಲಸು ಜೋಗತಿ ॥ ಪ ॥
ಎಂಟು ದಿವಸಕ್ಕೊಮ್ಮೆ ಆಕೀ

ಜಳಕ ಮಾಡುತಾಳೆ
ಯಲ್ಲಮ್ಮ ತಾನೆನುತ
ಮೈಮ್ಯಾಲೆ ಬರುತಾಳೆ
ದೇವರು ಮೈಮ್ಯಾಲೆ
ಬರುವುದು ಸುಳ್ಳೋ
ಭರವಸೆ ಇಡಬ್ಯಾಡ
ಯಲ್ಲಮ್ಮ ನಮ್ಮವಳಲ್ಲವೋ"

ಎನ್ನುತ್ತ ಯಲ್ಲಮ್ಮನ ಹೆಸರಿನಲ್ಲಿ ಜೋಗತಿ ಬಿಡುವುದನ್ನು ಅಥವಾ ಒಟ್ಟಾರೆ ಆಕೆಯ ಪೂಜೆಯನ್ನೇ ದಲಿತರು ಮಾಡಬಾರದು ಎಂದು ಒತ್ತುಕೊಟ್ಟು ಹೇಳುವ ಅವರು, ಅನಿಷ್ಠ ದೇವದಾಸಿ ಪದ್ಧತಿಯ ಕೆಟ್ಟ ಪರಿಣಾಮವನ್ನು ಸಾರುವ ನಾಕವೊಂದನ್ನು ಬರೆದು ಹಳ್ಳಿ-ಹಳ್ಳಿಗಳಲ್ಲಿ ಆಡಿಸಿದರು. 'ಬಹಿಷ್ಕೃತ ಭಾರತ ಬೋಧಿನಿ' ಅರ್ಥಾತ್ 'ಯಲ್ಲಮ್ಮ' ಎಂಬ ಹೆಸರಿನ ಈ ನಾಟಕ ಇಂದು ಉಪಲಬ್ಧವಿಲ್ಲವಾದರೂ ಅದರ ಸಂಕ್ಷಿಪ್ತ ಸಾರಾಂಶ ದೊರೆಯುತ್ತದೆ. ಸುಮಾರು ೧೯೧೮-೧೯ರ ಆಸುಪಾಸಿನಲ್ಲಿ ಈ ನಾಟಕದ ಪ್ರದರ್ಶನಗಳು ಹಲವಾರು ಹಳ್ಳಿ ಮತ್ತು ನಗರಗಳಲ್ಲಿ ಪ್ರಯೋಗ ಕಂಡವು. ಯಲ್ಲಮ್ಮನ ಬಗ್ಗೆ ಇರುವ ಮೂಢನಂಬಿಕೆ ಮತ್ತು ಜೋಗತಿ ಬಿಡುವಿಕೆಯ ಕೆಟ್ಟ ಪದ್ಧತಿಯ ಪರಿಣಾಮಗಳ ಜೊತೆಗೆ ಮೇಲ್ಪಂತಿಯವರೆನ್ನಿಸಿಕೊಂಡ ಜನರ ಲುಚ್ಚಾಗಿರಿಯನ್ನು ಖಂಡಿಸುವ ಈ ನಾಟಕದ ಮೂಲಕ ದಲಿತರಲ್ಲಿ ಜಾಗೃತಿ ಮೂಡಿಸುವ ಮಹತ್ವದ ಕಾರ್ಯವನ್ನು ದೇವರಾಯರು ಮಾಡಿದ್ದಾರೆ.

ಛಲವಾದಿ ಸಮುದಾಯದ ಸುಧಾರಣೆಗಾಗಿ ದೇವರಾಯ ಇಂಗಳೆಯವರು ಮಾಡಿದ ಮತ್ತೊಂದು ಮಹತ್ವದ ಸಾಮಾಜಿಕ ಕಾರ್ಯವೆಂದರೆ ದಲಿತರು ಮತ್ತು ದನಗಳ ಮಾಂಸ ತಿನ್ನುವುದನ್ನು ಪ್ರತಿಬಂಧಿಸುವ ಚಳುವಳಿ, ಸಾವಿರಾರು ವರ್ಷಗಳಿಂದ ಶೂದ್ರರು ಮತ್ತು ದಲಿತರು ಮಾಂಸ ತಿನ್ನುವುದನ್ನು ರೂಢಿಸಿಕೊಂಡು ಬಂದಿದ್ದಾರೆ. ಕೆಲಕಾಲದ ನಂತರ ಸತ್ತ ದನದ ಮಾಂಸ ತಿನ್ನುವುದೂ ರೂಢಿಗತವಾಯಿತು. ಇದರಿಂದ ಮೇಲ್ಜಾತಿಯವರೆನ್ನಿಸಿಕೊಂಡ ಜನ, ಅವರನ್ನು ಕೀಳುಭಾವನೆಯಿಂದ ನೋಡತೊಡಗಿದರು. ಗ್ರಾಮದಲ್ಲಿ ಯಾವುದಾದರೂ ದನ ಸತ್ತರೆ ಅಸ್ಪೃಶ್ಯ ಹಬ್ಬ ಆಚರಿಸುತ್ತಿದ್ದರು. ಇದರಿಂದಲೇ ನಿರಂತರವಾಗಿ ಶೋಷಣೆಗೆ ಒಳಗಾಗುತ್ತ ಬಂದರು.

ಸತ್ತ ದನಗಳ ಮಾಂಸ ತಿನ್ನುವುದನ್ನು ಬಿಡಬೇಕು ಎಂದು ದೇವರಾಯರು ದಲಿತ ಬಾಂಧವರಲ್ಲಿ ಮೊದಲು ವಿನಂತಿ ಮಾಡಿಕೊಂಡರು. ಸತ್ತ ದನಗಳನ್ನು ತಿನ್ನುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸಲು ಪ್ರಯತ್ನಿಸಿದರು. ತಮ್ಮ ವಿಚಾರಗಳಿಂದ ಪ್ರಭಾವಿತರಾದ ಯುವಕರನ್ನು ಒಂದೆಡೆ ಸೇರಿಸಿ ಸತ್ತ ದನಗಳ ಮಾಂಸ ಕಂಡಲ್ಲಿ ಅದಕ್ಕೆ ಸೀಮೆಎಣ್ಣೆ ಮತ್ತು ಕೆಸರನ್ನು ಹಾಕುವ ಮೂಲಕ ತಿನ್ನುವುದನ್ನು ನಿರ್ಬಂಧಿಸಬೇಕು ಎಂದು ಕರೆ ನೀಡಿದರು. ಈ ಕರೆಯ

ಕಾರಣವಾಗಿಯೇ ಪ್ರತಿಯೊಂದು ಗ್ರಾಮದಲ್ಲಿ ಇಂಥ ಯುವಕರ ಒಂದೊಂದು ಸ್ವಯಂಸೇವಕ ಸಂಘಗಳು ಸ್ಥಾಪನೆಯಾಗತೊಡಗಿದವು. ಆ ಎಲ್ಲ ಸಂಘಗಳ ಅಧ್ಯಕ್ಷರಾಗಿ ಸ್ವತಃ ದೇವರಾಯರೇ ಕಾರ್ಯ ನಿರ್ವಹಿಸುತ್ತಿದ್ದರು. ಊರಿನಲ್ಲಿ ಯಾವುದಾದರೂ ದನ ಸತ್ತು ಆ ರಾತ್ರಿ ಈ ಸ್ವಯಂ ಸೇವಕ ಸಂಘದ ಯುವಕರು ಹಲಗಿ, ತಬಲಾ, ತಾಳ (ಚಳ್ಳಮ) ಮತ್ತು ಟಿಮಕಿ (ಸಣ್ಣದಾದ ಚರ್ಮವಾದ್ಯ ದಿಮ್ಮಡಿ) ಮೊದಲಾದವುಗಳನ್ನು ಬಾರಿಸುತ್ತ, ದೇವರಾಯರು ರಚಿಸಿದ ಹಾಡುಗಳನ್ನು ಹಾಡುತ್ತ, ದಲಿತಕೇರಿಯಲ್ಲಿ ತಿರುಗುತ್ತಿದ್ದರು. ಈ ಹಾಡುಗಳು ಕನ್ನಡದಲ್ಲೇ ಇವೆ. ಅವುಗಳಲ್ಲಿಯ ಒಂದು ಹಾಡಿನ ಮೊದಲ ಭಾಗ ಇಂತಿದೆ;

ನೀಡೋ ಮನುಷ್ಯತ್ವವ ದೇವ
ನೀ ನೀಡೋ ಮನುಷ್ಯತ್ವವ ॥ ಪ ॥
ಹೊಲೆಯ ಮಾದಿಗರ ಗತಿಯನು ನೋಡೋ
ಸತ್ತ ಮಾಂಸದ ತಿಂಬುದ ಬ್ಯಾಡೋ
ನೀಡೋ ಮನುಷ್ಯತ್ವವ ದೇವ
ನೀ ನೀಡೋ ಮನುಷ್ಯತ್ವವ ॥ ೧ ॥

ಇಂಥ ಜಾಗೃತಿಯ ಮೂಲಕವೇ ಸತ್ತ ದನದ ಮಾಂಸ ತಿನ್ನುವ ವಿನಾಶಕಾರಿ ಪದ್ಧತಿ ಎಷ್ಟೋ ಪಾಲು ಕಡಿಮೆಯಾಗಿ ಇಂದು ಬಹಳಷ್ಟು ಕಡೆ ಸಂಪೂರ್ಣವಾಗಿ ನಿಂತು ಹೋಗಿದೆ.

ಅಸ್ಪೃಶ್ಯತಾ ನಿವಾರಣಾ ಚಳುವಳಿ

ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅಸ್ಪೃಶ್ಯರು ಮುಂದೆ ಬಂದರೆ ಅಸ್ಪೃಶ್ಯರಿಗೆ ಅಂಟಿರುವ ಅಸ್ಪೃಶ್ಯತೆಯ ಕಳಂಕ ನಿವಾರಣೆಯಾಗುತ್ತದೆ. ಎಂಬುದು ದೇವರಾಯ ಇಂಗಳೆಯವರ ಗಟ್ಟಿ ನಂಬಿಕೆಯಾಗಿತ್ತು. ಅವರು ತಮ್ಮ ದಿನಚರಿಯಲ್ಲಿ ಒಂದು ಕಡೆ ಹೀಗೆ ಬರೆದಿದ್ದಾರೆ. 'ಚಂದ್ರನಿಗೆ ಕಳಂಕ, ಸೂರ್ಯನಿಗೆ ಕಪ್ಪುಕಲೆ, ಸಿಹಿ ಹಣ್ಣಿಗೆ ಹುಳು ಇರುವಂತೆ ಆರ್ಯಧರ್ಮದಲ್ಲಿ ಅಸ್ಪೃಶ್ಯತೆ ಕಳಂಕ, ಕಪ್ಪುಚುಕ್ಕೆ ಮತ್ತು ಹುಳು ಆಗಿದೆ. ಹುಳುಗಳನ್ನು ಕೊಲ್ಲಲು ಔಷಧಿ ಸಿಂಪರಿಸುವಂತೆ, ಅಸ್ಪೃಶ್ಯತೆ ಎಂಬ ರೋಗದಿಂದ ಮುಕ್ತವಾಗಲು ಅಸ್ಪೃಶ್ಯರು ಆರ್ಯರೂ ಹೃದಯದಲ್ಲಿ ಮನೆ ಮಾಡಿರುವ ಹುಳುಗಳನ್ನು ನಾಶ ಮಾಡಬೇಕು. ಇದಕ್ಕಾಗಿ ಪಾಲಿಸಬೇಕಾಗುವ ಒಂದೇ ಒಂದು ಪಥ್ಯೆ ಎಂದರೆ ಕೇವಲ ಎಲ್ಲ ದಲಿತರು ಒಗ್ಗಟ್ಟಾಗುವುದೇ ಆಗಿದೆ' ಎಂಬ ದಿಟ್ಟವಾದ ನಿಲುವು ದೇವರಾಯರದ್ದಾಗಿತ್ತು.

ಮತಾಂತರ ಮತ್ತು ಮತಾಂತರ

ದೇವರಾಯ ಇಂಗಳೆಯವರು ಅಸ್ಪೃಶ್ಯ ಸಮುದಾಯಗಳ ಸುಧಾರಣಾ ಚಳುವಳಿಗಳಲ್ಲಿ ಶೈಕ್ಷಣಿಕ ಪ್ರಗತಿಗೆ ಅಗ್ರಸ್ಥಾನ ನೀಡುತ್ತಿದ್ದರು. ಮನುಷ್ಯನ ಜೀವನದಲ್ಲಿ ಮಹತ್ವದ ಪರಿವರ್ತನೆಗೆ ಶಿಕ್ಷಣವೇ ಸಹಕಾರಿ,

ದಲಿತರ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಶಿಕ್ಷಣ ಪೂರಕವಾಗಿರುತ್ತದೆ. ಇದಕ್ಕೆ ಬೇರೆ ಯಾವುದೂ ಪರ್ಯಾಯವಾಗಲಾರದು ಎಂಬುದನ್ನು ಅವರು ಅರಿತಿದ್ದರು. ಡಾ. ಬಾಬಾಸಾಹೇಬ ಅಂಬೇಡ್ಕರರು ದಲಿತ ಸಮುದಾಯದ ಜಾಗೃತಿಗಾಗಿ ೨೦ನೇ ಜುಲೈ ೧೯೨೪ರಲ್ಲಿ 'ಬಹಿಷ್ಕೃತ ಹಿತಕಾರಣಿ ಸಭೆ'ಯನ್ನು ಸ್ಥಾಪಿಸಿದರು. 'ಶಿಕ್ಷಣ ಪಡೆಯಿರಿ! ಸಂಘಟಿತರಾಗಿ!! ಸಂಘರ್ಷ ಮಾಡಿರಿ!!!' ಎಂಬುದು ಈ ಸಭೆಯ ಮೂಲ ಮಂತ್ರವಾಗಿತ್ತು. ಇದರಿಂದ ಪ್ರಭಾವಿತರಾದ ದೇವರಾಯ ಆ ಮೂಲಮಂತ್ರದ ಪದಗಳೊಂದಿಗೆ 'ಸ್ವಾವಲಂಬಿಗಳಾಗಿ' ಎಂಬುದನ್ನು ಸೇರಿಸಿದರಲ್ಲದೇ ಈ ಮೂಲಮಂತ್ರದಂತೆಯೇ ಕಾರ್ಯ ಮಾಡಿ ತೋರಿಸಿದರು.

ಕರ್ನಾಟಕ ಬಹಿಷ್ಕೃತ ವಿದ್ಯಾರ್ಥಿ ಆಶ್ರಮ

ಮೊದಲಿನ ಕಾಲದಲ್ಲಿ ಈಗಿರುವಂತೆ ಅಸ್ಪೃಶ್ಯರಿಗೆ ಯಾವ ಸವಲತ್ತು ಸೌಲಭ್ಯಗಳೂ ಇರಲಿಲ್ಲ. ಪ್ರೌಢಶಾಲೆ ಮತ್ತು ಪದವಿ ಶಿಕ್ಷಣ ಪಡೆಯಲು ನಗರ ಪ್ರದೇಶಗಳಿಗೇ ಹೋಗಬೇಕಾಗುತ್ತಿತ್ತು. ಆರ್ಥಿಕ ದೃಷ್ಟಿಯಿಂದ ಇದು ಬಹುಪಾಲು ಅಸ್ಪೃಶ್ಯರಿಗೆ ಕೈಗೆ ಸಿಗಲಾರದ ಹಣ್ಣಾಗಿತ್ತು. ಇಂಥ ಸ್ಥಳಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಗೆ ಅನುಕೂಲ ಮಾಡಿಕೊಡಬೇಕು ಎಂದು ನಿರ್ಧರಿಸಿದ ದೇವರಾಯರು ತಮ್ಮ ಬೆಂಬಲಿಗರೊಂದಿಗೆ ಸೇರಿ, ಡಾ. ಬಾಬಾಸಾಹೇಬ ಅಂಬೇಡ್ಕರರ ಮಾರ್ಗದರ್ಶನದಲ್ಲಿ ಬೆಳಗಾವಿ, ಧಾರವಾಡ, ನಿಪ್ಪಾಣಿ, ಚಿಕ್ಕೋಡಿ ಮೊದಲಾದ ಕಡೆ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು.

ಶಿಕ್ಷಣವಿಲ್ಲದೆ ಛಲವಾದಿ ಸಮುದಾಯದ ಸುಧಾರಣೆ ಸಾಧ್ಯವಿಲ್ಲ ಎನ್ನುವುದನ್ನು ತಿಳಿದುಕೊಂಡಿದ್ದ ದೇವರಾಯರು, ಡಾ. ಬಾಬಾಸಾಹೇಬ ಅಂಬೇಡ್ಕರರು ಸ್ಥಾಪಿಸಿದ 'ಬಹಿಷ್ಕೃತ ಹಿತಕಾರಣಿ ಸಭೆ'ಯ ವತಿಯಿಂದ ೧ನೇ ಜೂನ ೧೯೨೭ರಂದು ಬೆಳಗಾವಿಯಲ್ಲಿ ಪ್ರಪ್ರಥಮವಾಗಿ 'ಕರ್ನಾಟಕ ಬಹಿಷ್ಕೃತ ವಿದ್ಯಾರ್ಥಿ ಆಶ್ರಮ' ಎಂಬ ಹೆಸರಿನಲ್ಲಿ ವಿದ್ಯಾರ್ಥಿ ನಿಲಯ ಪ್ರಾರಂಭಿಸಿದರು. ಇದಕ್ಕೆ ಬೆಳಗಾವಿ ಜಿಲ್ಲಾ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಬಿ. ಎಸ್. ಅಂಗಡಿ ಮತ್ತು ಬೆಳಗಾವಿ ನಗರಪಾಲಿಕೆಯ ಅಧ್ಯಕ್ಷ ಬಿ. ಕೆ. ದಳವಾಯಿ ಮೊದಲಾದ ಬ್ರಾಹ್ಮಣ, ಬ್ರಾಹ್ಮಣೇತರ ಮುಖಂಡರು, ಅಧಿಕಾರಿಗಳು ಸಹಾಯ-ಸಹಕಾರ ನೀಡಿದ್ದರು.

ಛಲವಾಧಿ ಸಮುದಾಯದ ಸುಧಾರಣೆಗಾಗಿ ವಿರತವಾಗಿ ಹೋರಾಟ ನಡೆಸಿದ ಮತ್ತು ನವಭಾರತ ನಿರ್ಮಾಣದ ಕನಸು ಹೊತ್ತ ನೇತಾರ ದೇವರಾಯ ಇಂಗಳೆಯವರು ೧೯೭೯ರಲ್ಲಿ ತಮ್ಮ ಸ್ವಂತ ಗ್ರಾಮವಾದ ಚಿಕ್ಕೋಡಿ ತಾಲೂಕಿನ ಇಂಗಳಿ ಗ್ರಾಮದಲ್ಲಿ ನಿಧನರಾದರು. ಇಂತಹ ಛಲವಾದಿ ಸಮುದಾಯದ ನಾಯಕನ ಚಿಂತನೆ, ಹೋರಾಟದಿಂದಾಗಿ ಮುಂಬೈ ಪ್ರಾಂತ್ಯದ ಭಾಗದಲ್ಲಿ ಛಲವಾದಿಯ ಜನ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲಲ್ಲಿ ಬದಲಾವಣೆ ಆಗಿರುವುದಕ್ಕೆ ಕಾರಣೀಕರ್ತರಾಗಿದ್ದಾರೆ.

ಬಿ. ಬಸವಲಿಂಗಪ್ಪ

ಭಾರತ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಶ್ರೇಷ್ಠ ಕನಿಷ್ಠ ಎಂಬ ಅಸಮಾನತೆಯನ್ನು ತೊಡೆದು ಹಾಕಿ ಸಮಾನತೆಯನ್ನು ಸ್ಥಾಪಿಸಲು ಶ್ರಮಿಸಿದ ಬುದ್ಧ, ಬಸವ, ಡಾ. ಬಿ. ಆರ್. ಅಂಬೇಡ್ಕರ ನಂತರ ಈ ಉದ್ದೇಶಕ್ಕಾಗಿ ಜೀವನವಿಡೀ ದುಡಿದ ಕೆಲವೇ ಕೆಲವು ವ್ಯಕ್ತಿಗಳ ಪೈಕಿ ಕರ್ನಾಟಕದ ಮಾಜಿ ಮಂತ್ರಿ ದಿ. ಬಿ.ಬಸವಲಿಂಗಪ್ಪ ಅಗ್ರಗಣ್ಯರು. ಜಾತೀಯ ಸಮಾಜದ ಕಡು ಟೀಕಾಕಾರರಾಗಿದ್ದ ಬಸವಲಿಂಗಪ್ಪ ಜೀವನದುದ್ದಕ್ಕೂ ಶೋಷಿತ ಜನರ ಧ್ವನಿಯಾಗಿದ್ದ ಧೀಮಂತ ನಾಯಕ ಶೋಷಿತ ಜನರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ತಮಗೆ ದೊರೆತ ಎಲ್ಲಾ ಅವಕಾಶಗಳನ್ನು ಬಸವಲಿಂಗಪ್ಪನವರು ಸಮರ್ಥವಾಗಿ ಬಳಸಿಕೊಂಡರು. ನಗರಾಭಿವೃದ್ಧಿ ಮಂತ್ರಿಯಾಗಿದ್ದಾಗ ತಲೆಯ ಮೇಲೆ ಮಲ ಹೊರುವ ಅನಾಗರಿಕ ಪದ್ಧತಿಯನ್ನು ಇಡೀ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ರದ್ದು ಮಾಡಿದರು. ಕಂದಾಯ ಮಂತ್ರಿಯಾಗಿದ್ದಾಗ 'ಉಳುವವನೇ ಭೂಮಿಯ ಒಡೆಯ' ಎಂಬ ಭೂಸುಧಾರಣಾ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದರು. ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿದ್ದಾಗ ಮಂಡಲ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತುಗಳ ಅಧ್ಯಕ್ಷ ಸ್ಥಾನಗಳಲ್ಲಿ ಪರಿಶಿಷ್ಟ ಮತ್ತು ಹಿಂದುಳಿದವರಿಗೆ ಸ್ಥಾನಗಳನ್ನು ಮೀಸಲಿರಿಸುವಂತೆ ಪಂಚಾಯತ್‌ರಾಜ್ ಕಾಯಿದೆಯ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಿದರು. ಇಂತಹ ಈ ಶ್ರೇಷ್ಠ ರಾಜಕಾರಣಿಯ ಛಲವಾದಿ ಸಮುದಾಯದಲ್ಲಿ ಹುಟ್ಟಿ ಬಂದದ್ದು ಹೆಮ್ಮೆಯ ವಿಷಯವಾಗಿದೆ. ಛಲವಾದಿ ಸಮುದಾಯದ ಪ್ರಗತಿಗೆ ಅವರ ತತ್ವ ಸಿದ್ಧಾಂತಗಳು ಯಾವತ್ತು ದಾರಿದೀಪವಾಗಿವೆ ಎನ್ನಬಹುದು.

ಛಲವಾದಿ ಗೌರಮ್ಮ

ಯಾವ ವಾದ್ಯ ಪರಿಕರಗಳಿಲ್ಲದೆ ಕೇವಲ ಕೈ ಚಪ್ಪಾಳೆಯ ಸದ್ದಿನೊಂದಿಗೆ ಛಲವಾದಿ ಗೌರಮ್ಮ ತಮ್ಮ ಕಂಚಿನ ಕಂಠದಿಂದ ಹಾಡತೊಡಗಿದರೆ ಇಡೀ ಸಭಾಂಗಣ ಹರ್ಷರೋಮಾಂಚಿತವಾಗುತ್ತಿತ್ತು. ಸಹಸ್ರಾರು ಜಾನಪದ ಹಾಡುಗಳ ಕಂಠಸ್ಥ ಕಣಜವಾಗಿದ್ದ ಗೌರಮ್ಮ ಜಾನಪದ ಕಥಾಕೋಶವು ಹೌದು. ಬಸವತತ್ವಾದರ್ಶಕದಲ್ಲಿ ನಂಬುಗೆ ಇರಿಸಿಕೊಂಡು ಹಾಡುವುದನ್ನೇ ಕಾಯಕವನ್ನಾಗಿಸಿಕೊಂಡು ಗೌರಮ್ಮನ ಬದುಕು ಹಾಲಿನಂತೆ ಶುಭ್ರ ಹವಳದಂತೆ ಹೊಳಪು, ಗಂಗೆಯಂತೆ ಪವಿತ್ರ ನಡೆನುಡಿಯಿಂದಾದ ಈ ನಿಜ ಶರಣೆಯ ಜೀವನ ನಮ್ಮ ಗ್ರಾಮೀನ ಬದುಕಿನ ಮುಗ್ಧ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ.

ಛಲವಾದಿ ಗೌರಮ್ಮ ಜೀವನ ಚರಿತ್ರೆ, ಛಲುವಾದಿ ಬಟ್ಟಲು ಕಾಯಕ, ಬಸವ ಜಯಂತಿ, ಲಿಂಗದೀಕ್ಷೆ, ಸರಳ ವ್ಯಕ್ತಿತ್ವದ ಶರಣ ಬದುಕು ಮುಂತಾದ ವಿವರಣೆ ನೀಡಲಾಗಿದೆ.

ಶೋಷಿತ ವರ್ಗದ ಶಾರದೆ ಗೌರಮ್ಮ ಛಲವಾದಿ ಜನಪದ ಮತ್ತು ತತ್ವಪದಗಳನ್ನು ಹಾಡುವುದರೊಂದಿಗೆ ಸ್ವತಃ ಹಾಡು ರಚಿಸುತ್ತಿದ್ದಳು ಶಾಲೆಯ ಕಟ್ಟೆ ಹತ್ತದೆ ಓದಲು ಬರೆಯಲು

ಕಲಿಯದಿದ್ದರೂ ಪದ ಜೋಡಿಸಿ ಹಾಡು ಕಟ್ಟುವದು ಗೌರಮ್ಮನ ಅಸಾಧಾರಣ ಪ್ರತಿಭೆಗೆ ಸಾಕ್ಷಿಯಾಗಿತ್ತು. ಹೀಗೆ ಅನೇಕ ಹಾಡುಗಳನ್ನು ಕಟ್ಟಿದ ಗೌರಮ್ಮ ನಮ್ಮ ಜನಪದ ಪರಂಪರೆಯ ಅಶುಕವಯತ್ರಿ ಗ್ರಾಮೀಣರ ಆಡುಮಾತಿನ ಹಾಡಿನ ಮೋಡಿ ಹಚ್ಚಿದ ಈ ಕಲೆಯಲಾರದ ಕವಿಯಿತ್ರಿ ಕಟ್ಟಿಕೊಟ್ಟ ಹಾಡುಗಳು ಕನ್ನಡ ಜನಪದಲೋಕ ಗುರಿತಿಸುವಂತೆ ಮಾಡಿದೆ. ಛಲವಾದಿ ಸಮುದಾಯದಲ್ಲಿರುವ ಕಲಾವಂತರಿಗೆ ಒಂದು ಮಾದರಿಯ ಜಾನಪದ ಹಾಡುಗಾರ್ತಿಯಾಗಿದ್ದಳು.

ಕಾಶೀನಾಥ ಪಂಚಶೀಲ ಗವಾಯಿ (ಛಲವಾದಿ ತತ್ವಪದಕಾರ)

ಬೀದರ ಜಿಲ್ಲೆಯ ಹಿಲಾಲಪೂರದ ಸಿಂಗೆ ಮನೆತನಕ್ಕೆ ಸೇರಿದ ಕಾಳಪ್ಪ ಮತ್ತು ಶಾಂತಾಬಾಯಿ ದಂಪತಿಗಳ ಹಿರಿಯ ಮಗನೇ ಕಾಶಿನಾಥ ಗವಾಯಿ ಅಥವಾ 'ಪಂಚಶೀಲ ಕಾಶೀನಾಥ ಗವಾಯಿ' ಎಂಬುದರ ಜೊತೆಗೆ 'ಹಿಲಾಲಪೂರ' ಎಂಬ ಹೆಸರಿನಿಂದ ಪ್ರಸಿದ್ಧಗೊಂಡಿದ್ದಾರೆ. ಅಸ್ಪೃಶ್ಯ ಹೊಲೆಯ ಜಾತಿಗೆ ಸೇರಿದ ಈ ದಂಪತಿಗಳಿಗೆ ಒಟ್ಟು ಹನ್ನೊಂದು ಜನ ಮಕ್ಕಳು ಅವರಲ್ಲಿ ಬದುಕಿ ಉಳಿದವರು ಐದು ಜನ ಮಾತ್ರ. ದಲಿತ ಸಮಸ್ಯೆಗಳು ದಲಿತರ ಶೋಷಣೆಯ ವಿರುದ್ಧ ಪ್ರತಿಭಟನೆ, ಸಂಪ್ರದಾಯ ಮೂಡನಂಬಿಕೆಗೆ ವಿರೋಧ ಇವರ ತತ್ವಪದಗಳಲ್ಲಿ ಕಾಣುತ್ತೇವೆ. ಪಟ್ಟಭದ್ರರ ವಿರುದ್ಧದ ಗಟ್ಟಿಧ್ವನಿ ಕಾಶೀನಾಥ ಪಂಚಶೀಲ ಗವಾಯಿ ಹಳ್ಳಿಯ ಹೋಟೆಲುಗಳಲ್ಲಿ ಛಲವಾದಿಯರಿಗೆ ಮೇಲಿನಿಂದ ನೀರು ಕೊಡುವದು, ಅವರಿಗಾಗಿ ಕಪ್ಪು ಬಸಿ ಪ್ರತ್ಯೇಕವಾಗಿ ಇಟ್ಟು ಅಸ್ಪೃಶ್ಯತೆಯನ್ನು ಆಚರಿಸುವುದನ್ನು ಕಾಶಿನಾಥ ಗವಾಯಿಗಳು ೬೦ರ ದಶಕದಷ್ಟು ಹಿಂದೆಯೇ ಪ್ರತಿಭಟಿಸಿದ್ದಾರೆ.

ಹಳ್ಳಿ ಜನರ ಮಳ್ಳ ವಿಚಾರ
ಇನ್ನು ಬಿಟ್ಟಿಲ್ಲಪ್ಪ ಕಳ್ಳಾಟ ಚೋರ
ಹಳ್ಳಿ ಹೋಟಲ ಕಪ್ಪು ಬಸಿ ಬ್ಯಾರ
ಕುಲ ಕೇಳ್ತಾರೋ ನೀವು ಯಾತರವರ
ತಾಯಿ ಹಾರೂರಕಿ ತಂದೆ ಜೈಭೀಮದೇವರ
ಯಾವುದು ಹೇಳಬೇಕು ಭೂಮಿ ಬೀಜಬ್ಯಾರ

ಎಂದು ಹಾಡಿ ಅಸ್ಪೃಶ್ಯತೆಯನ್ನು ಆಚರಿಸುವ ಮಳ್ಳತನವನ್ನು (ಅವಿವೇಕಿತನ) ಬಿಟ್ಟುಕೊಡಲು ಹೇಳಿದ್ದಾರೆ. 'ಕಟ್ಟಿ ಹಾಕೋ ಕೆಟ್ಟ ಗುಣದ ನಾಯಿ, ಕುಲಗೋತ್ರರ ಬಾಯಿ' ಎಂದು ಹೇಳಿ ಕುಲಗೋತ್ರ ಎಂದು ಬಡಿದಾಡುವವರ ಬಾಯಿ ಮುಚ್ಚಿಸಿದ್ದಾರೆ. ಅವರ ಹಾಡಿನ ಪ್ರೇರಣೆಯಿಂದಾಗಿ ಅನೇಕ ಹಳ್ಳಿಗಳಲ್ಲಿ ಛಲವಾದಿಯವರು ಅಸಮಾನತೆಯನ್ನು ವಿರೋಧಿಸತೊಡಗಿದರು. ಇದರ ಪರಿಣಾಮವಾಗಿ ಕೆಲವು ಗ್ರಾಮಗಳಲ್ಲಿ ಅಸ್ಪೃಶ್ಯರಿಗಾಗಿ ಹೋಟೆಲಗಳಲ್ಲಿ ಪ್ರತ್ಯೇಕವಾಗಿ ಕಪ್ಪು ಬಸಿ ಇಡುವ ಪದ್ಧತಿ ನಿಂತಿತ್ತು. ಸಾರ್ವಜನಿಕ ಕೆರೆ, ಬಾವಿ, ಕೊಳವೆಬಾವಿ, ನೀರು ಬಳಸಲು ದಲಿತರಿಗೆ ಸಾಧ್ಯವಾಯಿತು.

ಜಂಬಗಿ ಶಿವಶರಣ (೧೯೦೭-೧೯೮೦)

ಹುಟ್ಟು ಕಲಬುರಗಿ ಜಿಲ್ಲೆ ಸಮೀಪ ಜಂಬಗಿ ಗ್ರಾಮದಲ್ಲಿ ೧೯೦೭ ರಲ್ಲಿ ಛಲವಾದಿ ಕುಟುಂಬದಲ್ಲಿ ಜನಿಸಿದರು. ಶರಣರ ತತ್ವ ಪದಗಳು, ಅಂಬೇಡ್ಕರ ಕುರಿತು ಪದ್ಯಗಳನ್ನು ಹಾಡಿದ್ದಾರೆ.

ಕ್ವಾನಳ್ಳಿ ಹೊನ್ನಪ್ಪ ಮಹಾರಾಜ (೧೯೧೫-೧೯೭೬)

ಹೊನ್ನಪ್ಪ ಮಹಾರಾಜರು ಮಹಾರಾಷ್ಟ್ರ ರಾಜ್ಯದ ಅಕ್ಕಲಕೋಟ ತಾಲೂಕಿನ ಸೊಲ್ಲಾಪುರ ಜಿಲ್ಲೆಯ ಕ್ವಾನಳ್ಳಿ ಎಂಬ ಗ್ರಾಮದ ಛಲವಾದಿ ಸಮುದಾಯದಲ್ಲಿ ೧೯೧೫ರಲ್ಲಿ ಜನಿಸಿದರು. ೧೯೭೬ರ ವರೆಗೆ ಅಫಜಲಪುರ ತಾಲೂಕಿನ ಮಾಶಾಳ ಗ್ರಾಮದಲ್ಲಿ ಜೀವನ ಸಾಗಿಸಿದರು. ಇವರು ತತ್ವಪದಕಾರರಾಗಿದ್ದಾರೆ.

ಡಾ. ಮಲ್ಲಿಕಾರ್ಜುನ ಖರ್ಗೆ

೧೯೪೨ ಜುಲೈ ೨೧ರಂದು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ವರವತ್ತಿ ಎಂಬ ಗ್ರಾಮದಲ್ಲಿ ಶ್ರೀ ಮಾಪಣ್ಣ ಮತ್ತು ಸಾಬವ್ವ ದಂಪತಿಗಳ ಏಕೈಕ ಪುತ್ರರಾಗಿ ಜನಿಸಿದ್ದಾರೆ. ಇವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವು ಗುಲಬರ್ಗಾದ ನೂತನ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದಾರೆ. ಮುಂದೆ ಅವರು ಪಿ.ಯು.ಸಿ. ಮತ್ತು ಪದವಿ ಶಿಕ್ಷಣವನ್ನು ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ್ದಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಮರಾಠಿ ಮಾಧ್ಯಮದಲ್ಲಿ ಮಾಡಿದ್ದಾರೆ. ಮುಂದೆ ಅವರು ಕಾನೂನು ಪದವಿಯನ್ನು ಎಸ್.ಎಸ್.ಎಲ್. ಕಾನೂನು ಮಹಾವಿದ್ಯಾಲಯದಲ್ಲಿ ಕಾನೂನು ಪದವಿಯನ್ನು ಪಡೆದುಕೊಂಡಿದ್ದಾರೆ. ಮುಂದೆ ಅವರು ೧೯೬೯ರಲ್ಲಿ ಗುಲ್ಬರ್ಗಾ ಜಿಲ್ಲಾ ಕೋರ್ಟನಲ್ಲಿ ಶ್ರೀ ಶಿವರಾಜ ಪಾಟೀಲ ಅವರ ಮಾರ್ಗದರ್ಶನದಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಮುಂದೆ ಅವರು ಎಂ.ಎಸ್.ಕೆ. ಮಿಲ್ಲಿನ ಸಂಯುಕ್ತ ಮಜದೂರ ಸಂಘ ಕಾನೂನು ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ೧೯೬೯ರಲ್ಲಿ ಕಾಂಗ್ರೆಸ್ ಪಕ್ಷದ ವಿಭಾಗವಾಯಿತು. ಮುಂದೆ ಇವರು ಸಂಸ್ಥಾ ಕಾಂಗ್ರೆಸ್ ಪಕ್ಷದಲ್ಲಿ ಸೇರಿಕೊಂಡರು. ಧರ್ಮರಾವ ಅಫಜಲಪುರ ನೇತೃತ್ವದಲ್ಲಿ ಯುವ ಪೀಳಿಗೆಗೆ ತರಬೇತಿ ಹಾಗೆ ಪಕ್ಷದ ಸದಸ್ಯರನ್ನಾಗಿ ಮಾಡಿಕೊಳ್ಳುವ ಸಭೆ ಗುಲ್ಬರ್ಗಾದಲ್ಲಿ ಕರೆದಿದ್ದರು. ಅಂದಿನ ಗೆಳೆಯರ ಬಳಗದಲ್ಲಿರುವ ಧರ್ಮಸಿಂಗ, ಇಕ್ಬಾಲ ಅಹ್ಮದ ಸರಡಗಿ, ಸಾದತ್ ಹುಸೇನ ಪಕ್ಷಕ್ಕೆ ಸೇರಿದರು. ಮುಂದೆ ಅವರು ೧೯೭೦ರಲ್ಲಿ ಕಾಂಗ್ರೆಸ್ ಪಕ್ಷದ ಗುಲ್ಬರ್ಗಾ ಘಟಕದ ಅಧ್ಯಕ್ಷರಾಗಿ ಆಯ್ಕೆಗೊಂಡರು. ೧೯೭೧ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಧರ್ಮರಾವ ಅಫಜಲಪುರ ಸಂಸದರಾಗಿ ಆಯ್ಕೆಯಾದರು. ೧೯೭೨ರಲ್ಲಿ ಗುರಮಿಠ್ಕಲ್ ಕ್ಷೇತ್ರದಲ್ಲಿ ವಿಧಾನಸಭೆ ಸದಸ್ಯರಾಗಿ ಆಯ್ಕೆಗೊಂಡರು. ನಿರಂತರವಾಗಿ ಎಂಟನೆ ಬಾರಿ ಈ ಕ್ಷೇತ್ರದಿಂದಲೇ ಆರಿಸಿಬಂದು ಇತಿಹಾಸ ದಾಖಲಿಸಿದ್ದಾರೆ. ಮುಂದೆ ಅವರು ೨೦೦೯ರಲ್ಲಿ ಗುರಮಿಠ್ಕಲ್ ಕ್ಷೇತ್ರವನ್ನು ಬಿಟ್ಟು ಚಿತಾಪುರ ತಾಲೂಕಿನಲ್ಲಿ ವಿಧಾನಸಭೆ ಸದಸ್ಯರಾಗಿ ಆಯ್ಕೆಗೊಂಡರು. ಅದೇ ವರ್ಷದಲ್ಲಿ ಲೋಕಸಭೆ ಚುನಾವಣೆಗೆ ಗುಲ್ಬರ್ಗಾ ಜಿಲ್ಲೆಯಿಂದ ಸ್ಪರ್ಧಿಸಿ ಆಯ್ಕೆಗೊಂಡು, ಲೋಕಸಭೆ

ಸದಸ್ಯರಾದರು. ಪ್ರಥಮವಾಗಿ ಅವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರಾಗಿ ಪರಿಶಿಷ್ಟ ಜಾತಿ ಜನಾಂಗಗಳಿಗಾಗಿ ವಿಶೇಷವಾದ ಅನುದಾನದಲ್ಲಿ ನೇಮಣೂಕಿಗೆ ಅವಕಾಶ ಕಲ್ಪಿಸಿದ್ದಾರೆ. ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಸಚಿವರಾಗಿ, ಮುಂದೆ ಕಂದಾಯ ಸಚಿವರಾಗಿ ೧೯೮೩ ಹಾಗೂ ೧೯೯೩ರಲ್ಲಿ ಸೇವೆ ಸಲ್ಲಿಸಿದ್ದಾರೆ. ಮುಂದೆ ೧೯೯೧ರಲ್ಲಿ ಸಹಕಾರ ಸಚಿವರಿದ್ದಾಗ ಯಾವದೇ ಸಹಕಾರ ಸಂಘಗಳಲ್ಲಿ ಶೇ. ೨೦ ರಷ್ಟು ಎಸ್.ಸಿ., ಎಸ್.ಟಿ. ಜನರಿಗೆ ಕಡ್ಡಾಯವಾಗಿ ಸದಸ್ಯತ್ವ ಇರಬೇಕೆಂದು ಕಾಯಿದೆ ಜಾರಿಗೆ ಮಾಡಿದರು. ೧೯೯೧ರಲ್ಲಿ ಸಹಕಾರ ಸಚಿವರಾಗಿ, ೧೯೯೨ರಲ್ಲಿ ಭಾರಿ ಉದ್ದಿಮೆ ಸಚಿವರಾಗಿ ಎಸ್. ಎಂ. ಕೃಷ್ಣ ಸರಕಾರದಲ್ಲಿ ಗೃಹಸಚಿವರಾಗಿ, ಮುಂದೆ ಧರ್ಮಸಿಂಗ್‌ರ ಸರಕಾರದಲ್ಲಿ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರಾಗಿ ಸೇವೆ ಗೈದಿದ್ದಾರೆ. ಮುಂದೆ ಅವರು ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಅನಂತರ ವಿರೋಧ ಪಕ್ಷದ ನಾಯಕರಾಗಿ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮುಂದೆ ಅವರು ಭಾರತ ಸರಕಾರದಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಚಿವರಾಗಿ, ದಿ. ೧೭-೬-೨೦೧೩ರಲ್ಲಿ ರೇಲ್ವೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಭಾರತದಲ್ಲಿ ದೊಡ್ಡದಾದ ಬೌದ್ಧವಿಹಾರ ನಿರ್ಮಾಣ ಮಾಡಿರುವ ಕೀರ್ತಿ ಇವರದಾಗಿದೆ.

ಡಾ. ಜಿ. ಪರಮೇಶ್ವರ

ಡಾ. ಜಿ. ಪರಮೇಶ್ವರ ಇವರು ಸಧ್ಯ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿಂದೆ ಅನೇಕ ಬಾರಿ ರಾಜ್ಯ ಸಚಿವ ಸಂಪುಟದ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿರುವ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಸೇವೆಸಲ್ಲಿಸುತ್ತಿದ್ದಾರೆ.

ವಿವಿಧ ಕ್ಷೇತ್ರಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಗೈದ ಛಲವಾದಿ ಸಮುದಾಯದ ದೈವರಾದ ಶ್ರೀ ಬಸವನಾಗಿದೇವ ಸ್ವಾಮಿಗಳು, ಛಲವಾದಿ ಸಂಸ್ಥಾನ ಮಠ, ಡಾವಣಗೇರಿ; ನಂದರಗಿ ಸಿದ್ಧರ ಸಿದ್ಧ ಭೂತಾಳ ಸಿದ್ಧರ ಭಕ್ತನಾದ ಹಾಲುಮತದ ಪಟ್ಟಾಧಿಕಾರಿ ಶ್ರೀ ಬೈಲಪ್ಪ ಪೂಜಾರಿ (ದೊಡಮನಿ); ಉಡಚಾಣ ಹುಚ್ಚಲಿಂಗೇಶ್ವರ ಅಜ್ಜ ಮೊದಲಾದವರು; ಕರ್ನಾಟಕ ಸಿ.ಎಂ.ಎಸ್. ಸಂಸ್ಥಾಪಕರಲ್ಲಿ ಒಬ್ಬರಾದ ಕೆ. ಶಿವರಾಮ; ಸಿಎಂ.ಎಸ್. ಅಧ್ಯಕ್ಷ ಎಚ್. ಕೆ. ಬಸವರಾಜು; ಕಾರ್ಯದರ್ಶಿಗಳಾದ ಸುಭಾಷ ನಾಟೀಕರ; ಕೇಂದ್ರದ ಮಾಜಿ ಮಂತ್ರಿಗಳಾದ ದಿ. ಬಿ. ಶಂಕರಾನಂದ; ಬೆಳಗಾವಿಯ ಬಳವಂತರಾವ ವರಾಳೆ; ಎಸ್. ಎನ್. ಮಾನೆ; ವಿಜಾಪುರದ ದಿ. ಸಿದ್ಧಾರ್ಥ ಅರಿಕೇರಿ; ಶಾಸಕರಾದ ಶ್ರೀ ರಾಜು ಅಲಗೂರ; ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕಿ ಶ್ರೀಮತಿ ಎಸ್.ಎನ್. ತಿಕೋಟಿ; ರಾಜ್ಯ ಮತ್ತು ರಾಷ್ಟ್ರಮಟ್ಟದ ಫುಟ್‌ಬಾಲ್ ಆಟಗಾರ ಪವನಕುಮಾರ ಎಸ್. ಡೋಮನಾಳ; ಡಾ. ಜೋಗನ್ ಶಂಕರ, ಸಮಾಜ ಶಾಸ್ತ್ರಜ್ಞರು, ಶ್ರೀ ಪ್ರಸಾದ ಅಬ್ಬಯ್ಯ ಶಾಸಕರು, ಶಿವರಾಮ ಮೊಗಾ; ಡಿ. ಜಿ. ಸಾಗರ; ಬಸಣ್ಣ ಸಿಂಗೆ; ದೇವೀಂದ್ರ ಶೆಳ್ಳಿಗಿ; ಡಾ. ಅರ್ಜುನ ಗೊಳಸಂಗಿ ಮುಂತಾದ ಕೆಲವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ.

೩.೬ ಕರ್ನಾಟಕ ರಾಜ್ಯ

೩.೬.೧ ರಾಜಕೀಯ ರಂಗ

ಒಂದು ಜನಾಂಗದ ಸರ್ವತೋಮುಖ ಏಳಿಗೆಗೆ 'ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಬಲ ಎಷ್ಟು ಮುಖ್ಯವೋ ರಾಜಕೀಯ ಪ್ರಜ್ಞೆಯೂ ಅಷ್ಟೆ ಮಹತ್ವದ ಸಂಗತಿ'. ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಕಳೆದ ಶತಮಾನದಿಂದ ಪ್ರಾರಂಭವಾದ ಸಮಾಜ ಅರ್ಧ ಶತಮಾನ ಮೈಸೂರು ಅಭೂತಪೂರ್ವ ಬದಲಾವಣೆಯನ್ನು ಹಾಯ್ದು ಬಂತು. ಪ್ರಗತಿ ಪಥದಲ್ಲಿ ಕ್ರಾಂತಿಕಾರರ ಹೆಜ್ಜೆಯನ್ನಿಟ್ಟಿತ್ತು. ನಲವತ್ತೆರಡು ವರ್ಷಕಾಲ ಅಖಂಡವಾಗಿ ಮೈಸೂರು ರಾಜ್ಯವನ್ನಾಳಿದ ಪ್ರಾತಃ ಸ್ಮರಣೀಯರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರರು ಅವರು ಸಮಾಜದ ಕಟ್ಟಕಡೆಯ ವ್ಯಕ್ತಿ ದರಿದ್ರ ನಾರಾಯಣನ ಏಳಿಗೆಯತ್ತ ಗಮನವಹಿಸಿದರು. ಇವರ ಈ ಪ್ರಯತ್ನದಿಂದಾಗಿ ದಲಿತರು ವಿದ್ಯಾವಂತರಾದರು. ವಿದ್ಯಾವಂತ ದಲಿತರು ಅಂದಿನ ಪ್ರಜಾ ಪ್ರತಿನಿಧಿ ಸಭೆಗೆ ಪ್ರವೇಶ ಪಡೆದ ರಾಜಕಾರಣದಲ್ಲಿ ಹೆಸರು ಗಳಿಸಿದ್ದಾರೆ.

ಸ್ವತಂತ್ರ ಪೂರ್ವದ ಅವಧಿಯ ಮೈಸೂರು ಜಿಲ್ಲೆಯ ಶ್ರೀ ಅಗರ ಮಾಂಬಳ್ಳಿ ಮಾದಯ್ಯ, ಡಿ. ಮಾಯಿಗಮ್ಮ ಹನುಮನಾಳು, ಯರಿಮ್ಮರ ಕುನ್ನಯ್ಯ, ನೇರಳೆ ಮಾದಯ್ಯ, ಅಶೋಕ ಪುರಂ ಮರಿದಂಡಯ್ಯ ಹಾಗೂ ದೊಡ್ಡ ಮಲ್ಲಯ್ಯ ಮುಂತಾದವರು ಮೊದಲ ಪೀಳಿಗೆಗೆ ಸೇರುತ್ತಾರೆ.

ನಾಲ್ವಡಿ ಒಡೆಯರ್ ಅವರು ಆಗರ ಮಾಂಬಳ್ಳಿ ಮಾದಯ್ಯ ಅವರನ್ನು (೧೯೩೮) ಪ್ರಜಾ ಪ್ರತಿನಿಧಿ ಸಭೆ (ಎಂ.ಆರ್.ಎ.)ಯ ಸದಸ್ಯರನ್ನು ನೇಮಕ ಮಾಡುವ ಮೂಲಕ ಹೊಸ ರಾಜಕೀಯ ಪರಂಪರೆಗೆ ಚಾಲನೆ ಸಿಕ್ಕಿತು. ಚಾಮರಾಜನಗರದ ದೊಡ್ಡ ಮಲ್ಲಯ್ಯ ಅವರು ವ್ಯಾಪಕ ಕಾಲಾವಧಿಯಲ್ಲಿ ಕೌನ್ಸಿಲರ್ ಆಗಿ ನೇಮಕಗೊಂಡಿದರೆಂದು ಇತಿಹಾಸಕಾರರು ಉಲ್ಲೇಖಿಸುತ್ತಾರೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ೧೯೫೨ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸೋಸಲೆಯ ಎಸ್. ಎಂ. ಸಿದ್ಧಯ್ಯ ಅವರು ಚಾಮರಾಜನಗರ ಮೀಸಲು ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ದೆಹಲಿಗೆ ಪ್ರವೇಶ ಮಾಡಿದ ಮೊದಲ ಛಲವಾದಿ ರಾಜಕಾರಣಿ. ಆ ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾದ ಸಿದ್ಧಯ್ಯ ಅವರ ಆದರ್ಶವನ್ನು ಮೈಸೂರು ಜಿಲ್ಲೆಯಲ್ಲಿ ಬಿತ್ತಿದ್ದರು. ಇವರನ್ನು ಅನುಸರಿಸಿ ಸಾಕಷ್ಟು ಜನ ಜಿಲ್ಲೆಯ ರಾಜಕಾರಣದಲ್ಲಿ ಹೆಸರುಗಳಿಸಿದ್ದಾರೆ.

ರಾಜ್ಯದ ಮಂತ್ರಿ ಹಾಗೂ ರಾಜ್ಯಪಾಲರಂತಹ ಘನತೆವೆತ್ತ ಹುದ್ದೆಗಳನ್ನು ಅಲಂಕರಿಸಿದ ಬಿ. ರಾಜಯ್ಯನವರು ೧೯೫೨ರಲ್ಲಿ ಯಳಂದರಲ್ಲಿ ಕ್ಷೇತ್ರದಿಂದ ವಿಧಾನಸಭೆಯ ಸದಸ್ಯರಾಗಿದ್ದರಲ್ಲದೆ ಎಂಟನೇ ಬಾರಿ ಚಾಮರಾಜನಗರದಿಂದ ಮೂರನೇ ಬಾರಿ ಸಂತೇಮರಳಿ ಕ್ಷೇತ್ರದಿಂದ ಪುನರಾಯ್ಕೆಯಾದ ವಿಶಿಷ್ಠ ರಾಜಕಾರಣಿ.

ವಿ. ಶ್ರೀನಿವಾಸ ಪ್ರಸಾದ

ದಲಿತರ ಸ್ವಾಭಿಮಾನಕ್ಕೆ ಮತ್ತೊಂದು ಹೆಸರೇ ವಿ. ಶ್ರೀನಿವಾಸ ಪ್ರಸಾದ ಕೇಂದ್ರದಲ್ಲಿ ಸಚಿವರಾಗಿ, ಲೋಕಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬದುವನಾಳು ನಡೆದ ದಲಿತರ ಕಗ್ಗೋಲೆ ಘಟನೆ

ಸಂದರ್ಭದಲ್ಲಿ ಒಂದು ಲಕ್ಷದಷ್ಟು ಜನರನ್ನು ಸಂಘಟಿಸಿ ಹೋರಾಟ ರೂಪಿಸಿದ ಪ್ರಸಾದ ಅವರನ್ನು ನಾಡಿನ ದಲಿತರು ತಮ್ಮ ನಾಯಕರೆಂದು ಒಪ್ಪಿಕೊಂಡರು.

ಡಾ. ಹೆಚ್. ಸಿ. ಮಹದೇವಪ್ಪ

೧೯೫೩ರಲ್ಲಿ ಏಪ್ರೀಲ್ ೨೦ ರಂದು 'ಹದಿನಾರು' ಗ್ರಾಮದಲ್ಲಿ ಜನಿಸಿದ ಮಹಾದೇವಪ್ಪ ಟಿ. ನರಸೀಪುರ ವಿಧಾನಸಭೆ ಕ್ಷೇತ್ರದಿಂದ ೮ ಮತ್ತು ೯ನೇ ಚುನಾವಣೆಗಳಲ್ಲಿ ಆಯ್ಕೆಯಾಗಿ ೧೯೯೪ರಲ್ಲಿ ಆರೋಗ್ಯ ಸಚಿವರಾಗಿ ನೇಮಕಗೊಂಡರು. ಗ್ರಾಮೀಣಾಭಿವೃದ್ಧಿಯ ಸಚಿವರಾಗಿ ೨೦೧೩ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಯ್ಕೆಗೊಂಡು ಸದ್ಯ ಲೋಕೋಪಯೋಗಿ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಐ.ಎ.ಎಸ್. ಅಧಿಕಾರಿಯಾಗಿ ಹೆಸರು ಮಾಡಿದ ಆರ್. ಭರಣಿಯ್ಯ ಅವರು ರಾಜಕೀಯ ರಂಗದಲ್ಲಿ ಪ್ರವೇಶ ಮಾಡಿದವರು ಸಹ ಯಶಸ್ಸು ಕಾಣಲಿಲ್ಲ. ಡಾ. ಎಂ. ಸಿ. ಬಿಳಿಗಿರಿ ರಂಗಯ್ಯನವರು ನಂಜನಗೂಡು ತಾಲ್ಲೂಕಿನ ನೇರಳೆ ಗ್ರಾಮದವರು ಅತಿ ಹೆಚ್ಚು ವಿದ್ಯಾಭ್ಯಾಸ ಪಡೆದವರು ಎಂದೇ ಇವರು ಖ್ಯಾತರಾಗಿದ್ದು ರಾಷ್ಟ್ರದ ಸುಪ್ರಸಿದ್ಧ ನ್ಯಾಯವಾದಿ ಹಾಗೂ ಸಂವಿಧಾನ ತಜ್ಞರು ಹಾಗೂ ಅಂಬೇಡ್ಕರ ನಂತರ ಹೆಚ್ಚು ಶಿಕ್ಷಣ ಪಡೆದವರು.

ದಲಿತ ಕವಿ ಎಂದೇ ಖ್ಯಾತರಾದ ಡಾ. ಸಿದ್ಧಲಿಂಗಯ್ಯನವರು ಸಾಹಿತಿ 'ಹೊಲೆ ಮಾದಿಗರ ಹಾಡುಗಳು' ಎಂಬ ಕವನ ಸಂಕಲನವನ್ನೇ ಹೊರತಂದರು. 'ನೀ ಹೋದ ಮರುದಿನ', ಯಾರಿಗೆ ಬಂತು ಎಲ್ಲಿಗೆ ಬಂತು ೪೭ರ ಸ್ವಾತಂತ್ರ್ಯ', ಎಂಬ ಹಾಡುಗಳು ಹೇಳಿ ತಮ್ಮ ಸಾಹಿತ್ಯ ಕ್ಷೇತ್ರದ ಹೆಸರನ್ನೇ ಮಾಡಿದರು.

ದೇವನೂರ ಮಹಾದೇವರ 'ಮಾರಿಕೊಂಡವರು' ಕಥೆ, 'ಒಡಲಾಳ', ಮತ್ತು ಕುಸುಮಬಾಲೆ' ಕೃತಿಗಳು ಎಲ್ಲ ಸಮಸ್ಯೆಗಳನ್ನು ಧ್ವನಿ ಮೇರಿಸಿದವು.

ಟಿ. ನರಸೀಪುರ ತಾಲ್ಲೂಕಿನ ಸೋಸಲೆಯ ಶ್ರೀ ಬಿ. ರಾಚಪ್ಪನವರ ಮೈಸೂರು ರಾಜ್ಯದ ಮೊದಲ ಪದವೀಧರರು ಎಂಬ ಹೆಗ್ಗಳಿಕೆಯನ್ನು ಪಡೆದುದು ಅಂದಿನ ಮೈಸೂರು ಸರ್ಕಾರದಲ್ಲಿ (ಸಮಾಜ ಕಲ್ಯಾಣ ಇಲಾಖೆ) ನಿಮ್ನ ವರ್ಗದ ಕಮಿಷನರ್ ಆಗಿ ಕಾರ್ಯನಿರ್ವಹಿಸಿದರು.

ಭಾರತೀಯ ಅರಣ್ಯಸೇವೆ, (ಐ.ಎಫ್.ಎಸ್.), ತಾಂತ್ರಿಕ ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿಯೂ ಶೈಕ್ಷಣಿಕ ಕ್ಷೇತ್ರದ ಬೋಧನಾ ವೃತ್ತಿಯಲ್ಲಿ ಸುಪ್ರಸಿದ್ಧರಾದ ಪ್ರೊ. ಪಾರ್ವತಮ್ಮ ಸಮಾಜಶಾಸ್ತ್ರ ಪ್ರೊ. ಪಾರ್ವತಮ್ಮ ಅರ್ಥಶಾಸ್ತ್ರ ಪ್ರೊ. ಮಹೇಶ ಚಂದ್ರಗುರು, ಪತ್ರಿಕೋದ್ಯಮ.

ಹನುಮಾನ್‌ಸಿಂಗ್ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಯರಿಯೂರು ಎಂಬ ಕುಗ್ರಾಮದಲ್ಲಿ ಛಲವಾದಿ ಕುಟುಂಬದಲ್ಲಿ ಜನಿಸಿ ೧೯೬೨ರಲ್ಲಿ ಭಾರತೀಯ ಸೇನೆಗೆ ಸೆಕೆಂಡ್ ಲೆಫ್ಟಿನೆಂಟ್ ಅಧಿಕಾರಿಯಾಗಿ ಸೇರ್ಪಡೆಯಾದ ಇವರು ಹಂತಹಂತವಾಗಿ ಮೇಲೆ ಬಂದು ಉನ್ನತ ಹುದ್ದೆ ಪಡೆದ ಅಂದಿನ ರಾಷ್ಟ್ರಪತಿ ವಿ. ವಿ. ಗಿರಿಯವರಿಂದ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ.

೩.೬.೨ ಪತ್ರಿಕಾರಂಗ

ಛಲವಾದಿಯರು ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶಿಸಿದಂತೆ ಪತ್ರಿಕೋದ್ಯಮದಲ್ಲಿಯೂ ಸಾಧನೆ ಮಾಡಿದ್ದಾರೆ. ದೇವನೂರು ಮಹಾದೇವ ಅವರ ಮುಖಂಡತ್ವದಲ್ಲಿ 'ಪಂಚಮ' ಪತ್ರಿಕೆ ಮುಳ್ಳೂರು ನಾಗರಾಜರವರ 'ಈ ಲೋಕ್' ದಿನಪತ್ರಿಕೆ, ಸೋಮಯ್ಯ ವಲೆಯಾದರ 'ಭವನ ಸಂಗಾತಿ' ಹಾಗೂ 'ಸುದ್ದಿ ಸಂಗಾತಿ' ವಾರಪತ್ರಿಕೆ ಪ್ರಮುಖವಾಗಿ ಈ ನಾಡಿನಲ್ಲಿ ಹೆಸರುವಾಸಿಯಾದವು.

೩.೬.೩ ಕುಸ್ತಿ ಮತ್ತು ಇತರೆ ಕ್ರೀಡೆಗಳು

೧೯೫೦-೬೦ರ ದಶಕದಲ್ಲಿ ಛಲವಾದಿಯರು ತಮ್ಮ ಜಾತಿ ಮತ್ತು ಮುಸ್ಲಿಂ ಪೈಲ್ವಾನರ ಜೊತೆ ಮಾತ್ರವೇ ಕುಸ್ತಿ ಆಡುವ ಪರಿಸ್ಥಿತಿವಿತ್ತು. ಮೇಲ್ಜಾತಿ ಜನರ ಜೊತೆಯಲ್ಲಿ ಆಡುವಂತಿರಲಿಲ್ಲ. ಒಂದೇ ವೇಳೆ ಆಡಿದರ ಸಹ ಜಗಳ ಕಲಹಗಳಾಗಿ ಸಾಮಾಜಿಕ ಬಹಿಷ್ಕಾರಗಳು ತಲೆಎತ್ತಿದ್ದವು. ಎಷ್ಟೋ ಜನರು ಗ್ರಾಮ ತ್ಯಜಿಸುವಂತಹ ಪ್ರಸಂಗಗಳು ಜರೂಗಿವೆ.

ಚಿಕ್ಕಗಂಟಿಯ ಗಂಗಾಧರ್, ಟೀಕೊಂಜಿ ಅವರು ರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ್ದಾರೆ. ಕಬ್ಬಡಿ, ಕ್ರಿಕೇಟ್, ಪುಟಬಾಲ್‌ದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕೀರ್ತಿ ಮಾಡಿದ್ದಾರೆ.

ಪುರುಷರಷ್ಟೇ ಅಲ್ಲದೆ ಮಹಿಳೆಯರೂ ಕೂಡಾ ರಾಜಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ೧೯೨೬ರಲ್ಲಿ ಜನಿಸಿ ಕೆಂಪಮ್ಮ ಅವರು ಶಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಸ್ಪೃಶ್ಯ ಮಹಿಳೆಯರ ಹಾಗೂ ರೇಷ್ಮೆ ಕಾರ್ಮಿಕರ ಕ್ಷೇಮಾಭ್ಯುದಯಕ್ಕೆ ಶ್ರಮಿಸಿದ ಮೊದಲ ಮಹಿಳೆ ಇವರಾಗಿದ್ದರು.

೩.೬.೪ ಚಲನಚಿತ್ರ

ರಂಗಭೂಮಿಯಂತೆಯ ಚಲನಚಿತ್ರರಂಗದಲ್ಲೂ ಪ್ರಸಿದ್ಧರಾಗಿರುವ ಮೈಸೂರು ಜಿಲ್ಲೆಯ ಛಲವಾದಿಗಳಾಗಿದ್ದಾರೆ. ಖ್ಯಾತ ಸಿನಿಮಾ ನಿರ್ದೇಶಕ ದಿ. ಬಸವರಾಜ ಕೆಸ್ತೂರ ಹಾಗೂ ಇತ್ತೀಚೆಗೆ ಬಂದಿರುವ ಎಸ್. ಮಹೇಂದ್ರ ಎಂದು ಕಾಣುವ ಹೆಸರುಗಳು. ಬಸವರಾಜ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇದಕ್ಕೆ ಸಾಕ್ಷಿಯೆಂದರೆ ಅವರು ಪಡೆದ ೨೦೦೨ರಲ್ಲಿ 'ಭಾರತ ರತ್ನ ಡಾ. ಬಾಬಾಸಾಹೇಬ ಅಂಬೇಡ್ಕರ್' ಪ್ರಶಸ್ತಿ ೧೯೯೦ರಲ್ಲಿ 'ನಾಡ ಚೇತನ' ಬಿರುದು ಹಾಗೂ ಪ್ರಶಸ್ತಿಗಳಾಗಿವೆ. ೧೯೯೧ರಲ್ಲಿ "ಬಾಲಕ ಅಂಬೇಡ್ಕರ" ಕಿರುಚಿತ್ರವನ್ನು ಕನ್ನಡ ಹಾಗೂ ಹಿಂದಿಯಲ್ಲಿ ನಿರ್ಮಿಸಿ ನಿರ್ದೇಶಿಸಿದ್ದಾರೆ.

ರಂಗಭೂಮಿಯಲ್ಲಿ ೩೫ ವರ್ಷಗಳಿಂದ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ್ದ ರಾಮಸಮಾನ್ಯ ಯಜಮಾನ್ ಹುನಮಯ್ಯ ಅವರು ಸಾಕಷ್ಟು ಪ್ರಸಿದ್ಧಿ ಗಳಿಸಿದ್ದಾರೆ.

ಪ್ರಸಿದ್ಧ ಜನಪದ ಕಲಾವಿದೆ ಹನುಮಮ್ಮ (ಚಿಲಕುಂದ) ಅವರು ಜನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ೧೨೦ ಮತ್ತು ೧೨೧ ಕಹಳೆ ಮನೆತನದವರೆಂದೆ ಪ್ರಸಿದ್ಧರಾದ ಕಹಳೆ ಮಹದೇವಯ್ಯ ಮೈಸೂರ ಜಿಲ್ಲೆಯಲ್ಲಿದ್ದಾರೆ. ಗುಂಡ್ಲು ಪೇಟೆ ತಾಲ್ಲೂಕಿನ ಕಟ್ಟೆಪುರದ ಸಿದ್ಧೂರಯ್ಯ ಕಹಳೆಗೆ ಹೆಸರಾಗಿದ್ದಾರೆ.[೨೨]

ಸೋಬಾನೆ ಹಾಡುಗಳಿಗೆ ಪ್ರಸಿದ್ಧರಾಗಿರುವ ಸೋಬಾನೆ ನಿಂಗಮ್ಮರವರು ಚಾಮರಾಜನಗರ ದೊಡ್ಡರಾಯ ಪೇಟೆಯಲ್ಲಿ ಹೆಸರುವಾಸಿ ಸೋಬಾನೆ ಗಾಯಕಿ ಹಾಗೂ ಜನಪದ ಕಲಾವಿದೆಯಾಗಿದ್ದಾರೆ.

ವೈವಿಧ್ಯಮಯ ವಾದ್ಯಗಳನ್ನು ನುಡಿಸುವವರು ಜನಪದ ಹಾಡುಗಾರರು, ವೃತ್ತಿ ಗಾಯಕರು, ರಂಗಭೂಮಿ ಕಲಾವಿದರು, ಸೋಬಾನೆ ಗಾಯಕಿಯರು, ಚಲನಚಿತ್ರ ನಿರ್ದೇಶಕರು ಹೀಗೆ ವಿವಿಧ ರಂಗಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ ಮತ್ತು ಇನ್ನೂ ಕೆಲವರು ಸಲ್ಲಿಸುತ್ತಿದ್ದಾರೆ. ಅವರು ಛಲವಾದಿ ಸಮುದಾಯದಲ್ಲಿ ನಕ್ಷತ್ರಗಳಂತೆ ಅಮರರಾಗಿದ್ದಾರೆ.

೩.೭ ಆಂಧ್ರಪ್ರದೇಶ ರಾಜ್ಯ

'ಮಾಲಾ' ಅಥವಾ 'ಮಲ್ಲ' ಆಂಧ್ರಪ್ರದೇಶದ ಒಂದು ಸಾಮಾಜಿಕ ಅಥವಾ ಜಾತಿಯಾಗಿದೆ. 'ಮಾಲ್' ಅಥವಾ 'ಮಲ್ಲ' ಇದು ಸಂಸ್ಕೃತ ಪದದ ಒಂದು ಶಬ್ದವಾಗಿದೆ. ಇದರರ್ಥ ಎಂದಾಗುತ್ತದೆ. ರಾಜ್ಯದ ಒಟ್ಟು ಸಂಖ್ಯೆಯಲ್ಲಿ ಇವರ ಜನಸಂಖ್ಯೆ ೮ ಶೇ.% ಇದೆ. ಪ್ರಾಚೀನ ಕಾಲದಲ್ಲಿ ಇವರು ಹೆಚ್ಚಾಗಿ ಗ್ರಾಮದ ಕಾವಲುಗಾರರಾಗಿ ಅಥವಾ ಶ್ರಮಜೀವಿಗಳಾಗಿದ್ದರು. ಭಾರತ ಬ್ರಿಟಿಷ ಸೈನ್ಯದಲ್ಲಿ ಸೈನಿಕರಾಗಿದ್ದರು. ಇಂದು ಇವರು ಇದೊಂದು ಉದ್ಯೋಗದಲ್ಲಿರದೆ ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಾಚೀನ ಕಾಲದ ಕ್ರಿ.ಶ.ಪೂರ್ವ ೧೧೭೦ ರಿಂದ ೧೨೦೦ರಲ್ಲಿ ಪಲನತಿ ವಿರುದು ಬ್ರಹ್ಮ ನಾಯುಡು ಅವರು ನೀಲಗಮಾ ಮಚೇರಲಾ ರಾಜ್ಯದಲ್ಲಿ ಪ್ರಧಾನಿಯಾಗಿ ಸೇವೆ ಗೈದಿದ್ದಾನೆ. ರಾಜರ ಕಮ್ಮ ವಿಲಾಮರ ಮತ್ತು ರಡ್ಡಿಗಳ ಸೇನದಲ್ಲಿ ಮಲಾ ಸಮುದಾಯ ಕನ್ನಮ್ಮದಾಸು ಸೇನಾಪತಿಯಾಗಿದ್ದನು. ೧೧೭೦ರಲ್ಲಿ ಮಾಲಾರವರು ಕುಲದೈವರಾದ ಮಚಾರ್ಲಾ ಚೆನ್ನಕೇಶವ ಸ್ವಾಮಿರಾಗಿದ್ದರು.

೩.೭.೧ ಪ್ರಾಚೀನ ವಿದ್ವಾಂಸರು

ಪ್ರಮುಖ ಕ್ಷೇತ್ರಗಳಾದ ಯುಂಗಂದರುಡು ಪ್ರತಪರುದ್ರಾ ಕಾಕತೀಯ ಸಾಮ್ರಾಜ್ಯದಲ್ಲಿ ಸೈನ್ಯದ ಮುಖ್ಯಸ್ಥರಾಗಿದ್ದರು. ದ್ರಾವಿಡ ಕಾಮಾನೇಡು ಪಲನಾಡು ಸಾಮ್ರಾಜ್ಯದಲ್ಲಿ ಸೈನಿಕ ಮುಖ್ಯಸ್ಥನಾಗಿದ್ದನು. ಮಾಲಾ ಕನಮ್ಮದಾಸು ಧರ್ಮದರ್ಶಿ ಕಾರ್ಯ ಮಾಡಿದ್ದಾನೆ.

೩.೭.೨ ಸಾಮಾಜಿಕ ಸುಧಾರಕರು

ಶ್ರೀ ಭಾಗಯ್ಯ ರೆಡ್ಡಿ ವರ್ಮಾ (ಮಾದರಿ ಭಾಗ್ಯಯ್ಯಾ) 'ಆದಿ ಹಿಂದು ಚಳುವಳಿ' ನಾಯಕರಾಗಿದ್ದರು. ಇವರನ್ನು ಆಂಧ್ರ ಪ್ರದೇಶದ 'ದಲಿತ ಚಳುವಳಿ ತಂದೆ' ಎಂದು ಕರೆಯಲಾಗುತ್ತದೆ. ಶಿಕ್ಷಣ ಮತ್ತು ಸಂಸ್ಕೃತಿ ಮತ್ತು ದಲಿತ ಪಂಚಾಯತಿಗಳನ್ನು ಸ್ಥಾಪಿಸಿದ್ದರು. ತಿರೆಗೆ ರಾಮಸ್ವಾಮಿ, ರಾವ ಬಹಾದ್ದೂರ ಬಿ. ಎಸ್. ವೆಂಕಟರಾವ ಹೈದ್ರಾಬಾದದ ಅಂಬೇಡ್ಕರರೆಂದು ಪ್ರಖ್ಯಾತಿಗಳಿಸಿದ್ದರು. ಇವರು ನಿಜಾಮ ಸರಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದರು. ಬಿ. ಶ್ಯಾಮಸುಂದರ (೧೯೦೮-೧೯೭೫) ಪಿ. ಆರ್. ವೆಂಕಟಸ್ವಾಮಿ, ದಿಡ್ಡೆ ಸುಂದರರಾವ.

೩.೭.೩ ಸಾಮಾಜಿಕ ಸೇವೆ ಕ್ಷೇತ್ರ

ಕಟ್ಟಿ ಪದ್ಮರಾವ – ೧೯೮೦ರಲ್ಲಿ 'ದಲಿತ ಚಳುವಳಿ' ಹುಟ್ಟುಹಾಕಿದರು. 'ದಲಿತ ಮಹಾ ಸಭಾ' ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಭೊಜ್ಜತಾರಕಮ್ ಸಾಮಾಜಿಕ ಕಾರ್ಯಕರ್ತರು ಜೆ. ಬಿ. ರಾಜು, ದಲಿತ ಸೇನಾ ಮಾಜಿ ನಾಯಕರು, ಪಿ. ವಿ. ರಾವ್ 'ಮಲಾ ಮಹಾನಾಡು' ಇದರ ಅಧ್ಯಕ್ಷರಾಗಿದ್ದರು. ಡಿ. ವಿ. ಶ್ರೀನಿವಾಸ ರಾಜ್ಯ ಪರಿಶಿಷ್ಠ ಜಾತಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಮಲ್ಲೇಲಾ ವೆಂಕಟರಾವ್ ಮಾಲಾ ಮಹಾಸಭಾದ ಅಧ್ಯಕ್ಷರು,

೩.೭.೪ ಚಿತ್ರಕಲೆ

ಜಾನಿ ಲೀವರ್ ಪ್ರಖ್ಯಾತ ಹಾಸ್ಯಗಾರ, ಬಾಬು ಮೋಹನ, ಜಲದಿ ರಾಜರಾವ್, ಪಿಲ್ಲೆಲ್ಲಿ ಸುನೀಲ ವಾಟಿಯರಾದ ಅರ್ಚನಾ, ಶ್ರೀಮತಿ ಮಹಾದೇವಿ, ಶ್ರೀಮತಿ ಅಮನಿ, ಶ್ರೀಮತಿ ಲತಾ.

೩.೭.೫ ಸಾಹಿತ್ಯ ಕ್ಷೇತ್ರ

ಪ್ಯಾಡಿ ಥ್ರೇರೇಶ್‌ಬಾಬು ತೆಲಗುಕವಿ, ಡಾ. ಕಟ್ಟಿ ಪದ್ಮರಾವ್, ಟಿ. ವಿಲ್‌ಸಲ್ ಸುಧಾಕರ್, ಕುಸುಮ ಧರ್ಮಣ್ಣ ಡಾ. ಬೋಯಿ ಭೀಮಣ್ಣಾ.

೩.೭.೬ ರಾಜಕೀಯ ಕ್ಷೇತ್ರ

ದಾಮೋದರಮ ಸಂಜಿವಯ್ಯಾ ಆಂಧ್ರ ಪ್ರದೇಶ ರಾಜ್ಯದ ಎರಡನೇಯ ಮುಖ್ಯಮಂತ್ರಿ (೧೯೬೦–೧೯೬೨) ಭಾರತ ದೇಶದಲ್ಲಿಯ ಹಾಗೂ ಆಂಧ್ರಪ್ರದೇಶ ರಾಜ್ಯದಲ್ಲೇ ಪ್ರಥಮ ಮುಖ್ಯ ಮಂತ್ರಿಗಳಾಗಿದ್ದಾರೆ. ಮುಂದೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಥಮ ಅಧ್ಯಕ್ಷರು.

ಜಿ. ವೆಂಕಟಸ್ವಾಮಿ, ಜಿ. ಎಮ್. ಸಿ. ಬಾಲಯೋಗಿ (೧೯೫೧–೨೦೦೨) ಲೋಕಸಭೆಯ ಪ್ರಥಮ ದಲಿತ ಲೋಕಸಭೆಯ ಪ್ರಧಾನ ದಲಿತ ಸಭಾಧ್ಯಕ್ಷರು ಡಾ. ಚಿಂತಮೋಹನ ಮತ್ತು ಪನವಿಕ ಲಕ್ಷ್ಮೀ ಕೇಂದ್ರ ಸಚಿವರು, ಕೆ. ಪ್ರತಿಭಾ ಭಾರತಿ, ಆಂಧ್ರಪ್ರದೇಶ ವಿಧಾನಸಭೆ ಪ್ರಥಮ ದಲಿತ ಸಭಾಧ್ಯಕ್ಷರು (೧೯೯೦–೨೦೦೪) ಡಾ. ಪಿ. ಶಂಕರರಾವ ರಾಜ್ಯ ಸಚಿವರು, ಡಾ. ಜಿ. ವಿಜಯ ರಾಮರಾವ ಮುಂತಾದ ಅನೇಕ ಗಣ್ಯರು ರಾಜಕೀಯ ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ.

೩.೭.೭ ಆಡಳಿತ ಕ್ಷೇತ್ರ

ಲಂಕಪಳ್ಳಿ ಬುಲ್ಲಯ್ಯಾ (೧೯೧೮–೧೯೯೨) ಮಾಜಿ ಕುಲಪತಿಗಳು ಆಂಧ್ರ ವಿಶ್ವವಿದ್ಯಾಲಯ ಹಾಗೂ ದೇಶದಲ್ಲಿಯೇ ಪ್ರಥಮ ದಲಿತ ಕುಲಪತಿಗಳಾಗಿದ್ದರು. ಪ್ರೊ. ಕೆ. ಎಸ್. ಚಲಮರ, ವಿ. ಸಿ. ಪ್ರೊ. ಘರಟ ಚಕ್ರದಾನಿ ಪ್ರೊ. ನಂಚಾರಮ್ಮ ಡೀನ್ ಸಮಾಜ ವಿಜ್ಞಾನಗಳ ನಿಕಾಯ, ಡಾ. ವಾಯ್. ಸಿ. ಸಿಂಹ್ಯಾದ್ರಿ, ವಿ. ಸಿ. ಮುಂತಾದ ವಿದ್ವಾಂಸರು ಸೇವೆ ಸಲ್ಲಿಸಿದ್ದಾರೆ.

೩.೭.೮ ನ್ಯಾಯಾಂಗ ಕ್ಷೇತ್ರ

ನ್ಯಾಯವಾದಿ ಕಟಿರೇಥಲ್ ರಾಮಸ್ವಾಮಿ ಮಾಜಿ ನ್ಯಾಯಾಧೀಶರು ಭಾರತೀಯ ಶ್ರೇಷ್ಠ ನ್ಯಾಯಾಲಯ ನ್ಯಾಯಾಧಿಗಳಾದ ಕೆ. ಪುಣ್ಣಯ್ಯಾ ಮಾಜಿ ಹೋರಾಟ ನ್ಯಾಯಾಧೀಶರು ಮುಂತಾದವರು ಸೇವೆ ಸಲ್ಲಿಸಿದ್ದಾರೆ.

೩.೭.೯ ಆಯ್. ಎ. ಎಸ್. ಅಧಿಕಾರಿಗಳು

ಕೆ.ಎಸ್.ಆರ್. ಮೂರ್ತಿ, ಕಾಕಿ ಮಾಧವರಾವ, ಕೆ. ಅರ್ಜುನರಾವ್, ಜಿ. ನಿರಂಜನರಾವ್,ಬಿ. ಡಿ. ದನಮ್, ಅಶ್ವರಾಜಕಮಲ (೨೦೦೮), ಪಿ. ಬಾಲಕಿರಣ (೨೦೦೮) ಇವರೆಲ್ಲರು ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ರೈಲ್ವೇ, ಆರೋಗ್ಯ, ಅಂತರಜಾಲ, ಇನ್ನಿತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಹಾಗೂ ಇನ್ನು ಸೇವೆ ಸಲ್ಲಿಸುತ್ತಿದ್ದಾರೆ.[೨೧]

ಒಟ್ಟಾರೆ ಛಲವಾದಿ ಸಮುದಾಯದ ಇಷ್ಟೆಲ್ಲಾ ಇತಿಹಾಸವನ್ನು ಗಮನಿಸಿದಾಗ ಈ ಸಮುದಾಯವು ಭಾರತೀಯ ಸಂಸ್ಕೃತಿಯ ಸಮಾಜದಲ್ಲಿ ಹಾಗೂ ಕರ್ನಾಟಕದ ಸಂಸ್ಕೃತಿಯ ಪರಿಯಲ್ಲಿ ಹೇಗೆ ತನ್ನ ವಿಕಾಸನವನ್ನು ಹೊಂದುತ್ತಾ ಬಂದಿದೆ. ಎಂಬುದು ತಿಳಿದು ಬರುತ್ತದೆ. ಅಷ್ಟೇ ಅಲ್ಲ ಈ ಸಮುದಾಯದವರು ಶ್ರೇಣೀಕೃತ ಸಮಾಜದಲ್ಲಿ ತಮ್ಮ ಮೌಲ್ಯವನ್ನು ಇಂದಿಗೂ ಕಾಪಾಡಿಕೊಂಡು ಬರುತ್ತಿದ್ದಾರೆ. ಹಾಗೆಯೇ ಇಡೀ ಕರ್ನಾಟಕದ ತುಂಬೆಲ್ಲ ಪಸರಿಸಿ ತಮ್ಮದೇ ಆದ ಒಂದು ಸ್ವಂತ ನೆಲೆಯನ್ನು ಕಂಡುಕೊಂಡು ಜೀವನ ಸಾಗಿಸುತ್ತಿದ್ದಾರೆಂಬುದು ಸತ್ಯ; ಖಚಿತವಾದ ಸಂಗತಿಯಾಗಿದೆ.

ಅಡಿಟಿಪ್ಪಣಿಗಳು

೧. ನೆಲ್ಲಿಕಟ್ಟಿ ಸಿದ್ದೇಶ, ಭಾರತೀಯ ದಲಿತ ವಾಯ್ಸ್,

೨. ಪಿ. ಎಸ್. ನಾರಾಯಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಪುಟ ಸಂಖ್ಯೆ-೬೮೭-೬೮೮.

೩. ಎಂ. ನಂಜುಂಡಸ್ವಾಮಿ, ಹೊಲೆಯರು, ಮಾದರು, ರಾಜರು, ಪುಟ-೪೯.

೪. ಅದೇ ಪುಟ-೫೦.

೫. ಎ. ಡಿ. ಕೃಷ್ಣಯ್ಯ, ಛಲವಾದಿ ಜನಾಂಗ, ಪುಟ-೧೬, ೧೭, ೧೮.

೬. ಗೊಳಸಂಗಿ ಸಿ. ಎನ್., ಬಿಜಾಪುರ ಜಿಲ್ಲೆಯ ಹೊಲೆಯರು: ಒಂದು ಸಾಂಸ್ಕೃತಿಕ ಅಧ್ಯಯನ, ಪುಟ-೪೮, ೪೯, ೫೦.

೭. ಎಂ. ನಂಜುಂಡಸ್ವಾಮಿ, ಹೊಲೆಯ-ಮಾದರು-ರಾಜರು, ಪುಟ-೩೨.

೮. ಅದೇ ಪುಟ-೪೬.

೯. ಅದೇ ಪುಟ-೫೦.

೧೦. ಅದೇ ಪುಟ-೫೨.

೧೧. ಅದೇ ಪುಟ-೯೯.

೧೨. ಅದೇ ಪುಟ-೫೭

೧೩. ಅದೇ ಪುಟ-೫೭

೧೪. ಅದೇ ಪುಟ-೫೭

೧೫. ಅದೇ ಪುಟ-೫೮

೧೬. ಅದೇ ಪುಟ-೫೮,೫೯

೧೭. ಅದೇ ಪುಟ-೬೧, ೬೨

೧೮. ಅದೇ ಪುಟ-೯೩,೯೪,೯೫

೧೯. ಡಾ. ಎಸ್. ಆರ್. ಶಿವರಾಮ, ಡಾ. ಬಿ. ಆರ್. ಅಂಬೇಡ್ಕರ ದರ್ಶನ, ಪುಟ-೧೯೧, ೧೯೨.

೨೦. ಡಾ.ಎಚ್.ಟಿ. ಪೋತೆ, ಬಿ. ಶ್ಯಾಮಸುಂದರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೧೨ ಪು.೮-೯

೨೧. ಡಾ. ಸಿದ್ಧರಾಮ ಕಾರಣಿಕ (ಅನು), ದಲಿತ ಪಿತಾಮಹ ದೇವರಾಯ ಇಂಗಳೆ ಅವರ ಹೋರಾಟದ ಬದುಕು, ಪು.೭-೮ ಮತ್ತು ೧೪

೨೨. ಡಾ. ಸುಭಾಷ ಭರಣಿ, ಧರೆಗೆ ದೊಡ್ಡವರು, ಪು.೧೨೫-೧೩೫

೨೩. ಅಂತರ್ಜಾಲ ಮಾಹಿತಿ

ಅಧ್ಯಾಯ – ೪

ಸಾಮಾಜಿಕ ಜೀವನ

೪.೧ ವಿವಾಹಿತ ಜೀವನ

೪.೧.೧ ವಧು ಪರೀಕ್ಷೆ

೪.೧.೨ ಕನ್ಯಾ ನಿಶ್ಚಯ

೪.೧.೩ ವರದಕ್ಷಿಣೆ ಪದ್ಧತಿ

೪.೧.೪ ಹಿರಿಯರ ಪೂಜೆ

೪.೧.೫ ಒಳಕಲ್ಲು ಪೂಜೆ

೪.೧.೬ ಹಿಟ್ಟಕ್ಕಿ ಗಂಟು ಕಟ್ಟುವುದು

೪.೧.೭ ಆರತಕ್ಷತೆ ಕಳಿಸುವುದು

೪.೧.೮ ಬಳಗದ ಬಳೆ ಉಡಿಸುವುದು

೪.೧.೯ ಹಾಲ್ಗಂಬ ಹೂಳುವುದು

೪.೧.೧೦ ಹಂದರ ಹಾಕುವುದು

೪.೧.೧೧ ಎಣ್ ಪತ್ಲ (ಧಾರೆ ಸೀರೆ) ಒಯ್ಯುವುದು

೪.೧.೧೨ ಬೀಗರ ಎದರುಗೊಳ್ಳುವಿಕೆ (ಸ್ವಾಗತಿಸುವುದು)

೪.೧.೧೩ ಐರಾಣಿ ತರುವುದು

೪.೧.೧೪ ಸುರಿಗೆ ಸುತ್ತುವುದು

೪.೧.೧೫ ಅಕ್ಷತಾರೋಹಣ

೪.೧.೧೬ ಊಟೋಪಚಾರ

೪.೧.೧೭ ಮೆರವಣಿಗೆ

೪.೧.೧೮ ಸುರಿಗೆ ಸಾಮಾನು ಅಥವಾ ಬಾಂಡೆ ಸಾಮಾನು ಒಪ್ಪಿಸುವುದು

೪.೧.೧೯ ಬೀಗರ ಬೀಳ್ಕೊಡುಗೆ ಅಥವಾ ಬೀಗರನ್ನು ಕಳಿಸಿಕೊಡುವುದು

೪.೧.೨೦ ಹಂದರ ಇಳಿಸುವುದು

೪.೭ ಉಡುಗೆ ತೊಡುಗೆಗಳು

೪.೮ ವಾಸಸ್ಥಾನ/ನೆಲೆ :

೪.೯ ಭಾಷೆ

೪.೧೦ ಕೌಟುಂಬಿಕ ಜೀವನ

೪.೧೧ ದೇವದಾಸಿ ಪದ್ಧತಿ

೪.೧೧.೧ ದೇವದಾಸಿ ಪದ್ಧತಿಗೆ ಕಾರಣಗಳು

೪.೧೧.೨ ದೇವದಾಸಿ ಬಿಡುವ ಬಗ್ಗೆ

೪.೧೨ ಮಹಿಳೆಯರ ಸ್ಥಾನಮಾನ

೪.೧೩ ಜಾತಿ-ಬೆಡಗುಗಳು

೪.೧೪ ಹಬ್ಬಗಳು

೪.೧೫ ಉಡುಪುಗಳು ಮತ್ತು ಆಭರಣಗಳು

೪.೧೫.೧ ಶಿರವಸ್ತ್ರ

೪.೧೫.೨ ಆಭರಣಗಳು

೪.೧೫.೩ ವಿಶೇಷ ಸಂದರ್ಭದ ಉಡುಪು ಮತ್ತು ಆಭರಣಗಳು

೪.೧೬ ನ್ಯಾಯ ತೀರ್ಮಾನದ ಪಂಚರ ಸಮಿತಿ

೪.೧೬.೧ ನ್ಯಾಯ ಕಟ್ಟೆ ನಿಯಮಗಳು

೪.೧೬.೨ ನ್ಯಾಯ ತೀರ್ಮಾನದ ವಿಷಯಗಳು ಅಥವಾ ನ್ಯಾಯ ವಿಷಯಗಳ ವ್ಯಾಪ್ತಿ

೪.೧೬.೩ ನ್ಯಾಯ ನಿರ್ಣಯಗಳು

೪.೧೬.೪ ದಂಡಗಳು

೪.೧೬.೫ ನೈತಿಕ ಅಧಃಪತನ ಬಹಿಷ್ಕಾರ

೪.೧೬.೬ ಶಿಕ್ಷೆಗಳು

ಅಧ್ಯಾಯ-೪

ಸಾಮಾಜಿಕ ಜೀವನ

ಮಾನವನು ಇರುವದೆ ಸಮಾಜದಲ್ಲಿ, ಅವನು ಸಂಘ ಜೀವಿ, ಸಮಾಜಜೀವಿ ಅವನು ಒಂಟಿಯಾಗಿ ಬದುಕಲಾರ ಅಂತೆಯೇ ಮಾನವ ತನ್ನ ವ್ಯಕ್ತಿತ್ವವನ್ನು ಸಮಾಜದ ವ್ಯವಸ್ಥೆಯಲ್ಲಿ ಮಾತ್ರ ರೂಪಿಸಿಕೊಳ್ಳಲು ಸಾಧ್ಯ. ಅಂತೆಯೇ ವ್ಯಕ್ತಿಯ ತನ್ನ ಜೀವನದ ಸಂಪೂರ್ಣ ಭಾಗವನ್ನು ಸಮಾಜದಲ್ಲಿ ಕಳೆಯಬೇಕಾಗುತ್ತದೆ.

ಸಾಮಾಜಿಕ ಜೀವನ ಮಾನವನೊಬ್ಬನಿಗೆ ಸೀಮಿತವಾದುದ್ದಲ್ಲ. ಇದು ಪ್ರಾಣಿ ಪಕ್ಷಿಗಳಿಗೂ ಸಂಬಂಧಿಸಿದೆ. ಮಾನವ ಸಮಾಜವು ಸಂಬಂಧಗಳ ಬಲೆಯಾಗಿದೆ. ಛಲವಾದಿ ಸಮುದಾಯದವರು ತಮ್ಮ ವಿಶಿಷ್ಠ ಸಾಮಾಜಿಕ ಜೀವನವನ್ನು ಶತ-ಶತಮಾನಗಳಿಂದ ರೂಢಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ತಮ್ಮದೆ ಆದ ಪ್ರತ್ಯೇಕವಾಗಿ ಅಂಬೇಡ್ಕರ ನಗರವನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತ ಬಂದಿದ್ದಾರೆ. ಈ ಸಮುದಾಯದವರ ಜೀವನ ಶೈಲಿ, ಸಂಸ್ಕೃತಿ, ಆಂತರೀಕ ಹಾಗೂ ಬಾಹ್ಯ ಒತ್ತಡಗಳಿಂದಾಗಿ ಈ ಸಮುದಾಯದ ಸಾಮಾಜಿಕ ಜೀವನ ವಿಧಾನವು ಕೂಡಾ ಆಗಾಗ ಬದಲಾವಣೆಯಾಗಿವೆ. ಆದರೂ ಹುಟ್ಟು, ಸಾವು, ಮುದುವೆಗಳಿಗೆ ಸಂಬಂಧಿಸಿದ ಆಚಾರ ವಿಚಾರಗಳಲ್ಲಿ ಮೂಲಾಂಶಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಲೋಕರೂಢಿಗಳು, ಸಂಪ್ರದಾಯಗಳು, ಪರಸ್ಪರ ಸಹಾಯ, ವಿವಿಧ ನಿಯಮಗಳು, ಉಡುಗೆ ತೊಡುಗೆ, ಉಳಿಸಿಕೊಂಡು ಬಂದಿದೆ. ವಸತಿ, ಬೆಡಗುಗಳು, ಕುಟುಂಬ, ನ್ಯಾಯ ಪದ್ಧತಿ ಹಾಗೂ ಸಾಮಾಜಿಕ ನಿಯಂತ್ರಣಗಳನ್ನೊಳ್ಳಗೊಂಡ ಕ್ರಮಬದ್ಧವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಸಾಮಾಜಿಕ ಜೀವನವು ಪರಿಸರ ಕಾಲ ಸ್ಥಳಗಳನ್ನಾಧರಿಸುವುದು. ಆದುದರಿಂದ ಅದು ಕಾಲದಿಂದ ಕಾಲಕ್ಕೆ ಸಮೂಹದಿಂದ ಸಮೂಹಕ್ಕೆ ಭಿನ್ನವಾಗಿರುತ್ತದೆ. ಸಂಕೀರ್ಣ ಸಮಾಜದಲ್ಲಿ ಛಲವಾದಿ ಸಮುದಾಯದ ಸಾಮಾಜಿಕ ಜೀವನವನ್ನು ಕುರಿತು ಈ ಅಧ್ಯಾಯದಲ್ಲಿ ಮುಖ್ಯವಾಗಿ ಚರ್ಚಿಸಲಾಗಿದೆ.

೪.೧ ವಿವಾಹಿತ ಜೀವನ

ಪ್ರತಿ ಸಮುದಾಯದ ವಿವಾಹದ ಮೂಲತತ್ವ ಒಂದೇ ಆದರೂ ಆಚರಣೆ ಕ್ರಮಗಳು ಮಾತ್ರ ವಿವಿಧ ಮಾದರಿಯಲ್ಲಿವೆ. ವಿವಾಹ ಹೆಣ್ಣಿಗೆ ಜೀವನದ ಮುಖ್ಯ ಸಂಸ್ಕಾರವಾಗಿದೆ. ಹಿಂದೂ ಸಮಾಜದ ಎಲ್ಲಾ ಸಂಸ್ಕಾರಗಳು ಪುರುಷನಿಗೆ ಪೂರಕವಾಗಿವೆ. ಆದರೆ ಹೆಣ್ಣಿಗೆ ಮಾತ್ರ ವಿವಾಹ ಕಡ್ಡಾಯವಾಗಿದೆ. ಮಾನವ ಇತರ ಪ್ರಾಣಿಗಳಿಗಿಂತ ಲೈಂಗಿಕ ಕ್ರಿಯೆಯಲ್ಲಿ ವಿಭಿನ್ನನಾಗಿದ್ದಾನೆ. ಪ್ರಾಣಿಗಳಲ್ಲಿ ಕೆಲವು ಋತಮಾನಗಳಲ್ಲಿ ಮಾತ್ರ ಲೈಂಗಿಕ ಕ್ರಿಯೆ ನಡೆಯುತ್ತದೆ. ಆದರೆ ಮನುಷ್ಯನ ನಿರಂತರವಾದ ಲೈಂಗಿಕತೆ ವೈಯಕ್ತಿಕ ಅಥವಾ ಜೈವಿಕವೆಂದು ಭಾವಿಸದೆ ಸಾಮಾಜಿಕ ಮತ್ತು ನೈತಿಕ ವಿಷಯವೆಂದು

ಪರಿಗಣಿತವಾಗಿದೆ. ಪ್ರತಿಯೊಂದು ಸಮುದಾಯ ಕುಟುಂಬ ಜೀವನವನ್ನು ಉನ್ನತ ಹಾಗೂ ಸ್ಥಿರ ಬಂಧನವೆಂದು ತಿಳಿಯುತ್ತದೆ. ಅದನ್ನು 'ವಿವಾಹ'ವೆಂದು ಕರೆದು ಗಂಡು-ಹೆಣ್ಣನ್ನು ವ್ಯವಸ್ಥಿತ ಕುಟುಂಬ ಜೀವನಕ್ಕೆ ಒಳಪಡಿಸುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಕೋಷ್ಟಕ, ನಕ್ಷೆಗಳು, ರೇಖಾಚಿತ್ರಗಳು ಹಾಗೂ ಸ್ತಂಭಗಳನ್ನು ಬಳಿಸಲಾಗಿದೆ. ವಿಷಯಗಳ ವಿಶ್ಲೇಷಣೆಯಲ್ಲಿ ಕೆಲವೊಂದು ಕೋಷ್ಟಕ ಮತ್ತು ಅದರ ವಿವರಣೆಯನ್ನು ಕೊಡಲಾಗಿದೆ. ಕೆಲವು ವಿಷಯಗಳನ್ನು ಕೋಷ್ಟಕಗಳಲ್ಲಿ ಸ್ತಂಭಗಳಲ್ಲಿ ಹಾಗೂ ಚಿತ್ರಗಳಲ್ಲಿ, ರೇಖಾ ಚಿತ್ರಗಳಲ್ಲಿ ವಿವರಿಸಲಾಗಿದೆ. ಎಲ್ಲಾ ವಿಷಯಗಳನ್ನು ಕೋಷ್ಟಕ ಕೊಟ್ಟು ಅದರ ವಿಶ್ಲೇಷಣೆ ಮಾಡುವದು ಸಾಧ್ಯವಿಲ್ಲದ ಕಾರಣ ಕೇವಲ ಸ್ತಂಭ ಚಿತ್ರಗಳು ಮತ್ತು ರೇಖಾಚಿತ್ರಗಳ ಮೂಲಕ ವಿಷಯದ ವಿವರಣೆಯನ್ನು ಅದರಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೪.೧ ರಿಂದ ೪.೩ ರಲ್ಲಿ ಛಲವಾದಿ ಸಮುದಾಯದ ವೈವಾಹಿಕ ಸ್ಥಿತಿಗತಿಯನ್ನು ಕಾಣಬಹುದು. ಗದಗ ಜಿಲ್ಲೆಯಲ್ಲಿ ಈ ಸಮುದಾಯದ ೧೧,೫೧೧ ಜನರಲ್ಲಿ ಸುಮಾರು ಅರ್ಧದಷ್ಟು ಜನಸಂಖ್ಯೆ ವಿವಾಹಿತರಿದ್ದಾರೆ (೪೯.೭ ಪ್ರತಿಶತ). ಇನ್ನುಳಿದವರಲ್ಲಿ ೪೪.೩ ಪ್ರತಿಶತ ಅವಿವಾಹಿತರು ಹಾಗೂ ಸುಮಾರು ೫.೫ ಪ್ರತಿಶತ ಜನ (ದೇವದಾಸಿಯರು) ತಮ್ಮ ವೈವಾಹಿಕ ಸ್ಥಿತಿಯನ್ನೇ ಹೇಳಿರುವುದಿಲ್ಲ.

ಕೋಷ್ಟಕ ೪.೧

ವೈವಾಹಿಕ ಸ್ಥಿತಿಗನುಗುಣವಾಗಿ ಜನಸಂಖ್ಯೆಯ ತಾಲೂಕುವಾರು ಪ್ರತಿಶತ ಹಂಚಿಕೆ

ತಾಲೂಕು	ವಿವಾಹಿತ ಸ್ಥಿತಿ				
	ವಿವಾಹಿತರು	ಅವಿವಾಹಿತರು	ವಿಧವೆ/ವಿದುರರು	ಇತರೆ	ಒಟ್ಟು
ಗದಗ	೨೦೮೮	೨೦೦೪	೨೯	೨೨೦	೪೩೪೧
	೪೮.೧	೪೬.೨	.೬	೫.೧	೧೦೦.೦
ರೋಣ	೨೧೬೧.೦	೧೮೯೦	೨೨	೨೮೧	೪೩೫೪
	೪೯.೬	೪೩.೪	.೫	೬.೫	೧೦೦.೦
ನರಗುಂದ	೮೯೧.೦	೭೫೩	೩	೮೬	೧೭೩೩
	೫೧.೪	೪೩.೫	.೨	೫.೦	೧೦೦.೦
ಮುಂಡರಗಿ	೪೩೩.೦	೩೨೯	೩	೪೫	೮೧೦
	೫೩.೫	೪೦.೬	.೪	೫.೬	೧೦೦.೦
ಶಿರಹಟ್ಟಿ	೧೪೯.೦	೧೧೯	೦	೫	೨೭೩
	೫೪.೬	೪೩.೬	೦.೦	೧.೮	೧೦೦.೦
ಜಿಲ್ಲೆ	೫೭೨೨.೦	೫೦೯೫	೫೫	೬೩೭	೧೧೫೧೧
	೪೯.೭	**೪೪.೩**	.೫	೫.೫	೧೦೦.೦

* ೬೮೦ ಕುಟುಂಬಗಳಲ್ಲಿ ಮಹಿಳೆಯರು ಮುಖ್ಯಸ್ಥರಾಗಿರುವರು

ಸುಮಾರು ಪ್ರತಿಶತ ೬ ಕುಟುಂಬಗಳಲ್ಲಿ ಕುಟುಂಬದ ಯಜಮಾನರು ಮಹಿಳೆಯರು, ಅವರು ೪೫ಕ್ಕಿಂತಲೂ ಹೆಚ್ಚಿನ ವಯಸ್ಸಿನವರಾಗಿರುವುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವಾಗಿದೆ. ಈ ಸಮುದಾಯದಲ್ಲಿದ್ದ ದೇವದಾಸಿ ಪದ್ಧತಿ ಯುವ ಪೀಳಿಗೆಯಲ್ಲಿ ಸಂಪೂರ್ಣ ಕಡಿಮೆಯಾಗಿರುವುದನ್ನು ಕಾಣಬಹುದು. ವಿವಾಹಿತರ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣಬಹುದು. ಗದಗ ಜಿಲ್ಲೆಯ ಛಲವಾದಿ ಸಮುದಾಯದ ಜನಸಂಖ್ಯೆಯ ವಿವರಗಳನ್ನು ಗಮನಿಸಿದಾಗ ಒಟ್ಟು ೫೫ ಜನರು ವಿಧವೆಯರಿದ್ದು, ಗದಗ ತಾಲೂಕಿನಲ್ಲಿ ೨೯ರಷ್ಟು ಹಾಗೂ ರೋಣ ತಾಲೂಕಿನಲ್ಲಿ ೨೨ರಷ್ಟು ವಿಧವೆಯರು ಇರುವುದನ್ನು ಕಾಣಬಹುದು.

ಕೋಷ್ಟಕ ೪.೨

ವೈವಾಹಿಕ ಸ್ಥಿತಿ ಹಾಗೂ ಲಿಂಗಕ್ಕನುಗುಣವಾಗಿ ಜನಸಂಖ್ಯೆಯ ತಾಲೂಕಾವಾರು ಪ್ರತಿಶತ ಹಂಚಿಕೆ

ವಿವಾಹಿತರ ಸ್ಥಿತಿ	ತಾಲೂಕಿನ ಹೆಸರು					
	ಗದಗ		ರೋಣ		ನರಗುಂದ	
	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು
ವಿವಾಹಿತರು	೯೪೯	೧೧೨೨	೯೬೧.೦	೧೧೮೨.೦	೪೩೦.೦	೪೫೬.೦
	೪೫.೮	೫೪.೨	೪೪.೮	೫೫.೨	೪೮.೫	೫೧.೫
ಅವಿವಾಹಿತರು	೫೩೫	೨೦೨	೪೪೧	೧೩೬	೧೮೩	೬೪
	೭೨.೬	೨೭.೪	೭೬.೪	೨೩.೬	೭೪.೧	೨೫.೯
ವಿಧವೆ/ವಿಧುರರು	೧	೨೫	೧	೨೦	೦	೩
	೩.೮	೯೬.೨	೪.೮	೯೫.೨	೦.೦	೧೦೦.೦
ವಿಚ್ಛೇದಿತರು	೧	೦	೦	೩೦	೦	೨೩
	೧೦೦.೦	೦.೦	೦.೦	೧೦೦.೦	೦.೦	೧೦೦.೦
ಇತರೆ	೨.೦	೧೮.೦	೧೦೬.೦	೧೦೯.೦	೨೫.೦	೩೦.೦
	೧೦.೦	೯೦.೦	೪೯.೩	೫೦.೭	೪೫.೫	೫೪.೫
ವಿವಾಹಿತ ಸ್ಥಿತಿ ತಿಳಿಸದವರು	೬೯	೯೮	೧೫೦೯	೧೪೭೭	೬೩೮	೫೭೬
	೪೧.೩	೫೮.೭	೫೦.೫	೪೯.೫	೫೨.೬	೪೭.೪

ಕೋಷ್ಟಕ ೪..೩

ಲಿಂಗಕ್ಕನುಗುಣವಾದ ವೈವಾಹಿಕ ಸ್ಥಿತಿಯ ತಾಲೂಕಾವಾರು ಪ್ರತಿಶತ ಹಂಚಿಕೆ

ವಿವಾಹಿತರ ಸ್ಥಿತಿ	ಮುಂಡರಗಿ		ಶಿರಹಟ್ಟಿ	
	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು
ವಿವಾಹಿತರು	೨೦೬.೦	೨೨೭.೦	೬೫.೦	೮೩.೦
	೪೭.೬	೫೨.೪	೪೩.೯	೫೬.೧
ಅವಿವಾಹಿತರು	೯೮	೨೭	೨೬	೧೪
	೭೮.೪	೨೧.೬	೬೫.೦	೩೫.೦
ವಿಧವೆ/ವಿಧುರರು	೧	೨	೦	೦
	೩೩.೩	೬೬.೭	೦	೦
ವಿಚ್ಛೇದಿತರು	೦	೧	೦	೨
	೦.೦	೧೦೦.೦	೦.೦	೧೦೦.೦
ಇತರೆ	೧೮.೦	೨೨.೦	೧.೦	೨.೦
	೪೫.೦	೫೫.೦	೩೩.೩	೬೬.೭
ವಿವಾಹಿತ ಸ್ಥಿತಿ ತಿಳಿಸದವರು	೩೨೩	೨೭೯	೯೨	೧೦೧
	೫೩.೭	೪೬.೩	೪೭.೭	೫೨.೩

೪.೧.೧ ವಧು ಪರೀಕ್ಷೆ

ವಧು ಪರೀಕ್ಷೆಯು ವಿವಾಹದ ಪ್ರಥಮ ಹಂತವಾಗಿದೆ. ಗ್ರಾಮದಲ್ಲಿ ಗಂಡಿನ ತಂದೆ-ತಾಯಿಯರು ಮತ್ತು ಸಮುದಾಯದ ಹಿರಿಯರು ಒಂದಿಬ್ಬರು ಹೆಣ್ಣು ಮಕ್ಕಳೊಂದಿಗೆ ಸ್ವಜಾತಿ ಕನ್ಯೆಯನ್ನು ನೋಡಲು ಹೋಗುತ್ತಾರೆ. ವಧು ಪರೀಕ್ಷೆಗಾಗಿ ಹೆಣ್ಣಿನ ಮನೆಗೆ ಬಂದ ಗಂಡಿನ ಕಡೆಯವರು ಮೊದಲು ಅನೌಪಚಾರಿಕ ಮಾತು ಪ್ರಾರಂಭಮಾಡಿ ನಂತರ ಹೆಣ್ಣು ಕೇಳುವ ಸ್ಪಷ್ಟ ಮಾತು ಮುಂದಿಡುತ್ತಾರೆ. ಕನ್ಯೆಯ ತಂದೆ-ತಾಯಿಯರು ವರನಿಗೆ ಕನ್ಯೆ ಕೊಡಲು ಒಪ್ಪಿದರೆ ವಧು ಪರೀಕ್ಷೆ ನಡೆಯುತ್ತದೆ. ಮುಖ್ಯವಾಗಿ ಹೆಣ್ಣಿನ ಕಾಲು-ಬೆರಳುಗಳ ಪರೀಕ್ಷೆ ನಡೆಯುತ್ತದೆ. ಮಧ್ಯದಬೆರಳು, ಮಗ್ಗಲಿನ ಬೆರಳಿಗಿಂತ ಉದ್ದವಾಗಿರಬಾರದು. ಹೀಗಿದ್ದರೆ 'ಬಲಕ್ಕೆ ಗಂಡ ಎಡಕ್ಕೆ ಮಿಂಡ' ಇದ್ದಂತೆ ಎಂಬ ನಂಬಿಕೆಯಿದೆ. ಕಾಲಿನ ಕೊನೆಯ ಕಿರುಬೆರಳು ಪೂರ್ಣ ನೆಲಕ್ಕೆ ಹತ್ತಬೇಕು. ಹತ್ತದಿದ್ದರೆ ಗಂಡನ ಮನೆಯಲ್ಲಿ ನಿಲ್ಲಲಾರಳು ಎಂಬ ನಂಬಿಕೆಯಿದೆ. ವಧುವನ್ನು ಹೆಣ್ಣುಮಕ್ಕಳು ಒಂದು ಪ್ರತ್ಯೇಕವಾದ ಕೋಣೆಯಲ್ಲಿ ಕರೆದುಕೊಂಡು ಹೋಗಿ ಮೈಮೇಲಿನ ಬಟ್ಟೆಯನ್ನು ಬಿಚ್ಚಿಸಿ ಪರೀಕ್ಷೆ ಮಾಡುವರು. ಎದೆಯಲ್ಲಿ ತೆಗ್ಗು ಇದೆಯೋ ಎಂದು ಪರೀಕ್ಷಿಸುತ್ತಾರೆ. ಹೆಣ್ಣಿನ ಎದೆಯಲ್ಲಿ ಮಾತು ಎಂಬುದು ಉಳಿಯಬಾರದು, ಉಳಿದರೆ ಗಂಡನನ್ನು ಕೊಲ್ಲುವಳು ಎಂಬ

ನಂಬಿಕೆಯಿದೆ. ಮುಖವನ್ನು ನೋಡಿ ಗಲ್ಲಕ್ಕೆ ತಗ್ಗು ಬೀಳುವ ಬಗ್ಗೆ ಪರೀಕ್ಷಿಸಿ ನೋಡುವರು. ಗಲ್ಲದ ಮೇಲೆ ತಗ್ಗು ಬಿದ್ದರೆ ಮೊದಲ ಗಂಡ ಸಾಯುವನು ಎಂದು ನಂಬುತ್ತಾರೆ. ಶರೀರದ ಮೇಲೆ ಕರಿ ಮತ್ತು ತಾಮ್ರ ಬಣ್ಣದ ಮಚ್ಚೆ ಕಲೆಗಳಿರಬಾರದು.

ಅನೇಕ ನಂಬಿಕೆಗಳ ಮೂಲಕ ವಧು ಪರೀಕ್ಷೆ ಮಾಡಿದ ನಂತರ ಅವರ ಒಪ್ಪಿಗೆಯನ್ನು ಮುಂದೆ ನಿರ್ದಿಷ್ಟ ದಿನದಂದು ತಿಳಿಸುತ್ತೇವೆಂದು ಹೇಳಿ ಹೋಗುತ್ತಾರೆ. ಹೀಗೆ ಛಲವಾದಿ ಸಮುದಾಯದಲ್ಲಿ ವಧು ಪರೀಕ್ಷೆಯನ್ನು ವಿವಿಧ ಮಾದರಿಯಲ್ಲಿ ನೋಡುವರು.

೪.೧.೨ ಕನ್ಯಾ ನಿಶ್ಚಯ

ಶಾಸ್ತ್ರೋಕ್ತವಾಗಿ ಮದುವೆ ನಡೆಸುವಾಗ ಮೊದಲು ಮಧ್ಯವರ್ತಿಯವರೊಬ್ಬರಿಂದ ತಮಗೆ ಇಷ್ಟವಾಗುವ ಕನ್ಯೆ ಬಗ್ಗೆ ಕುಲ, ಗೋತ್ರ, ಮುಂತಾದ ವಧು ವರರ ನಡವಳಿಕೆಯ ಬಗ್ಗೆ ಗೋಪ್ಯವಾಗಿ ತಿಳಿದುಕೊಳ್ಳುವ ಸಂಪ್ರದಾಯವಿದೆ. ಈ ಸಂಪ್ರದಾಯ ವರ ಮತ್ತು ವಧುವಿನ ಕಡೆಯವರಿಬ್ಬರೂ ಮಾಡುತ್ತಾರೆ. ವರನ ತಂದೆ ತಾಯಿಗಳಿಗೆ, ವರನಿಗೆ ಮತ್ತು ಹಿರಿಯರಿಗೆ ಕನ್ಯೆ ಮನಸ್ಸಿಗೆ ಬಂದರೆ ವರನ ಮನೆತನ ನೋಡಲು ಕನ್ಯೆಯ ಸಂಬಂಧಿಕರಿಗೆ ಮನೆ ನೋಡಲು ತಿಳಿಸುತ್ತಾರೆ. ಇದಾದ ನಂತರ ವರನ ಕಡೆಯವರು ತಮ್ಮ ಸಮುದಾಯದ ಹಿರಿಯರನ್ನು, ಅಣ್ಣ ತಮ್ಮಂದಿರನ್ನು ಮತ್ತು ಸ್ನೇಹಿತರನ್ನು ಕರೆದುಕೊಂಡು ಕನ್ಯೆಯ ಮನೆಗೆ ಬರುತ್ತಾರೆ. ಈ ನಿಶ್ಚಯ ಕಾರ್ಯಕ್ಕೆ 'ಕುಂಕುಮಕಾರ್ಯ' ಅಥವಾ 'ನಿಶ್ಚಿತಾರ್ಥ'ವೆಂದು ಕರೆಯುತ್ತಾರೆ. ವರನ ಕಡೆಯವರು ಕನ್ಯೆ ಹಾಗೂ ಕನ್ಯೆಯ ತಾಯಿಗೆ ಸೀರೆಯನ್ನು ತಂದಿರುತ್ತಾರೆ. ಅಲ್ಲದೆ ವಧುವಿಗೆ ಹಣ್ಣು-ಹೂ, ಕಾಯಿ, ಫಲ ತಾಂಬೂಲಗಳಿಂದ ಉಡಿ ತುಂಬುತ್ತಾರೆ. ವರದಕ್ಷಿಣೆ, ವರೋಪಚಾರ ಕೊಡುಕೊಳ್ಳುವಿಕೆ ವಿಷಯ ನಿರ್ಧರಿಸಿದ ನಂತರ ಗಂಡು ಹೆಣ್ಣಿನ ಕಡೆಯವರು ಪರಸ್ಪರ ಫಲ-ತಾಂಬೂಲ ಬದಲಿಸಿಕೊಳ್ಳುವ ಮೂಲಕ ನಿಶ್ಚಯ ಮಾಡಿಕೊಳ್ಳುತ್ತಾರೆ.

೪.೧.೩ ವರದಕ್ಷಿಣೆ ಪದ್ಧತಿ

'ವರದಕ್ಷಿಣೆ' ಎಂಬುದು ಭಾರತದಲ್ಲಿ ಕಂಡು ಬರುವ ಒಂದು ವಿಶಿಷ್ಟ ಹಾಗೂ ವಿಚಿತ್ರ ತೆರನಾದ ಸಾಮಾಜಿಕ ಸಮಸ್ಯೆ ಆಗಿದೆ. ವರದಕ್ಷಿಣೆ ಪದ್ಧತಿ ಸಾಮಾನ್ಯವಾಗಿ ಎಲ್ಲಾ ಜಾತಿ ಸಮುದಾಯಗಳಲ್ಲಿದೆ. ಛಲವಾದಿ ಸಮುದಾಯ ಇದಕ್ಕೆ ಹೊರತಲ್ಲ. ವಿವಾಹದ ಸಂದರ್ಭದಲ್ಲಿ ವಧುವಿನ ಮನೆಯವರು ಬಳುವಳಿಯ ರೂಪದಲ್ಲಿ ಒಂದಷ್ಟು ಚಿನ್ನಾಭರಣ ಅಥವಾ ಹಣವನ್ನು ವಧುವಿಗೆ ನೀಡುತ್ತಿದ್ದ ಹಿಂದಿನ ಪದ್ಧತಿ ಮರೆಯಾಗಿದೆ. ಇಂದು ವರನು ಕೇಳಿದಷ್ಟು ಹಣ ಅಥವಾ ಚಿನ್ನಾಭರಣ ಕೊಡುವ ಸಾಮರ್ಥ್ಯವಿಲ್ಲದಿದ್ದರೂ ಒತ್ತಾಯಕ್ಕೆ ಮಣಿದು ವರದಕ್ಷಿಣೆ ಕೊಡುವ ಪದ್ಧತಿ ಭಾರತದಲ್ಲಿ ಬೆಳವಣಿಗೆಯಾಗಿದ್ದು, ಇದೊಂದು ಸಾಮಾಜಿಕ ಪಿಡುಗಾಗಿದೆ. 'ಹೆಣ್ಣು ಹೆತ್ತವರಿಗೆ ಹುಣ್ಣು' ಎಂಬ ಮಾತು ಭಾರತೀಯ ಸಮಾಜಕ್ಕೆ ಕನ್ನಡಿಯಂತಿದೆ. ಹೆಣ್ಣಿಗೆ ಮದುವೆ ಮಾಡಿಸಬೇಕಾದರೆ ಪಾಲಕರು ತುಂಬಾ ತೊಂದರೆಯನ್ನು ಅನುಭವಿಸುವ ಪರಿಸ್ಥಿತಿ ಇಂದು ಸಮಾಜದಲ್ಲಿ ನಿರ್ಮಾಣವಾಗಿದೆ.

ಹೀಗಾಗಿ ವರದಕ್ಷಿಣೆ ಎಂಬುವುದು ಗಂಭೀರ ಸಾಮಾಜಿಕ ಸಮಸ್ಯೆಯಾಗಿ ಭಾರತೀಯ ಸಮಾಜವನ್ನು ಕಾಡುತ್ತಿದೆ. ವರದಕ್ಷಿಣೆ ಸಮಸ್ಯೆ ಕಾರಣದಿಂದ ಪ್ರತಿ ೧೭ ನಿಮಿಷಗಳಿಗೊಂದರಂತೆ ವರ್ಷಕ್ಕೆ ಸುಮಾರು ೬೯೦೫ ಮಂದಿ (ದಿನಾಂಕ ೨೭-೧೨-೧೯೯೪-ಉದಯವಾಣಿ ಪತ್ರಿಕೆ ವರದಿ) ವಿವಾಹಿತ ಮಹಿಳೆಯರು ಬಲಿಯಾಗುತ್ತಿದ್ದಾರೆ. ಈ ಸಮಸ್ಯೆ ಇಂದಿಗೂ ಘೋರ ರೂಪದಲ್ಲಿ ಜೀವಂತವಾಗಿದೆ ಎಂಬುದನ್ನು ಸೂಚಿಸುತ್ತದೆ.

ಪ್ರಾಚೀನ ಕಾಲದಲ್ಲಿ ಸಮುದಾಯಗಳಲ್ಲಿ ಕನ್ಯಾ ಶುಲ್ಕ ಕೊಟ್ಟು ವಿವಾಹ ಮಾಡಿಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ ಇಂದು ಸಮುದಾಯದ ಶೈಕ್ಷಣಿಕ ಪ್ರಗತಿಯಿಂದಾಗಿ ವಿದ್ಯಾವಂತರು ನೌಕರಸ್ಥ ವರ್ಗ ವರದಕ್ಷಿಣೆಯಿಲ್ಲದೆ ವಿವಾಹ ಮಾಡಿಕೊಳ್ಳುವುದಿಲ್ಲ. ಈಗ ವರದಕ್ಷಿಣೆ ಪದ್ಧತಿ ಛಲವಾದಿ ಸಮುದಾಯದಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ.

ಮದುವೆ ಸಂದರ್ಭದಲ್ಲಿ ಸೋಬಾನೆ ಪದ ಹಾಡುತ್ತಾರೆ. ಎಲ್ಲರಿಗೂ ಸಕ್ಕರೆ ಹಂಚುತ್ತಾರೆ. ನಂತರ ಮುತ್ತೈದೆಯರು ಆರತಿ ಬೆಳಗಿ ಗಂಡನ ಹೆಸರನ್ನು ಒಡಪುಗಳೊಂದಿಗೆ ಹೇಳುವ ಸಂಪ್ರದಾಯವಿದೆ. ಆರ್ಥಿಕವಾಗಿ ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಮತ್ತಷ್ಟು ಆಘಾತವನ್ನುಂಟುಮಾಡುವ ಸಂಗತಿ ಈ ವರದಕ್ಷಿಣೆ ಪದ್ಧತಿಯಾಗಿದೆ.

೪.೧.೪ ಹಿರಿಯರ ಪೂಜೆ

ಛಲವಾದಿ ಸಮುದಾಯದ ಕನ್ಯೆ ಮತ್ತು ವರನ ಎರಡೂ ಕಡೆಯ ಮನೆಗಳಲ್ಲಿ ಈ ಪೂಜಾ ಕಾರ್ಯ ಮದುವೆಗೆ ಮುಂಚೆ ನೆರವೇರುತ್ತದೆ. ಆಯಾ ಮನೆತನದಲ್ಲಿ ಸ್ವರ್ಗಸ್ಥರಾದ ಹಿರಿಯರಿಗೆ ಸಲ್ಲಿಸುವ ಗೌರವವಾಗಿದೆ. ಇದನ್ನು 'ಹಿರಿಯರಿಗೆ ಮಾಡುವುದು' ಎನ್ನುತ್ತಾರೆ. ಇದರಿಂದ ಮನೆಯಲ್ಲಿ ಶಾಂತಿ-ನೆಮ್ಮದಿ, ಶುಭ ನೆಲೆಸಿ ಯಾವುದೇ ಕಾರ್ಯಗಳಿಗೆ ಅಡೆತಡೆ, ತೊಂದರೆ, ಕಷ್ಟಗಳು ಉಂಟಾಗುವುದಿಲ್ಲ ಎಂಬ ದೃಢ ನಂಬಿಕೆಯಿದೆ. ಈ ಸಂದರ್ಭದಲ್ಲಿ ಕೆಲವು ಗ್ರಾಮಗಳಲ್ಲಿ ದೋಣಿಕಮ್ಮನಿಗೆ ಪ್ರಾಣಿಬಲಿ ಮತ್ತು ಪೂಜೆ ಸಲ್ಲಿಸಲಾಗುತ್ತದೆ. ವಿವಾಹಕ್ಕೆ ಒಂದು ವಾರ ಮುಂಚಿತವಾಗಿ ತಮ್ಮ ಬಂಧು-ಬಳಗವನ್ನು ಕರೆಯಿಸಿಕೊಂಡು ಈ ಕಾರ್ಯ ನೆರವೇರುತ್ತದೆ. ನಂತರ ಮನೆಯನ್ನು ಸ್ವಚ್ಛಗೊಳಿಸಿ, ಸುಣ್ಣ-ಬಣ್ಣಗಳಿಂದ ಅಲಂಕಾರ ಮಾಡಿ ಕುಂಬೆಯ ಮೇಲೆ ಕೆಮ್ಮಣ್ಣಿನ ಜೋರುಗಳನ್ನು ಬಿಡುವುದು, ವಡವೆ ವಸ್ತ್ರ ಖರೀದಿಸುವುದು, ಮದುವೆಗೆ ಮುಖ್ಯವಾಗಿ ಬೇಕಾಗುವ ಮಣ್ಣಿನ ಗಡಿಗಿಗಳು, ಮಗಿಗಳು, ಐರಾಣಿಗಳ ಸಿದ್ಧತೆಗೆ ಕುಂಬಾರನಿಗೆ ಒಪ್ಪಿಸುವ ಕಾರ್ಯ ಜರುಗುತ್ತವೆ. ಹೀಗೆ ಹಿರಿಯರಿಗೆ ಪೂಜೆ ಮಾಡುವುದರಿಂದ ಮನ, ಮನೆಯನ್ನು ಶಾಂತಿಪಡಿಸುವ ನಿಟ್ಟಿನಲ್ಲಿ ಈ ಕಾರ್ಯವು ನಡೆಯುತ್ತದೆ.

೪.೧.೫ ಒಳಕಲ್ಲು ಪೂಜೆ

ಇದು ವಿವಾಹದ ಮುಂಚೆ ಮಾಡುವ ಒಂದು ಸಂಪ್ರದಾಯ. ಸಾಯಂಕಾಲ ಮನೆ ದೇವರಿಗೆ ಪೂಜೆ ಸಲ್ಲಿಸಿದ ನಂತರ ಐದು ಪಾವು ಗೋಧಿ ಇಲ್ಲವೆ ಜೋಳದಲ್ಲಿ ಅರಿಶಿನ ಕೊಂಬುಗಳನ್ನು ಬೆರೆಸಿ

ಮುತ್ತೈದೆಯರು ಕುಟ್ಟಲು, ಬೀಸಲು ಪ್ರಾರಂಭಿಸುವರು. ಬೀಸಿದ ಹಿಟ್ಟನ್ನು ರೊಟ್ಟಿ, ಹೋಳಿಗೆ ಹುಗ್ಗಿ ಮಾಡಲು ಬಳಸುವರು. ಎಲೆ, ಅಡಿಕೆ, ಅರಿಶಿನ ಅಕ್ಕಿ ಕಾಳುಗಳನ್ನು ಹೊಸ ಬಟ್ಟೆಯಲ್ಲಿ ಹಾಕಿ ಒನಕೆ ಮತ್ತು ಬೀಸುವ ಕಲ್ಲಿನ ಹಿಡಿಕೆಗೆ ಕಟ್ಟುವರು. ಒಳಕಲ್ಲು, ಒನಕೆ, ಬೀಸುವ ಕಲ್ಲು ಹಾಗೂ ಮನೆ ದೇವರನ್ನು ಪೂಜಿಸುವರು. ಆನಂತರ ಒರಳಕಲ್ಲು ಪೂಜೆ ಪದ ಹಾಡುವರು.

'ಐದು ಸೇರು ಗೋಧಿ ತಂದು
ಆರು ಮೂರು ಅವರಲ್ಲಾನಾದು
ಐದು ಮಂದಿ ಹಿಡಿಯಬೇಕ ನಾರಿ
ಹಾಕವ್ವ ಹಾರಿ'[೧]

ಈ ಪೂಜೆ ವಿವಾಹಕ್ಕೆ ಐದು ದಿವಸಗಳಿಗೆ ಮುಂಚಿತವಾಗಿ ನೆರವೇರುವುದು. ಇಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದೆ. ತಾವು ತಮ್ಮ ತಮ್ಮ ಜನಪದ ಸೊಗಡಿನ ಹಾಡಿನ ಮೂಲಕ ಸಂತೋಷದಿಂದ ಈ ಕಾರ್ಯವನ್ನು ನೆರವೇರಿಸುವರು.

೪.೧.೬ ಹಿಟ್ಟಕ್ಕಿ ಗಂಟು ಕಟ್ಟುವುದು

ಕನ್ಯೆಯ ಮನೆಗೆ 'ಎಣ್ ಪತ್ಲ' ಹೊಯ್ಯುವರ ಜೊತೆಗೆ ಹಿಟ್ಟು ಅಕ್ಕಿಯನ್ನು ಒಡವೆ ಗಂಟು ಕಟ್ಟಿಕೊಡುತ್ತಾರೆ. ಅಲ್ಲಿಂದ ಮದುವೆಯ ಮನೆಯವರೆಗೆ ಎಷ್ಟು ರೊಟ್ಟಿ ಬೇಕಾಗುತ್ತದೆ ಎಂಬುದನ್ನು ಕೇರಿಯ ಹಿರಿಯರಿಂದ ತಿಳಿದುಕೊಂಡು ಪ್ರತಿಯೊಂದು ಮನೆಗೆ ರೊಟ್ಟಿ ಮಾಡಲು ಕೊಡುತ್ತಾರೆ. ಈ ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿತ್ತಾದರೂ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಈ ಪದ್ಧತಿ ಮೂಲೆಗೆ ಸೇರಿದೆ. ಈ ರೀತಿಯ ಆಚರಣೆಯನ್ನು ಆಸಕ್ತರು ಮಾತ್ರ ಮುಂದುವರೆಸಿಕೊಂಡು ಬಂದಿದ್ದಾರೆ. ಮೂಲ ಪರಂಪರೆಯನ್ನು ಮರೆಯಬಾರದೆಂಬ ಹಿನ್ನೆಲೆಯಲ್ಲಿ ಕೆಲವರು ಇಂದಿಗೂ ಪಾಲಿಸಿಕೊಂಡು ಬರುವರು.

೪.೧.೭ ಆರತಕ್ಷತೆ ಕಳಿಸುವುದು

ಒಳಕಲ್ಲು ಪೂಜೆ ಮಾಡುವಾಗ ತಯಾರಿಸಿದ ಅಕ್ಕಿ ಕಾಳನ್ನು ಎಲ್ಲ ಸಂಬಂಧಿಕರು, ಗೆಳೆಯರು, ಓಣಿಯ ಬಂಧುಗಳಿಗೆ ಕೊಡಲು ಆರತಕ್ಷತೆ ಮಾಡುವರು. ಈ ಪದ್ಧತಿ ಬಹಳ ದಿನಗಳಿಂದ ನಡೆದು ಬಂದಿತ್ತು. ಆದರೆ ಇಂದು ವಿವಾಹಕ್ಕೆ ಸಂಬಂಧಪಟ್ಟ ಮನೆಯವರೇ ಅಕ್ಕಿಕಾಳು ಅಥವಾ ವಿವಾಹದ ಆಮಂತ್ರಣ ಪತ್ರಿಕೆಗೆ ಅರಿಶಿನ ಕುಂಕುಮ ಹಚ್ಚಿ ತಮ್ಮ ಬಂಧು ಬಳಗ ಹಾಗೂ ಸ್ನೇಹಿತರನ್ನು ಕರೆಯುವಾಗ ನೀಡುವ ಸಂಪ್ರದಾಯವಿದೆ. ಆದರೆ ಬಡಕುಟುಂಬಗಳು ಅಕ್ಕಿಕಾಳು ಕೊಡುವ ಸಂಪ್ರದಾಯ ಇಂದಿಗೂ ಇಟ್ಟುಕೊಂಡಿದ್ದಾರೆ. ಪಾರಂಪರಿಕ ಪದ್ಧತಿಯನ್ನು ದೂರೀಕರಿಸುವ ಒಂದು ಸಮುದಾಯವಿದೆ. ಅವರೇ ಆರ್ಥಿಕವಾಗಿ ಸಬಲರಾದ ಜಗತೀಕರಣದಂತಹ ಪ್ರಭಾವಕ್ಕೆ ಒಳಗಾದವರು. ನೇಮಕ್ಕೆ ಮಾತ್ರ ಅಲ್ಪಸ್ವಲ್ಪ

ಆಚರಣೆ ಪಾಲಿಸುವರು. ಆದರೆ ಹಿಂದುಳಿದ ಸಮುದಾಯಗಳು ತಕ್ಕಮಟ್ಟಿಗೆ ತಮ್ಮ ಪಾರಂಪರಿಕ ಆಚರಣೆಯನ್ನು ಪಾಲಿಸುವರು.

೪.೧.೮ ಬಳಗದ ಬಳೆ ಉಡಿಸುವುದು

ವಿವಾಹದ ಎರಡು ಮೂರು ದಿನ ಮುಂಚೆ ಸಮುದಾಯದ ಪ್ರತಿಯೊಂದು ಮನೆಗೊಬ್ಬರಂತೆ ತಮಗೆ ಬೇಕಾದ ಮುತ್ತೈದೆಯರಿಗೆ ಬಳೆಗಾರರಿಂದ ಹಸಿರು ಬಳೆ ಉಡಿಸುತ್ತಾರೆ. ಇದು ಮುಗಿದ ನಂತರ ಬಳೆಗಾರ ಅಥವಾ ಬಳೆಗಾರ್ತಿಗೆ ಉಡಿ ತುಂಬಿ ಅವರಿಗೆ ಅಲ್ಪ ಪ್ರಮಾಣದ ದೇಣಿಗೆ ಕೊಟ್ಟು ಕಳಿಸುತ್ತಾರೆ.

೪.೧.೯ ಹಾಲ್ಗಂಬ ಹೂಳುವುದು

ಇದನ್ನು ವಿವಾಹದ ಮುಂಚೆ ಮೂರು ದಿನ ಮೊದಲು ಮಾಡುತ್ತಾರೆ. ಹಂದರ ಹಾಕುವ ಸ್ಥಳದಲ್ಲಿ ಕಂಬವೊಂದನ್ನು ನೆಟ್ಟು, ಬಲೈತನ ಬಂಧನ ಕರೆದುಕೊಂಡು ಕಾಯಿ, ಕರ್ಪೂರ, ಅರಿಶಿನ, ಕುಂಕುಮ, ಎಲೆ–ಅಡಿಕೆ, ಬೆಲ್ಲ, ಉತ್ತತ್ತಿ ಕೊಡಿಸಿ, ಹೊಸ ಬಟ್ಟೆಯಲ್ಲಿ ಕಟ್ಟಿ ಇಂಗಳ ಗಿಡಕ್ಕೆ ಪೂಜೆ ಮಾಡುವರು. ನಂತರ ಆ ಗಿಡದ ಟೊಂಗೆ ಕತ್ತರಿಸಿ ಮಜಲುಗಳಿಂದ ಮನೆಗೆ ಬಂದು ಹಾಲ್ಗಂಬಕ್ಕೆ ಕಟ್ಟುವರು. ಟೊಂಗೆಗೆ ಹಾಲು ತುಪ್ಪ ಎರೆದು 'ಹಂದರ್‌ಕಿಚಡಿ' ಮಾಡಿ ಹಾಲ್ಗಂಬದ ಕಾರ್ಯ ಮುಗಿಸುವರು. ಹಾಲ್ಗಂಬದ ಹಾಲಿನಂತೆ ಮದುವೆ ಮನೆ ಉಕ್ಕಿ ಹರಿಯಲಿ ಎಂಬ ಭಾವನೆಯಿಂದ ಹೀಗೆ ಮಾಡುತ್ತಾರೆ.

೪.೧.೧೦ ಹಂದರ ಹಾಕುವುದು

ವಿವಾಹದ ಹಿಂದಿನ ದಿನ ಹಂದರ ಹಾಕುತ್ತಾರೆ. ಇಂದು ಮದುವೆಗಳು ದೇವಸ್ಥಾನದಲ್ಲಿ ಅಥವಾ ಕಲ್ಯಾಣ ಮಂಟಪದಲ್ಲಿ ನಡೆದರೂ ಮನೆಯ ಮುಂದೆ ಚಿಕ್ಕ ಹಂದರ ಹಾಕುತ್ತಾರೆ. ಸಮುದಾಯದ ಪ್ರತಿಯೊಂದು ಮನೆಯಿಂದೊಬ್ಬರು ಬಂದು ಹಂದರಕ್ಕೆ ಬೇಕಾದ ಉದ್ದ'ಕಂಬ', 'ಗಳ'ಗಳನ್ನು ತಂದು ಮನೆಯ ಮುಂದೆ ಚೌಕಾಕಾರದಲ್ಲಿ ಹಂದರ ಸಿದ್ಧಗೊಳಿಸಿ ಅದರ ಮೇಲೆ ಹುಲ್ಲುಲ್ಲಗಿ ಇನ್ನಿತರ ತಪ್ಪಲು ಹಾಕುತ್ತಾರೆ. ಹಂದರ ಹಾಕಿದವರಿಗೆ ಚಹಾ ಚೂಡದ ವ್ಯವಸ್ಥೆ ಮಾಡಿ ಅವರನ್ನು ಮುಂದಿನ ಕಾರ್ಯಕ್ಕೆ ಅಣಿಗೊಳಿಸುತ್ತಾರೆ. ಇಂದು ಹಂದರ ಹಾಕುವ ಸಂಪ್ರದಾಯ ಕಣ್ಮರೆಯಾಗುತ್ತ ನಡೆದಿದೆ. ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಹಂದರದ ವಿನ್ಯಾಸಗಳು ಇಂದು ಸ್ಥಿತ್ಯಂತರಗೊಂಡಿವೆ. ಆರ್ಥಿಕ ಸಬಲರೂ ಕಲ್ಯಾಣ ಮಂಟಪದಲ್ಲಿ ಇಲ್ಲವೆ ಪ್ರಸಿದ್ಧ ದೇವಸ್ಥಾನ, ಸಮುದಾಯ ಭವನದಲ್ಲಿ ವಿವಾಹ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಪರ್ಯಾಯವಾಗಿ ನಗರ ಪ್ರದೇಶದಿಂದ ಶಾಮಿಯಾನ (ಪೆಂಡಲ್) ಹಾಕಿ ಲಗ್ನ ಮಂಟಪ ತಯಾರಿಸುತ್ತಾರೆ. ಎಂತಹ ಬಡವರಾದರೂ ಮದುವೆಯಲ್ಲಿ ಆಧುನಿಕ ಪರಿಕರಗಳ ಬಳಕೆಯನ್ನು ಮಾಡುವರು. ಪ್ರಕೃತಿದತ್ತವಾಗಿ ಸಿಗುವ ತೆಂಗಿನ ಗರಿ, ತಪ್ಪಲದ ಬದಲಾಗಿ ಶಾಮಿಯಾನದ ಮೊರೆ ಹೋಗುತ್ತಿದ್ದಾರೆ. ಹಚ್ಚುಹಸಿರಾದ ಪ್ರಾಚೀನ ಹಂದರದ ಕಲ್ಪನೆ ಇಂದು ಮರೆಯಾಗಿದೆ.

೪.೧.೧೧ ಎಣ್ ಪತ್ಲ (ಧಾರೆ ಸೀರೆ) ಒಯ್ಯುವುದು

ವಿವಾಹದ ಎರಡು ಅಥವಾ ಮೂರು ದಿನ ಮುಂಚಿತ ಸಮುದಾಯದ ಅನುಭವಿ ವ್ಯಕ್ತಿ ಮುತ್ತೈದೆ ಹೆಂಗಸಿನೊಂದಿಗೆ ಅರಿಶಿನ ಪತ್ಲ, ಉಡಿಯಕ್ಕಿ ಸಾಮಾನುಗಳನ್ನೂ ಮದುಮಗಳಿಗೆ ಹಾಕುವ ಬಳೆಗಾಗಿ ಹಣ, ಕಾಲ್ಚೈನು, ಕಿವಿಯೋಲೆಗಳನ್ನೂ ಕೊಟ್ಟು ಮದುಮಗಳಿದ್ದಲ್ಲಿಗೆ ಕಳಿಸುವರು. ಇದನ್ನು ಎಣ್ ಪತ್ಲ ಒಯ್ಯುವುದು ಎನ್ನುವರು.

೪.೧.೧೨ ಬೀಗರ ಎದರುಗೊಳ್ಳುವಿಕೆ (ಸ್ವಾಗತಿಸುವುದು)

ಮದುಮಗಳನ್ನು ಮದುವೆ ದಿನದ ಹಿಂದಿನ ಸಂಜೆ ಕರೆದುಕೊಂಡು ಬಂದು ಮದುಮಗನ ಓಣಿಯ ಯಾರಾದರೊಬ್ಬರ ಮನೆಯಲ್ಲಿ ಅಥವಾ ದೇವಸ್ಥಾನದಲ್ಲಿ ಉಳಿಸುತ್ತಾರೆ. ಹಿಂದಿನ ಈ ಪದ್ಧತಿ ಪ್ರಸ್ತುತ ದಿನಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಈಗ ವಿವಾಹ ನಡೆಯುವ ಮೂರು ಅಥವಾ ನಾಲ್ಕು ತಾಸು ಮುಂಚಿತವಾಗಿ ಬಂಧು-ಬಳಗ ಸೇರುತ್ತಾರೆ. ಬೀಗರು ಬಂದ ಸುದ್ದಿ ಕೇಳಿ ಓಣಿಯ ಹಿರಿಯರು, ಕಿರಿಯರು, ಮುತ್ತೈದೆಯರು ಬಾಜಾ ಭಜಂತ್ರಿಗಳೊಂದಿಗೆ ನೀರು ಮತ್ತು ಆರತಿಯೊಂದಿಗೆ ಅವರನ್ನು ಸ್ವಾಗತಿಸುತ್ತಾರೆ. ನಂತರ ಪರಸ್ಪರ ಎದುರುಗೊಂಡು ಹೆಣ್ಣು ಗಂಡಿನ ಕಡೆಯವರು ಸಿಹಿ ಹಂಚಿಕೊಳ್ಳುತ್ತಾರೆ. ಕಂಬಳಿ ಹಾಸುತ್ತಾರೆ. ಹಾಸಕ್ಕಿಯಲ್ಲಿ ಎಲೆ, ಅಡಿಕೆಯನ್ನು ಸಕ್ಕರೆ ತಾಟಿನಲ್ಲಿಟ್ಟು ಬಂದ ಬೀಗರಿಗೆ ಚೇಷ್ಟೆಮಾಡುತ್ತಾರೆ. ಅವರ ಹಣೆಗೆ ಅಲ್ಲಲ್ಲಿ ವಿಭೂತಿ, ಕುಂಕುಮ ಹಚ್ಚಿ ತಮ್ಮ ಪ್ರೀತಿಯನ್ನು ವ್ಯಕ್ತ ಪಡಿಸುತ್ತಾರೆ. ಈ ಶುಭ ಸಂದರ್ಭದಲ್ಲಿ ಬೀಗ-ಬೀಗತಿಯರು ಜನಪದ ಹಾಡುಗಳನ್ನು ಸವಾಲ್ -ಜವಾಬ್ ರೂಪದಲ್ಲಿ ಹಾಡುತ್ತಾರೆ.

‘ಆನಿ ಬರತಾವಂತ ಆರ ಭಣವಿ ಕಣಕಿಕೊಂಡೆ
ಆನೆಲ್ಲಿ ನಿಮ್ಮ ದಂಡೆಲ್ಲಿ ಬೀಗುತಿ
ಬೋಳೆತ್ತಿನ ಮ್ಯಾಲ ಬರತಾಳ ॥ ಸೋ ॥’
‘ಎಲ್ಲಾರ ಕಟ್ಟ್ಯಾರ ಸಣ್ಣ ಗುಂಡ ದೊಡ್ಡ ಗುಂಡ
ಬೀಗತಿ ಕಟ್ಟ್ಯಾಳ ರುಬ್ಬಗುಂಡ ॥ ಸೋ ॥’ [೨]

೪.೧.೧೩ ಐರಾಣಿ ತರುವುದು

ಮದುವೆ ಮನೆಯ ಎಲ್ಲ ಹೆಣ್ಣು ಗಂಡು ಮಕ್ಕಳು ಕೂಡಿ, ಐದು ಜನ ಮುತ್ತೈದೆಯರನ್ನು ಕರೆದುಕೊಂಡು ‘ಐರಾಣಿ’ ಬಿಂದಿಗೆ ತರಲು ಕುಂಬಾರನ ಮನೆಗೆ ಹೋಗುತ್ತಾರೆ. ಮದುವೆಗೆ ಎಷ್ಟು ಬಿಂದಿಗೆ ಬೇಕೆಂದು ಈ ಮೊದಲೇ ನಿರ್ಧಾರ ಮಾಡಿ ಕುಂಬಾರನಿಗೆ ಎಲೆ ಅಡಿಕೆ ಕೊಡಲಾಗಿರುತ್ತದೆ. ಕುಂಬಾರನು ಐರಾಣಿ ಬಿಂದಿಗೆಗಳನ್ನು ಹೊರಗೆ ತಂದಿಡುತ್ತಾನೆ. ಐದು ಜನ ಮುತ್ತೈದೆಯರು ಕಂಬಳಿ ಗದ್ದುಗೆ ಮಾಡಿ ಅದಕ್ಕೆ ಜೋಳದ ಹಾಸಕ್ಕಿ ಹೊಯ್ದು ಬಿಂದಿಗೆಗಳನ್ನಿಡುತ್ತಾರೆ. ವಿಭೂತಿ-ಕುಂಕುಮ ಹಚ್ಚಿ ಪೂಜೆ ಮಾಡುತ್ತಾರೆ. ಪ್ರತಿಯೊಬ್ಬ ಮುತ್ತೈದೆಯರ ತಲೆಯ ಮೇಲೆ ಕಂಬಳಿ ಹಾಕಿ ಐರಾಣಿ ಬಿಂದಿಗೆ ಇಡುತ್ತಾರೆ.

ಆ ಸಮಯದಲ್ಲಿ ಐರಾಣಿ ತಯಾರಿಸಿದ ಕುಂಬಾರನಿಗೆ ಒಳ್ಳೆಣ್ಣೆ, ಅರಿಶಿನ, ಕುಂಕುಮ, ಕೊಬ್ಬರಿ, ಎಲೆ-ಅಡಿಕೆ, ಉತ್ತತ್ತಿ ಮತ್ತು 'ಹಣ' ಕೊಡುತ್ತಾರೆ. ಮಂಗಳ ವಾದ್ಯಗಳೊಂದಿಗೆ ಹಾಡುತ್ತಾ ಮದುವೆ ಮನೆಗೆ ಬರುತ್ತಾರೆ.

'ನಾಣ್ಯದ ಉಟ್ಟಾನೇ ನಾಣ್ಯದ ಕೊಟ್ಟ್ಯಾನೇ
ಝಾಡಿಸಿ ಮಣ್ಣ ತುಳಿದಾನೆ। ತಾ ಮಾಡ್ಯಾನ ॥ ಸೋ ॥
ಜಾಣೇರು ಹೋರುವ ಐರಾಣಿ

ಧಟ್ಟಿಯ ಉಟ್ಯಾನೆ ಧಟ್ಟಿಯ ತೊಟ್ಯಾನೆ
ಘಟ್ಟಿಸಿ ಮಣ್ಣ ತುಳಿದಾನ । ತಾ ಮಾಡ್ಯಾನ
ಮಿತ್ರೇರು ಹೊರುವ ಐರಾಣಿ'[೩]

ಅವರು ತಂದ ಐರಾಣಿ ಬಿಂದಿಗೆಗಳನ್ನು ದೇವರ ಜಗಲಿ ಮೇಲೆ ಇಡುವರು. ಮದುವೆ ಮುಗಿದ ಮೇಲೆ ಅವನ್ನು ಉಪಯೋಗಿಸಿಕೊಳ್ಳುತ್ತಾರೆ.

೪.೧.೧೪ ಸುರಿಗೆ ಸುತ್ತುವುದು

ಇದು ಹಂದರದಲ್ಲಿ ನಡೆಯುವ ಮುಖ್ಯ ಕಾರ್ಯವಾಗಿದೆ. ಮುತ್ತೈದೆಯರು ಹಾಗೂ ಮದುವೆಯಾದ ಪುರುಷರು ಮಾತ್ರ ಸುರಿಗೆ ಸುತ್ತುವ ಕಾರ್ಯದಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುತ್ತಾರೆ. ಚೌಕಾಕಾರ ಬರುವಂತೆ ನಾಲ್ಕು ಮೂಲೆಗಳಲ್ಲಿ ಮಣ್ಣಿನ ಮಗಿಗಳನ್ನಿಟ್ಟುಕೊಂಡು ಮುತ್ತೈದೆಯರು ಕುಳಿತುಕೊಳ್ಳುವರು. ಅದರ ಮಧ್ಯದಲ್ಲಿ ಮಗಿಯೊಂದಿಗೆ ಕಳಸಗಿತ್ತಿಯೊಬ್ಬಳು ಕುಳಿತುಕೊಳ್ಳುವಳು. ಆಗ ಅನುಭವಿಕನೊಬ್ಬ ಅರಿಶಿನ ದಾರದಿಂದ ಎಡಗಡೆಯಿಂದ ಬಲಗಡೆಗೆ ಐದು ಎಳೆ ದಾರ ಸುತ್ತುತ್ತಾನೆ. ನಂತರ ಮದುಮಗನ ಕೈಯಲ್ಲಿ ಅಕ್ಕಿ ಹಾಕಿದ ಎಲೆಯನ್ನು ಕೊಡುವರು. ಅವನ ಹಿಂದೆ ಚಿಕ್ಕಮ್ಮ ಅವಳ ಹಿಂದೆ ಮದುಮಗಳು ಅವಳ ಹಿಂದೆ ಅವರ ಬಂಧು ಬಳಗದವರು ಕಳಸದ ಎಡದಿಂದ ಬಲಕ್ಕೆ ಕಳಸ ಸುತ್ತುತ್ತಾರೆ. ಹಾಗೂ ತಂಬಿಗೆಯಿಂದ ಪ್ರತಿಯೊಂದು ಮಗಿಗೂ ಒಂದೆರಡು ಅಕ್ಕಿ ಕಾಳುಗಳನ್ನು ಹಾಕುತ್ತಾ ಹೋಗುವರು. ನಂತರ ಮದುಮಗ ಮತ್ತು ಮದುಮಗಳು ಬಲಗಾಲು ಒಳಗೆ ಇಟ್ಟು ಬಲಕ್ಕೆ ತಿರುಗಿ ಕುಳಿತುಕೊಳ್ಳುವರು. ಅವರವರ ಹಿಂದೆ ಚಿಕ್ಕಮ್ಮ ಅಥವಾ ಅಕ್ಕತಂಗಿಯರು ಕುಳಿತುಕೊಳ್ಳುವರು.

ವಧು-ವರರಿಗೆ ಕೊಬ್ಬರಿ ಎಣ್ಣೆ, ಅರಿಶಿನ ಹಚ್ಚಿ ಬಿಸಿ ನೀರಿನಿಂದ ಸ್ನಾನ ಮಾಡಿಸಿ ಹೊಸ ಬಟ್ಟೆ ಉಡಿಸುವರು. ಅವರ ಹಿಂದೆ ಕುಳಿತವರಿಗೂ ಸ್ನಾನ ಮಾಡಿಸುವರು. ವರನ ಕೈಯಲ್ಲಿ 'ಸುರಗಿ ಕಾಯಿ' ಕೊರಳಲ್ಲಿ ಹೂವಿನ ಸರ, ಹಣೆಗೆ ಎಲೆ, ಬಾಸಿಂಗ ಕಟ್ಟಿ, ಆರತಿ ಬೆಳಗುವರು. ಈ ಕಾರ್ಯಕ್ರಮ ನಡೆಯುವಾಗ ಸುರಗೀ ಹಾಡು ಹಾಡುತ್ತಾರೆ.

'ಅರಿಷಿಣ ಹಚ್ಚಿದ ಕಾಲು ಕೆಸರಾದಾವಂತ
ದಸರಿಪ ಹಾಸ್ಯಾರು ನಡುಮನೆಗೆ ಸೋಬಾನವ

ದಸರಿಪ ಹಾಸ್ಯಾರು ನಡುಮನೆಗೆ ಮಲ್ಲವ್ವನ
ಶಿಶುವ ಬಚ್ಚಲನ ಇಳಿವಾಗ ಸೋಬಾನವನ

ಎಣ್ಣೆ ಹಚ್ಚಿದ ಕಾಯಿ ಮಣ್ಣ ಆದಾವಂತ
ಬಣ್ಣನ ತುಂಬ್ಯಾರ ನಡು ಮನೆಗೆ ಸೋಬಾನವ
ಶಿಶುವ ಬಚ್ಚಲನ ಇಳಿವಾಗ ಸೋಬಾನವನ'[೪]

ನಂತರ ಅವರನ್ನು ಮನೆಯ ದೇವರ ಜಗಲಿಗೆ ಕರೆದೊಯ್ಯುವರು. ಇತ್ತ ಸುರಗಿ ನೂಲಿಗೆ ಅಂತರದಿಂದ ಮೇಲಕ್ಕೆತ್ತಿ ಮಡಚಿ ಕಳಸಗಿತ್ತಿಯ ಮಗಿಯ ಕಂಠಕ್ಕೆ ಸುತ್ತುತ್ತಾರೆ. ನಂತರ ಮಗಿಗಳನ್ನು ಒಳಕ್ಕೆ ತೆಗೆದುಕೊಂಡು ಹೋಗುವರು.

ಒಳಗೆ ಕಂಬಳಿ ಗದ್ದಿಗೆ ಮಾಡಿ ಹಾಸಕ್ಕಿ ಹೊಯ್ದು ಅದರ ಮೇಲೆ ಮದುಮಕ್ಕಳನ್ನು ಕೂಡಿಸಿ ಎಲೆ ಬಾಸಿಂಗ ಸಡಿಲಿಸುತ್ತಾರೆ. ಅವರಿಗೆ ಬಾಸಿಂಗ ಕಂಕಣ ಕಟ್ಟಿ, ಆರತಿ ಬೆಳಗಿ ತಲೆಯ ಮೇಲೆ ಕಳಸ ತಂಬಿಗೆಯಿಂದ ನೀರು ಹಾಕುವರು. ನಂತರ ಅವರಿಗೆ ಆಭರಣ ತೊಡಿಸಿ ಶೃಂಗರಿಸುವರು. ನಂತರ ಯಾವುದಕ್ಕೂ ಬಾಸಿಂಗ ತಾಗದಂತೆ ದೇವರ ಅಕ್ಕಿಕಾಳು ಹಾಕಲಿಕ್ಕೆ ಕರೆದೊಯ್ಯುವರು.

೪.೧.೧೫ ಅಕ್ಷತಾರೋಹಣ

ವಿವಾಹದಲ್ಲಿ ಮದುಮಕ್ಕಳಿಗೆ ಅಕ್ಕಿಕಾಳು ಹಾಕುವುದರಲ್ಲಿ ಎರಡು ರೀತಿ ಇವೆ. ಒಂದು ದೇವರ ಅಕ್ಕಿಕಾಳು ಎನ್ನುತ್ತಾರೆ, ಇನ್ನೊಂದು ದೈವದ ಅಕ್ಕಿಕಾಳು ಎಂದು ಕರೆಯುತ್ತಾರೆ. ಮನೆಯೊಳಗೆ ಕುಲದೇವರ ಎದುರಿಗೆ ಮದುಮಕ್ಕಳಿಗೆ ಅಕ್ಕಿಕಾಳು ಹಾಕಿದರೆ ಅದು ದೇವರ ಅಕ್ಕಿಕಾಳು, ಹಂದರದಲ್ಲಿ ಹಸೆಕಟ್ಟೆಯ ಮೇಲೆ ಹಾಕುವ ಅಕ್ಕಿಕಾಳನ್ನು ದೈವದ ಅಕ್ಕಿಕಾಳು ಎನ್ನಲಾಗುತ್ತದೆ. ಹಸೆಕಟ್ಟೆಯ ಮೇಲೆ ಮದುಮಕ್ಕಳು ಎದುರು ಬದಿರು ನಿಲ್ಲಿಸಿ ವಧು-ವರರ ಮುಖ ಒಬ್ಬರಿಗೊಬ್ಬರಿಗೆ ಕಾಣದಂತೆ ಪರದೆಯೊಂದನ್ನು ಅಡ್ಡಲಾಗಿ ಹಿಡಿಯಲಾಗುತ್ತದೆ. ಅಕ್ಕಿಕಾಳನ್ನು ಕೂಡಿದ ಜನರೆಲ್ಲರಿಗೂ ಕೊಡುತ್ತಾರೆ. ಕನ್ಯೆಗೆ ವರನು ತಾಳಿ ಕಟ್ಟುವ ಸಂದರ್ಭದಲ್ಲಿ ಶುಭ ಮಂಗಳವಾಗಲಿ ಎಂದು ಅರಿಶಿನ ಕುಂಕುಮ ಮಿಶ್ರಿತ ಅಕ್ಷತೆ ಕಾಳನ್ನು ಬಂದಿರುವ ಎಲ್ಲಾ ಬಂಧು ಬಾಂಧವರು, ಹಿರಿಯ ಕಿರಿಯರು ಅಕ್ಷತೆ ಹಾಕುತ್ತಾರೆ. ವಧು-ವರರ ಮೇಲೆ ಅಕ್ಷತೆ ಬಿದ್ದ ನಂತರ ಅವರು ದಂಪತಿಗಳಾಗುವರು. ತಮ್ಮ ಮುಂದಿನ ವೈವಾಹಿಕ ಬದುಕನ್ನು ರೂಪಿಸಿಕೊಳ್ಳುವುದು ಅವರ ಜವಾಬ್ದಾರಿಯಾಗುವುದು. ಈ ಸಂದರ್ಭದಲ್ಲಿ ಹಾಡು ಹಾಡಲಾಗುತ್ತದೆ.

'ಪಟ್ಟಮಾಲಿನ ಮುಂದ ಇಚ್ಚಾಳ ಹಂದರ ।
ಕಿರುತನದ ತ್ವಾರಣ ಕಟ್ಟಿ ಮುತ್ತಿನ ರಾಸಿ ಹೊಯ್ದು ।
ಕೈಯಲ್ಲಿ ಕಂಕಣ ಕಟ್ಟಿ ಹಣೆಯಲಿ ಬಾಸಿಂಗ ಧರಿಸಿ ।
ಪಾರ್ವತಿ ಪರಮೇಶೂರ ಎಂದು ಅಕ್ಷತೆ ಹಾಕಿದರು ॥

ಬಾಸಿಂಗ ತರುವಾಗ ಸೂಸ್ಯಾಡಿ ಮಳೆ ಬಂದ
ಬಾಸಿಂಗ ಚಿಗತ ವನವಾಗಿ । ಸೋ ಎನ್ನಿರೆ ಸೋಬಾನ ಎನ್ನಿರೆ ॥
ಬಾಸಿಂಗ ನೀ ಚಿಗತ ವನವಾಗೆ ನೀ ಮಳೆರಾಯ
ಟೊಂಗೆ ಟೊಂಗೆಗೆ ಗಿಳಿ ಕೂತ । ಸೋ ಎನ್ನಿರೆ ಸೋಬಾನ ಎನ್ನಿರೆ ॥[೨೨]

೪.೧.೧೬ ಊಟೋಪಚಾರ

ಮದುವೆ ಮಾಡಿಕೊಳ್ಳುವ ವ್ಯಕ್ತಿ ಬಡವನಾಗಲೀ ಶ್ರೀಮಂತನಾಗಲೀ ಕಡ್ಡಾಯವಾಗಿ ಎರಡು ಬಗೆಯ ಊಟ ಹಾಕಿಸುವ ಪದ್ಧತಿ ಮೊದಲಿತ್ತು. ಅಕ್ಷತೆ ಬೀಳುವ ಮುಂಚೆ ತಮ್ಮ ಮನೆ ದೇವರು ಮತ್ತು ಇತರೆ ದೇವರುಗಳಿಗೆ ಕುರಿ–ಕೋಣ ಬಲಿಕೊಟ್ಟು ಸಮುದಾಯದವರಿಗೆಲ್ಲ ಊಟ ಹಾಕಿಸಬೇಕಿತ್ತು. ಇದರಲ್ಲಿ ಒಂದು ದೈವದೂಟ ಮತ್ತೊಂದು ಖಾರದೂಟವೆಂದು ಮಾಡಲಾಗುತ್ತದೆ. ಪ್ರಸ್ತುತ ಸಂದರ್ಭಗಳಲ್ಲಿ ಮದುವೆ ಮಾಡಿಕೊಳ್ಳುವದು ಮನೆತನವನ್ನು ಅವಲಂಬಿಸಿದೆ. ಅವರವರ ಆರ್ಥಿಕ ಶಕ್ತಿಗನುಸಾರವಾಗಿ ಶಿರಾ, ಸಜ್ಜಕ, ಬೂಂದಿ, ಜಿಲೇಬಿ, ಕಡುಬು, ಹೋಳಿಗೆ, ಹುಗ್ಗಿ, ಭಜಿ, ಪುರಿ, ಚಪಾತಿ, ರೊಟ್ಟಿ, ಜೋಳದ ರೊಟ್ಟಿ ಅನ್ನ, ಸಾಂಬಾರು, ಪಲ್ಯೆ ಮುಂತಾದ ವಿವಿಧ ಅಡುಗೆಯನ್ನು ಮದುವೆಯ ಊಟಕ್ಕೆ ಮಾಡಿಸುವುದುಂಟು. ಈ ಮೊದಲು ಬೀಗರಿಗೆ ಅಕ್ಕಿಕಾಳು ಹಾಕಿದ ಕಡುಬು, ಅತಿ ಖಾರದಿಂದ ಕೂಡಿದ ಸಾರು, ಅತಿ ಸಿಹಿಯಿಂದ ಕೂಡಿದ ಪದಾರ್ಥಗಳು, ಅತಿ ಉಪ್ಪಿನಿಂದ ಕೂಡಿದ ಅಡುಗೆಯನ್ನು ನಾಲ್ಕಾರು ಜನರಿಗಾಗುವಷ್ಟು ಮಾತ್ರ ಮಾಡಿರುತ್ತಿದ್ದರು. ದೈವದ ಪಂಕ್ತಿ ಭೋಜನದಲ್ಲಿ ಕುಳಿತಾಗ ಪ್ಲೇಟಿನಲ್ಲಿ ನೀಡಿದ್ದನ್ನು ಯಾರು ತೆಗೆಯುವಂತಿಲ್ಲ. ಸ್ವಲ್ಪವಾದರೂ ತಿನ್ನಲೇಬೇಕೆಂಬ ನಿಯಮವಿತ್ತು. ಹಿಂದಿನ ದಿನಗಳಲ್ಲಿ ವಿವಾಹದ ಊಟಕ್ಕಾಗಿ ಕುಂಬಾರನ ಪರ್ಯಾಣ ಬಳಸುತ್ತಿದ್ದರು. ಆದರಿಂದು ಸರ್ಕಾರದ ಸಹಾಯಧನದಿಂದ ಬಂದ ಅಡುಗೆ ಮತ್ತು ಊಟ ಮಾಡುವ ಸಾಮಾನು ಒದಗಿಸಿರುವುದರಿಂದ ಇಂದು ಎಲ್ಲರೂ ಸ್ಟೀಲಿನ ಪ್ಲೇಟಿನಲ್ಲಿ ಊಟ ಮಾಡುತ್ತಾರೆ, ಇಲ್ಲವೆ ಪತ್ರಾವಳಿ ಎಲೆಯಲ್ಲಿ ಊಟ ಮಾಡುವುದು ಸಾಮಾನ್ಯವಾಗಿದೆ. ಮೊದಲು ಮದುವೆ ಊಟಕ್ಕಾಗಿ ಹೆಣ್ಣು ಮಕ್ಕಳಿಗೆ ಪಂಕ್ತಿ ಎಬ್ಬಿಸುವುದು ಛಲವಾದಿ ಸಮುದಾಯದ ಒಂದು ವಿಶಿಷ್ಟ ಸಂಪ್ರದಾಯವಾಗಿತ್ತು. ಆದರೆ ಇಂದು ಈ ನಿಯಮ ಮಾಯವಾಗಿದೆ. ಗಂಡು ಹೆಣ್ಣು ಎನ್ನದೆ ಸರಿಸಮಾನವಾಗಿ ಭಪೆ ಪದ್ಧತಿಯಲ್ಲಿ ಇಂದು ಊಟ ಮಾಡಲಾಗುತ್ತದೆ.

೪.೧.೧೭ ಮೆರವಣಿಗೆ

ವಿವಾಹಕ್ಕೆ ಬಂದ ಸಂಬಂಧಿಕರೆಲ್ಲ ಊಟ ಮುಗಿಸಿದ ನಂತರ ಮದುಮಕ್ಕಳ ಮೆರವಣಿಗೆಗೆ ಎತ್ತಿನಬಂಡಿ ಸಿದ್ಧವಾಗುತ್ತದೆ. ನವ ವಧುವರರಿಗೆ ಹೊಸವಸ್ತ್ರಗಳನ್ನು ಉಡಿಸಿ ವಿವಿಧ ಆಭರಣಗಳಿಂದ ಅಲಂಕಾರಗೊಳಿಸಲಾಗುತ್ತದೆ. ನವದಂಪತಿಗಳು ಎತ್ತಿನ ಗಾಡಿಯಲ್ಲಾಗಲಿ ಅಥವಾ ಕಾಲ್ನಡಿಗೆಯಲ್ಲಾಗಲಿ ಇಲ್ಲವೆ ಟ್ರ್ಯಾಕ್ಟರ್‌ನಲ್ಲಿ ಅಥವಾ ತೆರೆದ ಜೀಪಿನಲ್ಲಿ ವಾದ್ಯಗಳೊಂದಿಗೆ ವಿದ್ಯುತ್ ದೀಪಗಳ ಬೆಳಕಿನ ಅಲಂಕಾರದಲ್ಲಿ ಮಂಗಳ ವಾದ್ಯಗಳ ನಾದಕ್ಕೆ ಹಾಡುತ್ತ ಕುಣಿಯುತ್ತಾ ಬಂಧು ಬಳಗವೆಲ್ಲ ಸೇರಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೋಗಲಾಗುತ್ತದೆ. ಗ್ರಾಮದ ಪ್ರಮುಖ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಿಕೊಂಡು ಮೆರವಣಿಗೆ ಸರಿರಾತ್ರಿಗೆ ಮನೆಗೆ ಹಿಂತಿರುಗುತ್ತದೆ.

೪.೧.೧೮ ಸುರಿಗೆ ಸಾಮಾನು ಅಥವಾ ಬಾಂಡೆ ಸಾಮಾನು ಒಪ್ಪಿಸುವುದು

ವಧುವಿನ ತಂದೆತಾಯಿಯರು ಮಗಳ ಹೊಸ ಬಾಳಿಗಾಗಿ ತಂದಿರುವ ಪ್ಲೇಟು, ತಂಬಿಗೆ, ಕೊಡ, ನೀರಿನ ಟಾಕಿ (ತೊಟ್ಟಿ), ಹಾಸಿಗೆ, ಮಂಚ, ಬಾಗಿಲಿಗೆ ಹಾಕುವ ತಳಿರುತೋರಣ, ಫ್ಯಾನು, ಇತ್ಯಾದಿ ಜೀವನಾವಶ್ಯಕ ಸಾಮಾನುಗಳನ್ನು ಬಂಧುಬಳಗದ ಜೊತೆ ವಾದ್ಯಮೇಳಗಳೊಂದಿಗೆ ಮೆರವಣಿಗೆ ಮುಗಿಸಿದ ನಂತರ ಕೊಡುತ್ತಾರೆ. ಬೀಗರು ಜೋಪಾನವಾಗಿ ಅಳಿಯನಿಗೆ ಮುಟ್ಟಿಸಲು ವಿವಿಧ ಬಗೆಯ ತಿಂಡಿ ಪದಾರ್ಥಗಳನ್ನು ಮುಚ್ಚಿಕೊಂಡು ತರುತ್ತಿರುವಾಗ, ಗಂಡಿನ ಕಡೆಯವರು ಹಂದರದಲ್ಲಿ ಅದನ್ನು ಕಸಿದುಕೊಂಡು ತಿನ್ನಬೇಕೆಂದು ಹೊಂಚು ಹಾಕುತ್ತಿರುತ್ತಾರೆ. ಕೊನೆಗೆ ಎಲ್ಲರೂ ಕೈ ಹಾಕಿ ತಿಂಡಿ ಪದಾರ್ಥಗಳು ನೆಲದ ಪಾಲಾಗಿ ಬಿಡುವ ಸಂದರ್ಭಗಳು ಇರುತ್ತಿದ್ದವು. ಆಗ ಸುರಿಗಿ ಸಾಮಾನು ಹೊತ್ತು ತಂದವರಿಗೆ ಹೊಸ ಅಳಿಯನು ೨೫ ರೂ. ೫೧ ರೂ. ೧೦೧ ರೂಪಾಯಿ ಖುಷಿ ಕೊಡುವ ಸಂಪ್ರದಾಯವಿದೆ. ಹಣ ಕೊಡದಿದ್ದರೆ ಸುರಿಗೆ ಸಾಮಾನು ಮರಳಿ ಮನೆಗೆ ಒಯ್ಯುವುದಾಗಿ ಹೆದರಿಸುವ ತಮಾಷೆಗಳು ನಡೆಯುತ್ತವೆ. ಮಧುಮಗನಿಂದ ಕರಡಿ ಮಜಲಿನವರು ಅಥವಾ ಬ್ಯಾಂಡ್‌ಸೆಟ್ ಮೇಳದವರು ಕೂಡ ಖುಷಿ ಹಣ ಕೇಳಿ ಪಡೆಯುತ್ತಾರೆ. ಕೊಡ ಹೊತ್ತ ಮುತ್ತೈದೆಗೆ ಸೀರೆ-ಕುಪ್ಪಸ ಕೊಡುವುದನ್ನು 'ಕೊಡದ ಸೀರೆ' ಎನ್ನಲಾಗುತ್ತದೆ. ಹೆಣ್ಣಿನ ಕಡೆಯವರು ಸುರಿಗೆ ಸಾಮಾನುಗಳೊಂದಿಗೆ ತಮ್ಮ ಮಗಳನ್ನು ಒಪ್ಪಿಸಿದ್ದೇವೆಂದು ಭಾವಿಸಿ ತಮ್ಮ ಮಗಳನ್ನು ಗಂಡನ ಮನೆಗೆ ಕಳಿಸುತ್ತಾರೆ. ಗಂಡನ ಕಡೆಯವರು ಹೆಣ್ಣಿನ ತಾಯಿಗೆ ಹೆಣ್ಣಿನ ಕಡೆಯವರು ಗಂಡಿನ ತಾಯಿಗೆ ಸೀರೆಯನ್ನು ಕೊಡುವ ಸಂಪ್ರದಾಯವಿದೆ. ಇದು ಸಾಮಾನ್ಯವಾಗಿ ಕಂಡುಬರುವ ಪದ್ಧತಿಯಲ್ಲ. ಆದರೂ ಮದುಮಕ್ಕಳ ತಾಯಿಯಂದಿರಿಗೆ ಮದುಮಕ್ಕಳ ಸೋದರ ಮಾವಂದಿರು ತಪ್ಪದೆ 'ಮೈಲಿಗೆ' ಬಿಡಿಸಬೇಕು ಎಂಬುದು ಇದರ ವಿಚಾರವಾಗಿದೆ.

೪.೧.೧೯ ಬೀಗರ ಬೀಳ್ಕೊಡುಗೆ ಅಥವಾ ಬೀಗರನ್ನು ಕಳಿಸಿಕೊಡುವುದು

ಮದುವೆ ಮುಗಿದ ಮೇಲೆ ಹೆಣ್ಣಿನ ಕಡೆಯವರು ತಮ್ಮೂರಿಗೆ ಹೊರಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಅವರು ಗಾಡಿ, ಟ್ರಾಕ್ಟರ್, ಟ್ರಕ್, ಇಲ್ಲವೆ ಬಸ್ ಯಾವುದನ್ನು ತಂದಿರುತ್ತಾರೋ ಅವನ್ನು ಸಜ್ಜು ಮಾಡುತ್ತಾರೆ. ಹೆಣ್ಣಿನ ಕಡೆಯ ಬೀಗರಿಗೆ ಊಟಕ್ಕೆ ಹಿಟ್ಟಕ್ಕಿ ಕಟ್ಟುತ್ತಿದ್ದುದು ಈ ಮೊದಲಿನ ಸಂಪ್ರದಾಯವಾಗಿತ್ತು. ಇದರೊಂದಿಗೆ ಒಂದು ಸೀರೆಯನ್ನು ಗಂಡಿನ ಕಡೆಯವರು ಕೊಡಬೇಕಾಗಿತ್ತು. ಇದನ್ನು 'ಬೀರಣಿಗೆಸೀರೆ' ಎಂದು ಕರೆಯುವ ರೂಢಿ ಇದೆ. ನಂತರ ಹಾಡುತ್ತ, ಬಾರಿಸುತ್ತಾ, ಬಿಡಿಕಿ ಮನೆಯಿಂದ ಗ್ರಾಮದಾಚೆಯ ತನಕ ದಾಟಿಸಿ ಬರುತ್ತಿದ್ದುದು ರೂಢಿ. ಮುಂದಿನ ಆಚರಣೆಗಳಿಗಾಗಿ ಕೆಲವು ಕಡೆ ಮದುಮಗಳನ್ನು ಕರೆದೊಯ್ದರೆ, ಮತ್ತೆ ಕೆಲವು ಕಡೆ ಮದುಮಗನನ್ನು ಮಾತ್ರ ಕರೆದೊಯ್ಯುತ್ತಾರೆ.

೪.೧.೨೦ ಹಂದರ ಇಳಿಸುವುದು

ಮದುವೆಯಾದ ಐದು ದಿನ ಇಲ್ಲವೇ ಒಂಬತ್ತನೇ ದಿನಕ್ಕೆ ಹಂದರವನ್ನು ಇಳಿಸುವ ಕಾರ್ಯ ನಡೆಯುತ್ತದೆ. ಗಂಡಸರು ಹಂದರದ ನಡುಗಂಬಕ್ಕೆ ಪೂಜೆಮಾಡಿ ಪಂದರವನ್ನು ಇಳಿಸುತ್ತಾರೆ. ಸಂಬಂಧ

ಪಟ್ಟವರಿಗೆ ಅವರ ಕಂಬಗಳನ್ನು ಒಪ್ಪಿಸುತ್ತಾರೆ. ಹಂದರದ ಕಟ್ಟಿಗೆಗಳನ್ನು ಮದುವೆ ಮನೆಯವರು ಉರುವಲಾಗಿ ಬಳಸಬಾರದೆಂಬ ನಂಬಿಕೆಯಿದೆ.

೪.೧.೨೧ ಬಾಸಿಂಗ ಬಿಡುವುದು

ಹಂದರ ಇಳಿಸುವುದರೊಳಗೆ ಬಾಸಿಂಗವನ್ನು ನದಿಯಲ್ಲಿ ಬಿಡುವ ವ್ಯವಸ್ಥೆ ಮಾಡಲಾಗುತ್ತದೆ. ಮದುವೆಯ ನಂತರ ನವ ಮದುಮಕ್ಕಳು ಜೋಡಿಯಾಗಿ ಇಲ್ಲದಿದ್ದರೆ ಮದುಮಗನೊಬ್ಬ ಅಥವಾ ಮತ್ತೊಬ್ಬರ ಜೊತೆಯಲ್ಲಿ ಗ್ರಾಮದ ಸಮೀಪವಿರುವ ನದಿಗೆ ಹೋಗಿ ಹೊಸ ಬಿಳಿಬಟ್ಟೆಯಲ್ಲಿ ಕಟ್ಟಿದ ಬಾಸಿಂಗವನ್ನು ನೀರಿನಲ್ಲಿ ಬಿಡುವ ಸಂಪ್ರದಾಯವಿದೆ.

೪.೧.೨೨ ದಾಂಪತ್ಯ ಅಥವಾ ಗೃಹಸ್ಥಾಶ್ರಮ

'ಗೃಹಸ್ಥ' ಎಂದರೆ ಮಡದಿ ಮಕ್ಕಳೊಂದಿಗೆ ನೆಲೆಸಿ ತನ್ನದೆ ಕುಟುಂಬ ಹೊಂದಿರುವವನು ಎಂದು ಹೇಳಬಹುದು. ವಿವಾಹವೆಂದರೆ ಹಿಂದೂಗಳ ಪ್ರಕಾರ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧದ ಪುರುಷಾರ್ಥಗಳ ಸಾಧನೆಯನ್ನು ಸ್ತ್ರೀ ಪುರುಷರೀರ್ವರು ಸಮಭಾಗಿಗಳಾಗಿ ಸಾಧಿಸುವ ಸಂಸ್ಥೆಯಾಗಿದೆ. ಗಂಡು ಹೆಣ್ಣು ಜೀವನ ಪರ್ಯಾಂತ ಅನ್ಯೋನ್ಯವಾಗಿ ದಾಂಪತ್ಯ ಜೀವನ ನಡೆಸುವುದು ಇದರ ಮುಖ್ಯ ತಿರುಳಾಗಿದೆ. ಗೃಹಸ್ಥನಾದವನು ಅನೇಕ ವ್ರತಾಚರಣೆಗಳು, ಧಾರ್ಮಿಕ ಹಬ್ಬ-ಉತ್ಸವಗಳು, ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಸಂಪ್ರದಾಯ, ರೂಢಿ, ಪದ್ಧತಿ ಹಾಗೂ ಪರಂಪರೆಯನ್ನು ಅನುಸರಿಸಬೇಕಾಗುತ್ತದೆ. ಗೃಹಸ್ಥಾಶ್ರಮ ಸಮಾಜದ ಆಧಾರ ಸ್ತಂಭವಾಗಿದ್ದು ಅಲ್ಲಿ ಸಂತಾನಾಭಿವೃದ್ಧಿ ಮತ್ತು ಹುಟ್ಟಿನಿಂದ ಸಾವಿನ ವರೆಗಿನ ಎಲ್ಲ ಸಂಸ್ಕಾರಗಳನ್ನು ಮಾಡುವುದು ಅನಿವಾರ್ಯವಾಗಿರುತ್ತದೆ.

೪.೨ ಗರ್ಭಧಾರಣೆ

ಹೆಣ್ಣು ವಯಸ್ಸಿಗೆ ಬರುವುದರೊಳಗಾಗಿ ವಿವಾಹವಾಗಬೇಕು. ಗಂಡನ ಸಂಪರ್ಕ ಬೆಳೆದ ಐದು ವರ್ಷಗಳಲ್ಲಿ ಗರ್ಭಿಣಿಯಾಗಬೇಕೆಂಬ ಲೋಕರೂಢಿಯಿದೆ. ಇದು ಸ್ತ್ರೀಯರ ಜೀವನದಲ್ಲಿ ನಡೆಯದಿದ್ದರೆ ಆಕೆ ಅನೇಕ ಬಗೆಯ ನೋವು ಅನುಭವಿಸಬೇಕಾಗುತ್ತದೆ. ಹೆಣ್ಣು ಮೂರು ಅಥವಾ ನಾಲ್ಕು ತಿಂಗಳವರೆಗೆ ಹೊರಗಾಗದಿದ್ದರೆ ಗರ್ಭವತಿಯಾಗಿದ್ದಾಳೆಂದು ಗ್ರಹಿಸಲಾಗುತ್ತದೆ. ಗರ್ಭವತಿಯಾದ ಹೆಣ್ಣಿನಲ್ಲಿ ಕೆಲವು ಬದಲಾವಣೆಗಳು ಕಂಡು ಬರುತ್ತವೆ. ಬಯಕೆ ಹತ್ತುವುದು, ಎರೆ ಮಣ್ಣು ಬಯಸಿ ತಿನ್ನುವುದು. ಊಟ ಮಾಡಿದ ಕೂಡಲೆ ವಾಂತಿ ಮಾಡಿಕೊಳ್ಳುವುದು, ಹೆಚ್ಚಾಗಿ ಮಲಗುವುದು, ಮನಸ್ಸಿಗೆ ಸಮಾಧಾನ ಇಲ್ಲದಿರುವುದು, ಮೂರ್ಛೆ ಬಂದು ತಲೆ ತಿರುಗಿದಂತೆ ಭಾಸವಾಗುವುದು ಮುಂತಾದ ಲಕ್ಷಣಗಳು ಗರ್ಭ ಧರಿಸುವ ಸೂಚನೆಗಳೆಂದು ತಿಳಿಯಲಾಗುತ್ತದೆ.

೪.೨.೧ ಗರ್ಭಿಣಿಯರಿಗೆ ಸಂಬಂಧಿಸಿದ ವಿಧಿ ಮತ್ತು ನಿಷೇಧಗಳು

ಯಾವುದೇ ಸಂದರ್ಭದಲ್ಲಿ ಗರ್ಭಿಣಿ ಭಾರವಾದ ವಸ್ತುಗಳನ್ನು ಹೊರುವಂತಿಲ್ಲ. ಅಲೋಪತಿ ಮಾತ್ರೆಗಳನ್ನು ಸೇವಿಸಕೂಡದು. ಆರನೆಯ ತಿಂಗಳ ನಂತರ ಸಂಭೋಗ ಮಾಡಬಾರದು. ಎತ್ತರದ ದಿನ್ನೆ ಅಥವಾ ಗುಡ್ಡ ಹತ್ತಬಾರದು ಎಂಬ ನಿಷೇಧಗಳಿವೆ. ಪಶ್ಚಿಮ ದಿಕ್ಕಿನಲ್ಲಿರುವ ಗ್ರಾಮಗಳಿಗೆ ಹೋಗಬಾರದು, ಗ್ರಾಮದ ಸೀಮೆ, ನದಿ, ಹಳ್ಳವನ್ನು ದಾಟಬಾರದು, ಹಾವನ್ನು ನೋಡಬಾರದು, ಸತ್ತಲ್ಲಿ ಹೋಗಬಾರದು ಎಂಬ ನಿಯಮಗಳಿವೆ. ಒಂದು ವೇಳೆ ವಿಧಿ ನಿಷೇಧ ಮೀರಿ ನಡೆದುಕೊಂಡರೆ ೨೪ ತಿಂಗಳವರೆಗೆ ಹೆರಿಗೆಯಾಗುವುದಿಲ್ಲ ಎಂಬ ನಂಬಿಕೆ ಇದೆ.

ಬಸುರಿ ಗ್ರಹಣದ ದಿನದಂದು ಮಲಗುವಂತಿಲ್ಲ. ಮಲಗಿದರೆ ಹುಟ್ಟುವ ಮಗುವಿಗೆ ಕುರುಡುತನ ಬರುವುದು. ಗ್ರಹಣದ ದಿವಸ ಹಣ್ಣು ಹಂಪಲ, ಕಾಯಿಪಲ್ಲೆ ಹೊಳುವಂತಿಲ್ಲ. ಒಂದು ವೇಳೆ ಹೊಳಿದರೆ ಸೀಳುತುಟಿ ಮಗು ಜನಿಸುವುದು. ಗ್ರಹಣ ಹಿಡಿದ ಸಮಯದಲ್ಲಿ ಹೊರಗೆ ಹೋಗಬಾರದು. ಗ್ರಹಣ ಬಿಡುವವರೆಗೂ ಊಟ ಮಾಡುವಂತಿಲ್ಲ ಎಂಬ ನಿಯಮ ಈ ಸಮುದಾಯದ ಸ್ತ್ರೀಯರಲ್ಲಿದೆ.

೪.೨.೨ ಗರ್ಭಿಣಿಯರ ಬಯಕೆಗಳು

ಗರ್ಭಿಣಿಯರಿಗೆ ಎಳೆಬಿಸಿಲಿನಲ್ಲಿ ಕೂಡಬೇಕೆನಿಸುವುದು, ಹುಳಿಯಾದ ಪದಾರ್ಥ ತಿನ್ನಬೇಕೆನಿಸುವುದು, ಎರೆಮಣ್ಣು ತಿನ್ನುವ ಬಯಕೆ ಅತಿಹೆಚ್ಚು ಕಂಡುಬರುವುದು. ಅಂದವಾದ ಮಗುವನ್ನು ನೋಡುವುದು, ಅಂದವಾದ ಮಗುವನ್ನು ಬೆನ್ನ ಹಿಂದೆ ಹಾಯಿಸುವುದು. ಬೆನ್ನ ಹಿಂದೆ ಹಾದುಹೋದವರ ರೂಪದಂತೆ ಹುಟ್ಟುವ ಮಗು ಚೆನ್ನಾಗಿರುತ್ತದೆಂಬ ನಂಬಿಕೆಯಿದೆ.

೪.೨.೩ ಸೀಮಂತ ಕಾರ್ಯ

ಐದು ಆರು ತಿಂಗಳು ತುಂಬಿದ ಬಸುರಿಯ ಹೊಟ್ಟೆಯಲ್ಲಿರುವ ಮಗುವಿಗೆ ಮನಸ್ಸು ಮತ್ತು ಬುದ್ಧಿ ಬೆಳವಣಿಗೆಯಾಗಲು ಆರಂಭಿಸುತ್ತದೆ. ತಾಯಿಯ ಆರೋಗ್ಯ ಮತ್ತು ಮಾನಸಿಕ ಸ್ಥಿತಿಗತಿ ಹೊಟ್ಟೆಯಲ್ಲಿರುವ ಮಗುವಿನ ಮೇಲೆ ಪ್ರತ್ಯಕ್ಷ ಪ್ರಭಾವ ಬೀರುತ್ತದೆ. ಬಸುರಿ ಹೆಣ್ಣು ಪ್ರಸನ್ನಚಿತ್ತಳೂ ಸದೃಢ ಕಾಯಕದವಳೂ ಆಗಿರುವುದು ಮಗುವಿನ ಬೆಳವಣಿಗೆ ದೃಷ್ಟಿಯಿಂದ ಅತಿ ಅವಶ್ಯವಾಗಿರುತ್ತದೆ. ಈ ಉದ್ದೇಶ ಸಾಧನೆಗಾಗಿ ಸೀಮಂತಕಾರ್ಯ ಸಂಸ್ಕಾರದಲ್ಲಿ ಬಸುರಿ ಹೆಣ್ಣಿನ ತಲೆಗೂದಲನ್ನು ಬಾಚಿ ಹೂಗಳಿಂದ ಅಲಂಕರಿಸಿ, ಅವಳಿಗೆ ಇಷ್ಟವೆನಿಸಿದ ತಿಂಡಿ ಪದಾರ್ಥಗಳನ್ನು ಕೊಡುವರು. ಶಾಸ್ತ್ರೋಕ್ತ ವಿಧಿ ವಿಧಾನಗಳಿಂದ ನಡೆಯುವ ಈ ಸಂಸ್ಕಾರ ಬಸುರಿಯ ಹಾಗೂ ಅವಳ ಹೊಟ್ಟೆಯಲ್ಲಿರುವ ಮಗುವಿನ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪ್ರಭಾವ ಬೀರುತ್ತದೆ. ಹೆಣ್ಣು ಬಸುರಾದ ಸುದ್ದಿ ತಲುಪಿದ ನಂತರ ಕುಬಸದ ಕಾರ್ಯ ಮಾಡಲಾಗುತ್ತದೆ. ಕೆಲವೊಂದು ಕುಟುಂಬಗಳಲ್ಲಿ ಕುಬಸ ಮಾಡುವ ಪದ್ಧತಿಯಿರುವುದಿಲ್ಲ. ಕುಬುಸದ ಕಾರ್ಯದಲ್ಲಿ ಕಳ್ಳ ಕುಬಸ, ದೊಡ್ಡ ಕುಬಸ ಎಂದು ಎರಡು ವಿಧಗಳಿವೆ.

೪.೨.೪ ಕಳ್ಳ ಕುಬಸ

ಹೆಣ್ಣು ಬಸುರಿಯಾದ ಮೂರನೆಯ ತಿಂಗಳಲ್ಲಿ ಮಾಡುವ ಆಚರಣೆಯನ್ನು ಕಳ್ಳ ಕುಬಸ ಎನ್ನುತ್ತಾರೆ. ಹೆಣ್ಣಿನ ತವರಿನಿಂದ ನಾಲ್ಕೈದು ಜನ ಕೂಡಿ ಮಗಳಿಗೆ ಹಸಿರು ಬಳೆ, ಹೂವಿನದಂಡೆ, ಉಡಿಯಕ್ಕಿ ಸಾಮಾನು ತೆಗೆದುಕೊಂಡು ಬರುತ್ತಾರೆ. ಹಸಿರು ಬಳೆ ತೊಡಿಸಿ ತಲೆಗೆ ಹೂವಿನ ದಂಡೆಹಾಕಿ, ಉಡಿಯಕ್ಕಿ ಹಾಕಿ ಕೂಡಿಸಿ ಆರತಿ ಮಾಡುವರು. ಈ ಕಾರ್ಯಕ್ರಮ ಮಾಡುವಾಗ ಬೇರೆಯವರಿಗೆ ಹೇಳುವುದಿಲ್ಲ. ಅದಕ್ಕಾಗಿ ಕಳ್ಳ ಕುಬಸ ಎಂದು ಕರೆದಿರಬಹುದು. ಸಮುದಾಯದಲ್ಲಿ ಅಣ್ಣ ತಮ್ಮಂದಿರನ್ನು ಕರೆದು ಊಟ ಮಾಡಿಸುವರು. ಕೆಲವೊಂದು ಕಡೆ ತಮ್ಮ ಮನೆತನಕ್ಕಷ್ಟೇ ಊಟ ಮಾಡಿಸುವ ಪದ್ಧತಿಯಿದೆ.

೪.೨.೫ ದೊಡ್ಡ ಕುಬುಸ

ತಾಯಿಯ ಬರುವಿಕೆ ಎದುರು ನೋಡುವ ಬಸುರಿ ಹೆಣ್ಣು ತನಗೆ ದೊಡ್ಡ ಕುಬಸ ಮಾಡಿ ಬೇಗನೆ ತವರಿಗೆ ಕರೆದುಕೊಂಡು ಹೋಗಲೆಂದು ಬಯಸುತ್ತಾಳೆ. ತವರ ಮನೆಯವರು ಮುಂಚಿತವಾಗಿ ಒಳ್ಳೆಯ ತಿಥಿ, ಮೂಹೂರ್ತ, ದಿವಸ ನೋಡಿ ಮಗಳ ಗಂಡನ ಮನೆಗೆ ಇಲ್ಲವೆ ಅವರ ಸಂಬಂಧಿಕರಿಗೆ ಹೇಳಿ ಕಳಿಸುತ್ತಾರೆ. ಅಳಿಯ ಮಗಳಿಗೆ ಹೊಸ ಬಟ್ಟೆ ತರುತ್ತಾರೆ, ಗಂಡ ಹೆಂಡತಿಗೆ ಹೊಸ ಬಟ್ಟೆ ಉಡಿಸಿ ಹಾರ ಹಾಕಿ ಮುತ್ತಿನದಂಡೆ ಕಟ್ಟಿ ಆರತಿ ಬೆಳಗುವರು. ತಾಯಿ ತಂದಿರುವ ಬಯಕೆ ಬುತ್ತಿಯನ್ನು ಇದೇ ಸಂದರ್ಭದಲ್ಲಿ ಬಿಚ್ಚುತ್ತಾರೆ. ಅಂದು ರಾತ್ರಿ ಬೀಗರಿಗೆ, ಅಣ್ಣ ತಮ್ಮಂದಿರಿಗೆ ಸಜ್ಜಕ, ಹೋಳಿಗೆ, ಹುಗ್ಗಿ, ಶಿರಾ, ಊಟಮಾಡಿಸುತ್ತಾರೆ. ಮರುದಿನವೇ ಚೊಚ್ಚಲ ಹೆರಿಗೆಗಾಗಿ ಮಗಳನ್ನು ತವರು ಮನೆಗೆ ಕರೆದುಕೊಂಡು ಬರುತ್ತಾರೆ.

೪.೨.೬ ಬಯಕೆ ಬುತ್ತಿ

ಹೆಣ್ಣು ಚೊಚ್ಚಲ ಬಸಿರಾದಾಗ ತವರು ಮನೆಯಿಂದ ಅವಳ ತಾಯಿ ನೋಡಲು ಬರುತ್ತಾಳೆ. ಐದರಿಂದ ಏಳು ತಿಂಗಳ ಒಳಗಾಗಿ ಸಂತೋಷದಿಂದ ಬಯಕೆ ಬುತ್ತಿ ಮಾಡಿಕೊಂಡು ಬರುವ ರೂಢಿಯಿದೆ. ಬುತ್ತಿಯಲ್ಲಿ ತನ್ನ ಮಗಳು ಚಿಕ್ಕವಳಿದ್ದಾಗ ಯಾವುದನ್ನು ಹೆಚ್ಚು ಇಷ್ಟಪಟ್ಟು ತಿನ್ನುತ್ತಿದ್ದಳೋ ಅದನ್ನು ತಾಯಿ ಮಾಡಿಕೊಂಡು ಬರುವಳು. ಕಡಬು, ಕರ್ಚಿಕಾಯಿ, ಎಳ್ಳು ಹಚ್ಚಿ ಮಾಡಿದ ರೊಟ್ಟಿ, ಶೇಂಗಾ ಹೋಳಿಗೆ, ಹುಣಸೆ ಹಣ್ಣು, ಮಾವಿನ ಉಪ್ಪಿನಕಾಯಿ ಮುಂತಾದವನ್ನು ತೆಗೆದುಕೊಂಡು ಬರುತ್ತಾರೆ. ಇನ್ನೂ ಕೆಲವು ಕುಟುಂಬದವರು ಈ ಬಯಕೆ ಬುತ್ತಿಯನ್ನು ದೊಡ್ಡ ಕುಬುಸ ಮಾಡುವಾಗ ತೆಗೆದುಕೊಂಡು ಹೋಗುವರು.

೪.೨.೭ ಹೆರಿಗೆ ಸೂಚನೆ

ಬಸುರಿಗೆ ಹೆರಿಗೆ ನೋವು ಕಾಣಿಸಿಕೊಂಡರೆ ಆ ಸಮಯದಲ್ಲಿ ಸೂಲಗಿತ್ತಿಯನ್ನು ಕರೆಯಲಾಗುವುದು. ಬೇನೆ (ಹೆರಿಗೆಯ ನೋವು) ತಿನ್ನುವ ಸಲುವಾಗಿ ಹಗ್ಗದ ಹುರಿಯನ್ನು ಜಂತಿಗೆ ಕಟ್ಟಿ

ಅದನ್ನು ಗರ್ಭಿಣಿ ಕೈಯಲ್ಲಿ ಕೊಡಲಾಗುವುದು. ಬಸುರಿ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಅದರ ಮೇಲೆ ಭಾರಹಾಕಿ ಹಿಂದಕ್ಕೆ ಮುಂದಕ್ಕೆ ಜೋತಾಡುತ್ತಾ ಬೇನೆ ತಿನ್ನುತ್ತಾಳೆ. ಆಮೇಲೆ ಅವಳನ್ನು ತುದಿಗಾಲ ಮೇಲೆ ಕೂಡಿಸಿ ಇಬ್ಬರು ಸೊಂಟ ಹಿಡಿಯುತ್ತಾರೆ. ಕೆಲವರು ಎರಡೂ ಕೈಗಳನ್ನು ಹಿಡಿಯುತ್ತಾರೆ. ನಂತರ ಬಸುರಿಯ ಮೈಗೆ ಎಣ್ಣೆ ಹಚ್ಚಿ ಉಜ್ಜುವರು. ಆಗ ನೀರು ತುಂಬಿದ ಚೀಲದಂತಿರುವ ಬಿಳಿ ಬಣ್ಣದ ವಸ್ತು ಹೊರಬರುತ್ತದೆ. ಇದಕ್ಕೆ ಉಚ್ಚಿಡೋಣಿ, ತಲೆಬಟ್ಲ ಎಂದು ಕರೆಯುತ್ತಾರೆ. ಹೆರಿಗೆಯ ಸಮಯದಲ್ಲಿ ಹೆಣ್ಣಿನ ತಾಯಂದಿರು ಹರಕೆ ಹೊರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಆರೋಗ್ಯ ಸೇವಾ ಸೌಲಭ್ಯಗಳು ಇರುವುದರಿಂದ ಬಸುರಿ ಹೆಣ್ಣಿಗೆ ಹೆರಿಗೆ ನೋವು ಹೆಚ್ಚಾದರೆ ವಿಶೇಷ ವೈದ್ಯರನ್ನು ಕರೆಸಲಾಗುತ್ತದೆ, ಇಲ್ಲವೆ ಹೆರಿಗೆ ಆಸ್ಪತ್ರೆಗೆ ಹೋಗುವರು.

೪.೩ ಜನನ ಸಂಸ್ಕಾರ

ಸೂಲಗಿತ್ತಿಯರ ಕೈಚಳಕದಿಂದ ಹೊಟ್ಟೆಯಲ್ಲದ್ದ ಕೂಸು ಭೂಮಿಗೆ ಪಾದಾರ್ಪಣೆ ಮಾಡುತ್ತದೆ. ಕೂಸನ್ನು ಶುಚಿ ಮಾಡುವ ಮೊದಲೇ ಕೂಸಿನ ಹೊಕ್ಕಳ ಹುರಿ ಮತ್ತು ಮಾಸ ಎರಡೂ ಕೂಡಿಕೊಂಡಿರುತ್ತದೆ. ಸೂಲಗಿತ್ತಿ ಹೊಕ್ಕಳ ಹುರಿಯನ್ನು ಜಾಗ್ರತೆಯಿಂದ ಕತ್ತರಿಸುತ್ತಾಳೆ. ಹುರಿಕೊಯ್ದ ಕೂಡಲೆ ಕೂಸು ಸೀನಬೇಕು ಇಲ್ಲವೆ ಅಳಬೇಕೆಂದು ಹೇಳಲಾಗುತ್ತದೆ. ಇವೆರಡರಲ್ಲಿ ಯಾವುದನ್ನೂ ಮಾಡದಿದ್ದರೆ ಬಾಯಲ್ಲಿ ಅಥವಾ ಮೂಗಿನಲ್ಲಿ ಏನೋ ಸಿಕ್ಕಿಕೊಂಡಿದೆಯೆಂದು ಅದನ್ನು ತೆಗೆಯಲಾಗುತ್ತದೆ. ನಂತರ ಕೂಸು ಜಾಗ್ರತವಾಗುತ್ತದೆ. ಹೆರಿಗೆಯಾದ ಕೂಡಲೇ ನೀರು ಕಾಯಿಸಲು ಇಟ್ಟಿರುತ್ತಾರೆ. ಬಾಣಂತಿಗೆ ಬಚ್ಚಲಲ್ಲಿ ಕೂರಿಸಿ ನೀರು ಹಾಕುತ್ತಾರೆ. ಕೂಸನ್ನು ಸಹ ಶುಚಿ ಮಾಡಲಾಗುತ್ತದೆ. ತಾಯಿ ಮಗುವಿನ ಮುಖ ನೋಡಿದ ಕೂಡಲೆ ಅವಳು ಅನುಭವಿಸಿದ ಹೆರಿಗೆ ನೋವೆಲ್ಲ ಮರೆತುಹೋಗುತ್ತದೆ.

೪.೩.೧ ಜನನ ಸಂದರ್ಭದ ಕೆಲವು ನಂಬಿಕೆಗಳು

ಕೂಸು ಗರ್ಭದಿಂದ ಹೊರಗೆ ಬರುವಾಗ ಮುಖ ಮೇಲೆ ಮಾಡಿಕೊಂಡು ಬರಬಾರದು, ಹೊಕ್ಕಳ ಹುರಿ ಕೊರಳಿಗೆ ಹಾಕಿಕೊಂಡು ಬರಬಾರದು. ಕಾಲು ಮುಂದಾಗಿ ಬರಬಾರದು. ಮುಖ ಮೇಲಾಗಿ ಹುಟ್ಟಿದರೆ ಸೂಲಗಿತ್ತಿಗೆ ದೋಷ ತಗಲುವುದು, ಕಾಲು ಮುಂದಾಗಿ ಹುಟ್ಟಿದರೆ ಕೂಸಿಗೆ ಮುಂದೆ ಸಿಡಿಲು ಬಡಿಯುವುದು ಎಂಬ ನಂಬಿಕೆಗಳಿವೆ. ಹೆಣ್ಣು ಕೂಸು ಜನಿಸಿದರೆ ಅವಳ ಹೊಕ್ಕಳ ಹುರಿಯನ್ನು ಕೊಯ್ದು ಹೆಣ್ಣು ಮಗುವಿನ ಮುಖಕ್ಕೆ ವರೆಸುತ್ತಾರೆ. ಇದರಿಂದ ಗಡ್ಡ ಮೀಸೆ ಬರುವುದಿಲ್ಲ ಎಂಬ ನಂಬಿಕೆಯಿದೆ.

ಹೆರಿಗೆಯಾದ ನಂತರ ಮಾಸವನ್ನು ಗಡಿಗೆಯಲ್ಲಿ ಹಾಕಿ ಮೇಲೊಂದು ಪರಿವಾಣ ಇಲ್ಲವೆ ತೆಳುವಾದ ಕಲ್ಲಿಟ್ಟು ಬಚ್ಚಲಲ್ಲಿ ಇಲ್ಲವೆ ಮನೆ ಹತ್ತಿರ ಸ್ವಲ್ಪ ಆಳವಾದ ತಗ್ಗಿನಲ್ಲಿ ಹುಗಿಯುತ್ತಾರೆ. ಅದರ ಮೇಲೆ ಅಕ್ಕಿಕಾಳು, ಬೇವಿನ ತಪ್ಪಲು, ಅರಿಶಿನಗಳನ್ನು ಐದು ಗುಂಪುಗಳಲ್ಲಿ ಇಟ್ಟು ಊದಿನಕಡ್ಡಿ ಬೆಳಗಿ ಮುಚ್ಚಲಾಗುತ್ತದೆ. ನಾಯಿ, ನರಿಗಳು ಕೆದರಿ ತಿನ್ನಬಾರದೆಂದು ಅದರ ಮೇಲೆ ಜಾಲಿ ಮುಳ್ಳಿಡುವ ಪದ್ಧತಿ ಗ್ರಾಮೀಣ ಜನರಲ್ಲಿದೆ.

೪.೩.೨ ಐದೇಶಿ

ಕೂಸು ಜನಿಸಿದ ಐದನೇ ದಿನದಂದು ಅನುಸರಿಸುವ ಸಂಸ್ಕಾರ ಕ್ರಿಯೆಗೆ 'ಐದೇಶಿ' ಎಂದು ಕರೆಯುವರು. ಸೂಲಗಿತ್ತಿಯ ಹಿರೇತನದಲ್ಲಿ ಸೆಟಿಗೆವ್ವಳ ಪೂಜೆಗೆ ಬೇಕಾದ ಸಾಮಾಗ್ರಿಗಳನ್ನು ತರಲಾಗುತ್ತದೆ. ಗುಂಡುಕಲ್ಲಿಗೆ ಎಣ್ಣೆ ಹಚ್ಚಿ ಅದನ್ನು ಬಾಣಂತಿಯ ಹಾಗೆ ಸ್ನಾನ ಮಾಡಿಸಲಾಗುತ್ತದೆ. ಅನಂತರ ಅರಿವೆಯಿಂದ ವರೆಸಿ ನಡುಮನೆಯಲ್ಲಿರುವ ಬಾಣಂತಿಯ ಪಕ್ಕದಲ್ಲಿ ಜೋಳದ ಕಾಳು ಸುರವಿ ಅದರ ಮೇಲಿಡಲಾಗುತ್ತದೆ. ಅದಕ್ಕೆ ಹೆರಿಗೆಯಾದ ಸ್ತ್ರೀಯ ಮಂಗಳ ಸೂತ್ರವನ್ನು ಹಾಕಿ ನಂತರ ಕುಂಕುಮ ಬಂಡಾರಗಳಿಂದ ಪೂಜೆ ಮಾಡಲಾಗುತ್ತದೆ. ಹೀಗೆ ಅಲಂಕೃತ ಮಾಡಿದ ಕಲ್ಲಿಗೆ 'ಸೆಟವಿ' ಎಂದು ಕರೆಯುವರು. ಗುಂಡುಕಲ್ಲಿನ ಪೂಜೆ ನಂತರ ಬಚ್ಚಲ ಸೆಟವಿಯನ್ನು ಪೂಜೆ ಮಾಡಲಾಗುತ್ತದೆ. ಹೊಕ್ಕಳ ಹುರಿ ಕೊಯ್ದಿರುವ ಕುಡುಗೋಲಿಗೆ ಬಳ್ಳುಳ್ಳಿಯಿಂದ ತಿಕ್ಕಿ ಲೇಪನ ಹಾಕಲಾಗುವುದು. ನಂತರ ಗೋದಿಗಳಾಪತಿಗೆ ಹಚ್ಚಲಾದ ದೀಪದಿಂದ ಹಿಡಿದು ಕಾಡಿಗೆ ತಯಾರಿಸಿ ಸೆಟವಿಗೆ, ಬಚ್ಚಲ ಸೆಟವಿಗೆ ಹಾಗೂ ಮಗುವಿಗೆ ಹಚ್ಚಲಾಗುತ್ತದೆ. ಐದೇಶಿಗೆ ಕರೆಯುವಾಗ ಹಾಲುಮೊಲೆ ಮುತ್ತೈದೆಯರಿಗೆ ಮಾತ್ರ ಆಮಂತ್ರಣ ಕೊಡುತ್ತಾರೆ. ಇವರು ತಮ್ಮ ಮನೆಯಿಂದ ಬರುವಾಗ ಉಡಿಯಲ್ಲಿ ಜೋಳ ಇಲ್ಲವೆ ಗೋಧಿ ಧಾನ್ಯಗಳನ್ನು ತಂದಿರುತ್ತಾರೆ. ಅದನ್ನು ಸೆಟವಿಯ ಮುಂದೆ ಹಾಕಿ ಅದರ ಪಕ್ಕ ಕುಳಿತುಕೊಳ್ಳುತ್ತಾರೆ. ಎಲ್ಲ ಮುತ್ತೈದೆಯರು ಬಾಣಂತಿಗೆ ಚೇಷ್ಟೆ ಮಾಡುತ್ತಾರೆ. ನಂತರ ಕೂಸನ್ನು ಬಟ್ಟೆಯಲ್ಲಿ ಸುತ್ತಿ ಬಾಣಂತಿಯ ತೊಡೆಯ ಮೇಲೆ ಹಾಕುತ್ತಾರೆ. ಆಗ ಬಾಣಂತಿ ಸೂಲಗಿತ್ತಿಗೆ ಕಂಬಳಿಯನ್ನು ಹೊದೆಸುತ್ತಾಳೆ. ಸೂಲಗಿತ್ತಿ ಸೆಟವಿಯ ಮುಂದಿರುವ ಮರವೊಂದನ್ನು ಕಂಬಳಿಯ ಸೆರಗಿನಿಂದ ಮರೆಮಾಚಿಕೊಂಡು ದೀಪ ನಂದದಂತೆ ನೋಡಿಕೊಳ್ಳುತ್ತಾಳೆ. ಅವಳು ಅದನ್ನು ತೆಗೆದುಕೊಂಡು ಹಿಂದೆ ತಿರುಗಿ ನೋಡಲಾರದಂತೆ ಹೋಗುವಾಗ ಸಿದ್ಧ ನಿಂತ ಮನೆಯವರು ಹುರಿ ಕೊಯ್ದ ಕುಡುಗೋಲಿನಿಂದ ಸೂಲಗಿತ್ತಿಯ ಬೆನ್ನು ಮುಟ್ಟಿಸುತ್ತಾರೆ. ಇದಾದ ಕೂಡಲೆ ಅವಳು ನೇರವಾಗಿ ತಮ್ಮ ಮನೆಗೆ ಹೋಗುತ್ತಾಳೆ.

೪.೩.೩ ನಾಮಕರಣ

ಮಗುವಿನ ನಾಮಕರಣವನ್ನು ಸಾಮಾನ್ಯವಾಗಿ 'ತೊಟ್ಟಲಲ್ಲಿ ಹಾಕುವುದು' ಎಂದು ಕರೆಯಲಾಗುತ್ತದೆ. ಹುಟ್ಟಿದ ಮಗುವಿಗೆ ಹೆಸರನ್ನಿಡುವ ಸಂಸ್ಕಾರಕ್ಕೆ 'ನಾಮಕರಣ' ಎಂದು ಹೆಸರು. ಮಗುವಿಗೆ ಹೆಸರಿಡುವಾಗ ಅದು ಜನಿಸಿದ ನಕ್ಷತ್ರ, ರಾಶಿ, ವಾರ, ತಿಥಿ ಮುಂತಾದವುಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ. ಮಗು ಜನಿಸಿದ ಹನ್ನೊಂದನೆಯ ದಿನಕ್ಕೆ ನಾಮಕರಣ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತದೆ. ಅವರವರ ಕುಟುಂಬದ ಅನುಕೂಲಕ್ಕೆ ತಕ್ಕಂತೆ ೧೩, ೧೫, ೨೧ ದಿನಕ್ಕೆ ನಾಮಕರಣ ಮಾಡುವುದುಂಟು. ಮನೆಯಲ್ಲಿರುವ ಹಾಸಿಗೆ ಶುಚಿಗೊಳಿಸಿ ಮನೆಯನ್ನು ಸ್ವಚ್ಛಗೊಳಿಸಿ, ಮನೆತುಂಬಾ ಗೋಮೂತ್ರ ಇಲ್ಲವೆ ನದಿ ನೀರು ಸಿಂಪಡಿಸಲಾಗುತ್ತದೆ. ಹಲವಾರು ತರದ ಕಾಳು ಸೇರಿಸಿ ಗುಗ್ಗರಿ ಮಾಡಲಾಗುತ್ತದೆ. ಒಂದು ತಂಬಿಗೆ ಮತ್ತು ಜೋಳದ ಕಾಳುಗಳ ಮಧ್ಯದಲ್ಲಿ ಸೆಟಿಗೆವ್ವಳನ್ನು

ನಿಲ್ಲಿಸಲಾಗುವುದು. ಅದಕ್ಕೆ ಕಾಡಿಗೆ, ಕುಂಕುಮ, ಅರಿಶಿನ ಮುಂತಾದ ಪೂಜಾ ಸಾಮಾಗ್ರಿಗಳಿಂದ ಪೂಜಿಸುತ್ತಾರೆ. ನಾಮಕರಣಕ್ಕೆ ಸಮುದಾಯದ ಎಲ್ಲ ಕುಟುಂಬದವರನ್ನು ಕರೆಯಲಾಗುತ್ತದೆ. ಸಮುದಾಯದ ಹೆಣ್ಣುಮಕ್ಕಳು ಬರುವಾಗ ಉಡಿಯಲ್ಲಿ ಜೋಳ, ಗೋಧಿ, ಹಾಕಿಕೊಂಡು ಸೆಟಿಗೆವ್ವಳ ಸುತ್ತ ಹಾಕುತ್ತಾರೆ. ಮುತ್ತೈದೆಯರು ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ಉಡಿಸಿ ಅಲಂಕಾರಗೊಂಡಿರುವ ತೊಟ್ಟಿಲಲ್ಲಿ ಹಾಕುತ್ತಾರೆ. ಸೋದರತ್ತೆಯಾದವಳು ಕಂಚಿನ ತಾಟು ಇಲ್ಲವೆ ಅಗಲವಾದ ಸ್ಟೀಲಿನ ತಾಟನ್ನು ಹಿಡಿದು, ಮೊದಲು ಮನೆ ದೇವರ ಹೆಸರನ್ನು ನಂತರ ಜನ್ಮದ ಹೆಸರನ್ನು ಕರೆದು 'ಕುಬಚೆ ಕುಬಚೆ ಕುರ್ರ' ರಾಗ ಮಾಡಿ ಹೇಳುತ್ತಾಳೆ. ಮಗುವಿನ ಕಿವಿ ಚುರುಕಾಗಿ ಕೇಳಲಿ ಎಂಬ ಕಾರಣಕ್ಕಾಗಿ ತಾಮ್ರದ ತಾಟನ್ನು ಬಾರಿಸುತ್ತಾರೆ. ಹೆಸರಿಡುವ ಸೋದರತ್ತೆಯ ಬೆನ್ನು ಬಾರಿಸಬೇಕೆಂದೆ ಬಹಳಷ್ಟು ಸೊಸೆಯಂದಿರು ತಮ್ಮ ಕೈಗಳ ಬಳೆಗಳೆನ್ನೆಳೆದು ಸಿದ್ಧವಾಗಿರುತ್ತವೆ. ಸೋದರತ್ತೆ ಐದು ಬಾರಿ 'ಕುರ್' ಎನ್ನುವಷ್ಟರಲ್ಲಿ ಅವಳ ಬೆನ್ನು 'ಚುರ್' ಎಂದು ಉರಿಯುತ್ತದೆ. ಹೀಗೆ ಇನ್ನೊಬ್ಬರು ಹೆಸರಿಡುತ್ತಾರೆ. ನಂತರ ಮುತ್ತೈದೆಯರು ಸೆಟವಿಯ ಮುಂದಿಟ್ಟು, ತಂಬಿಗೆಯನ್ನು ಎತ್ತಿ ಬಾಣಂತಿಯ ತಲೆಯ ಮೇಲೊಮ್ಮೆ, ನೆಲದ ಮೇಲೊಮ್ಮೆ ಹೀಗೆ ಐದು ಸಲ ಇಡುತ್ತಾರೆ. ಹೀಗೆ ಮೇಲೆ ಕೆಳಗೆ ಇಡುವಾಗ ಐದು ಹೆಣ್ಣು ಐದು ಗಂಡು ಸಾಕು ಬೇಕೆಂದು ಬಾಣಂತಿಗೆ ಕೇಳುವರು. ಬಾಣಂತಿ ಸಾಕು ಎಂದು ಅಥವಾ ಬೇಕೆಂದು ಹೇಳಬೇಕೆಂದು ಒತ್ತಾಯ ಮಾಡುತ್ತಾರೆ. ಮಗುವಿಗೆ ಹೆಸರಿಡುವಾಗ ಜೋಗುಳದ ಹಾಡುಗಳನ್ನು ಹಾಡುತ್ತಾರೆ.

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರುಗೇನ

ಹಂಬಲಿಸಿ ನಿನ್ನ ಹಡದೇನ ॥ ಸೋ ॥

ಹಂಬಲಿಸಿ ನಿನ್ನನ ಹಡದೇನ ಚಿತ್ರದ

ಗೊಂಬಿ ನಿನಗೊಪ್ಪಿಸಿ ಕೊಡಲ್ಹ್ಯಾಂಗ ॥ ಸೋ ॥

ಕುಲದೇವರು ಇಲ್ಲವೆ ದೇವರ ಹೆಸರನ್ನು ಮಗುವಿಗೆ ಇಡುವುದು ಶುಭ ಸಂಕೇತ ಎಂಬ ಭಾವನೆ ಇವರಲ್ಲಿದೆ. ಕೆಲವೊಂದು ಸಲ ತಮ್ಮ ಅನುಕೂಲಕ್ಕಾಗಿ ಐದು ಹೆಸರನ್ನು ಇಡುವುದು ರೂಢಿಯಲ್ಲಿದೆ, ನಾಮಕರಣದಲ್ಲಿ ಕುಲ, ಧರ್ಮ, ವರ್ಣ ಹಾಗೂ ಸಾಮಾಜಿಕ ಪರಿಸರಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ನಂತರ ಮನೆಗೆ ಬಂದವರಿಗೆಲ್ಲ ನಾಮಕರಣ ಮಾಡಿದ ನಂತರ ಗುಗ್ಗರಿ ಹಂಚಲಾಗುತ್ತದೆ. ಕೆಲವೊಬ್ಬರು ಊಟದ ವ್ಯವಸ್ಥೆ ಮಾಡಿರುತ್ತಾರೆ. ಕಾರ್ಯಕ್ರಮ ಮುಗಿದ ನಂತರ ಎಲ್ಲರೂ ತಮ್ಮ ಮನೆಗಳಿಗೆ ಹೋಗುವಾಗ, ಕೆಲವರು ಬಾಗಿಲಲ್ಲಿ ಅಡ್ಡಗಟ್ಟಿನಿಂತು ಮದುವೆಯಾದ ಹೆಂಗಸರ ಗಂಡಂದಿರ ಹೆಸರುಗಳನ್ನು ಕೇಳಿ ಕೇಳಿ ಹೊರಗೆ ಬಿಡುವುದು ರೂಢಿಯಲ್ಲಿದೆ. ಪ್ರಾಚೀನ ಕಾಲದಿಂದಲೂ ಛಲವಾದಿಯರಿಗೆ ಎರಡಕ್ಷರದ ಹೆಸರು ಅಂದರೆ ಕಲ್ಲ, ಮಲ್ಲ, ಸಿದ್ಧ, ದುರ್ಗ ಮುಂತಾದವು ಹೆಚ್ಚಾಗಿ ಕಂಡುಬರುತ್ತಿದ್ದವು. ಸಾಂಸ್ಕೃತಿಕರಣ ಪ್ರಭಾವದಿಂದ ಮೇಲ್ಜಾತಿಯ ಜನರ ಹೆಸರುಗಳನ್ನು ಈಗ ಬಳಸುತ್ತಿದ್ದಾರೆ. ಮಗು ಹುಟ್ಟಿದಾಗಿನಿಂದ ನಾಮಕರಣದವರೆಗೆ ಬಟ್ಟೆಯನ್ನು ತೊಡಿಸಿರುವುದಿಲ್ಲ. ತೊಟ್ಟಿಲಲ್ಲಿ

ಹಾಕುವ ದಿನದಂದು ಹೊಸ ಬಟ್ಟೆ ತೊಡಿಸುತ್ತಾರೆ. ಇದಾದ ಮೇಲೆ ಮೂರು ತಿಂಗಳ ನಂತರ ಕಿವಿ ಚುಚ್ಚುವ ಸಂಪ್ರದಾಯ ನೆರವೇರುತ್ತದೆ.

೪.೩.೪ ಗಂಗೆಪೂಜೆ

ತಿಂಗಳಿಗೆ ಒಂದು ದಿನ ಕಡಿಮೆಯಿದ್ದಾಗ ಬಾಣಂತಿಗೆ ಬಳೆಯಿಡಿಸಿ, ಉಡಿತುಂಬಿ ಸಮೀಪದಲ್ಲಿರುವ ಬೋರ್‌ವೆಲ್, ಬಾವಿ, ಹಳ್ಳ, ಕೊಳ್ಳಕ್ಕೆ ಹೋಗಿ ಐದು ಕೊಡಯಿಟ್ಟು ಅವಕ್ಕೆ ಅಕ್ಕಿಕಾಳು, ಬೇವಿನ ತೊಪ್ಪಲು, ಅರಿಶಿನ ಮೂರನ್ನು ಕೂಡಿಸಿ ಐದೂ ಕೊಡಕ್ಕೆ ಪೂಜೆ ಮಾಡಿ ಸಿಹಿ ಪದಾರ್ಥ ಮುಂದಿಟ್ಟು, ಕಾಯಿ ಒಡೆದು ಮನೆಗೆ ಬರುವ ಸಂಪ್ರದಾಯವಿದೆ. ಅಂದಿನಿಂದ ಬಾಣಂತಿಯ ಮೈಲಿಗೆ ಕಳಚಿ ನಂತರ ಆ ಹೆಣ್ಣು ನೀರು ತರಲು ಪ್ರಾರಂಭಿಸುತ್ತಾಳೆ. ಈ ಸಂದರ್ಭದಲ್ಲಿ ಬಾಣಂತಿ ಗಂಗೆಯನ್ನು 'ಮಗುವನ್ನು ನೀರಲ್ಲಾದರೂ ಹಾಕು, ಹಾಲಲ್ಲಾದರೂ ಹಾಕು' ಎಂದು ಪ್ರಾರ್ಥಿಸುತ್ತಾಳೆ. ಈ ರೀತಿಯ ಗಂಗೆಪೂಜೆಯ ಕಾರ್ಯಕ್ರಮವು ಹಲವು ಸಮುದಾಯಗಳಲ್ಲಿ ಕಂಡುಬರುತ್ತದೆ. ಛಲವಾದಿ ಸಮುದಾಯವು ಸಹ ಬಾಣತಿಯ ಮೈಲಿಗೆ ಕಳೆಯಲು ಗಂಗಾದೇವಿಯನ್ನು ಪೂಜಿಸುವಳು.

೪.೩.೫ ಬಾಣಂತಿ ಮತ್ತು ಕೂಸಿನ ಆರೈಕೆ

ಮನೆಯ ನಿರ್ದಿಷ್ಟ ಸ್ಥಳದಲ್ಲಿ ಪರದೆ ಕಟ್ಟಿ ಬಾಣಂತಿ ಯಾರಿಗೂ ಕಾಣದಂತೆ ಮರೆ ಮಾಡಿರುತ್ತಾರೆ. ಬಾಣಂತಿಗೆ ಖಾರ ಹಾಕಲಾರದ ಸಿಹಿ ಪದಾರ್ಥ ಮೂರು ದಿನಗಳವರೆಗೆ, ನಂತರ ಸ್ವಲ್ಪ ಖಾರ ಬೆರೆಸಿದ ಪೌಷ್ಠಿಕಾಂಶ ತುಂಬಿದ ತತ್ತಿ, ಮಾಂಸದ ಆಹಾರ ಮುಂತಾದ ಉತ್ಕೃಷ್ಟ ಮತ್ತು ಆರೋಗ್ಯಕರ ಆಹಾರ ನೀಡಲಾಗುತ್ತದೆ. ಛಲವಾದಿಯರಲ್ಲಿ ಹೆಚ್ಚಾಗಿ ಬಾಣಂತಿಯರಿಗೆ ಸೆರೆ ಕುಡಿಸಲಾಗುತ್ತದೆ. ಮಗುವಿಗೆ ಮುಂಜಾನೆ ಮತ್ತು ಸಾಯಂಕಾಲ ಬಿಸಿನೀರಿನ ಸ್ನಾನಮಾಡಿಸುತ್ತಾರೆ. ಮೂರು ದಿನಗಳವರೆಗೆ ಜೇನುತುಪ್ಪವಾಗಲಿ, ಬೆಲ್ಲದ ನೀರಾಗಲಿ ಬೆರಳಿನಿಂದ ಚೀಪಿಸಲಾಗುತ್ತದೆ. ಮೂರು ದಿನದ ಮೇಲೆ ಮಗುವಿಗೆ ಹಾಲು ಉಣಿಸಲಾಗುವುದು. ಮೊಲೆ ಹಾಲಿನಲ್ಲಿ ನಾರು, ಭಜಿಯನ್ನು ತೇದಿ ಕುಡಿಸುತ್ತಾರೆ. ಮಗುವಿಗೆ ಮುಂದೆ ಹೊಟ್ಟೆನೋವು ಇನ್ನಿತರೆ ಕಾಯಿಲೆ ಬರಬಾರದೆಂದು ಈ ಪದ್ಧತಿಯನ್ನು ಅನುಸರಿಸಲಾಗುತ್ತದೆ.

೪.೩.೬ ತೊಟ್ಟಿಲ ಬಟ್ಟಲು ನಿಬ್ಬಣ ಕಾರ್ಯ

ಹೆರಿಗೆಯಾದ ಮೂರು, ಐದು, ಕೆಲವರು ಹನ್ನೊಂದು ತಿಂಗಳಿಗೆ ಬಾಣಂತಿಯನ್ನು ಕರೆದುಕೊಂಡು ಹೋಗುವ ಕಾರ್ಯವನ್ನು ತೊಟ್ಟಿಲ ಬಟ್ಟಲು ನಿಬ್ಬಣ ಎನ್ನುವರು. ಗಂಡನ ಮನೆಯವರು ಬಾಣಂತಿಯನ್ನು ಆರೈಕೆ ಮಾಡಿದವರಿಗೆ ಸೀರೆಯನ್ನು ತೆಗೆದುಕೊಂಡು ಬೀಗರ ಮನೆಗೆ ಒಂಬತ್ತನೆಯ ತಿಂಗಳಲ್ಲಿ ಬರುತ್ತಾರೆ. ತವರು ಮನೆಯವರು ಬಾಣಂತಿಗೆ ಸೀರೆ, ಕೂಸಿಗೆ ತೊಟ್ಟಿಲು-ಬಟ್ಟಲು, ಗಿಂಡಿ, ಐದು ಕುಂಚಿಗೆ, ಅಂಗಿ, ಹಾಲ್ಗಡಗ, ಉಂಗುರ, ಉಡುದಾರ, ಬೆಳ್ಳಿಯ ಚೈನು ಹಾಗೂ ಬುತ್ತಿ ನೀಡಿ

ಮಗುವಿನ ಸೋದರಮಾವ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ತೊಟ್ಟಿಲ ಪೂಜೆ ಮಾಡಿ ತಮ್ಮ ಸಮುದಾಯದ ದೇವ ಅಥವಾ ದೇವತೆಗೆ ಎಣ್ಣೆ ದೀಪ ಹಚ್ಚಿ ನಮಸ್ಕರಿಸಿ ಮನೆಯಲ್ಲಿ ತೊಟ್ಟಲು ಕಟ್ಟುತ್ತಾರೆ. ಬೀಗರು ಪುನಃ ಮರಳಿ ಅವರ ಊರಿಗೆ ಬರುವಾಗ ಅವನಿಗೆ ತುಂಬಾ ಆಯೇರಿ (ಕಾಣಿಕೆ) ಬಟ್ಟೆಯನ್ನು ಕೊಟ್ಟು ಕಳಿಸುತ್ತಾರೆ.

೪.೩.೭ ಜವಳ ತೆಗಿಸುವುದು

ಮಗುವಿಗೆ ಮೂರು, ಐದು, ಒಂಭತ್ತು ಇಲ್ಲವೆ ಹನ್ನೊಂದನೆಯ ತಿಂಗಳಿನಲ್ಲಿ, ಅನುಕೂಲವಿಲ್ಲದವರು ಮೂರು ಇಲ್ಲವೆ ಐದು ವರ್ಷದೊಳಗೆ ಜವಳ ತೆಗಿಸುತ್ತಾರೆ. ತಂದೆ ತಾಯಿ ಇಲ್ಲವೆ ಮನೆ ಹಿರಿಯರು ತಾವು ಹರಕೆ ಬೇಡಿಕೊಂಡ ಮನೆ ದೇವರಿಗಾಗಲಿ, ಹರಕೆ ಹೊತ್ತ ದೇವರಿಗಾಗಲಿ ಹಣ್ಣು ಕೊಬ್ಬರಿ, ಉತ್ತತ್ತಿ ಅರಿಶಿಣ, ಎಲೆ ಅಡಿಕೆ ಅಕ್ಕಿಯನ್ನು ದೇವರಿಗೆ ಉಡಿ ತುಂಬಿ, ಕರಿ ಕಂಬಳಿಯಿಂದ ಗದ್ದಿಗೆ ಮಾಡಿ ಚುರುಮುರಿ ಹಾಸಕ್ಕಿ ಹೊಯ್ದು ಅದರ ಮೇಲೆ ಮಗುವನ್ನು ಕೂಡಿಸಿ ಸೋದರ ಮಾವ 'ಎಲೆಗತ್ತರಿ' ಮುಟ್ಟಿಸಿದರೆ ಜವಳ ತೆಗೆದಂತಾಗಿ ಮಗುವಿಗೆ ಹೊಸ ಬಟ್ಟೆ ಹಾಕುತ್ತಾರೆ. ಕಾರ್ಯಕ್ರಮಕ್ಕೆ ಬಂದ ನೆಂಟರು ಆಯೇರು ಮಾಡುತ್ತಾರೆ. ಜವಳ ತೆಗೆದ ಸೋದರಮಾವನಿಗೂ ಹಣ ಇಲ್ಲವೆ ಬಟ್ಟೆ ಕೊಡುತ್ತಾರೆ. ಹೋದವರಿಗೆಲ್ಲ ಊಟದ ಏರ್ಪಾಡು ಮಾಡಿ ನಂತರ ತಮ್ಮ ತಮ್ಮ ಗ್ರಾಮಗಳಿಗೆ ಹೋಗುತ್ತಾರೆ.

೪.೩.೮ ಹಲ್ಲು ಬರುವ ಸಂದರ್ಭ

ಮಗುವಿಗೆ ಏಳರಿಂದ ಹದಿನಾಲ್ಕು ತಿಂಗಳವರೆಗೆ ಒಸಡು ಉಬ್ಬಿ ಮೇಲಿನ ಹಲ್ಲು ಬಂದದ್ದು ಕಾಣಿಸಿಕೊಂಡರೆ ಸೋದರ ಮಾವನಿಗೆ ದೋಷ ಉಂಟಾಗುವುದೆಂಬ ನಂಬಿಕೆಯಿದೆ. ಅದರ ನಿವಾರಣೆಗಾಗಿ ಸೋದರ ಮಾವ ಬೆಳ್ಳಿಯ ಬಟ್ಟಲು ತಂದು ಅದರಲ್ಲಿ ಕೊಬ್ಬರಿ ಎಣ್ಣೆ ಹಾಕಿ ಹೊಸ್ತಿಲ ಮೇಲೆ ಮಗುವನ್ನು ಕೂಡಿಸಿ ಆ ಎಣ್ಣೆಯಲ್ಲಿ ಮಗುವಿನ ಮುಖದ ಪ್ರತಿಬಿಂಬ ನೋಡಬೇಕು. ಆಗ ಮಾತ್ರ ಸೋದರಮಾವನಿಗೆ ತಗುಲಿದ ದೋಷ ಪರಿಹಾರವಾದಂತೆ ಎಂದು ನಂಬಲಾಗುತ್ತದೆ.

೪.೪ ಋತುಮತಿ ಕಾರ್ಯ

ಪ್ರಕೃತಿಯ ನಿಯಮದಂತೆ ಹೆಣ್ಣು ಸಹಜವಾಗಿ ೧೨-೧೪ನೇ ವಯಸ್ಸಿನಲ್ಲಿ ಮೈನೆರೆಯುತ್ತಾಳೆ. ಸಂಕೋಚ, ನಾಚಿಕೆ, ವಿಸ್ಮಯಗಳಿಂದ ಮೌನವಾಗಿ ಪರಿತಪಿಸುತ್ತ ನಿಂತ ಹೆಣ್ಣುಮಗಳ ಮುಖಚರ್ಯದಿಂದ ಅವಳು ಮೈನೆರೆದಿದ್ದಾಳೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಇದನ್ನೆ ಋತುಮತಿಯಾದಳು, ದೊಡ್ಡವಳಾದಳು, ಮೈನೆರೆದಳು ಎಂದು ಕರೆಯುತ್ತಾರೆ. ಋತುಮತಿಯಾದ ಹೆಣ್ಣುಮಗಳಿಗೆ ಆ ಸಮಯದಲ್ಲಿ ಅವಳ ಸೋದರತ್ತೆ ಬಿಸಿನೀರಿನ ಸ್ನಾನ ಮಾಡಿಸುತ್ತಾಳೆ. ನಂತರ ಅವಳನ್ನು ಮನೆಯ ಒಂದು ಮೂಲೆಯಲ್ಲಿ ಕೂಡಿಸಲಾಗುತ್ತದೆ. ಮೈನರೆದ ಹೆಣ್ಣಿಗೆ ತಿನ್ನಲು ಕೊಬ್ಬರಿ ಬೆಲ್ಲ ಕೊಡುತ್ತಾರೆ. ಇನ್ನುಮುಂದೆ

ಅವಳು ಮನೆಯ ಹೊರಗಡೆ ಹೋಗುವಂತಿಲ್ಲ. ಒಂದು ವೇಳೆ ಹೋಗುವ ಪ್ರಸಂಗ ಬಂದರೆ ಮೈತುಂಬಾ ಬಟ್ಟೆ ಹೊದ್ದುಕೊಂಡು ಹೋಗಬೇಕು. ಇದಾದ ಬಳಿಕ ಸೋಬಾನ ಕಾರ್ಯವನ್ನು ಒಂಬತ್ತು ಇಲ್ಲವೆ ಹನ್ನೊಂದನೇ ದಿನಕ್ಕೆ ಮಾಡುತ್ತಾರೆ. ಪ್ರತಿನಿತ್ಯ ಮುಂಜಾನೆ, ಸಂಜೆ ಸ್ನಾನ ಮಾಡಿಸಿ ಪೌಷ್ಟಿಕ ಆಹಾರವನ್ನು ಸೇವಿಸಲು ಕೊಡುತ್ತಾರೆ. ಅವಳ ಕೈಯಲ್ಲಿ ಅಥವಾ ಹತ್ತಿರ ಒಂದು ನಿಂಬೆಯ ಹಣ್ಣನ್ನು ಚಾಕು ಇಲ್ಲವೆ ಕುಡುಗೋಲಿಗೆ ಚುಚ್ಚಿ ಇಟ್ಟಿರುತ್ತಾರೆ. ಕೊಬ್ಬರಿ ಬಟ್ಟಲು, ಅರಿಶಿನ ಕೊಂಬು, ಬೆಳ್ಳುಳ್ಳಿ, ಬೆಲ್ಲ, ಇವೆಲ್ಲವನ್ನೂ ಹುಡುಗಿಯ ಕೈಯಲ್ಲಿ ಕೊಟ್ಟಿರುತ್ತಾರೆ.

ಸೋಬಾನ ಕಾರ್ಯ ಮಾಡುವ ಸಲುವಾಗಿ ತಮ್ಮ ಬಂಧು ಬಳಗದವರನ್ನು ಹೇಳಿ ಕಳಿಸುವರು. ಸಮುದಾಯದ ಬಂಧುಗಳು ಸಿಹಿ-ತಿಂಡಿ, ತಿನಿಸು, ವಿವಿಧ ತೆರನಾದ ಅಡುಗೆಗಳನ್ನು ಮಾಡಿಕೊಡುತ್ತಾರೆ. ಅಲ್ಲದೆ ಮೈ ನೆರೆದ ಹುಡುಗಿಗೆ ಸೀರೆ ಕುಪ್ಪಸ, ಬೆಳ್ಳಿ ಬಂಗಾರದ ಆಭರಣ ಕೊಡುವರು. ಸೋಬಾನ ಕಾರ್ಯದ ದಿನ ಒಂಬತ್ತು ತರಹದ ಕಾಳು, ತಾಮ್ರದ ಗಿಂಡಿ, ತೆಗೆದುಕೊಂಡು ಹನುಮಂತ ದೇವರ ಗುಡಿಗೆ ಹೋಗಿ ಹಣ್ಣು, ಕಾಯಿ, ಕರ್ಪೂರ ಕೊಟ್ಟು, ಆರತಿ ಬೆಳಗಿ ತಮ್ಮ ಮನೆಗೆ ಕರೆದುಕೊಂಡು ಬರುತ್ತಾರೆ. ಹುಡುಗಿಯ ಕೈಯಲ್ಲಿ ಕುಡುಗೋಲಿನಿಂದ ಐದು ಸಲ ಹಸಿರು ಗಿಡ ಮುಟ್ಟಿಸಿ ಕೊಬ್ಬರಿ, ಬೆಲ್ಲ, ಬೆಳ್ಳುಳ್ಳಿ, ಅರಿಶಿನ ಕೊಂಬನ್ನು ಗಿಡಕ್ಕೆ ಕಟ್ಟಿ ಬರುತ್ತಾರೆ. ಅಂದು ಸಾಯಂಕಾಲ ಹುಡುಗಿಯನ್ನು ಹಸಿರುಬಳೆ, ಹೊಸ ಸೀರೆ, ಬೆಳ್ಳಿಬಂಗಾರದ ಆಭರಣಗಳೊಂದಿಗೆ ಅಲಂಕರಿಸಿ ಕೂಡಿಸಲಾಗುವುದು. ಸಮುದಾಯದ ಎಲ್ಲ ಜನರನ್ನು ಕರೆಸಿ ಹೆಣ್ಣುಮಕ್ಕಳು ಸೋಬಾನೆ ಕಾರ್ಯವನ್ನು ಸೋಬಾನ ಪದ ಹಾಡಿ ವಿಶೇಷವಾಗಿ ಸಂಭ್ರಮಿಸುವರು.

'ಸುಕರಾದಿ ನಂದಲಿ ಸತಿಯು ಮೈನೆರದಾಳ
ಹೋಗಾ ಹಾರೂನ ಕರಸ್ಯಾರ ಸೋಬಾನ
ಹೋಗಾನೇ ಹಾರೂನ ತಾ ಕೇಳ್ಯಾರ
ಸೊಸಿಯ ಮೈನೆರೆದ ದೊನ ಹೇಳರಿ ಸೋಬಾನ ॥'

'ಮಂಗಳಾರ ದಿನದಲ್ಲಿ ಮಗಳು ಮೈನೆರದಾಳ
ಹೋಗಾ ದೇಸಿಗನ ಕರಸ್ಯಾರ ಸೋಬಾನ
ಹೋಗಾನೇ ದೇಸಿಗನ ಕರೆಸಿ ತಾ ಕೇಳ್ಯಾರ
ಮಗಳ ಮೈನೆರೆದ ದಿನ ಹೇಳರಿ ಸೋಬಾನ ॥'

'ಮಗಳನೇ ಮೈನೆರೆದ ದಿನ ಹೇಳರಿ ಗೌರಿಯ
ಬೆರಳಿಗ ಭಂಗಾರ ಇಡಕುಡರಿ ಸೋಬಾನ ॥
ಹರಗಿದ ಹೊಲದಾಗ ಹವಳ ಸೂರ್ಯಾಡಿದಂಗ
ಹರದಿ ನಿನ್ನಳಿಯ ಬರತಾರ ಸೋಬಾನ

ಹರದಿನೇ ನಿನ್ನಯ ಬರತಾರ ಗಂಗಮ್ಮ
ಖ್ಯಾದಿಗಿ ಮುಡಿಸ ಮಗಳಿಗೆ ಸೋಬಾನ ॥[೬]

ಸೋಬಾನ ಕಾರ್ಯಕ್ರಮ ಮುಗಿದ ನಂತರ ಸಮುದಾಯದ ಎಲ್ಲ ಜನರಿಗೂ ಊಟ ಬಡಿಸಲಾಗುತ್ತದೆ. ಹುಡುಗಿಗೆ ಗಂಡು ನಿಶ್ಚಿತವಾಗಿದ್ದರೆ ಹುಡುಗನನ್ನು ಅವಳೊಂದಿಗೆ ಕೂಡಿಸಿ ಆಯೇರಿ ಮಾಡಿ ಬಂಗಾರದ ಉಂಗುರ ಹಾಕುವ ಪದ್ಧತಿಯಿದೆ.

೪.೫ ಮರಣ ಅಥವಾ ಶವಸಂಸ್ಕಾರ

ಜೀವನದ ಚಕ್ರದಲ್ಲಿ ಹುಟ್ಟಿದ ಪ್ರತಿಯೊಂದೂ ಜೀವಿ ಸಾಯಲೇಬೇಕು. ಪ್ರತಿಯೊಬ್ಬ ಮಾನವ ಜೀವಿ ಹುಟ್ಟಿನಿಂದ ಸಾಯುವವರೆಗೂ ಅನೇಕ ಸಂಸ್ಕಾರಗಳನ್ನು ಹೊಂದುತ್ತಾನೆ. ಸಮಾಜದ ಪ್ರತಿಯೊಬ್ಬ ಸದಸ್ಯನೂ ತನ್ನ ಕುಟುಂಬದೊಂದಿಗೆ ವಾಸಿಸುತ್ತಾನೆ. ಸಮಾಜದೊಂದಿಗೆ ಸಂಬಂಧವಿಟ್ಟು ಕೊಂಡಿರುತ್ತಾನೆ. ಈ ಎಲ್ಲ ಸಂಪರ್ಕ, ಸಂಬಂಧಗಳು ಕೊನೆಗೊಳ್ಳುವುದು ಅವನ ಮರಣದ ನಂತರವೇ ಆಗಿರುತ್ತದೆ. ಹಾಗಾಗಿ ಮನುಷ್ಯ ಜೀವನದಲ್ಲಿ ಕರೆಯದೆ ಬರುವ, ಆಕಸ್ಮಿಕವಾಗಿ ಎದುರಾಗುವ, ಬೇಕೆಂದಾಗ ಬಾರದೆ ಬದುಕಬೇಕೆಂದಾಗ ಕಾಡಿಸಿ ಸಾವು ಎದುರಾಗುತ್ತದೆ.

ಮನುಷ್ಯ ಸಾಯುವ ಸ್ಥಿತಿಯಲ್ಲಿ ಉಸಿರಾಟದ ತೊಂದರೆ ತೀವ್ರವಾಗುತ್ತದೆ. ಕಣ್ಣುಗಳು ಆಕಾಶವನ್ನೇ ನೋಡುತ್ತಿರುತ್ತವೆ. ಅಂಥ ಕೆಲವೇ ಕ್ಷಣಗಳಲ್ಲಿ ಪ್ರಾಣ ಪಕ್ಷಿ ಹಾರಿ ಹೋಗುತ್ತದೆ. ಸತ್ತನಂತರ ಆ ದೇಹಕ್ಕೆ ಸ್ನಾನ ಮಾಡಿಸಿ, ಕೈ ಕಾಲು ಕಟ್ಟಿ ತಲೆಯನ್ನು ನೇರವಾಗಿಟ್ಟು ಮಲಗಿಸುತ್ತಾರೆ. ನಂತರ ಸುದ್ದಿ ತಿಳಿಸಲು ವ್ಯಕ್ತಿಗಳನ್ನು ಕಳಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ದೂರವಾಣಿ ಅಥವಾ ಮೊಬಾಯಿಲ್ ಮುಖಾಂತರ ಸುದ್ದಿ ಮುಟ್ಟಿಸಲಾಗುತ್ತದೆ. ಹಿಂದೆ ಸಂಪರ್ಕವಿಲ್ಲದ ವೇಳೆಯಲ್ಲಿ ಸಂಬಂಧಿಕರ ಪ್ರತಿ ಗ್ರಾಮಕ್ಕೆ ಕಾಲ್ನಡಿಗೆಯ ಮೂಲಕ ಸುದ್ದಿ ತಿಳಿಸುವ ಪರಿಪಾಠವಿತ್ತು. ಆದರೆ ಇಂದು ಆ ಸನ್ನಿವೇಶ ಬದಲಾಗಿದೆ. ಹೆಣವನ್ನು ಒಂದು ಅಥವಾ ಎರಡು ದಿನ ಮಾತ್ರ ಇಟ್ಟುಕೊಳ್ಳಲಾಗುತ್ತದೆ. ಅದಕ್ಕಿಂತ ಹೆಚ್ಚು ದಿನಗಳಾದರೆ ದೇಹ ಕೊಳತು ದುರ್ವಾಸನೆ ಬರುವ ಸಂದರ್ಭಗಳಿರುತ್ತದೆ. ಅದರಿಂದ ಸತ್ತ ದೇಹವನ್ನು ಎರಡು ದಿನಕ್ಕಿಂತ ಹೆಚ್ಚಾಗಿ ಇಟ್ಟುಕೊಳ್ಳುವುದಿಲ್ಲ. ಸತ್ತ ಎರಡು ದಿನಗಳೊಳಗೆ ಸಂಬಂಧಿಸಿದ ಬಂಧು ಬಾಂಧವರನ್ನೆಲ್ಲ ಕರೆಸಿಕೊಳ್ಳಲಾಗುತ್ತದೆ. ನಂತರ ಶವವನ್ನು ಚಟ್ಟದ ಮೇಲೆ ಸ್ಮಶಾನಕ್ಕೆ ಕೊಂಡೊಯ್ಯಲಾಗುತ್ತದೆ.

ಸತ್ತ ವ್ಯಕ್ತಿ ಅವಿವಾಹಿತನಾಗಿದ್ದರೆ ಪೂಜೆ ಮಾಡಿ ನಂತರ ಕುಣಿಯಲ್ಲಿ ಬೆತ್ತಲೆಮಾಡಿ ಬೋರಲು ಮಲಗಿಸಿ ಹೂಳುವ ಕ್ರಮ ಅನುಸರಿಸಲಾಗುತ್ತದೆ. ವಿವಾಹಿತನಾಗಿದ್ದರೆ ಬಟ್ಟೆಯೊಂದಿಗೆ ಶಾಸ್ತ್ರೋಕ್ತವಾಗಿ ಕುಣಿಯಲ್ಲಿಟ್ಟು ಸಂಸ್ಕಾರ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಸತ್ತ ವ್ಯಕ್ತಿಯ ಕುರಿತಾಗಿ ಹೆಂಗಸರು ಗಂಡಸರು ಗುಣಗಾನ ಮಾಡಿಕೊಂಡು ಅಳುತ್ತಿರುತ್ತಾರೆ. ಶವಸಂಸ್ಕಾರದ ರೀತಿ ಕೆಲವೊಮ್ಮೆ ಭಿನ್ನವಾಗಿಯೂ ಇರುತ್ತದೆ. ತೊನ್ನು (ಬಿಳಿಮಚ್ಚೆ) ಹತ್ತಿದವರು ಸತ್ತರೆ, ಅಪಶಕುನಗಳು ಬರುತ್ತವೆ ಎಂದು ಅಂತಹ ಶವವನ್ನು ಸುಡುತ್ತಾರೆ.

ಶವಸಂಸ್ಕಾರ ಮುಗಿದ ನಂತರ ಸತ್ತವನ ಪಿಂಡ ಪ್ರದಾನ ಪದ್ಧತಿ ಮೂರು ದಿನಗಳಲ್ಲಿ ನಡೆಯುತ್ತದೆ. ಅಂದು ಪತ್ನಿಯ ಕೂದಲು ತೆಗೆದು ಸತ್ತವನ ಕುಣಿ ಹತ್ತಿರ ಪಿಂಡ ಇಡಲಾಗುತ್ತದೆ. ಅದನ್ನು ಕಾಗೆ ಮುಟ್ಟಬೇಕು. ಕಾಗೆ ಆ ಪಿಂಡವನ್ನು ಮುಟ್ಟಲಿಲ್ಲವೆಂದರೆ ಸತ್ತವನ ಯಾವುದೋ ಒಂದು ಆಸೆ

ಆಕಾಂಕ್ಷೆ ನೆರವೇರಿಲ್ಲವೆಂದು ನಂಬಲಾಗುತ್ತದೆ. ಸತ್ತವನ ಆಸೆಯನ್ನು ನೆರವೇರಿಸಲಾಗುವುದೆಂದು ಪಿಂಡ ಹೊತ್ತವನು ಕೇಳಿಕೊಂಡಾಗ ಸತ್ತವನ ಆತ್ಮ ಸಮಾಧಾನವಾಗುತ್ತದೆ. ಆಗ ಕಾಗೆ ಅವನ ಪಿಂಡವನ್ನು ಮುಟ್ಟುತ್ತದೆ ಅಥವಾ ತಿನ್ನುತ್ತದೆ. ಅಲ್ಲಿಗೆ ಅವನಿಂದ ಶನಿಕಾಟವೂ ತೊಲಗುತ್ತದೆ ಎಂಬ ನಂಬಿಕೆಯಿದೆ. ಸಂಪ್ರದಾಯ ವಿಧಿಯ ಪ್ರಕಾರ ಸತ್ತ ದಿನದಿಂದ ೯ ಅಥವಾ ೧೬ ದಿನಗಳೊಳಗಾಗಿ ಅವನ ಫೋಟೋದೊಂದಿಗೆ ದಿವಸದ ಕಾರ್ಯ ಮಾಡಲಾಗುತ್ತದೆ. ಆ ಮೂಲಕ ಸತ್ತವನ ಆತ್ಮಕ್ಕೆ ಶಾಂತಿಯೂ ಮುಕ್ತಿಯೂ ದೊರಕುತ್ತದೆ ಎಂದು ನಂಬಲಾಗಿದೆ. ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಈ ಸಮುದಾಯಕ್ಕೆ ಸ್ಮಶಾನ ಭೂಮಿ ಇಲ್ಲ ಇವರಿಗಾಗಿಯೇ ಪ್ರತ್ಯೇಕವಾದ ಸ್ಮಶಾನ ಭೂಮಿ ಎಲ್ಲಯೂ ಕಂಡು ಬರುವುದಿಲ್ಲಾ. ಕೆಲವು ಗ್ರಾಮಗಳಲ್ಲಿ ಅಸ್ಪ್ರಶ್ಯ ಸಮುದಾಯಗಳನ್ನು ಕೂಡಿಸಿ ಸ್ಮಶಾನ ಭೂಮಿ ಕೊಡಲಾಗಿದೆ. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಾರ್ವಜನಿಕ ಚಿತಾಗಾರಗಳ ಸೌಲಭ್ಯಗಳಿರುವದರಿಂದ ಸ್ಮಶಾನ ಭೂಮಿ ಸಮಸ್ಯೆ ಅಷ್ಟೊಂದು ಕಂಡು ಬರುವದಿಲ್ಲ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇವರು ನದಿ, ಹಳ್ಳಗಳ ದಂಡೆಯಲ್ಲಿ ಇಲ್ಲವೆ ಗ್ರಾಮದಿಂದ ಹೊಲಗಳಿಗೆ ಹೋಗುವ ದೊಡ್ಡ ರಸ್ತೆಯಲ್ಲಿ ಶವ ಸಂಸ್ಕಾರ ಮಾಡುವದು ಕಂಡು ಬರುತ್ತದೆ. ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲದೆ ಇರುವದರಿಂದ ಇವರ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ಸಮಸ್ಯೆಯ ಸಂಬಂಧ ಪಟ್ಟಂತೆ ಶಾಸಕರಿಗೆ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು ಯಾವುದೇ ಪ್ರಯೋಜನವಾಗಿಲ್ಲ. ಅವರು ಮನವಿಯನ್ನು ಸ್ವೀಕರಿಸಿದ ನಂತರ ಅವರಿಂದ ಬರುವ ಉತ್ತರ ಏನೆಂದರೆ ಸರಕಾರಕ್ಕೆ ಭೂಮಿ ನೀವು ಕೊಡಿ ಎಂದು ಕೇಳುತ್ತಾರೆ. ಆದರೆ ಛಲವಾದಿ ಸಮುದಾಯಗಳಿಗೆ ಭೂಮಿ ಸೀಮಿಗಳು ಇಲ್ಲದೆ ಇರುವದರಿಂದ ಹೇಗೆ ಸಾಧ್ಯವಾಗುತ್ತದೆ? ಪ್ರತಿಯೊಂದು ಗ್ರಾಮಗಳಲ್ಲಿ ಬೂ ಒಡೆಯರು ಮೇಲ್ಜಾತಿಯ ಸಮುದಾಯದವರು ಸರಕಾರಕ್ಕೆ ಭೂಮಿಯನ್ನು ಕೊಡಲು ಮುಂದೆ ಬರುವದಿಲ್ಲ. ಹೀಗಾಗಿ ಸ್ಮಶಾನ ಭೂಮಿ ಸಮಸ್ಯೆ ಹೆಚ್ಚಾಗಿ ಛಲವಾದಿ ಸಮುದಾಯದಲ್ಲಿ ಕಂಡುಬರುತ್ತಿದೆ.

೪.೬ ಊಟೋಪಚಾರಗಳು

ಛಲವಾದಿ ಸಮುದಾಯದಲ್ಲಿ ಸಾಮಾನ್ಯವಾಗಿ ಸಸ್ಯಹಾರ ಮತ್ತು ಮಾಂಸಾಹಾರದ ಬಳಕೆಯಿದೆ. ಕೆಲವೊಂದು ಕುಟುಂಬಗಳಲ್ಲಿ ಮಾಂಸ ತಿನ್ನುವುದಿಲ್ಲ. ಕೆಲವರು ಕುರಿ, ಕೋಳಿ, ಕೋಣ, ಎಮ್ಮೆ, ಆಕಳು, ಎತ್ತು, ಮೊಲ, ಕೌಜುಗ, ಉಡ, ಮೀನು ಹೀಗೆ ಅನೇಕ ಪ್ರಾಣಿ ಪಕ್ಷಿಗಳನ್ನು ತಂದು ತಿನ್ನುವುದಾಗಿ ಹೇಳಿಕೊಳ್ಳುತ್ತಾರೆ. ಇದಲ್ಲದೆ ಬಿಳಿ ಜೋಳ, ಮಾಲದಂಡೆ ಜೋಳ, ಗೋಧಿ, ರಾಗಿ, ಹಲಸಂದಿ, ಮಡಕೆ, ತರಕಾರಿ, ಕಾಯಿಪಲ್ಲೆ, ಸೊಪ್ಪು, ಮುಂತಾದವು. ವಿಶೇಷ ಹಬ್ಬ ಹರಿದಿನಗಳಲ್ಲಿ ಹೋಳಿಗೆ, ಗೋಧಿಹುಗ್ಗಿ, ಖರ್ಚಿಕಾಯಿ, ಶ್ಯಾವಗಿ, ಗುಳಗಿ ಹುಗ್ಗಿ, ತುಪ್ಪ, ಚಪಾತಿ, ಅನ್ನಸಾರು, ಕುರಿ–ಕೋಳಿ, ಮೀನು ಉಪಯೋಗಿಸುತ್ತಾರೆ. ಕೆಲವೊಂದು ಗ್ರಾಮಗಳಲ್ಲಿ ಈಗಲೂ ಶಕ್ತಿದೇವತೆಗಳ ಜಾತ್ರೆಗಳಲ್ಲಿ ಕೋಣ ಕಡಿದು ಅಡುಗೆ ಮಾಡಿ ಬಂಧು ಬಾಂದವರಿಗೆ ಊಟ ಮಾಡಿಸುತ್ತಾರೆ.

೪.೬.೧ ಪಾನೀಯ

ಭಲವಾದಿ ಜನರು ಮುಂಜಾನೆ ವೇಳೆಯಲ್ಲಿ ಚಹಾ ಕುಡಿಯುವುದು, ಕೆಲವು ಕುಟುಂಬಗಳಲ್ಲಿ ಪಶುಗಳನ್ನು ಸಾಕಾಣಿಕೆ ಮಾಡಿಕೊಂಡು ಹಾಲು, ಮಜ್ಜಿಗೆ ಸ್ವೀಕರಿಸುವುದು ರೂಢಿಯಲ್ಲಿದೆ. ಋತುಮಾನವನ್ನು ಅನುಸರಿಸಿ ವಿವಿಧ ಹಣ್ಣಿನ ರಸ ಕುಡಿಯುತ್ತಾರೆ. ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಮತ್ತು ಸಾವು ನೋವುಗಳ ಸಂದರ್ಭಗಳಲ್ಲಿ ಮತ್ತು ವಿಶೇಷ ಕಾರ್ಯಕ್ರಮಗಳಲ್ಲಿ ಮದ್ಯಪಾನ ಸೇವನೆ ಇದೆ.

೪.೭ ಉಡುಗೆ ತೊಡುಗೆಗಳು

ಭಲವಾದಿ ಸ್ತ್ರೀ-ಪುರುಷರ ಉಡುಗೆ ತೊಡುಗೆಗಳು ಮೇಲ್ಜಾತಿಯವರ ಉಡುಗೆಗಳಂತೆ ಕಂಡು ಬರುತ್ತವೆ. ಹೆಂಗಸರು ಸೀರೆ, ಕುಪ್ಪಸ, ಜಂಪರ್, ಪತ್ತಲ; ಮಕ್ಕಳು ನಿಲುವಂಗಿ, ನೈಟಿ, ಪೆಟಿಕೋಟ್, ಲಂಗಾ-ಬ್ಲೌಸ್, ಚಡ್ಡಿ-ಅಂಗಿ; ಗಂಡಸರು ದೋತರ, ಅಂಗಿ, ಲಪಾಟಿ, ಪ್ಯಾಂಟು, ಟೊಪ್ಪಿಗೆ, ಟೀಷರಟ, ಪಟಕಾ, ಟವೆಲ್, ಒಳಉಡುಪು ಮುಂತಾದವನ್ನು ತೊಡುತ್ತಾರೆ. ಹಿಂದಿನ ಕಾಲದಲ್ಲಿ ಭಲವಾದಿ ಜನರು ಮೇಲ್ಜಾತಿಯವರು ಉಟ್ಟ ಬಟ್ಟೆಗಳನ್ನು ಬಳಸುತ್ತಿದ್ದರಂತೆ. ಇಂದು ಕಾಲ ಬದಲಾಗಿದೆ ಆದರೂ ಕಡುಬಡವರು ಈ ರೂಢಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಕಾಲ ಬದಲಾದಂತೆ ಇವರು ವಿವಿಧ ರೀತಿಯ ಫ್ಯಾಶನ್ ಉಡುಪುಗಳನ್ನು ಧರಿಸುತ್ತಿದ್ದಾರೆ. ಅದಕ್ಕಾಗಿ ಜನಪದ ಹಾಡುಗಾರ್ತಿಯೊಬ್ಬರು ವಡವೆ ವಸ್ತ್ರದ ಬಗ್ಗೆ ಹೀಗೆ ಹೇಳುತ್ತಾರೆ.

"ಉಟ್ಟ್ಯಾರ ಉಡಬೇಕ ರಗತರಾಜಗೊಳಿಸೀರಿ
ಸೀರ ಬಂಗಾರ ತೆಲಾಲಿವಾಲಿ ಇಟ್ಟಗೊಂಡ
ವಿಠ್ಠಲಗ ಹೋಗಿ ಬರಬೇಕಾ"[೭]

ಅವರಲ್ಲಿ ಹಿಂದಿದ್ದ ಸಾಮಾಜಿಕ ನಿರ್ಬಂಧನೆಗಳು ಈಗ ಇಲ್ಲ. ಅವರು ಇಂದು ಬೆಲೆ ಬಾಳುವ ವಸ್ತ್ರಗಳನ್ನು ಧರಿಸುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಭಲವಾದಿ ಸಮುದಾಯಕ್ಕೆ ಹಿತ್ತಾಳೆ ವಡವೆಗಳೆ ಚಿನ್ನದ ವಡವೆಗಳಾಗಿತ್ತು. ಅವರಿಗೆ ಪೊನ್ನ (ಚಿನ್ನ) ಲಭ್ಯವಾದರೆ ಬಹಳಷ್ಟು ಸಂತೋಷ ಪಡುತ್ತಿದ್ದರೆಂದು ಎಂ. ಚಿದಾನಂದಮೂರ್ತಿ ಹೇಳಿದ್ದಾರೆ. ಅವರವರ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಉಡುಗೆ-ತೊಡುಗೆ ಧರಿಸುವರು.

೪.೮ ವಾಸಸ್ಥಾನ/ನೆಲೆ :

ಭಲವಾದಿಯ ಜನ ನೆಲೆಸಿರುವ ವಾಸಸ್ಥಾನವನ್ನು 'ಭಲವಾದಿ ಓಣಿ', 'ಭಲವಾದಿ ಕೇರಿ', 'ಅಂಬೇಡ್ಕರ್‌ನಗರ', 'ಭೀಮನಗರ', 'ಸಿದ್ಧಾರ್ಥನಗರ' ಹಾಗೂ 'ಅಶೋಕನಗರ' ಮುಂತಾದ

ಹೆಸರುಗಳಿಂದ ಕರೆಯಲಾಗುತ್ತಿದೆ. ನಾಗವರ್ಮ ತನ್ನ ಕರ್ನಾಟಕ ಕಾದಂಬರಿ ಕೃತಿಯಲ್ಲಿ ಹೊಲಗೇರಿಯನ್ನು 'ಪೊಲೆವೊಟ್ಟು ಪಂಕಣ ಮಾತಂಗ ಪಳ್ಳಿ' ಎಂದು ಕರೆದಿದ್ದಾನೆ. ಗ್ರಾಮದ ದಕ್ಷಿಣ ಭಾಗಕ್ಕಿರುವ ಅದು ನರಕದ ನೆಲೆ, ಹೇಸಿಗೆಯ ಆಗರ, ಅಲ್ಲಿ ಹೊಲಸು ತುಂಬಿದ ಗಾಳಿ ಇರುವುದು ಎನ್ನುತ್ತಾನೆ. 'ವೀರೇಶ ಚರಿತೆ'ಯ ಪ್ರಕಾರ ಅಸ್ತ್ರ ಮಸೆ, ಪ್ರಾಣಿಯನ್ನು ಕೊಲ್ಲು, ಮಾಂಸ ತೆಗೆ, ರಕ್ತ ಹರಿಸು ಮುಂತಾದ ಮಾತುಗಳಿಂದ ಛಲವಾದಿ ಓಣಿ ತುಂಬಿರುತ್ತದೆ. ಹೊರಗೆ ಹಸಿತೊಗಲು ಒಣಗಲು ಹಾಕಿದ ನಾನಾ ಪ್ರಾಣಿಗಳ ಸದ್ದು ಅಲ್ಲಿ ಕೇಳುತ್ತಿರುತ್ತದೆ. ಪ್ರಾಣಿಗಳನ್ನು ಕೊಂದು ಸಿಡಿದ ರಕ್ತ ಚೆಲ್ಲಾಡಿರುತ್ತದೆ. ಅಲ್ಲಲ್ಲಿಂಟು ಕರುಳ ಎಲುಬಿನ ತಡಿಕೆ, ಚರ್ಮ ಹೊದಿಸಿದ ಮಂಚ, ನರಕಪಾಲದಲ್ಲಿ ಹೆಂಡದ ಸೇವನೆಯಿಂದ ಹೊಲಗೇರಿಯಿರುವುದೆಂದು ಬಣ್ಣಿತವಾಗಿದೆ. ಆದರೆ ಆಧುನಿಕತೆಯಿಂದಾಗಿ ಇಂದು ಮೇಲ್ಜಾತಿಗಳ ಓಣಿಗಳ ತರಹದ ಛಲವಾದಿಯವರ ಕೇರಿಗಳು ಕಂಡುಬರುತ್ತವೆ. ಹಿಂದಿನ ಗುಡಿಸಲು ಮನೆಗಳು ಮರೆಯಾಗಿ ಹಂಚಿನ, ತಗಡಿನ ಮನೆಗಳು ಇಂದು ಗೋಚರಿಸಿವೆ. ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆದಷ್ಟು ಅಂದವಾದ ಮನೆಗಳನ್ನು ಕಟ್ಟಿಕೊಂಡು ವಾಸಿಸುವದನ್ನು ಕಾಣಬಹುದು.


ಕೋಷ್ಟಕ ೪.೪ ನಿವೇಶನ, ಸ್ವಂತ ನಿವೇಶನ ಹಾಗೂ ಸರಕಾರಿ ನಿವೇಶನ ಹೊಂದಿರುವ ಪ್ರತಿಶತ ಕುಟುಂಬಗಳ ತಾಲೂಕಾವಾರು ಹಂಚಿಕೆ


ತಾಲೂಕು	ನಿವೇಶನ			ಸ್ವಂತ ನಿವೇಶನ			ಸರಕಾರಿ ನಿವೇಶನ	
	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ
ಗದಗ	೪೭೯	೩೯೯	೮೭೮	೩೬೦	೧೧೯	೪೭೯	೧೨೨	೩೫೭
	೫೪.೬	೪೫.೪	೧೦೦.೦	೭೫.೨	೨೪.೮	೧೦೦.೦	೨೫.೫	೭೪.೫
ರೋಣ	೬೪೨	೨೩೧	೮೭೩	೪೬೧	೧೮೧	೬೪೨	೧೯೦	೪೫೨
	೭೩.೫	೨೬.೫	೧೦೦.೦	೭೧.೮	೨೮.೨	೧೦೦.೦	೨೯.೬	೭೦.೪
ನರಗುಂದ	೩೧೧	೫೫	೩೬೬	೨೧೭	೯೪	೩೧೧	೯೫	೨೧೬
	೮೫.೦	೧೫.೦	೧೦೦.೦	೬೯.೮	೩೦.೨	೧೦೦.೦	೩೦.೫	೬೯.೫
ಮುಂಡರಗಿ	೧೬೦	೫೪	೨೧೪	೬೭	೯೩	೧೬೦	೯೩	೬೭
	೭೪.೮	೨೫.೨	೧೦೦.೦	೪೧.೯	೫೮.೧	೧೦೦.೦	೫೮.೧	೪೧.೯
ಶಿರಹಟ್ಟಿ	೪೭	೯	೫೬	೩೮	೯	೪೭	೯	೩೮
	೮೩.೯	೧೬.೧	೧೦೦.೦	೮೦.೯	೧೯.೧	೧೦೦.೦	೧೯.೧	೮೦.೯
ಜಿಲ್ಲೆ	೧೬೩೯	೭೪೮	೨೩೮೭	೧೧೪೩	೪೯೬	೧೬೩೯	೫೦೯	೧೧೩೦
	೬೮.೭	೩೧.೩	೧೦೦.೦	೬೯.೭	೩೦.೩	೧೦೦.೦	೩೧.೧	೬೮.೯


ಕುಟುಂಬಗಳು ಹೊಂದಿರುವಂಥ ನಿವೇಶನ, ಮನೆ, ಹಾಗೂ ಮನೆಯ ಪ್ರಕಾರ ಮತ್ತು ಆ ಮನೆಯು ಹೊಂದಿರುವಂಥ ಅವಶ್ಯಕ ಸೌಲಭ್ಯಗಳಾದ ನಳ, ಸ್ನಾನಗೃಹ, ಶೌಚಾಲಯ, ವಿದ್ಯುತ್ ಸಂಪರ್ಕ, ಪಡಿತರ ಚೀಟಿ ಇವುಗಳ ಕುರಿತಾದ ಮಾಹಿತಿಯನ್ನು ಕೋಷ್ಟಕ ೪.೪ ರಿಂದ ೪.೬ ರವರೆಗೆ ಕೊಡಲಾಗಿದೆ. ಕೋಷ್ಟಕ ೪.೪ ರ ಪ್ರಕಾರ ಅಧ್ಯಯನ ಕ್ಷೇತ್ರದಲ್ಲಿನ ಛಲವಾದಿ ಕುಟುಂಬಗಳಲ್ಲಿ ಸರಿಸುಮಾರು ೬೯ (೧೬೩೯ ಕುಟುಂಬಗಳು) ಶೇಕಡಾವಾರು ಕುಟುಂಬಗಳಿಗೆ ವಸತಿ ನಿವೇಶನ ಇರುವದಾಗಿ ವರದಿ ಮಾಡಿದ್ದಾರೆ. ಇನ್ನುಳಿದ ૩೧ ಶೇಕಡಾವಾರು ಕುಟುಂಬಗಳಿಗೆ ನಿವೇಶನ ಇರುವದಿಲ್ಲ.

ನಿವೇಶನ ಹೊಂದಿರುವರಲ್ಲಿ ಸ್ವಂತದ್ದು ಅಥವಾ ಸರಕಾರ ನೀಡಿದ ಕುರಿತು ಕೇಳಲಾಗಿ ೬೯.೭ ಪ್ರತಿಶತ ಕುಟುಂಬಗಳು ಸ್ವಂತ ನಿವೇಶನವನ್ನು ಹೊಂದಿವೆ, ಹಾಗೂ ಇನ್ನುಳಿದ ૩೦.૩ ಪ್ರತಿಶತ ಕುಟುಂಬಗಳಿಗೆ ಸ್ವಂತ ನಿವೇಶನ ಇಲ್ಲದಿರುವದು ಕಂಡುಬರುತ್ತದೆ. ಒಟ್ಟಾರೆ ૩೧.೧ ಪ್ರತಿಶತ ಕುಟುಂಬಗಳಿಗೆ ಸರಕಾರಿ ನಿವೇಶನ ನೀಡಲಾಗಿದೆ.

ಕೋಷ್ಟಕ ೪.೪ ರ ಸಮಗ್ರ ಮಾಹಿತಿಯನ್ನು ಈ ಕೆಳಗೆ ಕೊಡಲಾದ ಮೂರು ಸ್ತಂಭಗಳಲ್ಲಿ ಕಾಣಬಹುದಾಗಿದೆ.




ಸ್ವಂತ ಗೃಹ ನಿವೇಶನ ಹೊಂದಿರುವ ಪ್ರತಿಶತ ಕುಟುಂಬಗಳ
ತಾಲೂಕಾವಾರು ಹಂಚಿಕೆ
ಜಿಲ್ಲೆ
ಶಿರಹಟ್ಟಿ
ಮುಂಡರಗಿ
ನರಗುಂದ
ರೋಣ
ಗದಗ
೬೯.೭
೮೦.೯
೪೧.೯
೬೯.೮
೭೧.೮
೭೫.೨
೦
೨೦
೪೦
೬೦
೮೦
೧೦೦


ಸರಕಾರಿ ಗೃಹ ನಿವೇಶನ ಹೊಂದಿರುವ ಪ್ರತಿಶತ ಕುಟುಂಬಗಳ
ತಾಲೂಕಾವಾರು ಹಂಚಿಕೆ
ಜಿಲ್ಲೆ
ಶಿರಹಟ್ಟಿ
ಮುಂಡರಗಿ
ನರಗುಂದ
ರೋಣ
ಗದಗ
೩೧.೧
೧೯.೧
೫೮.೧
೩೦.೫
೨೯.೬
೨೫.೫
೦
೧೦
೨೦
೩೦
೪೦
೫೦
೬೦


ಛಲವಾದಿ ಜನರು ವಾಸಿಸುವ ಊರ ಹೊರಗಿನ ಸ್ಥಳ ಹೊಲಗೇರಿಯಾದರೂ ಇಂದು ಸರ್ಕಾರದಿಂದ ಕೊಡಮಾಡಿದ ನಿವೇಶನದಲ್ಲಿ ಕಟ್ಟಿದ ಮನೆಗಳು ನಗರಗಳಲ್ಲಿರುವಂತೆ ಅಂಟಿಕೊಂಡಿರುತ್ತವೆ. ಗ್ರಾಮಗಳಲ್ಲಿ ಆಶ್ರಯ, ಅಂಬೇಡ್ಕರ ಆವಾಸ ಮುಂತಾದ ಹೊಲೆಯ-ಮಾದಿಗರಿಗೆ ಕೊಡಬಹುದಾದ ನಿವೇಶನಗಳನ್ನು ಒಂದೆಡೆ ಬೇರ್ಪಡಿಸಲಾಗಿರುತ್ತದೆ. ಇದರಿಂದ ಮೇಲು-ಕೀಳು ಎಂಬ ಭಾವನೆ ಹೋಗದೆ ಇನ್ನೂ ಹೆಚ್ಚಾಗುತ್ತಿದೆ.


ನಿವೇಶನ ಪಡೆದಿರುವರ ಮಾಹಿತಿಯನ್ನು ತಾಲೂಕಾವಾರು ವಿಂಗಡಿಸಿ ಪರಿಶೀಲಿಸಿದೆ. ಗದಗ ತಾಲೂಕಿನಲ್ಲಿ ೮೭೮ ಕುಟುಂಬಗಳ ಪೈಕಿ ೪೭೯ (೫,೪,೬ ಪ್ರತಿಶತ) ಕುಟುಂಬಗಳು ನಿವೇಶನ ಇದೆ ಎಂದು ತಿಳಿಸಿವೆ. ಅದರಲ್ಲಿ ಸುಮಾರು ೭೫ ಪ್ರತಿಶತ ಕುಟುಂಬಗಳು ಸ್ವಂತ ನಿವೇಶನ ಹಾಗೂ ಸುಮಾರು ೨೫ ಪ್ರತಿಶತ ಕುಟುಂಬಗಳು ಸರಕಾರಿ ನಿವೇಶನ ಹೊಂದಿವೆ. ರೋಣದಲ್ಲಿ ೮೭೩ ಕುಟುಂಬಗಳ ಪೈಕಿ ೬೪೨ (೭೩,೫ ಪ್ರತಿಶತ) ಕುಟುಂಬಗಳು ನಿವೇಶನ ಹೊಂದಿದ್ದು, ಅದರಲ್ಲಿ ಸುಮಾರು ೭೧ ಪ್ರತಿಶತ ಸ್ವಂತ ನಿವೇಶನ ಹೊಂದಿದವರಾದರೆ ಇನ್ನುಳಿದ ೨೯ ಪ್ರತಿಶತ ಕುಟುಂಬಗಳಿಗೆ ಸರಕಾರಿ ನಿವೇಶನ ಲಭಿಸಿದೆ. ನರಗುಂದ ತಾಲೂಕಿನಲ್ಲಿ ೩೬೬ ಕುಟುಂಬಗಳ ಪೈಕಿ ೩೧೧ ಕುಟುಂಬಗಳು (೮೫.೦ ಪ್ರತಿಶತ) ನಿವೇಶನ ಹೊಂದಿದ್ದು, ಅದರಲ್ಲಿ ಸುಮಾರು ೭೦ ಪ್ರತಿಶತ ಸ್ವಂತ ಹಾಗೂ ಸುಮಾರು ೩೦ ಪ್ರತಿಶತ ಸರಕಾರಿ ನಿವೇಶನ ಪಡೆದವರು ಇದ್ದಾರೆ. ಮುಂಡರಗಿಯಲ್ಲಿ ೨೧೪ ಕುಟುಂಬಗಳ ಪೈಕಿ ೧೬೦ ಕುಟುಂಬಗಳು (೭೪.೮ ಪ್ರತಿಶತ) ನಿವೇಶನ ಹೊಂದಿದ್ದು, ಸುಮಾರು ೪೨ ಪ್ರತಿಶತ ಸ್ವಂತ ಹಾಗೂ ಸುಮಾರು ೫೮ ಪ್ರತಿಶತ ಸರಕಾರಿ ನಿವೇಶನ ಪಡೆದಿವೆ. ಇನ್ನು ಶಿರಹಟ್ಟಿ ತಾಲೂಕಿನಲ್ಲಿ ೫೬ ಕುಟುಂಬಗಳಲ್ಲಿ ೪೭ (೮೩.೯ ಪ್ರತಿಶತ) ಕುಟುಂಬಗಳು ನಿವೇಶನ ಹೊಂದಿದ್ದು, ಸುಮಾರು ೮೧ ಪ್ರತಿಶತ ಸ್ವಂತ ನಿವೇಶನ ಮತ್ತು ಸುಮಾರು ೧೯ ಪ್ರತಿಶತ ಸರಕಾರಿ ನಿವೇಶನ ಹೊಂದಿವೆ.


ಕೋಷ್ಟಕ ೪.೫ ಮನೆ, ಸ್ವಂತ ಮನೆ ಹಾಗೂ ಸರಕಾರಿ ಮನೆ ಹೊಂದಿರುವ ಪ್ರತಿಶತ ಕುಟುಂಬಗಳ ತಾಲೂಕಾವಾರು ಹಂಚಿಕೆ

ತಾಲೂಕು	ಮನೆ			ಸ್ವಂತ ಮನೆ			ಸರಕಾರಿ ಮನೆ		
	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
ಗದಗ	೭೪೩	೧೩೫	೮೭೮	೫೫೯	೧೮೪	೭೪೩	೨೦೪	೫೩೯	೭೪೩
	೮೪.೬	೧೫.೪	೧೦೦.೦	೭೫.೨	೨೪.೮	೧೦೦.೦	೨೭.೫	೭೨.೫	೧೦೦.೦
ರೋಣ	೬೩೦.೦	೨೪೩.೦	೮೭೩.೦	೪೨೭.೦	೨೦೩.೦	೬೩೦.೦	೨೧೫.೦	೪೧೫.೦	೬೩೦
	೭೨.೨	೨೭.೮	೧೦೦.೦	೬೭.೮	೩೨.೨	೧೦೦.೦	೩೪.೧	೬೫.೯	೧೦೦.೦
ನರಗುಂದ	೩೧೦.೦	೫೬.೦	೩೬೬.೦	೧೯೪.೦	೧೧೬.೦	೩೧೦.೦	೧೧೭.೦	೧೯೩.೦	೩೧೦
	೮೪.೭	೧೫.೩	೧೦೦.೦	೬೨.೬	೩೭.೪	೧೦೦.೦	೩೭.೭	೬೨.೩	೧೦೦.೦
ಮುಂಡರಗಿ	೧೪೩.೦	೭೧.೦	೨೧೪.೦	೫೦.೦	೯೩.೦	೧೪೩.೦	೯೫.೦	೪೮.೦	೧೪೩
	೬೬.೮	೩೩.೨	೧೦೦.೦	೩೫.೦	೬೫.೦	೧೦೦.೦	೬೬.೪	೩೩.೬	೧೦೦.೦
ಶಿರಹಟ್ಟಿ	೪೭.೦	೯.೦	೫೬.೦	೩೧.೦	೧೬.೦	೪೭.೦	೧೬.೦	೩೧.೦	೪೭
	೮೩.೯	೧೬.೧	೧೦೦.೦	೬೬.೦	೩೪.೦	೧೦೦.೦	೩೪.೦	೬೬.೦	೧೦೦.೦
ಜಿಲ್ಲೆ	೧೮೭೩.೦	೫೧೪.೦	೨೩೮೭.೦	೧೨೬೧.೦	೬೧೨.೦	೧೮೭೩.೦	೬೪೭.೦	೧೨೨೬.೦	೧೮೭೩
	೭೮.೫	೨೧.೫	೧೦೦.೦	೬೭.೩	೩೨.೭	೧೦೦.೦	೩೪.೫	೬೫.೫	೧೦೦.೦

ಕೋಷ್ಟಕ–೪.೫ ರಲ್ಲಿ ಕುಟುಂಬಗಳು ಹೊಂದಿರತಕ್ಕ ವಸತಿ ಸೌಲಭ್ಯ ಹಾಗೂ ಅದು ಸ್ವಂತದ್ದು ಅಥವಾ ಸರಕಾರ ನೀಡಿದ್ದು ಎಂಬುದರ ಬಗೆಗೆ ಶೇಕಡಾವಾರು ಮಾಹಿತಿ ಒದಗಿಸಲಾಗಿದೆ. ಪ್ರತಿಶತ ೨೧.೫ ಕುಟುಂಬಗಳು ವಸತಿ ಸೌಲಭ್ಯ ಇಲ್ಲದಿರುವುದಾಗಿ ಮಾಹಿತಿ ಒದಗಿಸಿದ್ದಾರೆ. ವಸತಿ ಸೌಲಭ್ಯ ಇರುವ ೧೮೭೩ (೨೩೮೭ರ ೭೮.೫ ಪ್ರತಿಶತ) ಕುಟುಂಬಗಳಲ್ಲಿ ೬೭.೩ ಪ್ರತಿಶತ (೧೨೬೧೦ ಕುಟುಂಬಗಳು ವಸತಿ ಸೌಲಭ್ಯ ಸ್ವಂತದ್ದು ಎಂದೂ ೩೪.೫ ಪ್ರತಿಶತ (೬೪೭) ಕುಟುಂಬಗಳು ವಸತಿ ಸೌಲಭ್ಯ ಸರಕಾರದ್ದು ಎಂದೂ ಮಾಹಿತಿ ಒದಗಿಸಿವೆ. ಬಹಳಷ್ಟು ಕುಟುಂಬಗಳಿಗೆ ವಸತಿ ಸೌಲಭ್ಯ ಇಲ್ಲದಿರುವುದು ಕಂಡುಬರುತ್ತದೆ.


ಮನೆ ಹೊಂದಿರುವ ಕುಟುಂಬಗಳ ತಾಲೂಕಾವಾರು ಪ್ರತಿಶತ ಹಂಚಿಕೆ
ಜಿಲ್ಲೆ ೧೭%
ಗದಗ ೧೮%
ಶಿರಹಟ್ಟಿ ೧೮%
ಮುಂಡರಗಿ
ನರಗುಂದ ೧೮%


ಸ್ವಂತ ಮನೆ ಹೊಂದಿರುವ ಕುಟುಂಬಗಳ ತಾಲೂಕಾವಾರು ಪ್ರತಿಶತ ಹಂಚಿಕೆ
ಜಿಲ್ಲೆ ೧೮%
ಗದಗ ೨೦%
ಶಿರಹಟ್ಟಿ ೧೮%
ರೋಣ ೧೮%
ಮುಂಡರಗಿ ೯%
ನರಗುಂದ ೧೭%



ವಸತಿ ಸೌಲಭ್ಯದ ಬಗ್ಗೆ ಪಡೆಯಲಾದ ತಾಲೂಕಾವಾರು ಮಾಹಿತಿಯಲ್ಲಿ ಗದಗ ತಾಲೂಕಿನ ೮೭೮ ಕುಟುಂಬಗಳ ಪೈಕಿ ೭೪೩ ಕುಟುಂಬಗಳು(೮೪.೬ ಪ್ರತಿಶತ) ವಸತಿ ಸೌಲಭ್ಯ ಪಡೆದಿವೆ. ಸುಮಾರು ೭೫ ಪ್ರತಿಶತ ಸ್ವಂತ ವಸತಿ ಸೌಕರ್ಯ ಹೊಂದಿದ್ದರೆ, ಇನ್ನುಳಿದ ೨೫ ಪ್ರತಿಶತ ಸರಕಾರ ವಸತಿ ಸೌಲಭ್ಯ ಪಡೆದಿವೆ. ರೋಣ ತಾಲೂಕಿನಲ್ಲಿ ೮೭೩ ಕುಟುಂಬಗಳ ಪೈಕಿ ೬೩೦ (೭೨.೨ ಪ್ರತಿಶತ) ಕುಟುಂಬಗಳು ವಸತಿ ಸೌಕರ್ಯ ಪಡೆದಿವೆ. ಸುಮಾರು ೬೮ ಪ್ರತಿಶತ ಸ್ವಂತ ಹಾಗೂ ಸುಮಾರು ೩೨ ಪ್ರತಿಶತ ಸರಕಾರದ್ದಾಗಿವೆ. ನರಗುಂದ ತಾಲೂಕಿನ ೩೬೬ ಕುಟುಂಬಗಳಲ್ಲಿ ೩೧೦ (೮೪.೭ ಪ್ರತಿಶತ) ಕುಟುಂಬಗಳು ವಸತಿ ಸೌಲಭ್ಯ ಪಡೆದಿದ್ದು ಸುಮಾರು ೬೨ ಪ್ರತಿಶತ ಸ್ವಂತ ಮತ್ತು ಸುಮಾರು ೩೮ ಪ್ರತಿಶತ ಸರಕಾರದ್ದಾಗಿದೆ. ಮುಂಡರಗಿ ತಾಲೂಕನಲ್ಲಿರುವ ೨೧೪ ಕುಟುಂಬಗಳ ಪೈಕಿ ೧೪೩ (೬೬.೮ ಪ್ರತಿಶತ) ಕುಟುಂಬಗಳು ವಸತಿ ಸೌಲಭ್ಯ ಹೊಂದಿದ್ದು ಸುಮಾರು ೩೫ ಪ್ರತಿಶತ ಸ್ವಂತ ಮತ್ತು ಸುಮಾರು ೬೫ ಪ್ರತಿಶತ ಸರಕಾರದಿಂದ ವಸತಿ ಪಡೆದಿವೆ. ಶಿರಹಟ್ಟಿ ತಾಲೂಕಿನ ೫೬ ಕುಟುಂಬಗಳಲ್ಲಿ ೪೭ (೮೩.೯ ಪ್ರತಿಶತ) ಕುಟುಂಬಗಳು ವಸತಿ ಸೌಲಭ್ಯ ಪಡೆದಿವೆ. ಇದರಲ್ಲಿ ೬೬ ಪ್ರತಿಶತ ಸ್ವಂತ ಹಾಗೂ ೩೪ ಪ್ರತಿಶತ ಸರಕಾರೀ ವಸತಿ ಸೌಲಭ್ಯವಾಗಿದೆ. ತಾಲೂಕಾವಾರು ವಿವರಗಳಲ್ಲಿ ಗದಗ ತಾಲೂಕಿನ ಕುಟುಂಬಗಳು ಹೆಚ್ಚು ಸ್ವಂತ ವಸತಿ ಸೌಲಭ್ಯ ಹೊಂದಿದ್ದು (೭೫ ಪ್ರತಿಶತ) ಮುಂಡರಗಿ ತಾಲೂಕಿನಲ್ಲಿ ಸ್ವಂತ ವಸತಿ ಪಡೆದಿರುವ ಕುಟುಂಬಗಳ ಸಂಖ್ಯೆ ಕಡಿಮೆ ಇದೆ (ಸುಮಾರು ೩೫ ಪ್ರತಿಶತ).

ಕೋಷ್ಟಕ ೪.೬ ವಾಸಿಸುವ ಮನೆಯ ಪ್ರಕಾರಕ್ಕನುಗುನುಣವಾಗಿ ತಾಲೂಕಾವಾರು ಕುಟುಂಬಗಳ ಪ್ರತಿಶತ ಹಂಚಿಕೆ


ಮನೆಯ ಪ್ರಕಾರ	ತಾಲೂಕು					ಜಿಲ್ಲೆ
	ಗದಗ	ರೋಣ	ನರಗುಂದ	ಮುಂಡರಗಿ	ಶಿರಹಟ್ಟಿ	
ಗುಡಾರದ ಮನೆ	೧	೫	೧	೧	೦	೮
	.೧	.೬	.೩	.೫	.೦	.೩
ಗುಡಿಸಲು	೨೫	೫೪	೨೬	೧೪	೨	೧೨೧
	೨.೮	೬.೨	೭.೧	೬.೫	೩.೬	೫.೧
ಟಿನ್ ಮನೆ	೧೫೮	೧೨೯	೫೩	೧೬	೧೭	೩೭೩
	೧೮.೦	೧೪.೮	೧೪.೫	೭.೫	೩೦.೪	೧೫.೬
ಡಾಭಾ ಛಾವಣಿ	೨೧೩	೨೧೬	೯೬	೩೧	೧೫	೫೭೧
	೨೪.೩	೨೪.೭	೨೬.೨	೧೪.೫	೨೬.೮	೨೩.೯
ಆರ್.ಸಿ. ಸಿ. ಮನೆ	೮೧	೧೫	೮	೩	೧೨	೧೧೯
	೯.೨	೧.೭	೨.೨	೧.೪	೨೧.೪	೫.೦
ಹಂಚಿನ ಮನೆ	೧೩೪	೮೮	೧೧೨	೭	೫	೩೪೬
	೧೫.೩	೧೦.೧	೩೦.೬	೩.೩	೮.೯	೧೪.೫
ಆಶ್ರಯ ಮನೆ	೧೦೮	೨೪೨	೪೬	೧೦೭	೨	೫೦೫
	೧೨.೩	೨೭.೭	೧೨.೬	೫೦.೦	೩.೬	೨೧.೨
ಬಾಡಿಗೆ ಮನೆ	೪೪	೩೪	೧೬	೧೯	೩	೧೧೬
	೫.೦	೩.೯	೪.೪	೮.೯	೫.೪	೪.೯
ಇತರೆ	೧೧೪	೯೦	೮	೧೬	೦	೨೨೮
	೧೩.೦	೧೦.೩	೨.೨	೭.೫	.೦	೯.೬
ಒಟ್ಟು	೮೭೮	೮೭೩	೩೬೬	೨೧೪	೫೬	೨೩೮೭
	೧೦೦.೦	೧೦೦.೦	೧೦೦.೦	೧೦೦.೦	೧೦೦.೦	೧೦೦.೦

ಕೋಷ್ಟಕ ೪.೬ರಲ್ಲಿ ಸೂಚಿಸಿರುವಂತೆ ಸಮೀಕ್ಷೆಯಲ್ಲಿ ಪಡೆದ ಮಾಹಿತಿ ಪ್ರಕಾರ ೨೩೮೭ ಕುಟುಂಬಗಳಲ್ಲಿ ಅತಿ ಹೆಚ್ಚಿನ ಕುಟುಂಬಗಳು ವಾಸವಾಗಿರುವ ಮನೆ ಪ್ರಕಾರ ಮಣ್ಣಿನ

ಛಾವಣಿಯದ್ದಾಗಿದೆ(ಪ್ರತಿಶತ ೨೩.೯). ಇದರ ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಆಶ್ರಯ ಮನೆಗಳು, ತಗಡಿನ ಮನೆಗಳು ಹಾಗೂ ಹಂಚಿನ ಮನೆಗಳು (ಪ್ರತಿಶತ ೨೧.೨, ೧೫.೬ ಹಾಗೂ ೧೪.೫) ಇವೆ.

ಪ್ರತಿಶತ ೪.೯ರಷ್ಟು ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸವಾಗಿರುವದು ಕಂಡುಬರುತ್ತದೆ. ಪ್ರತಿಶತ ೫.೪ರಷ್ಟು ಕುಟುಂಬಗಳು ಗುಡಾರದ ಅಥವಾ ಗುಡಿಸಲ ಮನೆಗಳಲ್ಲಿ ವಾಸವಾಗಿವೆ. ಈ ಸಮುದಾಯಕ್ಕೆ ಸೇರಿದ ಇನ್ನೂ ಅನೇಕ ಕುಟುಂಬಗಳಿಗೆ ಸೂಕ್ತ ವಸತಿ ಸೌಲಭ್ಯ ಇಲ್ಲದಿರುವದು ಈ ವಿಶ್ಲೇಷಣೆಯಿಂದ ಕಂಡುಬರುವ ಅಂಶವಾಗಿದೆ. ಜಿಲ್ಲೆಯ ಛಲವಾದಿ ಸಮುದಾಯ ಹೊಂದಿರುವ ಇನ್ನಿತರ ಸೌಲಭ್ಯಗಳನ್ನು ತಾಲೂಕುವಾರು ವಿಶ್ಲೇಷಿಸಿದಾಗ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ.

ಛಲವಾದಿ ಸಮುದಾಯದ ಜನರು ವಾಸಿಸುತ್ತಿರುವ ಮನೆಯ ಪ್ರಕಾರ ಗದಗ ತಾಲೂಕಿನಲ್ಲಿ ಮಣ್ಣಿನ ಛಾವಣಿ ಹೊಂದಿರುವ ಮನೆಗಳು ಹೆಚ್ಚಿನ ಪ್ರಮಾಣದಲ್ಲಿ ಅಂದರೆ ೨೪.೩ ಪ್ರತಿಶತ ಕಂಡು ಬಂದಿದೆ. ಗುಡಾರದ ಮನೆ ಸಂಖ್ಯೆ ಕೇವಲ ೧ ಮಾತ್ರ ಇದೆ. ೧೮.೦ ಪ್ರತಿಶತ ತಗಡಿನ ಮನೆ, ೧೫.೩ ಪ್ರತಿಶತ ಹಂಚಿನಮನೆಗಳು, ೧೨.೩ ಪ್ರತಿಶತ ಆಶ್ರಯ ಮನೆಗಳು, ೯.೨ ಪ್ರತಿಶತ ಆರ್.ಸಿ.ಸಿ. ಮನೆಗಳು, ೨.೮ ಪ್ರತಿಶತ ಗುಡಿಸಲ ಮನೆಗಳು ಕಂಡುಬಂದಿವೆ. ಇತರ ಪ್ರಕಾರದ ಮನೆಗಳು ೧೩.೦ ಪ್ರತಿಶತವಾಗಿದ್ದು ಬಾಡಿಗೆ ಮನೆಗಳು ೫.೦ ಪ್ರತಿಶತ ಇವೆ.



ರೋಣ ತಾಲೂಕಿನಲ್ಲಿ ಆಶ್ರಯ ಮನೆಗಳು ಹೆಚ್ಚಿನ ಪ್ರಮಾಣದಲ್ಲಿ ಅಂದರೆ ೨೭.೭ ಪ್ರತಿಶತ ಇದ್ದರೆ, ಗುಡಾರದ ಮನೆಗಳ ಪ್ರಮಾಣ ಪ್ರತಿಶತ ೧ಕ್ಕಿಂತ ಕಡಿಮೆ (ಅಂದರೆ ಕೇವಲ ೫ ಮನೆಗಳು)ಇವೆ.

ಮಣ್ಣಿನ ಛಾವಣಿ ಹೊಂದಿರುವ ಮನೆಗಳು ೨೪.೭ ಪ್ರತಿಶತ, ತಗಡಿನ ಮನೆಗಳು ೧೪.೮ ಪ್ರತಿಶತ, ಹಂಚಿನ ಮನೆಗಳು ೧೦.೧ ಪ್ರತಿಶತ, ಗುಡಿಸಲುಗಳು ೬.೨ ಪ್ರತಿಶತ, ಆರ್.ಸಿ.ಸಿ. ಮನೆಗಳು ೧.೭ ಪ್ರತಿಶತ ಕಂಡು ಬರುತ್ತವೆ. ಇತರೆ ಪ್ರಕಾರದ ಮನೆಗಳು ೧೦.೩ ಪ್ರತಿಶತವಿದ್ದರೆ, ೩.೯ ಪ್ರತಿಶತ ಬಾಡಿಗೆ ಮನೆಗಳಾಗಿವೆ.

ನರಗುಂದ ತಾಲೂಕಿನಲ್ಲಿ ಹಂಚಿನ ಮನೆಗಳು ಹೆಚ್ಚಿನ ಪ್ರಮಾಣದಲ್ಲಿ ೩೦.೬ ಪ್ರತಿಶತ ಇವೆ. ಗುಡಾರದ ಮನೆ ಕೇವಲ ೧ ಇರುವುದು ಕಂಡು ಬಂದಿದೆ. ಮಣ್ಣಿನ ಛಾವಣಿ ಹೊಂದಿರುವ ಮನೆಗಳು ೨೬.೨ ಪ್ರತಿಶತ, ತಗಡಿನ ಮನೆಗಳು ೧೪.೫ ಪ್ರತಿಶತ, ಆಶ್ರಯ ಮನೆಗಳು ೧೨.೬ ಪ್ರತಿಶತ, ಗುಡಿಸಲುಗಳು ೭.೧ ಪ್ರತಿಶತ, ಆರ್.ಸಿ.ಸಿ. ಮನೆಗಳು ೨.೨ ಪ್ರತಿಶತ ಇವೆ. ೪.೪ ಪ್ರತಿಶತ ಬಾಡಿಗೆ ಮನೆಗಳಾದರೆ, ಇತರ ಪ್ರಕಾರದ ಮನೆಗಳ ಪ್ರಮಾಣ ೨.೨ ಪ್ರತಿಶತವಾಗಿದೆ.

ಮುಂಡರಗಿ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯ ಮನೆಗಳು ಆಶ್ರಯ ಮನೆಗಳಾಗಿದ್ದು ಇವುಗಳ ಪ್ರಮಾಣ ೫೦.೦ ಪ್ರತಿಶತವಾಗಿದೆ. ಗುಡಾರದ ಮನೆ ಕೇವಲ ಒಂದೇ ಒಂದು ಇದೆ. ಮಣ್ಣಿನ ಛಾವಣಿ ಹೊಂದಿರುವ ಮನೆಗಳು ೧೪.೫ ಪ್ರತಿಶತ, ತಗಡಿನ ಮನೆಗಳು ೭.೫ ಪ್ರತಿಶತ, ಗುಡಿಸಲುಗಳು ೬.೫ ಪ್ರತಿಶತ, ಹಂಚಿನ ಮನೆಗಳು ೩.೩ ಪ್ರತಿಶತ, ಆರ್.ಸಿ.ಸಿ. ಮನೆಗಳು ೧.೪ ಪ್ರತಿಶತ ಇವೆ. ಇತರೆ ಪ್ರಕಾರದ ಮನೆಗಳು ೭.೫ ಪ್ರತಿಶತ ಹಾಗೂ ಬಾಡಿಗೆ ಮನೆಗಳು ೮.೯ ಪ್ರತಿಶತ ಇವೆ.

ಶಿರಹಟ್ಟಿ ತಾಲೂಕಿನಲ್ಲಿ ತಗಡಿನ ಮನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ೩೦.೪ ಪ್ರತಿಶತ ಕಂಡುಬಂದರೆ, ಇಲ್ಲಿ ಗುಡಾರದ ಮನೆಗಳು ಕಂಡುಬರುವುದಿಲ್ಲ. ಮಣ್ಣಿನ ಛಾವಣಿ ಇರುವ ಮನೆಗಳು ೨೬.೮ ಪ್ರತಿಶತ, ಆರ್.ಸಿ.ಸಿ. ಮನೆಗಳು ೨೧.೪ ಪ್ರತಿಶತ, ಹಂಚಿನ ಮನೆಗಳು ೮.೯ ಪ್ರತಿಶತ ಆಶ್ರಯ ಮನೆಗಳು ೩.೬ ಪ್ರತಿಶತ, ಗುಡಿಸಲುಗಳು ೩.೬ ಪ್ರತಿಶತ ಇವೆ. ಬಾಡಿಗೆ ಮನೆಗಳು ೫.೪ ಪ್ರತಿಶತ ಇರುವವು. ಇತರ ಪ್ರಕಾರದ ಯಾವುದೇ ಮನೆಗಳು ಇಲ್ಲಿ ಕಂಡುಬರುವುದಿಲ್ಲ.

೪.೯ ಭಾಷೆ

ಛಲವಾದಿಯವರು ಸಾಮಾನ್ಯವಾಗಿ ಮನೆ ಮಾತು ಕನ್ನಡ ಭಾಷೆ ಮಾತನಾಡುತ್ತಾರೆ. ಆರ್ಥಿಕವಾಗಿ ಹಿಂದುಳಿದವರು, ಬಡವರು, ಸುಗ್ಗಿಯಲ್ಲಿ ಬೇರೆ ಜಿಲ್ಲೆ ಹಾಗೂ ರಾಜ್ಯಗಳಿಗೆ ದುಡಿಯಲು ವಲಸೆ ಹೋದಾಗ ಅಲ್ಲಿಯ ಪ್ರಾದೇಶಿಕ ಭಾಷೆಯನ್ನು ಕಲಿತಿರುತ್ತಾರೆ. ಶಿಕ್ಷಣದಲ್ಲಿ ವೃತ್ತಿ ಕೋರ್ಸ್‌ಗಳನ್ನು ಕಲಿತವರು ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ತಮಿಳು ಮತ್ತು ಕೊಂಕಣಿ ಮುಂತಾದ ಭಾಷೆಯಲ್ಲಿಯೂ ಪರಿಣಿತಿ ಪಡೆದಿದ್ದಾರೆ.

೪.೧೦ ಕೌಟುಂಬಿಕ ಜೀವನ

ಸ್ವಭಾವತಃ ಸಂಘಜೀವಿಯಾದ ಮಾನವ ಸಮಾಜದ ತನ್ನ ವಿವಿಧ ಬೇಡಿಕೆಗಳ ಪೂರೈಕೆಗಾಗಿ ವಿವಿಧ ಪ್ರಕಾರದ ಸಂಘಗಳನ್ನು ಸ್ಥಾಪಿಸಿಕೊಂಡಿದ್ದಾನೆ. ಕುಟುಂಬ ಮಾನವ ಸಮಾಜದ ಮೂಲಭೂತ ಸಂಘವಾಗಿದೆ. ಕುಟುಂಬ ವ್ಯವಸ್ಥೆ ಮಾನವ ಸಮಾಜದ ಉಗಮದಿಂದಲೂ ಬೆಳೆದು ಬಂದಿದೆ. ಕುಟುಂಬ ಸಮಾಜದ ಭದ್ರ ಬುನಾದಿಯಾಗಿದೆ. ಮನುಷ್ಯ ತನ್ನ ಜೀವನದ ಹೆಚ್ಚಿನ ಆಯುಷ್ಯದ ಅವಧಿ ಕುಟುಂಬದಲ್ಲಿ ಕಳೆಯುತ್ತಾನೆ. ಕುಟುಂಬವೆಂದರೆ ಕೇವಲ ಪತಿ ಪತ್ನಿ ಹಾಗೂ ಮಕ್ಕಳನ್ನಲ್ಲದೆ ಪತಿಯ ತಂದೆ ತಾಯಿ ಅವನ ಸಹೋದರರು ಅವರ ಪತ್ನಿಯರು ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ.

ಕೌಟುಂಬಿಕ ವ್ಯವಸ್ಥೆಯಲ್ಲಿ ಎರಡು ಪ್ರಕಾರಗಳುಂಟು.

೧) ಅವಿಭಕ್ತ ಕುಟುಂಬ

೨) ವಿಭಕ್ತ ಕುಟುಂಬ

ಮನೆಯಲ್ಲಿ ಮೂರು ನಾಲ್ಕು ತಲೆಮಾರಿನ ಜನ ಅಂದರೆ ತಂದೆ ತಾಯಿ, ಮಕ್ಕಳು, ಮೊಮ್ಮಕ್ಕಳು, ದೊಡ್ಡಪ್ಪ, ಚಿಕ್ಕಪ್ಪ ಒಟ್ಟಿಗೆ ಜೀವನ ನಡೆಸುತ್ತಿದ್ದರೆ ಅವಿಭಕ್ತ ಕುಟುಂಬವೆನಿಸುತ್ತದೆ. ಗಂಡ, ಹೆಂಡತಿ, ಮಕ್ಕಳು, ಸದಸ್ಯರು ಮಾತ್ರ ಇದ್ದರೆ ವಿಭಕ್ತ ಕುಟುಂಬವೆನ್ನುತ್ತಾರೆ. ಛಲವಾದಿಯವರಲ್ಲಿ ಮೊದಲು ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಕಂಡು ಬರುತ್ತಿದ್ದವು. ಇಂದು ಔದ್ಯೋಗಿಕ ಮತ್ತು ನಗರೀಕರಣ ಹಾಗೂ ಶಿಕ್ಷಣದ ಪ್ರಭಾವದಿಂದಾಗಿ ಅವಿಭಕ್ತ ಕುಟುಂಬಗಳು ಸಿಗುವುದು ಅಪರೂಪವಾಗಿದೆ. ವಿವಾಹವಾದ ವರ್ಷ ಇಲ್ಲವೆ ಎರಡು ವರ್ಷದೊಳಗೆ ತಂದೆ ತಾಯಿಗಳಿಂದ ಬೇರ್ಪಟ್ಟ ಹೊಸ ಕುಟುಂಬ ವಿಭಕ್ತವಾಗುತ್ತದೆ. ಇವರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಹೆಚ್ಚು ಕಂಡು ಬರುತ್ತದೆ. ಮನೆಯ ಯಜಮಾನ ತೀರಿಕೊಂಡರೆ ಮನೆಯ ಯಜಮಾನತಿ ಇಲ್ಲವೆ ಹಿರಿಯಮಗ ಕುಟುಂಬದ ಮುಖ್ಯಸ್ಥನಾಗುತ್ತಾನೆ. ತಂದೆ ತಾಯಿ ಆಸ್ತಿಗೆ ಗಂಡು ಮಕ್ಕಳೇ ವಾರಸುದಾರರಾಗಿದ್ದಾರೆ. ಗಂಡು ಮಕ್ಕಳು ಇರದಿದ್ದರೆ ಹೆಣ್ಣು ಮಕ್ಕಳಿಗೆ ಆಸ್ತಿ ಹೋಗುತ್ತದೆ. ಮಕ್ಕಳಿಲ್ಲದೆಯಿದ್ದರೆ ಬಂಧು ಬಳಗದವರ ಮಗುವನ್ನು ತಂದು ದತ್ತು ತೆಗೆದುಕೊಳ್ಳುತ್ತಾರೆ.

ಕುಟುಂಬಗಳ ಸಮಗ್ರ ಮಾಹಿತಿ ವಿಶ್ಲೇಷಣೆ

ಕೆಳಗಿನ ಕೋಷ್ಟಕ ೧ರಲ್ಲಿ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಅಧ್ಯಯನಕ್ಕೊಳಪಟ್ಟ ಕುಟುಂಬಗಳ ಒಟ್ಟು ಸಂಖ್ಯೆ, ಕುಟುಂಬದಲ್ಲಿರುವ ಅತ್ಯಂತ ಕಡಿಮೆ ಸದಸ್ಯರ ಸಂಖ್ಯೆ, ಗರಿಷ್ಠ ಸದಸ್ಯರ ಸಂಖ್ಯೆ, ಸರಾಸರಿ ಸದಸ್ಯರ ಸಂಖ್ಯೆ, ಮಧ್ಯಮ (Medium) ಸದಸ್ಯರ ಸಂಖ್ಯೆ ಇವುಗಳ ಬಗ್ಗೆ ಸವಿವರವಾದ ವಿಶ್ಲೇಷಣೆಯನ್ನು ಕೊಡಲಾಗಿದೆ. ಈ ವಿಶ್ಲೇಷಣೆ ಪ್ರಕಾರ ಅಧ್ಯಯನದ ಪ್ರದೇಶದಲ್ಲಿರುವ ಗ್ರಾಮಗಳಲ್ಲಿ ಅತ್ಯಂತ ಕಡಿಮೆ ಕುಟುಂಬಗಳಿರುವ ಗ್ರಾಮಗಳೆಂದರೆ ಅಸುಂಡಿ ಮತ್ತು ಹೊಳೆ-ಇಟಗಿ ಗ್ರಾಮಗಳು. ಈ ಎರಡೂ ಗ್ರಾಮಗಳಲ್ಲಿ ಒಂದೊಂದೇ ಛಲವಾದಿ ಕುಟುಂಬ ವಾಸಿಸುತ್ತಿರುವುದು ವಿಶೇಷವಾಗಿದೆ. ಗದಗ

ನಗರದಲ್ಲಿರುವ ಕುಟುಂಬಗಳ ಸಂಖ್ಯೆ ೧೮೭ ಇದ್ದು, ಇಲ್ಲಿ ಅತ್ಯಂತ ಹೆಚ್ಚು ಕುಟುಂಬಗಳು ಕಂಡುಬರುತ್ತವೆ. ಇದರ ಜೊತೆಗೆ ಡೋಣಿ, ಬೆಟಗೇರಿ, ನರಗುಂದಗಳಲ್ಲಿಯೂ ಕ್ರಮವಾಗಿ ೧೭೩, ೧೨೮ ಹಾಗೂ ೧೦೮ ಛಲವಾದಿ ಕುಟುಂಬಗಳು ವಾಸವಾಗಿರುವುದನ್ನು ಗಮನಿಸಬಹುದು. ಡೋಣಿ ಗ್ರಾಮದ ಹೊರತಾಗಿ ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ಛಲವಾದಿ ಕುಟುಂಬಗಳು ವಾಸವಾಗಿರಲು ಬಹುಶಹ ಅಲ್ಲಿ ಲಭಿಸುವ ಉದ್ಯೋಗಾವಕಾಶ ಮತ್ತು ಆಕರ್ಷಕ ಕಾರ್ಮಿಕ ವೇತನ ಕಾರಣವಾಗಿ ಇರಬಹುದು.

ಕೋಷ್ಟಕ ೪.೭ : ಗ್ರಾಮವಾರು ಕುಟುಂಬಗಳ ಸಾಂಖ್ಯಿಕ ಸಾರಾಂಶ

ಕ್ರ.ಸಂ.	ಗ್ರಾಮಗಳು	ಒಟ್ಟು ಕುಟುಂಬಗಳು	ಸದಸ್ಯರುಗಳ ಸಂಖ್ಯೆ			
			ಕನಿಷ್ಠ	ಗರಿಷ್ಠ	ಸರಾಸರಿ	ಮಧ್ಯಮ
೧	ಆಸುಂಡಿ	೧	೪	೪	೪	೪
೨	ಬೆಟಗೇರಿ	೧೨೮	೧	೧೨	೫.೪	೫
೩	ಬಳಗಾನೂರ	೨೦	೨	೧೦	೫.೩	೫
೪	ಬೆಳಹೊಂಡ	೩೯	೧	೯	೪.೫	೪
೫	ಬೆಳವಣಕಿ	೬೦	೧	೧೦	೫.೧	೫
೬	ಬೆನಹಾಳ	೨೪	೨	೧೦	೫.೪	೬
೭	ಬೆನಹಟ್ಟಿ	೫೪	೨	೯	೪.೭	೫
೮	ಬೆನಕೊಪ್ಪ	೨೩	೨	೧೦	೪.೭	೫
೯	ಭೈರನಹಟ್ಟಿ	೧೦	೧	೬	೩.೭	೪
೧೦	ಚಿಕ್ಕನರಗುಂದ	೩೪	೨	೯	೪.೮	೫
೧೧	ಚಿಂಚಲಿ	೧೮	೧	೧೪	೪.೩	೪
೧೨	ಡಂಬಳ	೧೪	೧	೫	೩.೯	೪
೧೩	ಡೋಣಿ	೧೭೩	೧	೯	೩.೫	೩
೧೪	ಗದಗ	೧೮೭	೧	೧೧	೫.೩	೫
೧೫	ಗಾಡಗೋಳಿ	೨೭	೧	೯	೪.೧	೪
೧೬	ಗಜೇಂದ್ರಗಡ	೨೭	೨	೧೦	೫.೩	೫
೧೭	ಗಂಗಾಪುರ	೪	೩	೬	೪.೫	೪.೫
೧೮	ಗೊಜನೂರು	೨೦	೧	೧೩	೫.೬	೫
೧೯	ಗುಜಮಾಗಡಿ	೭	೧	೬	೪.೪	೫
೨೦	ಹಡಗಲಿ	೮	೨	೪	೩	೩
೨೧	ಹಡ್ಲಿ	೩೫	೧	೧೦	೪.೬	೫
೨೨	ಹಾಲಕೇರಿ	೩೫	೨	೭	೩.೯	೪
೨೩	ಹರ್ತಿ	೧೮	೨	೧೧	೫.೨	೫

ಕ್ರಮ ಸಂಖ್ಯೆ	ಗ್ರಾಮಗಳು	ಒಟ್ಟು ಕುಟುಂಬಗಳು	ಸದಸ್ಯರುಗಳ ಸಂಖ್ಯೆ			
			ಕನಿಷ್ಠ	ಗರಿಷ್ಠ	ಸರಾಸರಿ	ಮಧ್ಯಮ
೨೪	ಹಿರೇಕೊಪ್ಪ	೫	೩	೪	೩.೬	೪
೨೫	ಹಿರೇಮಣ್ಣೂರು	೧೦	೨	೮	೪.೫	೩.೫
೨೬	ಹೊಳೆಹಡಗಲಿ	೧೫	೩	೯	೪.೯	೪
೨೭	ಹೊಳೆಆಲೂರು	೩೨	೧	೧೧	೪.೯	೫
೨೮	ಹೊಳೆಇಟಗಿ	೧	೭	೭	೭	೭
೨೯	ಹೊಳೆಮಣ್ಣೂರು	೧೬	೩	೧೦	೫.೮	೫
೩೦	ಹೊಂಬಳ	೮೮	೨	೧೦	೪.೩	೪
೩೧	ಹೊನ್ನಾಪುರ	೭	೩	೬	೪.೩	೪
೩೨	ಹೊಸಳ್ಳಿ	೨೩	೩	೧೩	೫.೧	೪
೩೩	ಹುಲಕೋಟಿ	೭	೨	೮	೪.೯	೫
೩೪	ಹುಲ್ಲೂರು	೩೧	೧	೮	೪.೨	೫
೩೫	ಹುಯಿಲಗೋಳ	೪೧	೨	೧೧	೫.೩	೫
೩೬	ಜಕ್ಕಲಿ	೩೯	೧	೧೨	೫.೫	೫
೩೭	ಕದಡಿ	೩೪	೩	೧೦	೫.೩	೫
೩೮	ಕಳಸಾಪುರ	೨೫	೨	೯	೫.೩	೫
೩೯	ಕಪ್ಪಲಿ	೨೨	೧	೧೧	೪.೯	೫
೪೦	ಕರಮಡಿ	೩೪	೧	೯	೪.೯	೫
೪೧	ಕೌಜಗೇರಿ	೩೯	೧	೧೦	೪.೬	೫
೪೨	ಕೊಣ್ಣೂರು	೩೨	೧	೧೧	೫.೩	೫
೪೩	ಕುರ್ತಕೋಟಿ	೮೧	೧	೧೪	೪.೪	೪
೪೪	ಲಕ್ಷ್ಮೇಶ್ವರ	೧೪	೩	೬	೪.೪	೪
೪೫	ಲಿಂಗದಾಳ	೧೩	೨	೭	೪.೭	೫
೪೬	ಮದಗಾನೂರು	೧೪	೧	೯	೪.೮	೫
೪೭	ಮಾಗಡಿ	೨	೮	೮	೮	೮
೪೮	ಮಾಳವಾಡ	೩೫	೧	೧೦	೫.೩	೫
೪೯	ಮಲ್ಲಾಪುರ	೫೬	೧	೧೦	೫.೧	೫
೫೦	ಮಲ್ಲಸಮುದ್ರ	೪೬	೨	೧೦	೫.೧	೫
೫೧	ಮೆಣಸಗಿ	೫೯	೧	೧೧	೫.೨	೫
೫೨	ಮುದೇನಗುಡಿ	೨೬	೨	೧೧	೫.೮	೬

ಕ್ರಮ ಸಂಖ್ಯೆ	ಗ್ರಾಮಗಳು	ಒಟ್ಟು ಕುಟುಂಬಗಳು	ಸದಸ್ಯರುಗಳ ಸಂಖ್ಯೆ			
			ಕನಿಷ್ಠ	ಗರಿಷ್ಠ	ಸರಾಸರಿ	ಮಧ್ಯಮ
೫೩	ಮುಳಗುಂದ	೪೭	೩	೮	೪.೭	೫
೫೪	ಮುಂಡರಗಿ	೨೭	೧	೧೦	೪.೩	೪
೫೫	ನಾಗಾವಿ	೪೧	೧	೧೧	೪.೯	೫
೫೬	ನರಗುಂದ	೧೦೮	೧	೧೫	೪.೯	೫
೫೭	ನರೇಗಲ್ಲ	೪೯	೧	೧೧	೫.೯	೫
೫೮	ನೀಲಗುಂದ	೪೧	೨	೯	೪.೫	೪
೫೯	ನಿಡಗುಂದಿ	೨೪	೧	೧೨	೫.೬	೫.೫
೬೦	ರಡ್ಡೇರನಾಗೂರು	೩೯	೧	೧೦	೪.೯	೫
೬೧	ರಾಮಗಿರಿ	೧೫	೧	೮	೪.೧	೪
೬೨	ರೋಣ	೫೩	೧	೧೦	೫.೭	೬
೬೩	ಸಂದಿಗವಾಡ	೮	೨	೭	೫	೫
೬೪	ಸವಡಿ	೨೪	೨	೧೦	೫.೪	೫
೬೫	ಸೋಮನಕಟ್ಟಿ	೧೦	೨	೧೧	೪.೭	೪.೫
೬೬	ಸೂಡಿ	೨೨	೨	೧೦	೫.೧	೪
೬೭	ಸುರಣಗಿ	೪	೨	೬	೪	೪
೬೮	ಯಾವಗಲ್ಲ	೬೨	೧	೧೧	೪.೩	೪
ಜಿಲ್ಲೆ		೨೩೮೭	೧	೧೫	೪.೮	೫


ಗ್ರಾಮವಾರು ಕುಟುಂಬಗಳ ಸದಸ್ಯರ ಸಂಖ್ಯೆಯಲ್ಲಿ ಎಲ್ಲಾ ಗ್ರಾಮಗಳ ಕುಟುಂಬಗಳಲ್ಲಿ ಕನಿಷ್ಠ ಒಬ್ಬ ಸದಸ್ಯ ಹಾಗೂ ಗರಿಷ್ಠ ಹದಿನೈದು ಸದಸ್ಯರಿರುವುದು ಕಂಡುಬರುತ್ತದೆ. ಈ ಅಧ್ಯಯನ ಪ್ರದೇಶದ ಕುಟುಂಬಗಳ ಸರಾಸರಿ ಸದಸ್ಯರ ಸಂಖ್ಯೆ ೪.೮ ಇದೆ. ಒಟ್ಟು ಕುಟುಂಬಗಳಲ್ಲಿ ಶೇ. ೫೦ರಷ್ಟು ಕುಟುಂಬಗಳ ಸದಸ್ಯರ ಸಂಖ್ಯೆ ೫ ಅಥವಾ ೫ ಕ್ಕಿಂತ ಕಡಿಮೆ ಹಾಗೂ ಇನ್ನುಳಿದ ಶೇ. ೫೦ರಷ್ಟು ಕುಟುಂಬಗಳಲ್ಲಿ ೫ ಅಥವಾ ೫ಕ್ಕಿಂತ ಹೆಚ್ಚು ಸದಸ್ಯರು ಕಂಡುಬರುತ್ತಾರೆ. ಈ ಎಲ್ಲ ಗ್ರಾಮಗಳ ಕುಟುಂಬಗಳಲ್ಲಿ ಅತಿ ಕಡಿಮೆ ಸರಾಸರಿ ಸದಸ್ಯರ ಸಂಖ್ಯೆ ಹಡಗಲಿ ಗ್ರಾಮದಲ್ಲಿ (ಸರಾಸರಿ ೩) ಹಾಗೂ ಅತಿಹೆಚ್ಚು ಸರಾಸರಿ ಸದಸ್ಯರ ಸಂಖ್ಯೆ ಮಾಗಡಿ ಗ್ರಾಮದಲ್ಲಿ (ಸರಾಸರಿ ೮) ಇರುವುದನ್ನು ಕಾಣಬಹುದು.


ಕೋಷ್ಟಕ–೪.೮ ರಲ್ಲಿ ವಿವಿಧ ಕುಟುಂಬಗಳಲ್ಲಿ ವಾಸವಾಗಿರುವ ಒಟ್ಟು ಸದಸ್ಯರ ಶೇಕಡಾವಾರು ಹಂಚಿಕೆಯನ್ನು ನೀಡಲಾಗಿದೆ. ಅಧ್ಯಯನದ ಪ್ರದೇಶದಲ್ಲಿ ೪ ಮತ್ತು ೫ ಸದಸ್ಯರಿರುವ ಕುಟುಂಬಗಳು

ಒಟ್ಟಾರೆಯಾಗಿ ೪೧.೧ ಪ್ರತಿಶತ ಇದೆ. ಸುಮಾರು ೧೮ ಪ್ರತಿಶತ ಕುಟುಂಬಗಳಲ್ಲಿ ೭ ಅಥವಾ ೭ ಕ್ಕಿಂತ ಹೆಚ್ಚು ಸದಸ್ಯರು, ೧೫ ಪ್ರತಿಶತ ಕುಟುಂಬಗಳಲ್ಲಿ ಮೂರು ಸದಸ್ಯರು, ೧೩.೩ ಪ್ರತಿಶತ ಕುಟುಂಬಗಳಲ್ಲಿ ೬ ಸದಸ್ಯರು, ೯.೯ ಪ್ರತಿಶತ ಕುಟುಂಬಗಳಲ್ಲಿ ಇಬ್ಬರು, ಹಾಗೂ ೩.೧ ಪ್ರತಿಶತ ಕುಟುಂಬಗಳಲ್ಲಿ ಒಬ್ಬ ಸದಸ್ಯರಿರುವುದನ್ನು ಕಾಣಬಹುದು.

ಕೋಷ್ಟಕ ೪.೮ ಕುಟುಂಬಗಳಲ್ಲಿ ವಾಸಿಸುವ ಸದಸ್ಯರ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕಿನ ಹೆಸರು	ಸದಸ್ಯರ ಸಂಖ್ಯೆ							ಒಟ್ಟು
	ಒಬ್ಬರು	ಇಬ್ಬರು	ಮೂವರು	ನಾಲ್ಕು	ಐದು ಜನ	ಆರು ಜನ	೭ ಹಾಗೂ ೭ ಕ್ಕಿಂತ ಹೆಚ್ಚು	
ಗದಗ	೧೬	೫೬	೧೨೫	೧೮೯	೨೧೯	೧೨೩	೧೫೦	೮೭೮
	೧.೮	೬.೪	೧೪.೨	೨೧.೫	೨೪.೯	೧೪.೦	೧೭.೧	೧೦೦.೦
ರೋಣ	೩೮	೭೮	೧೨೭	೧೩೪	೧೭೯	೧೨೧	೧೯೬	೮೭೩
	೪.೪	೮.೯	೧೪.೫	೧೫.೩	೨೦.೫	೧೩.೯	೨೨.೫	೧೦೦.೦
ನರಗುಂದ	೯	೪೧	೫೦	೬೯	೮೫	೫೪	೫೮	೩೬೬
	೨.೫	೧೧.೨	೧೩.೭	೧೮.೯	೨೩.೨	೧೪.೮	೧೫.೮	೧೦೦.೦
ಮುಂಡರಗಿ	೭	೫೬	೪೭	೪೬	೩೬	೧೧	೧೧	೨೧೪
	೩.೩	೨೬.೨	೨೨.೦	೨೧.೫	೧೬.೮	೫.೧	೫.೧	೧೦೦.೦
ಶಿರಹಟ್ಟಿ	೩	೬	೩	೧೬	೯	೮	೧೧	೫೬
	೫.೪	೧೦.೭	೫.೪	೨೮.೬	೧೬.೧	೧೪.೩	೧೯.೬	೧೦೦.೦
ಜಿಲ್ಲೆ	೭೩	೨೩೭	೩೫೨	೪೫೪	೫೨೮	೩೧೭	೪೨೬.೦	೨೩೮೭
	೩.೧	೯.೯	೧೪.೭	೧೯.೦	೨೨.೧	೧೩.೩	೧೭.೮	೧೦೦.೦





ಸುಮಾರು ೬೯ ಪ್ರತಿಶತ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಬಹುಶಃ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಈ ಅವಿಭಕ್ತ ಕುಟುಂಬಗಳ ವ್ಯವಸ್ಥೆ ಅನುಕೂಲಕರವಾಗಿರುವುದರಿಂದ ಈ ವ್ಯವಸ್ಥೆಯನ್ನು ಕಾಣಬಹುದು. ಆಧುನಿಕ ಯುಗದಲ್ಲಿಯೂ ಗಣನೀಯ ಸಂಖ್ಯೆಯಲ್ಲಿ (೩೧ ಪ್ರತಿಶತ) ಅವಿಭಕ್ತ ಕುಟುಂಬಗಳನ್ನು ಕಾಣಬಹುದಾಗಿದೆ. ಕೋಷ್ಟಕ-೪.೯ ರಲ್ಲಿ ಈ ಹಂಚಿಕೆಯನ್ನು ನೀಡಲಾಗಿದೆ.

ವಿವಿಧ ಕುಟುಂಬಗಳಲ್ಲಿ ವಾಸವಾಗಿರುವ ಒಟ್ಟು ಸದಸ್ಯರ ಶೇಕಡಾವಾರು ಹಂಚಿಕೆಯನ್ನು ಈ ೫ ತಾಲೂಕುಗಳನ್ನು ಗಮನದಲ್ಲಿಟ್ಟು ಪರಿಶೀಲಿಸಿದಾಗ ಕಂಡುಬಂದ ಅಂಶಗಳು ಈ ರೀತಿಯಾಗಿವೆ. ಗದಗ ತಾಲೂಕಿನಲ್ಲಿ ೫ ಜನ ಸದಸ್ಯರನ್ನು ಹೊಂದಿರುವ ಕುಟುಂಬಗಳು ಹೆಚ್ಚಿನ ಪ್ರಮಾಣದಲ್ಲಿ ಅಂದರೆ ೨೪.೯ ಪ್ರತಿಶತ ಇದೆ. ಒಬ್ಬ ಸದಸ್ಯರನ್ನು ಹೊಂದಿರುವ ಕುಟುಂಬಗಳು ೧.೮ ಪ್ರತಿಶತ (೧೬ ಕುಟುಂಬಗಳು ಮಾತ್ರ)ವಾಗಿವೆ. ೬.೪ ಪ್ರತಿಶತ ಕುಟುಂಬಗಳಲ್ಲಿ ಇಬ್ಬರು ಸದಸ್ಯರು, ೧೪.೨ ಪ್ರತಿಶತ ಕುಟುಂಬಗಳಲ್ಲಿ ೩ ಸದಸ್ಯರು, ೨೧.೫ ಪ್ರತಿಶತ ಕುಟುಂಬಗಳಲ್ಲಿ ೪ ಸದಸ್ಯರು, ೧೪.೦ ಪ್ರತಿಶತ ಕುಟುಂಬಗಳಲ್ಲಿ ೬ ಸದಸ್ಯರು ಇದ್ದರೆ, ೭ ಅಥವಾ ೭ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಕುಟುಂಬಗಳು ೧೭.೧ ಪ್ರತಿಶತವಾಗಿವೆ.

ರೋಣ ತಾಲೂಕಿನಲ್ಲಿ ೭ ಅಥವಾ ೭ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಕುಟುಂಬಗಳು ಹೆಚ್ಚು ಕಂಡು ಬಂದಿದೆ. ಪ್ರತಿಶತ ೨೨.೫ ಒಬ್ಬ ಸದಸ್ಯರಿರುವ ಕುಟುಂಬಗಳು ೪.೪ ಪ್ರತಿಶತ ಇವೆ. ೮.೯

ಪ್ರತಿಶತ ಕುಟುಂಬಗಳು ೨ ಸದಸ್ಯರನ್ನು, ೧೪.೫ ಪ್ರತಿಶತ ಕುಟುಂಬಗಳು ೩ ಸದಸ್ಯರನ್ನು, ೧೫.೩ ಪ್ರತಿಶತ ಕುಟುಂಬಗಳು ೫ ಸದಸ್ಯರನ್ನು ಮತ್ತು ೧೩.೯ ಪ್ರತಿಶತ ಕುಟುಂಬಗಳು ೬ ಸದಸ್ಯರನ್ನು ಹೊಂದಿವೆ.


ನರಗುಂದ ತಾಲೂಕಿನಲ್ಲಿ ೫ ಜನ ಸದಸ್ಯರಿರುವ ೨೩.೨ ಪ್ರತಿಶತ ಕುಟುಂಬಗಳು ಇವೆ. ೨.೫ ಪ್ರತಿಶತ ಕುಟುಂಬಗಳಲ್ಲಿ ಒಬ್ಬ ಸದಸ್ಯರಿರುವುದು ಕಂಡು ಬರುತ್ತದೆ. ೧೧.೨ ಪ್ರತಿಶತ ಕುಟುಂಬಗಳಲ್ಲಿ ೨ ಸದಸ್ಯರು, ೧೩.೭ ಪ್ರತಿಶತ ಕುಟುಂಬಗಳಲ್ಲಿ ೪ ಸದಸ್ಯರು, ೧೪.೮ ಪ್ರತಿಶತ ಕುಟುಂಬಗಳಲ್ಲಿ ೬ ಸದಸ್ಯರು ಇರುವುದು ಕಂಡು ಬಂದರೆ ೭ ಅಥವಾ ೭ ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಕುಟುಂಬಗಳು ೧೫.೮ ಪ್ರತಿಶತ ಇವೆ.

ಮುಂಡರಗಿ ತಾಲೂಕಿನಲ್ಲಿ ೨೬.೨ ಪ್ರತಿಶತ ಕುಟುಂಬಗಳಲ್ಲಿ ಇಬ್ಬರು ಸದಸ್ಯರಿರುವ ಮತ್ತು ಒಬ್ಬ ಸದಸ್ಯರಿರುವ ಕುಟುಂಬಗಳ ಪ್ರಮಾಣ ೩.೩ ಪ್ರತಿಶತ ಇದೆ. ೨೨.೦ ಪ್ರತಿಶತ ಕುಟುಂಬಗಳಲ್ಲಿ ೩ ಸದಸ್ಯರು, ೨೧.೫ ಪ್ರತಿಶತ ಕುಟುಂಬಗಳಲ್ಲಿ ೪ ಸದಸ್ಯರು, ೧೬.೮ ಪ್ರತಿಶತ ಕುಟುಂಬಗಳಲ್ಲಿ ೫ ಸದಸ್ಯರು, ೫.೧ ಪ್ರತಿಶತ ಕುಟುಂಬಗಳಲ್ಲಿ ೬ ಸದಸ್ಯರು ಇರುವುದು ಕಂಡು ಬಂದರೆ, ೭ ಅಥವಾ ೭ ಕ್ಕಿಂತ ಹೆಚ್ಚು ಜನ ಸದಸ್ಯರಿರುವ ಕುಟುಂಬಗಳು ೫.೧ ಪ್ರತಿಶತ ಇವೆ.

ಶಿರಹಟ್ಟಿ ತಾಲೂಕಿನಲ್ಲಿ ೪ ಜನ ಸದಸ್ಯರಿರುವ ಕುಟುಂಬಗಳು ೨೮.೬ ಪ್ರತಿಶತ ಇವೆ. ಒಬ್ಬ ಮತ್ತು ೩ ಜನ ಸದಸ್ಯರಿರುವ ಕುಟುಂಬಗಳು ೫.೪ ಪ್ರತಿಶತ ಇವೆ. ೧೦.೭ ಪ್ರತಿಶತ ಕುಟುಂಬಗಳು ೨ ಸದಸ್ಯರನ್ನು, ೧೬.೧ ಪ್ರತಿಶತ ಕುಟುಂಬಗಳು ೫ ಜನ ಸದಸ್ಯರನ್ನು, ೧೪.೩ ಪ್ರತಿಶತ ಕುಟುಂಬಗಳು ೬ ಸದಸ್ಯರನ್ನು ಹೊಂದಿದ್ದರೆ, ೭ ಅಥವಾ ೭ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಕುಟುಂಬಗಳು ೧೯.೬ ಪ್ರತಿಶತ ಇವೆ.

ಕೋಷ್ಟಕ ೪.೯ : ಕುಟುಂಬ ಪ್ರಕಾರಕ್ಕನುಗುಣವಾದ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಕುಟುಂಬಗಳ ಪ್ರಕಾರ			
	ವಿಭಕ್ತ		ಅವಿಭಕ್ತ	
	ಕುಟುಂಬಗಳ ಸಂಖ್ಯೆ	ಪ್ರತಿಶತ ಕುಟುಂಬಗಳು	ಕುಟುಂಬಗಳ ಸಂಖ್ಯೆ	ಪ್ರತಿಶತ ಕುಟುಂಬಗಳು
ಗದಗ	೬೦೫	೬೮.೯	೨೭೩	೩೧.೧
ರೋಣ	೫೫೬	೬೩.೭	೩೧೭	೩೬.೩
ನರಗುಂದ	೨೫೪	೬೯.೪	೧೧೨	೩೦.೬
ಮುಂಡರಗಿ	೧೯೨	೮೯.೭	೨೨	೧೦.೩
ಶಿರಹಟ್ಟಿ	೩೭	೬೬.೧	೧೯	೩೩.೯
ಜಿಲ್ಲೆ	೧೬೪೪	೬೮.೯	೭೪೩	೩೧.೧



ಅಧ್ಯಯನ ಪ್ರದೇಶದಲ್ಲಿರುವ ಛಲವಾದಿ ಸಮುದಾಯದ ಒಟ್ಟು ಜನಸಂಖ್ಯೆ ೧೧,೫೧೧ ಇದೆ. ಇದರಲ್ಲಿ ೫,೯೧೭ (೫೧.೪) ಪುರುಷರು ಹಾಗೂ ೫,೫೯೪ (೪೮.೬ ಪ್ರತಿಶತ) ಮಹಿಳೆಯರು ಇದ್ದಾರೆ. ಇಲ್ಲಿ ಸಮುದಾಯದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೪೫ ಮಹಿಳೆಯರು ಇದ್ದಾರೆ. ಕೋಷ್ಟಕ ೪.೧೦ ರಲ್ಲಿ ಕಾಣುವಂತೆ ಅತಿ ಹೆಚ್ಚಿನ ಜನಸಂಖ್ಯೆ ಗದಗ ಪಟ್ಟಣದಲ್ಲಿ ಇರುವುದನ್ನು ಕಾಣಬಹುದು.

ಕೋಷ್ಟಕ ೪.೧೦ ಲಿಂಗಕ್ಕನುಗುಣವಾದ ಜನಸಂಖ್ಯೆಯ ಗ್ರಾಮವಾರು ಪ್ರತಿಶತ ಹಂಚಿಕೆ

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
ಗದಗ	ನೀಲಗುಂದ	೯೭	೮೮	೧೮೫
		೫೨.೪	೪೭.೬	೧೦೦
	ಹರ್ತಿ	೪೩	೫೧	೯೪
		೪೫.೭	೫೪.೩	೧೦೦
	ಹೊಸಳ್ಳಿ	೫೫	೬೨	೧೧೭
		೪೭	೫೩	೧೦೦
	ಕಳಸಾಪುರ	೬೩	೬೯	೧೩೨
		೪೭.೭	೫೨.೩	೧೦೦
	ಬಳಗಾನೂರ	೫೦	೫೫	೧೦೫
		೪೭.೬	೫೨.೪	೧೦೦

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
	ಮುಳಗುಂದ	೧೧೦ ೪೯.೫	೧೧೨ ೫೦.೫	೨೨೨ ೧೦೦
	ನಾಗಾವಿ	೧೦೮ ೫೪	೯೨ ೪೬	೨೦೦ ೧೦೦
	ಆಸುಂಡಿ	೨ ೫೦	೨ ೫೦	೪ ೧೦೦
	ಮಲ್ಲಸಮುದ್ರ	೧೨೨ ೫೧.೭	೧೧೪ ೪೮.೩	೨೩೬ ೧೦೦
	ಹುಲಕೋಟಿ	೧೮ ೫೨.೯	೧೬ ೪೭.೧	೩೪ ೧೦೦
	ಲಿಂಗದಾಳ	೩೪ ೫೫.೭	೨೭ ೪೪.೩	೬೧ ೧೦೦
	ಮದಗಾನೂರು	೩೮ ೫೬.೭	೨೯ ೪೩.೩	೬೭ ೧೦೦
	ಬೆಳಹೊಡ	೯೬ ೫೪.೫	೮೦ ೪೫.೫	೧೭೬ ೧೦೦
	ಚಿಂಚಲಿ	೩೮ ೪೮.೭	೪೦ ೫೧.೩	೭೮ ೧೦೦
	ಗದಗ	೫೦೦ ೫೦.೮	೪೮೫ ೪೯.೨	೯೮೫ ೧೦೦
	ಬೆಟಗೇರಿ	೩೪೯ ೫೦.೬	೩೪೧ ೪೯.೪	೬೯೦ ೧೦೦
	ಹೊಂಬಳ	೧೯೮ ೫೨.೨	೧೮೧ ೪೭.೮	೩೭೯ ೧೦೦
	ಕುರ್ತಕೋಟಿ	೧೮೧ ೫೦.೩	೧೭೯ ೪೯.೭	೩೬೦ ೧೦೦
	ಹುಯಿಲಗೋಳ	೧೧೪ ೫೨.೮	೧೦೨ ೪೭.೨	೨೧೬ ೧೦೦
	ಒಟ್ಟು	೨೨೧೬ ೫೧	೨೧೨೫ ೪೯	೪೩೪೧ ೧೦೦

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
ರೋಣ	ಮಾಳವಾಡ	೯೭ ೫೨.೭	೮೭ ೪೭.೩	೧೮೪ ೧೦೦
	ಹೊಳೆಮಣ್ಣೂರು	೪೬ ೫೦	೪೬ ೫೦	೯೨ ೧೦೦
	ನಿಡಗುಂದಿ	೬೧ ೪೫.೨	೭೪ ೫೪.೮	೧೩೫ ೧೦೦
	ಗಾಡಗೋಳಿ	೫೨ ೪೭.೩	೫೮ ೫೨.೭	೧೧೦ ೧೦೦
	ಮುದೇನಗುಡಿ	೭೫ ೪೯.೭	೭೬ ೫೦.೩	೧೫೧ ೧೦೦
	ಬೆನಹಾಳ	೬೭ ೫೧.೯	೬೨ ೪೮.೧	೧೨೯ ೧೦೦
	ಸಂದಿಗವಾಡ	೨೦ ೫೦	೨೦ ೫೦	೪೦ ೧೦೦
	ಹೊಳೆಆಲೂರು	೭೨ ೪೬.೨	೮೪ ೫೩.೮	೧೫೬ ೧೦೦
	ಹೊನ್ನಾಪುರ	೧೭ ೫೬.೭	೧೩ ೪೩.೩	೩೦ ೧೦೦
	ಸವಡಿ	೭೩ ೫೬.೨	೫೭ ೪೩.೮	೧೩೦ ೧೦೦
	ಮಲ್ಲಾಪುರ	೧೫೩ ೫೩.೯	೧೩೧ ೪೬.೧	೨೮೪ ೧೦೦
	ಜಕ್ಕಲಿ	೧೧೩ ೫೨.೮	೧೦೧ ೪೭.೨	೨೧೪ ೧೦೦
	ಸೋಮನಕಟ್ಟಿ	೨೬ ೫೫.೩	೨೧ ೪೪.೭	೪೭ ೧೦೦
	ಕರಮಡಿ	೮೭ ೫೨.೧	೮೦ ೪೭.೯	೧೬೭ ೧೦೦
	ನರೇಗಲ್ಲ	೧೪೭ ೫೧.೨	೧೪೦ ೪೮.೮	೨೮೭ ೧೦೦
	ಹುಲ್ಲೂರು	೬೪ ೪೯.೬	೬೫ ೫೦.೪	೧೨೯ ೧೦೦

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
	ರೋಣ	೧೪೯	೧೫೪	೩೦೩
		೪೯.೨	೫೦.೮	೧೦೦
	ಗುಜಮಾಗಡಿ	೧೩	೧೮	೩೧
		೪೧.೯	೫೮.೧	೧೦೦
	ಕೌಜಗೇರಿ	೮೫	೯೩	೧೭೮
		೪೭.೮	೫೨.೨	೧೦೦
	ಗಜೇಂದ್ರಗಡ	೭೪	೬೮	೧೪೨
		೫೨.೧	೪೭.೯	೧೦೦
	ಸೂಡಿ	೩೮	೪೧	೭೯
		೪೮.೧	೫೧.೯	೧೦೦
	ಹಾಲಕೇರಿ	೮೦	೫೭	೧೩೭
		೫೮.೪	೪೧.೬	೧೦೦
	ಯಾವಗಲ್ಲ	೧೩೩	೧೩೨	೨೬೫
		೫೦.೨	೪೯.೮	೧೦೦
	ಬೆಳವಣಕಿ	೧೫೯	೧೪೪	೩೦೩
		೫೨.೫	೪೭.೫	೧೦೦
	ಮೆಣಸಗಿ	೧೪೭	೧೬೦	೩೦೭
		೪೭.೯	೫೨.೧	೧೦೦
	ಹಡಗಲಿ	೧೩	೧೧	೨೪
		೫೪.೨	೪೫.೮	೧೦೦
	ಕದಡಿ	೯೭	೮೪	೧೮೧
		೫೩.೬	೪೬.೪	೧೦೦
	ಹಿರೇಮಣ್ಣೂರು	೨೪	೨೧	೪೫
		೫೩.೩	೪೬.೭	೧೦೦
	ಸವಡಿ	೪೧	೩೩	೭೪
		೫೫.೪	೪೪.೬	೧೦೦
	ಒಟ್ಟು	೨೨೨೩	೨೧೩೧	೪೩೫೪
		೫೧.೧	೪೮.೯	೧೦೦

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
ನರಗುಂದ	ಕಪ್ಪಲಿ	೬೧ ೫೭	೪೬ ೪೩	೧೦೭ ೧೦೦
	ಹದ್ಲಿ	೮೮ ೫೪.೭	೭೩ ೪೫.೩	೧೬೧ ೧೦೦
	ಬೆನಹಟ್ಟಿ	೧೪೦ ೫೪.೯	೧೧೫ ೪೫.೧	೨೫೫ ೧೦೦
	ಭೈರನಹಟ್ಟಿ	೧೮ ೪೮.೬	೧೯ ೫೧.೪	೩೭ ೧೦೦
	ಬೆನಕೊಪ್ಪ	೫೬ ೫೧.೯	೫೨ ೪೮.೧	೧೦೮ ೧೦೦
	ಚಿಕ್ಕನರಗುಂದ	೮೫ ೫೨.೫	೭೭ ೪೭.೫	೧೬೨ ೧೦೦
	ಗಂಗಾಪುರ	೧೦ ೫೫.೬	೮ ೪೪.೪	೧೮ ೧೦೦
	ಕೊಣ್ಣೂರು	೭೨ ೪೨.೪	೯೮ ೫೭.೬	೧೭೦ ೧೦೦
	ರಡ್ಡೇರನಾಗೂರು	೯೭ ೫೧.೧	೯೩ ೪೮.೯	೧೯೦ ೧೦೦
	ಹಿರೇಕೊಪ್ಪ	೯ ೫೦	೯ ೫೦	೧೮ ೧೦೦
	ನರಗುಂದ	೨೬೮ ೫೨.೯	೨೩೯ ೪೭.೧	೫೦೭ ೧೦೦
	ಒಟ್ಟು	೯೦೪ ೫೨.೨	೮೨೯ ೪೭.೮	೧೭೩೩ ೧೦೦

ತಾಲೂಕು	ಗ್ರಾಮಗಳು	ಕುಟುಂಬದ ಸದಸ್ಯರ ಲಿಂಗ		ಒಟ್ಟು ಜನ ಸಂಖ್ಯೆ
		ಪುರುಷರು	ಸ್ತ್ರೀಯರು	
ಮುಂಡರಗಿ	ಡೋಣಿ	೩೩೬	೨೭೦	೬೦೬
		೫೫.೪	೪೪.೬	೧೦೦
	ಡಂಬಳ	೩೩	೨೨	೫೫
		೬೦	೪೦	೧೦೦
	ಮುಂಡರಗಿ	೫೩	೬೩	೧೧೬
		೪೫.೭	೫೪.೩	೧೦೦
	ಒಟ್ಟು	೪೩೬	೩೭೪	೮೧೦
		೫೩.೮	೪೬.೨	೧೦೦
ಶಿರಹಟ್ಟಿ	ಹೊಳೆಇಟಗಿ	೨	೫	೭
		೨೮.೬	೭೧.೪	೧೦೦
	ರಾಮಗಿರಿ	೨೪	೩೭	೬೧
		೩೯.೩	೬೦.೭	೧೦೦
	ಮಾಗಡಿ	೧೦	೬	೧೬
		೬೨.೫	೩೭.೫	೧೦೦
	ಗೊಜನೂರು	೬೩	೪೯	೧೧೨
		೫೬.೩	೪೩.೮	೧೦೦
	ಲಕ್ಷ್ಮೇಶ್ವರ	೩೦	೩೧	೬೧
		೪೯.೨	೫೦.೮	೧೦೦
	ಸುರಣಗಿ	೯	೭	೧೬
		೫೬.೩	೪೩.೮	೧೦೦
	ಒಟ್ಟು	೧೩೮	೧೩೫	೨೭೩
		೫೦.೫	೪೯.೫	೧೦೦
ಜಿಲ್ಲೆ		೫೯೧೭	೫೫೯೪	೧೧೫೧೧
		೫೧.೪	೪೮.೬	೧೦೦


ಇಲ್ಲಿ ಒಟ್ಟು ೯೮೫ ಜನಸಂಖ್ಯೆ ಇದೆ. ಇದರಲ್ಲಿ ೫೦೦ ಪುರುಷರು ಹಾಗೂ ೪೮೫ ಮಹಿಳೆಯರು ಇದ್ದಾರೆ. ಈ ಪಟ್ಟಣದಲ್ಲಿ ಸಮುದಾಯದ ಲಿಂಗನುಪಾತ ೯೭೦ ಇದೆ. ಗದಗ ಪಟ್ಟಣದ ಹೊರತಾಗಿ ಬೆಟಗೇರಿ, ಡೋಣಿ ಹಾಗೂ ನರಗುಂದಗಳಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ಕಾಣಬಹುದು. ಸಮುದಾಯದ ಕುಟುಂಬಗಳು ಡೋಣಿ ಗ್ರಾಮವನ್ನು ಹೊರತುಪಡಿಸಿ ಪಟ್ಟಣ ಪ್ರದೇಶದಲ್ಲಿ ಕಂಡುಬರುವ ಅಂಶವಾಗಿದೆ. ಇದರ ಜೊತೆಗೆ ಡೋಣಿ ಗ್ರಾಮದಲ್ಲಿ ಲಿಂಗಾನುಪಾತ ೮೦೪ ಇದೆ. ಇದು ಜಿಲ್ಲೆಯಲ್ಲಿನ ನಾಲ್ಕು ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರದೇಶಗಳಲ್ಲಿ ಅತ್ಯಂತ ಕಡಿಮೆ ಲಿಂಗನುಪಾತವಾಗಿದೆ. ಇದಕ್ಕೆ ಇರುವ ಕಾರಣ ಕಂಡುಹಿಡಿಯಲು ಈ ನಿಟ್ಟಿನಲ್ಲಿ ಅಧ್ಯಯನ ಮಾಡುವುದು ಅವಶ್ಯಕವಿದೆ.

ಕೋಷ್ಟಕ ೪.೧೧ ರಲ್ಲಿ ತಾಲೂಕವಾರು ಜನಸಂಖ್ಯೆಯನ್ನು ಕೊಡಲಾಗಿದೆ. ರೋಣ ಹಾಗೂ ಗದಗ ತಾಲೂಕುಗಳಲ್ಲಿ ಜಿಲ್ಲೆಯ ಸುಮಾರು ೭೬ ಪ್ರತಿಶತ ಜನಸಂಖ್ಯೆ ವಾಸವಾಗಿದೆ. ಶಿರಹಟ್ಟಿ ತಾಲೂಕಿನಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇದೆ. ಗದಗ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೪,೩೪೧ ಇದೆ. ಇದರಲ್ಲಿ ೪೯ ಪ್ರತಿಶತ ಮಹಿಳೆಯರು (೨,೧೨೫) ಹಾಗೂ ೫೧ ಪ್ರತಿಶತ ಪುರುಷರು (೨,೨೧೬) ಇದ್ದಾರೆ. ಜಿಲ್ಲೆಯ ೩೭.೭ ಪ್ರತಿಶತ ಜನಸಂಖ್ಯೆ ಈ ತಾಲೂಕಿನಲ್ಲಿ ವಾಸವಾಗಿದೆ. ರೋಣ ತಾಲೂಕಿನಲ್ಲಿ ಗದಗ ತಾಲೂಕಿಗಿಂತ ಹೆಚ್ಚಿನ ಜನಸಂಖ್ಯೆ (೪,೩೫೪) ಇರುವುದನ್ನು ಕಾಣಬಹುದು. ನರಗುಂದ, ಮುಂಡರಗಿ ಹಾಗೂ ಶಿರಹಟ್ಟಿ ತಾಲೂಕುಗಳಲ್ಲಿ ಕ್ರಮವಾಗಿ ೧೫.೧ (೧೭೩೩), ೭.೦ (೮೧೦) ಹಾಗೂ ೨.೪ (೨೭೩) ಪ್ರತಿಶತ ಜನಸಂಖ್ಯೆ ಇರುವುದನ್ನು ಗಮನಿಸಬಹುದು.

ಕೋಷ್ಟಕ ೪.೧೧ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಜನಸಂಖ್ಯೆ		ಒಟ್ಟು ಜನ ಸಂಖ್ಯೆ
	ಪುರುಷರು	ಸ್ತ್ರೀಯರು	
ಗದಗ	೨೨೧೬ ೫೧.೦	೨೧೨೫ ೪೯.೦	೪೩೪೧ ೧೦೦.೦
ರೋಣ	೨೨೨೩ ೫೧.೧	೨೧೩೧ ೪೮.೯	೪೩೫೪ ೧೦೦.೦
ನರಗುಂದ	೯೦೪ ೫೨.೨	೮೨೯ ೪೭.೮	೧೭೩೩ ೧೦೦
ಮುಂಡರಗಿ	೪೩೬ ೫೩.೮	೩೭೪ ೪೬.೨	೮೧೦ ೧೦೦
ಶಿರಹಟ್ಟಿ	೧೩೮ ೫೦.೫	೧೩೫ ೪೯.೫	೨೭೩ ೧೦೦
ಜಿಲ್ಲೆ	೫೯೧೭ ೫೧.೪	೫೫೯೪ ೪೮.೬	೧೧೫೧೧ ೧೦೦

ಮುಂಡರಗಿ ಹಾಗೂ ಶಿರಹಟ್ಟಿ ಗ್ರಾಮಗಳಲ್ಲಿನ ಅತಿ ಕಡಿಮೆ ಜನಸಂಖ್ಯೆಗೆ ಈ ತಾಲೂಕುಗಳಲ್ಲಿ ಮೇಲಿಂದ ಮೇಲೆ ತಲೆದೋರುವ ಬರಗಾಲ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯೋಗಾವಕಾಶಗಳ ಕೊರತೆ ಕಾರಣವಾಗಿರಬಹುದು.



ಕೋಷ್ಟಕ ೪.೧೨ ರಲ್ಲಿ ಕುಟುಂಬದ ಸದಸ್ಯರು ಕುಟುಂಬದ ಯಜಮಾನನೊಂದಿಗೆ ಹೊಂದಿದ ಸಂಬಂಧವನ್ನು ಕೊಡಲಾಗಿದೆ.

ಕೋಷ್ಟಕ ೪.೧೨ ಕುಟುಂಬದ ಯಜಮಾನನೊಂದಿಗಿರುವ ಸಂಬಂಧಕ್ಕನುಗುಣವಾಗಿ ತಾಲೂಕಾವಾರು ಪ್ರತಿಶತ ಹಂಚಿಕೆ


ತಾಲೂಕು	ಕುಟುಂಬದ ಯಜಮಾನನೊಡನೆ ಸದಸ್ಯರಿಗಿರುವ ಸಂಬಂಧ						ಒಟ್ಟು ಜನ ಸಂಖ್ಯೆ
	ಸ್ವಂತ	ಸಂಗಾತಿ	ಮಗ/ಮಗಳು	ತಂದೆ/ತಾಯಿ	ಸಹೋದರ/ ಸಹೋದರಿ	ಇತರೇ ಸಂಬಂಧಿಗಳು	
ಗದಗ	೯೧೬	೬೪೪	೧೯೯೨	೪೮	೩೯	೭೦೨	೪೩೪೧
	೨೧.೧	೧೪.೮	೪೫.೯	೧.೧	.೯	೧೬.೨	೧೦೦.೦
ರೋಣ	೯೨೫	೫೪೧	೧೮೧೬	೩೫	೫೬	೯೮೧	೪೩೫೪
	೨೧.೨	೧೨.೪	೪೧.೭	.೮	೧.೩	೨೨.೫	೧೦೦.೦
ನರಗುಂದ	೩೭೯	೨೮೦	೭೭೦	೪೬	೧೯	೨೩೯	೧೭೩೩
	೨೧.೯	೧೬.೨	೪೪.೪	೨.೭	೧.೧	೧೩.೮	೧೦೦.೦
ಮುಂಡರಗಿ	೨೧೯	೧೭೬	೩೫೨	೮	೯	೪೬	೮೧೦
	೨೭.೦	೨೧.೭	೪೩.೫	೧.೦	೧.೧	೫.೭	೧೦೦.೦
ಶಿರಹಟ್ಟಿ	೫೬	೩೭	೧೧೧	೨	೩	೬೪	೨೭೩
	೨೦.೫	೧೩.೬	೪೦.೭	.೭	೧.೧	೨೩.೪	೧೦೦.೦
ಜಿಲ್ಲೆ	೨೪೯೫	೧೬೭೮	೫೦೪೧	೧೩೯	೧೨೬	೨೦೩೨	೧೧೫೧೧.೦
	೨೧.೭	೧೪.೬	೪೩.೮	೧.೨	೧.೧	೧೭.೭	೧೦೦.೦

ಕೋಷ್ಟಕ ೪.೧೩ ರಲ್ಲಿ ವಯಸ್ಸು ಮತ್ತು ಲಿಂಗನುಪಾತಕ್ಕನುಗುಣವಾದ ಶೇಕಡಾವಾರು ಹಂಚಿಕೆ ಕೊಡಲಾಗಿದೆ. ಪ್ರತಿಶತ ೨೫.೩ ಜನಸಂಖ್ಯೆ ೧೪ ಮತ್ತು ೧೪ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳದ್ದಾಗಿದೆ. ಈ ಕಡಿಮೆ ಪ್ರತಿಶತ ಜನಸಂಖ್ಯೆ ಇತ್ತೀಚಿನ ದಿನಗಳಲ್ಲಿ ಜನನ ಪ್ರಮಾಣದಲ್ಲಿ ಆಗಿರುವ ಇಳಿಕೆಯನ್ನು ಸೂಚಿಸುತ್ತದೆ. ಸುಮಾರು ೬೬ ಪ್ರತಿಶತ ಜನಸಂಖ್ಯೆ ಉತ್ಪಾದನಾ ವಯೋಮಾನದಲ್ಲಿರುವುದನ್ನು (೧೫ ರಿಂದ ೫೯ ವಯಸ್ಸು) ಕಾಣಬಹುದು. ಹಾಗೂ ಇನ್ನುಳಿದ ೮.೮ ಪ್ರತಿಶತ ಜನಸಂಖ್ಯೆ ೬೦ ಹಾಗೂ ೬೦ಕ್ಕಿಂತ ಹೆಚ್ಚಿನ ವಯೋಮಾನದವರದ್ದೆ ಆಗಿದೆ. ಅಂದರೆ ಸುಮಾರು ೩೪ ಪ್ರತಿಶತ ಜನಸಂಖ್ಯೆ ಆರ್ಥಿಕ ಪರಾವಲಂಬಿಯಾಗಿದ್ದಾರೆ.

ಕೋಷ್ಟಕ ೪.೧೩ ಛಲವಾದಿ ಜನಸಂಖ್ಯೆಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ವಯೋ ಗುಂಪುಗಳು		
	೧೫ ವರ್ಷಕ್ಕಿಂತ ಕಡಿಮೆ	೧೫-೫೯ ವರ್ಷ	೬೦ ವರ್ಷ ಹಾಗೂ ೬೦ ಕ್ಕೂ ಮೇಲ್ಪಟ್ಟವರು
ಗದಗ	೨೫.೦	೬೭.೭	೭.೩
ರೋಣ	೨೬.೫	೬೩.೨	೧೦.೪
ನರಗುಂದ	೨೪.೮	೬೫.೫	೯.೭
ಮುಂಡರಗಿ	೨೨.೪	೭೧.೨	೬.೫
ಶಿರಹಟ್ಟಿ	೨೩.೮	೬೭.೮	೮.೪
ಜಿಲ್ಲೆ	೨೫.೩೦	೬೫.೯	೮.೮

ತಾಲೂಕು	ಆರ್ಥಿಕವಾಗಿ	
	ಸ್ವತಂತ್ರರು	ಅವಲಂಬಿತರು
ಗದಗ	೩೨.೩	೬೭.೭
ರೋಣ	೩೬.೮	೬೩.೨
ನರಗುಂದ	೩೪.೫	೬೫.೫
ಮುಂಡರಗಿ	೨೮.೮	೭೧.೨
ಶಿರಹಟ್ಟಿ	೩೨.೨	೬೭.೮
ಜಿಲ್ಲೆ	೩೪.೦೯	೬೫.೯೧




ಕೋಷ್ಟಕ ೪.೧೪ ಗದಗ ಜಿಲ್ಲೆಯ ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗನುಪಾತಕ್ಕನುಗುಣವಾದ ಜನಸಂಖ್ಯೆ

ವಯೋ ಗುಂಪು	ಪುರುಷರು		ಸ್ತ್ರೀಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦-೪	೪೩೦	೭.೩೧	೩೯೦	೭.೦೨	೮೨೦	೭.೧೭
೫-೯	೪೮೩	೮.೨೧	೫೧೧	೯.೨೦	೯೯೪	೮.೬೯
೧೦-೧೪	೫೬೨	೯.೫೫	೫೧೮	೯.೩೨	೧೦೮೦	೯.೪೪
೧೫-೧೯	೬೩೯	೧೦.೮೬	೫೨೯	೯.೫೨	೧೧೬೮	೧೦.೨೧
೨೦-೨೪	೭೨೨	೧೨.೨೭	೫೮೯	೧೦.೬೦	೧೩೧೧	೧೧.೪೬
೨೫-೨೯	೬೮೮	೧೧.೭೦	೬೩೯	೧೧.೫೦	೧೩೨೭	೧೧.೬೦
೩೦-೩೪	೪೧೯	೭.೧೨	೪೩೨	೭.೭೭	೮೫೧	೭.೪೪
೩೫-೩೯	೪೬೦	೭.೮೨	೪೪೦	೭.೯೨	೯೦೦	೭.೮೭
೪೦-೪೪	೩೪೨	೫.೮೧	೨೯೭	೫.೩೪	೬೩೯	೫.೫೯
೪೫-೪೯	೩೨೫	೫.೫೩	೨೫೬	೪.೬೧	೫೮೧	೫.೦೮
೫೦-೫೪	೨೧೨	೩.೬೦	೨೩೭	೪.೨೬	೪೪೯	೩.೯೩
೫೫-೫೯	೧೫೨	೨.೫೮	೧೬೧	೨.೯೦	೩೧೩	೨.೭೪
೬೦-೬೪	೧೫೯	೨.೭೦	೨೨೫	೪.೦೫	೩೮೪	೩.೩೬
೬೫-೬೯	೧೪೫	೨.೪೭	೧೬೧	೨.೯೦	೩೦೬	೨.೬೮
೭೦-೭೪	೮೬	೧.೪೬	೧೦೩	೧.೮೫	೧೮೯	೧.೬೫
೭೫-೭೯	೩೯	೦.೬೬	೩೪	೦.೬೧	೭೩	೦.೬೪
೮೦+	೧೯	೦.೩೨	೩೫	೦.೬೩	೫೪	೦.೪೭
	೫೮೮೨	೧೦೦.೦೦	೫೫೫೭	೧೦೦.೦೦	೧೧೪೩೯	೧೦೦.೦೦


ಕೋಷ್ಟಕ ೪.೧೫ ರಿಂದ ೪.೨೧ ರವರೆಗೆ ತಾಲೂಕಾವಾರು ವಯಸ್ಸು ಹಾಗೂ ಲಿಂಗಾನುಪಾತಕ್ಕನುಗುಣವಾದ ಶೇಕಡಾವಾರು ಹಂಚಿಕೆಯನ್ನು ಸೂಚಿಸಲಾಗಿದೆ. ಈ ಕೋಷ್ಟಕಗಳ ಜೊತೆಗೆ ಆರ್ಥಿಕವಾಗಿ ಸ್ವತಂತ್ರವಾಗಿರುವ ಶೇಕಡಾವಾರು ಜನಸಂಖ್ಯೆಯ ಚಿತ್ರಣವನ್ನು ಕೊಡುವ ಸ್ತಂಭಾಲೇಖವನ್ನು ಕೊಡಲಾಗಿದೆ.

ಮುಂಡರಗಿ ತಾಲೂಕಿನಲ್ಲಿ ಅತ್ಯಂತ ಹೆಚ್ಚಿನ ಜನಸಂಖ್ಯೆ ಆರ್ಥಿಕವಾಗಿ ಸ್ವತಂತ್ರವಾಗಿದೆ (೭೧.೨ ಪ್ರತಿಶತ) ಎಂದು ಈ ಸ್ತಂಭಾಲೇಖದಿಂದ ತಿಳಿದುಬರುವ ಅಂಶವಾಗಿದೆ. ಇದರ ಮುಂದಿನ ಸ್ಥಾನಗಳನ್ನು ಕ್ರಮವಾಗಿ (೬೭.೮, ೬೭.೭, ೬೫.೫ ಹಗೂ ೬೩.೨ ಪ್ರತಿಶತ) ಶಿರಹಟ್ಟಿ, ಗದಗ, ನರಗುಂದ ಹಾಗೂ ರೋಣ ತಾಲೂಕುಗಳು ಪಡೆದುಕೊಂಡಿವೆ. ಈ ವಿಶ್ಲೇಷಣೆಯಿಂದ ೬೦ ವರ್ಷಕ್ಕೆ ಮೇಲ್ಪಟ್ಟ ವಯೋಮಾನದ ಜನಸಂಖ್ಯೆ ರೋಣ ತಾಲೂಕಿನಲ್ಲಿ ೧೦.೪ ಪ್ರತಿಶತ, ನರಗುಂದ ತಾಲೂಕಿನಲ್ಲಿ ೯.೭ ಪ್ರತಿಶತ, ಶಿರಹಟ್ಟಿ ತಾಲೂಕಿನಲ್ಲಿ ೮.೪ ಪ್ರತಿಶತ, ಗದಗನಲ್ಲಿ ೭.೩ ಪ್ರತಿಶತ ಹಾಗೂ ಮುಂಡರಗಿ ತಾಲೂಕಿನಲ್ಲಿ ೬.೫ ಪ್ರತಿಶತ ಕಂಡುಬರುವ ಇನ್ನೊಂದು ಮುಖ್ಯ ಅಂಶವಾಗಿದೆ. ಮುಂಡರಗಿ ತಾಲೂಕಿನ ಛಲವಾದಿ ಸಮುದಾಯ ಕುಟುಂಬಗಳು ಆರ್ಥಿಕವಾಗಿ ಸ್ವತಂತ್ರವಾಗಿರುವ ವಯೋಮಾನದ ಜನಸಂಖ್ಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವುದು ಈ ಸಮೀಕ್ಷೆಯಿಂದ ತಿಳಿದುಬರುವ ಅಂಶವಾಗಿದೆ.




ಕೋಷ್ಟಕ ೪.೧೫ ಗದಗ ಜಿಲ್ಲೆಯ ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಕ್ಕನುಗುಣವಾದ ತಾಲೂಕಾವಾರು ಜನಸಂಖ್ಯೆ

ತಾಲೂಕು	ಜನಸಂಖ್ಯೆ		ಒಟ್ಟು
	ಪುರುಷರು	ಮಹಿಳೆಯರು	
ಗದಗ	೨೨೧೬	೨೧೨೫	೪೩೪೧
	೫೧.೦	೪೯.೦	೧೦೦.೦
ರೋಣ	೨೨೨೩	೨೧೩೧	೪೩೫೪
	೫೧.೧	೪೮.೯	೧೦೦.೦
ನರಗುಂದ	೯೦೪	೮೨೯	೧೭೩೩
	೫೨.೨	೪೭.೮	೧೦೦
ಮುಂಡರಗಿ	೪೩೬	೩೭೪	೮೧೦
	೫೩.೮	೪೬.೨	೧೦೦
ಶಿರಹಟ್ಟಿ	೧೩೮	೧೩೫	೨೭೩
	೫೦.೫	೪೯.೫	೧೦೦
ಜಿಲ್ಲೆ	೫೯೧೭	೫೫೯೪	೧೧೫೧೧
	೫೧.೪	೪೮.೬	೧೦೦



ಕೋಷ್ಟಕ ೪.೧೬ ಗದಗ ತಾಲೂಕು ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆ

ವಯೋಗುಂಪು	ಪುರುಷರು		ಮಹಿಳೆಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦-೪	೧೫೦	೬.೮	೧೪೬	೬.೮	೨೯೬	೬.೯
೦೫-೦೯	೧೮೭	೮.೫	೧೭೮	೮.೫	೩೬೫	೮.೪
೧೦-೧೪	೨೦೭	೯.೪	೨೧೧	೯.೪	೪೧೮	೧೦
೧೫-೧೯	೨೫೧	೧೧.೪	೨೩೬	೧೧.೪	೪೮೭	೧೧.೨
೨೦-೨೪	೩೨೯	೧೪.೯	೨೪೬	೧೪.೯	೫೭೫	೧೧.೬
೨೫-೨೯	೨೬೧	೧೧.೮	೨೩೨	೧೧.೮	೪೯೩	೧೧
೩೦-೩೪	೧೩೪	೬.೧	೧೪೯	೬.೧	೨೮೩	೭
೩೫-೩೯	೧೪೫	೬.೬	೧೬೮	೬.೬	೩೧೩	೭.೯
೪೦-೪೪	೧೨೭	೫.೮	೧೧೬	೫.೮	೨೪೩	೫.೫
೪೫-೪೯	೧೧೫	೫.೨	೧೨೩	೫.೨	೨೩೮	೫.೮
೫೦-೫೪	೭೮	೩.೫	೯೦	೩.೫	೧೬೮	೪.೩
೫೫-೫೯	೭೦	೩.೨	೫೪	೩.೨	೧೨೪	೨.೬
೬೦-೬೪	೬೧	೨.೮	೬೮	೨.೮	೧೨೯	೩.೨
೬೫-೬೯	೪೯	೨.೨	೫೦	೨.೨	೯೯	೨.೪
೭೦-೭೪	೨೬	೧.೨	೨೪	೧.೨	೫೦	೧.೧
೭೫-೭೯	೮	೦.೪	೧೫	೦.೪	೨೩	೦.೭
೮೦+	೭	೦.೩	೮	೦.೩	೧೫	೦.೪
ಒಟ್ಟು	೨೨೦೫	೧೦೦	೨೧೧೪	೧೦೦	೪೩೧೯	೧೦೦



ಕೋಷ್ಟಕ ೪.೧೭: ರೋಣ ತಾಲೂಕು ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆ

ವಯೋಗುಂಪು	ಪುರುಷರು		ಮಹಿಳೆಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦-೪	೧೬೩	೭.೪	೧೫೦	೭.೧	೩೧೩	೭.೨
೫-೯	೧೯೮	೯.೦	೨೨೦	೧೦.೪	೪೧೮	೯.೭
೧೦-೧೪	೨೨೦	೧೦.೦	೧೯೩	೯.೧	೪೧೩	೯.೬
೧೫-೧೯	೨೪೫	೧೧.೧	೧೭೧	೮.೧	೪೧೬	೯.೬
೨೦-೨೪	೨೨೮	೧೦.೩	೨೧೮	೧೦.೩	೪೪೬	೧೦.೩
೨೫-೨೯	೨೭೨	೧೨.೩	೨೫೮	೧೨.೨	೫೩೦	೧೨.೩
೩೦-೩೪	೧೭೦	೭.೭	೧೫೮	೭.೫	೩೨೮	೭.೬
೩೫-೩೯	೧೮೪	೮.೩	೧೫೩	೭.೨	೩೩೭	೭.೮
೪೦-೪೪	೧೨೪	೫.೬	೯೯	೪.೭	೨೨೩	೫.೨
೪೫-೪೯	೧೦೬	೪.೮	೮೧	೩.೮	೧೮೭	೪.೩
೫೦-೫೪	೭೨	೩.೩	೮೬	೪.೧	೧೫೮	೩.೭
೫೫-೫೯	೪೩	೧.೯	೬೧	೨.೯	೧೦೪	೨.೪
೬೦-೬೪	೫೯	೨.೭	೯೮	೪.೬	೧೫೭	೩.೬
೬೫-೬೯	೫೮	೨.೬	೭೭	೩.೬	೧೩೫	೩.೧
೭೦-೭೪	೩೩	೧.೫	೫೬	೨.೬	೮೯	೨.೧
೭೫-೭೯	೨೪	೧.೧	೧೭	೦.೮	೪೧	೦.೯
೮೦+	೭	೦.೩	೧೯	೦.೯	೨೬	೦.೬
	೨೨೦೬	೧೦೦.೦	೨೧೧೫	೧೦೦.೦	೪೩೨೧	೧೦೦.೦

ಕೋಷ್ಟಕ ೪.೧೮: ನರಗುಂದ ತಾಲೂಕು ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆ

ವಯೋಗುಂಪು	ಪುರುಷರು		ಮಹಿಳೆಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦–೪	೭೩	೮.೧	೫೯	೭.೨	೧೩೨	೭.೭
೫–೯	೫೧	೫.೭	೬೮	೮.೩	೧೧೯	೬.೯
೧೦–೧೪	೯೧	೧೦.೧	೮೪	೧೦.೨	೧೭೫	೧೦.೨
೧೫–೧೯	೯೫	೧೦.೬	೮೨	೧೦.೦	೧೭೭	೧೦.೩
೨೦–೨೪	೧೦೭	೧೧.೯	೭೨	೮.೮	೧೭೯	೧೦.೪
೨೫–೨೯	೮೮	೯.೮	೮೩	೧೦.೧	೧೭೧	೯.೯
೩೦–೩೪	೬೬	೭.೩	೮೧	೯.೯	೧೪೭	೮.೫
೩೫–೩೯	೭೧	೭.೯	೬೬	೮.೦	೧೩೭	೮.೦
೪೦–೪೪	೬೧	೬.೮	೪೯	೬.೦	೧೧೦	೬.೪
೪೫–೪೯	೫೦	೫.೬	೨೬	೩.೨	೭೬	೪.೪
೫೦–೫೪	೩೯	೪.೩	೩೭	೪.೫	೭೬	೪.೪
೫೫–೫೯	೨೨	೨.೪	೩೩	೪.೦	೫೫	೩.೨
೬೦–೬೪	೨೪	೨.೭	೪೬	೫.೬	೭೦	೪.೧
೬೫–೬೯	೩೩	೩.೭	೧೭	೨.೧	೫೦	೨.೯
೭೦–೭೪	೨೦	೨.೨	೧೪	೧.೭	೩೪	೨.೦
೭೫–೭೯	೫	೦.೬	೧	೦.೧	೬	೦.೩
೮೦+	೩	೦.೩	೪	೦.೫	೭	೦.೪
	೮೯೯	೧೦೦.೦	೮೨೨	೧೦೦.೦	೧೭೨೧	೧೦೦.೦

ಕೋಷ್ಟಕ ೪.೧೯ : ಮುಂಡರಗಿ ತಾಲೂಕು ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆ

ವಯೋಗುಂಪು	ಪುರುಷರು		ಮಹಿಳೆಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦-೪	೩೭	೮.೫	೨೬	೭.೦	೬೩	೭.೮
೫-೯	೨೮	೬.೫	೩೮	೧೦.೨	೬೬	೮.೨
೧೦-೧೪	೩೨	೭.೪	೧೯	೫.೧	೫೧	೬.೩
೧೫-೧೯	೩೬	೮.೩	೩೦	೮.೧	೬೬	೮.೨
೨೦-೨೪	೪೬	೧೦.೬	೩೭	೧೦.೦	೮೩	೧೦.೩
೨೫-೨೯	೫೫	೧೨.೭	೫೧	೧೩.೭	೧೦೬	೧೩.೨
೩೦-೩೪	೩೭	೮.೫	೩೩	೮.೯	೭೦	೮.೭
೩೫-೩೯	೪೮	೧೧.೧	೩೭	೧೦.೦	೮೫	೧೦.೬
೪೦-೪೪	೨೨	೫.೧	೨೫	೬.೭	೪೭	೫.೮
೪೫-೪೯	೩೯	೯.೦	೨೦	೫.೪	೫೯	೭.೩
೫೦-೫೪	೧೮	೪.೧	೧೫	೪.೦	೩೩	೪.೧
೫೫-೫೯	೧೪	೩.೨	೧೦	೨.೭	೨೪	೩.೦
೬೦-೬೪	೧೦	೨.೩	೭	೧.೯	೧೭	೨.೧
೬೫-೬೯	೩	೦.೭	೧೬	೪.೩	೧೯	೨.೪
೭೦-೭೪	೬	೧.೪	೬	೧.೬	೧೨	೧.೫
೭೫-೭೯	೨	೦.೫	೦	೦.೦	೨	೦.೨
೮೦+	೧	೦.೨	೧	೦.೩	೨	೦.೨
	೪೩೪	೧೦೦.೦	೩೭೧	೧೦೦.೦	೮೦೫	೧೦೦.೦

ಕೋಷ್ಟಕ ೪.೨೦: ಶಿರಹಟ್ಟಿ ತಾಲೂಕು ಛಲವಾದಿ ಸಮುದಾಯದ ವಯೋಗುಂಪು ಹಾಗೂ ಲಿಂಗಾನುಪಾತಕ್ಕನುಗುಣವಾದ ಜನಸಂಖ್ಯೆ

ವಯೋಗುಂಪು	ಪುರುಷರು		ಮಹಿಳೆಯರು		ಒಟ್ಟು	
	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ	ಜನಸಂಖ್ಯೆ	ಪ್ರತಿಶತ
೦-೪	೭	೫.೧	೯	೬.೭	೧೬	೫.೯
೫-೯	೧೯	೧೩.೮	೭	೫.೨	೨೬	೯.೫
೧೦-೧೪	೧೨	೮.೭	೧೧	೮.೧	೨೩	೮.೪
೧೫-೧೯	೧೨	೮.೭	೧೦	೭.೪	೨೨	೮.೧
೨೦-೨೪	೧೨	೮.೭	೧೬	೧೧.೯	೨೮	೧೦.೩
೨೫-೨೯	೧೨	೮.೭	೧೫	೧೧.೧	೨೭	೯.೯
೩೦-೩೪	೧೨	೮.೭	೧೧	೮.೧	೨೩	೮.೪
೩೫-೩೯	೧೨	೮.೭	೧೬	೧೧.೯	೨೮	೧೦.೩
೪೦-೪೪	೮	೫.೮	೮	೫.೯	೧೬	೫.೯
೪೫-೪೯	೧೫	೧೦.೯	೬	೪.೪	೨೧	೭.೭
೫೦-೫೪	೫	೩.೬	೯	೬.೭	೧೪	೫.೧
೫೫-೫೯	೩	೨.೨	೩	೨.೨	೬	೨.೨
೬೦-೬೪	೫	೩.೬	೬	೪.೪	೧೧	೪.೦
೬೫-೬೯	೨	೧.೪	೧	೦.೭	೩	೧.೧
೭೦-೭೪	೧	೦.೭	೩	೨.೨	೪	೧.೫
೭೫-೭೯	೦	೦.೦	೧	೦.೭	೧	೦.೪
೮೦+	೧	೦.೭	೩	೨.೨	೪	೧.೫
	೧೩೮	೧೦೦.೦	೧೩೫	೧೦೦.೦	೨೭೩	೧೦೦.೦

ರೋಣ ತಾಲೂಕಿನ ೧೫ ವರ್ಷದೊಳಗಿನ ಜನಸಂಖ್ಯೆ ಅತ್ಯಂತ ಹೆಚ್ಚಾಗಿರುವುದರಿಂದ ಈ ತಾಲೂಕನ್ನು ಯುವ ತಾಲೂಕು ಎಂದು ಕರೆಯಬಹುದು.


ಲಿಂಗಾನುಪಾತವೆಂದರೆ ಪ್ರತಿ ೧೦೦೦ ಪುರುಷರಿಗಿರುವ ಮಹಿಳೆಯರ ಪ್ರಮಾಣವಾಗಿದೆ. ಇತ್ತೀಚಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಮಹಿಳೆಯರ ಸಂಖ್ಯೆ ಇಳಿಮುಖವಾಗಿ ಲಿಂಗಾನುಪಾತ ಕುಸಿದಿದೆ.


ಕೋಷ್ಟಕ ೪.೨೧ : ಛಲವಾದಿ ಸಮುದಾಯದವರ ವಯೋಮಾನಕ್ಕನುಗುಣವಾದ ತಾಲೂಕಾವಾರು ಲಿಂಗಾನುಪಾತ


ವಯೋ ಗುಂಪು	ಗದಗ	ರೋಣ	ನರಗುಂದ	ಮುಂಡರಗಿ	ಶಿರಹಟ್ಟಿ	ಜಿಲ್ಲೆ
೦-೪	೯೭೩	೭೦೩	೮೦೮	೯೨೦	೧೨೮೬	೯೦೭
೫-೯	೯೫೨	೧೩೫೭	೧೩೩೩	೧೧೧೧	೩೬೮	೧೦೫೮
೧೦-೧೪	೧೦೧೯	೫೯೪	೯೨೩	೮೭೭	೯೧೭	೯೨೨
೧೫-೧೯	೯೪೦	೮೩೩	೮೬೩	೬೯೮	೮೩೩	೮೨೮
೨೦-೨೪	೭೪೮	೮೦೪	೬೭೩	೯೫೬	೧೩೩೩	೮೧೬
೨೫-೨೯	೮೮೯	೯೨೭	೯೪೩	೯೪೯	೧೨೫೦	೯೨೯
೩೦-೩೪	೧೧೧೨	೮೯೨	೧೨೨೭	೯೨೯	೯೧೭	೧೦೩೧
೩೫-೩೯	೧೧೫೯	೭೭೧	೯೩೦	೮೩೨	೧೩೩೩	೯೫೭
೪೦-೪೪	೯೧೩	೧೧೩೬	೮೦೩	೭೯೮	೧೦೦೦	೮೬೮
೪೫-೪೯	೧೦೭೦	೫೧೩	೫೨೦	೭೬೪	೪೦೦	೭೮೮
೫೦-೫೪	೧೧೫೪	೮೩೩	೯೪೯	೧೧೯೪	೧೮೦೦	೧೧೧೮
೫೫-೫೯	೭೭೧	೭೧೪	೧೫೦೦	೧೪೧೯	೧೦೦೦	೧೦೫೯
೬೦-೬೪	೧೧೧೫	೭೦೦	೧೯೧೭	೧೬೬೧	೧೨೦೦	೧೪೧೫
೬೫-೬೯	೧೦೨೦	೫೩೩೩	೫೧೫	೧೩೨೮	೫೦೦	೧೧೧೦
೭೦-೭೪	೯೨೩	೧೦೦೦	೭೦೦	೧೬೯೭	೩೦೦೦	೧೧೯೮
೭೫-೭೯	೧೮೭೫	*	೨೦೦	೭೦೮	*	೮೭೨
೮೦+	೧೧೪೩	೧೦೦೦	೧೩೩೩	೨೭೧೪	೩೦೦೦	೧೮೪೨
ಒಟ್ಟು	೯೫೯	೮೫೫	೯೧೪	೯೫೯	೯೭೮	೯೪೫


* ಈ ವಯೋಮಾನದಲ್ಲಿ ಪುರುಷರು ಇರುವುದಿಲ್ಲ


ಗದಗ ಜಿಲ್ಲೆಯ ಛಲವಾದಿ ಸಮುದಾಯದ ತಾಲೂಕಾವಾರು ಲಿಂಗಾನುಪಾತ
ಶಿರಹಟ್ಟಿ
೯೭೮
ರೋಣ
೯೫೯
ಗದಗ
೯೫೯
ಜಿಲ್ಲೆ
೯೪೫
ನರಗುಂದ
೯೧೪
ಮುಂಡರಗಿ
೮೫೫



ಗದಗ ಜಿಲ್ಲೆಯ ಛಲವಾದಿ ಸಮುದಾಯದ
ವಯೋಮಾನಕ್ಕನುಗುಣವಾದ ಲಿಂಗಾನುಪಾತ
೮೦+
೭೫-೭೯
೭೦-೭೪
೬೫-೬೯
೬೦-೬೪
೫೫-೫೯
೫೦-೫೪
೪೫-೪೯
೪೦-೪೪
೩೫-೩೯
೩೦-೩೪
೨೫-೨೯
೨೦-೨೪
೧೫-೧೯
೧೦-೧೪
೫-೯
೦-೪
೧೧೯೮
೧೧೧೦
೧೪೧೫
೧೦೫೯
೭೮೮
೮೭೮
೯೫೭
೧೦೭೧
೯೨೯
೮೧೬
೮೨೮
೯೨೨
೧೦೫೮
೯೦೭



ಗದಗ ತಾಲೂಕಿನ ಛಲವಾದಿ ಸಮುದಾಯದವರ
ವಯೋಮಾನಕ್ಕನುಗುಣವಾದ ಲಿಂಗಾನುಪಾತ
೮೦+
೭೦-೭೪
೬೦-೬೪
೫೦-೫೪
೪೦-೪೪
೩೦-೩೪
೨೦-೨೪
೧೦-೧೪
೦-೪


ಮುಂಡರಗಿ ತಾಲೂಕಿನ ಛಲವಾದಿ ಸಮುದಾಯದವರ
ವಯೋಮಾನಕ್ಕನುಗುಣವಾದ ಲಿಂಗಾನುಪಾತ
೮೦+
೧೦೦೦
೦
೭೦-೭೪
೧೦೦೦
೬೦-೬೪
೫೦-೫೪
೪೦-೪೪
೩೦-೩೪
೨೦-೨೪
೧೦-೧೪
೦-೪



ಲಿಂಗಾನುಪಾತದ ಏರುಪೇರಿಗೆ ಗಂಡು ಸಂತಾನದ ವ್ಯಾಮೋಹದಿಂದ ನಡೆದಿರುವ ಹೆಣ್ಣು ಭ್ರೂಣ ಹತ್ಯೆಯೆ ಇದಕ್ಕೆ ಕಾರಣ ಎಂಬುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಇದು ಸಾಮಾಜಿಕ ಅಸಮತೋಲನಕ್ಕೆ ಎಡೆಮಾಡಿಕೊಟ್ಟು ಸಮಾಜದ ಮೇಲೆ ಅನಾರೋಗ್ಯಕರ ಪರಿಣಾಮ ಬೀರುತ್ತದೆ. ಆದಕಾರಣ ಪುರುಷರ-ಮಹಿಳೆಯರ ಸಂಖ್ಯೆಯಲ್ಲಿ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪರಿಣಾಮಕಾರಿ ಪ್ರಯತ್ನಗಳು ಅವಶ್ಯಕವಾಗಿವೆ. ಈ ದಿಸೆಯಲ್ಲಿ ಸಮುದಾಯದಲ್ಲಿ ಕಂಡುಬಂದ ಲಿಂಗಾನುಪಾತದ ಸಮಗ್ರ ಚಿತ್ರಣವನ್ನು ಹಾಗೂ ಈ ವಿಷಯವನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಇದಕ್ಕೆ ಸಂಬಂಧಿಸಿ ಸ್ತಂಭಾಚಿತ್ರಗಳನ್ನು ಕೊಡಲಾಗಿದೆ. ವಯೋಗುಂಪಿಗನುಗುಣವಾದ ತಾಲೂಕವಾರು ಲಿಂಗಾನುಪಾತವನ್ನು ಹಾಗೂ ಸಮಗ್ರ ಜಿಲ್ಲೆಯ ಲಿಂಗಾನುಪಾತವನ್ನು ಕೂಡ ಕೊಡಲಾಗಿದೆ.


ರೋಣ ತಾಲೂಕಿನ ಭಲವಾದಿ ಸಮುದಾಯದವರ
ವಯೋಮಾನಕ್ಕನುಗುಣವಾದ ಲಿಂಗಾನುಪಾತ
೮೦+
೨೭೧೪
೭೦೮
೭೦-೭೪
೧೬೯೭
೧೩೨೮
೬೦-೬೪
೧೬೬೧
೧೪೧೯
೫೦-೫೪
೧೧೯೪
೭೬೪
೪೦-೪೪
೭೯೮
೮೩೨
೩೦-೩೪
೯೨೫
೯೪೯
೨೦-೨೪
೯೫೬
೬೯೮
೧೦-೧೪
೮೭೭
೧೧೧೧
೦-೪
೯೨೦


ಶಿರಹಟ್ಟಿ ತಾಲೂಕಿನ ಛಲವಾದಿ ಸಮುದಾಯದವರ
ವಯೋಮಾನಕ್ಕನುಗುಣವಾದ ಲಿಂಗಾನುಪಾತ
೮೦+
೧೦೦೦
೦
೭೦-೭೪
೧೦೦೦
೫೩೩೩
೬೦-೬೪
೭೦೦
೭೧೪
೫೦-೫೪
೫೩೩
೫೧೩
೪೦-೪೪
೧೧೩೬
೭೭೧
೩೦-೩೪
೮೯೨
೯೨೭
೨೦-೨೪
೮೦೪
೫೩೩
೧೦-೧೪
೫೯೪
೧೩೫೭
೦-೪
೭೦೩

ಇದರಿಂದ ಗದಗ ಜಿಲ್ಲೆಯ ಛಲವಾದಿ ಸಮುದಾಯದ ಲಿಂಗಾನುಪಾತ ೯೪೫ ಇರುವ ಸಂಗತಿ ತಿಳಿದುಬರುತ್ತದೆ. ತಾಲೂಕವಾರು ಚಿತ್ರಣದಲ್ಲಿ ಮುಂಡರಗಿ ಹಾಗೂ ನರಗುಂದ ತಾಲೂಕುಗಳಲ್ಲಿ (ಕ್ರಮವಾಗಿ ೮೫೫ ಹಾಗೂ ೯೧೪ ಇದ್ದು) ಜಿಲ್ಲೆಯ ಲಿಂಗಾನುಪಾತಕ್ಕಿಂತಲೂ ಕಡಿಮೆ ಇರುವುದನ್ನು ಕಾಣಬಹುದು. ಇನ್ನುಳಿದ ಮೂರು ತಾಲೂಕುಗಳಲ್ಲಿ ಅಂದರೆ ಗದಗ, ರೋಣ ಹಾಗೂ ಶಿರಹಟ್ಟಿ ತಾಲೂಕುಗಳಲ್ಲಿ ಲಿಂಗಾನುಪಾತ (ಕ್ರಮವಾಗಿ ೯೫೯, ೯೫೯ ಹಾಗೂ ೯೭೮) ಜಿಲ್ಲೆಯ ಲಿಂಗಾನುಪಾತಕ್ಕಿಂತಲೂ ಹೆಚ್ಚಾಗಿದೆ. ಅಂದರೆ ಶಿರಹಟ್ಟಿ ತಾಲೂಕಿನಲ್ಲಿ ಲಿಂಗಾನುಪಾತ ಜಿಲ್ಲೆಯ ಲಿಂಗಾನುಪಾತಕ್ಕಿಂತಲೂ ಹೆಚ್ಚಾಗಿದ್ದು, ಮುಂಡರಗಿ ತಾಲೂಕಿನಲ್ಲಿ ಇದು ಅತ್ಯಂತ ಕಡಿಮೆಯಿದೆ. ಮದುವೆಯ ವಯೋಮಾನದಲ್ಲಿ ಅಂದರೆ ೧೫ ರಿಂದ ೨೯ ವಯಸ್ಸಿನವರಲ್ಲಿ ಲಿಂಗಾನುಪಾತ ಕಡಿಮೆ ಇರುವುದರಿಂದ ಇದು ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಎಡೆಮಾಡಿಕೊಡಬಹುದು.

೦-೪ ವಯೋಮಾನದಲ್ಲಿನ ಲಿಂಗಾನುಪಾತ ಅತ್ಯಂತ ಮಹತ್ವವುಳ್ಳದ್ದಾಗಿದೆ. ಇದು ಇತ್ತೀಚಿನ ದಿನಗಳಲ್ಲಿ ಕುಸಿಯುತ್ತಿರುವ ಲಿಂಗಾನುಪಾತದ ಚಿತ್ರಣವನ್ನೇ ಕಟ್ಟಿಕೊಡುತ್ತದೆ. ಜಿಲ್ಲೆಯ ಲಿಂಗಾನುಪಾತ ೯೦೭ ಆದರೆ, ಅತ್ಯಂತ ಕಡಿಮೆ ಲಿಂಗನುಪಾತ ಮುಂಡರಗಿ ಹಾಗೂ ಶಿರಹಟ್ಟಿ ತಾಲೂಕುಗಳಲ್ಲಿ ಕಾಣಬಹುದು(೭೦೩). ಜಿಲ್ಲೆಯ ಲಿಂಗಾನುಪಾತಕ್ಕೆ ಹೋಲಿಸಿದರೆ ಅತ್ಯಂತ ಹೆಚ್ಚಿನ ಲಿಂಗಾನುಪಾತ ಗದಗ ತಾಲೂಕಿನಲ್ಲಿ ಕಾಣಬಹುದು(೯೭೩). ನಂತರದ ಸ್ಥಾನ ರೋಣ ತಾಲೂಕಿನದ್ದಾಗಿದೆ (೯೨೦). ನರಗುಂದ ತಾಲೂಕಿನಲ್ಲಿ ಈ ಸಂಖ್ಯೆ ೮೦೮ ಇದೆ. ಮುಂಡರಗಿ ಹಾಗೂ ಶಿರಹಟ್ಟಿ ತಾಲೂಕುಗಳು ಗದಗ ಜಿಲ್ಲೆಯಲ್ಲಿಯೇ ಹಿಂದುಳಿದ ತಾಲೂಕುಗಳಾಗಿರುವುದರಿಂದ ಲಿಂಗಾನುಪಾತದಲ್ಲಿಯೂ ಈ ಅಂಶ ಹೊರತಾಗಿರುವುದು ಕಂಡುಬರುವುದಿಲ್ಲ. ಇದು ಛಲವಾದಿ ಸಮುದಾಯದಲ್ಲಿಯೂ ಗಂಡು ಸಂತಾನದ ಮೇಲೆ ಒಲವು ಇರುವುದನ್ನು ಬಿಂಬಿಸುತ್ತದೆ.

ವಯೋಮಾನಕ್ಕನುಗುಣವಾದ ಲಿಂಗಾನುಪಾತದಲ್ಲಿ ಸರ್ವೇಸಾಮಾನ್ಯವಾದ ಚಿತ್ರಣವೆ ಕಂಡುಬರುತ್ತದೆ. ಅಂದರೆ ವಯೋಮಾನ ಹೆಚ್ಚಿದಂತೆಲ್ಲಾ ಪುರುಷರ ಮರಣ ಪ್ರಮಾಣ ಅಧಿಕವಾಗುವುದರಿಂದ ೫೦ ವರ್ಷಕ್ಕೂ ಮೇಲ್ಪಟ್ಟ ವಯೋಗುಂಪುಗಳಲ್ಲಿನ ಲಿಂಗಾನುಪಾತ (೭೫ ರಿಂದ ೭೯ ವಯೋಮಾನ ಹೊರತುಪಡಿಸಿ) ಮಹಿಳೆಯರ ಪರವಾಗಿರುವುದನ್ನು ಕಾಣಬಹುದು.

೪.೧೧ ದೇವದಾಸಿ ಪದ್ಧತಿ

"ಭಾರತ ವಿಶ್ವದಲ್ಲಿಯೇ ಅಧಿಕ ಸಂಖ್ಯೆಯಲ್ಲಿ ದೇವ-ದೇವತೆಗಳನ್ನು ಹೊಂದಿದ ದೇಶವಾಗಿದೆ. ದೇವಾಲಯಗಳಲ್ಲಿ ಇತಿಹಾಸ, ಪುರಾಣಪ್ರವಚನ ವ್ಯಾಖ್ಯಾನಗಳು ನಡೆದು ಮಠಗಳು ಬೆಳೆದವೆಂದು ತಿಳಿದು ಬರುತ್ತದೆ. ಪ್ರಕೃತಿಯ ವಿವಿಧ ಶಕ್ತಿಗಳನ್ನು ನಿಯಂತ್ರಿಸುವ ಚೇತನವೇ ದೇವತೆಗಳು ಎಂದು ನಂಬಲಾಗಿದೆ. ವಾಯು, ಅಗ್ನಿ, ವರುಣ, ಇಂದ್ರ ಮೊದಲಾದ ದೇವತೆಗಳನ್ನು ತೃಪ್ತಿ ಪಡಿಸುವ ಸಲುವಾಗಿ ಯಜ್ಞ ಯಾಗಾದಿ ಕರ್ಮಗಳ ಆಚರಣೆಯನ್ನು ರಾಮಾಯಣ ಮಹಾಭಾರತಗಳ ಕಥೆಯಿಂದ ತಿಳಿದು ಬರುತ್ತದೆ.

ಭಾರತದಲ್ಲಿ ೩೩ ಕೋಟಿ ದೇವತೆಗಳಿದ್ದಾರೆ ಎಂದು ಪ್ರತೀತಿ ಇದೆ. ವೈದಿಕ ಸಂಪ್ರದಾಯದ ೩೩ಕೋಟಿ ದೇವತೆಗಳು ಬೇರೆ ಸಂಪ್ರದಾಯಕ್ಕೂ ಸೇರಿದವರು. ಇವರಲ್ಲಿ ಕೆಲವರು ಮನುಷ್ಯರಾಗಿದ್ದು ಇನ್ನೂ ಕೆಲವರು ತಮ್ಮ ವೀರ್ಯದಿಂದಲೂ ಚಾತುರ್ಯದಿಂದಲೂ ತಪಸ್ಸಿನ ಫಲಗಳಿಂದಲೂ ದೇವತೆಗಳೆಂದು ಪರಿಗಣಿತರಾದವರು. ಈ ದೇವತೆಗಳಲ್ಲದೆ ಗ್ರಾಮಗಳಲ್ಲಿ ವಿಶಿಷ್ಟರಾದ ದೇವತೆಗಳು ಎಣಿಕೆಯಿಲ್ಲದಷ್ಟಿವೆ. ಇವರನ್ನೆಲ್ಲಾ ಒಟ್ಟಾಗಿ ಗ್ರಾಮದೇವತೆಗಳೆಂದು ಕರೆಯುವ ವಾಡಿಕೆ ಇದೆ. ಬಹುಪಾಲು ಗ್ರಾಮದೇವತೆಗಳಲ್ಲಿ ಹೆಣ್ಣು ದೇವತೆಗಳೇ ಹೆಚ್ಚಾಗಿ ಕಾಣುತ್ತವೆ. ಗೊಡ್ಡಮ್ಮ, ಯಲ್ಲಮ್ಮ, ಹುಲಿಗೆಮ್ಮ, ದುರಗಮ್ಮ, ಮಾರೆಮ್ಮ, ಗುತ್ತೆಮ್ಮ, ಮಾಪುರಮ್ಮ, ಮುಂತಾದವರು ನಮ್ಮ ದೇಶದ ಜನರಿಗೆ ಪರಿಚಿತರೆಂದೇ ಹೇಳಬೇಕು"[೮]

"ಕರ್ನಾಟಕದಲ್ಲಿ ಅನಾದಿಕಾಲದಿಂದಲೂ ವೇಶ್ಯಾವೃತ್ತಿ ಅಸ್ತಿತ್ವದಲ್ಲಿದೆ. ದೇವದಾಸಿಯರು ದೇವರ ಭಕ್ತಿಯ ಒಂದು ಭಾಗವಾಗಿದ್ದಾರೆ. ಇದರ ಅರ್ಥ ದೇವದಾಸಿಯರೆಲ್ಲ ವೇಶ್ಯೆಯರು ಎಂದಲ್ಲ. ಆಲನಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೧೧೩ರ ಶಾಸನದಲ್ಲಿ 'ದೇವದಾಸಿ' ಪದದ ಉಲ್ಲೇಖವಿದೆ. ಈ ಪದದ ಉಲ್ಲೇಖವಿರುವ ಅತ್ಯಂತ ಪ್ರಾಚೀನ ಶಾಸನ ಇದು (ಎಫಿಗ್ರಾಫಿಯ ಕರ್ನಾಟಕ ಸಂಖ್ಯೆ ೯೭). ಅದಕ್ಕಿಂತ ಹಿಂದಿನ ಶಾಸನಗಳಲ್ಲಿ ವೇಶ್ಯೆಯರನ್ನು 'ಸೂಳೆ' ಎಂದು ಹೆಸರಿಸಲಾಗಿದೆ. ಸೂಳೆ ಪದವನ್ನು ಉಲ್ಲೇಖಿಸಿರುವ ಅತ್ಯಂತ ಹಳೆಯ ಶಾಸನ ಮಹಾಕಾಳ (ಇಂಡಿಯನ್ ಅಂಟಿಕ್ವರಿ, ಸಂ, ೧೧-೧೨೨). ಕರ್ನಾಟಕದಲ್ಲಿ 'ಸೂಳೆ' ಪದದ ಪ್ರಾಚೀನತೆ ಕ್ರಿ.ಶ. ೧೧೧೩ಕ್ಕೆ ಹೋಗುತ್ತದೆ. ಅನೇಕ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ 'ರಾಣಿವಾಸ್, ಪೆಂಡವಾಸ್, ಪೆಂಡವಾಸದ ಸೂಳೆಯರು, ವರ-ವಧು, ಗಣಿಕೆ, ಮೊದಲಾದ ಗುಣವಾಚಕಗಳು ಸೂಳೆ ಪದಕ್ಕಿರುವುದನ್ನು ಗಮನಿಸಬಹುದು"[೯]

ಕರ್ನಾಟಕದಲ್ಲಿ ದೊರಕುವ ಅನೇಕ ಶಾಸನಗಳು ದೇವತೆಗಳಿಗೆ ರಂಗಭೋಗ ಮತ್ತು ಅಂಗಭೋಗ ಎಂಬ ಎರಡು ಬಗೆಯ ಸೇವೆ ಸಮರ್ಪಿಸುವುದನ್ನು ಸೂಚಿಸುತ್ತವೆ. ಪ್ರತಿಮೆಗಳಿಗೆ ಸ್ನಾನಮಾಡಿಸಿ ಚಂದನ ಲೇಪಿಸಿ, ಸುಗಂಧ ದ್ರವ್ಯ ಅರ್ಪಿಸಿ, ಜ್ಯೋತಿ ಬೆಳಗಿ, ಬಿಡಿ ಹೂ ಮತ್ತು ಹೂವಿನ ಹಾರ ಅರ್ಪಿಸುವ ಕ್ರಿಯೆಗೆ ಅಂಗ ಭೋಗವೆಂದು ಹೆಸರು. ದೇವತೆ ಮುಂದೆ ಹಾಡುವುದು, ಸಂಗೀತ, ನೃತ್ಯ ಮಾಡುವುದಕ್ಕೆ ರಂಗಭೋಗ ಎಂದು ಹೆಸರು.

ಮಧ್ಯಯುಗದ ಕರ್ನಾಟಕದಲ್ಲಿ ಹೆಣ್ಣುಮಕ್ಕಳನ್ನು ದೇವಾಲಯಗಳಿಗೆ ಬಳುವಳಿಯಾಗಿ ನೀಡುವ ಪದ್ಧತಿ ರೂಢಿಯಲ್ಲಿತ್ತು. ಚಿತ್ರದುರ್ಗದ ಮಾಳಕೇರಿಯ ಒಂದು ಶಿಲಾಶಾಸನದ ಈ ಸಂಗತಿ ತಿಳಿಸುತ್ತದೆ. ಹಿರಿಯ ಸಚಿವಮಣ್ಣಿ ಮತ್ತು ಅನೇಕ ಕರ್ಣಮ್ಮಗಳು, ಮಣಲ್‌ಕೇರೆ ಅಗ್ರಹಾರಕ್ಕೆ ಬಂದು ಅಲ್ಲಿನ ಮೂಲ ದೇವಾಲಯಕ್ಕೆ ಅನೇಕ ವಸ್ತುಗಳ ಜೊತೆ ನಾಲ್ಕು ಜನ ಸೂಳೆಯರನ್ನು ನೀಡಿದರು. ಸ್ತ್ರೀ ಪುರುಷರಿಬ್ಬರಿಗೂ ಸಮಾನ ಧರ್ಮದ ಸಂಸ್ಕಾರ ನೀಡಬೇಕೆಂದು ಪ್ರತಿಪಾದಿಸಿದರು. ಈ ಕಾರಣಕ್ಕಾಗಿ ಅವರು ಅನುಭವ ಮಂಟಪವನ್ನು ರೂಪಿಸಿ ಹೊಸದಾದ ಧರ್ಮವನ್ನು ಸ್ಥಾಪಿಸಿದರು. ಶೂದ್ರರು, ಅಂತ್ಯಜರು, ಮಹಿಳೆಯರು, ಧರ್ಮ ಸಂಸ್ಕಾರಗಳಿಂದ ವಂಚಿತರಾಗಿದ್ದನ್ನು ಮನಗಂಡು ಸರ್ವರಿಗೂ ಸಮಾನವಾದ ಆಧ್ಯಾತ್ಮಿಕ,

ಸಾಮಾಜಿಕ, ಆರ್ಥಿಕ, ನೈತಿಕ, ಶಿಕ್ಷಣ ನೀಡಿ ಸಮಾನತೆಯ ಹೊಸ ಪರಿಸರವನ್ನೇ ಹಾಕಿಕೊಟ್ಟರು. ಇದೇ ಸಂದರ್ಭದಲ್ಲಿ ರೂಪಗೊಂಡ ಅನುಭವ ಮಂಟಪ ಪ್ರಪಂಚದ ಪ್ರಪ್ರಥಮ 'ಪಾರ್ಲಿಮೆಂಟ್' ಎಂಬ ಖ್ಯಾತಿಯನ್ನು ಕೂಡ ಹೊಂದಿದೆ. ಇದರಿಂದಾಗಿ ಅನೇಕ ದೇವದಾಸಿಯರು ಈ ಅನಿಷ್ಠ ಪದ್ಧತಿಯಿಂದ ಹೊರಬಂದರು. ಅಂಥವರಲ್ಲಿ ಭವಾದಿ ಸಮುದಾಯದವರ ಸೂಳೆ ಸಂಕವ್ವೆಯೂ ಒಬ್ಬಳು. ಸೂಳೆ ಸಂಕವ್ವೆ ವೇಶ್ಯಾ ವೃತ್ತಿಯನ್ನು ತ್ಯಜಿಸಿ ಸತ್ಯ ಶುದ್ಧ ಕಾಯಕ ಮಾಡುತ್ತಾ ವಿದ್ಯಾವಂತಳಾಗಿ ಧರ್ಮ ಸಂಸ್ಕಾರ ಹೊಂದಿದ 'ಶರಣೆಯಾಗಿ', ವಚನಕಾರ್ತಿಯಾಗಿ ಬಾಳಿ ಬೆಳಗಿದ್ದಾಳೆ. ಅವಳ ಒಂದು ವಚನ ಹೀಗಿದೆ–

'ಹೊತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದೆಡೆ ಬತ್ತಲೆ ನಿಲ್ಲಿಸಿ ಕೊಲ್ಲುವರಯ್ಯ !
ವ್ರತಹೀನನ್ನರಿದು ಬೇರೆಯಿದ್ದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗು ಕೊಯ್ಯುವರಯ್ಯ
ಒಲ್ಲೆಲ್ಲೊ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರ !'

ಈ ರೀತಿ ಬದುಕನ್ನು ಪರಿವರ್ತನೆ ಮಾಡಿಕೊಂಡು ಸಾತ್ವಿಕ, ಸರಳ, ಶುದ್ಧ, ಜೀವನ ಬಾಳಿರುವುದನ್ನು ಕಾಣುತ್ತೇವೆ.[೧೦]

ದೇವದಾಸಿಯರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಅಲಂಕಾರದಾಸಿ, ರುದ್ರದಾಸಿಕ, ಸೂಳೆ, ದೇವಸೂಳೆ, ಎಲ್ಲಮ್ಮನ ಸೂಳೆ, ಜೋಗುತಿ, ಆಯ್‌ಗಾರರು, ರಂಡೆ, ಗುದ್ದಿ, ಗಳಿಸಲಿಕ್ಕೆ ಬಿಟ್ಟವರು, ಮನೆತನಕ್ಕೆ ಬಿಟ್ಟವರು ಮುಂತಾದ ಹೆಸರುಗಳಿಂದ ಕರೆಯುವ ರೂಢಿಯಿದೆ.

೪.೧೧.೧ ದೇವದಾಸಿ ಪದ್ಧತಿಗೆ ಕಾರಣಗಳು

ದೇವರ ಮೇಲಿನ ಭಯ ಭಕ್ತಿಗಾಗಿ, ಕಷ್ಟ ನಿವಾರಣೆಗಾಗಿ, ಪುರುಷ ಪ್ರಧಾನ ಸಮಾಜದ ಭೋಗಕ್ಕಾಗಿ, ಬಡತನಕ್ಕಾಗಿ, ಸ್ತ್ರೀ ತನ್ನ ಸರಿಸಮಾನ ಆಗಬಾರದೆಂಬ ಕುತಂತ್ರಕ್ಕಾಗಿ, ಸ್ತ್ರೀಯ ದೌರ್ಬಲ್ಯ ಮುಂತಾದ ಕಾರಣಗಳಿಂದ ಎಂದು ಹೇಳಬಹುದು.

೪.೧೧.೨ ದೇವದಾಸಿ ಬಿಡುವ ಬಗ್ಗೆ

ದವನ ಹುಣ್ಣಿಮೆ ಇಲ್ಲವೆ ಭಾರತ ಹುಣ್ಣಿಮೆಗೆ ಎಲ್ಲಮ್ಮನ ದೇವಸ್ಥಾನಕ್ಕೆ ಹೋಗಿ (ಸವದತ್ತಿ ಎಲ್ಲಮ್ಮ ಬೆಳಗಾಂ ಜಿಲ್ಲೆ) ದೇವದಾಸಿಯವರನ್ನಾಗಿ ಮಾಡಲಾಗುತ್ತದೆ. ಮನೆ ಸ್ವಚ್ಛಗೊಳಿಸಿ ಹುಡುಗಿಗೆ ಸ್ನಾನ ಮಾಡಿಸಿ ಮಡಿ ಬಟ್ಟೆ ತೊಡಿಸಿ ದೇವಾಲಯಕ್ಕೆ ಕರೆತರುತ್ತಾರೆ. ಹೂವಿನ ಮಾಲೆ, ತೆಂಗಿನಕಾಯಿ, ದೇವಿಯ ಉಡಿ ಅಕ್ಕಿಯ ಸಾಮಾನು ತಂದು ದೇವರ ಗುಡಿಯ ಆವರಣದಲ್ಲಿ ಕಂಬಳಿ ಹಾಸಿ ಹುಡುಗಿಯನ್ನು ಕೂಡಿಸಲಾಗುತ್ತದೆ. ಎಲ್ಲಮ್ಮನ ಪೂಜಾರಿ ಅವಳಿಗೆ ಉಡಿ ತುಂಬಿ ಕೊರಳಿಗೆ ಕರಿ–ಕೆಂಪು ಮಣಿಗಳ ತಾಳಿಯನ್ನು ಕಟ್ಟಿಸುತ್ತಾನೆ. ನಂತರ ದೇವಸ್ಥಾನವನ್ನು ಐದು ಸುತ್ತು ಹಾಕಿಸಲಾಗುತ್ತದೆ. ಈ

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಹಿರಿಯರಿಗೆ ನಮಸ್ಕರಿಸುವರು. ತಮ್ಮ ಗ್ರಾಮಕ್ಕೆ ಅಥವಾ ಮನೆಗೆ ಬರುವವರಿಗೆ ಅಂದು ಸಿಹಿ ಊಟದ ವ್ಯವಸ್ಥೆ ಇರುತ್ತದೆ.[೧೧]

ಇದೊಂದು ಅನಿಷ್ಟ ಪದ್ಧತಿಯಾದರೂ ಛಲವಾದಿ ಸಮುದಾಯ ಇದನ್ನು ಮುಂದುವರೆಸಿಕೊಂಡು ಕೆಲವು ಕುಟುಂಬಗಳು ಬಂದಿದೆ. ಜಿಲ್ಲೆಯ ರೋಣ ತಾಲೂಕಿನಲ್ಲಿ ಹಾಗೂ ನರಗುಂದ ತಾಲೂಕಿನಲ್ಲಿ ಕೆಲವು ಗ್ರಾಮಗಳಾದ ಕೊಣ್ಣೂರು, ಹೊಳೆ ಮಣ್ಣೂರು ಮುಂತಾದ ಗ್ರಾಮಗಳಲ್ಲಿ ಹೆಚ್ಚಾಗಿ ದೇವದಾಸಿ ಪದ್ಧತಿ ಕಂಡು ಬರುತ್ತದೆ. ೪೦ ವರ್ಷಕ್ಕಿಂತಲೂ ಹೆಚ್ಚು ವಯಸ್ಸಾದ ದೇವದಾಸಿಯರು ಕಂಡು ಬರುತ್ತಾರೆ. ಹೊರತು ಇತ್ತೀಚೆಗೆ ಅವರ ಸಮುದಾಯದಲ್ಲಿ ಬೀರಿದ ಶಿಕ್ಷಣದ ಪ್ರಭಾವ, ಸಾಮಾಜಿಕ ಪ್ರಜ್ಞೆ, ಆರೋಗ್ಯಪ್ರಜ್ಞೆ ಮೊದಲಾದ ನಾನಾ ಕಾರಣಗಳಿಂದ ದೇವದಾಸಿ ಪದ್ಧತಿ ಈ ಸಮುದಾಯದಲ್ಲಿ ಕ್ರಮೇಣವಾಗಿ ಪ್ರಸ್ತುತ ದಿನಗಳಲ್ಲಿ ಕ್ರಮೇಣ ಕಡಿಮೆಯಾಗುತ್ತಿದೆ.

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಿಲ್ಲೆಯಲ್ಲಿ ಕಂಡುಬರುವ ದೇವದಾಸಿಯರ ಸಮೀಕ್ಷೆಯನ್ನು ಕೈಗೊಂಡು, ಅವರ ಬದುಕಿಗೆ ಮನೆ, ಸಾಲ ಸೌಲಭ್ಯಗಳು, ಅವರ ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಪ್ರಗತಿಪರ ಯೋಜನೆಗಳನ್ನು ರೂಪಿಸಿದೆ. ಸರ್ಕಾರದ ಸೌಲಭ್ಯದ ಅರಿವು ಇವರಿಗಿಲ್ಲ. ಸಮುದಾಯದಲ್ಲಿ ನಾಯಕತ್ವದ ಕೊರತೆಯಿಂದ ಇವರಿಗೆ ಯಾವ ಪ್ರಮಾಣದಲ್ಲಿ ವಿವಿಧ ಸೌಲಭ್ಯಗಳು ಸಿಗಬೇಕಾಗಿತ್ತೋ ಆ ಸೌಲಭ್ಯಗಳು ಇನ್ನೂ ಸಂಪೂರ್ಣವಾಗಿ ಸಿಕ್ಕಿರುವುದಿಲ್ಲ. ಹೀಗಾಗಿ ಇಂದಿಗೂ ದೇವದಾಸಿಯರ ಸ್ಥಿತಿ ಗತಿ ಶೋಚನೀಯವಾಗಿರುವುದನ್ನು ಕಾಣುತ್ತೇವೆ.

೪.೧೨ ಮಹಿಳೆಯರ ಸ್ಥಾನಮಾನ

ಛಲವಾದಿ ಸಮುದಾಯ ಕೂಡ ಮೇಲ್ಜಾತಿಗಳ ರೀತಿ ಪುರುಷ ಪ್ರಧಾನ ಕುಟುಂಬವಾಗಿರುವುದರಿಂದ ಮಹಿಳೆಯರಿಗೆ ದ್ವಿತೀಯ ಸ್ಥಾನ ನೀಡಿದೆ. ಕುಟುಂಬದ ಹೊಣೆಹೊತ್ತು ಪುರುಷನು ಮನೆಯ ಹೊರಗೆ ದುಡಿದರೆ, ಕುಟುಂಬದ ಒಳಗಿನ ಎಲ್ಲ ಕೆಲಸವನ್ನು ಮಹಿಳೆಯರು ನಿರ್ವಹಿಸುತ್ತಾರೆ. ಪ್ರತಿನಿತ್ಯ ಮನೆಯ ಮುಂದೆ ರಂಗೋಲಿ ಹಾಕುವುದು ಮತ್ತು ಮುಖ್ಯ ಬಾಗಿಲಿನ ಹೊಸ್ತಿಲಿಗೆ ಕುಂಕುಮ ಹಚ್ಚಿ ಲೋಬಾನ ಹಾಕುವುದು ಹೆಣ್ಣು ಮಕ್ಕಳು ಮಾತ್ರ ಮಾಡುತ್ತಾರೆ. ಇಂದು ಛಲವಾದಿಯ ಮಹಿಳೆ ಎಷ್ಟೇ ವಿದ್ಯಾವಂತಳಾಗಿದ್ದರೂ ಆರ್ಥಿಕ ಸ್ವಾವಲಂಬನೆ ಪಡೆದಿದ್ದರೂ 'ಮಕ್ಕಳನ್ನು ಹಡೆಯುವುದು ಮತ್ತು ರೊಟ್ಟಿ ಬಡಿಯುವುದು' ತಪ್ಪಿಲ್ಲ. ಇಂದು ವಿದ್ಯಾವಂತ ನಿರುದ್ಯೋಗಿ ಮತ್ತು ನಿರಕ್ಷರ ಮಹಿಳೆಯರು ಕೃಷಿ ಕೆಲಸದಲ್ಲಿ ಪುರುಷನ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದಾರೆ. ಹೆಣ್ಣು ಮಕ್ಕಳನ್ನು ಹೆಚ್ಚಾಗಿ ಕರುಳು ಬಳ್ಳಿಯಲ್ಲೆ ವಿವಾಹ ಮಾಡಲಾಗುತ್ತದೆ. ಅಕ್ಕನ ಮಗಳನ್ನು ಸೋದರತ್ತೆ ಇಲ್ಲವೆ ಸೋದರ ಮಾವನ ಮಕ್ಕಳು ಮದುವೆ ಮಾಡಿಕೊಳ್ಳುವುದು ರೂಢಿಯಲ್ಲಿದೆ. ಹೆಣ್ಣುಮಕ್ಕಳು ಸತ್‌ಚಾರಿತ್ರ್ಯ ಉಳ್ಳವರಾಗಲು ವಿಶೇಷ ಗಮನ ಹರಿಸಲಾಗುವುದು. ಇದರಿಂದಾಗಿ ಋತುಮತಿಯಾದ ಕೂಡಲೆ ಹೆಣ್ಣುಮಕ್ಕಳ ಮದುವೆ ಮಾಡಿಬಿಡುವ ರೂಢಿ ಇದೆ.

ಡಾ. ಅಂಬೇಡ್ಕರ ಅವರು ಹೇಳಿದಂತೆ ಸಮುದಾಯಕ್ಕೆ ಶಿಕ್ಷಣ ಕೊಡುವುದಾದರೆ ಪ್ರಥಮವಾಗಿ ಮಹಿಳೆಯರಿಗೆ ಶಿಕ್ಷಣ ಕೊಡಬೇಕು ಅಲ್ಲದೆ ಅವರನ್ನು ಪ್ರೀತಿಯಿಂದ ಕಾಣಬೇಕು. ಅಂದಾಗ ಮಾತ್ರ ಸಮುದಾಯವು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವೆಂದಿದ್ದಾರೆ. ಹೀಗಾಗಿ ಇಂದು ಹಲವು ಛಲವಾದಿ ಸಮುದಾಯದ ಸುಶಿಕ್ಷಿತ ಕುಟುಂಬಗಳು ಮಹಿಳೆಯರಿಗೆ ಶಿಕ್ಷಣವನ್ನು ಕೊಟ್ಟು ಸಮಾನ ಸ್ಥಾನಮಾನಗಳನ್ನು ನೀಡಿ ಗೌರವಿಸುತ್ತಿದ್ದಾರೆ.

ಸ್ತ್ರೀಯರು ಯೌವ್ವನಾವ್ಯಸ್ಥೆ ತಲುಪಿದ ಬಳಿಕ ಹೊಸ್ತಿಲು ದಾಟಿ ಅನಾವಶ್ಯಕ ಹೊರಗೆ ತಿರುಗುವಂತಿಲ್ಲ. ಪುರುಷರ ಜೊತೆ ಏಕಾಂತ ಮಾತನಾಡುವುದು ಕಂಡು ಬಂದರೆ ಜಾತಿ ಹಿರಿಯರು ಅನುಮಾನ ಪಡುತ್ತಾರೆ. ಪುರುಷರು ತಮ್ಮ ಕುಟುಂಬದ ಗೌರವ ಮರ್ಯಾದೆಗಳನ್ನು ಹಾಳು ಮಾಡುವ ಹೆಣ್ಣುಮಕ್ಕಳನ್ನು ಸಹಿಸುವುದಿಲ್ಲ. ದೇವದಾಸಿಯರಿಗೆ ಗೌರವದ ಸ್ಥಾನಮಾನ ಕಂಡು ಬರುವುದಿಲ್ಲ. ಜೋಗವ್ವಳಿಗೆ ದೇವರ ಪ್ರತೀಕದಂತೆ ಗೌರವದ ಸ್ಥಾನಗಳಿವೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಶಿಕ್ಷಣದ ಪ್ರಭಾವದಿಂದಾಗಿ ನಗರೀಕರಣ, ಪಾಶ್ಚಾತ್ಯಿಕರಣ ಹಾಗೂ ಆಧುನಿಕ ಶಿಕ್ಷಣ ಹೆಚ್ಚಿದೆ. ಶಿಕ್ಷಣದಿಂದಾಗಿ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಸಮಾನತೆಯ ಸ್ಥಾನಮಾನಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಕುಟುಂಬದ ಆಗುಹೋಗುಗಳಲ್ಲಿ ನ್ಯಾಯನಿರ್ಣಯಗಳಲ್ಲಿ ಗಂಡಹೆಂಡತಿಯರಿಬ್ಬರು ಸಮಾನವಾಗಿ ತೀರ್ಮಾನ ಕೈಕೊಳ್ಳುವುದು ಕಂಡುಬರುತ್ತಿದೆ.

೪.೧೩. ಜಾತಿ-ಬೆಡಗುಗಳು

ಇಂದು ಸಮುದಾಯದ ಸಂಸ್ಕೃತಿಯನ್ನು ಗುರುತಿಸುವಲ್ಲಿ ಬೆಡಗುಗಳು ಪ್ರಮುಖವಾದ ಪಾತ್ರಗಳನ್ನು ವಹಿಸುತ್ತವೆ. ಸಮುದಾಯದ ಸಂಸ್ಕೃತಿಯು ರೂಪಗೊಳ್ಳುವಲ್ಲಿ ಬೆಡಗುಗಳು ಅವಶ್ಯಕವಾಗಿವೆ. ಪ್ರತಿಯೊಂದು ಮನೆತನಗಳು ಒಂದೊಂದು ಬೆಡಗನ್ನು ಹೊಂದಿರುತ್ತವೆ. ಆ ಬೆಡಗುಗಳು ಸೃಷ್ಠಿಯಾಗಬೇಕಾದರೆ ತನ್ನದೆ ಆದ ವಿಶಿಷ್ಟ ಹಿನ್ನೆಲೆಯನ್ನು ಹೊಂದಿರುತ್ತವೆ. ಬೇಡಗುಗಳ ಮುಖಾಂತರ ಸಮುದಾಯದ ಸಂಬಂಧಗಳು ನಿರ್ಧರಿಸಲ್ಪಡುತ್ತವೆ. ಬೆಡಗುಗಳ ಆಧಾರದ ಮೇಲೆ ವಿವಾಹ, ಮನೆದೇವರು, ವೃತ್ತಿ, ಸಂಸ್ಕೃತಿ, ಮೂಲಪುರುಷ, ಇತಿಹಾಸ ಹಾಗೂ ಆಚಾರ ವಿಚಾರಗಳು ರೂಪಗೊಂಡಿವೆ. ಮಾನವ ಸಮಾಜದಲ್ಲಿ ಸಂಸ್ಕೃತಿ ಅನುಕರಣೆ ಸಮಯದಿಂದಲೂ ಇವುಗಳು ಅಸ್ಥಿತ್ವದಲ್ಲಿವೆ. ಆ ಸಂಸ್ಕೃತಿ ಮತ್ತಷ್ಟು ಪ್ರಭಾವಗೊಳ್ಳುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಈ ಬೆಡಗುಗಳನ್ನು ಕೆಲವು ಜನ ಹಿರಿಯರು ಮಾತ್ರ ತಿಳಿಸಿರುವದರಿಂದ ಸಮುದಾಯದ ಬಹುತ್ತೇಕರಲ್ಲಿ ಬೆಡಗುಗಳ ಬಗ್ಗೆ ಗೊತ್ತಿಲ್ಲ ಎನ್ನುವುದು ತಿಳಿದು ಬರುತ್ತದೆ.

ಬೆಡಗುಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಅವುಗಳೆಂದರೆ ಜಾಣಕುದರೆ, ಬನ್ನೆಲ, ಸಕ್ಕರೆ, ಹೊನ್ನದಂಡಿನ, ಸಮುದ್ರಾದವರು, ಹುಣ್ಣಿರಿಕ, ಕರುಲಿ, ಕಮತನೂರ, ಹವಳಿಯರ, ಹೊನ್ನಹೊತ್ತನವರ, ಹೊನ್ನೆತ್ತಿನವರ, ಆನೇನವರ, ಜುಂಜುಳವರ, ನಿಜಗುಣಿ,

ಕ್ಷತ್ರಿಯ, ಹಾಲಮತ, ಹೊನ್ನಾವರ್, ಅಜಂತಿದವರ್, ಕೊಡಗೋಳ್, ರಾಮಬಾಣ, ಮುಂತಾದವುಗಳು ಕಂಡು ಬರುತ್ತವೆ. ಗದಗ ಜಿಲ್ಲೆಯಲ್ಲಿ ಛಲವಾದಿ ಅವರಲ್ಲಿ ಕಂಡುಬರುವ ಪ್ರಮುಖ ಬೆಡಗುಗಳೆಂದರೆ ಹೊನ್-ಅಡ್ನವರ್, ಹೊನ್ನತುಪ್ಪದವರ್, ನಿಗಡೆನವರ್, ಹೊನ್‌ಜೂಜಿನವರ್, ಕೆಂಚಲವರ್, ದೆಂಡೆನವರ್, ಮದ್ದಿಲಿಯವರ್, ಕತ್ತಳಕಿ, ತುಪ್ಪದವ, ಹೊಂಬಳ, ಹೊನ್ನಬಿಂದಿ, ಚೊಂಚಲ, ಸಣ್ಣಕ್ಕಿ, ಬಿಲ್ಲುಮನೆ, ಹಿರೇಮನೆ, ಡಾಲನವರ, ಘಟ್ಟಿನವರ, ಬೋಸನಾಯಕ, ತಂಗಾಳಿಯವರ, ನುಗ್ಗಿನವರ, ಜಾಲಣ್ಣವರ ಬಬಲಣ್ಣವರ, ಹೊನ್ನ, ಬಿಂದಿಗೆ, ಮುಂತಾದ ಬೆಡಗುಗಳಿವೆ. ಒಂದೇ ಬೆಡಗಿನವರು ಸಹೋದರ ಸಂಬಂಧಿಗಳೆಂದೂ ವಿವಾಹ ಸಂಬಂಧ ಬೆಳೆಸುವಂತಿಲ್ಲವೆಂದೂ ಅವರು ತಿಳಿಯುತ್ತಾರೆ.

೪.೧೪ ಹಬ್ಬಗಳು

'ಹಬ್ಬ' ಎನ್ನುವ ಪದ ಸಂಸ್ಕೃತದ ಪರ್ವನ್ ಪದದ ತದ್ಭವವಾಗಿದೆ. ಪರ್ವ ಎಂಬ ಪದಕ್ಕೆ ಒಂದು ಇನ್ನೊಂದರ ಜೊತೆಗೆ ಸಂಧಿಸುವುದು ಎಂದರ್ಥವಿದೆ. ಚಂದ್ರಸೂರ್ಯರ ಗತಿಗಳು ಬದಲಾಗುವುದನ್ನು ಪರ್ವ ಎನ್ನಲಾಗುತ್ತದೆ. ಪರಂಪರೆಯಲ್ಲಿನ ಬಹುತೇಕ ಹಬ್ಬಗಳು ಧಾರ್ಮಿಕ ಕ್ರಿಯಾ ವಿಧಿ ಹಾಗೂ ಫಲೋತ್ಪತ್ತಿ ಸಂಬಂಧಿಗಳಾಗಿವೆ. ಅವು ಋತುಗಳ ಗತಿಯನ್ನೂ ಸೂರ್ಯ ಚಂದ್ರರ ಚಲನೆಯನ್ನೂ ಅವಲಂಬಿಸಿವೆ. ಈ ಎಲ್ಲಾ ಕ್ರಿಯವಿಧಿಗಳೆ ಮುಂದೆ ಹಬ್ಬಗಳಾದವು.

ಹಬ್ಬಗಳೆಂದರೆ ಸಂತೋಷದ ಕಾಲವಾಗಿದೆ. ಅಲ್ಲಿ ನಿಸರ್ಗಕ್ಕೆ ಮೊದಲನೆ ಸ್ಥಾನವಿದೆ. ಧಾರ್ಮಿಕ ಪ್ರಭಾವಕ್ಕೆ ಒಳಗಾದ ಛಲವಾದಿಯರು ಕೂಡ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತ ಬಂದಿದ್ದಾರೆ. 'ಉತ್ಸವ ಪುರಾಣ ಖಲಾ ಮನುಷ್ಯ' ಎಂಬ ಕವಿ ಕುಲಗುರು ಕಾಶಿದಾರದ ಉಕ್ತಿಯಂತೆ ಹಬ್ಬ-ಹರಿದಿನ ತೇರು ಜಾತ್ರೆಗಳನ್ನೆಲ್ಲಾ ಇಷ್ಟ ಪಡುವ ಮನುಷ್ಯ ಉತ್ಸವ ಪ್ರಿಯನಾಗಿದ್ದಾನೆ.

ಈ ಜಗತ್ತು ಮಾನವನ ಧರ್ಮ ಕ್ಷೇತ್ರವೂ ಕರ್ಮಕ್ಷೇತ್ರವೂ ಆಗಿದೆ. ಇಲ್ಲಿ ನಮ್ಮ ಒಳಿತಿಗಾಗಿ ಸುಖ, ಸಂತೋಷಗಳಿಗಾಗಿ, ಬಾಳಿನಲ್ಲಿ ಬದಲಾವಣೆಗಾಗಿ, ಸಾಧನೆ ಸಿದ್ಧತೆಗಾಗಿ, ಸಮಾಜ ಸಂಘಟನೆಗಾಗಿ, ಆತ್ಮೀಯರೊಂದಿಗೆ ಬೆರೆಯಲು ಹಬ್ಬ-ಹರಿದಿನಗಳನ್ನು ಆಚರಿಸುತ್ತ ಬರಲಾಗಿದೆ. ಛಲವಾದಿಗಳ ವಿಶೇಷ ಹಬ್ಬಗಳೆಂದರೆ ಹೋಳಿ, ನಾಗರ ಪಂಚಮಿ, ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ, ಕಾರಹುಣ್ಣಿಮೆಗಳಾಗಿವೆ. ಅಲ್ಲದೆ ಮುಸ್ಲಿಂ ಧರ್ಮದ ಮೊಹರಂ ಹಬ್ಬ, ಉರುಸು, ಹಿರಿಯರ ಹಬ್ಬ ಮುಂತಾದವನ್ನು ಆಚರಿಸುವುದು ಕಂಡುಬರುತ್ತದೆ. ಜೊತೆಗೆ ಹುಲಿಗೆಮ್ಮ, ಯಲ್ಲಮ್ಮ, ಮೈಲಾರಲಿಂಗಸ್ವಾಮಿ, ಹಿರಿಯರಹಬ್ಬ, ಲಿಂಗಬಸವೇಶ್ವರ ಜಾತ್ರೆ, ಅಂಬೇಡ್ಕರ ಜಯಂತಿ, ಬುದ್ಧಹುಣ್ಣಿಮೆ, ಕೋರೆಗಾಂವ ವಿಜಯೋತ್ಸವ ಮತ್ತು ಜಾತ್ರಾ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಾರೆ.

೪.೧೫ ಉಡುಪುಗಳು ಮತ್ತು ಆಭರಣಗಳು

ಛಲವಾದಿಗಳು ಧರಿಸುವ ಉಡುಪು ಮತ್ತು ಆಭರಣಗಳಲ್ಲಿ ವೈವಿಧ್ಯತೆ ತುಂಬಾ ಕಡಿಮೆ ಇದೆ. ಶತಶತಮಾನಗಳಿಂದ ಅವರಿಗೆ ವಿದ್ಯಾ, ವಸ್ತು, ಆಭರಣ, ಭೂಮಿ, ಸೀಮೆ ನಿರಾಕರಿಸಲಾಗಿದೆ. ಅವರಲ್ಲಿ ವಿದ್ಯೆ ಪಡೆಯುವ, ಬಟ್ಟೆ ಬರೆ ಉಡುವ, ಬೆಳ್ಳಿ ಬಂಗಾರ ತೊಡುವ ಮನೋಭಿಲಾಷೆ ತುಂಬ ಕಡಿಮೆ ಕಂಡಬರುತ್ತದೆ. ಭಾರತದ ಸಂವಿಧಾನ ಜಾರಿಗೆ ಬರುವ ಪೂರ್ವದಲ್ಲಿ ಜಾತಿ ಸಮಾಜದ ಸಾಮಾಜಿಕ ಜೀವನದಲ್ಲಿ ಅನೇಕ ಕಠೋರ ನಿಯಮಗಳಿದ್ದವು. ಹೀಗಾಗಿ ಭಾರತೀಯ ಸಮಾಜದ ಕೊನೆ ಅಂಚಿನಲ್ಲಿರುವ ಛಲವಾದಿಯವರು ತಮ್ಮ ಮಾನ ಮರ್ಯಾದೆ ಮುಚ್ಚಿಕೊಳ್ಳುವ ತುಂಡು ಬಟ್ಟೆಯೇ ಅಮೂಲ್ಯ ಉಡುಪಾಗಿತ್ತು. ಮೇಲ್ಜಾತಿ ಜನ ಬಳಸಿದ ಹಳೆಯ ಬಟ್ಟೆಗಳೇ ಇವರ ಉಡುಪಾಗಿತ್ತು. ಆದರೆ ಇಂದು ಅವರ ಜೀವನ ಶೈಲಿ ಸಾಕಷ್ಟು ಬದಲಾವಣೆಗೆ ಒಳಗಾಗಿರುವುದು ಕಂಡು ಬರುತ್ತದೆ. ಹಬ್ಬ ಹರಿದಿನಗಳಲ್ಲಿ ಅವರು ಹೊಸ ಬಟ್ಟೆ ಧರಿಸುತ್ತಾರೆ.

ಛಲವಾದಿ ಸಮುದಾಯದವರು ಕಳೆದ ೬೦-೭೦ ವರ್ಷಗಳ ಹಿಂದೆ ಕೂಡ ಗ್ರಾಮದಲ್ಲಿ ಹೊಸ ಬಟ್ಟೆ ತೊಟ್ಟು ತಿರುಗುವಂತಿರಲಿಲ್ಲ. ಇವರಲ್ಲಿ ದಿನನಿತ್ಯ ಉಡುವ ಉಡುಗೆಯಲ್ಲಿ ಯಾವುದೇ ಕೊರತೆ ಕಾಣುವುದಿಲ್ಲ. ಜಾತಿ ಸಮುದಾಯದಲ್ಲಿ ಅಂಗಿ, ಧೋತರ, ಲುಂಗಿ, ಮುಂಡಿ ಚಾಟಿ (ಬನಿಯನ್), ವಯಸ್ಸಾದವರು ತಲೆಗೆ ಪಟಗಾ ಸುತ್ತುತ್ತಾರೆ, ಸಣ್ಣಮಕ್ಕಳಿಗೆ ನಿಕ್ಕರ್ ಬನಿಯನ್ ಅಂಗಿ ತೊಡೆಸುತ್ತಾರೆ.

ಸ್ತ್ರೀಯರು ಸೀರೆ, ಕುಬುಸ ತೊಡುತ್ತಾರೆ. ಸಣ್ಣ ಮಕ್ಕಳಿಗೆ ನಿಲುವಂಗಿ, ಗಗ್ಗರಿ, ಜಂಪರು, ಲಂಗ, ನಿಕ್ಕರು, ಇತ್ತಿತ್ತಲಾಗಿ ಬಂದ ನೈಟಿ ಧರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪಡೆದು ಸರ್ಕಾರಿ ನೌಕರಿ ಮಾಡುವ ಕುಟುಂಬಗಳು ಸುಧಾರಿತ ಉಡುಪುಗಳನ್ನು ಧರಿಸುತ್ತಿದ್ದಾರೆ. ತಮ್ಮಿಷ್ಟದಂತೆ ಉಡುಪು ಧರಿಸಲು ಮೊದಲಿನಂತೆ ಈಗ ಯಾವುದೇ ನಿರ್ಬಂಧಗಳು ಈ ಸಮುದಾಯದವರಿಗೆ ಇರುವುದಿಲ್ಲ.

೪.೧೫.೧ ಶಿರವಸ್ತ್ರ

ಪುರುಷರು ರೇಷ್ಮೇ ಪಟಕ ಸುತ್ತುತ್ತಾರೆ ಇಲ್ಲವೆ ಕೆಂಪು, ಹಳದಿ ಬಣ್ಣದ ಬಟ್ಟೆಯನ್ನು ಶಿರವಸ್ತ್ರ ಅಥವಾ ರುಮಾಲು ಎಂದು ಧರಿಸುತ್ತಾರೆ. ಕೌಶಲ್ಯಪೂರ್ಣವಾಗಿ ತಲೆಗೆ ಸುತ್ತುವ ಒಂದು ಮೊಳ ಉದ್ದದ ಬಟ್ಟೆಗೆ ಪಟಕ ಎನ್ನಲಾಗುತ್ತದೆ. ಕೆಲವರು ತಲೆಗೆ ಟೊಪ್ಪಿಗೆ ಇಲ್ಲವೆ ಟವೆಲ್ಲು ಹಾಕಿಕೊಳ್ಳುತ್ತಾರೆ. ಸಣ್ಣಮಕ್ಕಳಿಗೆ ಕುಂಚಿಗೆ ಕುಲಾಯಿ ಹಾಕುತ್ತಾರೆ. ತಲೆಭಾಗಕ್ಕೆ ಮಾತ್ರ ಕಟ್ಟುವಂತದ್ದು ಕುಲಾಯಿ ಆದರೆ, ಕುಲಾಯಿ ಕೆಳಗೆ ಗಗ್ಗರಿಯನ್ನು ಮಾಡಿ ಇಳಿಬಿಟ್ಟಿದ್ದು ಕುಂಚಿಗೆ ಎನ್ನುತ್ತಾರೆ.

೪.೧೫.೨ ಆಭರಣಗಳು

ಸಣ್ಣ ಮಕ್ಕಳಿಗೆ ಕೊರಳಲ್ಲಿ ಕರಿದಾರ, ಕಿವಿಯಲ್ಲಿ ಮುರುವು ಹಾಕಿ, ಸೊಂಟದಲ್ಲಿ ಬೆಳ್ಳಿ ಉಡುದಾರ ಕಟ್ಟುತ್ತಾರೆ, ಕಾಲಲ್ಲಿ ತೋಡೆ, ಹಾಲ್ಗಡಗ ಹಾಕುತ್ತಾರೆ. ಬಡ ಹೆಣ್ಣುಮಕ್ಕಳು ಪ್ಲಾಸ್ಟಿಕ್ ಮುತ್ತಿನ ಸರ, ಹಿತ್ತಾಳೆ

ಚೈನು, ಜೋಗ್ಯಾರು ತಂದ ಆಭರಣ ಧರಿಸುತ್ತಾರೆ. ಮೊದಲು ಹುಟ್ಟುವ ಮಗುವಿಗೆ ತಂದೆಯ ಕಡೆಯವರು ಬಂಗಾರದ ಒಡವೆ ಅಂದರೆ ಮುರುವು, ತಾಯತ, ಉಂಗುರ ಮಾಡಿಸುವ ಸಂಪ್ರದಾಯವಿದೆ.

೪.೧೫.೩ ವಿಶೇಷ ಸಂದರ್ಭದ ಉಡುಪು ಮತ್ತು ಆಭರಣಗಳು

ವಿಶೇಷ ಸಂದರ್ಭಗಳಾದ ಹಬ್ಬ ಹರಿದಿನಗಳು, ಜಾತ್ರೆ, ಉತ್ಸವ, ಮದುವೆ ಮಂಗಳ ಕಾರ್ಯ, ಜನ್ಮ ದಿನ, ಜಾತ್ರೆ, ಅಂಬೇಡ್ಕರ್ ಜಯಂತಿ, ಬುದ್ಧ ಹುಣ್ಣಿಮೆ, ಹೊಸ ವರ್ಷ ದಿನಾಚರಣೆ ಮುಂತಾದ ಸಂದರ್ಭಗಳಲ್ಲಿ ಹೊಸ ಬಟ್ಟೆಯನ್ನು ಸಾಮಾನ್ಯವಾಗಿ ಧರಿಸಲಾಗುತ್ತದೆ. ಕುಟುಂಬದ ಆರ್ಥಿಕ ಸ್ಥಿತಿಗನುಗುಣವಾಗಿ ಬಟ್ಟೆ ತೊಡುತ್ತಾರೆ. ಹಳೆಯ ಮಾದರಿ ಉಡುಪುಗಳೊಂದಿಗೆ ಹೊಸ ಫ್ಯಾಶನ್ ಉಡುಗೆಗಳಾದ ಚೂಡಿದಾರ, ಮಿಡಿ, ಫ್ರಾಕು, ಸೂಟು, ಬೂಟು, ಪ್ಯಾಂಟು, ಟೈ ಧರಿಸುತ್ತಾರೆ. ಏಕಸರ, ಬೋರ್‌ಮಾಳ, ಟಿಕ್ಕಾ, ಚೈನು, ಮಾಂಗಲ್ಯಸರ, ಉಂಗುರ, ಡಾಬು, ಬಂಗಾರದ ಬಳೆ, ಮೂಗುತಿ ಹಾಗೂ ನೆಕ್ಲೆಸ್, ಕಿವಿಯಲ್ಲಿ ಜುಮಕಿ, ಬೆಂಡೋಲೆ, ಬುಗುಡಿ, ರಿಂಗು, ಹೂವು ಮುಂತಾದವನ್ನು ಮಹಿಳೆಯರು ಧರಿಸಿಕೊಳ್ಳುತ್ತಾರೆ. ದೇವತಾಕಾರ್ಯ ನಡೆಯುವಾಗ, ದೇವರ ಮುಂದೆ ಕಳಸ ಹಿಡಿಯುವಾಗ ಹಸಿರು, ಕೆಂಪು, ಚಂದ್ರಕಳೆ, ತೋಪ ಸೆರಗಿನ ಮತ್ತು ರೇಷ್ಮೆ ಸೀರೆಗಳನ್ನು ಧರಿಸಲಾಗುತ್ತದೆ. ಪುರುಷರು ಪ್ಯಾಂಟು, ಷರ್ಟ್, ಟೀಷರ್ಟ್, ಜುಬ್ಬಾ-ಪೈಜಾಮ್, ಕೋಟು ಹೀಗೆ ವಿವಿಧ ವಿನ್ಯಾಸದ ಉಡುಪು ಮತ್ತು ಆಭರಣಗಳನ್ನು ತೊಡುತ್ತಾರೆ.

೪.೧೬ ನ್ಯಾಯ ತೀರ್ಮಾನದ ಪಂಚರ ಸಮಿತಿ

ಹಿಂದಿನ ಕಾಲದಲ್ಲಿ ಯಾವುದೇ ಕಾರಣಕ್ಕಾಗಿ ಜಗಳವಾದರೆ ಗ್ರಾಮದ ಪೋಲಿಸುಗೌಡ ಇಲ್ಲವೆ ಪಂಚ ಅಥವಾ ಪಂಚಾಯ್ತಿಯ ಸಮ್ಮುಖದಲ್ಲಿ ನ್ಯಾಯ ಬಗೆಹರಿಸಿಕೊಳ್ಳಲಾಗುತ್ತಿತ್ತು. ಅವರು ಕೊಟ್ಟ ನ್ಯಾಯ ತೀರ್ಮಾನಕ್ಕೆ ಎಲ್ಲರೂ ತಲೆಬಾಗಬೇಕಿತ್ತು. ಪಂಚಾಯ್ತಿಯಲ್ಲಿ ಸಾಮಾನ್ಯವಾಗಿ ಪ್ರಬಲ ಜಾತಿಯ ಕೈಯಲ್ಲಿ ನ್ಯಾಯ ಕೊಡುವ ಹಕ್ಕು ಇತ್ತು. ಕೆಲವು ಸಂದರ್ಭಗಳಲ್ಲಿ ಜಾತಿ ಭಾವನೆಯಿಂದ ಸರಿಯಾದ ನ್ಯಾಯ ದೊರಕುತ್ತಿರಲಿಲ್ಲ. ಇಂದು ಸಂವಿಧಾನ ಜಾರಿಗೆ ಬಂದ ಮೇಲೆ ಕಾನೂನಿನ ಅಡಿಯಲ್ಲಿ ಪೋಲಿಸ್, ಕೋರ್ಟ್, ಕಛೇರಿಗಳ ಮೂಲಕ ಜಗಳ ಬಗೆಹರಿಸಿಕೊಳ್ಳಲಾಗುತ್ತದೆ. ಹೀಗಿದ್ದರೂ ಜಿಲ್ಲೆಯ ಕೆಲವೊಂದು ಗ್ರಾಮಗಳಲ್ಲಿ ಕುಟುಂಬಗಳು, ಕುಟುಂಬದ ಸದಸ್ಯರು, ಸಮುದಾಯಗಳ ಮಧ್ಯ ಜಗಳವಾದರೆ ನಿಷ್ಪಕ್ಷಪಾತ ನ್ಯಾಯ ನೀಡುವ ಗ್ರಾಮ ಗೌಡರ ಹತ್ತಿರ ಇಲ್ಲವೆ ಪಂಚಾಯ್ತಿಯಲ್ಲಿ ಬಗೆಹರಿಸಿಕೊಳ್ಳಲಾಗುತ್ತದೆ.

೪.೧೬.೧ ನ್ಯಾಯ ಕಟ್ಟೆ ನಿಯಮಗಳು

ಹಿಂದನ ದಿನಗಳಲ್ಲಿ ದೇವರಗುಡಿ ಕಟ್ಟೆಯ ಮೇಲೆ ಇಲ್ಲವೆ ಸಮುದಾಯ ಭವನದಲ್ಲಿ ದೈವದ ನಾಲ್ಕು ಜನ ಕೂಡಿ ನ್ಯಾಯ ನಿರ್ಣಯ ಮಾಡಲಾಗುತ್ತದೆ. ನ್ಯಾಯ ನಿರ್ಣಾಯಕರನ್ನು ಕಂಬಳಿ ಹಾಸಿ ಕೂಡಿಸುತ್ತಾರೆ. ನ್ಯಾಯ ಪಂಚಾಯ್ತಿ ನಡೆಯುವಾಗ ಈ ವ್ಯಾಜ್ಯಕ್ಕೆ ಸಂಬಂಧಿಸಿದ ವಾದಿ ಪ್ರತಿವಾದಿಗಳನ್ನು, ಸಾಕ್ಷಿ ಹೇಳುವವರನ್ನು ಕರೆತರಬೇಕು. ನ್ಯಾಯ ಸಭೆಯಲ್ಲಿ ಬೇರೆ ಯಾರೂ ಮಾತಾಡಬಾರದು, ಬೀಡಿ

ಸೇದಬಾರದು, ತುಂಬಾಕ ತಿಂದು ಉಗುಳಬಾರದು, ನಗಬಾರದು, ಮಧ್ಯದಲ್ಲಿ ನ್ಯಾಯ ಸಮಿತಿ ಅಥವಾ ಪಂಚರ ಅಪ್ಪಣೆ ಇಲ್ಲದೆ ಹೋಗಬಾರದು ಮೊದಲಾದ ನಿಯಮಗಳನ್ನು ಎಲ್ಲರೂ ಪಾಲಿಸಬೇಕು. ಈ ನಿಯಮಗಳು ಇಂದು ಬಹಳಷ್ಟು ಕಡಿಮೆಯಾಗುತ್ತ ನಡೆದಿದೆ.

೪.೧೬.೨ ನ್ಯಾಯ ತೀರ್ಮಾನದ ವಿಷಯಗಳು ಅಥವಾ ನ್ಯಾಯ ವಿಷಯಗಳ ವ್ಯಾಪ್ತಿ

ನೈತಿಕ ನಿಯಮಗಳ ಪಾಲನೆ, ಕುಟುಂಬಗಳ ಜಗಳ, ಅಣ್ಣ ತಮ್ಮಂದಿರ ಜಗಳ, ಕೊಲೆ, ಸುಲಿಗೆ, ದರೋಡೆ, ಆಸ್ತಿ ಹಂಚಿಕೆ, ವಿವಾಹ ವಿಚ್ಛೇದನಾ ಮುಂತಾದ ಕಾರಣಕ್ಕಾಗಿ ಕುಟುಂಬದ ಸದಸ್ಯರು ತಮಗಾದ ಮಾನ ಅಪಮಾನದ ಹಾನಿಯನ್ನು ಸರಿಪಡಿಸಿಕೊಳ್ಳಲು ನ್ಯಾಯದ ಮೊರೆ ಹೋಗುತ್ತಾರೆ. ನ್ಯಾಯ ನಿರ್ಣಯ ಮಾಡುವ ದಿನ ಮುಂಜಾನೆ ಓಣಿಯ ವ್ಯಕ್ತಿಗೆ ಕರೆ ಕಳಿಸಲಾಗುತ್ತದೆ. ನ್ಯಾಯಕಟ್ಟೆ ಸಿದ್ಧಗೊಳಿಸಲು ಹಾಗೂ ಅಂದು ರಾತ್ರಿ ಗುಡಿ, ಅಂಬೇಡ್ಕರ ಭವನ ಇಲ್ಲವೆ ಸಮುದಾಯ ಭವನದಲ್ಲಿ ಸಭೆ ಕರೆಯಲಾಗಿದೆ ಎಂದು ತಿಳಿಸಲು ಎಲ್ಲರ ಮನೆಮನೆಗೆ ಹೋಗಿ ಹೇಳಲಾಗುತ್ತದೆ.

೪.೧೬.೩ ನ್ಯಾಯ ನಿರ್ಣಯಗಳು

ಸತ್ಯ ಅಸತ್ಯಗಳ ಸುದೀರ್ಘ ಚರ್ಚೆ ನಡೆಸುವ ಪಂಚಾಯ್ತಿ ಅಂತಿಮ ತೀರ್ಮಾನಕ್ಕೆ ಬರುತ್ತದೆ. ಜಗಳ ನಡೆದವರಲ್ಲಿ ಪರಸ್ಪರರಲ್ಲಿ ಸ್ನೇಹ ಭಾವ ಉಂಟುಮಾಡಿ ರಾಜಿ ಮಾಡಿಸಲಾಗುತ್ತದೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಬಹುದು. ನ್ಯಾಯ ಸಮಸ್ಯೆ ಜಟಿಲವಾಗಿದ್ದರೆ ಅಥವಾ ಬಗೆಹರಿಯದಿದ್ದರೆ ಗ್ರಾಮದ ಹಿರಿಯರನ್ನು ಕರೆಯಲಾಗುವುದು. ವಾದಿ ಪ್ರತಿವಾದಿಗಳ ಅನುಮತಿಯ ಮೇರೆಗೆ ಗ್ರಾಮದ ಹಿರಿಯರು ನ್ಯಾಯ ತೀರ್ಮಾನಿಸಬಹುದು. ಇಂದು ಛಲವಾದಿಯರಲ್ಲಿ ಬಹಳ ಜನ ನ್ಯಾಯವನ್ನು ಗೌಡರ ಕಡೆಗೆ ತೆಗೆದುಕೊಂಡು ಹೋಗಲು ನಿರಾಕರಿಸುತ್ತಾರೆ. ಡಿ.ಎಸ್.ಎಸ್. ಪದಾಧಿಕಾರಿಗಳ ಕಡೆಗೆ ಇಲ್ಲವೆ ಛಲವಾದಿ ಮಹಾಸಭಾದ ಸಮಿತಿಯಲ್ಲಿ ನ್ಯಾಯ ಬಗೆಹರಿಸಿಕೊಳ್ಳಲು ಆದ್ಯತೆ ನೀಡಲಾಗುತ್ತದೆ. ಅದು ಸಾಧ್ಯವಾಗದಿದ್ದಲ್ಲಿ ಅಂತಿಮವಾಗಿ ಪೋಲಿಸ್ ಠಾಣೆಗೆ ಫಿರ್ಯಾದಿ ಕೊಟ್ಟು ನ್ಯಾಯ ಪಡೆಯುತ್ತಾರೆ.

೪.೧೬.೪ ದಂಡಗಳು

ಪಂಚಾಯ್ತಿ ಕೂಡಿದ ಸಭಾದ ಹಿರಿಯರು ಎಲ್ಲರ ಸಮ್ಮುಖದಲ್ಲಿ ಜಗಳದ ತಪ್ಪನ್ನು ಸಂಪೂರ್ಣವಾಗಿ ತಿಳಿದುಕೊಂಡು ಅತಿ ಕನಿಷ್ಟ ೧೦ ರಿಂದ ೨೫ ಪೈಸೆ, ಗರಿಷ್ಠ ೧೦೦೦ ರೂಪಾಯಿ ದಂಡ ವಿಧಿಸುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ವಿಧಿಸುವ ದಂಡಗಳಲ್ಲಿ ನಿರ್ದಿಷ್ಟವಾಗಿ ಇಂತಿಷ್ಟೆ ಹಣ ಇರಬೇಕೆಂದು ಹೇಳಲಿಕ್ಕೆ ಸಾಧ್ಯವಿಲ್ಲ ಜಗಳದ ಸ್ವರೋಪ ನೋಡಿ ದಂಡಗಳನ್ನು ಕಟ್ಟುತ್ತಾರೆ.

ಕುಟುಂಬದಲ್ಲಿ ಗಂಡ ಹೆಂಡರ ಜಗಳ, ಅಣ್ಣ ತಮ್ಮಂದಿರ ಜಗಳ, ನೆರೆಹೊರೆಯೊಂದಿಗೆ ಜಗಳ, ಸಮುದಾಯ ಸಮುದಾಯಗಳ ಜಗಳ, ಅತ್ತೆ ಸೊಸೆ, ತಂದೆ ಮಗ, ಜಗಳವಾಡಿದರೆ ತಪ್ಪು ಯಾರು ಮಾಡಿದ್ದಾರೆ ಅವರಿಗೆ ದಂಡ ಕಟ್ಟುತ್ತಾರೆ.

೪.೧೬.೫ ನೈತಿಕ ಅಧಃಪತನ ಬಹಿಷ್ಕಾರ

ಯಾವುದೇ ಸಮುದಾಯ ಸುವ್ಯವಸ್ಥೆಯಲ್ಲಿದೆ ಎಂದರೆ ಅಲ್ಲಿ ನೈತಿಕತೆಯಿದೆ ಎಂದರ್ಥ. ನೈತಿಕತೆ ಇಲ್ಲದೆ ಸಮುದಾಯದಲ್ಲಿ ಶಾಂತಿ ಸೌಹಾರ್ದತೆಗಳು ನೆಲೆಗೊಳ್ಳಲಾರವು. ಹೀಗಾಗಿ ನೈತಿಕತೆಯನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

ಸಣ್ಣವ್ವ, ಚಿಕ್ಕಪ್ಪನ ಮಗಳು, ಸಹೋದರನ ಹೆಂಡತಿಯೊಂದಿಗೆ ಲೈಂಗಿಕ ಸಂಪರ್ಕ ಹೊಂದಬಾರದು ಎಂಬುದು ನೈತಿಕ ನಿಯಮವಾಗಿದೆ. ಅಕ್ರಮ ಲೈಂಗಿಕ ಸಂಪರ್ಕ ಹೊಂದಿದರೆ ಅಥವಾ ಬಲಾತ್ಕಾರ ಮಾಡಿದರೆ ಅವು ನೈತಿಕ ಅಧಃಪತನವಾಗುತ್ತದೆ. ಈ ತರಹದ ಅಪರಾಧಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕುತ್ತಾರೆ. ಬಹಿಷ್ಕೃತರಿಗೆ ಯಾರೂ ಸಹಾಯ ಸಹಕಾರ ನೀಡುವಂತಿಲ್ಲ, ಮಾತನಾಡುವಂತಿಲ್ಲ, ಪಂಕ್ತಿ ಭೋಜನದಲ್ಲಿ ಭಾಗವಹಿಸುವಂತಿಲ್ಲ, ಇವರೊಡನೆ ರಕ್ತ ಸಂಬಂಧ ಹೊಂದುವಂತಿಲ್ಲ, ಸುಖ-ದುಃಖ ಕಾರ್ಯಕ್ರಮಗಳಿಗೆ ಇವರನ್ನು ಕರೆಯುವಂತಿಲ್ಲ. ಇವರನ್ನು ಸಮಾಜದಿಂದ ದೂರ ಇಡಲಾಗುತ್ತದೆ. ಇಂತಹ ನಿಯಮಗಳು ಮೊದಲು ರಾಜಾಜ್ಞೆಯಂತೆ ಪಾಲಿಸಲಾಗುತ್ತಿತ್ತು. ಇಂದು ಸಾಮಾಜಿಕ ಬಹಿಷ್ಕಾರ ಪದ್ಧತಿ ಕಡಿಮೆಯಾಗಿವೆ.

೪.೧೬.೬ ಶಿಕ್ಷೆಗಳು

ಸಹೋದರಿಯೊಂದಿಗೆ ಅನೈತಿಕ ಸಂಬಂಧ ಹೊಂದಿದರೆ ಹುಲ್ಲನ್ನು ಬಾಯಲ್ಲಿ ಹಿಡಿದುಕೊಂಡು ಕೈಗೆ ಹುಲ್ಲಿನಿಂದ ಬೇಡಿಯಂತೆ ಹಾಕಿಕೊಂಡು ಸಮಾಜದ ಎಲ್ಲ ಸದಸ್ಯರ ಕಾಲು ಹಿಡಿಯಬೇಕು. ಇಂದಿನ ದಿನಗಳಲ್ಲಿ ಪೋಲಿಸ್ ಸ್ಟೇಷನ್‌ಗಳಲ್ಲಿ ಹೋಗಿ ಅದಕ್ಕೆ ಪರ್ಯಾಯವಾಗಿ ಹಿಂಬರಹ ಬರೆಸಿಕೊಂಡು ರಾಜಿ ಮಾಡಿಸಿಕೊಂಡು ಬರಲಾಗುತ್ತಿದೆ.

ಆಧುನಿಕ ಸಂದರ್ಭದಲ್ಲಿ ಛಲವಾದಿ ಸಮುದಾಯ ಸಾಮಾಜಿಕ ಜೀವನದಲ್ಲಿ ಬದಲಾವಣೆ ಕಂಡುಕೊಂಡಿದೆ, ಉನ್ನತಿಯೆಡೆಗೆ ದಾಪುಗಾಲಿಡಲು ಹಾಗೂ ಪ್ರಗತಿಪರರಾಗಿ ಬಾಳಲು ಹೊರಟಂತೆ ಕಾಣುತ್ತದೆ. ಈ ಸಮುದಾಯದಲ್ಲಿ ಮೊದಮೊದಲು ಸಮುದಾಯದ ಹಿರಿಯ ಐದು ಜನರನ್ನು ಪಂಚರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಇವರಿಗೆ ಎಲ್ಲಾ ಬಗೆಯ ಜ್ಞಾನ, ಅನುಭವ, ನಿಷ್ಪಕ್ಷವಾಗಿ ನ್ಯಾಯ ನಿರ್ಣಯ ಮಾಡುವ ಭಾವನೆ, ಸದ್ಗುಣಗಳು ಹೊಂದಿರುವದು ಅವಶ್ಯಕವಾಗಿತ್ತು. ಇವರ ಸಮುದಾಯದಲ್ಲಿ ಕಟ್ಟೆ ಮನೆಯ ನ್ಯಾಯ ವ್ಯವಸ್ಥೆ ಇಲ್ಲದೆ ಇರುವದು ಈಗ ಕಂಡುಬರುತ್ತಿದೆ. ಕೆಲವು ಯಾವುದಾದರೂ ಜಗಳ ಕಲಹಗಳನ್ನು ಮಾಡಿದರೆ ಇವತ್ತಿಗೂ ಕೂಡಾ ಗೌಡ, ಕುಲಕರ್ಣಿಗಳ ಕಡೆಗೆ ಹೋಗಿ ನ್ಯಾಯ ನಿರ್ಣಯಗಳನ್ನು ಬಗೆ ಹರಿಸಿಕೊಂಡು ಬರುತ್ತಾರೆ. ಅವರಿಂದ ಸರಿಯಾದ ನ್ಯಾಯ ಸಿಗದೆ ಇದ್ದರೆ ಪೋಲೀಸ್ ಸ್ಟೇಷನ್‌ಗಳಿಗೆ ಹೋಗಿ ಫಿರ್ಯಾದಿ ಕೊಟ್ಟು ನ್ಯಾಯ ಪಡೆದುಕೊಳ್ಳುತ್ತಾರೆ.

ಅಡಿಟಿಪ್ಪಣಿಗಳು :

೧ ಶಶಿಕಲಾ ಮೋಳ್ಡಿ, ಉತ್ತರ ಕನಾಟಕ ಮದುವೆ ಹಾಡುಗಳು, ಪುಟ-೨೦.

೨ ಅದೇ ಪುಟ-೧೪೫.

೩ ಅದೇ ಪುಟ-೫೯.

೪ ಅದೇ ಪುಟ-೫೭.

೫ ಅದೇ ಪುಟ-೫೮.

೬ ಅದೇ ಪುಟ-೧೫೯, ೧೬೦

೭ ಎಚ್. ಬಿ. ದೊಡ್ಡಮನಿ, ಚುಂಚೂರು ಮಾಪುರತಾಯಿ ಒಂದು ಅಧ್ಯಯನ, ಪುಟ-೦೪, ೦೫.

೮ ಜೋಗನ್ ಶಂಕರ, ದೇವದಾಸಿ ಸಂಪ್ರದಾಯ, ಪುಟ-೮೨, ೮೩, ೮೪.

೯ ಅದೇ ಪುಟ-೮೫, ೮೬, ೮೭

೧೦ ಅದೇ ಪುಟ-೮೬

೧೧ ಅದೇ ಪುಟ-೮೭

ಅಧ್ಯಾಯ – ೫

ಆರ್ಥಿಕ ಜೀವನ

ಅಧ್ಯಾಯ – ೫

ಆರ್ಥಿಕ ಜೀವನ

ಭಾರತ ದೇಶವು ಹಳ್ಳಿಗಳಿಂದ ಕೂಡಿದ ದೇಶ. ಇಲ್ಲಿ ಅನೇಕ ಸಮುದಾಯಗಳು ತಮ್ಮದೇ ಆದ ಕುಲಕಸುಬಿನೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಮೂಲ ಕಸುಬಲ್ಲದೆ ಹಲವು ಉಪ ಕಸಬುಗಳೊಂದಿಗೆ ಬದುಕುತ್ತಿದ್ದಾರೆ. ಇವರಲ್ಲಿ ಅಧಿಕ ಜನರು ಗ್ರಾಮಗಳಲ್ಲೇ ನೆಲೆಯೂರಿದ್ದಾರೆ.

"ಭಾರತದಲ್ಲಿ ಸುಮಾರು ೫,೭೮,೦೦೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಜನ ವಾಸಿವಾಗಿದ್ದಾರೆ. ಇವರ ಮೂಲವೃತ್ತಿ ಪ್ರಾಚೀನ ಕಾಲದಿಂದಲೂ ಕೃಷಿಯಾಗಿದೆ. ಭಾರತ ಕೃಷಿ ಪ್ರಧಾನ ದೇಶ. ನಮ್ಮ ಪೂರ್ವಜರು 'ಉತ್ತಮವಾದದ್ದು ವ್ಯವಸಾಯ, ಮಧ್ಯಮವಾದದ್ದು ವ್ಯಾಪಾರ, ಕನಿಷ್ಠವಾದದ್ದು ನೌಕರಿ' ಎಂದಿದ್ದಾರೆ. ಇಂದಿಗೂ ಬಹುಸಂಖ್ಯಾತ ಭಾರತೀಯರು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಅವರ ಮೂಲ ಕಸುಬು ಕೃಷಿಯಾಗಿದೆ. ಇದನ್ನು ಕೇಂದ್ರೀಕರಿಸಿ ಭಾರತೀಯ ಸಂಸ್ಕೃತಿ, ಸಂಸ್ಕಾರ, ಪರಂಪರೆ, ಆಚಾರ ವಿಚಾರಗಳು ಬೆಳೆದುಬಂದಿವೆ. ಒಕ್ಕಲುತನದ ಬೆಳವಣಿಗೆ ಆರ್ಥಿಕ ಅಭಿವೃದ್ಧಿಗೆ ಮೂಲ ಸಾಧನವಾಗಿದೆ. ಆಹಾರದ ಕೊರತೆ ಆರ್ಥಿಕ ವ್ಯವಸ್ಥೆಯ ಪರಿಸ್ಥಿತಿಯನ್ನು ವಿಷಮಗೊಳಿಸುತ್ತದೆ. ಆಹಾರದ ಕೊರತೆ ಬೇಡಿಕೆಯನ್ನು ಹೆಚ್ಚಿಸುತ್ತದೆ. ಅದನ್ನು ನೀಗಿಸಲು ದೇಶದಲ್ಲಿ ಅತಿ ಹೆಚ್ಚು ಜನ ಕೃಷಿಯನ್ನು ಅವಲಂಬಿಸಿದ್ದಾರೆ."[೧]

ದಲಿತರೆಂದರೆ ಕೃಷಿಕೂಲಿ ಕಾರ್ಮಿಕರೆಂದೆ ತಿಳಿಯಲಾಗುತ್ತದೆ. ಛಲವಾದಿ ಜನ ಗದಗ ಜಿಲ್ಲೆಯಲ್ಲಿ ಕೃಷಿಯನ್ನೆ ಜೀವನದ ಮೂಲಾಧಾರವನ್ನಾಗಿ ಮಾಡಿಕೊಂಡಿದ್ದು ಬಹುತೇಕ ಕಡೆ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕೃಷಿ ಉಪಕರಣಗಳನ್ನು ತಯಾರು ಮಾಡುವ ಕಲೆಯೂ ಅವರಿಗೆ ತಿಳಿದಿದೆ. ಇವರು ಕೃಷಿಯ ಜೊತೆಗೆ ಕೃಷಿ ಕೂಲಿ ಕಾರ್ಮಿಕರಾಗಿಯೂ ಇರುವುದು ಕಂಡುಬರುತ್ತದೆ.

ಛಲವಾದಿ ಜನ ಕೃಷಿ ಕಾರ್ಮಿಕರಾಗಿ ಮಾತ್ರವಲ್ಲದೆ ಬಿಟ್ಟಿ ಕೆಲಸಗಾರರು, ಕಸಗುಡಿಸುವವರು, ಗಾಡಿ ಎಳೆಯುವವರು, ಗ್ಯಾಸ್ ಹೊರುವವರು, ದೀವಟಿಗೆ ಹಿಡಿಯುವವರು, ವ್ಯವಸಾಯಗಾರರು, ದನಗಳ ದಲ್ಲಾಳಿಗಳು, ಕಟ್ಟಿಗೆ ಮಾರುವವರು, ಗೋರಿ ತೋಡುವವರು, ಜೀತಗಾರರಾಗಿಯೂ ದುಡಿಯುತ್ತಿದ್ದಾರೆ. ಕೆಲವರು ಜಾನಪದ ಕಲೆಗಾರರಾಗಿ ಹೆಸರಾಗಿದ್ದಾರೆ. ಅವರು ತಮ್ಮ ಬದುಕಿನ ವೃತ್ತಿಯಾಗಿ ಬಯಲಾಟ, ಭಜನಾಮೇಳ, ಚೌಡಕಿಮೇಳ, ಕರಡಿ ಮಜಲು, ಹಂತಿಪದ, ಹಾರ್ಮೋನಿಯಂ, ತಬಲಾವಾದನ, ನಾಟಕಕಾರ, ಕೊಳಲು ವಾದಕರು, ಗೀಗೀ ಪದ ಗಾಯಕರು, (ಮಂಗಳವಾದ್ಯ ನುಡಿಸುವುದು) ಕಹಳೆ ಊದುವುದು, ಬ್ಯಾಂಡ್ ನುಡಿಸುವುದು, ಬಡಗಿತನ, ನಾವಿಕರು, ಕುಸ್ತಿ ಪೈಲವಾನರು, ಆಯುರ್ವೇದ ವೈದ್ಯರು, ಕತೆಗಾರರು, ಅಟೋ ಡ್ರೈವರು, ಲಾರಿ ಡ್ರೈವರು, ಗೌಂಡಿಗಳು, ಪೆಂಟರ್‌ಗಳು, ಕಾಯಿಪಲ್ಲೆ ಮಾರುವವರು, ಹಾಡುಗಾರರು ಹೀಗೆ ನಾನಾ ವೃತ್ತಿಗಳಲ್ಲಿ ಕಲಾ ಕೌಶಲ್ಯತೆ ಪಡೆದವರಾಗಿದ್ದಾರೆ.

ಸ್ವತಂತ್ರ ಭಾರತ ಸಂವಿಧಾನವು ಸರ್ವರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟ ಪರಿಣಾಮವಾಗಿ ಇಂದು ಛಲವಾದಿ ಸಮುದಾಯದವರು ತಮ್ಮ ಮೂಲ ಕಸುಬುಗಳನ್ನು ತೊರೆದಿದ್ದಾರೆ. ಅದರಲ್ಲಿ ಕೆಲವು ಕಸುಬುಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂದೇಶ 'ಶಿಕ್ಷಣ, ಸಂಘಟನೆ, ಹೋರಾಟ'ವೆ ಆಗಿದೆ. ಈ ಮೂರು ಮಂತ್ರದ ಸೂತ್ರವನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆ ಕಾಣುತ್ತಿದ್ದಾರೆ. ಪ್ರಸ್ತುತ ದಿನಗಳಲ್ಲಿ ಕೆಲವರು ಮಾತ್ರ ಶಿಕ್ಷಣ ಪಡೆದು ಪದವಿ, ಸ್ನಾತಕೋತ್ತರ ಪದವಿಗಳನ್ನು ಗಳಿಸಿಕೊಂಡಿರುವುದಲ್ಲದೆ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ವೃತ್ತಿಪರವಾದ ವಿವಿಧ ಕೋರ್ಸ್‌ಗಳನ್ನು ಪಡೆದುಕೊಂಡು ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೫.೧ ಕುಲಕಸಬುಗಳು

ಛಲವಾದಿ ಸಮುದಾಯದವರಲ್ಲಿ ತಲತಲಾಂತರಗಳಿಂದ ನಿರ್ವಹಿಸುತ್ತ ಬಂದಿದ್ದ ಕಸಬೆಂದರೆ ಬಿಟ್ಟಿ ಚಾಕರಿ ಕೆಲಸ ಪ್ರಮುಖವಾಗಿದೆ. ಇಂದು ಅನೇಕರು ಈ ಕೆಲಸ ಮಾಡುತ್ತಿದ್ದಾರೆ. ಆಧುನಿಕ ಜಗತ್ತಿನಲಿ ಇಂದು ಇಂಥ ಬಿಟ್ಟಿ ಚಾಕರಿಗಳು ನಡೆಯುತ್ತಿರುವುದು ಖಂಡನೀಯ. ಗದಗ ತಾಲೂಕಿನ ಮುಳಗುಂದ, ಮಲ್ಲಸಮುದ್ರ ಗ್ರಾಮಗಳಲ್ಲಿ ಶೋಷಣಾ ವ್ಯವಸ್ಥೆಯನ್ನು ಇಂದಿಗೂ ಕಾಣಬಹುದು. ಬಿಟ್ಟಿ ಕೆಲಸವೆಂದರೆ ಚಾಕರಿ ಕೆಲಸವಾಗಿದೆ. ಈ ಕೆಲಸದಿಂದ ಮೇಲ್ಜಾತಿ ಮನೆಗಳಲ್ಲಿ ಛಲವಾದಿಯವರು ಪ್ರತಿದಿನ ಬೆಳಗಾಗುವುದರಲ್ಲಿ ಹೆಂಡಿ ಕಸ ಮಾಡುವುದು, ಸತ್ತ ದನ ಎತ್ತಿ ಊರ ಹೊರಗೆ ಸಾಗಿಸುವದು, ಅಲ್ಲದೆ ಗ್ರಾಮದ ಗೌಡ, ಕುಲಕರ್ಣಿ, ದೇಸಾಯಿ ದೇಶಮುಖ್‌ರು ಜಾಗೀರದಾರರು ಹೇಳುವ ಕೆಲಸಕ್ಕೆ ಯಾವ ನಿರ್ದಿಷ್ಟ ಸಮಯವೂ ಇರುವುದಿಲ್ಲ. ಗೌಡರ ಮನೆಯಲ್ಲಿ, ಮದುವೆ-ಹಬ್ಬ ಹರಿದಿನಗಳಲ್ಲಿ, ಅಮವಾಸ್ಯೆ-ಹುಣ್ಣಿಮೆಗಳಲ್ಲಿ, ಶುಭದಿನ ಮುಂತಾದ ದಿನಗಳಲ್ಲಿ ಕಟ್ಟಿಗೆ ಒಡೆಯುವುದು, ಅವರ ಮನೆಯ ಸುತ್ತ ಸ್ವಚ್ಛಗೊಳಿಸುವುದು, ಸಾಹುಕಾರರ ಹೊಲಮನೆ ಕಾಯುವುದು, ಸತ್ತಸುದ್ದಿ ಹೇಳುವುದು, ಹಬ್ಬ-ಜಾತ್ರೆಗಳಲ್ಲಿ ವಿಶೇಷವಾಗಿ ಕಾರ ಹುಣ್ಣಿಮೆಯಲ್ಲಿ ಮನೆಯ ಹೊರಗೋಡೆಯನ್ನು ಹೆಂಡೆ ರಾಡಿಯಿಂದ ಸಾರಿಸುವುದು ಛಲವಾದಿಯವರ ಕೆಲಸ. ಇತ್ತೀಚಿನ ದಿನಗಳಲ್ಲಿ ಬದಲಾವಣೆಯಾಗಿದ್ದು ಸುಣ್ಣ ಬಣ್ಣ ಬಳಿಯುವುದು, 'ಹೊಲಿಯ್ಯಾಳಿಗೊಂದು ಮನೆಯಾಳ' ಎಂದು ತಿಳಿದು ಮೇಲ್ಜಾತಿ ಜನರು ತಮ್ಮ ಕೆಲಸಗಳಿಗೆ ಇವರನ್ನು ಬಳಸಿಕೊಳ್ಳುವರು. -ಹೀಗೆ ಛಲವಾದಿ ಜನರ ಬಿಟ್ಟಿ ಕೆಲಸ ನಿರಂತರವಾಗಿದ್ದು ಮುಗಿಯುವುದೆ ಇಲ್ಲ. ಎಲ್ಲಾ ಕೆಲಸಗಳನ್ನು ಛಲವಾದಿ ಜನ ವಿಶ್ವಾಸ, ನಂಬಿಕೆ, ಧರ್ಮನಿಷ್ಠೆಯಿಂದ ದುಡಿಯುತ್ತಾರೆ. ಇವರಿಗೆ ಸಿಗುವುದು ಹಳಿಸಿದ ಅನ್ನ, ಹರಕು ಬಟ್ಟೆ, ಮುರುಕಲು ಸಾಮಾನು, ಕಾಳು, ಕೊಡು ಮುರಿದ ದನಕರು ಮಾತ್ರ ಸವರ್ಣೀಯರ ಮನೆಯಲ್ಲಿ ಕಸಗುಡಿಸುವುದರಿಂದ ವರ್ಷಕ್ಕೆ ಅರ್ಧಚೀಲ ಜೋಳ, ಅರ್ಧ ಚೀಲ ಗೋಧಿ ಹಾಗೂ ಇತರೆ ದವಸ ಧಾನ್ಯಗಳು, ಹಾಕಿದ ರಾಶಿಯಲ್ಲಿ ಕಾಳುಕಡಿ ಸ್ವಲ್ಪ ಕೊಡುತ್ತಾರೆ.

ಇದೇ ರೀತಿ ಕಹಳೆ ಊದುವುದು, ಛಲವಾದಿ ಬಟ್ಟಲು ಹೊತ್ತುಕೊಂಡು ತಿರುಗುವುದು, ಜಾತ್ರೆ-ಉತ್ಸವಗಳಲ್ಲಿ ಗ್ಯಾಸ್ ಹೊರುವುದು, ಕಟ್ಟಿಗೆ ಒಡೆದು ಕೊಡುವುದು, ಕಸಗುಡಿಸುವುದು ಕೂಡ ಬಿಟ್ಟಿ ಕೆಲಸವಾಗಿದೆ. ಇಂದಿಗೂ ಕೆಲವು ಗ್ರಾಮಗಳಲ್ಲಿ ಗ್ರಾಮದ ಸಾಹುಕಾರನ ಮನೆ ಕಸ ಹೊಡೆಯುವುದಲ್ಲದೆ ಗ್ರಾಮದೇವತೆಯ ಜಾತ್ರೆ ಸಂದರ್ಭದಲ್ಲಿ ಪ್ರಮುಖ ರಸ್ತೆಗಳನ್ನು ಕಸಗುಡಿಸುವುದು ಕಂಡುಬರುತ್ತದೆ. ಇಂದು ಪಂಚಾಯತ್ ರಾಜ್ ವ್ಯವಸ್ಥೆ ಬಂದಿದ್ದು ಮಹಾನಗರ ಪಾಲಿಕೆಯಿಂದ ಗ್ರಾಮಪಂಚಾಯತಿವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಛಲವಾದಿ ಜನ ಕಸಗುಡಿಸುವ ಕೆಲಸದಲ್ಲಿ ಕಾಣಿಸಿಕೊಳ್ಳುತ್ತಾರೆ. ಮೀಸಲಾತಿ ಇಂದು ಎಲ್ಲಾ ಇಲಾಖೆಗಳಲ್ಲಿ ಜಾರಿಯಲ್ಲಿದೆ. ಮಹಾನಗರ ಪಾಲಿಕೆ, ಪಟ್ಟಣ ಪಂಚಾಯತಿ, ನಗರಸಭೆ, ಪುರಸಭೆ, ಗ್ರಾಮಪಂಚಾಯ್ತಿಗಳಲ್ಲಿ ಸ್ವಚ್ಛ ಮಾಡುವ ಕೆಲಸ (ಕಸಗುಡಿಸುವ ಕೆಲಸ)ದಲ್ಲಿ ಇಂದಿಗೂ ನೂರಕ್ಕೆ ನೂರರಷ್ಟು ಪರಿಶಿಷ್ಟ ಜಾತಿ, ಛಲವಾದಿ ಜನರೇ ಇದ್ದಾರೆ. ಬಿ. ಬಸಲಿಂಗಪ್ಪನವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಈ ಕೆಲಸ ಮಾಡುವವರನ್ನು ಪೌರ ಕಾರ್ಮಿಕರೆಂದು ಕರೆದು ಗೌರವಿಸಿದ್ದಾರೆ. ಇಂದಿಗೂ ಕೂಡ ಗ್ರಾಮೀಣ ಛಲವಾದಿ ಹೆಣ್ಣು ಮಕ್ಕಳು ಹೆಂಡಿಕಸ ಗುಡಿಸುವ ಕೆಲಸಕ್ಕೆ ಹೋಗುವುದನ್ನು ಕಾಣುತ್ತೇವೆ.

ಈ ಹಿಂದಿನ ಕಾಲದಲ್ಲಿ ಶ್ರೀಮಂತರ ಹೊಲದಲ್ಲಿ ಹಕ್ಕಿ ಹೊಡೆಯುವ, ಹಕ್ಕಲ ಆಯುವುದು, ಕಣ ಮಾಡುವ, ಹಂತಿ ಹೊಡೆಯುವ, ಮಣ್ಣು ಕಾಳು ಆರಿಸುವ, ದಾನ ಪಡೆಯುವ, ಹೆಂಡಿ ಜೋಳ ಕೂಡಿಸುವ ಮುಂತಾದ ಕೃಷಿ ಸಂಬಂಧಿತ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇಂದು ಕಾಲ ಬದಲಾಗಿದೆ. ಇವರೂ ಸಹ ಸ್ವತಂತ್ರವಾಗಿ ವೃತ್ತಿಗಳನ್ನು ನಿರ್ವಹಿಸಿಕೊಂಡು ಬದುಕು ಸಾಗಿಸಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧ ರಲ್ಲಿ ಅಧ್ಯಯನಕ್ಕೊಳಪಟ್ಟ ಛಲವಾದಿ ಸಮುದಾಯದಲ್ಲಿ ಜನತೆಯ ಕಸುಬನ್ನು (ವೃತ್ತಿ) ಲಿಂಗಕ್ಕನುಗುಣವಾಗಿ ನೀಡಲಾಗಿದೆ. ಜನರ ವೃತ್ತಿಯನ್ನು ಕೂಲಿ ಕೆಲಸ ಮಾಡುವವರು, ವಿದ್ಯಾಭ್ಯಾಸ ಮಾಡುವವರು, ವೇತನ ಪಡೆಯುವ ಕೆಲಸದಲ್ಲಿರುವವರು, ಕೆಲಸವಿಲ್ಲದವರು ಹಾಗೂ ಇತರೆ ಕೆಲಸ ಮಾಡುತ್ತಿರುವವರು ಎಂಬುದಾಗಿ ಗುರುತಿಸಿ ವಿವರಗಳನ್ನು ಪಡೆಯಲಾಗಿದೆ. ಒಟ್ಟಾರೆ ಗದಗ ಜಿಲ್ಲೆಯಲ್ಲಿ ಈ ಸಮುದಾಯದ ೧೧,೫೧೧ ಜನರಲ್ಲಿ ೫೨೮೫ ಜನ ಕೂಲಿಕಾರರು (೪೫.೯) ಇದ್ದು, ಅದರಲ್ಲಿ ೨೭೦೦ ಜನ ಪುರುಷರು (೫೧.೦) ಪ್ರತಿಶತ ಮತ್ತು ೨೫೮೫ ಜನ (೪೯.೦ ಪ್ರತಿಶತ) ಮಹಿಳೆಯರು ಇದ್ದಾರೆ. ವಿದ್ಯಾರ್ಥಿಗಳಲ್ಲಿ ೩೬೭೨ ಜನರಲ್ಲಿ (೩೧.೫ ಪ್ರತಿಶತ) ೧೯೯೮ ಪುರುಷರು (೫೫.೨ ಪ್ರತಿಶತ) ಹಾಗೂ ೧೬೭೪ ಮಹಿಳೆಯರು (೪೪.೮ ಪ್ರತಿಶತ) ಇರುವುದನ್ನು ಕಾಣಬಹುದು.

ವೇತನ ಪಡೆಯುವ ಗುಂಪಿನಲ್ಲಿ ಅಂಕಿಅಂಶಗಳಲ್ಲಿ ಗಣನೀಯ ಇಳಿಕೆ ಗುರುತಿಸಬಹುದು. ವೇತನ ಪಡೆಯುತ್ತಿರುವ ೩೯೯ ಜನರಲ್ಲಿ (೩.೫ ಪ್ರತಿಶತ) ೩೦೮ ಪುರುಷರು (೭೭.೨ ಪ್ರತಿಶತ) ಹಾಗೂ ೯೧ ಜನ ಮಹಿಳೆಯರು (೨೨.೮ ಪ್ರತಿಶತ) ಇದ್ದಾರೆ. ವೇತನ ಪಡೆಯುವರಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

ಕೋಷ್ಟಕ ೫.೧ ಲಿಂಗಕ್ಕನುಗುಣವಾದ ಉದ್ಯೋಗಸ್ಥ ಜನಸಂಖ್ಯೆಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಲಿಂಗ	ಉದ್ಯೋಗ						ಒಟ್ಟು
		ಕೂಲಿ	ವಿದ್ಯಾರ್ಥಿ	ವೇತನದಾರರು	ಕೆಲಸವಿಲ್ಲದವರು	ಇತರೆ	ಗೊತ್ತಿಲ್ಲ	
ಗದಗ	ಪುರುಷರು	೯೩೩	೭೮೮	೧೧೮	೬೪	೨೨೫	೮೮	೨೨೧೬
		೪೨.೧	೩೫.೬	೫.೩	೨.೯	೧೦.೨	೪.೦	೧೦೦.೦
	ಸ್ತ್ರೀಯರು	೮೭೨.೦	೬೭೭.೦	೪೩.೦	೩೦೬.೦	೧೧೧.೦	೧೧೬	೨೧೨೫.೦
		೪೧.೦	೩೧.೯	೨.೦	೧೪.೪	೫.೨	೫.೫	೧೦೦.೦
	ಒಟ್ಟು	೧೮೦೫.೦	೧೪೬೫.೦	೧೬೧.೦	೩೭೦.೦	೩೩೬.೦	೨೦೪	೪೩೪೧.೦
		೪೧.೬	೩೩.೭	೩.೭	೮.೫	೭.೭	೪.೭	೧೦೦.೦
ರೋಣ	ಪುರುಷರು	೧೦೩೭.೦	೭೪೭.೦	೧೧೮.೦	೭೫.೦	೧೧೮.೦	೧೨೮	೨೨೨೩.೦
		೪೬.೬	೩೩.೬	೫.೩	೩.೪	೫.೩	೫.೮	೧೦೦.೦
	ಸ್ತ್ರೀಯರು	೧೦೬೫.೦	೫೭೪.೦	೩೬.೦	೧೬೭.೦	೯೯.೦	೧೯೦	೨೧೩೧.೦
		೫೦.೦	೨೬.೯	೧.೭	೭.೮	೪.೬	೮.೯	೧೦೦.೦
	ಒಟ್ಟು	೨೧೦೨.೦	೧೩೨೧.೦	೧೫೪.೦	೨೪೨.೦	೨೧೭.೦	೩೧೮	೪೩೫೪.೦
		೪೮.೩	೩೦.೩	೩.೫	೫.೬	೫.೦	೭.೩	೧೦೦.೦
ನರಗುಂದ	ಪುರುಷರು	೪೩೬.೦	೨೭೩.೦	೪೨.೦	೨೫.೦	೭೦.೦	೫೮	೯೦೪.೦
		೪೮.೨	೩೦.೨	೪.೬	೨.೮	೭.೭	೬.೪	೧೦೦.೦
	ಸ್ತ್ರೀಯರು	೩೬೪.೦	೨೩೬.೦	೮.೦	೧೧೪.೦	೫೪.೦	೫೩	೮೨೯.೦
		೪೩.೯	೨೮.೫	೧.೦	೧೩.೮	೬.೫	೬.೪	೧೦೦.೦
	ಒಟ್ಟು	೮೦೦	೫೦೯	೫೦	೧೩೯	೧೨೪	೧೧೧	೧೭೩೩
		೪೬.೨	೨೯.೪	೨.೯	೮.೦	೭.೨	೬.೪	೧೦೦.೦
ಮುಂಡರಗಿ	ಪುರುಷರು	೨೫೮	೧೪೫	೧೦	೨	೯	೧೨	೪೩೬
		೫೯.೨	೩೩.೩	೨.೩	.೫	೨.೧	೨.೮	೧೦೦.೦
	ಸ್ತ್ರೀಯರು	೨೩೩.೦	೧೦೧.೦	೧.೦	೯.೦	೭.೦	೨೩.೦	೩೭೪.೦
		೬೨.೩	೨೭.೦	.೩	೨.೪	೧.೯	೬.೧	೧೦೦.೦
	ಒಟ್ಟು	೪೯೧.೦	೨೪೬.೦	೧೧.೦	೧೧.೦	೧೬.೦	೩೫.೦	೮೧೦.೦
		೬೦.೬	೩೦.೪	೧.೪	೧.೪	೨.೦	೪.೩	೧೦೦.೦
ಶಿರಹಟ್ಟಿ	ಪುರುಷರು	೩೬.೦	೪೫.೦	೨೦.೦	೫.೦	೨೯.೦	೩.೦	೧೩೮.೦
		೨೬.೧	೩೨.೬	೧೪.೫	೩.೬	೨೧.೦	೨.೨	೧೦೦.೦
	ಸ್ತ್ರೀಯರು	೫೧.೦	೩೬.೦	೩.೦	೨೩.೦	೯.೦	೧೩.೦	೧೩೫.೦
		೩೭.೮	೨೬.೭	೨.೨	೧೭.೦	೬.೭	೯.೬	೧೦೦.೦
	ಒಟ್ಟು	೮೭.೦	೮೧.೦	೨೩.೦	೨೮.೦	೩೮.೦	೧೬.೦	೨೭೩.೦
		೩೧.೯	೨೯.೭	೮.೪	೧೦.೩	೧೩.೯	೫.೯	೧೦೦.೦
ಜಿಲ್ಲೆ	ಪುರುಷರು	೨೭೦೦	೧೯೯೮	೩೦೮	೧೭೧	೪೫೧	೨೮೯	೫೯೧೭
		೪೫.೬	೩೩.೮	೫.೨	೨.೯	೭.೬	೪.೯	೧೦೦.೦
	ಸ್ತ್ರೀಯರು	೨೫೮೫.೦	೧೬೨೪.೦	೯೧.೦	೬೧೯.೦	೨೮೦.೦	೩೯೫.೦	೫೫೯೪.೦
		೪೬.೨	೨೯.೦	೧.೬	೧೧.೧	೫.೦	೭.೧	೧೦೦.೦
	ಒಟ್ಟು	೫೨೮೫	೩೬೨೨	೩೯೯	೭೯೦	೭೩೧	೬೮೪	೧೧೫೧೧.೦
		೪೫.೯	೩೧.೫	೩.೫	೬.೯	೬.೪	೫.೯	೧೦೦.೦

ಕೆಲಸವಿಲ್ಲದ ೭೯೦ ಜನರಲ್ಲಿ (೬.೯ ಪ್ರತಿಶತ) ೧೭೧ ಜನ ಪುರುಷರು (೨೧.೬ ಪ್ರತಿಶತ) ಹಾಗೂ ೬೧೯ ಜನ ಮಹಿಳೆಯರು (೭೮.೪ ಪ್ರತಿಶತ) ಇದ್ದಾರೆ. ಏನೂ ಕೆಲಸವಿಲ್ಲದ ಗುಂಪಿನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು ಇರುವುದನ್ನು ಗುರುತಿಸಬಹುದು. ಇತರ ಕೆಲಸಗಳಲ್ಲಿ ತೊಡಗಿರುವ ೭೩೧ ಜನರಲ್ಲಿ (೬.೪ ಪ್ರತಿಶತ) ೪೫೧ ಜನ ಪುರುಷರು (೬೧.೭ ಪ್ರತಿಶತ) ಹಾಗೂ ೨೮೦ ಜನ ಮಹಿಳೆಯರು (೩೮.೩ ಪ್ರತಿಶತ) ಇದ್ದಾರೆ. ಒಟ್ಟಾರೆ ಗದಗ ಜಿಲ್ಲೆಯಲ್ಲಿ ಛಲವಾದಿ ಸಮುದಾಯದ ವೃತ್ತಿಯಲ್ಲಿ ವಿದ್ಯಾರ್ಥಿಯರನ್ನು ಹೊರತು ಪಡಿಸಿದರೆ ಕೂಲಿ ಕೆಲಸ ಮಾಡಿ ಜೀವನ ಸಾಗಿಸುವ ಜನರ ಸಂಖ್ಯೆ ಅಧಿಕವಾಗಿರುವುದು ಕಂಡುಬರುತ್ತದೆ. ಮಹಿಳೆಯರಲ್ಲಿ ಕೂಡ ಇದೇ ಅಂಶವನ್ನು ಗುರುತಿಸಬಹುದು.

ತಾಲೂಕಾವಾರು ವಿಂಗಡನೆಯಲ್ಲಿಯೂ ಅದೇ ಚಿತ್ರವಿದ್ದು ಕೂಲಿಕಾರರ ಸಂಖ್ಯೆ ಹೆಚ್ಚು ಇರುವುದನ್ನು ಕಾಣಬಹುದು. ಗದಗ ತಾಲೂಕಿನಲ್ಲಿ ೪೩೪೧ ಜನರ ಪೈಕಿ ೧೮೦೫ ಕೂಲಿಕಾರರು (೪೧.೬೯ ಪ್ರತಿಶತ) ಇದ್ದಾರೆ. ಪುರುಷರು ೯೩೩ (೫೧.೬ ಪ್ರತಿಶತ) ಹಾಗೂ ೮೭೨ ಮಹಿಳೆಯರು (೪೮.೪ ಪ್ರತಿಶತ) ಇದ್ದಾರೆ.

ವಿದ್ಯಾರ್ಥಿಗಳಲ್ಲಿ ೧೪೬೫ (೩೩.೭ ಪ್ರತಿಶತ) ಜನರಿದ್ದು, ೭೮೮ ಪುರುಷರು (೫೩.೮ ಪ್ರತಿಶತ) ಹಾಗೂ ೬೭೭ ಮಹಿಳೆಯರು (೪೬.೨ ಪ್ರತಿಶತ) ಇದ್ದಾರೆ. ವೇತನಕ್ಕಾಗಿ ದುಡಿಯುವರಲ್ಲಿ ೧೬೧ ಜನರಿದ್ದು (೩.೭ ಪ್ರತಿಶತ) ೧೧೮ ಪುರುಷರು (೭೩.೩ ಪ್ರತಿಶತ) ಮತ್ತು ೪೩ ಮಹಿಳೆಯರು (೨೬.೭ ಪ್ರತಿಶತ) ಇರುವುದು ಕಂಡುಬಂದಿದೆ. ಗದಗ ಜಿಲ್ಲೆಯಂತೆ ಗದಗ ತಾಲೂಕಿನಲ್ಲಿಯೂ ವೇತನ ಪಡೆಯುವವರ ಸಂಖ್ಯೆ ಅತಿ ಕಡಿಮೆ ಇರುವುದು ಗಮನಿಸಬೇಕಾದ ಸಂಗತಿಯಾಗಿದೆ.

ಕೆಲಸವಿಲ್ಲದ ೩೭೦ ಜನರಲ್ಲಿ (೮.೫ ಪ್ರತಿಶತ) ೬೪ ಜನ ಪುರುಷರು (೧೭.೩ ಪ್ರತಿಶತ) ಮತ್ತು ೩೦೬ ಜನ ಮಹಿಳೆಯರು (೮೨.೭ ಪ್ರತಿಶತ) ಇದ್ದಾರೆ. ಇತರ ಕೆಲಸದಲ್ಲಿ ನಿರತರಾಗಿರುವ ೩೩೬ ಜನರಲ್ಲಿ (೭.೭ಪ್ರತಿಶತ) ೨೨೫ ಪುರುಷರು (೬೭.೦ ಪ್ರತಿಶತ) ಹಾಗೂ ೧೧೧ ಜನ ಮಹಿಳೆಯರು (೩೩.೦ ಪ್ರತಿಶತ) ಇರುವುದನ್ನು ಕಾಣಬಹುದು.

ಗದಗ ತಾಲೂಕಿನಂತೆ ರೋಣ, ನರಗುಂದ, ಮುಂಡರಗಿ, ಶಿರಹಟ್ಟಿ ತಾಲೂಕುಗಳಲ್ಲಿಯೂ ಕೂಲಿಕಾರ ಸಂಖ್ಯೆ ಹೆಚ್ಚಾಗಿದೆ. (ಕ್ರಮವಾಗಿ ೨೪೨೦, ೯೧೧, ೫೨೬, ೧೦೩ ಜನ ಕೂಲಿಕಾರರಿದ್ದಾರೆ.) ವಿದ್ಯಾರ್ಥಿಗಳ ಅಂಕಿಸಂಖ್ಯೆಯಲ್ಲಿ ರೋಣ ೧೩೨೧, ನರಗುಂದ ೫೦೯, ಮುಂಡರಗಿ ೨೪೬, ಶಿರಹಟ್ಟಿಯಲ್ಲಿ ೮೧ ಜನರಿರುವುದು ತಕ್ಕಮಟ್ಟಿನ ಸಮಾಧಾನಕರ ಸಂಗತಿಯಾಗಿದೆ.

ವೇತನ ಪಡೆಯುವವರ ಪೈಕಿ ರೋಣ ೧೫೪, ನರಗುಂದ ೫೦ ಜನರನ್ನು ಹೊಂದಿದ್ದರೆ, ಮುಂಡರಗಿ ಹಾಗೂ ಶಿರಹಟ್ಟಿಗಳಲ್ಲಿ ಕ್ರಮವಾಗಿ ಕೇವಲ ೧೧ ಜನ ಮತ್ತು ೨೩ ಜನ ಮಾತ್ರ ಇದ್ದಾರೆ.

ಕೆಲಸವಿಲ್ಲದ ಜನರಲ್ಲಿ ರೋಣ ೨೪೨ , ನರಗುಂದ ೧೩೯, ಶಿರಹಟ್ಟಿ ೨೮ ಜನರು ಇದ್ದರೆ ಮುಂಡರಗಿಯಲ್ಲಿ ಕೇವಲ ೧೧ ಜನ ಮಾತ್ರ ಇದ್ದಾರೆ. ಇದೇ ರೀತಿ ಇತರ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಜನರಲ್ಲಿ ರೋಣ ೨೧೭ ಜನ, ನರಗುಂದ ೧೨೪ ಜನ, ಶಿರಹಟ್ಟಿಯಲ್ಲಿ ೩೮ ಜನರಿದ್ದರೆ, ಮುಂಡರಗಿಯಲ್ಲಿ ಕೇವಲ ೧೧ ಜನರಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಛಲವಾದಿ ಸಮುದಾಯದ ವೃತ್ತಿ ಚಿತ್ರಣದಲ್ಲಿ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಸಾಮ್ಯತೆ ಕಂಡುಬರುತ್ತಿದೆ. ಲಿಂಗಕ್ಕನುಗುಣವಾಗಿಯೂ ಇದೇ ಹೋಲಿಕೆ ಗುರುತಿಸಬಹುದು. ಅಂದರೆ ಕೂಲಿಕಾರರ ವರ್ಗದಲ್ಲಿ ಮಹಿಳೆಯರು ಹೆಚ್ಚು, ವೇತನ ಪಡೆಯುವವರಲ್ಲಿ ಕಡಿಮೆ ಇದೆ. ಕೆಲಸವಿಲ್ಲದ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಇತರೆ ಕೆಲಸ ಮಾಡುವ ಜನರ ಗುಂಪಿನಲ್ಲಿ ಮಹಿಳೆಯರ ಸಂಖ್ಯೆ ತಕ್ಕಮಟ್ಟಿಗೆ ಸಮಾಧಾನಕರವಾಗಿದೆ.

ಕೃಷಿಕ ವೃತ್ತಿ :

ಜಿಲ್ಲೆಯಲ್ಲಿ ಭೂಹಿಡುವಳಿ ಕುರಿತು ಸಂಗ್ರಹಿಸಲಾದ ಮಾಹಿತಿಯನ್ನು ತಾಲೂಕಾವಾರು ವಿಂಗಡಿಸಿದಾಗ ಭೂಹಿಡುವಳಿ ಹೊಂದಿರುವ ೮೦೮ ಕುಟುಂಬಗಳ ಪೈಕಿ ರೋಣದಲ್ಲಿ ೩೧೨ ಕುಟುಂಬಗಳು ಮತ್ತು ಶಿರಹಟ್ಟಿಯಲ್ಲಿ ೩೧ ಕುಟುಂಬಗಳು ಭೂ ಹಿಡುವಳಿ ಹೊಂದಿರುವುದು ತಿಳಿದುಬರುತ್ತದೆ. ಗದಗ, ನರಗುಂದ ಮತ್ತು ಮುಂಡರಗಿ ತಾಲೂಕುಗಳಲ್ಲಿ ಕ್ರಮವಾಗಿ ೨೩೨,೧೮೯ ಮತ್ತು ೪೪ ಇದೆ. ರೋಣ ತಾಲೂಕಿನಲ್ಲಿ ಭೂಹಿಡುವಳಿ ಇದೆ ಎಂದು ಹೇಳಲಾದ ೩೧೨ ಕುಟುಂಬಗಳ ಪೈಕಿ ಕೇವಲ ೧ ಕುಟುಂಬ ಮಾತ್ರ ನೀರಾವರಿ ಭೂಹಿಡುವಳಿ ಹೊಂದಿದೆ. ಗದಗ ತಾಲೂಕಿನಲ್ಲಿ ೮ ಕುಟುಂಬಗಳಿಗೆ ಮತ್ತು ನರಗುಂದ, ಮುಂಡರಗಿ, ಶಿರಹಟ್ಟಿ ತಾಲೂಕುಗಳಲ್ಲಿ ಕ್ರಮವಾಗಿ ೧, ೨ ಮತ್ತು ೦ ಕುಟುಂಬಗಳಿಗೆ ನೀರಾವರಿ ಭೂಹಿಡುವಳಿ ಇದೆ. ಒಟ್ಟಿನಲ್ಲಿ ಜಿಲ್ಲೆಯಲ್ಲಿ ಛಲವಾದಿ ಸಮುದಾಯಕ್ಕೆ ಸೇರಿದ ಭೂ ಹಿಡುವಳಿ ಕುಟುಂಬಗಳಲ್ಲಿ ಕೇವಲ ೧೨ ಕುಟುಂಬಗಳು ಮಾತ್ರ ನೀರಾವರಿ ಭೂ ಹಿಡುವಳಿ ಹೊಂದಿರುವ ಅಂಶ ಗಮನಿಸಬಹುದು.

ಕೋಷ್ಟಕ ೫.೨: ತಾಲೂಕಾವಾರು ಸಾಗುವಳಿ ಭೂಮಿಯ ಶೇಕಡಾವಾರು ಹಂಚಿಕೆಯ ವಿವರ


ತಾಲೂಕು	ಸಾಗುವಳಿ ಭೂಮಿ		ಒಟ್ಟು
	ಇದೆ	ಇಲ್ಲ	
ಗದಗ	೨೩೨	೬೪೬	೮೭೮
	೨೬.೪	೭೩.೬	೧೦೦.೦
ರೋಣ	೩೧೨	೫೬೧	೮೭೩
	೩೫.೭	೬೪.೩	೧೦೦.೦
ನರಗುಂದ	೧೮೯	೧೭೭	೩೬೬
	೫೧.೬	೪೮.೪	೧೦೦.೦
ಮುಂಡರಗಿ	೪೪	೧೭೦	೨೧೪
	೨೦.೬	೭೯.೪	೧೦೦.೦
ಶಿರಹಟ್ಟಿ	೩೧	೨೫	೫೬
	೫೫.೪	೪೪.೬	೧೦೦.೦
ಜಿಲ್ಲೆ	೮೦೮	೧೫೭೯	೨೩೮೭
	೩೩.೯	೬೬.೧	೧೦೦.೦



ಕೋಷ್ಟಕ ೫..೩: ಒಣ ಬೇಸಾಯದ ಭೂ ಹಿಡುವಳಿಗನುಗುಣವಾಗಿ ಪ್ರತಿಶತ ಕುಟುಂಬಗಳ ತಾಲೂಕಾವಾರು ಹಂಚಿಕೆ

ತಾಲೂಕು	ಒಣ ಬೇಸಾಯದ ಭೂ ಹಿಡುವಳಿ				ಒಟ್ಟು
	ಎರಡು ಎಕರೆಗೂ ಕಡಿಮೆ	೨-೪ ಎಕರೆ	೫-೬ ಎಕರೆ	೭ ಎಕರೆ ಹಾಗೂ ಅದಕ್ಕಿಂತ ಹೆಚ್ಚು	
ಗದಗ	೮೩	೧೦೬	೨೪	೧೯	೨೩೨
	೩೫.೮	೪೫.೭	೧೦.೩	೮.೨	೧೦೦.೦
ರೋಣ	೧೧೦.೦	೧೬೬.೦	೨೧.೦	೧೫.೦	೩೧೨.೦
	೩೫.೩	೫೩.೨	೬.೭	೪.೮	೧೦೦.೦
ನರಗುಂದ	೪೯.೦	೧೦೭.೦	೨೨.೦	೧೧.೦	೧೮೯.೦
	೨೫.೯	೫೬.೬	೧೧.೬	೫.೮	೧೦೦.೦
ಮುಂಡರಗಿ	೨೩.೦	೧೭.೦	೪.೦	೦.೦	೪೪.೦
	೫೨.೩	೩೮.೬	೯.೧	೦.೦	೧೦೦.೦
ಶಿರಹಟ್ಟಿ	೧೩.೦	೧೫.೦	೧.೦	೨.೦	೩೧.೦
	೪೧.೯	೪೮.೪	೩.೨	೬.೫	೧೦೦.೦
ಜಿಲ್ಲೆ	೨೭೮.೦	೪೧೧.೦	೭೨.೦	೪೭.೦	೮೦೮.೦
	೩೪.೪	೫೦.೯	೮.೯	೫.೮	೧೦೦.೦

ಭೂಹಿಡುವಳಿ ಹೊಂದಿದ ೮೦೮ ಕುಟುಂಬಗಳ ಪೈಕಿ ಅತಿ ಹೆಚ್ಚಿನ ಕುಟುಂಬಗಳು ೨ ರಿಂದ ೪ ಎಕರೆ ಭೂಹಿಡುವಳಿ (ಪ್ರತಿಶತ ೫೦ ಕುಟುಂಬಗಳು) ಹೊಂದಿರುವುದನ್ನು ಕಾಣಬಹುದು.



ಕೋಷ್ಟಕ ೫.೩: ನೀರಾವರಿ ಭೂ ಹಿಡುವಳಿಗನುಗುಣವಾಗಿ ಪ್ರತಿಶತ ಕುಟುಂಬಗಳ ತಾಲೂಕಾವಾರು ಹಂಚಿಕೆ

ತಾಲೂಕು	ನೀರಾವರಿ ಭೂಮಿ		ಒಟ್ಟು
	ಇದೆ	ಇಲ್ಲ	
ಗದಗ	೮	೨೨೪	೨೩೨
	೩.೪	೯೬.೬	೧೦೦.೦
ರೋಣ	೧	೩೧೧	೩೧೨
	೦.೩	೯೯.೭	೧೦೦.೦
ನರಗುಂದ	೧	೧೮೮	೧೮೯
	೦.೫	೯೯.೫	೧೦೦.೦
ಮುಂಡರಗಿ	೨	೪೨	೪೪
	೪.೫	೯೫.೫	೧೦೦.೦
ಶಿರಹಟ್ಟಿ	೦.೦	೩೧	೩೧
	೦.೦	೧೦೦.೦	೧೦೦.೦
ಜಿಲ್ಲೆ	೧೨	೭೯೬	೮೦೮
	೧.೫	೯೮.೫	೧೦೦.೦

ಅಧ್ಯಯನ ಪ್ರದೇಶದಲ್ಲಿ ಛಲವಾದಿ ಸಮುದಾಯ ಕುಟುಂಬಗಳ ಸರಾಸರಿ ಭೂ ಹಿಡುವಳಿ ೩.೧ ಎಕರೆ ಇರುತ್ತದೆ. ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುವ, ಛಲವಾದಿ ಸಮುದಾಯಗಳಿಗೆ ಸೇರಿದ ನೀರಾವರಿ ಭೂಹಿಡುವಳಿ ಹೊಂದಿರುವ ೧೨ ಕುಂಟುಂಬಗಳು ಮಾತ್ರ ಕಂಡುಬರುತ್ತದೆ. ಹೆಚ್ಚಿನ ಸರಕಾರಿ ಸಾಲ ಸೌಲಭ್ಯಗಳು ದೊರೆಯುತ್ತಿದ್ದರೂ ಅವನ್ನು ಉಪಯೋಗಿಸಿಕೊಂಡಿರುವುದು ಅತಿ ಕಡಿಮೆ.


ಕೋಷ್ಟಕ ೫.೪ ರಲ್ಲಿ ಕುಟುಂಬಗಳು ವಾಸಿಸುತ್ತಿರುವ ಮನೆಗಳಲ್ಲಿ ಲಭ್ಯವಿರುವ ನಳ, ಸ್ನಾನಗೃಹ, ಶೌಚಾಲಯ, ವಿದ್ಯುತ್ ಸೌಕರ್ಯ ಹಾಗೂ ಪಡಿತರ ಚೀಟಿ ಮೊದಲಾದ ಮೂಲ ಸೌಕರ್ಯಗಳ ಬಗ್ಗೆ ಶೇಕಡಾವಾರು ವಿಂಗಡಣೆ ಕೊಡಲಾಗಿದೆ. ಪ್ರತಿಶತ ೮೮ ಕುಟುಂಬಗಳಿಗೆ ನೀರನ್ನು ಒದಗಿಸುವ ನಳದ ಸೌಕರ್ಯ, ೯೧ ರಷ್ಟು ಪ್ರತಿಶತ ಕುಟುಂಬಗಳಿಗೆ ಸ್ನಾನಗೃಹ ಹಾಗೂ ೯೫.೩ ಪ್ರತಿಶತ ಕುಟುಂಬಗಳಿಗೆ ಶೌಚಾಲಯ ಸೌಲಭ್ಯಗಳು ಇಲ್ಲದೇ ಇರುವುದು ಅಭಿವೃದ್ಧಿಯ ನಕಾರಾತ್ಮಕ ಅಂಶವನ್ನು ಸೂಚಿಸುತ್ತದೆ.

ಕೋಷ್ಟಕ ೫.೪ ಮೂಲ ಸೌಕರ್ಯಕ್ಕನುಗುಣವಾಗಿ ತಾಲೂಕಾವಾರು ಕುಟುಂಬಗಳ ಪ್ರತಿಶತ ಹಂಚಿಕೆ

ತಾಲೂಕು	ಕುಡಿಯುವ ನೀರಿನ ನಳ			ಸ್ನಾನದ ಕೋಣೆ			ಶೌಚಾಲಯ		
	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
ಗದಗ	೧೮೧	೬೯೭	೮೭೮	೧೦೯	೭೬೯	೮೭೮	೬೫	೮೧೩	೮೭೮
	೨೦.೬	೭೯.೪	೧೦೦	೧೨.೪	೮೭.೬	೧೦೦	೭.೪	೯೨.೬	೧೦೦
ರೋಣ	೭೧	೮೦೨	೮೭೩	೬೪	೮೦೯	೮೭೩	೧೭	೮೫೬	೮೭೩
	೮.೧	೯೧.೯	೧೦೦	೭.೩	೯೨.೭	೧೦೦	೧.೯	೯೮.೧	೧೦೦
ನರಗುಂದ	೨೬	೩೪೦	೩೬೬	೨೩	೩೪೩	೩೬೬	೧೨	೩೫೪	೩೬೬
	೭.೧	೯೨.೯	೧೦೦	೬.೩	೯೩.೭	೧೦೦	೩.೩	೯೬.೭	೧೦೦
ಮುಂಡರಗಿ	೬	೨೦೮	೨೧೪	೪	೨೧೦	೨೧೪	೫	೨೦೯	೨೧೪
	೨.೮	೯೭.೨	೧೦೦	೧.೯	೯೮.೧	೧೦೦	೨.೩	೯೭.೭	೧೦೦
ಶಿರಹಟ್ಟಿ	೧೫	೪೧	೫೬	೧೪	೪೨	೫೬	೧೩	೪೩	೫೬
	೨೬.೮	೭೩.೨	೧೦೦	೨೫	೭೫	೧೦೦	೨೩.೨	೭೬.೮	೧೦೦
ಜಿಲ್ಲೆ	೨೯೯	೨೦೮೮	೨೩೮೭	೨೧೪	೨೧೭೩	೨೩೮೭	೧೧೨	೨೨೭೫	೨೩೮೭
	೧೨.೫	೮೭.೫	೧೦೦	೯	೯೧	೧೦೦	೪.೭	೯೫.೩	೧೦೦

ವಿದ್ಯುತ್ ಸೌಕರ್ಯ ಹಾಗೂ ಪಡಿತರ ಚೀಟಿ ಸೌಲಭ್ಯಗಳು ಹೆಚ್ಚಿನ ಕುಟುಂಬಗಳಿಗೆ ಲಭ್ಯವಿರುವುದು ಒಂದು ಸಮಾಧಾನಕರವಾದ ಸಂಗತಿಯಾದರೂ ಇನ್ನುಳಿದ ಕುಟುಂಬಗಳು ಈ ಸೌಲಭ್ಯದಿಂದ ವಂಚಿತವಾಗಿವೆ. ಕ್ರಮವಾಗಿ ಪ್ರತಿಶತ ೮೦.೨ ಹಾಗೂ ೮೭.೫ ಪ್ರತಿಶತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಹಾಗೂ ಪಡಿತರಚೀಟಿ ಲಭ್ಯವಿದ್ದರೆ, ಪ್ರತಿಶತ ೧೯.೮ ಹಾಗೂ ೧೨.೫ ಪ್ರತಿಶತ ಕುಟುಂಬಗಳಿಗೆ ಈ ಸೌಲಭ್ಯಗಳು ಇರುವುದಿಲ್ಲ. ಈ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರಲು ಸರಕಾರಿ ಸೌಲಭ್ಯಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ಹಾಗೂ ವಾಸ್ತವ್ಯದಲ್ಲಿ ಕುಟುಂಬಗಳು ಇರದಿದ್ದರೂ ಸರಕಾರಿ ಸೌಲಭ್ಯಗಳನ್ನು ಪಡೆಯಲು ಕುಟುಂಬಗಳ ಬಗ್ಗೆ ತಪ್ಪು ಮಾಹಿತಿಯನ್ನು ಒದಗಿಸುವುದು ಕಾರಣಗಳಾಗಿರಬಹುದು. ವಸ್ತುಸ್ಥಿತಿ ಅರಿಯಲು ಈ ದಿಸೆಯಲ್ಲಿ ಅಧ್ಯಯನ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.


ಕುಡಿಯುವ ನೀರಿನ ನಲ್ಲಿ ಹೊಂದಿರುವ ಪ್ರತಿಶತ
ಕುಟುಂಬಗಳ ತಾಲೂಕಾವಾರು
ಗದಗ
ರೋಣ
ನರಗುಂದ
ಮುಂಡರಗಿ
ಶಿರಹಟ್ಟಿ
ಜಿಲ್ಲೆ


ಸ್ನಾನದ ಕೋಣೆ ಹೊಂದಿರುವ ಪ್ರತಿಶತ
ಕುಟುಂಬಗಳ ತಾಲೂಕಾವಾರು ಹಂಚಿಕೆ
ಗದಗ
ರೋಣ
ನರಗುಂದ
ಮುಂಡರಗಿ
ಶಿರಹಟ್ಟಿ
ಜಿಲ್ಲೆ


ವಿದ್ಯುತ್ ಸಂಪರ್ಕದ ಮಾಹಿತಿ ಪ್ರಕಾರ ಈ ಸೌಲಭ್ಯವನ್ನು ಹೊಂದಿರುವ ೧೯೧೫ ಕುಟುಂಬಗಳಲ್ಲಿ ೭೫೨ (೩೯.೩ ಪ್ರತಿಶತ) ಕುಟುಂಬಗಳಿಗೆ ಸ್ವಂತ ವಿದ್ಯುತ್ ಸೌಲಭ್ಯ ಸಂಪರ್ಕವಿದೆ. ಹಾಗೂ ಇನ್ನುಳಿದ ೧೧೬೩ (೬೦.೭ ಪ್ರತಿಶತ) ಕುಟುಂಬಗಳಿಗೆ ಸರಕಾರಿ ವಿದ್ಯುತ್ ಸಂಪರ್ಕ ಸೌಲಭ್ಯ ಇರುವುದಿಲ್ಲ.

ಕೋಷ್ಟಕ ೫.೫: ಮೂಲ ಸೌಕರ್ಯಕ್ಕನುಗುಣವಾಗಿ ತಾಲೂಕಾವಾರು ಕುಟುಂಬಗಳ ಪ್ರತಿಶತ ಹಂಚಿಕೆ

ತಾಲೂಕು	ವಿದ್ಯುಚ್ಛಕ್ತಿ			ಸ್ವಂತ ವಿದ್ಯುಚ್ಛಕ್ತಿ			ಸರಕಾರಿ ವಿದ್ಯುಚ್ಛಕ್ತಿ		
	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
ಗದಗ	೭೧೯	೧೫೯	೮೭೮	೪೧೩	೩೦೬	೭೧೯	೩೦೬	೪೧೩	೭೧೯
	೮೧.೯	೧೮.೧	೧೦೦	೫೭.೪	೪೨.೬	೧೦೦	೪೨.೬	೫೭.೪	೧೦೦
ರೋಣ	೬೭೮	೧೯೫	೮೭೩	೨೧೦	೪೬೮	೬೭೮	೪೬೮	೨೧೦	೬೭೮
	೭೭.೭	೨೨.೩	೧೦೦	೩೧	೬೯	೧೦೦	೬೯	೩೧	೧೦೦
ನರಗುಂದ	೩೦೩	೬೩	೩೬೬	೯೬	೨೦೭	೩೦೩	೨೦೭	೯೬	೩೦೩
	೮೨.೮	೧೭.೨	೧೦೦	೩೧.೭	೬೮.೩	೧೦೦	೬೮.೩	೩೧.೭	೧೦೦
ಮುಂಡರಗಿ	೧೬೮	೪೬	೨೧೪	೧೨	೧೫೬	೧೬೮	೧೫೬	೧೨	೧೬೮
	೭೮.೫	೨೧.೫	೧೦೦	೭.೧	೯೨.೯	೧೦೦	೯೨.೯	೭.೧	೧೦೦
ಶಿರಹಟ್ಟಿ	೪೭	೯	೫೬	೨೨	೨೫	೪೭	೨೬	೨೧	೪೭
	೮೩.೯	೧೬.೧	೧೦೦	೪೬.೮	೫೩.೨	೧೦೦	೫೫.೩	೪೪.೭	೧೦೦
ಜಿಲ್ಲೆ	೧೯೧೫	೪೭೨	೨೩೮೭	೭೫೩	೧೧೬೨	೧೯೧೫	೧೧೬೩	೭೫೨	೧೯೧೫
	೮೦.೨	೧೯.೮	೧೦೦	೩೯.೩	೬೦.೭	೧೦೦	೬೦.೭	೩೯.೩	೧೦೦

ವಿದ್ಯುತ್ ಸೌಕರ್ಯ ಪಡೆದ ಕುಟುಂಬಗಳ ವಿವರಗಳನ್ನು ತಾಲೂಕಾವಾರು ಗಮನಿಸಿದಾಗ ಗದಗ ತಾಲೂಕಿನಲ್ಲಿ ೮೭೮ ಕುಟುಂಬಗಳ ಪೈಕಿ ೭೧೯ ಕುಟುಂಬಗಳು ವಿದ್ಯುತ್ ಸೌಕರ್ಯ ಪಡೆದಿವೆ(೮೧.೯ ಪ್ರತಿಶತ). ಅದರಲ್ಲಿ ೫೭.೪ ಪ್ರತಿಶತ ಸ್ವಂತಶಕ್ತಿಯಿಂದ ಪಡೆದುಕೊಂಡಿದ್ದರೆ, ೪೨.೬ ಪ್ರತಿಶತ ಸರಕಾರಿ ವಿದ್ಯುತ್ ಸಂಪರ್ಕಗಳಾಗಿವೆ. ರೋಣ ತಾಲೂಕಿನಲ್ಲಿ ೮೭೩ ಕುಟುಂಬಗಳ ಪೈಕಿ ೬೭೮ ಕುಟುಂಬಗಳು (೭೭.೭ ಪ್ರತಿಶತ) ವಿದ್ಯುತ್ ಸಂಪರ್ಕ ಪಡೆದಿವೆ. ಅದರಲ್ಲಿ ೩೧ ಪ್ರತಿಶತ ಸ್ವಂತ ಮತ್ತು ೬೯ ಪ್ರತಿಶತ ಸರಕಾರಿ ವಿದ್ಯುತ್ ಸಂಪರ್ಕ ಇರುತ್ತದೆ. ಅದೇ ರೀತಿ ನರಗುಂದ ತಾಲೂಕಿನಲ್ಲಿ ೩೬೬ ಕುಟುಂಬಗಳಲ್ಲಿ ೩೦೩ ಕುಟುಂಬಗಳು (೮೨.೮ ಪ್ರತಿಶತ) ವಿದ್ಯುತ್ ಸಂಪರ್ಕ ಹೊಂದಿದ್ದಾರೆ. ಅವುಗಳಲ್ಲಿ ೩೧.೭ ಪ್ರತಿಶತ

ಸ್ವಂತ ಮತ್ತು ೬೮.೩ ಸರಕಾರಿ ವಿದ್ಯುತ್ ಸಂಪರ್ಕಗಳಾಗಿವೆ. ಮುಂಡರಗಿ ತಾಲೂಕಿನಲ್ಲಿ ೨೧೪ ಕುಟುಂಬಗಳು ಪೈಕಿ ೧೬೮ ಕುಟುಂಬಗಳು (೭೮.೫ ಪ್ರತಿಶತ) ವಿದ್ಯುತ್ ಸಂಪರ್ಕ ಪಡೆದಿವೆ. ಅದರಲ್ಲಿ ೭.೧ ಸ್ವಂತ ಹಾಗೂ ೯೨.೯ ಪ್ರತಿಶತ ಸರಕಾರೀ ವಿದ್ಯುತ್ ಸಂಪರ್ಕಗಳಾಗಿವೆ. ಇನ್ನು ಶಿರಹಟ್ಟಿ ತಾಲೂಕಿನಲ್ಲಿ ೫೬ ಕುಟುಂಬಗಳ ಪೈಕಿ ೪೭ (೮೩.೯ ಪ್ರತಿಶತ) ಕುಟುಂಬಗಳು ವಿದ್ಯುತ್ ಸಂಪರ್ಕ ಪಡೆದಿವೆ. ಅವುಗಳಲ್ಲಿ ೪೬.೮ ಪ್ರತಿಶತ ಸ್ವಂತ ಹಾಗೂ ೫೩.೨ ಪ್ರತಿಶತ ಸರಕಾರಿ ವಿದ್ಯುತ್ ಸಂಪರ್ಕಗಳಾಗಿವೆ.




ಕುಟುಂಬಗಳು ಹೊಂದಿರುವ ಇನ್ನಿತರ ಸಂಪರ್ಕ ಸಲಕರಣೆಗಳ ಶೇಕಡಾವಾರು ಹಂಚಿಕೆಯನ್ನು ಕೋಷ್ಟಕ-೫.೬ ರಲ್ಲಿ ಕೊಡಲಾಗಿದೆ. ಇಲ್ಲಿ ಮುಖ್ಯವಾಗಿ ಅಡುಗೆ ಅನಿಲ ಸಂಪರ್ಕ, ಸೈಕಲ್, ರೇಡಿಯೋ, ಟೇಪರೆಕಾರ್ಡ್‌ರ್, ಟೆಲಿವಿಜನ್ ಹಾಗೂ ದೂರವಾಣಿ ಸೌಲಭ್ಯಗಳ ಬಗೆಗೆ ವಿಶ್ಲೇಷಿಸಲಾಗಿದೆ.

ಈ ವಿಶ್ಲೇಷಣೆ ಪ್ರಕಾರ ದೂರದರ್ಶನದ ಸಂಪರ್ಕ ಅತಿ ಹೆಚ್ಚಿನ ಕುಟುಂಬಗಳಲ್ಲಿ ಅಂದರೆ ಸುಮಾರು ೩೮ ಪ್ರತಿಶತ ಕುಟುಂಬಗಳಲ್ಲಿ ಕಂಡುಬಂದಿದೆ. ದೂರವಾಣಿ ಸಂಪರ್ಕ ಹಾಗೂ ಸೈಕಲ್ ಇವನ್ನು ಹೊಂದಿರುವ ಕುಟುಂಬಗಳು ಅನುಕ್ರಮವಾಗಿ ೨೭.೬ ಹಾಗೂ ೧೮.೭ ಪ್ರತಿಶತ ಕುಟುಂಬಗಳಾಗಿವೆ. ಕೇವಲ ೬.೫ ಪ್ರತಿಶತ ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕ ಇದೆ. ಈ ಅಂಕಿಅಂಶಗಳು ಸಮುದಾಯ ಹೊಂದಿರುವ ಕೆಳಮಟ್ಟದ ಆರ್ಥಿಕ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಕೋಷ್ಟಕ ೫.೬: ಅಡುಗೆ ಅನಿಲ ಸೌಕರ್ಯದ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕಿನ ಹೆಸರು	ಅಡುಗೆ ಅನಿಲ		
	ಇದೆ	ಇಲ್ಲ	ಒಟ್ಟು
ಗದಗ	೯೬	೭೮೨	೮೭೮
	೧೦.೯	೮೯.೧	೧೦೦.೦
ರೋಣ	೨೪	೮೪೯	೮೭೩
	೨.೭	೯೭.೩	೧೦೦.೦
ನರಗುಂದ	೧೫	೩೫೧	೩೬೬
	೪.೧	೯೫.೯	೧೦೦.೦
ಮುಂಡರಗಿ	೫	೨೦೯	೨೧೪
	೨.೩	೯೭.೭	೧೦೦.೦
ಶಿರಹಟ್ಟಿ	೧೪	೪೨	೫೬
	೨೫.೦	೭೫.೦	೧೦೦.೦
ಜಿಲ್ಲೆ	೧೫೪	೨೨೩೩	೨೩೮೭
	೬.೫	೯೩.೫	೧೦೦.೦



ಕೋಷ್ಟಕ ೫.೭ ಸೈಕಲ್, ರೇಡಿಯೋ, ಟೇಪ್ ರೆಕಾರ್ಡರ್, ದೂರದರ್ಶನ ಹಾಗೂ ದೂರವಾಣಿ ಸೌಲಭ್ಯಗಳನ್ನು ಹೊಂದಿರುವ ಪ್ರತಿಶತ ಕುಟುಂಬಗಳ ತಾಲೂಕಾವಾರು ಹಂಚಿಕೆ


ತಾಲೂಕಿನ	ಸೈಕಲ್			ರೇಡಿಯೋ			ಟೇಪ್ ರೆಕಾರ್ಡರ್		
ಹೆಸರು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
ಗದಗ	೨೬೯	೬೦೯	೮೭೮	೮೦	೭೯೮	೮೭೮	೧೦೨	೭೭೬	೮೭೮
	೩೦.೬	೬೯	೧೦೦	೯.೧	೯೦.೯	೧೦೦	೧೧.೬	೮೮.೪	೧೦೦
ರೋಣ	೧೦೭	೭೬೬	೮೭೩	೨೬	೮೪೭	೮೭೩	೩೯	೮೩೪	೮೭೩
	೧೨.೩	೮೮	೧೦೦	೩	೯೭	೧೦೦	೪.೫	೯೫.೫	೧೦೦
ನರಗುಂದ	೪೭	೩೧೯	೩೬೬	೧೪	೩೫೨	೩೬೬	೧೧	೩೫೫	೩೬೬
	೧೨.೮	೮೭	೧೦೦	೩.೮	೯೬.೨	೧೦೦	೩	೯೭	೧೦೦
ಮುಂಡರಗಿ	೧೦	೨೦೪	೨೧೪	೩	೨೧೧	೨೧೪	೭	೨೦೭	೨೧೪
	೪.೭	೯೫	೧೦೦	೧.೪	೯೮.೬	೧೦೦	೩.೩	೯೬.೭	೧೦೦
ಶಿರಹಟ್ಟಿ	೧೩	೪೩	೫೬	೧೨	೪೪	೫೬	೧೨	೪೪	೫೬
	೨೩.೨	೭೭	೧೦೦	೨೧.೪	೭೮.೬	೧೦೦	೨೧.೪	೭೮.೬	೧೦೦
ಜಿಲ್ಲೆ	೪೪೬	೧೯೪೧	೨೩೮೭	೧೩೫	೨೨೫೨	೨೩೮೭	೧೭೧	೨೨೧೬	೨೩೮೭
	೧೮.೭	೮೧	೧೦೦	೫.೭	೯೪.೩	೧೦೦	೭.೨	೯೨.೮	೧೦೦

ತಾಲೂಕಿನ ಹೆಸರು	ದೂರದರ್ಶನ			ದೂರವಾಣಿ		
	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
ಗದಗ	೪೩೩	೪೪೫	೮೭೮	೨೮೫	೫೯೩	೮೭೮
	೪೯.೩	೫೦.೭	೧೦೦.೦	೩೨.೫	೬೭.೫	೧೦೦.೦
ರೋಣ	೨೫೭.೦	೬೧೬.೦	೮೭೩.೦	೨೨೬.೦	೬೪೭.೦	೮೭೩.೦
	೨೯.೪	೭೦.೬	೧೦೦.೦	೨೫.೯	೭೪.೧	೧೦೦.೦
ನರಗುಂದ	೧೪೪.೦	೨೨೨.೦	೩೬೬.೦	೧೦೯.೦	೨೫೭.೦	೩೬೬.೦
	೩೯.೩	೬೦.೭	೧೦೦.೦	೨೯.೮	೭೦.೨	೧೦೦.೦
ಮುಂಡರಗಿ	೩೫.೦	೧೭೯.೦	೨೧೪.೦	೧೬.೦	೧೯೮.೦	೨೧೪.೦
	೧೬.೪	೮೩.೬	೧೦೦.೦	೭.೫	೯೨.೫	೧೦೦.೦
ಶಿರಹಟ್ಟಿ	೩೨.೦	೨೪.೦	೫೬.೦	೨೪.೦	೩೨.೦	೫೬.೦
	೫೭.೧	೪೨.೯	೧೦೦.೦	೪೨.೯	೫೭.೧	೧೦೦.೦
ಜಿಲ್ಲೆ	೯೦೧.೦	೧೪೮೬.೦	೨೩೮೭.೦	೬೬೦.೦	೧೭೨೭.೦	೨೩೮೭.೦
	೩೭.೭	೬೨.೩	೧೦೦.೦	೨೭.೬	೭೨.೪	೧೦೦.೦


ಕೋಷ್ಟಕ ೫.೮ರಲ್ಲಿ ಕುಟುಂಬಗಳು ಹೊಂದಿರುವ ಪಶು ಸಂಪತ್ತನ್ನು ಶೇಕಡಾವಾರು ಹಂಚಿಕೆಯಲ್ಲಿ ತೋರಿಸಲಾಗಿದೆ. ಮೊದಲನೆಯದಾಗಿ ಕುಟುಂಬದಲ್ಲಿ ಪಶುಸಂಪತ್ತು ಇದೆಯೋ ಇಲ್ಲವೋ ಎಂದು ಕೇಳಲಾಗಿತ್ತು. ಈ ಪ್ರಶ್ನೆಗೆ ೨೩೮೭ ಕುಟುಂಬಗಳಲ್ಲಿ ಕೇವಲ ೨೨ ಪ್ರತಿಶತ (೫೨೫ ಕುಟುಂಬಗಳು) ಮಾತ್ರ ಇದೆ ಎಂದು ಉತ್ತರಿಸಿದ್ದಾರೆ.

ಕೋಷ್ಟಕ ೫.೮: ಪಶು ಸಂಪತ್ತಿನ ಸ್ಥಿತಿಗತಿಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕಿನ ಹೆಸರು	ಪಶು ಸಂಪತ್ತು		
	ಇದೆ	ಇಲ್ಲ	ಒಟ್ಟು
ಗದಗ	೧೪೮	೭೩೦	೮೭೮
	೧೬.೯	೮೩.೧	೧೦೦.೦
ರೋಣ	೨೨೬	೬೪೭	೮೭೩
	೨೫.೯	೭೪.೧	೧೦೦.೦
ನರಗುಂದ	೧೧೦	೨೫೬	೩೬೬
	೩೦.೧	೬೯.೯	೧೦೦.೦
ಮುಂಡರಗಿ	೩೩	೧೮೧	೨೧೪
	೧೫.೪	೮೪.೬	೧೦೦.೦
ಶಿರಹಟ್ಟಿ	೮	೪೮	೫೬
	೧೪.೩	೮೫.೭	೧೦೦.೦
ಜಿಲ್ಲೆ	೫೨೫	೧೮೬೨	೨೩೮೭
	೨೨.೦	೭೮.೦	೧೦೦.೦



ಈ ೫೨೫ ಕುಟುಂಬಗಳಿಗೆ ಮುಂದಿನ ಹಂತದ ಪ್ರಶ್ನೆಗಳಲ್ಲಿ ಎತ್ತು, ಆಕಳು, ಕರುಗಳು, ಎಮ್ಮೆಗಳು, ಕುರಿಗಳು, ಮೇಕೆಗಳು ಹಾಗೂ ಕೋಳಿಗಳು ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ. ಸುಮಾರು ೩೮ ಪ್ರತಿಶತ ಕುಟುಂಬಗಳಲ್ಲಿ ಕೋಳಿಗಳು, ೩೪.೫ ಕುಟುಂಬಗಳಲ್ಲಿ ಮೇಕೆಗಳು, ೩೨.೬ ಪ್ರತಿಶತ ಕುಟುಂಬಗಳಲ್ಲಿ ಎಮ್ಮೆಗಳು, ೩೧.೨ ಕುಟುಂಬಗಳಲ್ಲಿ ಎತ್ತುಗಳು, ಪ್ರತಿಶತ ೨೮.೨ ಕುಟುಂಬಗಳಲ್ಲಿ ಆಕಳು-ಕರುಗಳು ಹಾಗೂ ಕೇವಲ ೧೨.೪ ರಷ್ಟು ಪ್ರತಿಶತ ಕುಟುಂಬಗಳಲ್ಲಿ ಕುರಿಗಳು ಇವೆ.



ಅತಿ ಹೆಚ್ಚಿನ ಕುಟುಂಬಗಳಲ್ಲಿ ಪಶುಸಂಪತ್ತಿನ ಕೊರತೆ ಇರುವದು ಗಮನಿಸಬೇಕಾದ ಅಂಶವಾಗಿ ಕಂಡುಬರುತ್ತದೆ.

ಕೋಷ್ಟಕ ೫..೯ : ವಿವಿಧ ಪಶು ಸಂಪತ್ತಿನ ತಾಲೂಕಾವಾರು ಪ್ರತಿಶತ ಹಂಚಿಕೆ


ತಾಲೂಕಿನ ಹೆಸರು	ಎತ್ತು			ಎಮ್ಮೆ / ಕೋಣ		
	ಇವೆ	ಇಲ್ಲ	ಒಟ್ಟು	ಇವೆ	ಇಲ್ಲ	ಒಟ್ಟು
ಗದಗ	೪೯	೯೯	೧೪೮	೪೨	೧೦೬	೧೪೮
	೩೩.೧	೬೭	೧೦೦	೨೮.೪	೭೧.೬	೧೦೦.೦
ರೋಣ	೫೦	೧೭೬	೨೨೬	೬೮	೧೫೮	೨೨೬
	೨೨.೧	೭೮	೧೦೦	೩೦.೧	೬೯.೯	೧೦೦.೦
ನರಗುಂದ	೩೭	೭೩	೧೧೦	೫೪	೫೬	೧೧೦
	೩೩.೬	೬೬	೧೦೦	೪೯.೧	೫೦.೯	೧೦೦.೦
ಮುಂಡರಗಿ	೨೬	೭	೩೩	೬	೨೭	೩೩
	೭೮.೮	೨೧	೧೦೦	೧೮.೨	೮೧.೮	೧೦೦.೦
ಶಿರಹಟ್ಟಿ	೨	೬	೮	೧.೦	೭.೦	೮.೦
	೨೫	೭೫	೧೦೦	೧೨.೫	೮೭.೫	೧೦೦.೦
ಜಿಲ್ಲೆ	೧೬೪	೩೬೧	೫೨೫	೧೭೧.೦	೩೫೪.೦	೫೨೫.೦
	೩೧.೨	೬೯	೧೦೦	೩೨.೬	೬೭.೪	೧೦೦.೦

ಕೋಷ್ಟಕ ೫.೧೦: ವಿವಿಧ ಪಶು ಸಂಪತ್ತಿನ ತಾಲೂಕಾವಾರು ಕುಟುಂಬಗಳ ಪ್ರತಿಶತ ಹಂಚಿಕೆ

ತಾಲೂಕಿನ ಹೆಸರು	ಆಕಳು/ ಕರುಗಳು			ಮೇಕೆ		
	ಇವೆ	ಇಲ್ಲ	ಇವೆ	ಇವೆ	ಇಲ್ಲ	ಒಟ್ಟು
ಗದಗ	೫೪	೯೪	೧೪೮	೫೮	೯೦	೧೪೮
	೩೬.೫	೬೪	೧೦೦	೩೯.೨	೬೦.೮	೧೦೦
ರೋಣ	೪೨	೧೮೪	೨೨೬	೯೧	೧೩೫	೨೨೬
	೧೮.೬	೮೧	೧೦೦	೪೦.೩	೫೯.೭	೧೦೦
ನರಗುಂದ	೪೦	೭೦	೧೧೦	೧೯	೯೧	೧೧೦
	೩೬.೪	೬೪	೧೦೦	೧೭.೩	೮೨.೭	೧೦೦
ಮುಂಡರಗಿ	೧೦	೨೩	೩೩	೧೩	೨೦	೩೩
	೩೦.೩	೭೦	೧೦೦	೩೯.೪	೬೦.೬	೧೦೦
ಶಿರಹಟ್ಟಿ	೨	೬	೮	೦	೮	೮
	೨೫	೭೫	೧೦೦	೦	೧೦೦	೧೦೦
ಜಿಲ್ಲೆ	೧೪೮	೩೭೭	೫೨೫	೧೮೧	೩೪೪	೫೨೫
	೨೮.೨	೭೨	೧೦೦	೩೪.೫	೬೫.೫	೧೦೦

ಕೋಷ್ಟಕ ೫.೧೧: ವಿವಿಧ ಪಶು ಸಂಪತ್ತಿನ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕಿನ ಹೆಸರು	ಕುರಿ			ಕೋಳಿ		
	ಇವೆ	ಇಲ್ಲ	ಇವೆ	ಇವೆ	ಇಲ್ಲ	ಒಟ್ಟು
ಗದಗ	೩೦	೧೧೮	೧೪೮	೭೯	೬೯	೧೪೮
	೨೦.೩	೭೯.೭	೧೦೦	೫೩.೪	೪೬.೬	೧೦೦
ರೋಣ	೨೩	೨೦೩	೨೨೬	೮೮	೧೩೮	೨೨೬
	೧೦.೨	೮೯.೮	೧೦೦	೩೮.೯	೬೧.೧	೧೦೦
ನರಗುಂದ	೮	೧೦೨	೧೧೦	೨೦	೯೦	೧೧೦
	೭.೩	೯೨.೭	೧೦೦	೧೮.೨	೮೧.೮	೧೦೦
ಮುಂಡರಗಿ	೪	೨೯	೩೩	೭	೨೬	೩೩
	೧೨.೧	೮೭.೯	೧೦೦	೨೧.೨	೭೮.೮	೧೦೦
ಶಿರಹಟ್ಟಿ	೦	೮	೮	೪	೪	೮
	೦	೧೦೦	೧೦೦	೫೦	೫೦	೧೦೦
ಜಿಲ್ಲೆ	೬೫	೪೬೦	೫೨೫	೧೯೮	೩೨೭	೫೨೫
	೧೨.೪	೮೭.೬	೧೦೦	೩೭.೭	೬೨.೩	೧೦೦



ಕೋಷ್ಟಕ ೫.೧೨ರಲ್ಲಿ ಅಧ್ಯಯನ ಮಾಡಲಾದ ಛಲವಾದಿ ಸಮುದಾಯದಲ್ಲಿ ೧೫ ವರ್ಷಕ್ಕಿಂತ ಮೇಲ್ಪಟ್ಟವರನ್ನು ಗಮನದಲ್ಲಿಟ್ಟುಕೊಂಡು ಲಿಂಗಾನುಸಾರ ವೃತ್ತಿಯನ್ನು ವಿಂಗಡಿಸಿ ನೀಡಲಾಗಿದೆ. ಜಿಲ್ಲೆಯಲ್ಲಿ ೧೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ೮೬೧೭ ಜನರಿದ್ದು ಅವರಲ್ಲಿ ೫೧೭೪ ಕೂಲಿಕಾರರಿದ್ದಾರೆ(೬೦.೦ ಪ್ರತಿಶತ). ಇದರಲ್ಲಿ ೨೬೪೫ ಪುರುಷರು (೫೯.೫ ಪ್ರತಿಶತ) ಹಾಗೂ ೨೫೨೯ ಮಹಿಳೆಯರು (೬೦.೬ ಪ್ರತಿಶತ) ಇದ್ದಾರೆ. ವಿದ್ಯಾಭ್ಯಾಸ ಮಾಡುವರ ಸಂಖ್ಯೆ ಇಳಿಮುಖವಾಗಿದೆ. ವಿದ್ಯೆ ಕಲಿಯುತ್ತಿರುವ ೧೧೫೪ (೧೩.೪ ಪ್ರತಿಶತ) ವಿದ್ಯಾರ್ಥಿಗಳ ಪೈಕಿ ೭೧೭ (೧೬.೧ ಪ್ರತಿಶತ) ಪುರುಷರು ಹಾಗು ೪೩೭ (೧೦.೫ ಪ್ರತಿಶತ) ಮಹಿಳೆಯರು ಇದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ೧೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶಿಕ್ಷಣದ ಪ್ರಮಾಣ ಕಡಿಮೆಯಿದ್ದು, ಮಹಿಳೆಯರಲ್ಲಿ ವಿರಳವಾಗಿದೆ. ಈ ಸಮುದಾಯದ ಜನತೆ ಹೆಚ್ಚಿನ ಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿರುವ ಸಂಗತಿ ಗೋಚರಿಸುತ್ತದೆ. ಆರ್ಥಿಕವಾಗಿ ಅಸಮರ್ಥರಾದ ಜಿಲ್ಲೆಯ ಬಹುತೇಕ ಛಲವಾದಿ ಸಮುದಾಯದವರು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಅದರಲ್ಲೂ ಮಹಿಳೆಯರು ಪ್ರಾಥಮಿಕ ಮಟ್ಟದವರೆಗೆ ಮಾತ್ರ ಶಾಲೆಗೆ ಕೆಲವರು ಹೋಗುವರು. ಅಲ್ಲಿಗೇ ಇವರ ಶಿಕ್ಷಣ ಕುಂಠಿತಗೊಳ್ಳುವುದು.

ವೇತನ ಪಡೆಯುತ್ತಿರುವ ೩೯೬ ಜನರಲ್ಲಿ (೪.೬ ಪ್ರತಿಶತ) ೩೦೬ ಪುರುಷರು (೬.೯ ಪ್ರತಿಶತ) ಹಾಗೂ ೯೦ ಮಹಿಳೆಯರು (೨.೨ ಪ್ರತಿಶತ) ಇದ್ದಾರೆ. ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ಗಮನಾರ್ಹವಾದ ಸಂಗತಿ. ಕೆಲಸವಿಲ್ಲದ ೬೭೫ ಜನರಿದ್ದು (೭.೮ ಪ್ರತಿಶತ) ಅವರಲ್ಲಿ ೧೨೧ (೨.೭ ಪ್ರತಿಶತ) ಪುರುಷರು ಹಾಗೂ ೫೫೪ (೧೩.೩ ಪ್ರತಿಶತ) ಮಹಿಳೆಯರಿದ್ದಾರೆ. ಇತರೆ ಕೆಲಸಗಳಲ್ಲಿ ತೊಡಗಿದ ೭೧೬ ಜನರಲ್ಲಿ (೮.೩ ಪ್ರತಿಶತ) ೪೪೦ ಪುರುಷರು (೯.೯ ಪ್ರತಿಶತ) ಹಾಗೂ ೨೭೬ ಮಹಿಳೆಯರು (೬.೬ ಪ್ರತಿಶತ) ಇದ್ದಾರೆ.

ಕೋಷ್ಟಕ ೫.೧೨ರಲ್ಲಿ ಅಧ್ಯಯನ ಮಾಡಲಾದ ಛಲವಾದಿ ಸಮುದಾಯದಲ್ಲಿ ೧೫ ವರ್ಷಕ್ಕಿಂತ ಮೇಲ್ಪಟ್ಟವರನ್ನು ಗಮನದಲ್ಲಿಟ್ಟುಕೊಂಡು ಲಿಂಗಾನುಸಾರ ವೃತ್ತಿಯನ್ನು ವಿಂಗಡಿಸಿ ನೀಡಲಾಗಿದೆ. ಜಿಲ್ಲೆಯಲ್ಲಿ ೧೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ೮೬೧೭ ಜನರಿದ್ದು ಅವರಲ್ಲಿ ೫೧೭೪ ಕೂಲಿಕಾರರಿದ್ದಾರೆ(೬೦.೦ ಪ್ರತಿಶತ). ಇದರಲ್ಲಿ ೨೬೪೫ ಪುರುಷರು (೫೯.೫ ಪ್ರತಿಶತ) ಹಾಗೂ ೨೫೨೯ ಮಹಿಳೆಯರು (೬೦.೬ ಪ್ರತಿಶತ) ಇದ್ದಾರೆ. ವಿದ್ಯಾಭ್ಯಾಸ ಮಾಡುವರ ಸಂಖ್ಯೆ ಇಳಿಮುಖವಾಗಿದೆ. ವಿದ್ಯೆ ಕಲಿಯುತ್ತಿರುವ ೧೧೫೪ (೧೩.೪ ಪ್ರತಿಶತ) ವಿದ್ಯಾರ್ಥಿಗಳ ಪೈಕಿ ೭೧೭ (೧೬.೧ ಪ್ರತಿಶತ) ಪುರುಷರು ಹಾಗು ೪೩೭ (೧೦.೫ ಪ್ರತಿಶತ) ಮಹಿಳೆಯರು ಇದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ೧೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಶಿಕ್ಷಣದ ಪ್ರಮಾಣ ಕಡಿಮೆಯಿದ್ದು, ಮಹಿಳೆಯರಲ್ಲಿ ವಿರಳವಾಗಿದೆ. ಈ ಸಮುದಾಯದ ಜನತೆ ಹೆಚ್ಚಿನ ಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿರುವ ಸಂಗತಿ ಗೋಚರಿಸುತ್ತದೆ. ಆರ್ಥಿಕವಾಗಿ ಅಸಮರ್ಥರಾದ ಜಿಲ್ಲೆಯ ಬಹುತೇಕ ಛಲವಾದಿ ಸಮುದಾಯದವರು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಅದರಲ್ಲೂ ಮಹಿಳೆಯರು ಪ್ರಾಥಮಿಕ ಮಟ್ಟದವರೆಗೆ ಮಾತ್ರ ಶಾಲೆಗೆ ಕೆಲವರು ಹೋಗುವರು. ಅಲ್ಲಿಗೇ ಇವರ ಶಿಕ್ಷಣ ಕುಂಠಿತಗೊಳ್ಳುವುದು.

ವೇತನ ಪಡೆಯುತ್ತಿರುವ ೩೯೬ ಜನರಲ್ಲಿ (೪.೬ ಪ್ರತಿಶತ) ೩೦೬ ಪುರುಷರು (೬.೯ ಪ್ರತಿಶತ) ಹಾಗೂ ೯೦ ಮಹಿಳೆಯರು (೨.೨ ಪ್ರತಿಶತ) ಇದ್ದಾರೆ. ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ಗಮನಾರ್ಹವಾದ ಸಂಗತಿ. ಕೆಲಸವಿಲ್ಲದ ೬೭೫ ಜನರಿದ್ದು (೭.೮ ಪ್ರತಿಶತ) ಅವರಲ್ಲಿ ೧೨೧ (೨.೭ ಪ್ರತಿಶತ) ಪುರುಷರು ಹಾಗೂ ೫೫೪ (೧೩.೩ ಪ್ರತಿಶತ) ಮಹಿಳೆಯರಿದ್ದಾರೆ. ಇತರೆ ಕೆಲಸಗಳಲ್ಲಿ ತೊಡಗಿದ ೭೧೬ ಜನರಲ್ಲಿ (೮.೩ ಪ್ರತಿಶತ) ೪೪೦ ಪುರುಷರು (೯.೯ ಪ್ರತಿಶತ) ಹಾಗೂ ೨೭೬ ಮಹಿಳೆಯರು (೬.೬ ಪ್ರತಿಶತ) ಇದ್ದಾರೆ.

ಕೋಷ್ಟಕ ೫.೧೨ ಲಿಂಗಕ್ಕನುಗುಣವಾದ ಉದ್ಯೋಗಸ್ಥ ಪ್ರತಿಶತ ಜನಸಂಖ್ಯೆಯ ತಾಲೂಕಾವಾರು ಹಂಚಿಕೆ

ತಾಲೂಕು	ಲಿಂಗ	ಉದ್ಯೋಗ						ಒಟ್ಟು
		ಕೂಲಿ	ವಿದ್ಯಾರ್ಥಿ	ವೇತನ ದಾರರು	ಕೆಲಸವಿಲ್ಲ ದವರು	ಇತರೆ	ಗೊತ್ತಿಲ್ಲ	
ಗದಗ	ಪುರುಷರು	೯೧೪ ೫೪.೭	೩೦೬ ೧೮.೩	೧೧೭ ೭.೦	೫೧ ೩.೧	೨೧೬ ೧೨.೯	೬೮ ೪.೧	೧೬೭೨ ೧೦೦.೦
	ಸ್ತ್ರೀಯರು	೮೫೫.೦ ೫೩.೮	೨೦೯.೦ ೧೩.೧	೪೨.೦ ೨.೬	೨೯೧.೦ ೧೮.೩	೧೦೮.೦ ೬.೮	೮೫.೦ ೫.೩	೧೫೯೦.೦ ೧೦೦.೦
	ಒಟ್ಟು	೧೭೬೯.೦ ೫೪.೨	೫೧೫.೦ ೧೫.೮	೧೫೯.೦ ೪.೯	೩೪೨.೦ ೧೦.೫	೩೨೪.೦ ೯.೯	೧೫೩.೦ ೪.೭	೩೨೬೨.೦ ೧೦೦.೦
ರೋಣ	ಪುರುಷರು	೧೦೧೧.೦ ೬೧.೬	೨೬೨.೦ ೧೬.೦	೧೧೭.೦ ೭.೧	೪೬.೦ ೨.೮	೧೧೭.೦ ೭.೧	೮೯.೦ ೫.೪	೧೬೪೨.೦ ೧೦೦.೦
	ಸ್ತ್ರೀಯರು	೧೦೩೫.೦ ೬೬.೦	೧೪೨.೦ ೯.೧	೩೬.೦ ೨.೩	೧೨೪.೦ ೭.೯	೯೮.೦ ೬.೩	೧೩೩.೦ ೮.೫	೧೫೬೮.೦ ೧೦೦.೦
	ಒಟ್ಟು	೨೦೪೬.೦ ೬೩.೭	೪೦೪.೦ ೧೨.೬	೧೫೩.೦ ೪.೮	೧೭೦.೦ ೫.೩	೨೧೫.೦ ೬.೭	೨೨೨.೦ ೬.೯	೩೨೧೦.೦ ೧೦೦.೦
ನರಗುಂದ	ಪುರುಷರು	೪೨೭.೦ ೬೨.೦	೮೮.೦ ೧೨.೮	೪೨.೦ ೬.೧	೧೭.೦ ೨.೫	೬೯.೦ ೧೦.೦	೪೬.೦ ೬.೭	೬೮೯.೦ ೧೦೦.೦
	ಸ್ತ್ರೀಯರು	೩೫೬.೦ ೫೭.೬	೫೨.೦ ೮.೪	೮.೦ ೧.೩	೧೦೮.೦ ೧೭.೫	೫೪.೦ ೮.೭	೪೦.೦ ೬.೫	೬೧೮.೦ ೧೦೦.೦
	ಒಟ್ಟು	೭೮೩.೦ ೫೯.೯	೧೪೦.೦ ೧೦.೭	೫೦.೦ ೩.೮	೧೨೫.೦ ೯.೬	೧೨೩.೦ ೯.೪	೮೬.೦ ೬.೬	೧೩೦೭.೦ ೧೦೦.೦
ಮುಂಡರಗಿ	ಪುರುಷರು	೨೫೮.೦ ೭೬.೧	೫೨.೦ ೧೫.೩	೧೦.೦ ೨.೯	೨.೦ .೬	೯.೦ ೨.೭	೮.೦ ೨.೪	೩೩೯.೦ ೧೦೦.೦
	ಸ್ತ್ರೀಯರು	೨೩೨ ೭೯.೭	೨೩ ೭೯	೧ .೩	೯ ೩.೧	೭ ೨.೪	೧೯ ೬.೫	೨೯೧ ೧೦೦.೦
	ಒಟ್ಟು	೪೯೦.೦ ೭೭.೮	೭೫.೦ ೧೧.೯	೧೧.೦ ೧.೭	೧೧.೦ ೧.೭	೧೬.೦ ೨.೫	೨೭.೦ ೪.೩	೬೩೦.೦ ೧೦೦.೦
ಶಿರಹಟ್ಟಿ	ಪುರುಷರು	೩೫.೦ ೩೫.೦	೯.೦ ೯.೦	೨೦.೦ ೨೦.೦	೫.೦ ೫.೦	೨೯.೦ ೨೯.೦	೨.೦ ೨.೦	೧೦೦.೦ ೧೦೦.೦
	ಸ್ತ್ರೀಯರು	೫೧.೦ ೪೭.೨	೧೧.೦ ೧೦.೨	೩.೦ ೨.೮	೨೨.೦ ೨೦.೪	೯.೦ ೮.೩	೧೨.೦ ೧೧.೧	೧೦೮.೦ ೧೦೦.೦
	ಒಟ್ಟು	೮೬.೦ ೪೧.೩	೨೦.೦ ೯.೬	೨೩.೦ ೧೧.೧	೨೭.೦ ೧೩.೦	೩೮.೦ ೧೮.೩	೧೪.೦ ೬.೭	೨೦೮.೦ ೧೦೦.೦
ಜಿಲ್ಲೆ	ಪುರುಷರು	೨೬೪೫ ೫೯.೫	೭೧೭ ೧೬.೧	೩೦೬ ೬.೯	೧೨೧ ೨.೭	೪೪೦ ೯.೯	೨೧೩ ೪.೮	೪೪೪೨ ೧೦೦.೦
	ಸ್ತ್ರೀಯರು	೨೫೨೯.೦ ೬೦.೬	೪೩೭.೦ ೧೦.೫	೯೦.೦ ೨.೨	೫೫೪.೦ ೧೩.೩	೨೭೬.೦ ೬.೬	೨೮೯.೦ ೬.೯	೪೧೭೫.೦ ೧೦೦.೦
	ಒಟ್ಟು	೫೧೭೪ ೬೦.೦	೧೧೫೪ ೧೩.೪	೩೯೬ ೪.೬	೬೭೫ ೭.೮	೭೧೬ ೮.೩	೫೦೨ ೫.೮	೮೬೧೭.೦ ೧೦೦.೦

೧೫ ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ನಂತರ ಮುಂದಿನ ಶಿಕ್ಷಣಕ್ಕೆ ಆದ್ಯತೆ ಕೊಡದೆ ದುಡಿಮೆಯತ್ತ ಒಲವು ತೋರಿರುವ ಸಂಗತಿ ಕಂಡುಬರುತ್ತಿದೆ. ಸಮಗ್ರ ಜಿಲ್ಲೆಯ ಚಿತ್ರಣವೇ ತಾಲೂಕುಗಳಲ್ಲಿಯೂ ಕಂಡುಬರುತ್ತದೆ. ಗದಗ, ರೋಣ, ನರಗುಂದ, ಮುಂಡರಗಿ ಹಾಗೂ ಶಿರಹಟ್ಟಿ ತಾಲೂಕುಗಳಲ್ಲಿ ಕೂಲಿಕಾರ ವರ್ಗದ ಜನತೆ ಕ್ರಮವಾಗಿ ೫೪.೨, ೬೩.೭, ೫೯.೯ ರೋಣ ೧೨.೬ ಇದ್ದರೆ, ನರಗುಂದ ೧೦.೭ ಮುಂಡರಗಿ ೧೦.೦ ಹಾಗೂ ಶಿರಹಟ್ಟಿ ತಾಲೂಕಿನಲ್ಲಿ ೧೦.೦ ಪ್ರತಿಶತ ವಿದ್ಯಾರ್ಥಿಗಳಿರುವರು.

ವೇತನ ಪಡೆಯುವರಲ್ಲಿ ಗದಗ ೪.೯ ರೋಣ ೪.೮, ನರಗುಂದ ೩.೮, ಮುಂಡರಗಿ ೧ಕ್ಕಿಂತ ಕಡಿಮೆ ಹಾಗೂ ಶಿರಹಟ್ಟಿ ತಾಲೂಕಿನಲ್ಲಿ ೧೦ ಪ್ರತಿಶತ ಜನರಿದ್ದಾರೆ.

ಕೆಲಸವಿಲ್ಲದ ಜನರ ಪೈಕಿ ಗದಗ ೧೦.೫, ರೋಣ ೫.೩, ನರಗುಂದ ೯.೬, ಮುಂಡರಗಿ ೧ಕ್ಕಿಂತ ಕಡಿಮೆ ಹಾಗೂ ಶಿರಹಟ್ಟಿ ೧೦ ಪ್ರತಿಶತ ಜನರಿದ್ದಾರೆ. ಜೊತೆಗೆ ಇತರೆ ಕೆಲಸಗಳಲ್ಲಿ ತೊಡಗಿದವರಲ್ಲಿ ಗದಗ ೯.೯, ರೋಣ ೬.೭, ನರಗುಂದ ೯.೪, ಮುಂಡರಗಿ ೧ಕ್ಕಿಂತ ಕಡಿಮೆ ಇದ್ದಾರೆ. ಶಿರಹಟ್ಟಿಯಲ್ಲಿ ೨೦ ಪ್ರತಿಶತ ಜನ ಇತರ ಕೆಲಸಗಳಲ್ಲಿ ನಿರತರಾಗಿದ್ದಾರೆ.


ಕೋಷ್ಟಕ ೫.೧೩ ಹಾಗೂ ೫.೧೪ರಲ್ಲಿ ಅಧ್ಯಯನ ಮಾಡಲಾದ ಕುಟುಂಬಗಳಲ್ಲಿ ಅರ್ಹ ಸದಸ್ಯರಿಂದ (ವಿವಾಹಿತರು) ಕುಟುಂಬ ಯೋಜನೆಯ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು.

ಕೋಷ್ಟಕ ೫.೧೩: ಸದ್ಯವಿವಾಹಿತ ಜನಸಂಖ್ಯೆಯ ಕುಟುಂಬಯೋಜನಾ ಪದ್ಧತಿಯ ಉಪಯೋಗದ ತಾಲೂಕಾವಾರು ಪ್ರತಿಶತ ಹಂಚಿಕೆ


ತಾಲೂಕು	ಲಿಂಗ	ಕುಟುಂಬ ಯೋಜನೆಯ ಉಪಯೋಗ		ಒಟ್ಟು
		ಉಪಯೋಗಿಸುವರು	ಉಪಯೋಗಿಸುವುದಿಲ್ಲ	
ಗದಗ	ಪುರುಷರು	೫೪	೯೦೧	೯೫೫
		೫.೭	೯೪.೩	೧೦೦.೦
	ಸ್ತ್ರೀಯರು	೫೯೬	೫೩೭	೧೧೩೩
		೫೨.೬	೪೭.೪	೧೦೦.೦
	ಒಟ್ಟು	೬೫೦	೧೪೩೮	೨೦೮೮
		೩೧.೧	೬೮.೯	೧೦೦.೦
ರೋಣ	ಪುರುಷರು	೧೩೬	೮೩೩	೯೬೯
		೧೪.೦	೮೬.೦	೧೦೦.೦
	ಸ್ತ್ರೀಯರು	೪೯೪	೬೯೮	೧೧೯೨
		೪೧.೪	೫೮.೬	೧೦೦.೦
	ಒಟ್ಟು	೬೩೦	೧೫೩೧	೨೧೬೧
		೨೯.೨	೭೦.೮	೧೦೦.೦
ನರಗುಂದ	ಪುರುಷರು	೨೮	೪೦೫	೪೩೩
		೬.೫	೯೩.೫	೧೦೦.೦
	ಸ್ತ್ರೀಯರು	೧೫೩	೩೦೫	೪೫೮
		೩೩.೪	೬೬.೬	೧೦೦.೦
	ಒಟ್ಟು	೧೮೧	೭೧೦	೮೯೧
		೨೦.೩	೭೯.೭	೧೦೦.೦
ಮುಂಡರಗಿ	ಪುರುಷರು	೨	೨೦೪	೨೦೬
		೧.೦	೯೯.೦	೧೦೦.೦
	ಸ್ತ್ರೀಯರು	೨೨.೦	೨೦೫.೦	೨೨೭.೦
		೯.೭	೯೦.೩	೧೦೦.೦
	ಒಟ್ಟು	೨೪	೪೦೯	೪೩೩
		೫.೫	೯೪.೫	೧೦೦.೦

ತಾಲೂಕು	ಲಿಂಗ	ಕುಟುಂಬ ಯೋಜನೆಯ ಉಪಯೋಗ		ಒಟ್ಟು
		ಉಪಯೋಗಿಸುವರು	ಉಪಯೋಗಿಸುವುದಿಲ್ಲ	
ಶಿರಹಟ್ಟಿ	ಪುರುಷರು	೨ ೩.೧	೬೩ ೯೬.೯	೬೫ ೧೦೦.೦
	ಸ್ತ್ರೀಯರು	೩೯ ೪೬.೪	೪೫ ೫೩.೬	೮೪ ೧೦೦.೦
	ಒಟ್ಟು	೪೧ ೨೭.೫	೧೦೮ ೭೨.೫	೧೪೯ ೧೦೦.೦
ಜಿಲ್ಲೆ	ಪುರುಷರು	೨೨೨ ೮.೪	೨೪೦೬ ೯೧.೬	೨೬೨೮ ೧೦೦.೦
	ಸ್ತ್ರೀಯರು	೧೩೦೪ ೪೨.೧	೧೭೯೦ ೫೭.೯	೩೦೯೪ ೧೦೦.೦
	ಒಟ್ಟು	೧೫೨೬ ೨೬.೭	೪೧೯೬ ೭೩.೩	೫೭೨೨ ೧೦೦.೦

ಒಟ್ಟಾರೆ ಜಿಲ್ಲೆಯಲ್ಲಿ ಕುಟುಂಬ ಯೋಜನೆ ಅನುಸರಿಸುತ್ತಿರುವವರ ಸಂಖ್ಯೆ ಅತಿ ಕಡಿಮೆ ಇರುವುದು ಕಂಡು ಬರುತ್ತದೆ. ೮೦೧೭ ಜನರಲ್ಲಿ ೧೬೪೭ ಜನ ಮಾತ್ರ (೨೦.೫೪ ಪ್ರತಿಶತ) (೬.೦೨ ಪ್ರತಿಶತ ಪುರುಷರು ಮತ್ತು ೩೫.೮೯ ಪ್ರತಿಶತ ಮಹಿಳೆಯರು) ಕುಟುಂಬ ಯೋಜನೆ ವಿಧಾನ ಅನುಸರಿಸುತ್ತಿದ್ದಾರೆ. ಜನಸಂಖ್ಯಾ ನಿಯಂತ್ರಣ ಹಾಗೂ ಕುಟುಂಬದ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಕುಟುಂಬ ಯೋಜನಾ ವಿಧಾನಗಳ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿಸಿಕೊಡುವ ಅಗತ್ಯವಿದೆ. ರೋಣ ತಾಲೂಕಿನಲ್ಲಿ ಒಟ್ಟು ೨೩.೧೦ ಪ್ರತಿಶತ ಜನರು ಕುಟುಂಬ ಯೋಜನೆಯನ್ನು ಅನುಸರಿಸುತ್ತಿದ್ದಾರೆ. ಅವರಲ್ಲಿ ೨೨.೩ ಪ್ರತಿಶತ ಪುರುಷರು, ೭೭.೭ ಪ್ರತಿಶತ ಮಹಿಳೆಯರಿದ್ದಾರೆ. ಅರ್ಹ ವ್ಯಕ್ತಿಗಳ ಪೈಕಿ ಕೇವಲ ೪.೪೮ ಪ್ರತಿಶತ ಜನರು ಮಾತ್ರ ಅವರಲ್ಲಿ ೭.೪ ಪ್ರತಿಶತ ಪುರುಷರು ಹಾಗೂ ೯೨.೬ ಪ್ರತಿಶತ ಮಹಿಳೆಯರು ಕುಟುಂಬ ಯೋಜನಾ ವಿಧಾನ ಅನುಸರಿಸುತ್ತಿದ್ದಾರೆ. ಇನ್ನುಳಿದ ತಾಲೂಕುಗಳಾದ ಗದಗನಲ್ಲಿ ೨೨.೯೯ ಪ್ರತಿಶತ ಜನರು ಈ ವಿಧಾನ ಅನುಸರಿಸುತ್ತಿದ್ದು ಅವರಲ್ಲಿ ೮.೮ ಪ್ರತಿಶತ ಪುರುಷರು ಹಾಗೂ ೯೧.೨ ಪ್ರತಿಶತ ಮಹಿಳೆಯರು ಇದ್ದಾರೆ. ನರಗುಂದ ತಾಲೂಕಿನಲ್ಲಿ ೧೫.೮೧ ಪ್ರತಿಶತ ಜನರು ಕುಟುಂಬ ಯೋಜನೆಯನ್ನು ಅನುಸರಿಸುತ್ತಿದ್ದು, ಅವರಲ್ಲಿ ೧೪.೬ ಪ್ರತಿಶತ ಪುರುಷರು ಹಾಗೂ ೮೫.೪ ಪ್ರತಿಶತ ಮಹಿಳೆಯರು ಇದ್ದಾರೆ. ಶಿರಹಟ್ಟಿ ತಾಲೂಕಿನಲ್ಲಿ ೨೨.೨೭ ಪ್ರತಿಶತ ಜನ ಈ ವಿಧಾನವನ್ನು ಸ್ವೀಕರಿಸಿದ್ದು ಅವರಲ್ಲಿ ೭.೦ ಪ್ರತಿಶತ ಪುರುಷರು ಹಾಗೂ ೯೩.೨ ಪ್ರತಿಶತ ಮಹಿಳೆಯರಿದ್ದಾರೆ.



ಕುಟುಂಬ ಯೋಜನಾ ವಿಧಾನಗಳನ್ನು ಅನುಸರಿಸುತ್ತಿರುವ ಪ್ರಮಾಣದಲ್ಲಿ ಮಹಿಳೆಯರು ಗಮನಾರ್ಹವಾಗಿ ಹೆಚ್ಚು ಇದ್ದಾರೆ. ಪುರುಷರು ಈ ದಿಶೆಯಲ್ಲಿ ಹಿಂದಿರುವ ಅಂಶ ಕಂಡು ಬರುತ್ತದೆ.



ಕೋಷ್ಟಕ ೫.೧೪ : ವಿವಾಹಿತ ಜನಸಂಖ್ಯೆಯ ಕುಟುಂಬಯೋಜನಾ ಪದ್ಧತಿಯ ಉಪಯೋಗದ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಲಿಂಗ	ಕುಟುಂಬ ಯೋಜನೆಯ ಉಪಯೋಗ		ಒಟ್ಟು
		ಉಪಯೋಗಿಸುತ್ತಿರುವರು	ಉಪಯೋಗಿಸುತ್ತಿರುವರು	
ಗದಗ	ಪುರುಷರು	೫೬	೯೮೯	೧೦೪೫
		೫.೪	೯೪.೬	೧೦೦.೦
	ಸ್ತ್ರೀಯರು	೬೨೭	೬೬೫	೧೨೯೨
		೪೮.೫	೫೧.೫	೧೦೦.೦
	ಒಟ್ಟು	೬೮೩	೧೬೫೪	೨೩೩೭
		೨೯.೨	೭೦.೮	೧೦೦.೦
ರೋಣ	ಪುರುಷರು	೧೪೨.೦	೯೫೫.೦	೧೦೯೭.೦
		೧೨.೯	೮೭.೧	೧೦೦.೦
	ಸ್ತ್ರೀಯರು	೫೨೫	೮೪೨	೧೩೬೭
		೩೮.೪	೬೧.೬	೧೦೦.೦
	ಒಟ್ಟು	೬೬೭	೧೭೯೭	೨೪೬೪
		೨೭.೧	೭೨.೯	೧೦೦.೦
ನರಗುಂದ	ಪುರುಷರು	೨	೨೨೪	೨೨೬
		.೯	೯೯.೧	೧೦೦.೦
	ಸ್ತ್ರೀಯರು	೨೫	೨೩೦	೨೫೫
		೯.೮	೯೦.೨	೧೦೦.೦
	ಒಟ್ಟು	೨೭	೪೫೪	೪೮೧
		೫.೬	೯೪.೪	೧೦೦.೦

ತಾಲೂಕು	ಲಿಂಗ	ಕುಟುಂಬ ಯೋಜನೆಯ ಉಪಯೋಗ		ಒಟ್ಟು
		ಉಪಯೋಗಿ ಸುತ್ತಿರುವರು	ಉಪಯೋಗಿ ಸುತ್ತಿರುವರು	
ಮುಂಡರಗಿ	ಪುರುಷರು	೨೮.೦	೪೩೪.೦	೪೬೨.೦
		೬.೧	೯೩.೯	೧೦೦.೦
	ಸ್ತ್ರೀಯರು	೧೬೦	೩೫೮	೫೧೮
		೩೦.೯	೬೯.೧	೧೦೦.೦
	ಒಟ್ಟು	೧೮೮	೭೯೨	೯೮೦
		೧೯.೨	೮೦.೮	೧೦೦.೦
ಶಿರಹಟ್ಟಿ	ಪುರುಷರು	೨	೬೪	೬೬
		೩.೦	೯೭.೦	೧೦೦.೦
	ಸ್ತ್ರೀಯರು	೪೦	೪೮	೮೮
		೪೫.೫	೫೪.೫	೧೦೦.೦
	ಒಟ್ಟು	೪೨	೧೧೨	೧೫೪
		೨೭.೩	೭೨.೭	೧೦೦.೦
ಜಿಲ್ಲೆ	ಪುರುಷರು	೨೩೦	೨೬೬೬	೨೮೯೬
		೭.೯	೯೨.೧	೧೦೦.೦
	ಸ್ತ್ರೀಯರು	೧೩೭೭	೨೧೪೩	೩೫೨೦
		೩೯.೧	೬೦.೯	೧೦೦.೦
	ಒಟ್ಟು	೧೬೦೭	೪೮೦೯	೬೪೧೬
		೨೫.೦	೭೫.೦	೧೦೦.೦

ಕೋಷ್ಟಕ ೫.೧೫: ಸಮೀಕ್ಷೆಕ್ಕೊಳಪಟ್ಟ ಛಲವಾದಿ ಸಮುದಾಯದಲ್ಲಿ ವಾಸಿಸುತ್ತಿರುವ ವಿಧವೆಯರು ವಿಧವಾ ಕಾರ್ಡ ಹೊಂದಿರುವ ಬಗ್ಗೆ ಸಮೀಕ್ಷಿಸಿದಾಗ ಕಂಡು ಬಂದ ಅಂಶಗಳು ಈ ರೀತಿ ಇವೆ.

ಕೋಷ್ಟಕ ೫.೧೫: ತಾಲೂಕಾವಾರು ವಿಧವೆಯರ ಪ್ರತಿಶತ ಹಂಚಿಕೆ

ತಾಲೂಕು	ವಿಧವೆಯರ ಗುರುತಿನ ಚೀಟಿ		ಒಟ್ಟು
	ಇದೆ	ಇಲ್ಲ	
ಗದಗ	೨೨	೭	೨೯
	೭೫.೯	೨೪.೧	೧೦೦.೦
ರೋಣ	೧೪	೮	೨೨
	೬೩.೬	೩೬.೪	೧೦೦.೦
ನರಗುಂದ	೧	೨	೩
	೩೩.೩	೬೬.೭	೧೦೦.೦
ಮುಂಡರಗಿ	೦	೧	೧
	೦	೧೦೦.೦	೧೦೦.೦
ಶಿರಹಟ್ಟಿ	೦	೦	೦
	೦.೦	೦.೦	೦.೦
ಜಿಲ್ಲೆ	೩೭	೧೮	೫೫
	೬೭೩	೩೨.೭	೧೦೦.೦

ಗದಗ ಜಿಲ್ಲೆಯಲ್ಲಿ ೫೫ ವಿಧವೆಯರಿದ್ದು ಅವರಲ್ಲಿ ೩೭ ಜನ ವಿಧವಾ ಕಾರ್ಡನ್ನು ಪಡೆದಿದ್ದಾರೆ (೬೭.೩ ಪ್ರತಿಶತ). ತಾಲೂಕಾವಾರು ನೋಡಿದಾಗ ಗದಗನಲ್ಲಿ ೭೫.೯ ಪ್ರತಿಶತ, ರೋಣದಲ್ಲಿ ೬೩.೬ ಪ್ರತಿಶತ, ಹಾಗೂ ನರಗುಂದದಲ್ಲಿ ೩೩.೩ ಪ್ರತಿಶತ (ಇರುವ ಮೂವರು ವಿಧವೆಯರಲ್ಲಿ ಒಬ್ಬರು ಮಾತ್ರ) ವಿಧವೆಯರು ಕಾರ್ಡ ಹೊಂದಿದ್ದಾರೆ. ಮುಂಡರಗಿಯಲ್ಲಿ ಒಬ್ಬರು ಮಾತ್ರ ವಿಧವೆ ಇದ್ದು, ಅವರು ಕಾರ್ಡನ್ನು ಪಡೆದಿಲ್ಲ. ಶಿರಹಟ್ಟಿಯಲ್ಲಿ ವಿಧವೆಯರು ಇರುವುದಿಲ್ಲ.

ಕೋಷ್ಟಕ ೫.೧೬ ಅಧ್ಯಯನಕ್ಕೊಳಪಟ್ಟ ಈ ಕ್ಷೇತ್ರದಲ್ಲಿ ಅಂಗವಿಕಲರು ಹೊಂದಿರುವ ಅಂಗವಿಕಲರ ಕಾರ್ಡಿನ ಬಗ್ಗೆ ಮಾಹಿತಿ ಪಡೆದಾಗ ಒಟ್ಟಾರೆ ಗದಗ ಜಿಲ್ಲೆಯಲ್ಲಿ ೧.೮ ಪ್ರತಿಶತ ಜನರು (೨೦೩) ಈ ಸೌಲಭ್ಯ ಹೊಂದಿದ್ದಾರೆ. ಅವರಲ್ಲಿ ಪುರುಷರು ೨.೧ ಪ್ರತಿಶತ (೧೨೪ ಜನ) ಹಾಗೂ ಮಹಿಳೆಯರು ೧.೪ ಪ್ರತಿಶತ (೭೯ ಜನ) ಇರುವರು.

ಕೋಷ್ಟಕ ೫.೧೬: ವಿಕಲಚೇತನ ಜನರ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ವಿಕಲಚೇತನರ ಗುರುತಿನ ಚೀಟಿ			ಒಟ್ಟು
	ಇದೆ	ಇಲ್ಲ	ಗೊತ್ತಿಲ್ಲ	
ಗದಗ	೭೩	೪೨೬೩	೫	೪೩೪೧
	೧.೭	೯೮.೨	.೧	೧೦೦.೦
ರೋಣ	೯೮.೦	೪೨೦೯.೦	೪೭.೦	೪೩೫೪.೦
	೨.೩	೯೬.೭	೧.೧	೧೦೦.೦
ನರಗುಂದ	೨೪.೦	೧೭೦೮.೦	೧.೦	೧೭೩೩.೦
	೧.೪	೯೮.೬	.೧	೧೦೦.೦
ಮುಂಡರಗಿ	೬.೦	೮೦೪.೦	೦.೦	೮೧೦.೦
	.೭	೯೯.೩	೦.೦	೧೦೦.೦
ಶಿರಹಟ್ಟಿ	೨.೦	೨೭೧.೦	೦.೦	೨೭೩.೦
	.೭	೯೯.೩	೦.೦	೧೦೦.೦
ಜಿಲ್ಲೆ	೨೦೩.೦	೧೧೨೫೫.೦	೫೩.೦	೧೧೫೧೧.೦
	೧.೮	೯೭.೮	.೫	೧೦೦.೦

ಈ ಅಂಶವನ್ನು ತಾಲೂಕಾವಾರು ಗಮನಿಸಿದಾಗ ರೋಣ ತಾಲೂಕಿನಲ್ಲಿ ೨.೩ ಪ್ರತಿಶತ ಜನರು ಈ ಕಾರ್ಡ್ ಹೊಂದಿದ್ದಾರೆ. ಅವರಲ್ಲಿ ೨.೭ ಪ್ರತಿಶತ ಪುರುಷರು ಹಾಗೂ ೧.೮ ಪ್ರತಿಶತ ಮಹಿಳೆಯರು ಇದ್ದಾರೆ. ಶಿರಹಟ್ಟಿಯಲ್ಲಿ ಕೇವಲ ಇಬ್ಬರು ಮಾತ್ರ ಅಂಗವಿಕಲರ ಕಾರ್ಡ್ ಪಡೆದಿದ್ದಾರೆ. ಮುಂಡರಗಿಯಲ್ಲಿ ೪ ಜನ ಪುರುಷರು ಹಾಗೂ ಇಬ್ಬರು ಮಹಿಳೆಯರು ಹೊಂದಿದ್ದಾರೆ. ಇನ್ನುಳಿದಂತೆ ಗದಗ ತಾಲೂಕಿನಲ್ಲಿ ೧.೭ ಪ್ರತಿಶತ ಜನರಿದ್ದು, ಅವರಲ್ಲಿ ೧.೯ ಪ್ರತಿಶತ ಪುರುಷರು ಹಾಗೂ ೧.೫ ಪ್ರತಿಶತ ಮಹಿಳೆಯರು ಕಾರ್ಡ್ ಪಡೆದಿದ್ದಾರೆ. ನರಗುಂದ ತಾಲೂಕಿನಲ್ಲಿ ೧.೪ ಪ್ರತಿಶತ ಜನರು ಈ ಸೌಲಭ್ಯ ಪಡೆದಿದ್ದು ಅದರಲ್ಲಿ ೧.೮ ಪ್ರತಿಶತ ಪುರುಷರು ಮತ್ತು ೧.೦ ಪ್ರತಿಶತ ಮಹಿಳೆಯರು ಇದ್ದಾರೆ.

ಕೋಷ್ಟಕ ೫.೧೧೭ ಮತದಾರರ ಗುರುತಿನ ಪತ್ರವನ್ನು ಹೊಂದಿರುವ ಬಗ್ಗೆ ವಿವರಗಳು ಹೀಗಿವೆ. ಒಟ್ಟಾರೆ ಗದಗ ಜಿಲ್ಲೆಯಲ್ಲಿ ೮೦.೫ ಪ್ರತಿಶತ ಜನರು ಮತದಾರರ ಗುರುತಿನ ಪತ್ರವನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಅವರಲ್ಲಿ ೮೦.೮ ಪ್ರತಿಶತ ಪುರುಷರು ಮತ್ತು ೮೦.೨ ಪ್ರತಿಶತ ಮಹಿಳೆಯರು ಪಡೆದಿದ್ದಾರೆ. ತಾಲೂಕಾವಾರು ಅಂಕಿ ಸಂಖ್ಯೆಗಳ ಪ್ರಕಾರ ಮುಂಡರಗಿಯಲ್ಲಿ ಅತಿ ಹೆಚ್ಚು ಅಂದರೆ ೮೫.೦ ಪ್ರತಿಶತ ಜನ ಮತದಾರ ಗುರುತಿನ ಪತ್ರವನ್ನು ಹೊಂದಿದ್ದಾರೆ. ಅವರಲ್ಲಿ ೮೩.೯ ಪ್ರತಿಶತ ಪುರುಷರು ಹಾಗೂ ೮೬.೪ ಪ್ರತಿಶತ ಮಹಿಳೆಯರಿದ್ದಾರೆ. ಶಿರಹಟ್ಟಿಯಲ್ಲಿ ೭೬.೨ ಪ್ರತಿಶತ ಜನರ ಬಳಿ ಮತದಾರರ ಗುರುತಿನ ಪತ್ರ ಲಭ್ಯವಿದೆ. ಅವರಲ್ಲಿ ೭೩.೯ ಪ್ರತಿಶತ ಪುರುಷರು ಹಾಗೂ ೭೮.೨ ಪ್ರತಿಶತ ಮಹಿಳೆಯರು ಇದ್ದಾರೆ. ಇನ್ನುಳಿದಂತೆ ಗದಗ ತಾಲೂಕಿನಲ್ಲಿ ೭೯.೩ ಪ್ರತಿಶತ ಜನರ ಪೈಕಿ ೭೯.೧ ಪ್ರತಿಶತ ಪುರುಷರು ಹಾಗೂ ೭೯.೫ ಪ್ರತಿಶತ ಮಹಿಳೆಯರು ಈ ಕಾರ್ಡನ್ನು ಪಡೆದಿದ್ದಾರೆ. ರೋಣ ತಾಲೂಕಿನಲ್ಲಿ ಮತದಾರ ಗುರುತಿನ ಪತ್ರ ಪಡೆದಿರುವ ೮೦.೦ ಪ್ರತಿಶತ ಜನರಲ್ಲಿ ೮೦.೮ ಪ್ರತಿಶತ ಪುರುಷರು ಹಾಗೂ ೭೯.೧ ಪ್ರತಿಶತ ಮಹಿಳೆಯರಿದ್ದಾರೆ. ನರಗುಂದ ತಾಲೂಕಿನಲ್ಲಿ ೮೩.೪ ಪ್ರತಿಶತ ಜನ ಮತದಾರರ ಗುರುತಿನ ಪತ್ರ ಪಡೆದಿದ್ದು, ಪುರುಷರು ಪ್ರತಿಶತ ೮೪.೬ ಇದ್ದರೆ, ಮಹಿಳೆಯರು ೮೨.೧ ಪ್ರತಿಶತ ಇರುವರು.

ಕೋಷ್ಟಕ ೫.೧೭: ಚುನಾವಣಾ ಗುರುತಿನ ಚೀಟಿ ಸ್ಥಿತಿಯ ತಾಲೂಕಾವಾರು ಜನರ ಪ್ರತಿಶತ ಹಂಚಿಕೆ

ತಾಲೂಕು	ಲಿಂಗ	ಚುನಾವಣೆ ಗುರುತಿನ ಚೀಟಿ		ಒಟ್ಟು
		ಇದೆ	ಇಲ್ಲ	
ಗದಗ	ಪುರುಷರು	೧೨೩೧	೩೨೬	೧೫೫೭
		೭೯.೧	೨೦.೯	೧೦೦.೦
	ಸ್ತ್ರೀಯರು	೧೧೬೪.೦	೩೦೧.೦	೧೪೬೫.೦
		೭೯.೫	೨೦.೫	೧೦೦.೦
	ಒಟ್ಟು	೨೩೯೫.೦	೬೨೭.೦	೩೦೨೨.೦
		೭೯.೩	೨೦.೭	೧೦೦.೦
ರೋಣ	ಪುರುಷರು	೧೨೧೯.೦	೨೯೦.೦	೧೫೦೯.೦
		೮೦.೮	೧೯.೨	೧೦೦.೦
	ಸ್ತ್ರೀಯರು	೧೧೬೯.೦	೩೦೮.೦	೧೪೭೭.೦
		೭೯.೧	೨೦.೯	೧೦೦.೦
	ಒಟ್ಟು	೨೩೮೮.೦	೫೯೮.೦	೨೯೮೬.೦
		೮೦.೦	೨೦.೦	೧೦೦.೦
ನರಗುಂದ	ಪುರುಷರು	೫೪೦.೦	೯೮.೦	೬೩೮.೦
		೮೪.೬	೧೫.೪	೧೦೦.೦
	ಸ್ತ್ರೀಯರು	೪೭೩.೦	೧೦೩.೦	೫೭೬.೦
		೮೨.೧	೧೭.೯	೧೦೦.೦
	ಒಟ್ಟು	೧೦೧೩.೦	೨೦೧.೦	೧೨೧೪.೦
		೮೩.೪	೧೬.೬	೧೦೦.೦
ಮುಂಡರಗಿ	ಪುರುಷರು	೨೭೧.೦	೫೨.೦	೩೨೩.೦
		೮೩.೯	೧೬.೧	೧೦೦.೦
	ಸ್ತ್ರೀಯರು	೨೪೧.೦	೩೮.೦	೨೭೯.೦
		೮೬.೪	೧೩.೬	೧೦೦.೦
	ಒಟ್ಟು	೫೧೨.೦	೯೦.೦	೬೦೨.೦
		೮೫.೦	೧೫.೦	೧೦೦.೦
ಶಿರಹಟ್ಟಿ	ಪುರುಷರು	೬೮.೦	೨೪.೦	೯೨.೦
		೭೩.೯	೨೬.೧	೧೦೦.೦
	ಸ್ತ್ರೀಯರು	೭೯.೦	೨೨.೦	೧೦೧.೦
		೭೮.೨	೨೧.೮	೧೦೦.೦
	ಒಟ್ಟು	೧೪೭.೦	೪೬.೦	೧೯೩.೦
		೭೬.೨	೨೩.೮	೧೦೦.೦
ಜಿಲ್ಲೆ	ಪುರುಷರು	೩೩೨೯.೦	೭೯೦.೦	೪೧೧೯.೦
		೮೦.೮	೧೯.೨	೧೦೦.೦
	ಸ್ತ್ರೀಯರು	೩೧೨೬.೦	೭೭೨.೦	೩೮೯೮.೦
		೮೦.೨	೧೯.೮	೧೦೦.೦
	ಒಟ್ಟು	೬೪೫೫.೦	೧೫೬೨.೦	೮೦೧೭.೦
		೮೦.೫	೧೯.೫	೧೦೦.೦


ಮತದಾರರ ಗುರುತಿನ ಚೀಟಿ ಹೊಂದಿರುವರ ಸಂಖ್ಯೆ ಸಮಾಧಾನಕರವಾಗಿದ್ದರೂ ಅರ್ಹ ವ್ಯಕ್ತಿಗಳೆಲ್ಲರೂ ಪಡೆದುಕೊಳ್ಳುವುದು ಅತಿ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಜನತೆಯಲ್ಲಿ ಅರಿವು ಮೂಡಿಸಬೇಕಾಗಿದೆ.


ವಯೋವೃದ್ಧರ ಕಾರ್ಡನ್ನು ಹೊಂದಿರುವ ಅರ್ಹ ವ್ಯಕ್ತಿಗಳ ಕುರಿತ ವಿವರ ಹೀಗಿದೆ. ಗದಗ ಜಿಲ್ಲೆಯಲ್ಲಿ ೩೫.೮ ಪ್ರತಿಶತ (೩೮೪) ಜನ ಈ ಸೌಲಭ್ಯ ಹೊಂದಿದ್ದಾರೆ. ಅದರಲ್ಲಿ ೩೨.೩ ಪ್ರತಿಶತ ಪುರುಷರು (೧೫೫) ಮತ್ತು ೩೮.೬ ಪ್ರತಿಶತ ಮಹಿಳೆಯರು (೨೨೯) ಇದ್ದಾರೆ. ಈ ವಿಷಯ ಕುರಿತು ತಾಲೂಕವಾರು ವಿವರ ಹೀಗಿದೆ. ರೋಣದಲ್ಲಿ ಈ ಸೌಲಭ್ಯ ಪಡೆದ ೪೭.೬ ಪ್ರತಿಶತ ಜನರಲ್ಲಿ ೪೧.೯ ಪ್ರತಿಶತ ಪುರುಷರು ಮತ್ತು ೫೧.೬ ಪ್ರತಿಶತ ಮಹಿಳೆಯರು ವಯೋವೃದ್ಧರ ಕಾರ್ಡ್ ಪಡೆದಿದ್ದಾರೆ. ಶಿರಹಟ್ಟಿಯಲ್ಲಿ ಈ ಕಾರ್ಡನ್ನು ೮.೭ ಪ್ರತಿಶತ ಜನ ಪಡೆದಿದ್ದಾರೆ. ಅವರಲ್ಲಿ ೧೧.೧ ಪ್ರತಿಶತ ಪುರುಷರು (೯ ಜನರಲ್ಲಿ ಒಬ್ಬರು ಮಾತ್ರ) ಮತ್ತು ೭.೧ ಪ್ರತಿಶತ ಮಹಿಳೆಯರು (೧೪ ಜನರಲ್ಲಿ ಒಬ್ಬರು ಮಾತ್ರ) ಈ ಸೌಲಭ್ಯ ಹೊಂದಿದ್ದಾರೆ. ಇನ್ನುಳಿದಂತೆ ಗದಗನಲ್ಲಿ ೨೫.೮ ಪ್ರತಿಶತ, ನರಗುಂದದಲ್ಲಿ ೨೬.೩ ಪ್ರತಿಶತ ವೃದ್ಧರಲ್ಲಿ ಈ ಕಾರ್ಡ ಲಭ್ಯವಿದೆ. ಅವರಲ್ಲಿ ೩೧.೧ ಪ್ರತಿಶತ ಪುರುಷರು ಹಾಗೂ ೨೧.೩ ಪ್ರತಿಶತ ಮಹಿಳೆಯರು ಇದ್ದಾರೆ. ಮುಂಡರಗಿಯಲ್ಲಿ ವಯೋವೃದ್ಧರ ಕಾರ್ಡ್ ಹೊಂದಿರುವ ೩೫.೧ ಪ್ರತಿಶತ ಜನರಲ್ಲಿ ೨೯.೨ ಪ್ರತಿಶತ ಪುರುಷರು ಹಾಗೂ ೩೯.೪ ಪ್ರತಿಶತ ಮಹಿಳೆಯರಿದ್ದಾರೆ.


ಕೋಷ್ಟಕ ೫.೧೮: ಹಿರಿಯ ನಾಗರಿಕ ಗುರುತಿನ ಚೀಟಿ ಸ್ಥಿತಿ ಗತಿಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಹಿರಿಯ ನಾಗರಿಕರ ಗುರುತಿನ ಚೀಟಿ					
	ಪುರುಷರು		ಮಹಿಳೆಯರು		ಒಟ್ಟು	
	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ
ಗದಗ	೩೬ ೨೨.೬	೧೨೩ ೭೭.೪	೫೦.೦ ೨೮.೭	೧೨೪.೦ ೭೧.೩	೮೬.೦ ೨೫.೮	೨೪೭.೦ ೭೪.೨
ರೋಣ	೮೩.೦ ೪೧.೯	೧೧೫.೦ ೫೭.೫	೧೪೬.೦ ೫೧.೬	೧೩೭.೦ ೪೮.೪	೨೨೯.೦ ೪೭.೬	೨೫೨.೦ ೫೨.೪
ನರಗುಂದ	೨೮.೦ ೩೧.೧	೬೨.೦ ೬೮.೯	೧೯.೦ ೨೧.೩	೭೦.೦ ೭೮.೬	೪೭.೦ ೨೬.೩	೧೩೨.೦ ೭೩.೮
ಮುಂಡರಗಿ	೭ ೨೯.೨	೧೭ ೭೦.೮	೧೩ ೩೯.೪	೨೦ ೬೦.೬	೨೦ ೩೫.೧	೩೭ ೬೪.೯
ಶಿರಹಟ್ಟಿ	೧.೦ ೧೧.೧	೮.೦ ೮೮.೯	೧.೦ ೭.೧	೧೩.೦ ೯೨.೯	೨.೦ ೮.೭	೨೧.೦ ೯೧.೩
ಜಿಲ್ಲೆ	೧೫೫ ೩೨.೩	೩೨೫ ೬೭೮	೨೨೯ ೩೮.೬	೩೬೪ ೬೧.೪	೩೮೪ ೩೫.೮	೬೮೯ ೬೪.೨

ರೇಡಿಯೊ, ಟೇಪ್‌ರೆಕಾರ್ಡರ್, ದೂರದರ್ಶನ ಹಾಗೂ ದೂರವಾಣಿ ಸಂಪರ್ಕ ಹೊಂದಿರುವ ಪ್ರತಿಶತ ಕುಟುಂಬಗಳ ತಾಲೂಕಾವಾರು ವಿಂಗಡನೆಯನ್ನು ಸ್ತಂಭಾಲೇಖಗಳ ಮೂಲಕ ವಿವರಿಸಲಾಗಿದೆ.






ದೂರದರ್ಶನ ಹೊಂದಿರುವ ಪ್ರತಿಶತ ಕುಟುಂಬಗಳ
ತಾಲ್ಲೂಕಾವಾರು ವಿಂಗಡಣೆ



೫.೨ ಆಧುನಿಕ ವೃತ್ತಿಗಳು

ವಂಶ ಪಾರಂಪರಿಕವಾಗಿ ಮಾಡುತ್ತ ಬಂದಿರುವ ಮೇಲ್ಜಾತಿಯವರ ಸೇವೆ ಇಂದು ಕಡಿಮೆಯಾಗುತ್ತ ಬಂದಿದೆ. ಔದ್ಯೋಗಿಕರಣ, ನಗರೀಕರಣ, ಪಾಶ್ಚತ್ಯೀಕರಣದ ಪ್ರಭಾವದಿಂದ ಗ್ರಾಮೀಣ ಸಮುದಾಯದ ಛಲವಾದಿಯವರು ಮೇಲ್ಜಾತಿಯವರಂತೆ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಇಂದು ನಗರಗಳಲ್ಲಿ ನೆಲೆಸುತ್ತಿದ್ದಾರೆ. ಶಿಕ್ಷಣ ಪಡೆದ ಯುವ ಜನಾಂಗ ಗ್ರಾಮದ ಜಾತಿ ಪದ್ಧತಿಗೆ ಬೇಸತ್ತು ವೈಚಾರಿಕತೆ ಮತ್ತು ವೈಜ್ಞಾನಿಕತೆ ಬೆಳೆಸಿಕೊಂಡು ನಗರದಲ್ಲೆ ಸ್ಥಿರವಾಗಿ ನಿಲ್ಲಲು ಇಚ್ಚಿಸುತ್ತಾರೆ. ಗ್ರಾಮ ಸಮುದಾಯಗಳಲ್ಲಿ ಕೇವಲ ಕೃಷಿ ಆಧಾರಿತ ಉದ್ಯೋಗಗಳಿದ್ದರೆ, ನಗರ ಸಮುದಾಯಗಳಲ್ಲಿ ಕೃಷಿಯೇತರ ಉದ್ಯೋಗಗಳು ಹೆಚ್ಚಾಗಿ ಲಭ್ಯವಾಗುವುದರಿಂದ ತಮ್ಮ ಸಾಮರ್ಥ್ಯ ಅರ್ಹತೆ ಆಧರಿಸಿ ಉದ್ಯೋಗ ಹುಡುಕಿಕೊಳ್ಳುವುದು ಛಲವಾದಿ ಸಮುದಾಯದಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದೆ. ಗ್ರಾಮೀಣ ಭಾಗದ ಜಿಡ್ಡುಗಟ್ಟಿದ ಪರಿಸರದಿಂದ ಬೇಸತ್ತ ಯುವಜನತೆ ಬೆಂಗಳೂರು, ಮಂಗಳೂರು, ಮುಂಬಯಿ, ಮುಂತಾದ ನಗರಗಳ ಕಡೆಗೆ ಹೋಗುವಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ನಗರೀಕರಣದ ಪ್ರಭಾವ ಇವರ ಮೇಲೆ ಹೆಚ್ಚಾಗಿದೆ. ಅಲ್ಲಿ ದೊರೆಯುವ ಉದ್ಯೋಗ ಇವರಿಗೆ ಆಸರೆಯಾಗಿವೆ.

೫.೩ ಕೂಲಿ ಮಾಡುವುದು

'ಇಂತಿಷ್ಟು ಹಣಕ್ಕಾಗಿ ಪ್ರತಿನಿತ್ಯ ಕೆಲಸ ಮಾಡುವುದೇ ಕೂಲಿ' ಎನ್ನಬಹುದು. ಕೂಲಿಗಳಲ್ಲಿ ನಾನಾ ಪ್ರಕಾರಗಳಿವೆ. ನಿತ್ಯ ಹೊಲ ಹಾಗೂ ದನಗಳನ್ನು ಕಾಯುವುದು ಅಥವಾ ರಕ್ಷಣೆ ಮಾಡುವುದಕ್ಕೆ ಇಂತಿಷ್ಟು ಕೂಲಿ ಕೊಡಲಾಗುತ್ತದೆ. ಇದು ಕಾಯುವ ಕೆಲಸವನ್ನು ಮುಖ್ಯವಾಗಿ ಆಧರಿಸಿರುವುದರಿಂದ ಇದನ್ನು ಕಾಯಿಕೂಲಿ ಎಂದು ಕರೆಯುತ್ತಾರೆ. ಒಂದು ವಾರದಿಂದ ತಿಂಗಳು, ಮೂರು ತಿಂಗಳು, ಇಲ್ಲವೆ ಆರು ತಿಂಗಳು ಕೆಲಸ ಮಾಡುವುದಕ್ಕೆ 'ವರವಿ' ಎನ್ನುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ನಿರಂತರವಾಗಿ ಕೆಲಸ ಸಿಗುವುದು ಸಾಧ್ಯವಾಗಲಾರದು. ಏಕೆಂದರೆ ಕೃಷಿ ಕೂಲಿ ಅರೆ ಉದ್ಯೋಗ, ಅಗೋಚರ ಉದ್ಯೋಗವಾಗಿ ಕಂಡು ಬರುತ್ತದೆ. ಕೃಷಿ ಪ್ರಧಾನ ಜಿಲ್ಲೆಯಾದ ಗದಗದಲ್ಲಿ ಈ ಕೃಷಿ ಚಟುವಟಿಕೆ ಆರಂಭವಗುವ ಸಂದರ್ಭದಲ್ಲಿ ಕೂಲಿ ಕೆಲಸಗಳು ಪ್ರಾರಂಭ. ಕೆಲಸಕ್ಕೆ ತಕ್ಕಂತೆ ಕೂಲಿ ಸರಿಯಾಗಿ ದೊರೆಯಲಾರದು. ಕೂಲಿ ದೊರೆಯದೆ ಇರುವ ಸಂದರ್ಭದಲ್ಲಿ ಈ ಭಾಗದ ಜನತೆ ಬೇರೆ ಕಡೆಗೆ ಗುಳೆ ಹೋಗುವ ಸಂದರ್ಭಗಳುಂಟು. ಹೆಚ್ಚು ಕೂಲಿ ಸಿಗುವ ಕಡೆ ಹೋದರೆ ಮನೆ, ಮಠ, ಮದುವೆಯಂತಹ ಕಾರ್ಯಕ್ರಮಕ್ಕೆ ಸಹಾಯವಾಗಬಹುದೆಂಬ ಹಿನ್ನೆಲೆಯಲ್ಲಿ ಬೇರೆ ಕಡೆಗೆ ಹೋಗುವರು. ಬಡತನದ ಬೇಗೆಯಿಂದ ಅನೇಕ ಕಾರಣಗಳಿಂದ ಸಾಲ-ಸೂಲ ಮಾಡಿರುವರು. ಅವುಗಳನ್ನು ತೀರಿಸಲು ಅನಿವಾರ್ಯವಾಗಿ ಮಕ್ಕಳನ್ನು ಕಟ್ಟಿಕೊಂಡು ಹೋಗಬೇಕಾಗಿರುತ್ತದೆ. ಹೀಗೆ ಗುಳೆ ಹೋಗುವುದರಿಂದ ಮಕ್ಕಳ ಶಿಕ್ಷಣ ಕುಂಠಿತಗೊಳ್ಳುವುದು. ಉದ್ಯೋಗ ಖಾತ್ರಿಯಂಥ ಸರ್ಕಾರದ ಯೋಜನೆಗಳು ಇವರಿಗೆ ನಿಲುಕದ ಸ್ಥಿತಿಯಲ್ಲಿವೆ. ಪ್ರತಿಯೊಂದು ಗ್ರಾಮದ ಛಲವಾದಿ ಜನ ಪುರುಷರು ೧೫೦ ರೂ. ಹಾಗೂ ಮಹಿಳೆಗೆ

೧೦೦ ರೂ.ಗಳ ಕೂಲಿ ದರ ಪಡೆಯುತ್ತಾರೆ. ಋತಕ್ಕನುಗುಣವಾಗಿ ಕೂಲಿ ದರದಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಇವರು ಮಾಡುವ ಕೃಷಿ ಕೂಲಿಗಳಾದ ಬದು ನಿರ್ಮಿಸುವುದು, ಹತ್ತಿ ಬಿಡಿಸುವುದು, ಹತ್ತಿ ಕಟ್ಟಿಗೆ ಕೀಳುವುದು, ರಾಸಾಯನಿಕ ಗೊಬ್ಬರ ಹಾಕುವುದು, ಕಟಾವು ಮಾಡುವುದು, ಬಿತ್ತನೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಈ ಕೆಲಸ ಮಾಡುವವರ ವಯಸ್ಸು ೩೦ ವರ್ಷದಿಂದ ೬೦ ವರ್ಷ ಒಳಗಿನವರು ಇರುತ್ತಾರೆ.

೫.೪ ಒಕ್ಕಲುತನ

ಇತರೆ ಬೇರೆ ಸಮುದಾಯದಂತೆ ಛಲವಾದಿಯರೂ ಅಲ್ಪಸ್ವಲ್ಪ ಭೂಮಿಯಿಂದ ಒಕ್ಕಲುತನ ಮಾಡುತ್ತಿದ್ದಾರೆ. ಪ್ರಾಚೀನ ಪದ್ಧತಿ ಮತ್ತು ಆಧುನಿಕ ತಂತ್ರಗಳನ್ನು ಬಳಸಿ ಒಳ್ಳೆಯ ಬೆಳೆ ಬೆಳೆದು ತಮ್ಮ ಜೀವನ ನಡೆಸುತ್ತಿದ್ದಾರೆ. ಬೇರೆಯವರ ಹೊಲವನ್ನು ಅಡವಿಟ್ಟುಕೊಳ್ಳುವುದು, ಸರಿಪಾಲು ಮಾಡುವುದು, ಲಾವಣೆ ಮಾಡುವುದು, ಬಡ್ಡಿವೊಳಗೆ ಇಟ್ಟುಕೊಳ್ಳುವುದು, ಹೊಲದ ಉಳುಮೆಗೆ ಪಶುಗಳನ್ನು ರಕ್ಷಿಸಿಕೊಂಡು ಬದುಕುತ್ತಿದ್ದಾರೆ. ಇದರಿಂದ ಕೆಲವು ಹಳ್ಳಿಗಳಲ್ಲಿನ ಜನ ಆಯ ಪಡೆಯುತ್ತಿದ್ದಾರೆ. ಹೊಳೆ ಮಣ್ಣೂರು (ರೋಣ ತಾಲೂಕು) ಕಪ್ಪಲಿ, (ನರಗುಂದ ತಾಲೂಕು) ನರಗುಂದ ಗ್ರಾಮಗಳಲ್ಲಿ ನೀರಾವರಿ ಮಾಡಿಕೊಂಡು ವಾಣಿಜ್ಯ ಬೆಳೆ ತೆಗೆಯುವ ಮೂಲಕ ಯಶಸ್ವಿ ವ್ಯವಸಾಯಗಾರರಾಗಿದ್ದಾರೆ. ಹತ್ತಿ, ಶೇಂಗಾ, ಮೆಕ್ಕೆಜೋಳ, ಮೆಣಸಿನಕಾಯಿ, ಉಳಾಗಡ್ಡಿ, ತೊಗರಿ, ಸೂರ್ಯಕಾಂತಿ, ಬಿಳಿಜೋಳ, ಕಡಲೆ, ನವಣಿ, ರಾಗಿ ಇವುಗಳನ್ನಲ್ಲದೆ, ಕಾಯಿಪಲ್ಲೆ, ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

೫.೫ ವ್ಯಾಪಾರ

ಛಲವಾದಿ ಸಮುದಾಯ ವ್ಯಾಪಾರ ವಾಣಿಜ್ಯ ಕ್ಷೇತ್ರದಲ್ಲಿ ಕಾಲಿಟ್ಟಿರುವುದು ತುಂಬಾ ಕಡಿಮೆ ಎನ್ನಬಹುದು. ಆದರೂ ಗ್ರಾಮೀಣ ಭಾಗದಲ್ಲಿ ಕಿರಾಣಿ ಅಂಗಡಿ, ಬಟ್ಟೆ ಅಂಗಡಿ, ಕಾಳಿನ ವ್ಯಾಪಾರ, ಕಟ್ಟಿಗೆ ವ್ಯಾಪಾರ, ಸೀಮೆ ಎಣ್ಣೆ ವಿತರಣೆ (ವ್ಯಾಪಾರ) ಅಲ್ಲದೆ ಕಾಯಿಪಲ್ಲೆ ಮಾರುವುದು, ಸೆರೆ ಮಾರುವುದು, ಪೆಟ್ರೋಲ್ ಬಂಕ್, ಹಣ್ಣಿನ ಫಾರಂ, ದನದ ದಲ್ಲಾಳಿ, ಕುರಿ ವ್ಯಾಪಾರ, ಹಣ್ಣು ಹಂಪಲಿನ ವ್ಯಾಪಾರ, ಹಾಲು ಮಾರಾಟ, ನಗರ ಪ್ರದೇಶಗಳಲ್ಲಿ ಡೀಲರ್ಸ್ (ಪ್ರಾಯೋಜಕರಾಗಿ) ವ್ಯಾಪಾರ ಮುಂತಾದ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಾರೆ. ಹೊರತಾಗಿ ದೊಡ್ಡ ದೊಡ್ಡ ಅಂಗಡಿಗಳು ಮಾಡಿಕೊಂಡು ವ್ಯಾಪಾರ ಮಾಡಲು ಇಲ್ಲಿಯವರೆಗೆ ಸಾಧ್ಯವಾಗಿಲ್ಲ.

೫.೬ ಅರೆಕಾಲಿಕ ವೃತ್ತಿಗಳು

ಕೆಲಸ ಸಿಗದ ದಿನಗಳಲ್ಲಿ ಅರೆಕಾಲಿಕ ವೃತ್ತಿಗಳನ್ನು ವರ್ಷವಿಡೀ ಮಾಡಿ ಜೀವನ ನಡೆಸಿದವರಿದ್ದಾರೆ. ಇಡ್ಲಿ-ಬಟ್ಟಿ ತಯಾರಿಸುವುದು, ಕಟ್ಟಿಗೆ ಮಾರುವುದು ಮೊದಲಾದವನ್ನು ಅರೆಕಾಲಿಕ ಕೆಲಸಗಳಲ್ಲಿ ಗುರುತಿಸಬಹುದು. ದಿನಂಪ್ರತಿ ಕೂಲಿ ಕೆಲಸ ಸಿಗದೇ ಇದ್ದಾಗ ಅಡವಿಗೆ ಹೋಗಿ ಕಟ್ಟಿಗೆ ಕಡಿದುಕೊಂಡು

ಬಂದು ಮಾರಲಾಗುವುದು. ಕೆಲವರು ದೊಡ್ಡ ದೊಡ್ಡ ಗಿಡಗಳನ್ನು ಗುತ್ತಿಗೆ ಹಿಡಿದು ಕಟ್ಟಿಗೆ ಅಡ್ಡ ಇಟ್ಟುಕೊಂಡು ವ್ಯಾಪಾರ ಮಾಡುವರು. ಈ ಕಟ್ಟಿಗೆ ವ್ಯಾಪಾರ ಮಾಡುವ ವ್ಯಾಪಾರಸ್ಥರು ಕಳಸಾಪುರ ಗ್ರಾಮದಲ್ಲಿದ್ದಾರೆ. ಈ ಕೆಲಸವನ್ನು ನಗರ ಸಮೀಪ ಇರುವ ಗ್ರಾಮಗಳಲ್ಲಿ ಕಂಡುಬರುತ್ತದೆ.

೫.೭ ವಲಸೆ ಹೋಗುವುದು

'ವ್ಯಕ್ತಿ ಅಥವಾ ಕುಟುಂಬ ಕೂಲಿ ಕೆಲಸ ಹುಡುಕಿಕೊಂಡು ಒಂದು ಪ್ರದೇಶ ಬಿಟ್ಟು ಮತ್ತೊಂದು ಪ್ರದೇಶಕ್ಕೆ ಹೋಗುವುದನ್ನು ವಲಸೆ ಹೋಗುವುದು' ಎನ್ನುತ್ತಾರೆ. ಇತ್ತೀಚೆಗೆ ಈ ರೀತಿಯ ವಲಸೆ ಸಂಸ್ಕೃತಿ ಗ್ರಾಮೀಣ ಭಾಗದಲ್ಲಿ ಅಧಿಕವಾಗಿದೆ. ಅತಿವೃಷ್ಠಿ, ಅನಾವೃಷ್ಠಿ, ಪ್ರಕೃತಿ ವಿಕೋಪ, ಬರಗಾಲ, ಪ್ರವಾಹ, ಭೂಕಂಪ ಸಂಭವಿಸಿದಾಗ ಜನ ಉದ್ಯೋಗ ಹುಡುಕಿಕೊಂಡು ಗ್ರಾಮ ಬಿಟ್ಟು ಬೇರೆಕಡೆಗೆ ಹೋಗುತ್ತಾರೆ. ಭಾರತದಲ್ಲಿ ಮಳೆಯಾಧಾರಿತ ಕೃಷಿ ಜೀವನ ಮಳೆಯಂತೆಯೇ ಅನಿಶ್ಚಿತವಾದುದಾಗಿದೆ. ಹಾಗಾಗಿಯೆ ಕೃಷಿಯನ್ನು ಮಳೆಯೊಂದಿಗೆ ನಡೆಸುವ ಜೂಜಾಟ ಎಂದು ಕರೆಯಲಾಗುತ್ತದೆ. ಕೆಲವು ವರ್ಷ ಸಾಕಷ್ಟು ಮಳೆ–ಬೆಳೆಯಾಗಿ ಸಮೃದ್ಧವಾದರೆ ಮತ್ತೆ ಕೆಲವು ವರ್ಷ ಸಕಾಲಕ್ಕೆ ಮಳೆ ಬರದೆ ಬರಗಾಲ ಸಂಭವಿಸುತ್ತದೆ. ಆಗ ಬೇರೆ ಪ್ರದೇಶಗಳಿಗೆ ಹೋಗಿ ಜೀವನ ಸಾಗಿಸುವುದು ಅನಿವಾರ್ಯವಾಗಿರುತ್ತದೆ. ಕೆಲವು ಗ್ರಾಮದ (ಡೋಣಿ ಗ್ರಾಮ) ಜನ ತಮ್ಮ ಉಪಜೀವನ ನಡೆಸಲು ಗೋವಾ, ಮುಂಬಯಿ, ಪೂನಾ, ಬೆಂಗಳೂರು, ಮುಂತಾದ ದೊಡ್ಡ ಪಟ್ಟಣಗಳ ಕಡೆ ಹೋಗುತ್ತಾರೆ. ಅಲ್ಲಿ ಕೂಲಿಗಳಾಗಿ ಕಲ್ಲು ಒಡೆಯುವುದು, ಕಟ್ಟಡ ಕಟ್ಟುವ ಗೌಂಡಿಯರು, ಕಾರ್ಮಿಕರು ಮುಂತಾದ ಕೆಲಸ ಮಾಡುತ್ತಾರೆ. ಗ್ರಾಮದಲ್ಲಿ ಯಾರಾದರೂ ತಮ್ಮ ಕುಟುಂಬದಲ್ಲಿ ಅಥವಾ ಸಮುದಾಯದಲ್ಲಿ ಸತ್ತರೆ, ಗ್ರಾಮದೇವತೆ ಜಾತ್ರೆಗಳಲ್ಲಿ ದೊಡ್ಡ ಹಬ್ಬವಿದ್ದರೆ ಬಂದು ಹೋಗುತ್ತಾರೆ. ಮತ್ತೆ ತಮ್ಮ ಗ್ರಾಮದಲ್ಲಿ ಸಂಪೂರ್ಣವಾಗಿ ಮಳೆ–ಬೆಳೆ ಬಂದು ಕೆಲಸಗಳು ಹೆಚ್ಚಾಗಿದ್ದರೆ ಸ್ವಂತ ಗ್ರಾಮಕ್ಕೆ ಮರಳುತ್ತಾರೆ.

ಕೆಲವೊಂದು ಸಲ ಭೌಗೋಳಿಕ ಕಾರಣಗಳಿಂದ ವಲಸೆ ಹೋಗಲಾಗುತ್ತದೆ. ಕೆಲವು ಕುಟುಂಬಗಳು ಸುಗ್ಗಿ ಕಾಲದಲ್ಲಿಯೇ ವಲಸೆ ಹೋಗುತ್ತಾರೆ. ಇದರಲ್ಲಿ ಕುಟುಂಬದ ಎಲ್ಲ ಸದಸ್ಯರು ವಲಸೆ ಹೋಗದೆ, ಒಂದಿಬ್ಬರು ಮಾತ್ರ ಗ್ರಾಮದಿಂದ ಗ್ರಾಮಕ್ಕೆ ಸುಗ್ಗಿಗಾಗಿ ವಲಸೆ ಹೋಗುತ್ತಾರೆ. ಒಂದೊಂದು ಗ್ರಾಮದ ಫಸಲು ಒಂದೊಂದು ಬೆಳೆಗೆ ಪ್ರಸಿದ್ಧವಾಗಿರುತ್ತದೆ. ಉದಾ : ಕಬ್ಬು–ಮಹಾರಾಷ್ಟ್ರದ ಪ್ರಮುಖ ಬೆಳೆ, ಮಹಾರಾಷ್ಟ್ರಕ್ಕೆ ಇಲ್ಲವೆ ನೆರೆ ಜಿಲ್ಲೆಯಾದ ಬೆಳಗಾವಿ ಜಿಲ್ಲೆಗೆ ಸುಗ್ಗಿಗಾಗಿ ವಲಸೆ ಹೋಗುತ್ತಾರೆ. ಅಲ್ಲಿ ಸುಗ್ಗಿ ಮುಗಿದ ನಂತರ ಪುನಃ ತಮ್ಮ ಊರಿಗೆ ಬಂದು ಅವರ ಮೊದಲಿನ ಕೆಲಸಗಳನ್ನು ಮುಂದುವರೆಸುತ್ತಾರೆ. ಈ ರೀತಿ ವಲಸೆ ಹೋಗುವಿಕೆಯಿಂದ ಅಲ್ಪಸ್ವಲ್ಪ ಹಣ ಸಂಗ್ರಹಿಸಿ ತಮ್ಮ ಮನೆ ಆರ್ಥಿಕ ಸಮಸ್ಯೆಯನ್ನು ಸುಧಾರಿಸುವರು. ಕಾಫಿ ಎಸ್ಟೇಟ್, ಕಬ್ಬು ಕಡಿಯಲಿಕ್ಕೆ, ಮಂಗಳೂರಿನ ಮೀನುಗಾರಿಕೆಯಲ್ಲಿ ಹೀಗೆ ಎಲ್ಲಿ ಕೂಲಿ ಅಧಿಕವಾಗಿರುತ್ತದೆಯೋ ಆ ಭಾಗಕ್ಕೆ ಹೋಗಿ ಕೆಲಸ ಮಾಡುವರು. ಹೀಗೆ ಛಲವಾದಿ ಸಮುದಾಯದಲ್ಲಿ ಈ ವಲಸೆ ಪ್ರಕ್ರಿಯೆ ಇದೆ.

೫.೮ ಜೀತಪದ್ಧತಿ

ಛಲವಾದಿಯವರಲ್ಲಿ ಪ್ರಾಚೀನ ಕಾಲದಿಂದಲೂ ಈ ಜೀತ ಪದ್ಧತಿ ರೂಢಿಯಲ್ಲಿತ್ತು. ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ತಳಸಮುದಾಯಗಳು ಉಳ್ಳವರ ಮನೆಯ ಜೀತದಾಳಾಗಿ ದುಡಿಯುವ ವ್ಯವಸ್ಥೆ ಚಿಂತಾಜನಕವಾಗಿದೆ.ಒಂದು ವರ್ಷಕ್ಕೆ ಇಂತಿಷ್ಟಾದರೂ ಹಣ, ಬಟ್ಟೆ ಅಥವಾ ದವಸ ಧಾನ್ಯಗಳ ರೂಪದಲ್ಲಿ ಪಡೆಯುವುದೇ 'ಜೀತ ಪದ್ಧತಿ' ಎನ್ನುತ್ತಾರೆ. ಒಂದು ವರ್ಷಕ್ಕೆ ಸುಮಾರು ೨೫ ರಿಂದ ೩೦ ಸಾವಿರದವರೆಗೆ ಹಾಗೂ ಎರಡು ಚೀಲ ಜೋಳ, ಗೋಧಿ, ಎರಡು ಜೊತೆ ಬಟ್ಟೆ ಕಾಲಲ್ಲಿ ಹಾಕಿಕೊಳ್ಳಲು ಚಪ್ಪಲಿ ಕೊಡಬೇಕೆಂದು ನಿಯಮವಿತ್ತು. ಪ್ರಸ್ತುತ ದಿನಗಳಲ್ಲಿ ಈ ನಿಯಮಗಳು ಸಡಿಲಗೊಂಡು ಇಂತಿಷ್ಟು ಹಣಕ್ಕೆ ಜೀತದಾಳಾಗಿ ದುಡಿಯುವವರಿದ್ದಾರೆ. ಈ ಪದ್ಧತಿಯು ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಕಂಡುಬರುತ್ತದೆ. ಉಳ್ಳವರು ಅಮಾಯಕ ಅನಕ್ಷರಸ್ಥ ದಲಿತರಿಗೆ ಅಲ್ಪಸ್ವಲ್ಪ ಹಣ ನೀಡಿ, ಅದಕ್ಕೆ ಬಡ್ಡಿ ಹಾಕಿ ಚಕ್ರಬಡ್ಡಿಯಂತೆ ರೂಪಿಸಿ ಜೀವನಪೂರ್ತಿ ಉಳ್ಳವರ ಮನೆತನದಲ್ಲಿ ಜೀತದಾಳಾಗಿ ದುಡಿದ ಉದಾಹರಣೆಗಳಿವೆ.

೫.೯ ಜನಪದ ವೈದ್ಯ

ನೋವು, ಬ್ಯಾನಿ, ಬ್ಯಾಸರಕಿ ಮೊದಲಾದ ಮನುಷ್ಯನ ಸಣ್ಣ ಪುಟ್ಟ ರೋಗ ಭಾದೆಗಳನ್ನು ಗುಣಪಡಿಸುವ ಮನೆ ಮದ್ದು ಚಿಕಿತ್ಸೆಗೆ ಜನಪದ ವೈದ್ಯ, ಇಲ್ಲವೆ ಮನೆ ವೈದ್ಯ ಎನ್ನುವರು, ಗ್ರಾಮವೈದ್ಯ ಎಂದೂ ಕೆಲವರು ಕರೆಯುತ್ತಾರೆ. ಇಂತಹ ಜನಪದ ವೈದ್ಯಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ಮಾನವ ನಿಸರ್ಗದ ಮಡಿಲಲ್ಲಿ ಹುಟ್ಟಿ ಬೆಳೆದಿರುವುದರಿಂದ ಅವನಿಗೆ ಸಸ್ಯಗಳ ಉಪಯೋಗ ತಿಳಿದಿದೆ. ಈ ದೇಶದಲ್ಲಿ ಜಾನಪದ ವೈದ್ಯ ಕಂಡು ಬರುವುದು ತಳವರ್ಗಗಳಲ್ಲಿಯೇ ಎಂದು ಹೇಳಬಹುದು. ಮನುಷ್ಯನಿಗೆ ಪ್ರಾಣಿ ಪಕ್ಷಿಗಳಿಗೆ ಬರುವ ರೋಗವನ್ನು ಜನಪದ ವೈದ್ಯರು ತಮ್ಮ ಜನಪದ ವಿಧಿ ವಿಧಾನಗಳಿಂದ ಗುಣಪಡಿಸುತ್ತಾರೆ. ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಅವನಿಗೆ ತಗಲುವ ಕೆಲವು ಕಾಯಿಲೆಗಳನ್ನು ಈ ಜನಪದ ವೈದ್ಯ ಪದ್ಧತಿಯಿಂದಲೇ ಗುಣಪಡಿಸುವರು. ಪ್ರಾಣಿಗಳಿಗೂ ಕಾಯಿಲೆಗಳು ಬಂದರೆ ಈ ಒಂದು ವೈದ್ಯ ಪದ್ಧತಿಯಿಂದಲೇ ವಾಸಿಮಾಡಲಾಗುತ್ತದೆ. ಈ ಮಹತ್ವದ ದೇಶಿ ಪದ್ಧತಿಯು ಗ್ರಾಮೀಣ ಭಾಗದ ಛಲವಾದಿ ಸಮುದಾಯದಲ್ಲಿ ಅಧಿಕವಾಗಿ ಗೋಚರಿಸುತ್ತದೆ. ಆದರೆ ಇಂದು ನಾಗರಿಕತೆ ಪ್ರಭಾವದಿಂದ ನಾಟೀ ವೈದ್ಯ ಪದ್ಧತಿಯ ಕಡೆಗೆ ಯಾರೂ ಆಸಕ್ತಿ ವಹಿಸಲಾರರು. ಸುಧಾರಿಸಿದ ವೈದ್ಯಕೀಯ ವ್ಯವಸ್ಥೆ ಸುಲಭವಾಗಿ ದೊರೆಯುವ ಕಾರಣ ವೈದ್ಯರ ಸಂಪರ್ಕಕ್ಕೆ ಹೋಗುವಂತಾಗಿದೆ. ನೀಲಗುಂದ ಗ್ರಾಮದಲ್ಲಿ ಜನಪದ ವೈದ್ಯ ಕಂಡು ಬರುತ್ತಾರೆ.

೫.೧೦ ಮಾಟ ಮಂತ್ರಗಳು

ಮಾನವ ಸಮಾಜದಲ್ಲಿ ಮಂತ್ರ, ತಂತ್ರ ಮತ್ತು ವಿಜ್ಞಾನ ಸಾರ್ವತ್ರಿಕವಾಗಿ ಕಂಡುಬರುತ್ತವೆ. ಪ್ರಕೃತಿಯ ಅಗೋಚರ ಶಕ್ತಿಗಳನ್ನು ತಿಳಿದುಕೊಳ್ಳಲಾಗದ ಮನುಷ್ಯ ಭಯಭೀತನಾಗಿದ್ದಾನೆ. ಅವುಗಳ ಮೂಲ ಕಂಡು ಹಿಡಿಯುವ ಕುತೂಹಲ ಅವನಲ್ಲಿ ಹುಟ್ಟಿದೆ. ಅಂತಹ ದಿವ್ಯ ಶಕ್ತಿಯನ್ನು ತನ್ನ ಉಪಯೋಗಕ್ಕಾಗಿ ಬಳಸಿಕೊಳ್ಳಲು ಅವುಗಳ ಕಾರ್ಯಕಾರಣ ಸಂಬಂಧದ ರಹಸ್ಯ ತಿಳಿದುಕೊಳ್ಳಲು ಅಥವಾ ಬೋಧಿಸಲು ಮುಂದಾದನು. ಕೆಲವೊಂದು ಸಮಸ್ಯೆಗಳಿಗೆ ಉತ್ತರ ಕಂಡುಕೊಂಡ ಬಳಿಕ ಅವನ್ನು ಪ್ರಯೋಗ ಮಾಡತೊಡಗಿದನು. ಆದರೆ ಕೆಲವೊಂದು ಅವನ ಬೌದ್ಧಿಕ ಮಿತಿಯಿಂದ ಹೊರಗೆ ಉಳಿದವು.

ಕಾರ್ಯಕಾರಣ ಸಂಬಂಧವಿಲ್ಲದ ಅತಾರ್ಕಿಕ ನೆಲೆ ಕೇವಲ ಆರಾಧನೆಯ ಮೂಲಕ ಪ್ರಕೃತಿಯನ್ನು ಅಧೀನದಲ್ಲಿಟ್ಟುಕೊಳ್ಳಲು ಅವನು ಅನುಸರಿಸಿದ ವಿಧಾನ ಒಂದು ಬಗೆಯಾದರೆ, ಕಾರ್ಯಕಾರಣಗಳ ಸಂಬಂಧ ಆಧರಿಸಿ ಖಚಿತ ತಾರ್ಕಿಕ ನೆಲೆಗಟ್ಟಿನ ಮೇಲೆ ಕ್ರಮಬದ್ಧ ವೈಜ್ಞಾನಿಕ ವಿಚಾರ ಹಾಗೂ ಪ್ರಯೋಗಗಳನ್ನು ಮಾಡುವುದರ ಮೂಲಕ ಪ್ರಕೃತಿಯ ರಹಸ್ಯವನ್ನು ಪತ್ತೆ ಹಚ್ಚುವ ಮತ್ತು ಆ ಮೂಲಕ ಪ್ರಕೃತಿಯನ್ನು ವಶಪಡಿಸಿಕೊಳ್ಳಲು ಅವನು ಬಳಸಿದ ವಿಧಾನ ಮತ್ತೊಂದು ಬಗೆಯದು ಆಗಿದೆ. ಉದಾ: ಮನುಷ್ಯನಿಗೆ ಜ್ವರ ಬಂದಾಗ ಪ್ರಕೃತಿಯ ಯಾವುದೋ ದುಷ್ಟ ಶಕ್ತಿಯಿಂದ ಆಗಿದೆಯೆಂದು ಭಾವಿಸಿ ಆ ದುಷ್ಟಶಕ್ತಿಯನ್ನು ನಿವಾರಿಸಲು ಅವುಗಳಿಗೆ ತೃಪ್ತಿ ಪಡಿಸುವುದು ಒಂದು ಬಗೆಯದರೆ, ಶರೀರ ಪ್ರಕೃತಿಯ ತಾಪಮಾನದಲ್ಲಿ ಉಂಟಾದ ಏರುಪೇರಿನಿಂದಾಗಿ ಜ್ವರ ಬರುವ ಸ್ಥಿತಿಯನ್ನು ತರ್ಕಿಸಿ, ಕಾರ್ಯಕಾರಣ ಸಂಬಂಧ ಕಲ್ಪಿಸಿ ಚಿಕಿತ್ಸೆ ಪಡೆಯುವುದು ಇನ್ನೊಂದು ಬಗೆಯಾಗಿದೆ. ಮೊದಲನೇ ತರ್ಕದಲ್ಲಿ ಕಾರ್ಯಕಾರಣ ಸಂಬಂಧಗಳ ಖಚಿತತೆ, ಪ್ರಾಯೋಗಿಕತೆಯಿಲ್ಲದ ಈ ಬಗೆಯ ನಂಬಿಕೆಯೆ ಮಾಟ ಮಂತ್ರಗಳ ಸೃಷ್ಟಿಗೆ ಕಾರಣವಾಗಿದೆ.

ಮಾಟ ಮಾಡುವ ವಿಧಾನ

ಮಾಟ ಮಾಡುವುದರಲ್ಲಿ ಎರಡು ಬಗೆಗಳಿವೆ. ಅವು ೧) ವೈಯಕ್ತಿಕ ಮಾಟ, ೨) ಸಾಮೂಹಿಕ ಮಾಟ. ಮೊದಲು ಈ ಸಮುದಾಯ ಮಾಟಮಂತ್ರಗಳ ಮಾಡುವ ಮಾಂತ್ರಿಕರಲ್ಲಿಗೆ ಹೋಗಿ ತಮಗಾಗಿರುವ ನೋವು, ಸಂಕಷ್ಟ, ರೋಗ, ಪರಿಹರಿಸಿಕೊಳ್ಳುತ್ತಿದ್ದರು. ಹಿಂದೆ ಈ ಕೆಲಸವನ್ನು ಛಲವಾದಿ ಸಮುದಾಯದ ಜನರೇ ಮಾಡುತ್ತಿದ್ದರು. ಆದರೆ ಇಂದು ಅವರ ಸಂಖ್ಯೆ ತುಂಬಾ ವಿರಳವಾಗಿ ಕಂಡು ಬರುತ್ತದೆ.

೫.೧೧ ಹವ್ಯಾಸಿ ವೃತ್ತಿಗಳು

ಈ ಛಲವಾದಿ ಸಮುದಾಯ ಜನ ವಿವಿಧ ಹವ್ಯಾಸಿ ವೃತ್ತಿಗಳನ್ನು ಅನುಸರಿಸಿಕೊಂಡು ಬಂದಿದೆ. ಕೆಲವರು ತಮ್ಮ ಬದುಕಿಗೆ ಅವಶ್ಯಕವಾಗಿ ಬೇಕೆನಿಸುವ ವೃತ್ತಿಗಳನ್ನು ಮಾಡುತ್ತಿದ್ದಾರೆ. ಬಿಡುವಿನ ವೇಳೆಯಲ್ಲಿ

ಇತರ ಬೇರೆ ಕೆಲಸ ಕೈಗೊಳ್ಳುವುದನ್ನು ಪ್ರವೃತ್ತಿ ಎಂದು ಕರೆಯಲಾಗುತ್ತದೆ. ಬದುಕಿನ ಮುಖ್ಯ ಉದ್ಯೋಗದ ಜೊತೆಗೆ ಹವ್ಯಾಸಕ್ಕಾಗಿ ಮಾಡುವ ಕೆಲಸ ಪ್ರವೃತ್ತಿಯುಳ್ಳವರು ಸಾಕಷ್ಟು ಜನ ಕಂಡುಬರುತ್ತಾರೆ. ಸುಗ್ಗಿ, ಶುಭ ಸಮಾರಂಭ, ಜಾತ್ರೆ, ಉತ್ಸವ, ಮೆರವಣಿಗೆ, ಮುಂತಾದ ಸಂದರ್ಭಗಳಲ್ಲಿ ವೃತ್ತಿಗಳ ಪ್ರದರ್ಶನ ಕಂಡು ಬರುತ್ತದೆ.

೫.೧೧.೧ ಬಯಲಾಟ

ಬಯಲಾಟ 'ಗಂಡು ಕಲೆ' ಎಂದೇ ಹೆಸರು ಪಡೆದಿದೆ. ಬಯಲಾಟ ಎಂದರೆ ಗ್ರಾಮದ ಬಯಲಿನಲ್ಲಿ ಪ್ರದರ್ಶಿಸುವ ಆಟಕ್ಕೆ ಬಯಲಾಟ ಎಂದು ಕರೆಯುತ್ತಾರೆ. ಬಯಲಾಟ ಮೂಲತಃ ದೈವಿ ಆರಾಧನೆಗಾಗಿ ಹುಟ್ಟಿಕೊಂಡಿರುವ ಆಟವಾಗಿದೆ. ಈ ಆಟ ಗ್ರಾಮ ದೇವತೆಯ ಗರ್ಭಗುಡಿಯಲ್ಲಿ ಹುಟ್ಟಿ, ಪಡಸಾಲೆಗೆ ಬೆಳೆದು, ಪ್ರಾಂಗಣಕ್ಕೆ ಬಂದು ನಂತರ ಬಯಲಲ್ಲಿ ನೆಲೆ ನಿಂತ ಮೇಲೆ ಬಯಲಾಟವಾಯಿತು. ಆದ್ದರಿಂದ ಬಯಲಿನಲ್ಲಿ ಆಡುವ ಆಟ ಬಯಲಾಟವೆನಿಸಿದೆ. ಸಂಸ್ಕೃತ ನಾಟಕಗಳಿಗಿಂತಲೂ ಪೂರ್ವದಲ್ಲಿ ಬಯಲಾಟಗಳಿದ್ದವು. ಶಿಷ್ಟ ಕಲೆಗಳಲ್ಲಿ ಜನಪದ ಕಲೆಯೇ ಮೂಲವಾಗಿದೆ. ಹಾಗಾಗಿಯೇ ಬಿ.ಎಂ.ಶ್ರೀ. "ಜನವಾಣಿ ಬೇರು, ಕವಿವಾಣಿ ಹೂ" ಎಂದು ಹೇಳಿದ್ದಾರೆ. ಬಯಲಾಟದಿಂದ ನಾಟಕ ಹುಟ್ಟಿಕೊಂಡಿತು. ಬಯಲಾಟದಿಂದಲೇ ಭರತನಾಟ್ಯ ಜನ್ಮತಳೆದದ್ದು ಎಂಬುದು ಭಾರತೀಯ ನಾಟ್ಯಶಾಸ್ತ್ರದ ಅಧ್ಯಯನದಿಂದ ತಿಳಿದುಬರುತ್ತದೆ ಎಂದು ಚೆನ್ನಣ್ಣ ವಾಲೀಕಾರ ಅಭಿಪ್ರಾಯಪಡುತ್ತಾರೆ"[೨] ಈ ಬಯಲಾಟ ಕೂಡ ಹವ್ಯಾಸಿ ವೃತ್ತಿಗಳಲ್ಲಿ ಒಂದಾಗಿದೆ. ಉತ್ತರ ಕರ್ನಾಟಕ ಭಾಗದ ಹಳ್ಳಿಗಳಲ್ಲಿ ಬಯಲಾಟ ಮಹತ್ವದ ರಂಗಭೂಮಿ ಆಟವಾಗಿದೆ. ಹಿಂದೆ ಈ ನಾಟಕಕ್ಕೆ ಮಹತ್ವದ ಸ್ಥಾನಮಾನಗಳಿದ್ದವು. ಈಗಲೂ ಕೆಲವು ಗ್ರಾಮಗಳಲ್ಲಿ ಇದರ ಸೊಗಡು ಉಂಟು. ಆದರೆ ದೂರದರ್ಶನ, ಚಲನಚಿತ್ರಗಳ ಪ್ರಭಾವದಿಂದ ಈ ಬಯಲಾಟಗಳು ಇನ್ನು ಮರೆಯಾಗುತ್ತಿವೆ. ಛಲವಾದಿ ಸಮುದಾಯದ ಹಳೆಯ ತಲೆಮಾರಿನ ಜನರು ಈ ಬಯಲಾಟವನ್ನು ಹಾಡುತ್ತಿದ್ದರು. ಗ್ರಾಮದ ಜಾತ್ರೆ, ಉತ್ಸವಗಳಲ್ಲಿ ಬಯಲಾಟವನ್ನು ಆಡುತ್ತಿದ್ದರು. ಇಂದು ಈ ಬಯಲಾಟವು ಈ ಸಮುದಾಯದಿಂದ ಕಣ್ಮರೆಯಾಗುತ್ತಿದೆ.

೫.೧೧.೨ ಹಂತಿಮೇಳ

"ಉತ್ತರಕರ್ನಾಟಕದ ಜನಪದ ಸಾಹಿತ್ಯದಲ್ಲಿ ಹಂತಿ ಹಾಡುಗಳಿಗೆ ವಿಶೇಷ ಸ್ಥಾನವಿದೆ. ಗ್ರಾಮೀಣ ಸಮಾಜದ ಪ್ರತಿಶತ ೯೭% ರಷ್ಟು ವಿವಿಧ ಕುಲಕಸುಬುಗಳ ಅಸಂಖ್ಯಾತ ಆಯಗಾರರು ಮತ್ತು ಛಲವಾದಿ ಸಮುದಾಯಗಳು ಹಂತಿ ಹೊಡೆಯುವ ಕೆಲಸ ಮಾಡುತ್ತಾ ಬಂದಿರುವರು. ಇಡೀ ರಾತ್ರಿಯೆಲ್ಲಾ ಹಂತಿ ಹೊಡೆಯುವ ಕೆಲಸ ಸಾಗುತ್ತದೆ. ಹಾಗಾಗಿ ಈ ಸಂದರ್ಭದಲ್ಲಿ ಹಂತಿ ಹಾಡು ಹೇಳುತ್ತಾ ಕೆಲಸ ಮಾಡಲಾಗುತ್ತದೆ. ಹಂತಿ ಹಾಡಿನಲ್ಲಿ ರೈತರ ಬದುಕಿನ ಸುಖ–ದುಃಖ, ಕೋಪ–ತಾಪ, ಶೌರ್ಯ–ಸಾಹಸ, ಪ್ರೇಮ–ಕಾಮ, ಪ್ರಣಯ, ಹಾಸ್ಯ, ವಿಡಂಬನೆ, ಚೆಲುವು, ನೆಲ–ಮುಗಿಲು, ಗಾಳಿ, ಗಿಡ–ಗಂಟೆ, ಸಸ್ಯ–ಮರ, ಎತ್ತು ಮತ್ತು ಇತರ ದನಕರು, ಊರ ದೇವತೆ, ಬಂದು–ಬಾಂಧವರು, ಪುರಾಣ, ರಾಮಾಯಣ,

ಮಹಾಭಾರತ, ಶಿವಶರಣರ ಚರಿತ್ರೆ– ಹೀಗೆ ಬದುಕಿನ ವಿವಿಧ ಅನುಭವಗಳನ್ನು ಬೇರೆ ಬೇರೆ ಧಾಟಿ, ಮಟ್ಟು, ಲಯಗಳಲ್ಲಿ ಹಾಡುತ್ತಾರೆ. ಅವನ್ನು ಹಂತಿ ಹಾಡುಗಳೆಂದು ಕರೆಯುತ್ತಾರೆ."[೩]

ಉತ್ತರ ಕರ್ನಾಟಕದ ಬಳ್ಳಾರಿ, ರಾಯಚೂರು, ಬೀದರ್, ಗುಲಬರ್ಗಾ, ಬಿಜಾಪುರ, ಬೆಳಗಾವಿ, ಧಾರವಾಡ, ಕಾರವಾರ, ಬಾಗಲಕೋಟೆ, ಹಾವೇರಿ ಮತ್ತು ಗದಗ ಭಾಗಗಳಲ್ಲಿ ಹಂತಿ ಹಾಡು ತನ್ನದೇ ಪರಂಪರೆಯನ್ನು ಹೊಂದಿದೆ. ಆದರೆ ಹಿಂದಿನ ಆಧುನಿಕ ಕಾಲದ ತಾಂತ್ರಿಕತೆಗಳು ಬಳಸಿಕೊಂಡು ಯಂತ್ರಗಳ ಮುಖಾಂತರ ರಾಶಿ ಮಾಡುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಸುಗ್ಗಿ ದಿನಗಳಲ್ಲಿ ಗ್ರಾಮಗಳಲ್ಲಿ ಹಬ್ಬದ ವಾತಾವರಣ ಕಂಡು ಬರುತ್ತಿತ್ತು.

"ಕರುಣೆ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ
ಕರುಣೆ ಕಲ್ಯಾಣ ಬಸವಣ್ಣ ಬೇಡೀನೋ
ಕಡಿತಾನ ಕಾಯೋ ಅಭಿಮಾನ"
"ಅಕ್ಕಿಹೂವಿನ ಸೀರಿ, ಲೆಕ್ಕವಿಲ್ಲದ ನೇರಿಗೆ
ಬಿಚ್ಚಿ ಹಾಕ್ಯಾಳೋ ಭೂಮ್ಯಾಗ । ನೀಲಮ್ಮ
ಒಕ್ಕಲಿಕ್ಕ್ಯಾಳೋ ಮೇಟ್ಯಾಗೋ ।"
"ಹಂತಿಯ ಹೂಡಟಿಗೆ ಹಡದವ್ವನ ನೆನಿಬೇಕಾ
ಹುಲಿಗೆಂಬ ಶಬುದ ನುಡಿಬೇಕಾ । ಹುಲಿಗೆಮ್ಮನ
ಪಾದಾಕಾ ಶರಣೆಂದು ನಡಿಬೇಕಾ ॥"
"ಹಪ್ಪಳ ಮಾಡಾಳ ಹದಹಾಕಿ
ಸೊಂಟ ಮುರುದಾನ ಕದಹಾಕಿ ॥"
"ಜಾತಿಯೊಳು ಮಾದರನು
ನೀತಿಯೊಳು ಶಿವಶರಣ । ಮಾತು
ವಚನಗಳು ಚನ್ನಯ್ಯ । ಶಿವನುಂಡ
ಕೂತು ಎದೆಯೊಳಗೆ ಅಂಬಲಿಯ"[೪]

ಹೀಗೆ ಮುಂತಾದ ಹಂತಿ ಹಾಡುಗಳನ್ನು ಛಲವಾದಿ ಸಮುದಾಯದವರು ಹಾಡುವುದನ್ನು ಕಾಣುತ್ತೇವೆ.

೫.೧೧.೩ ಚೌಡಕಿ ಮೇಳ

ಉತ್ತರ ಕರ್ನಾಟಕದ ಭಾಗದಲ್ಲಿ ಚೌಡಕಿ ಮೇಳದವರ ಒಂದು ಪರಂಪರೆನೇ ಕಂಡುಬರುತ್ತದೆ. ದೇವಾನುದೇವತೆಗಳನ್ನು ಹಾಡಿನ ಮೂಲಕ ಸ್ತುತಿಸುವರು. ಹೆಣ್ಣು ದೇವತೆಗಳ ಕುರಿತಾಗಿ ಹೆಚ್ಚು ಹಾಡುವ ಪರಿಪಾಟವಿದೆ. "ಸ್ತ್ರೀ ದೇವತೆಯ ಸೇವೆಗಾಗಿ (ಎಲ್ಲಮ್ಮ, ಹುಲಿಗೆಮ್ಮ) ದೀಕ್ಷೆ ಪಡೆದು ಕೊಡ ಹೊತ್ತುಕೊಂಡು ಚೌಡಕಿ ನುಡಿಸುತ್ತಾ ದೇವಿ ಕುರಿತು ಹಾಡುತ್ತ ಬರುವರನ್ನು ಚೌಡಕಿ ಮೇಳದವರೆಂದು ಕರೆಯುತ್ತಾರೆ. ಇವರು ಸಾಮಾನ್ಯವಾಗಿ ಐದು ಜನರಿರುತ್ತಾರೆ. ಇವರನ್ನು ದಕ್ಷಿಣ ಕರ್ನಾಟಕದಲ್ಲಿ

ಜೋಗಿಗಳೆಂದು ಕರೆಯುತ್ತಾರೆ. ಚೌಡಕಿಯವರು ಮೊದಲು ಗೊಂದಲಿಗರಂತೆ ಧಾರ್ಮಿಕ ಗಾಯಕರಾಗಿದ್ದರು. ಕಾಲಕ್ರಮದಲ್ಲಿ ಉಪಜೀವನದ ಸಲುವಾಗಿ ವೃತ್ತಿಗಾಯಕರಾಗಿದ್ದಾರೆ.

ಚೌಡಕಿಯವರು ಮುಖ್ಯವಾಗಿ ಎಲ್ಲಮ್ಮನ ಪುರಾಣ ಹಾಡುತ್ತಾರೆ. ನಿರೂಪಣೆಯಲ್ಲಿ ಗದ್ಯವೂ ಇರುತ್ತದೆ, ಕಾವ್ಯವೂ ಇರುತ್ತದೆ. ಇಂತಹ ಮೇಳಗಳು ಭರತ ಹುಣ್ಣಿಮೆಯ ಇಡೀ ರಾತ್ರಿ ನಡೆಯುವುದನ್ನು ಕಾಣಬಹುದು. ದಕ್ಷಿಣ ಕರ್ನಾಟಕದವರಿಗಿಂತ ಉತ್ತರಕರ್ನಾಟಕದ ಗಾಯಕರ ಹಾಡುಗಾರಿಕೆ ಹೆಚ್ಚು ಕಾವ್ಯಾತ್ಮಕವಾಗಿರುತ್ತದೆ. ಹಿಮ್ಮೇಳ-ಮುಮ್ಮೇಳಗಳ ಸಮೂಹ ಗೋಷ್ಠಿ ಸಂಮೋಹನವನ್ನೇ ಉಂಟುಮಾಡುತ್ತದೆ. ಈ ವೃತ್ತಿಗಾಯಕರ ಗೋಷ್ಠಿಗಳಿಗೆ ಇಂತಹುದೇ ಸ್ಥಳ ಇರಬೇಕೆಂಬ ನಿರ್ಬಂಧವಿಲ್ಲ. ಬಸ್‌ಸ್ಟ್ಯಾಂಡ್, ರೈಲ್ವೆ ನಿಲ್ದಾಣ, ಬೀದಿ ಹೀಗೆ ಎಲ್ಲೆಂದರಲ್ಲಿ ಚೌಡಕಿ ಗೋಷ್ಠಿ ನಡೆಯುವುದನ್ನು ಕಾಣುತ್ತೇವೆ. ಚೌಡಕೀ ಮೇಳಗಳು ಮೊದಲು ಧಾರ್ಮಿಕ ಹಾಗೂ ದೈವೀ ಆಚರಣೆಯ ಅಂಗವಾಗಿರುತ್ತಿದ್ದವು. ಕ್ರಮೇಣ ಅದನ್ನು ಕಲಾ ಪ್ರದರ್ಶನಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಚೌಡಕಿ ಪದಗಳಲ್ಲಿ ಎಲ್ಲಮ್ಮನ ಮೂಲ ಸ್ಥಾನ, ದಾಂಪತ್ಯ ಜೀವನ ಹಾಗೂ ವಿಘಟನೆ, ಆಕೆಯ ನೆಲೆಯಿಲ್ಲದ ಅಲೆದಾಟ, ಸಮಾಜದ ಕಾಕದೃಷ್ಟಿ, ಎಕ್ಕಯ್ಯ ಜೋಗಯ್ಯರೆಂಬುವರು ಸೇವೆಯಿಂದ ಆಕೆ ಪುನೀತಳಾದುದು ಇವೆಲ್ಲವೂ ನಿರೂಪಿತವಾಗಿವೆ"[೫]

ಹುಟ್ಟಿ ಬಂದಿ ಎಲ್ಲಮ್ಮನಾಗಿ ನಿನ್ನ ಮದುವೆಯ
ಮಾಡಿಕೊಟ್ಟರಲ್ಲ ಜಮದಗ್ನಿಗೆ
ರೇಣುಕಾರಾಜ ನಿನ್ನ ತಂದೆ ಮಾಯಾವತಿ ನಿನ್ನ ತಾಯಿ
....
ಹಾವಿನ ಸಿಂಬೀ ತಲಿಯಾಮ್ಯಾಲ ಮ್ಯಾಲಿನ ಕೊಡ ಅದರ ಮ್ಯಾಲ
ಪತಿಯ ಸೇವೆ ಮಾಡುತಲಿ ನೀರು ತರುತ ಅದರಲ್ಲಿ

ಇದಲ್ಲದೆ ಇನ್ನೂ ಅನೇಕ ಚೌಡಕಿ ಹಾಡುಗಳು ರೂಢಿಯಲ್ಲಿರುವುದು ಕಂಡುಬರುತ್ತದೆ. ಚೌಡಕಿ ಮೇಳಗಳು ಛಲವಾದಿ ಸಮುದಾಯದಲ್ಲಿ ಇತ್ತೀಚೆಗೆ ಕಣ್ಮರೆಯಾಗುತ್ತಿದೆ.

೫.೧೧.೪ ಕರಡಿ ಮಜಲು ಮೇಳ

ಜಿಲ್ಲೆಯ ಅತ್ಯಂತ ಜನಪ್ರಿಯ ಕಲೆ ಇದಾಗಿದೆ. ಇಂದು ಸಮಾಜದಿಂದ ಕಣ್ಮರೆಯಾಗಿದ್ದರೂ ಕೆಲವು ಗ್ರಾಮಗಳಲ್ಲಿ ಕರಡಿಮಜಲಿನ ಮೇಳದವರು ಸಿಗುತ್ತಾರೆ. ಹಲಗೆ, ಸನಾದಿ, ಶೃತಿ, ಚೌಗಾಡ, ತಾಳ, ಮುಂತಾದವು ಕರಡಿಮಜಲಿನ ವಾದ್ಯಗಳಾಗಿವೆ. ಇದೊಂದು ಮಂಗಳವಾದ್ಯವಾಗಿದ್ದು, ಇದು ಮದುವೆ, ಸೋಬಾನ, ಜಾತ್ರೆ, ಉತ್ಸವ, ಎತ್ತುಗಳ ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಪ್ರದರ್ಶನಗೊಳ್ಳುತ್ತದೆ. ಗದಗ ತಾಲೂಕಿನ ನೀಲಗುಂದ ಗ್ರಾಮದಲ್ಲಿ ಜಕ್ಕಮ್ಮನವರ (ವಯಸ್ಸು ೬೫ ವರ್ಷ) ಹಾಗೂ ಸಂಗಡಿಗರ ಕರಡಿಮಜಲಿನ ಮೇಳ ಪ್ರಸಿದ್ಧಗೊಂಡಿದೆ.

೫.೧೧.೫ ಶಹನಾಯಿ

ಛಲವಾದಿ ಸಮುದಾಯದಲ್ಲಿ ಶಹನಾಯಿ ವೃತ್ತಿಗಾರರು ಕಂಡುಬರುತ್ತಾರೆ. ಮದುವೆ, ಜಾತ್ರೆ-ಉತ್ಸವ, ಕುಂಕುಮ ಕಾರ್ಯ, ಕುಬುಸದ ಕಾರ್ಯ, ಅಂಬೇಡ್ಕರ್ ಜಯಂತಿಯಂದು ಮೆರವಣಿಗೆಯಲ್ಲಿ ಪಾಲ್ಗೊಂಡು ವಾದ್ಯ ನುಡಿಸುತ್ತಾರೆ. ಶಹನಾಯಿ ಇದೊಂದು ಅಪರೂಪದ ವಾದ್ಯ. ಸಮುದಾಯದ ಅನನ್ಯತೆಯ ಸಂಕೇತವಾದ ಇದು ಇಂದು ಸಮುದಾಯದಿಂದ ದೂರವಾಗುತ್ತಿದೆ. ಕಾರಣ ಪಾರಂಪರಿಕವಾಗಿ ಒಂದು ವೃತ್ತಿಯಾಗಿದ್ದ ಇದು ಸಮುದಾಯದ ಹಿರಿಯರಿಗೆ ಮಾತ್ರ ಸೀಮಿತವಾಗಿದೆ. ಯುವ ಸಮುದಾಯ ಇವುಗಳ ಕಡೆಗೆ ಆಸಕ್ತಿ ವಹಿಸುತ್ತಿಲ್ಲ. ಉತ್ಸವಗಳಂಥ ಮಹತ್ವದ ಕಾರ್ಯಗಳಲ್ಲಿ ಇಂತಹವುಗಳ ಬಳಕೆ ಈಗಲೂ ಇದೆ.

೫.೧೧.೬ ಗೀಗೀ ಪದ ಮೇಳ

ಜನಪದ ಸಾಹಿತ್ಯದ ಜನಪ್ರಿಯ ಪ್ರಮುಖ ಪ್ರಕಾರಗಳಲ್ಲಿ 'ಗೀಗೀ-ಲಾವಣಿ'ಗಳಿಗೆ ಅಗ್ರಸ್ಥಾನವಿದೆ. ಇದರ ಪ್ರಮುಖ ಪ್ರಕಾರ 'ಹರದೇಶಿ ಮತ್ತು ನಾಗೇಶಿ' ಹಾಡುಗಳು. ಎರಡು ಪಕ್ಷಗಳ ನಡುವೆ ಪರಸ್ಪರ ವಾದ-ವಿವಾದದಲ್ಲಿಯೇ ಈ ಹಾಡುಗಳು ಜೀವಕಳೆ ತುಂಬಿಕೊಳ್ಳುತ್ತವೆ. ಜನರಲ್ಲಿ ಕುತೂಹಲ ಕೆರಳಿಸಿ ಮನರಂಜಿಸುವಲ್ಲಿ ಇವುಗಳಿಗೆ ಅದರದೇ ವಿಶೇಷತೆ ಇವೆ. ಶಿವ-ಶಕ್ತಿ, ಪುರುಷ-ಪ್ರಕೃತಿಗಳ ಹಿನ್ನೆಲೆಯಲ್ಲಿ ಗಂಡು-ಹೆಣ್ಣು, ಬೀಜ-ಭೂಮಿಗಳಾಗಿ ತಾವೇ ಹೆಚ್ಚೆಂದು ಎರಡೂ ಪಕ್ಷಗಳು ಸವಾಲ್-ಜವಾಬ್ ರೂಪದಲ್ಲಿ ವಾದ ಮಂಡಿಸುತ್ತ ಪರಸ್ಪರ ಹೆಣೆದುಕೊಂಡಿರುತ್ತವೆ. ಗಂಡಿನ ಪಕ್ಷವಹಿಸಿ ಹಾಡುವವರಿಗೆ ಹರದೇಶಿವರೆಂದೂ ಹೆಣ್ಣಿನ ಮಹಿಮೆಯನ್ನು ಸಾರುವವರಿಗೆ ನಾಗೇಶಿಯವರೆಂದು ಸಂಬೋಧಿಸುತ್ತಾರೆ. ಶಿರಪೇಟ (ಆಭರಣ) ತೊಡುವ ಹರದೇಶಿ ಪಕ್ಷಕ್ಕೆ 'ತುರಾಯಿ' ಎಂದೂ ಹೆಂಗಸರ ಆಭರಣ (ದಂಡಿ) ಹಾಕುವ ನಾಗೇಶಿ ಪಕ್ಷಕ್ಕೆ 'ಕಲ್ಗಿ' ಎಂದೂ ಕರೆಯುವರು. 'ಕಲ್ಗಿತುರಾ' ಎಂಬುದು ಅನ್ಯದೇಶೀಯ ಪದಗಳಾಗಿದ್ದು ಮಹಮ್ಮದೀಯರ ಆಳ್ವಿಕೆಯಲ್ಲಿ ಬಳಕೆಯಲ್ಲಿ ಬಂದಂತೆ ತೋರುತ್ತದೆ.

ಈ ಭಾಗದ ದೊರೆಗಳು ಕನ್ನಡಿಗರೂ, ಮಹಮ್ಮದಿಯರೂ ಆಗಿದ್ದುದರಿಂದ ಬಹುಶಃ ಗೀಗೀ ಪದ ಕನ್ನಡದಿಂದಲೇ ಮರಾಠಿಗೆ ಹೋಗಿರುವ ಸಾಧ್ಯತೆ ಹೆಚ್ಚಾಗಿರುವಂತೆ ಕಾಣುತ್ತದೆ. ಪರ್ಶಿಯನ್ ಸಂಪರ್ಕದ ಹಳಮೆ ಕನ್ನಡಿಗರಿಗಿದ್ದಷ್ಟು ಮರಾಠಿಗರಿಗೆ ಇರಲಿಲ್ಲ. ಗೀಗೀಯಲ್ಲಿ ಬಳಕೆಯಾಗುವ 'ಕಲ್ಗಿತುರಾಯಿ', ಶಾಹಿರಿಕಿ, ದಪಗಾನೆ ಮುಂತಾದ ಪಾರಿಭಾಷಿಕ ಪದಗಳು ಪರ್ಶಿಯನ್ ಮೂಲದವವಾಗಿವೆ. ಕನ್ನಡದಲ್ಲಿ ಗೀಗೀ ಪದ ಸಮೃದ್ಧವಾಗಲು ಮುಸ್ಲಿಂ ಕವಿಗಳು ಹೆಚ್ಚಾಗಿ ಭಾಗಿಗಳಾಗಿರಲು ಸಾಧ್ಯವಾಗಿರಬೇಕು.

ಗೀಗೀ ಪದ ಅಕ್ಬರನ ಕಾಲದಲ್ಲಿ ಮತ್ತು ಪೇಶ್ವೆಗಳ ಅವಧಿಯಲ್ಲಿ ತನ್ನ ಬಲ ಸಂವರ್ಧನೆ ಮಾಡಿಕೊಂಡಿತು. ಇಂದಿಗೂ ಕೂಡ ಮುಸ್ಲೀಂ ಸಂತರು ಕೆಲ ನಿಗದಿತ ದಿನದಂದು ಕೈಯಲ್ಲಿ ಡಪ್ಪ, ಕೆಲವರು ದೊಡ್ಡ ಕಂಜರವನ್ನು ಹಿಡಿದುಕೊಂಡು ಶಾಹಿರಿ ಹಾಡುತ್ತ ಮನೆಮನೆಗೆ ಭಿಕ್ಷೆ ಬೇಡಿ ಬರುತ್ತಾರೆ. ಇವರ ಮುಖ್ಯ ಉದ್ದೇಶ ತತ್ವ ಪ್ರಚಾರ ಮಾಡುವುದೇ ಆಗಿದೆ. 'ಶಾಹಿರುಕಿಗಾನಾ', ಕಲ್ಗಿ ತುರಾಯಿ,

ಸವಾಲ್-ಜವಾಬ್ ಎಂಬ ಪಾರಿಭಾಷೆ ಪದಗಳು ಉರ್ದು ಪದಗಳೇ ಆಗಿವೆ. ಗೀಗೀ ಪದ ಹೆಚ್ಚು ಪ್ರಚಾರದಲ್ಲಿರುವ ಬೆಳಗಾವಿ, ವಿಜಾಪುರ, ಗುಲಬರ್ಗಾ, ಬೀದರ ಮುಸ್ಲಿಂ ಆಳ್ವಿಕೆಯ ಪ್ರದೇಶಗಳಾಗಿದ್ದವು. ಈ ಗಾಯನ ಪರಂಪರೆಯಲ್ಲಿ ಮುಸ್ಲಿಂ ಕವಿಗಳು ಹೆಚ್ಚು ಆಸಕ್ತರಾಗಲು ಇದು ಕಾರಣವಿರಬೇಕು. 'ಜೀ' ಎನ್ನುವುದು ಸೊಲ್ಲು ಪದವಾಗಿ ಬಳಕೆಯಾಗುತ್ತದೆ. ಅಲ್ಲದೆ 'ಜೀ ಹುಜೂರ್' 'ಜೀ' 'ಹಾ' ದುಗುಣ ಖ್ಯಾಲ ಎನ್ನುವ ಪದಗಳನ್ನು ಗಮನಿಸಿದಾಗ ಗೀಗೀ ಮೇಲಾಗಿರುವ ಉರ್ದುವಿನ ಪ್ರಭಾವ ಗ್ರಹಿಕೆಗೆ ಬರುತ್ತದೆ. ಹಾಗೆಯೆ ಹಾಡಿನ ಸೃಷ್ಠಿ ಕೂಡ ವಿಪುಲವಾಗಿ ಈ ಪ್ರದೇಶದಲ್ಲಿಯೇ ಕಂಡು ಬರುತ್ತದೆ.

ಜಾತ್ರೆ, ಉತ್ಸವ, ಹಬ್ಬ-ಹರಿದಿನ, ಸಭೆ-ಸಮಾರಂಭಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳಲ್ಲಿ ಒಂದಕ್ಕಿಂತ ಹೆಚ್ಚು ಮೇಳಗಳನ್ನು ಕರೆಸಲಾಗುತ್ತದೆ. ಗ್ರಾಮದ ನಾಯಕರು ಎಲೆ-ಅಡಿಕೆ, ಕುಂಕುಮ, ಅರಿಶಿನ, ತೆಗೆದುಕೊಂಡು ಗೀಗೀ ಪದ ಮೇಳದವರನ್ನು ಭೇಟಿ ಮಾಡುತ್ತಾರೆ. ಶುಭ ಸಮಾರಂಭ ನಡೆಯುವ ವಾರ-ದಿನಾಂಕದಂದು ಗೀಗೀ ಮೇಳ ನಡೆಸಿಕೊಡಲು ಅವರನ್ನು ಕೇಳಿಕೊಳ್ಳುತ್ತಾರೆ. ಅವರಿಗೆ ಒಪ್ಪಿಗೆಯಾದ ದಿನಾಂಕಗಳಿದ್ದರೆ ವೀಳ್ಯ ಸ್ವೀಕರಿಸುತ್ತಾರೆ, ಇಲ್ಲದಿದ್ದರೆ ಇಲ್ಲ. ಗೀಗೀ ಮೇಳದವರ ಸಂಭಾವನೆ, ಹೋಗಿ-ಬರುವ ಖರ್ಚು ಕೊಟ್ಟು ಬರಲು ಕರೆ ನೀಡಲಾಗುತ್ತದೆ. ಜಿಲ್ಲೆಯ ಛಲವಾದಿ ಸಮುದಾಯದಲ್ಲಿ ಗೀಗೀ ಪದ ಹಾಡುವರಿದ್ದಾರೆ. ಇವರಲ್ಲಿ ಗದಗ ತಾಲೂಕಿನ ನೀಲಗುಂದ ಗ್ರಾಮದ ಜಕ್ಕಮ್ಮನವರ ಹಾಗೂ ಗದಗ ತಾಲೂಕಿನ ಕುರ್ತಕೋಟಿ ಗ್ರಾಮದ ಬಸವರಾಜ ಶಿವಗಂಗವ್ವ ಜಕ್ಕಮ್ಮನವರ ನಾಗರಾಜ ನೀಲಪ್ಪ, ಶಿವಪುತ್ರಪ್ಪ ದುರುಗಪ್ಪ ಕಾಳಿ, ಮನೋಹರ ಮಲಕಪ್ಪ ಜಕ್ಕಮ್ಮನವರ ಪ್ರಮುಖ ಗಾಯಕರಾಗಿದ್ದಾರೆ. ಇವರು ಪಡೆಯುವ ಹಣ ತುಂಬಾ ಕಡಿಮೆ ಇದೆ. ಗ್ರಾಮಗಳ ಜಾತ್ರೆ ಸಮಯದಲ್ಲಿ ಭಕ್ತಿಸೇವೆಗಾಗಿ ಅವರು ಐದು ಆರು ಸಾವಿರ ಹಣ ಪಡೆಯುತ್ತಾರೆ. ಉಳಿದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಹಣವನ್ನು ಪಡೆಯುತ್ತಾರೆ. ಇವು ಯಾವವೂ ಕಾರ್ಯಕ್ರಮ ಇಲ್ಲದಿದ್ದಾಗ ಕೃಷಿ ಕೂಲಿ ಮಾಡಿ ಜೀವನ ಸಾಗಿಸುತ್ತಾರೆ.

೫.೧೧.೭ ಭಜನೆ ಮೇಳ

ಪ್ರತಿಯೊಂದು ಗ್ರಾಮಗಳಲ್ಲಿ ಭಜನೆ ಮೇಳ ಕಂಡುಬರುತ್ತದೆ. ಕೆಲವರು ಹವ್ಯಾಸಕ್ಕಾಗಿ ಭಜನೆ ಮಾಡಿದರೆ, ಮತ್ತೆ ಕೆಲವರು ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಭಜನೆ ಪದಗಳು ಸತ್ಯದ ನೆಲೆಯಲ್ಲಿ ಬದುಕನ್ನು ಸಾಗಿಸಬೇಕು ಎಂಬ ಸಂದೇಶವನ್ನು ನಿರಂತರವಾಗಿ ಸಾರುತ್ತವೆ. ಭಜನೆ ಎಂದರೆ ಸ್ತೋತ್ರ, ಪೂಜೆ, ದೇವರನ್ನು ಸ್ಮರಿಸುವುದು, ದೇವರನ್ನು ಭಜಿಸುವುದು ಎಂದೆನ್ನಬಹುದು. 'ಭಜನೆ' ಎಂಬ ಪದ 'ಭಜ್' ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿದೆ. ಇದರ ಅರ್ಥ ದೇವರನ್ನು ಸ್ತುತಿಸು, ಪೂಜಿಸು, ಪ್ರಾರ್ಥಿಸು, ಎಂದಿದೆ. ಭಜನೆಯಲ್ಲಿ ನಾನಾ ಪ್ರಕಾರಗಳಿವೆ. ೧) ಏಕತಾರಿ ಭಜನೆ, ೨) ಸಂತರ ದಿಂಡಿ ಭಜನೆ, ೩) ಸಂಗೀತ ಭಜನೆ (ಶಿವ ಭಜನೆ), ೪) ಪಾರಿಜಾತ ಭಜನೆ ಮುಂತಾದವು. ದಮ್ಮಡಿ, ಹಾರ್ಮೋನಿಯಂ, ತಬಲಾ, ತಾಳ, ಗುಂಡುತಾಳ, ಡಕ್ಕೆ, ಗೆಜ್ಜೆ, ಡಪ್ಪೆ ಮೊದಲಾದವು ಭಜನೆಯ ಪ್ರಮುಖ ವಾದ್ಯಗಳಾಗಿವೆ. ಈ ಭಜನೆ ಮೇಳದಲ್ಲಿ ಹನ್ನೆರಡರಿಂದ ಹದಿನೈದು ಜನರಿರುತ್ತಾರೆ.

ಪ್ರತಿವರ್ಷ ಶ್ರಾವಣ ತಿಂಗಳಿನಲ್ಲಿ ಛಲವಾದಿಯ ಜನ ಭಜನೆ ಮಾಡುತ್ತಾರೆ. ಇದರಲ್ಲಿ ಸಮುದಾಯದ ಜನರೆಲ್ಲ ಪಾಲ್ಗೊಳ್ಳುತ್ತಾರೆ. ಇದನ್ನು ಬಿಟ್ಟರೆ ಹುಣ್ಣಿಮೆ-ಅಮವಾಸ್ಯೆ, ದೇವರ ಉತ್ಸವ-ಜಾತ್ರೆ, ಮರಣ, ಜನ್ಮದಿನ, ಪುಣ್ಯತಿಥಿ, ಮಹಾಶಿವರಾತ್ರಿ, ಶುಭದಿನದಂದು ಭಜನೆ ಮಾಡಲಾಗುತ್ತದೆ. ಯಾರಿಗಾದರೂ ಆಕಸ್ಮಿಕ ಹಾವು ಕಚ್ಚಿದಾಗ ನಿದ್ದೆ ಹೋಗಲಾಡಿಸಲು ಭಜನೆ ಮಾಡಿ ಇಡೀ ರಾತ್ರಿ ಜಾಗರಣೆ ಮಾಡಿಸುತ್ತಾರೆ. ಭಜನೆಗೆ ಬರಲು ಬೇರೆ ಗ್ರಾಮದವರಿಗೆ ತಿಳಿಸಿದರೆ ಅವರಿಗೆ ಭಕ್ತಿಸೇವೆಯಂತೆ ಒಂದುನೂರಾ ಒಂದು ರೂಪಾಯಿ, ಒಂದುನೂರಾ ಎರಡು ರೂಪಾಯಿಗಳನ್ನು ಕೊಡುತ್ತಾರೆ. ಪ್ರಸಿದ್ಧವಾದ ಭಜನೆಮೇಳಗಳು ಎರಡರಿಂದ ಮೂರೂವರೆ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಜನೆ ಮಾಡುತ್ತಾರೆ. ಕಾಯಕ್ರಮಗಳು ಹೆಚ್ಚಾಗಿ ರಾತ್ರಿ ಸಮಯದಲ್ಲಿರುವುದರಿಂದ ಮತ್ತೆ ಮುಂಜಾನೆ ಅವರ ಮೂಲ ಕೆಲಸಕ್ಕೆ ಹೋಗುತ್ತಾರೆ. ಇಲ್ಲಿಯವರೆಗೆ ಈ ಕಲಾವಿದರಿಗೆ ಸರ್ಕಾರದ ಯಾವುದೇ ಸೌಲಭ್ಯಗಳು ಪಡೆದುಕೊಳ್ಳಲು ಸಾಧ್ಯವಾಗಿಲ್ಲ.

ಜಿಲ್ಲೆಯ ಪ್ರಮುಖ ಭಜನಾ ಮೇಳಗಳು

೧) ಹೊಳೆಅಡಲಗಿ : ಯಲ್ಲಪ್ಪ ಈರಪ್ಪ ದೊಡಮನಿ ಮಾಸ್ತರರು ಹಾಗೂ ಸಂಗಡಿಗರು.

೨) ನೀಲಗುಂದ : ಅಂಬೇಡ್ಕರ್ ಕಲಾತಂಡ, ದುರ್ಗಾದೇವಿ ಭಜನಾ ತಂಡ, ಎಚ್.ಎಫ್. ದೊಡ್ಡಹನಮಂತಪ್ಪ, ಹುಲೇರಪ್ಪ ನಿಂಗಪ್ಪ ಜಕ್ಕಮ್ಮನವರ, ಶಿವಪ್ಪ ನಾಗಪ್ಪ ಕಾಳೆ, ಹುಚ್ಚಪ್ಪ ನೀಲಪ್ಪ ಕಾಳೆ, ಕಲ್ಮೇಶ ನಿಂಗಪ್ಪ ಕಾಳೆ, ಫಕ್ಕೀರಪ್ಪ ನಿಂಗಪ್ಪ ಬಸವರಾಜ ಮಹದೇವಪ್ಪ, ನೀಲಪ್ಪ ನಿಂಗಪ್ಪ

೩) ಕುರ್ತಕೋಟಿ : ವೀರುಪಾಕ್ಷ ಗೂರನ್ನವರ ಹಾಗೂ ಸಂಗಡಿಗರು.

೪) ಮೆಣಸಗಿ : ಎಲ್ಲಪ್ಪ ಈರಪ್ಪ ದೊಡಮನಿ, ಈರಪ್ಪ ಚನ್ನಪ್ಪ ಛಲವಾದಿ ಹಾಗೂ ಸಂಗಡಿಗರು

೫) ಗಾಡಗೋಳಿ : ಬಸವರಾಜ ದೊಡಮನಿ, ಮಹಾದೇವಪ್ಪ ಛಲವಾದಿ ಹಾಗೂ ಸಂಗಡಿಗರು.

ಹೀಗೆ ಜಿಲ್ಲಾದ್ಯಂತ ಇನ್ನೂ ಹಲವು ಸಣ್ಣ-ಪುಟ್ಟ ಭಜನಾ ಮೇಳಗಳಿವೆ.

ಭಜನೆ ಪದಗಳು

ಶಿಶುನಾಳ ಷರೀಫರ ಪದ, ಬಬಲಾದಿ ಚಿಕ್ಕಪ್ಪನ ಪದ, ಹೇಮರೆಡ್ಡಿ ಮಲ್ಲಮ್ಮ, ಪುಟ್ಟರಾಜ ಗವಾಯಿ, ಮೈಲಾರಲಿಂಗ, ಯಲ್ಲಮ್ಮ, ಮೆಣಸಗಿ ಲಿಂಗಬಸವದೇವ ಮುಂತಾದವರ ಚರಿತ್ರೆ ಹಾಗೂ ಆದರ್ಶಜೀವನ, ಆದರ್ಶ ಕುಟುಂಬ, ದಾಂಪತ್ಯ ಜೀವನ, ಸಾಮಾಜಿಕ ರೋಗ-ರುಜಿನ ಮುಂತಾದ ಬಗ್ಗೆ ಹಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದ ಸಂವಿಧಾನ ಬರೆದ ಬಿ. ಆರ್. ಅಂಬೇಡ್ಕರ್‌ರ ಚರಿತ್ರೆ ಮತ್ತು ಅವರು ಮಾಡಿದ ಸಾಧನೆ ಕುರಿತು ಹಾಡಲಾಗುತ್ತದೆ. ಬುದ್ಧ, ಬಸವ ಅವರ ಮುಂತಾದ ಸಮಾನತೆ ವಿಚಾರ ಕುರಿತು ಹಾಡುಗಳನ್ನು ಹಾಡುತ್ತಾರೆ.

ಮಾನವ ಜನ್ಮ ದೊಡ್ಡದು ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ,
ಕಣ್ಣು ಕೈ ಕಾಲ್ ಕಿವಿಗೆ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಳಾಗುವರೆ
ಹೆಣ್ಣು ಮಣ್ಣಿಗಾಗಿ ಹರಿನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ ॥

ಹೆಣ್ಣ, ಮಣ್ಣಿನ ಬಗ್ಗೆ ಹೀಗೆ ಹೇಳುತ್ತಾ-

ಕುಸುಮದೊಳು ಗಂಧವೋ, ಗಂಧದೊಳು ಕುಸುಮವೋ ।
ಕುಸುಮ-ಗಂಧಗಳೆರಡೂ ಪ್ರಾಣದೊಳಗೋ ।
ಅಸಮಭವ ಕಾಗಿನೆಲೆಯಾದಿ ಕೇಶವರಾಯ
ಉಸುರಲೆನಳವಲ್ಲ ಎಲ್ಲ ನಿನ್ನೊಳಗೋ ॥

ಹೀಗೆ ದಾಂಪತ್ಯದ ಬಗ್ಗೆ ಪರಸ್ಪರ ಹೂವಿನಲ್ಲಿ ಗಮಿಸುವ ಸುಗಂಧದಂತೆ ಜೀವನ ಸಾಗಿಸಬೇಕೆಂದು ಹೇಳುತ್ತಾರೆ. ಅಲ್ಲದೆ

ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ....

ಎಂದು ಜಾತಿ-ಮತ-ಪಂಥಗಳಲ್ಲಿ ಇರುವ ತಾರತಮ್ಯತೆಯನ್ನು ಹೇಳುತ್ತಾ ಇರುವುದೊಂದೇ ಕುಲ, ಅದು ಮಾನವ ಕುಲ, ಅದನ್ನು ಬಿಟ್ಟು ಆ ಜಾತಿ, ಈ ಜಾತಿ, ಆ ಮತ-ಈ ಮತ ಎಂದು ಹೊಡೆದಾಡಿಕೊಂಡು ಏಕೆ ಸಾಯುತ್ತೀರಿ ಎಂದು 'ಕುಲ'ದ ನೈತಿಕತೆ ಸಾರಲಾಗಿದೆ.

ಯಾರಿಗೆ ಯಾರಿಲ್ಲ ಎಲೆ ಮನವೇ ಇದು
ಮೂರು ದಿನದ ಸಂತೆ ಎಲೆ ಮನವೇ
ಸೇರಿದವರ ಮುಂದೆ ಜಾರಿ ಬಿದ್ದಂತೆ ನೀನು
ಹರಟೆಗೆ ಹೋಗಬೇಡ ಎಲೆಮನವೇ ॥
ಕಳ್ಳತನ ಮಾಡಬೇಡ ಎಲೆ ಮನವೇ ।
ನೀನು ಸುಳ್ಳೊಂದು ಹೇಳಬೇಡ ಎಲೆ ಮನವೇ
ಬಲ್ಲಂತ ಹಿರಿಯರು ಹೇಳಿದ ಈ ಮಾತು
ಅಲ್ಲಂತ ಹೇಳಬೇಡ ಎಲೆ ಮನವೆ ॥

ಸುಳ್ಳು-ಮೋಸ, ಕಳ್ಳತನ ಮಾಡದೆ ಗುರು-ಹಿರಿಯರು ತೋರಿದ ಸನ್ಮಾರ್ಗದಲ್ಲಿ ನಿಷ್ಠೆಯಿಂದ ಬದುಕು ಸಾಗಿಸುವ ಮನಸ್ಸನ್ನು ಹೊದಿರಬೇಕು. ಇಲ್ಲದಿದ್ದರೆ ಜೀವನ ಹಾಳಾಗುತ್ತದೆ ಎಂದು ಈ ಪದ ಹೇಳಿದೆ.

ಈ ರೀತಿ ಭಜನೆ ಹಾಡುಗಳು ಮನುಷ್ಯನ ಬುದ್ಧಿಯನ್ನು ತಿದ್ದುತ್ತವೆ, ಉತ್ತಮ ವ್ಯಕ್ತಿಯಾಗಲು ಉತ್ತೇಜಿಸುತ್ತವೆ.

ಎಂಥ ಬಲ್ಲಿದ ಗುರು ದೊರೆತ । ಎನ್ನ
ಕರಣದಲ್ಲಿ ಬೋಧಿಸಿ ಹೊಳಿಯ ದಾಟಿಸಿದ ॥
ಸಾರವಡಿದುದ ಸುಳ್ಳನಾಗಿ ಬರುವುದು ಹಳ್ಳ
ಮಂತರ ಜಪದಿಂದೆ ಅಂತರಿಂದ ನನ್ನ ಒದ್ದು ॥
ಈಸಿ ಮುಳುಗುವುದು ದೇಹ
ಸೋತು ಹೋದವು ಕೈಯ ॥

ಹಿರಿಯೊಳು ದಂಡಿಲಿ ಮೆರೆಯುವ ಕಾವನಳ್ಳಿ
ಬಸವನ ದಯದಿಂದ ಶಿಶುವಿನ ಉಳಿಸಿದ ॥

ಹೀಗೆ ಗುರುವಿನ ಬಗ್ಗೆ ಈ ಹಾಡಿನಲ್ಲಿ ಹೇಳಲಾಗುತ್ತದೆ.

೫.೧೧.೮ ಕೊಂಬು-ಕಹಳೆ ಊದುವುದು

"ಕೊಂಬುಗಳು ಕರೆದಾಗ । ಕಾಳಿಗಳು ಊದ್ಯಾವ
ದಿಮ್ಮಿ ಕರಡೆಲ್ಲ ಕಣಿ ಕಣಿಸಿ-ನಿಬ್ಬಣದ
ಅಬ್ಬರ ಸಂಭ್ರಮ ಕೇಳ್ಯಾವ ।"[೨]

ಕೊಂಬು, ಕಹಳೆ ಮೊದಲಾದ ಗಾಳಿ ವಾದ್ಯಗಳನ್ನು 'ಸಿಂಗ', ಕಾಳಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. 'ಕಲಂಗ'ದ ತದ್ಭವ 'ಸಿಂಗ', 'ಸಿಂಗಿ' ಆಗಿದೆ. ಪ್ರಾಚೀನ ಕಾಲದಿಂದ ಕಹಳೆಯ ಬಳಕೆ ಇತ್ತು. ಅನೇಕ ಸಂದರ್ಭಗಳಲ್ಲಿ ಕಹಳೆಯೂದುತ್ತಿದ್ದರು. 'ಕಿತ್ತೂರಿನ ಕಾಳಗ' ಎಂಬ ಗ್ರಂಥದಲ್ಲಿ 'ಹಿಡಿಯೋ ಮೋಜಿನ ಕಾಳಿಯ' ಎಂಬ ಜನಪದ ಗೀತೆಗಳಲ್ಲಿ ಚಿಕ್ಕಾಳಿ, ಚಿನಿಕಾಳಿ, ಎಚ್ಚರಂಗಿ ಕಾಳಿ, ಬಿರುದಿನ ಕಾಳಿ, ಹೆಗ್ಗಾಳಿ, ಜೋತುಕಾಳಿ, ಮೋಜಿಕಾಳಿ ಎಂದು ಒಟ್ಟು ಹದಿನಾಲ್ಕು ತರಹದ ನಾದಗಳನ್ನು ಕಹಳೆಯಲ್ಲಿ ಊದುತ್ತಿದ್ದರು ಎಂಬ ಸುಳಿವು ದೊರೆಯುತ್ತದೆ. 'ಸಿಂಗರಾಜ ಪುರಾಣ'ದಲ್ಲಿ 'ಧಾರೆಗಹಳೆ' ಬಗ್ಗೆ 'ಸೊಬಗಿನ ಸೋನೆಯಲ್ಲಿ' ಜಾವಗಹಳೆಯ ಬಗ್ಗೆ ಉಲ್ಲೇಖವಿದೆ. 'ಚೆನ್ನಬಸವ ಪುರಾಣ'ದಲ್ಲಿ ಬರಗುಗಹಳೆ, ಪಟುಗಹಳೆ, ಕೊಂಬು ಕಹಳೆ, ಪೊಂಗಹಳೆ ಬಗ್ಗೆ ಪ್ರಸ್ತಾಪಿಸಲಾಗಿದೆ.

ಛಲವಾದಿ ಕಹಳೆ ಊದುವವರು ರಾಜಮಹಾರಾಜರ ಹತ್ತಿರ ರಣಕಹಳೆ ಊದುವವರು ಕಡ್ಡಾಯವಾಗಿರುತ್ತಿದ್ದರು. ಶತ್ರುಗಳು ತಿಳಿಯದಂತೆ ನುಸುಳುತ್ತಿರುವಾಗ ಸೈನಿಕರಿಗೆ ಎಚ್ಚರಿಕೆ-ಸೂಚನೆ ನೀಡಲು ಈ ಕಹಳೆಯನ್ನು ಊದಲಾಗುತ್ತಿತ್ತು. ಇದು ಯುದ್ಧ ಸನ್ನದ್ಧತೆಗೆ ಸಂಕೇತವಾಗಿತ್ತು. ಸೈನಿಕರಿಗೆ ಸ್ಫೂರ್ತಿ ನೀಡುವ ನಾದ ಈ ಕಹಳೆಯಿಂದ ಹೊರಬರುತ್ತದೆ.

ಇತಿಹಾಸ ಪ್ರಸಿದ್ಧ ಒನಕೆ ಓಬವ್ವಳ ಪತಿ ಮುದ್ದುಹನುಮಪ್ಪ ಚಿತ್ರದುರ್ಗ ನಾಯಕರ ಬಳಿ ಕಹಳೆ ಊದುವವನಾಗಿ ಕೆಲಸ ಮಾಡುತ್ತಿದ್ದನು. ಹಿಂದೆ ಬೇಟೆಯಾಡುವಾಗ 'ಹುಲಿಗಹಳೆ' ಊದಿ ಹುಲಿಯನ್ನು ಎಬ್ಬಿಸುತ್ತಿದ್ದರು. ಪ್ರತಿಷ್ಠೆಯ ಸಂಕೇತವಾಗಿ ಬಿದುರಿನ ಕಹಳೆ ಊದುತ್ತಿದ್ದರು. ಸಮಯವನ್ನು ತಿಳಿಸುವುದಕ್ಕಾಗಿ ಜಾವಗಹಳೆಯನ್ನು ಊದುತ್ತಿದ್ದರು.

ಈ ಕಹಳೆಯನ್ನು ಹಿತ್ತಾಳೆ ತಾಮ್ರದಿಂದ ತಯಾರು ಮಾಡಲಾಗುತ್ತದೆ. ಬಿಲ್ಲಿನಾಕಾರದಲ್ಲಿರುವ ಈ ಕಹಳೆಗೆ ಎಂಟು ಗೇಣಿನವರೆಗೆ ಕೊಂಬುಗಳಿದ್ದು ಕೊಂಬಿನ ಆರಂಭದಲ್ಲಿ ಗದ್ದಿಗೆ ಇರುತ್ತದೆ. ಇದನ್ನು ಊದಿದಾಗ ನಾದ ಹೊರಹೊಮ್ಮುತ್ತದೆ. ಎಂಟು ಗೇಣಿನ ಕೊಂಬಿಗೆ ಐದು ಬಳೆಗಳು ಪರಸ್ಪರ ಸಂಪರ್ಕ ಕಲ್ಪಿಸುತ್ತವೆ. ಇದರ ಮೂಲಕ ಹೊಮ್ಮುವ ನಾದ ಇನ್ನಷ್ಟು ಜೋರಾಗಿ ಕೇಳಿಸುವಂತೆ ಮಾಡುತ್ತದೆ. ಅರ್ಧಚಂದ್ರನಂತಿರುವ ಈ ಕಹಳೆಗೆ ಗಗ್ಗರಿ ಆಕಾರದ ಅಲಂಕಾರವಿರುತ್ತದೆ. ಮೂರು ಅಥವಾ ನಾಲ್ಕೈದು ಭಾಗಗಳಿಂದ ಕೂಡಿದ್ದು ಬಿಚ್ಚಲು ಮತ್ತು ಜೋಡಿಸಿಕೊಳ್ಳಲು ಅನುಕೂಲವಾಗುವಂತೆ ಅದರ ರಚನೆಯಿರುತ್ತದೆ. ಎರಡೂ ಕೊನೆಗಳಿಗೆ ಹಗ್ಗ ಕಟ್ಟಿಕೊಂಡು ಅದನ್ನು ಹೆಗಲಿಗೆ ತೂಗುಹಾಕಿ ಕೊಳ್ಳಲಾಗುತ್ತದೆ. ಗದಗ ಜಿಲ್ಲೆಯ ರೋಣ ತಾಲೂಕಿನ ಯಾವಗಲ್ ಗ್ರಾಮದ ಛಲವಾದಿಯ ದಿವಂಗತ ಪರಸಪ್ಪ ಕಾಳೆಯವರು ಪ್ರಸಿದ್ಧ ಕಹಳೆ ಊದುವವರಾಗಿದ್ದರು.

ಗ್ರಾಮದ ಜಾತ್ರೆ-ಉತ್ಸವ, ಮೆರವಣಿಗೆಗಳಲ್ಲಿ, ದೇವರ ಉತ್ಸವಗಳಲ್ಲಿ, ಅಂಬೇಡ್ಕರ್ ಜಯಂತಿಗಳಲ್ಲಿ, ಕರ್ನಾಟಕ ರಾಜ್ಯೋತ್ಸವ, ಸ್ವಾತಂತ್ರ್ಯ ದಿನೋತ್ಸವ ಮುಂತಾದ ಸಂದರ್ಭಗಳಲ್ಲಿ ಕಹಳೆಯನ್ನು ಊದಲಾಗುತ್ತದೆ. ಇವರಿಗೆ ಕೊಡುವ ಹಣ ಅಲ್ಪವಾಗಿದೆ. ಇದರಿಂದ ಅವರ ಬದುಕು ನಿರ್ವಹಿಸುವುದು ಕಷ್ಟಕರವಾಗಿದೆ. ಹೀಗಾಗಿ ಅವರು ಇದರ ಜೊತೆಗೆ ಕೃಷಿ ಕೂಲಿಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಾರೆ.

೫.೧೧.೯ ಬ್ಯಾಂಡ್ ಮೇಳ

ಪಡಗಂ (ತೊಗಲಿನಿಂದ ತಯಾರಿಸಿದ) ಗೆಜ್ಜೆ ಮುಂತಾದವು ವಾದ್ಯದ ಪ್ರಮುಖ ಉಪಕರಣಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಒಂದೊಂದು ಬ್ಯಾಂಡ್‌ಸೆಟ್ ಗುಂಪುಗಳನ್ನಾಗಿ ಮಾಡಿಕೊಂಡು ಒಂದೊಂದು ಸಮಿತಿಗಳನ್ನು ರಚಿಸಿಕೊಂಡಿರುವುದು ಕಂಡುಬರುತ್ತದೆ. ಆ ಸಮಿತಿಯಲ್ಲಿ ಸುಮಾರು ಎಂಟರಿಂದ ಹತ್ತು-ಹನ್ನೆರಡು ಜನರಿರುತ್ತಾರೆ. ಇಂಥ ಗುಂಪು, ಸಂಘ-ಸಮಿತಿಗಳನ್ನು ಕಟ್ಟಿಕೊಂಡು ತಮ್ಮ ವೃತ್ತಿಯನ್ನು ಮಾಡುತ್ತಿದ್ದಾರೆ. ಕೌಜಗೇರಿ ಗ್ರಾಮದ ಬ್ಯಾಂಷಡ್ ಮೇಳದ ಮುಖ್ಯಸ್ಥರಾದ ಪರಸಪ್ಪ ಛಲವಾದಿ, ಮೈಲಾರಪ್ಪ ನೀಲಮ್ಮನವರು ಹಾಗೂ ಸಂಗಡಿಗರು ಬ್ಯಾಂಡ್‌ನ್ನು ಬಾರಿಸುತ್ತಾರೆ.

ಇತ್ತೀಚಿನ ಆಧುನಿಕ ಕಾಲದಲ್ಲಿ ನುಡಿಸುವ ಒಂದು ವೃತ್ತಿಕಲೆ ಇದಾಗಿದೆ. ಈ ಹಿಂದೆ ಷಹನಾಯಿ ಅತ್ಯಂತ ಪ್ರಸಿದ್ಧಿಯಾಗಿತ್ತು. ಅದರಿಂದ ಮುಂದುವರಿದ ಭಾಗದಂತೆ ಈ ಬ್ಯಾಂಡ್ ಸೆಟ್ ಉಪಕರಣಗಳು ಬಂದಿವೆ. ಇದನ್ನು ಮದುವೆ-ಸೋಬಾನ, ಕನ್ಯಾ ನಿಶ್ಚಯ, ಜಾತ್ರೆ-ಮೆರವಣಿಗೆ, ಸತ್ತವರ ಮೆರವಣಿಗೆ

ಮುಂತಾದ ಸಂದರ್ಭಗಳಲ್ಲಿ ಛಲವಾದಿ ಜನ ನುಡಿಸುತ್ತಾರೆ. ಈ ಬ್ಯಾಂಡ್ ಸೆಟ್ಟಿನಲ್ಲಿ ಕರಕೊಳವಿ (ಕ್ಲಾರನೆಟ್) ಟ್ರಾಂಪೆಟ್ (ಕಂಚಿನ ಬಾಜ) ಮೊದಲಾದ ನಮೂನೆಯ ವಾದ್ಯಗಳು ಇರುವುದನ್ನು ಕಾಣುತ್ತೇವೆ.

೫.೧೧.೧೦ ಬ್ಯಾಂಜೋ ಬಾರಿಸುವ ಮೇಳ

ಇದೊಂದು ನವೀನ ರೀತಿಯ ಕಲಾವೃತ್ತಿಯಾಗಿದೆ. ಈ ವಾದ್ಯ ನುಡಿಸುವವರು ಡೋಲು, ತಾಸ್ಯಾ, ಕಾಸ್ಯೋ ವಾದ್ಯಗಳ ಉಪಕರಣಗಳನ್ನು ಹೊಂದಿರುತ್ತಾರೆ. ಇವನ್ನು ಮದುವೆ, ಜಾತ್ರೆ–ಉತ್ಸವ, ಗಣೇಶ ಹಬ್ಬದಲ್ಲಿ, ಶುಭ ಸಮಾರಂಭಗಳಲ್ಲಿ ನುಡಿಸಲಾಗುತ್ತದೆ. ಸುಮಾರು ಎಂಟರಿಂದ ಹನ್ನೆರಡು ಜನರ ಗುಂಪು ಇರುತ್ತದೆ. ಅದೇರೀತಿ ಇದರ ಸಂಭಾವನೆಯೂ ತುಸು ಹೆಚ್ಚು ಇರುತ್ತದೆ. ಇದೊಂದು ಲಾಭದಾಯಕ ವೃತ್ತಿ ಎಂದರೂ ತಪ್ಪಾಗಲಾರದು. ಇದನ್ನು ಹೆಚ್ಚಾಗಿ ನಿರುದ್ಯೋಗಿ ಯುವಕರು ಈ ಕೆಲಸ ಮಾಡುತ್ತಾರೆ. ಒಂದು ಕಾರ್ಯಕ್ರಮಕ್ಕೆ ಐದರಿಂದ ಆರು ಸಾವಿರ ರೂಪಾಯಿಗಳು ಪಡೆದುಕೊಳ್ಳುತ್ತಾರೆ. ರೋಣ ತಾಲೂಕಿನ ಯಾವಗಲ್ ಗ್ರಾಮದಲ್ಲಿ ಲಿಂಗಪ್ಪ ತಳದವರು ಹಾಗೂ ಅವರ ಸಂಗಡಿಗರು ಬ್ಯಾಂಜೋ ಬಾರಿಸುವ ಕೆಲಸ ಮಾಡುತ್ತಾರೆ.

೫.೧೧.೧೧ ಕಲಾತಂಡಗಳು

ಇತ್ತೀಚಿನ ದಿನಗಳಲ್ಲಿ ದಲಿತ ಕಲಾ ಮಂಡಳಿಗಳನ್ನು ಜಿಲ್ಲೆಯ ಛಲವಾದಿ ಸಮುದಾಯದ ಜನ ರಚಿಸಿಕೊಂಡಿದ್ದಾರೆ. ಇವು ದಲಿತ ಸಮುದಾಯಗಳು ಅನುಭವಿಸುತ್ತಿರುವ ನೋವು, ಸಮಸ್ಯೆಗಳ ಕುರಿತು, ಸರ್ಕಾರ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ರೀತಿ ಕುರಿತು, ಅಸ್ಪೃಶ್ಯತೆ, ಜಾತೀಯತೆ ಮುಂತಾದ ಸಮಸ್ಯೆ–ಸವಾಲುಗಳ ಕುರಿತು, ದುಡಿಯುವ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕುರಿತು ಹಾಡುಗಳನ್ನು ಹಾಡುತ್ತಾರೆ. ಹಗಲು–ರಾತ್ರಿ ಎನ್ನದೆ ಕೋಟ್ಯಾಂತರ ಜನರು ತಮ್ಮ ರಕ್ತ ಬಸಿದು ಬೆವರು ಸುರಿಸಿ ದುಡಿಯುತ್ತಿದ್ದರೂ ಬದುಕು ಬದಲಾಗದೆ ಹೋಗಿದೆ. ಜಾತಿವರ್ಗದ ವ್ಯವಸ್ಥಿತ ಶೋಷಣೆಯ ನೊಗವನ್ನು ಶೋಷಕರು ಹೂಡಿದ್ದಾರೆ. ಶೋಷಿತರ ಪರವಾದ ಕ್ರಾಂತಿ ಧ್ವನಿಯಾಗಿ ಛಲವಾದಿ ಸಮುದಾಯದ ಕಲಾ ಮಂಡಳಿಗಳು ಹಾಡು ಹೇಳುತ್ತವೆ. ದಲಿತ ಕಲಾತಂಡಗಳು ಗದಗ ತಾಲೂಕಿನ ಕುರ್ತಕೋಟಿ, ನೀಲಗುಂದ, ಮುಂಡರಗಿ ತಾಲೂಕಿನ ಡೋಣಿ ಗ್ರಾಮಗಳಲ್ಲಿರುವ ಬಸವರಾಜ ಶಿವಗಂಗಮ್ಮ, ನಾಗರಾಜ ನೀಲಪ್ಪ, ಶಿವಪುತ್ರಪ್ಪ ಕಾಳೆಪ್ಪ, ಕೊಟ್ರೇಶ ರಾಮಣ್ಣ, ಸುಭಾಷ್ ನೀಲಪ್ಪ, ಆನಂದ ನೀಲಪ್ಪ ಕಾಳೆ, ಮನೋಹರ ಮಾಲಕಪ್ಪ, ಚಂದ್ರಶೇಖರ ಯಲ್ಲಪ್ಪ ಮುಂತಾದ ಗಾಯಕರು ಜಿಲ್ಲೆಯ ವಿವಿಧ ಕಡೆ ತಮ್ಮ ಕಲಾ ಮಂಡಳಿಗಳನ್ನು ಸ್ಥಾಪಿಸಿಕೊಂಡು ಜನಜಾಗೃತಿ ಮೂಡಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕಲಾ ತಂಡಗಳು ಹಾಡುವ ಹೋರಾಟದ ಹಾಡುಗಳಲ್ಲಿ ಕೆಲವು ಹೀಗಿವೆ.

> "ಬೆಟ್ಟಗಳ ಒಡೆದೆವು ಬಂಡೆಗಳ ಹಿಂಡಿದೆವು
> ನಮ್ಮ ರಕ್ತ ಜಲ್ಲಿ ಮಾಡಿ ಪ್ರಾಜೆಕ್ಟು ಕಟ್ಟಿದೆವು.

ಶ್ರಮವು ಯಾರದೋ ಸಿರಿಯು ಯಾರಿಗೋ ॥"[2]

ಈ ಹಾಡಿನಲ್ಲಿ ಬೆಟ್ಟ-ಗುಡ್ಡಗಳನ್ನು ಒಡೆದು ದಾರಿಮಾಡಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ದಲಿತರ ರಕ್ತದೊಂದಿಗೆ ಕಟ್ಟಲಾಗಿದೆ. ಆದರೆ ಅದನ್ನು ಮೇಲ್ಜಾತಿ ಜನ ತಾವೇ ಮಾಡಿದ್ದೇವೆಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ.

ನೇಗಿಲುಗಳ ಹಿಡಿದೆವು ಹೊಲಗಳೆಲ್ಲ ಉತ್ತೇವು
ನಮ್ಮ ಬೆವರ ನಾಲೆ ಮಾಡಿ ಗದ್ದೆಗಳಿಗೆ ಹರಿಸಿದೆವು.
ಬೆಳೆಯು ಯಾರಿಗೋ ಗಂಜಿ ಯಾರಿಗೋ

ಹೊಲ-ಗದ್ದೆಗಳಲ್ಲಿ ಬಿತ್ತಿ ಬೆಳೆಯುತ್ತಾರೆ ಆದರೆ ಫಲ ಮಾತ್ರ ಬೇರೆಯವರಿಗೆ ಸಿಗುತ್ತದೆ. ಉತ್ತಿ-ಬಿತ್ತಿ ಬೆಳೆದವರು ಇಂದು ಒಂದು ಹೊತ್ತಿನ ಗಂಜಿಗೂ ಪರದಾಡುವ ಸ್ಥಿತಿ ಇರುವುದನ್ನು ಕಾಣಿಸಿದೆ.

ಬೀದಿ ಕಸವ ಗುಡಿಸಿದೆವು ನಗರಗಳನ್ನು ಬೆಳಗಿಸಿದೆವು
ನಮ್ಮ ಪ್ರಾಣ ಒತ್ತೆಯಿಟ್ಟು ಮ್ಯಾನ್‌ಹೋಲ್‌ನಲ್ಲಿ ಇಳಿದೆವು
ಥಳಕು ಯಾರಿಗೋ ಕೊಳಕು ಯಾರಿಗೋ

ದಿನವಿಡೀ ಬೆವರು ಸುರಿಸಿ ಗ್ರಾಮವನ್ನು, ನಗರವನ್ನೂ ಸ್ವಚ್ಛಗೊಳಿಸುತ್ತ ಕೊಳೆಗೇರಿಯ ಕತ್ತಲೆಯ ಕೂಪದಲ್ಲಿ ಬದುಕುತ್ತಿದ್ದೇವೆ, ನಾವು ಹಸನು ಮಾಡಿದ ಊರಲ್ಲಿ ನಮ್ಮನ್ನೇ ತುಳಿದು ಬದುಕುತ್ತಿರುವ ಜನರಿದ್ದಾರೆ, ಎಂದು ಸಾರುವ ಇದು ಇಂದಿಗೂ ನಡೆಯುತ್ತಿರುವ ಘನಘೋರ ಶೋಷಣೆಯಾಗಿದೆ.

ಅದೇ ರೀತಿ

ಆಕಾಶವ ಎತ್ತಿ ನಿಲ್ಲಿಸಿ
ನೀಲಿಯಾಗಿ ನಿಂತವರೆ
ಕಪ್ಪು ನೆಲವ ಕೆಂಪು ಮಾಡಿ
ಬಾಳೆಯಾಗಿ ಅರಳಿದವರೆ
ನೆಲದ ನೆಲದಲಿ ಜಲ ಉಕ್ಕಿಸಿ
ಬೆಳ್ಳಿಯ ಬೆಳೆ ಬೆಳೆದವರೇ
ದುಡಿದುಡಿದು ದೂಳಾದವರೇ
ಹಸಿವನುಂಡ ಜನಗಳೆ

ಆಕಾಶದೆತ್ತರಕ್ಕೆ ಮಹಲುಗಳನ್ನು ಕಟ್ಟಿದವರು ಅದೇ ಮಹಲಿನ ಕೆಳಗೆ ಸಾಯುತ್ತಿದ್ದಾರೆ. ಅದಕ್ಕೆ ಆಹಾರವಾಗುತ್ತಿದ್ದಾರೆ. ಹಸಿವಿನಿಂದ ದುಡಿದುಡಿದು ಬೇರೊಬ್ಬರಿಗೆ ನೆರಳನ್ನು ಕಟ್ಟಿಕೊಟ್ಟು ತಾವು ಬೀದಿಯಲ್ಲಿ ಬದುಕುತ್ತಿದ್ದೇವೆ ಎಂದು ಹೇಳುತ್ತಾರೆ.

ಯಜಮಾನರ ಬೆತ್ತಗಳಿಗೆ
ಭುಜ ಬೆನ್ನು ಕೊಟ್ಟವರೇ
ಬಂದೂಕಿನ ತುದಿಗೆದೆಯನ್ನು

ಒಡ್ಡುವವರೇ ಬನ್ನಿರಿ ॥
ಮಂತ್ರಗಳಲಿ ಮಲಗಿದವರೆ
ಸತ್ಯಗಳಲ್ಲಿ ಸತ್ತವರೆ
ಕಿಚ್ಚುಗಳೇ ಕೇಳಿರಿ
ಎಚ್ಚರವನು ತಪ್ಪಿದವರೆ
ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚಿ ॥

ತಾವು ಕೆಲಸ ಮಾಡುವ ಧಣಿಗಳ ಪ್ರಾಣ ರಕ್ಷಣೆಗಾಗಿ ತಮ್ಮ ಜೀವವನ್ನೇ ಮುಡುಪಾಗಿಡುವ ಛಲವಾದಿಯವರಲ್ಲಿ ಜೀವ ತ್ಯಾಗ ಮಾಡಿದ ಎಷ್ಟೋ ಜನರಿದ್ದಾರೆ. ಇಂತಹ ಶೋಷಣೆಯುಕ್ತ ಬದುಕಿನಿಂದ ಹೊರಲು, ಹೊಸ ಜೀವನ ರೂಪಿಸಿಕೊಂಡು ಕ್ರಾಂತಿಯನ್ನುಂಟುಮಾಡುವ ದಲಿತೋದ್ಧಾರಕ ಆಶಯ ಈ ಹಾಡುಗಳಲ್ಲಿ ಇದೆ.

ಹೀಗೆ ಛಲವಾದಿಯವರ ಕಲಾ ತಂಡಗಳು ತಮ್ಮ ದಿಟ್ಟ ನಿಲುವಿನ ಹಾಡುಗಳ ಮೂಲಕ ಜನಜಾಗೃತಿ ಉಂಟುಮಾಡುವ ಕೆಲಸ ಮುಂದುವರೆಸಿಕೊಂಡು ಹೋಗುತ್ತಿವೆ. ಈ ಮೂಲಕ ಜನರಲ್ಲಿ ಐಕ್ಯತೆಯನ್ನು ಮೂಡಿಸಲು ಪ್ರಯತ್ನಿಸುತ್ತಿವೆ. ಈ ಕಲಾತಂಡಗಳಲ್ಲಿ ಇರುವವರು ತಮ್ಮ ಉಪಜೀವನಕ್ಕಾಗಿ ಕೃಷಿ ಕೂಲಿಯನ್ನು ಸಹ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಜಿಲ್ಲಾ, ರಾಜ್ಯ ಮಟ್ಟದ ವರೆಗೆ ಹೋಗಿ ಖ್ಯಾತಿಯನ್ನು ಪಡೆದಿದ್ದಾರೆ. ಆದರೂ ಅವರ ಉಪಜೀವನಕ್ಕೆ ಪೂರ್ಣ ಪ್ರಮಾಣದ ಹಣವನ್ನು ಇವರಿಗೆ ಸಿಗಲಾರದ ಒಂದು ದುರಂತವಾಗಿದೆ.

೫.೧೧.೧೨ ಡೊಳ್ಳಿನ ಮೇಳ

ಸಮುದಾಯದ ಜನ ವಿವಿಧ ಕಲೆಗಳಲ್ಲಿ ಪ್ರವೀಣರೆಂಬುದಕ್ಕೆ ಡೊಳ್ಳು ಕುಣಿತ ಸಾಕ್ಷಿಯಾಗಿದೆ. ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಮಾತ್ರ ಈ ವೃತ್ತಿ ಮಾಡುತ್ತಾರೆ. ಗದಗ ಜಿಲ್ಲೆಯ ರೋಣ ತಾಲೂಕಿನ ಹೊನ್ನಾಪುರ ಗ್ರಾಮದಲ್ಲಿ ಅಂಬೇಡ್ಕರ್ ಸಂಘದವರು ಡೊಳ್ಳು ಕುಣಿತದ ವಿಶೇಷ ಕೌಶಲ್ಯತೆ ಹೊಂದಿದ್ದು ತಮ್ಮದೇ ತಂಡವೊಂದನ್ನು ಹೊಂದಿದ್ದಾರೆ. ವಿವಿಧ ಗ್ರಾಮಗಳಲ್ಲಿ ಡೊಳ್ಳಿನ ಮೇಳದ ತಂಡಗಳು ಇವೆ. ಹಬ್ಬ-ಹರಿದಿನ, ಜಾತ್ರೆ-ಉತ್ಸವ, ವಿಶೇಷ ಮೆರವಣಿಗೆ, ಅಂಬೇಡ್ಕರ್ ಜಯಂತಿಯಂದು ಡೊಳ್ಳಿನ ನೃತ್ಯ ಮಾಡಲಾಗುತ್ತದೆ. ಈ ವಾದ್ಯ ಚರ್ಮ ವಾದ್ಯಕ್ಕೆ ಸಂಬಂಧಿಸಿದ್ದು ಜನಪ್ರಿಯ ವಾದ್ಯ ಪರಿಕರವಾಗಿದೆ.

ಜಾತಿ ವ್ಯವಸ್ಥೆ ಹಾಗೂ ಜನಪದ ವಾದ್ಯಗಳು ಪರಸ್ಪರಾವಲಂಬಿಗಳಾಗಿವೆ. ಕೊರವರು ಸನಾದಿ ಕಹಳೆ ಊದುವುದು, ಹೊಲೆಯರು ಕೊಂಬು (ಕಹಳೆ) ಊದುವುದು, ಮಾದಿಗರು ಹಲಿಗಿ ಬಾರಿಸುವುದು, ಕುರುಬರು ಡೊಳ್ಳು ಬಾರಿಸುವುದು, ಗೊರವರು ಡಮರುಗ, ದುರುಗಮುರಗಿಯವರು ಬುರಬುರಿ

(ಉರುಮಿ), ಲಂಬಾಣಿಗಳು–ಗಂಗಾಳ, ಬುಡಬುಡಕಿಗಳು–ಬುಡಬುಡಕಿ ಮುಂತಾದವು ಆಯಾ ಜಾತಿಗೆ ಸಂಬಂಧಿಸಿವೆ.

ಇತ್ತೀಚಿನ ದಿನಗಳಲ್ಲಿ ಕಲೆಗಳು ಕೇವಲ ಜಾತಿಗಷ್ಟೇ ಮೀಸಲಾಗಿಲ್ಲ. ಕಲಾಸಕ್ತಿಯಿರುವ ಯಾರು ಬೇಕಾದರೂ ಈ ಕೆಲಸ ಮಾಡಬಹುದು. ಅದರಂತೆ ಛಲವಾದಿಯರು ಡೊಳ್ಳು ಬಾರಿಸುವ ಕಲೆ ಕರಗತ ಮಾಡಿಕೊಂಡಿದ್ದಾರೆ. ತಮ್ಮದೇ ತಂಡ ಕಟ್ಟಿಕೊಂಡು ವೃತ್ತಿಯಲ್ಲಿ ಗಣನೀಯ ಅಭಿವೃದ್ಧಿ ಕಾಣುತ್ತಿದ್ದಾರೆ. ಛಲವಾದಿ ಸಮುದಾಯವು ಕೆಲವು ಗ್ರಾಮಗಳಲ್ಲಿ ಈ ಕಲೆಯನ್ನು ಕರಗತಮಾಡಿಕೊಂಡಿದ್ದಾರೆ.

೫.೧೧.೧೩ ಜಗ್ಗಲಗಿ ಮೇಳ

ಜಗ್ಗಲಗಿ ಮೇಳ ಚರ್ಮವಾದ್ಯಗಳಲ್ಲಿಯೆ ಅತ್ಯಂತ ದೊಡ್ಡದಾಗಿದೆ. ಈ ಹಲಗೆ ಬಾರಿಸುವ ಸಮಯದಲ್ಲಿ ಜಗ್ ಜಗ್ ಎಂಬ ನಾದ ಹೊರಡುವುದರಿಂದ ಜಗ್ಗಲಿಗೆ ಎಂದು ಕರೆದಿರಬಹುದು. ಈ ಮೇಳದಲ್ಲಿ ವಿವಿಧ ಪ್ರಕಾರದ ನಾದ–ಗತ್ತುಗಳನ್ನು ಹೊರಡಿಸುತ್ತ ತಮ್ಮ ಕಲೆ ಪ್ರದರ್ಶಿಸುವರು. ಇದೊಂದು ಪ್ರಚಾರ ಮಾಧ್ಯಮವಾಗಿ ಹುಟ್ಟಿಕೊಂಡಿದ್ದರೂ ಕ್ರಮೇಣ ಅದೇ ಒಂದು ವಿಶಿಷ್ಟ ಕಲೆಯಾಗಿ ಬೆಳೆದಿದೆ. ಕೆಲವು ಕುಶಲ ಕಲೆಗಾರರು ತಬಲಾ ವಾದನ, ಘಟಾ ವಾದನ, ಡೊಳ್ಳು ವಾದನಗಳ ಗತ್ತು ಮತ್ತು ಸದ್ದುಗಳನ್ನು ಹಲಗೆಯಲ್ಲಿ ಬಾರಿಸಿ ಕೇಳಿಸುತ್ತಾರೆ. ಈ ಹಲಗೆ ಧಾರ್ಮಿಕ ವಾದ್ಯವೂ ಆಗಿದೆ, ಸಾಮಾಜಿಕ ವಾದ್ಯವೂ ಆಗಿದೆ. ಕುರ್ತಕೋಟಿಯಲ್ಲಿ ಜಗ್ಗಲಗಿ ಮೇಳವಿದೆ. ಹಲವು ಗ್ರಾಮಗಳಲ್ಲಿ ಛಲವಾದಿಯವರ ಜಗ್ಗಲಗಿ ಮೇಳಗಳು ಕಂಡುಬರುತ್ತವೆ.

೫.೧೧.೧೪ ಹೆಜ್ಜೆಮೇಳ

ಛಲವಾದಿ ಸಮುದಾಯದ ಜನ ಹಬ್ಬಹರಿದಿನ–ಗ್ರಾಮದೇವತೆ–ಜಾತ್ರೆ–ಉತ್ಸವಗಳ–ರಥೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಪ್ರಜಾರಾಜ್ಯೋತ್ಸವ, ಕರ್ನಾಟಕ ರಾಜ್ಯೋತ್ಸವ ದಿನಗಳಂದು ಹಾಗೂ ವಿಶೇಷವಾಗಿ ಮೊಹರಂ ಆಚರಣೆ ಸಂದರ್ಭದಲ್ಲಿ ಹೆಜ್ಜೆಮೇಳ ಕುಣಿತ ಕಂಡುಬರುತ್ತದೆ. ಇದನ್ನು ತಾಳ, ಲಯ, ಗತ್ತುಗಳಿಗೆ ತಕ್ಕಂತೆ ಹೆಜ್ಜೆ ಹಾಕುವುದರಿಂದಲೇ "ಹೆಜ್ಜೆಮೇಳ" ಎಂದು ಕರೆದಿರಬಹುದು. ಹೆಜ್ಜೆಮೇಳಕ್ಕೆ ಸಮಸಂಖ್ಯೆ ಕಲಾವಿದರು ಬೇಕು. ಬಿಳಿ ಅಂಗಿ, ಮೊಳಕಾಲವರೆಗೆ ಏರುಕಟ್ಟಿದ ದೋತರ, ಕೈಯಲ್ಲಿ ಕರವಸ್ತ್ರ, ಬಲಗಾಲಲ್ಲಿ ಗೆಜ್ಜೆಸರ, ಬಲಗೈಯಲ್ಲಿ ಹೂವಿನಗಿಡ, ಎಡಗೈಯಲ್ಲಿ ಕೋಲು ಇವೆಲ್ಲ ಈ ಕಲಾವಿದರ ವೇಷ–ಭೂಷಣಗಳಾಗಿ ಆಕರ್ಷಕವಾಗಿರುತ್ತವೆ.

ಹೆಜ್ಜೆಮೇಳಕ್ಕೆ ಮುಖ್ಯವಾಗಿ ಡಪ್ಪು ಬೇಕು. ತಾಳ ಬಾರಿಸುವವನಿರುತ್ತಾನೆ. ಮುಂದೆ ಹಲಗೆ ಬಾರಿಸುತ್ತ ಹಾಡುವನಿದ್ದರೆ, ಹಿಮ್ಮೇಳದವರು ಹಿಂದೆ ಹಾಡುತ್ತಾರೆ. ಕೆಲವು ಸಲ ಹೆಜ್ಜೆ ಹಾಕುವವರು ಸಹ ಹಾಡುತ್ತಾರೆ. ಈ ಹಾಡಿನ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕಿ ಕುಣಿಯುತ್ತಾರೆ. ಕುಣಿತದಲ್ಲಿ ಅನೇಕ ಪ್ರಕಾರಗಳಿವೆ.

ಸಾದಾ ಹೆಜ್ಜೆ, ಸುತ್ತು ಕೋಲುಹೆಜ್ಜೆ, ಒಂದುಹೆಜ್ಜೆ, ಎರಡೆಜ್ಜೆ, ಮೂರು ಹೆಜ್ಜೆ, ಮುಳ್ಳಿನ ಹೆಜ್ಜೆ, ಬಗಡಿ ಹೆಜ್ಜೆ ಮುಂತಾದ ಹೆಜ್ಜೆಗಳಿವೆ. ಹೆಜ್ಜೆಮೇಳಗಳಲ್ಲಿ ಸನಾದಿಯನ್ನು ಊದುವರು.

೫.೧೨ ಕಸೂತಿ

ಕರ್ನಾಟಕದ ತುಂಬೆಲ್ಲ ಕಸೂತಿ ಎಂದು ಕರೆಯುವ ಈ ಕಲೆಗೆ ಪಂಜಾಬದಲ್ಲಿ 'ಪುಲ್ಕರಿ', ಗುಜರಾತದಲ್ಲಿ 'ಕಥಿ', ರಾಜಸ್ಥಾನದಲ್ಲಿ 'ಪಚವಾಯಿ', ಬಂಗಾಳದಲ್ಲಿ 'ಕಂಥೆ', ಬಿಹಾರದಲ್ಲಿ 'ಕಸಿದ್', ಒರಿಸ್ಸಾದಲ್ಲಿ 'ಪುರಿ', ಉತ್ತರಪ್ರದೇಶದಲ್ಲಿ 'ಚಿಕನ್', ಕಾಶ್ಮೀರದಲ್ಲಿ 'ಕಸಿದ್', ಮಣಿಪುರದಲ್ಲಿ 'ಪನ್ಯೆಕ್', ಹಿಮಾಚಲಪ್ರದೇಶದಲ್ಲಿ 'ಛಂಬಾ', ಸಿಂಧ್ ಪ್ರಾಂತ್ಯದಲ್ಲಿ 'ಕಚ್', ಲಖನೌದಲ್ಲಿ 'ಚಿಕನ್‌ಕಾರಿ', ಮಹಾರಾಷ್ಟ್ರದಲ್ಲಿ 'ಕಶಿದ್', 'ಕಸೂದಾ', ಪರ್ಶಿಯನ್ ಮತ್ತು ಹಿಂದಿಯಲ್ಲಿ 'ಕಶೀದಹ' ಎಂದು ಪ್ರಾದೇಶಿಕವಾಗಿ ಕಸೂತಿಗೆ ಬೇರೆ ಬೇರೆ ಹೆಸರುಗಳಿವೆ.

ಕಸೂತಿಯೆಂದರೆ ಬಣ್ಣ ಬಣ್ಣದ ದಾರಗಳಿಂದ ಬಟ್ಟೆಯ ಮೇಲೆ ಹೆಣೆಯುವ ಒಂದು ಅಲಂಕಾರವೆಂದು ಹೇಳಬಹುದು. ಇದಕ್ಕೆ ಸೂಜಿ ಮತ್ತು ದಾರ ಅವಶ್ಯ ಬೇಕಾಗುತ್ತದೆ. ಮಳೆ-ಚಳಿ-ಬಿಸಿಲು-ಗಾಳಿಯಿಂದ ರಕ್ಷಣೆ ಪಡೆಯಲೆಂದು ಪ್ರಾರಂಭವಾದ ಉಡುಪು ಕಾಲಕ್ರಮೇಣ ಬದಲಾವಣೆ ಹೊಂದಿ ಪ್ರಾದೇಶಿಕವಾಗಿ, ಜನಾಂಗೀಕವಾಗಿ ವೈವಿಧ್ಯತಗಳಿಂದ ಬೆಳೆದು ನಿಂತಿತು. ನಂತರ ದೇಹಕ್ಕೆ ಬಣ್ಣ ಬಳಿದುಕೊಳ್ಳುವುದು-ಆಭರಣಗಳನ್ನು ಹಾಕಿಕೊಳ್ಳುವುದು. ಅಂದವಾದ ಉಡುಗೆ ತೊಡುವುದು ಪ್ರಾರಂಭವಾಗಿ ಹೀಗೆ ಮದರಂಗಿ, ಹಚ್ಚೆ, ಆಭರಣಗಳ ಜೊತೆಗೆ ಕಸೂತಿಯಂತಹ ಹೆಣಿಕೆಯ ಕಲೆಯೂ ರೂಢಿಗೆ ಬಂದಿತು. ಈ ಕೆಲಸವನ್ನು ಶಿಕ್ಷಣ ಪಡೆ ಕೆಲವು ಹೆಣ್ಣುಮಕ್ಕಳು ಮಾಡುತ್ತಾರೆ.

೫.೧೨.೧ ಕಸೂತಿ ರಚನೆಗೆ ಬೇಕಾಗುವ ಸಾಮಗ್ರಿಗಳು

ಕಸೂತಿ ರಚನೆಯಲ್ಲಿ ರಿಂಗು, ಕಸೂತಿಯ ಅರಿವೆಗಳು ಬಳಕೆಯಾಗುವ ಸಾಮಾಗ್ರಿಗಳಾಗಿವೆ. ಕಟ್ಟಿಗೆಯ ರಿಂಗಿನಲ್ಲಿ ಅರಿವೆ ಮಡಚದಂತೆ ಬಿಗಿಗೊಳಿಸಲಿಕ್ಕೆ ಕಟ್ಟಿಗೆಯ ರಿಂಗನ್ನು ಉಪಯೋಗಿಸುತ್ತಾರೆ. ಹಾಗೆಯೆ ಸೂಜಿ, ಕತ್ತರಿ, ವಿವಿಧ ವರ್ಣದ ದಾರ, ಪೆನ್ಸಿಲ್ ಈ ರೀತಿಯ ಪರಿಕರಗಳು ಬೇಕಾಗುತ್ತವೆ.

೫.೧೨.೨ ಕಸೂತಿಯ ಪ್ರಕಾರಗಳು

ಕಸೂತಿ ಕಲೆಯಲ್ಲಿ ಹಲವು ಪ್ರಕಾರಗಳನ್ನು ನೋಡಬಹುದು. ಮೆಂತೆ ಕಸೂತಿ, ಮುರಗಿ ಕಸೂತಿ, ಕನ್ನಡಿ ಕಟ್ಟಿನಲ್ಲಿ ಹಾಕುವ ಕಸೂತಿ ಮುಂತಾದ ಪ್ರಕಾರಗಳಲ್ಲಿ ಕಸೂತಿ ಹಾಕುವುದನ್ನು ಕಾಣಬಹುದು. ಹಾಗೆಯೇ ಕಸೂತಿಯಲ್ಲಿ ದೇವತೆಗಳ ಚಿತ್ರ, ಪೌರಾಣಿಕ ಚಿತ್ರ, ಧಾರ್ಮಿಕ ಕ್ಷೇತ್ರಗಳ ಚಿತ್ರ, ರಾಮಾಯಣ-ಮಹಾಭಾರತದ ಚಿತ್ರಗಳು, ಐತಿಹಾಸಿಕ-ರಾಜಕೀಯ ಚಿತ್ರಗಳನ್ನು ಹಾಕಲಾಗುತ್ತದೆ. ಹೆಣ್ಣುಮಕ್ಕಳು ಈ ಕಲೆಯನ್ನು ರೂಢಿಸಿಕೊಂಡಿದ್ದಾರೆ. ಇದರಿಂದ ಅವರಿಗೆ ಜೀವನೋಪಾಯಕ್ಕೆ ಸಾಕಷ್ಟು ಹಣ ಬರುವದಿಲ್ಲ. ಅದಕ್ಕಾಗಿ ಇವರು ಕೃಷಿ ಕೂಲಿ ಕೆಲಸವನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ.

೫.೧೨.೩ ಕೌದಿ ಹೊಲೆಯುವ ಕಲೆ

ತಳಜಾತಿಗಳು ತಮ್ಮ ಹಳೆಯ ಬಟ್ಟೆ-ಬರೆಗಳನ್ನು ಕೌದಿ ತಯಾರಿಸಲು ಉಪಯೋಗಿಸಿಕೊಳ್ಳಲು ಮೊದಲು ಪ್ರಾರಂಭಿಸಿದಂತೆ ಕಾಣುತ್ತದೆ. ಶಬ್ದಕೋಶದಲ್ಲಿ 'ಕೌದಿ' ಪದಕ್ಕೆ ಕಂತೆ, ಹಳೇ ಅರಿವೆ, 'ಹೊಸ ಹೊದಿಕೆ', ತುಂಡು ಬಟ್ಟೆಗಳನ್ನು ಕೂಡಿಸಿ ಹೊಲೆದ ಹಚ್ಚಡವೆಂದು ಅರ್ಥಗಳಿವೆ. ಕರ್ನಾಟಕದಲ್ಲಿ ಕೌದಿಯನ್ನು ಕವುದಿ, ಕೌಂದಿ, ಕಂತೆ, ಎಂದು ಕರೆಯುತ್ತಾರೆ. ತಮಿಳಿನಲ್ಲಿ 'ಕವನ್ದಿ', 'ಕವನ್ದಿಗೈ', ಮಲಯಾಳದಲ್ಲಿ 'ಕವಿಯನ್', ಮರಾಠಿಯಲ್ಲಿ 'ಕಂಥಾ'ವಾಕಳ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ.

ಗ್ರಾಮೀಣ ಭಾಗದಲ್ಲಿ ಕೌದಿಯು ಛಲವಾದಿಯವರ ಅವಶ್ಯವಾದ ಹೊದಿಕೆಯಾಗಿದೆ. ನಗರದಲ್ಲಿ ಹಳೆಯ ಅಜ್ಜಿಯರಿದ್ದರೆ ಕವುದಿಯ ಬಳಕೆ ಮಾಡುತ್ತಾರೆ. ಮನೆಯಲ್ಲಿ ಗಂಡಸರ ಹಾಗೂ ಚಿಕ್ಕ ಮಕ್ಕಳ ಹಳೆಯ ಮತ್ತು ಹರಿದ ಬಟ್ಟೆಗಳನ್ನು ಹೆಣ್ಣು ಮಕ್ಕಳು ಕಲಾತ್ಮಕವಾಗಿ ಕತ್ತರಿಸಿ ಒಂದರ ಮೇಲೊಂದು ತೇಪೆ ಹಚ್ಚಿ ದಾರದ ದೊಡ್ಡ ಹೊಲಿಗೆ ಹಾಕುತ್ತಾರೆ. ವಿವಿಧ ರೀತಿಯ ಚಿತ್ರವಿನ್ಯಾಸಗಳು ತೇಪೆ ಹಚ್ಚುವ ತುಂಡು ಬಟ್ಟೆ ಮೂಲಕ ಕಾಣುವಂತೆ ಕೌದಿಯನ್ನು ದಾರಗಳಿಂದ ಹೊಲೆಯುತ್ತಾರೆ. ತುಂಡು ಅರಿವೆಗಳಲ್ಲಿ ಹಾಗೂ ದಾರದ ಹೊಲಿಗೆಯಲ್ಲಿ ತಮ್ಮ ಕಲಾಪ್ರೌಢಿಮೆ ತೋರಲು ಕುಡುಗೋಲು, ಬ್ಲೇಡು, ಮುಂತಾದ ವಸ್ತುಗಳನ್ನು ಕೌದಿ ತಯಾರಿಸಲು ಬಳಸುತ್ತಾರೆ. ಈ ಕೌದಿಯ ಪರಿಕಲ್ಪನೆ ನಮ್ಮಲ್ಲಿ ಪ್ರಾಚೀನ ಕಾಲದಿಮದಲೂ ರೂಢಿಯಲ್ಲಿದೆ. ಈಗಲೂ ಕಂಬಳಿಯನ್ನು ಮನೆಯಲ್ಲಿ ಹಿರಿಯ ಮಹಿಳೆಯರು ತಯಾರಿಸುತ್ತಾರೆ. ಹಳೆ ಹಾಗೂ ಹರಿದ ಬಟ್ಟೆಯಿಂದ ಕೌದಿಯನ್ನು ತಯಾರಿಸುವರು. ಆದರೆ ಇವುಗಳು ಇಂದು ಈ ಸಮುದಾಯದಿಂದ ಮರೆಯಾಗುತ್ತಿವೆ.

೫.೧೩. ನೌಕರರು

ಭಾರತ ಸಂವಿಧಾನ ಜಾರಿಗೆ ಬಂದು ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ಘೋಷಣೆ ಮಾಡಿದ ಪರಿಣಾಮವಾಗಿ ಶತಶತಮಾನಗಳಿಂದ ವಂಚಿತರಾಗಿದ್ದ ಕೆಳಜಾತಿಗಳು ಶಿಕ್ಷಣ ಪಡೆಯಲು ಸಾಧ್ಯವಾಯಿತು. ಸಮಾಜದ ಶೀಘ್ರ ಬದಲಾವಣೆಗೆ ಶಿಕ್ಷಣ ಪ್ರಬಲ ಅಸ್ತ್ರವಾಗಿದೆ. ಇಂದು ಛಲವಾದಿ ಜನ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ, ವೈದ್ಯಕೀಯ, ಇಂಜನಿಯರ್, ಡಿಪ್ಲೋಮಾ, ಕಂಪ್ಯೂಟರ್, ಡಾಕ್ಟರೇಟ್ ಪದವಿಯನ್ನು ಹಾಗೂ ಬೇರೆ ಬೇರೆ ಶೈಕ್ಷಣಿಕ ಪದವಿಗಳನ್ನು ಪಡೆಯುತ್ತಿದ್ದಾರೆ. ಈ ಶಿಕ್ಷಣದಿಂದಾಗಿ ಇಂದು ಛಲವಾದಿ ಸಮುದಾಯದವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಗಳನ್ನು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಯಾಗಿ, ಕಾಲೇಜು ಪ್ರಾಚಾರ್ಯರಾಗಿ, ವಿ. ವಿ. ಸಿಂಡಿಕೇಟ್ ಸದಸ್ಯರಾಗಿ, ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ, ಬ್ಯಾಂಕ್, ಅಂಚೆ ಇಲಾಖೆ, ಪೋಲಿಸ್ ಇಲಾಖೆ, ಪ್ರೌಢ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿ ಶಿಕ್ಷಕಿಯರು

ಮತ್ತು ಅಡುಗೆ ಸಹಾಯಕರಾಗಿ, ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದಲ್ಲಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅಗ್ನಿಶಾಮಕ, ಗೃಹರಕ್ಷಕ ದಳದಲ್ಲಿ, ಕಂದಾಯ ಇಲಾಖೆಯಲ್ಲಿ ಗುಮಾಸ್ತರಾಗಿ, ಸಹಾಯಕರಾಗಿ, ಕೃಷಿ ಇಲಾಖೆಯಲ್ಲಿ ಗ್ರಾಮ ಸೇವಕರಾಗಿ, ಗ್ರಾಮಲೆಕ್ಕಾಧಿಕಾರಿಗಳಾಗಿ, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರಾಗಿ, ವಿಷಯ ನಿರೀಕ್ಷಕರಾಗಿ, ಅಕ್ಷರ ದಾಸೋಹ ಸಂಯೋಜಕರಾಗಿ, ನ್ಯಾಯಾಲಯದಲ್ಲಿ ವಕೀಲರಾಗಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾರಕೂನರು, ಸಿಪಾಯಿಗಳಾಗಿ, ಬ್ಯಾಂಕ್‌ಗಳಲ್ಲಿ ಮ್ಯಾನೇಜರ್‌ರಾಗಿ, ಜೀವವಿಮಾ ನಿಗಮದ ವ್ಯವಸ್ಥಾಪಕರಾಗಿ, ಅಭಿವೃದ್ಧಿ ಅಧಿಕಾರಿಗಳಾಗಿ ಹಾಗೂ ಕಾರಕೂನರಾಗಿ, ಯುವಜನ ಹಾಗೂ ಕ್ರೀಡಾ ಇಲಾಖೆಯಲ್ಲಿ ಗುಮಾಸ್ತರಾಗಿ, ತಾಲ್ಲೂಕು, ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮೀಣಾಭಿವೃದ್ಧಿ ಅಧಿಕಾರಿಗಳಾಗಿ, ನಗರಸಭೆಯಲ್ಲಿ ಆಯುಕ್ತರಾಗಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನಿಯಂತ್ರಣಾಧಿಕಾರಿಗಳಾಗಿ, ನಿರ್ವಾಹಕರಾಗಿ, ಚಾಲಕರಾಗಿ, ಆರೋಗ್ಯ ಇಲಾಖೆಯಲ್ಲಿ ಶುಶ್ರೂಕರಾಗಿ, ಆರೋಗ್ಯ ನಿರೀಕ್ಷಕರಾಗಿ, ಸಹಕಾರ ಸಂಘ-ಸಂಸ್ಥೆ ಇಲಾಖೆಯಲ್ಲಿ ಅಧಿಕಾರಿಗಳಾಗಿ, ಪೌರ ಕಾರ್ಮಿಕರಾಗಿ ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಸಿಪಾಯಿಗಳಾಗಿ, ಜವಾನರಾಗಿ, ಕಾವಲುಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೫.೧೪ ಬಡಗಿತನ

ಬಡಗಿತನವು ಛಲವಾದಿಯವರ ವೃತ್ತಿಗಳಲ್ಲಿ ಒಂದಾಗಿದೆ. ಗ್ರಾಮೀಣ ರೈತ ಸಮುದಾಯಗಳಿಗೆ ಬೇಕಾದ ಕೃಷಿ ಸಲಕರಣೆಗಳಾದ ಗಳೆಗಾಡಿ, ಕೂರಿಗೆ, ನೊಗ, ಅಡಿದಿಂಡು, ಸಲಿಕಿ-ಕಾವು, ಗುದ್ದಲಿಕಾವು, ಮಡಕೆ-ಕುಂಟೆ, ಕೊಡಲಿ, ಬೆಡಗುಗಳ, ಕಾವುಗಳನ್ನು ಮಾಡುವುದು ಇವರ ವೃತ್ತಿಯಾಗಿದೆ. ಬಡಗಿತನ ಮಾಡಬೇಕಾದರೆ ಸುತ್ತಿಗೆ, ಉಳಿ, ಗಿರಿಮಟ್ಟಿ, ಗರಗಸ, ಬಾಚಿ, ಮುಂತಾದ ಸಲಕರಣೆಗಳು ಬೇಕಾಗುತ್ತವೆ. ಗದಗ ತಾಲೂಕಿನ ಮಲ್ಲಸಮುದ್ರ ಗ್ರಾಮದಲ್ಲಿ ಕೆಲವರು ಬಡಗಿತನ ಮಾಡುತ್ತಿದ್ದಾರೆ. ಎಲ್ಲಾ ಕಡೆ ಬಡಗಿತನ ಮಾಡುವವರು ಕಂಡುಬರುವುದಿಲ್ಲ.

೫.೧೫ ಮನೆ ಕಟ್ಟುವ ಕೆಲಸಗಾರರು

ಮನುಷ್ಯ ಹಗಲಿರುಳು ದುಡಿದು ಬೆಂಡಾದ ದೇಹಕ್ಕೆ ಶಾಂತಿ ತಾಣವಾಗಿ ಮನೆ ಕಟ್ಟಿಕೊಂಡು ವಾಸಿಸುವುದು ಸರ್ವಸಾಮಾನ್ಯ. ಎಲ್ಲಾ ಋತುಮಾನಗಳಿಗೆ ರಕ್ಷಣೆ ನೀಡುವ ಮನೆ ಕಟ್ಟಿಕೊಂಡಿರುವುದು ಕೂಡ ಸಾಮಾನ್ಯವಾಗಿದೆ. ಮನುಷ್ಯ ತನ್ನ ಜೀವನದ ಆಯುಷ್ಯದ ಅವಧಿಯಲ್ಲಿ ಹೆಚ್ಚಿನ ಸಮಯ ಮನೆಯಲ್ಲಿ ಕಳೆಯುತ್ತಾನೆ. ಆದರೂ ಛಲವಾದಿ ಜನರು ತಮ್ಮ ಮನೆಯನ್ನು ಸರಿಮಾಡಿಕೊಳ್ಳಲಾಗದಿದ್ದರೂ ಬೇರೆಯವರ ಮನೆ ಚೆನ್ನಾಗಿ ಕಟ್ಟಿಕೊಡುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಗಾರೆ ತೋಡುವ, ಆಸ್ತಿಭಾರ ಹಾಕುವ, ನೀಲಿ ನಕ್ಷೆ ಹಾಕುವ, ಗೌಂಡಿಯಾಗಿ ಮತ್ತು ಮೇಸ್ತ್ರಿಯಾಗಿ ಕೆಲಸ ಮಾಡುವ ಮೂಲಕ ಗ್ರಾಮಗಳಲ್ಲಿಯೆ ಅಲ್ಲದೆ ನಗರ ಪ್ರದೇಶಗಳಲ್ಲಿಯೂ ಹೆಚ್ಚಿನ ಕೂಲಿ ಕೊಡುವ ಕಟ್ಟಡದ ಕೆಲಸದಲ್ಲಿ

ತೊಡಗಿದ್ದಾರೆ. ಇಂದು ದೊಡ್ಡ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗಿ ಗೌಂಡಿಗಳಾಗಿ, ಮೇಸ್ತ್ರಿಗಳಾಗಿ, ಬಾರ್‌ಬಿಲ್ಡರ್‌ಗಳಾಗಿ, ಪ್ಲಂಬರ್‌ಗಳಾಗಿ, ನಳಗಳ ಜೋಡಣೆ, ಎಲೆಕ್ಟ್ರೀಶಿಯನ್ ಆಗಿ, ಇನ್ನಿತರೆ ಕೆಲಸಗಳಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಕೃಷಿ ಕೂಲಿ ಮಾಡಿ ಜೀವಿಸುವದಕ್ಕಿಂತಲೂ ಮನೆ ಕಟ್ಟುವ ಕೆಲಸಗಾರರಾಗಿ ದುಡಿಯುತ್ತಿದ್ದಾರೆ ಇಂತ ಕೆಲಸಗಾರರ ಕುಟುಂಬಗಳು ಆರ್ಥಿಕ ಪ್ರಗತಿಯನ್ನು ಸಾಧಿಸಿವೆ.

೫.೧೬ ಚಾಲಕವೃತ್ತಿ

ಛಲವಾದಿ ಜನರು ತಮ್ಮ ಜೀವನೋಪಾಯಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದು ವಿವಿಧ ಚಾಲಕ ವೃತ್ತಿಯಲ್ಲಿ ಗಣನೀಯವಾಗಿ ಕಂಡುಬರುತ್ತಾರೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಟೋಚಾಲಕರಾಗಿ ಆಟೋ ಓಡಿಸುವುದು, ಲಾರಿ ಡ್ರೈವರ್‌ಗಳಾಗಿ-ಕ್ಲೀನರ್‌ಗಳಾಗಿ ಸರಕುಗಳನ್ನು ಸಾಗಿಸುವುದು, ಖಾಸಗೀ ಬಸ್‌ಗಳಲ್ಲಿ ಕೆಲಸ ಮಾಡುವುದು, ಟಂಟಂ ಗಾಡಿಗಳನ್ನು ಟ್ರ್ಯಾಕ್ಟರ್, ಜೀಪು, ಕಾರುಗಳ ಚಾಲಕರಾಗಿದ್ದಾರೆ. ಜೆ.ಸಿ.ಬಿ. ಯಂತ್ರಗಳನ್ನು ನಡೆಸುವುದು. ಹೀಗೆ ಇನ್ನಿತರೆ ವಾಹನಗಳಲ್ಲಿ ಚಾಲಕರಾಗಿ, ನಿರ್ವಾಹಕರಾಗಿ, ಕ್ಲೀನರ್‌ಗಳಾಗಿ ದುಡಿಯುತ್ತಿದ್ದಾರೆ.

೫.೧೭ ಹಮಾಲವೃತ್ತಿ

ಛಲವಾದಿಗಳು ದೈಹಿಕವಾಗಿ ಸಮರ್ಥರಾಗಿರುವುದರಿಂದ ಭಾರ ಎತ್ತುವ ಕೆಲಸಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ, ದಲ್ಲಾಳಿ ಅಂಗಡಿಗಳಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ರೈಲ್ವೇ ನಿಲ್ದಾಣಗಳಲ್ಲಿ ಹಮಾಲಿ ಕೆಲಸ; ರೈತರಿಂದ ಬಂದ ದವಸ ಧಾನ್ಯಗಳನ್ನು ಸ್ವಚ್ಛಗೊಳಿಸಿ, ತೂಕ ಮಾಡಿ ಚೀಲಗಳಲ್ಲಿ ತುಂಬಿ ನಂತರ ಅದನ್ನು ನಿರ್ದಿಷ್ಟ ಸ್ಥಳಗಳಿಗೆ ಸೇರಿಸುವ ಕೆಲಸ; ಲಾರಿಗಳಿಗೆ ಸರಕನ್ನು ತುಂಬುವ ಹಾಗೂ ಇಳಿಸುವ ಕೆಲಸ; ಬಸ್‌ಸ್ಟ್ಯಾಂಡ್‌ಗಳಲ್ಲಿ ಪ್ರಯಾಣಿಕರ ಸರಕು ಸಾಮಗ್ರಿಗಳನ್ನು ಬಸ್ಸಿನ ಮೇಲೆ ಹಾಕುವ ಮತ್ತು ಇಳಿಸುವ ಕೆಲಸ; ಒಂಟೆತ್ತಿನ ಚಕ್ಕಡಿ ಮೂಲಕ ಹಮಾಲಿ ಕೆಲಸ; ಸರಕು, ಆಹಾರ ದಿನಸುಗಳು, ಪ್ರಯಾಣಿಕರ ವಸ್ತುಗಳು, ಅಂಗಡಿ ಸಾಮಾನುಗಳು, ಮನೆಗೆ-ಮನೆಯಿಂದ ಅಂಗಡಿಗೆ, ಬಸ್‌ಸ್ಟ್ಯಾಂಡ್-ರೈಲ್ವೆ ನಿಲ್ದಾಣಗಳಿಗೆ ಸಾಮಗ್ರಿಗಳನ್ನು ಚಕ್ಕಡಿ ಮೂಲಕ ಸಾಗಿಸುವ ಕೆಲಸ ಮಾಡುತ್ತಿದ್ದಾರೆ. ಹಮಾಲವೃತ್ತಿಯನ್ನು ಮಾಡುವದು ಹೆಚ್ಚಾಗಿ ಪಟ್ಟಣ ಹಾಗೂ ನಗರಪ್ರದೇಶಗಳಲ್ಲಿ ಕಂಡುಬರುತ್ತಾರೆ.

೫.೧೮ ಪತ್ರಿಕಾರಂಗ :

ಈ ದೇಶದ ಸಂವಿಧಾನವನ್ನು ರಚಿಸಿದ ಬಿ. ಆರ್. ಅಂಬೇಡ್ಕರ್ ಅಸ್ಪೃಶ್ಯರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಜಾಗೃತಗೊಳಿಸುವ ಸಲುವಾಗಿ ವೃತ್ತ ಪತ್ರಿಕೆಗಳನ್ನು ಸಂಪಾದಿಸಿ ನಡೆಸಿದರು. ನಂತರ ೧೯೧೯ರಲ್ಲಿ ಮೂಕನಾಯಕ ಎಂಬ ಪತ್ರಿಕೆ ಪ್ರಾರಂಭಿಸಿ ಎಲ್ಲ ಜನಾಂಗದ ಅಭಿವೃದ್ಧಿಗೆ ಶ್ರಮಿಸಿದರು.

ಇದೇ ರೀತಿ ಸಮಾಜದ ಹಿರಿಯರ ಅನುಭವ ಪಡೆದ ಗದಗ ಜಿಲ್ಲೆಯಲ್ಲಿ ಛಲವಾದಿ ಸಮಾಜದ ಸಂಘಟನೆಯ ಜೊತೆಗೆ ಎಲ್ಲ ಜನಾಂಗದ ಅಭ್ಯುದಯಕ್ಕಾಗಿ ಮಾಧ್ಯಮ ಕ್ಷೇತ್ರದಲ್ಲಿ ಸ್ವಂತ ವಾರ ಪತ್ರಿಕೆಯನ್ನು ಶ್ರೀ ಸಿದ್ದಪ್ಪ ನಿಂಗಬಸಪ್ಪ ಲಿಂಗಧಾಳ ಹಾಗೂ ಶ್ರೀ ದೇವಪ್ಪ ಎನ್. ಲಿಂಗಧಾಳ ಅವರು ದಿನಾಂಕ ೧೧-೦೨-೨೦೦೬ರಂದು ಭೀಮ ಕ್ರಾಂತಿ ಜ್ಯೋತಿ ಪತ್ರಿಕೆ ಎಂಬ ಹೆಸರಿನಲ್ಲಿ ಹೊರತಂದರು.

ದೇಶದ ಚರಿತ್ರೆಯಲ್ಲಿ ಸಮಾನತೆಯ ಹಣತೆಯನ್ನು ಹಚ್ಚಿ ಶೋಷಿತರ ಅಭಿವೃದ್ಧಿಯ ಚಿಂತನೆಗೆ ಮುಡಿಪಾದ ಈ ಪತ್ರಿಕೆಯ ಮೊದಲ ಸಂಪಾದಕ ಶ್ರೀ ಸಿದ್ಧಪ್ಪ ಎನ್. ಲಿಂಗಧಾಳ ಆವರು ೨೦೦೬ರಲ್ಲಿ ಆರೋಗ್ಯ ಇಲಾಖೆಯಲ್ಲಿ ನೇಮಕರಾದರು. ಈ ಹಿನ್ನೆಲೆಯಲ್ಲಿ ಅವರ ಸಹೋದರ ಶ್ರೀ ದೇವಪ್ಪ ಎನ್. ಲಿಂಗಧಾಳ ಸಂಪಾದಿಸುತ್ತಿರುವ ಲಿಂಗೇಶವಾಣಿ ಎಂಬ ಹೊಸ ವಾರ ಪತ್ರಿಕೆ ದಿನಾಂಕ ೦೩-೧೦-೨೦೧೧ರಂದು ಬಿಡುಗಡೆಯಾಯಿತು. ರಾಜ್ಯಾದ್ಯಂತ ಪ್ರಸಾರದಲ್ಲಿರುವ ಈ ರಾಷ್ಟ್ರೀಯ ಕನ್ನಡ ಪಾಕ್ಷಿಕ ಜನ ಮನಗೆದ್ದ ಪತ್ರಿಕೆಯಾಗಿದೆ.

೫.೧೯ ಸ್ತ್ರೀ ಸ್ವಸಹಾಯ ಸಂಘಗಳು

ಕರ್ನಾಟಕದಲ್ಲಿ ೧೯೯೫-೯೬ರಿಂದ ಮಹಿಳಾ ಸ್ವ-ಸಹಾಯ ಸಂಘಗಳು ಸ್ಥಾಪನೆಯಾಗಿವೆ. ಇವು ಸ್ಥಾಪನೆಯಾಗುವ ಮೊದಲು ಜನ ಲೇವಾದೇವಿದಾರರು ಮತ್ತು ಜಮೀನ್ದಾರರ ಬಳಿ ಸಾಲ ಪಡೆದು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದರು. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸ್ವಯಂ ಸೇವಾ ಸಂಸ್ಥೆಗಳನ್ನು ಸ್ಥಾಪನೆ ಮಾಡಿತು. ಸಾಮಾನ್ಯವಾಗಿ ಎಲ್ಲಾ ವರ್ಗದ ಸ್ತ್ರೀ ಪುರುಷರು ಈ ಸಂಘಗಳನ್ನು ಸ್ಥಾಪನೆ ಮಾಡಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಶ್ರಮಿಸಿದರು. ಮುಖ್ಯವಾಗಿ ಸಮುದಾಯದ ಮಹಿಳೆಯರಲ್ಲಿ ೧೦ ರಿಂದ ೨೦ ಸದಸ್ಯರು ಇತರ ಜನರೊಂದಿಗೆ ಬೆರೆತು ಸಂಘ ಸ್ಥಾಪನೆ ಮಾಡಿಕೊಳ್ಳುತ್ತಾರೆ, ಆರ್ಥಿಕವಾಗಿ ಪ್ರಬಲತೆ ಸಾಧಿಸಿ ಉತ್ತಮ ಜೀವನ ಸಾಗಿಸುತ್ತಿದ್ದಾರೆ.

ಗದಗ ಜಿಲ್ಲೆಯಲ್ಲಿ ನರಗುಂದ ತಾಲೂಕಿನ ಕೊಣ್ಣೂರದಲ್ಲಿ ಛಲವಾದಿ ಸಮುದಾಯದ ಸ್ತ್ರೀಯರು ಮೇಘ ಮತ್ತು ನಮ್ಮೂರ ಮಂದಾರ ಎಂಬ ಎರಡು ಸ್ತ್ರೀ ಶಕ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಇದೇ ತಾಲೂಕಿನ ಹದ್ಲಿ ಗ್ರಾಮದಲ್ಲಿ ಛಲವಾದಿ ಸಮುದಾಯದ ಸ್ತ್ರೀಯರು ಮಾತೆ ಮಹಾದೇವಿ, ಅನ್ನದಾನೇಶ್ವರಿ, ದುರ್ಗಾದೇವಿ ಎಂಬ ಮೂರು ಸ್ತ್ರೀ ಶಕ್ತಿ ಸಹಾಯಕ ಸಂಘಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಶಿರಹಟ್ಟಿ ತಾಲೂಕು ರಾಮಗಿರಿ ಗ್ರಾಮದಲ್ಲಿ ಛಲವಾದಿ ಸಮುದಾಯದ ಎರಡು ಸ್ತ್ರೀಶಕ್ತಿ ಸಹಾಯಕ ಸಂಘಗಳಿವೆ. ಈ ಸ್ವಸಹಾಯ ಸಂಘಗಳ ಮೂಲಕ ಛಲವಾದಿ ಸಮುದಾಯದ ಮಹಿಳೆಯರು ತಮ್ಮ ಕುಟುಂಬದ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಈ ಸಂಘಗಳಿಂದ ತಮಗೆ ಅನುಕೂಲವಾಗುವಂಥ ಉದ್ಯೋಗದಲ್ಲಿ ವಿನಿಯೋಗಿಸಿ ಆರ್ಥಿಕ ಸದೃಢರಾಗಲು ಶ್ರಮಿಸುತ್ತಿದ್ದಾರೆ.

ಅ.ನಂ.	ಗ್ರಾಮ	ತಾಲೂಕು	ಸ್ತ್ರೀ ಶಕ್ತಿ ಸಂಘದ ಹೆಸರು
೧)	ಕೊಣ್ಣೂರು	ನರಗುಂದ	೧) ಮೇಘ –
			೨) ನಮ್ಮೂರ ಮಂದಾರ
೨)	ಹದ್ಲಿ	ನರಗುಂದ	೧) ಮಾತಾದೇವಿ
			೨) ಅನ್ನದಾನೇಶ್ವರಿ
			೩) ದುರ್ಗಾದೇವಿ
೩)	ರಾಮಗಿರಿ	ಶಿರಹಟ್ಟಿ	ಮಹಿಳಾ ಸ್ತ್ರೀ ಸಹಾಯಕ ಸಂಘ
೪)	ನಿಡಗುಂದಿ	ರೋಣ	ಭುವನೇಶ್ವರಿ
೫)	ಮುದೇನಗುಡಿ	ರೋಣ	ಮಹಿಳಾ ಸ್ತ್ರೀ ಸಹಾಯಕ ಸಂಘ
೬)	ಸೋಮನಕಟ್ಟಿ	ರೋಣ	ಧರ್ಮಸ್ಥಳದ ಮಹಿಳಾ ಸ್ವಸಹಾಯ ಸಂಘ
೭)	ಚಿಕ್ಕನರಗುಂದ	ನರಗುಂದ	ದುರ್ಗಾದೇವಿ
೮)	ಸೂಡಿ	ರೋಣ	೧) ದುರ್ಗಾದೇವಿ
			೨) ಭೀಮಾಂಬಿಕೆ
			೩) ಮಹಾಮಾಯಿ
೯)	ಬೆನಕೊಪ್ಪ	ನರಗುಂದ	ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ –
೧೦)	ಮಲ್ಲಾಪುರ	ರೋಣ	ಸವಿತಾ ಸ್ವಸಹಾಯ ಸಂಘ
೧೧)	ಮೆಣಸಗಿ	ರೋಣ	ದುರ್ಗಾದೇವಿ ಸ್ವಸಹಾಯ ಸಂಘ
೧೨)	ಬೆನಾಳ್	ರೋಣ	ದುರ್ಗಾದೇವಿ ಸ್ವಸಹಾಯ ಸಂಘ
೧೩)	ಸಂದಿಗವಾಡ	ರೋಣ	ಶ್ರೀ ಲಕ್ಷ್ಮೀ ಸ್ವಸಹಾಯ ಸಂಘ
೧೪)	ಚಿಕ್ಕನರಗುಂದ	ನರಗುಂದ	ದುರ್ಗಾದೇವಿ ಸ್ವಸಹಾಯ ಸಂಘ
೧೫)	ಗೋಜನೂರು	ಶಿರಹಟ್ಟಿ	ಮಂಜುನಾಥ ಸ್ವಸಹಾಯ ಸಂಘ
೧೬)	ಗೋಜನೂರು	ಶಿರಹಟ್ಟಿ	ದುರ್ಗಾದೇವಿ ಸ್ವಸಹಾಯ ಸಂಘ
೧೭)	ರೋಣ	ರೋಣ	ಮಾತೆಮಹಾದೇವಿ ಸ್ವಸಹಾಯ ಸಂಘ
೧೮)	ರೋಣ	ರೋಣ	ಅನ್ನದಾನೇಶ್ವರಿ ಸ್ವಸಹಾಯ ಸಂಘ
೧೯)	ರೋಣ	ರೋಣ	ದುರ್ಗಾದೇವಿ ಸ್ವಸಹಾಯ ಸಂಘ

ಇವೇ ಮೊದಲಾದ ಸ್ತ್ರೀ ಶಕ್ತಿ ಸಂಘಗಳು ಇನ್ನೂ ಕೆಲವು ಗ್ರಾಮಗಳಲ್ಲಿವೆ.

ಹೀಗೆ ಸ್ತ್ರೀ ಶಕ್ತಿ ಸಹಾಯಕ ಗುಂಪುಗಳನ್ನು ಮಾಡಿಕೊಂಡ ಮಹಿಳೆಯರು ಆರ್ಥಿಕವಾಗಿ ಇನ್ನಷ್ಟು ಸಬಲರಾಗಲು ಕಾರಣವಾಗಿದೆ. ಇದರಿಂದ ಮಕ್ಕಳ ಶಿಕ್ಷಣ, ಮನೆಯ ಖರ್ಚು, ಮದುವೆ ಮುಂತಾದ ಶುಭಕಾರ್ಯಗಳಿಗೆ ಸಾಕಷ್ಟು ಸಹಕಾರಿಯಾಗಿದೆ. ಇದರಿಂದ ಸ್ತ್ರೀಯರು ಆರ್ಥಿಕವಾಗಿ ಮುಂದುವರಿಯಲು ಅನುಕೂಲವಾಗಿದೆ. ಇಂತಹ ಸಂಘಗಳಿಗೆ ಬ್ಯಾಂಕ್‌ಗಳಿಂದ ಹೆಚ್ಚಿನ ಸಾಲ ಸೌಲಭ್ಯಗಳು ಸರ್ಕಾರ ಒದಗಿಸಿಕೊಡಬೇಕಿದೆ.

ಅಡಿಟಿಪ್ಪಣಿಗಳು :

೧) ಅರ್ಜುನ ಗೊಳಸಂಗಿ, ಗ್ರಾಮೀಣ ಪ್ರದೇಶದಲ್ಲಿ ಒಕ್ಕಲುತನ ಸಮಸ್ಯೆ, ಪುಟ-೧

೨) ಡಾ. ಹನುಮಂತರಾವ ಬಿ. ದೊಡಮನಿ, ಜಾನಪದ ತೊಟ್ಟಿಲು, ಪು.೬೦

೩) ದೇವೇಂದ್ರಕುಮಾರ ಹಕಾರಿ, ಹಂತಿ ಹಾಡುಗಳು, ಪುಟ-೫, ೬.

೪) ಅದೇ ಪುಟ-೭-೮.

೫) ಕಮಲ ಹೆಮ್ಮಿಗೆ, ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ : ಒಂದು ಅಧ್ಯಯನ, ಪುಟ-೫೬, ೫೭, ೫೮, ೫೯.

೬) ಡಾ.ಹೀ.ಚಿ. ಬೋರಲಿಂಗಯ್ಯ (ಸಂ.), ಕರ್ನಾಟಕ ಜನಪದ ಕಲೆಗಳ ಕೋಶ, ಪುಟ-೨೪೩.

೭) ಕಾ. ವೆಂ. ಶ್ರೀನಿವಾಸಮೂರ್ತಿ (ಸಂ.), ಹೋರಾಟದ ನೂರು ಹಾಡುಗಳು, ಪು.೪

ಅಧ್ಯಾಯ – ೬

ಧಾರ್ಮಿಕ ಜೀವನ

ಅಧ್ಯಾಯ-೬

ಧಾರ್ಮಿಕ ಜೀವನ

ಧರ್ಮ ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಮಾನವ ಮತ್ತು ಪ್ರಾಣಿ ನಡುವೆ ಭೇದ ಕಲ್ಪಿಸಲು ಧರ್ಮದಿಂದಲೂ ಸಾಧ್ಯ. ಪ್ರಕೃತಿಯ ಮಡಿಲಿನಲ್ಲಿ ಸಹಜವಾಗಿಯೆ ಬೆಳೆದು ಬಂದಿರುವ ಮಾನವ ಅಗೋಚರ ಶಕ್ತಿಯನ್ನು ನಂಬಿಕೊಂಡು ಬಂದಿದ್ದಾನೆ. ನೈಸರ್ಗಿಕ ಗಂಡಾಂತರ, ಕ್ರೂರ ಪ್ರಾಣಿಗಳ ಹಿಂಸೆ, ಭೂಕಂಪ, ಜ್ವಾಲಾಮುಖಿ, ಬಿರುಗಾಳಿ, ಸಾಂಕ್ರಾಮಿಕ ರೋಗ, ಬರಗಾಲ, ಕ್ಷಾಮ ಮುಂತಾದವನ್ನು ಸಹಜವಾಗಿ ಎದುರಿಸುವ ಪ್ರೇರಣೆ, ಶಕ್ತಿ ಹೊಂದಿರುವ ಮಾನವ ಮೊದಲಿನಿಂದಲೂ ಅಮಾನುಷ ಶಕ್ತಿಯನ್ನು ಅವಲಂಬಿಸಿದ್ದಾನೆ. ನಿಸರ್ಗದ ಪ್ರತಿಯೊಂದು ಆಗುಹೋಗುಗಳಿಗೆ ಅಲೌಕಿಕ ಶಕ್ತಿಗಳೇ ಕಾರಣವೆಂದು ನಂಬಿದ್ದಾನೆ. ಈ ನಂಬಿಕೆಯೇ ಧರ್ಮದ ಮೂಲವೆಂದು ಹೇಳಬಹುದು. ಧಾರ್ಮಿಕ ಮನೋಭಾವನೆ ಪ್ರೇತ ರೂಪದಲ್ಲಿರಲೀ ಶಕ್ತಿ ರೂಪದಲ್ಲಿರಲೀ ಈ ಎರಡೂ ಶಕ್ತಿಗಳ ಸಾಕ್ಷಾತ್ಕಾರಕ್ಕಾಗಿ ಮಾನವ ತನ್ನ ಸರ್ವಸ್ವವನ್ನು ಮುಡಿಪಾಗಿಟ್ಟಿದ್ದಾನೆ. ದೈವಶಕ್ತಿಯ ಕರುಣೆಯಿದ್ದಾಗ ಮಾತ್ರ ಈ ಜಗತ್ತಿನಲ್ಲಿ ಎಲ್ಲರೂ ಸುಖಿಗಳಾಗಿ ಬಾಳಲು ಸಾಧ್ಯವೆಂಬ ಕಲ್ಪನೆ ಇದರ ಹಿಂದೆ ಇದೆ. ಮಾನವ ತನ್ನ ಕ್ಷಣಿಕ ಸಂಸಾರ ತೊರೆದು ಸುಖ, ದುಃಖ, ಹುಟ್ಟು, ಸಾವು ಮುಂತಾದವುಗಳಿಂದ ವಿಮುಕ್ತನಾಗುವ ಆಸೆ ಅವನನ್ನು ಅಲೌಕಿಕ ಶಕ್ತಿಯ ಕಡೆಗೆ ಹೆಚ್ಚು ಸೆಳೆದಿದೆ. ಪ್ರಪಂಚದ ಬಂಧನದಿಂದ ಮುಕ್ತನಾಗಿ ದೇವರ ಸಾನಿಧ್ಯ ಸೇರಬೇಕೆಂಬ ಉತ್ಕಟ ಇಚ್ಛೆಯಿಂದ ಭಯ, ಭಕ್ತಿ, ನಂಬಿಕೆಗೆ ಒಳಗಾಗಿದ್ದಾನೆ. ಹೀಗಾಗಿ ಧಾರ್ಮಿಕ ಪರಂಪರೆಗಳು ಮನುಷ್ಯನ ಜೀವನದಲ್ಲಿ ಹಾಸುಹೊಕ್ಕಾಗಿವೆ.

"ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸುಮಾರು ೨೫,೦೦೦ ವರ್ಷಗಳ ಹಿಂದೆ 'ನಿಯಾಂಡರ್ತಲ್' ಮಾನವ ಭೂಮಿಯ ಮೇಲೆ ವಾಸಿಸುತ್ತಿದ್ದ. ನಿಯಾಂಡರ್ತಲ್ ಮಾನವ ಶವಸಂಸ್ಕಾರ ಮಾಡುವ ವಿಧಿ ವಿಧಾನಗಳ ಬಳಕೆಯನ್ನು ಚೆನ್ನಾಗಿ ಅರಿತಿದ್ದ. ಪುನರ್ ಜನ್ಮದ ಕಲ್ಪನೆಯಿಂದ ಸತ್ತವರನ್ನು ಹೂಳುತ್ತಿದ್ದ. ಜೀವಂತವಿದ್ದಾಗ ಉಪಯೋಗಿಸುತಿದ್ದ ವಸ್ತುಗಳ ಜೊತೆ ಅನೇಕ ಆಯುಧಗಳನ್ನು ಶವದ ಜೊತೆಗಿಡಲಾಗುತ್ತಿತ್ತು. ಮಾನವನಿಗೆ ಅಖಂಡ ಬ್ರಹ್ಮಾಂಡದ ಪರಿಚಯವಾದಾಗ ಅದರೊಂದಿಗಿನ ತನ್ನ ಸಂಬಂಧವನ್ನು ಕಲ್ಪಿಸಿಕೊಳ್ಳತೊಡಗಿದ. ಬ್ರಹ್ಮಾಂಡದ ರಹಸ್ಯ ಶಕ್ತಿಗಳ ಅರಿವು ಅವನಿಗಾದಾಗ ಧರ್ಮದ ಬೀಜಗಳು ಅವನಲ್ಲಿ ಮೊಳಕೆಯೊಡೆಯಲು ಪ್ರಾರಂಭಿಸಿದವು. ಈ ವಿಷಯವನ್ನು ಎಲ್ಲ ಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಅತಿಪುರಾತನವಾದ ಸಂಘ ಸಂಸ್ಥೆಗಳ ಸಾಲಿನಲ್ಲಿ ಧರ್ಮವೂ ಸೇರಿಕೊಂಡಿದೆ."[೧]

ಆದಿಮಾನವನಿಂದ ಆಧುನಿಕ ಮಾನವನ ವರೆಗೂ ಒಂದಿಲ್ಲೊಂದು ರೂಪದಲ್ಲಿ ಧರ್ಮದ ಅಸ್ತಿತ್ವವನ್ನು ಸಮಾಜ ಉಳಿಸಿಕೊಂಡು ಬಂದಿದೆ. ನಿಗೂಢ ಶಕ್ತಿಯ ರಹಸ್ಯವನ್ನು ತಿಳಿಯಲು ಸದಾ ಪ್ರಯತ್ನಿಸುತ್ತಲೆ ಇದ್ದಾನೆ. ಆದಿವಾಸಿಗಳಲ್ಲಿಯೂ ಒಂದು ವಿಧದ ಧರ್ಮ ಇತ್ತೆಂದು ಸಮಾಜ ಶಾಸ್ತ್ರಜ್ಞರು ಮತ್ತು ಮಾನವ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಆದಿವಾಸಿಗಳು ಧರ್ಮದೊಂದಿಗೆ ನಿಕಟ ಮತ್ತು

ಅನ್ಯೋನ್ಯ ಬಾಂಧವ್ಯ ಹೊಂದಿರುತ್ತಾರೆಂದು ಫ್ರೇಜರ್ ಹೇಳಿದ್ದಾನೆ. ನಿಸರ್ಗ ಪೂಜೆ, ಪಿತೃ ಪೂಜೆ, ಪಶು ಪಕ್ಷಿಗಳ ಪೂಜೆ, ಸೂರ್ಯ ಚಂದ್ರರ ಪೂಜೆ, ಮಾಟ-ಮಂತ್ರ, ಮುಂತಾದವನ್ನು ಆದಿವಾಸಿಗಳ ಆಚರಣೆಯಲ್ಲಿ ಕಾಣುತ್ತೇವೆ. ಆದಿವಾಸಿಗಳು ಸಹಜವಾಗಿ ನಿಸರ್ಗದಲ್ಲಿನ ಪ್ರೇತರೂಪ ಮತ್ತು ಶಕ್ತಿರೂಪದ ಅಮಾನುಷ ಶಕ್ತಿಯ ಬಗ್ಗೆ ತಿಳಿಯಬಲ್ಲವರಾಗಿದ್ದರು. ತಮ್ಮ ಇಷ್ಟಾರ್ಥಗಳ ಪ್ರಾಪ್ತಿಗಾಗಿ ಈ ಎರಡೂ ಶಕ್ತಿಗಳ ಬಳಕೆಯನ್ನು ಮಾಡುತ್ತಿದ್ದರು. ನಿಸರ್ಗದಲ್ಲಿ ಪ್ರತಿಯೊಂದು ವಸ್ತುವಿನಲ್ಲಿಯೂ ಜೀವ ಸಂಚಾರವಿದೆ ಎಂಬ ಸರ್ವಚೇತನ ವಾದವನ್ನು ನಂಬಲಾಗಿದೆ. ದೇಹದಿಂದ ಬೇರ್ಪಟ್ಟ ಆತ್ಮ ಗಾಳಿಯಲ್ಲಿ ಸಂಚರಿಸುತ್ತ ತನಗೆ ಇಷ್ಟಬಂದ ಜೀವಿಗಳ ದೇಹವನ್ನು ಪ್ರವೇಶ ಮಾಡಬಹುದು. ಅವರ ಸಂಚಾರಕ್ಕೆ ನಿಸರ್ಗದಲ್ಲಿಯ ಚೇತನಾ ವಸ್ತುಗಳು ಯಾವುದೇ ತೊಂದರೆಯನ್ನು ತರಲಾರವು ಎಂಬ ನಂಬಿಕೆ ಇತ್ತು.

ಹಿಂದೂ, ಕ್ರಿಶ್ಚಿಯನ್, ಇಸ್ಲಾಂ, ಬೌದ್ಧ ಮುಂತಾದ ಧರ್ಮಗಳು ತಮ್ಮ ಧಾರ್ಮಿಕ ನಂಬಿಕೆ, ವಿಧಿ ವಿಧಾನಗಳಿಗನುಗುಣವಾಗಿ ಆಚರಣೆಯನ್ನು ತಂದಿವೆ. ಏಕದೇವ ಆರಾಧನೆ ಮತ್ತು ಬಹುದೇವತ ಆರಾಧನೆ, ಧರ್ಮಗ್ರಂಥಗಳ ಮೇಲೆ ಇಟ್ಟಿರುವ ಭಕ್ತಿ, ಜಾತ್ರೆ, ಉತ್ಸವಗಳು, ಹಬ್ಬ ಹರಿದಿನಗಳು ಮುಂತಾದವು ವಿಶ್ವದ ಎಲ್ಲ ಸಮಾಜಗಳಲ್ಲಿಯೂ ಒಂದಿಲ್ಲೊಂದು ವಿಧದಲ್ಲಿ ಇವೆ.

೬.೧ ಧರ್ಮ ಪದದ ಅರ್ಥ

'ಧರ್ಮ' ಎಂಬ ಪದ ಸಂಸ್ಕೃತ ಮೂಲವಾಗಿದೆ. ಇದರರ್ಥ 'ಧರಿಸು', 'ಧಾರಣೆ', ಅಥವಾ 'ಪೋಷಣೆ' ಮಾಡು ಎಂದಾಗುವುದು. ಜಗತ್ತನ್ನು ಉದ್ಧರಿಸುವ ಅಥವಾ ಪೋಷಣೆ ಮಾಡುವುದನ್ನು ಧರ್ಮ ಎಂದು ಹೇಳಬಹುದು. ಸಾಮಾನ್ಯವಾಗಿ ಮಾನವ ಅತಿಮಾನುಷ ಶಕ್ತಿಯ ಬಗ್ಗೆ ಇಟ್ಟಿರುವ ನಂಬಿಕೆಯನ್ನು ಧರ್ಮವೆಂದು ಹೇಳಬಹುದು. ಧರ್ಮ ಕುರಿತು ಕೆಲವು ಸಮಾಜ ಶಾಸ್ತ್ರಜ್ಞರು ಹೀಗೆ ಹೇಳುತ್ತಾರೆ.

ಸರ್ ಜೇಮ್ಸ್ ಫ್ರೇಜರ್ : "ಮಾನವ ಜೀವಿಗಳಿಗಿಂತಲೂ ಉತ್ಕೃಷ್ಟವಾದ ಅಥವಾ ಅಗೋಚರವಾದ ಶಕ್ತಿಯು ನಿಸರ್ಗ ಮತ್ತು ಮಾನವನ ಇರುವಿಕೆಯ ಆಗು ಹೋಗುಗಳನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಕಲ್ಪನೆಗಳನ್ನು ತಿಳಿದಿರುವ ನಂಬಿಕೆಯೇ ಧರ್ಮ."

ಮ್ಯಾಕ್ಸ್ ಮುಲ್ಲರ್ : "ನಿಗೂಢವಾದ ದಿವ್ಯಶಕ್ತಿಯನ್ನು ತಿಳಿಯಲು ಮಾನವನಿಗೆ ಸಹಾಯವಾಗಿ ನಿಲ್ಲುವ ಅವನ ಮನೋ ಸಾಮರ್ಥ್ಯವೇ ಧರ್ಮ."[೨]

೬.೨ ಸಂಸ್ಕಾರಗಳು

ಮನುಷ್ಯನ ಜೀವನದಲ್ಲಿ ಹುಟ್ಟು, ವಿವಾಹ, ಮತ್ತು ಸಾವು ಪ್ರಮುಖ ಹಂತಗಳಾಗಿವೆ. ಇವುಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಸಮಾಜದಲ್ಲಿ ನಂಬಿಕೆ, ಆಚರಣೆ, ಸಂಪ್ರದಾಯಗಳಿವೆ. ಅದರಂತೆ

ಭಾರತೀಯ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಕೆಲವು ಸಂಸ್ಕಾರಗಳಿಗೆ ಒಳಪಡುತ್ತಾನೆ. ಛಲವಾದಿ ಸಮುದಾಯ ತನ್ನದೇ ವಿಶಿಷ್ಟ ಸಂಪ್ರದಾಯಗಳನ್ನು ರೂಢಿಸಿಕೊಂಡಿದೆ.

೬.೩ ದೇವರಿಗೆ ಸಲ್ಲಿಸುವ ಪೂಜೆ ಪುನಸ್ಕಾರಗಳು

ಪ್ರತಿಯೊಂದು ಜೀವಿಯಲ್ಲಿಯೂ ದೇವರಿದ್ದಾನೆ, ಬದುಕಿನ ಎಲ್ಲ ಆಗು ಹೋಗುಗಳಿಗೆ ದೈವಶಕ್ತಿಯೆ ಕಾರಣ ಎಂಬ ನಂಬಿಕೆ ಜನರಲ್ಲಿ ಪೂಜೆ ಪುನಸ್ಕಾರ ಮಾಡುವ ಭಾವನೆಯನ್ನು ಹುಟ್ಟಿ ಹಾಕಿದೆ. ಅದನ್ನು ದೇವರಿಗೆ ಹರಕೆ, ವ್ರತ, ನಿಯಮ, ಹಬ್ಬ, ಹುಣ್ಣಿಮೆ, ಜಾತ್ರೆ–ಉತ್ಸವ ಮುಂತಾದ ಭಿನ್ನ ರೂಪಗಳಲ್ಲಿ ಆಚರಿಸುವ ಮೂಲಕ ಜನ ತಮ್ಮ ಬಾಳಿನಲ್ಲಿ ನೆಮ್ಮದಿ ಕಂಡುಕೊಳ್ಳುತ್ತಾರೆ. ಜನಸಾಮಾನ್ಯರು ತಮಗೆ ಬರಬಹುದಾದ ಸುಖ–ದುಃಖಗಳು, ಸಂಪತ್ತು ಐಶ್ವರ್ಯ ಎಲ್ಲವೂ ದೇವರ ಕರುಣೆಯಿಂದಲೇ ಪ್ರಾಪ್ತವಾಗುತ್ತವೆ. ಅವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ–ಧರ್ಮದ ಫಲವಾಗಿರುತ್ತವೆ. ಅದಕ್ಕಾಗಿ ನಿಷ್ಠೆಯಿಂದ ದೇವರನ್ನು ಪೂಜಿಸಬೇಕು ಎಂಬ ನಂಬಿಕೆ ಜನರಲ್ಲಿ ಬೇರು ಬಿಟ್ಟಿದೆ.

೬.೪ ದೇವತಾರಾಧನೆ ಮತ್ತು ಆಚರಣೆ : ಕುಟುಂಬ ಆಚರಣೆಗಳು

೬.೪.೧ ಪುಣ್ಯ ತಿಥಿಗಳು :

ಮನೆಯ ಯಜಮಾನರು ಇಲ್ಲವೆ ಸದಸ್ಯರು ಮರಣಹೊಂದಿದ ನಂತರ ಅವರ ಎಲ್ಲ ಅಸ್ಥಿಗಳನ್ನು ಸಂಗ್ರಹಿಸಿ ಮಣ್ಣಿನ ಗಡಿಗೆಯಲ್ಲಿ ಹಾಕಿ ಅದನ್ನು ನೆಲದಲ್ಲಿ ಹೂಳಿ ಅದರ ಮೇಲೆ ಕಟ್ಟೆ ಅಥವಾ ಗುಡಿಯಾಕಾರದ ಗದ್ದಿಗೆ ಕಟ್ಟುತ್ತಾರೆ. ಪ್ರತಿವರ್ಷ ಸತ್ತ ದಿನದಂದು ನೆರೆ ಗ್ರಾಮಗಳಿಂದ ಭಜನಾ ಮೇಳಗಳನ್ನು ಕರೆಸಿ ಮನೆಯಲ್ಲಿ ರಾತ್ರಿ ಭಜನೆ ಮಾಡುತ್ತಾರೆ. ಸತ್ತ ವ್ಯಕ್ತಿಯ ಗುಣಗಾನ ಮಾಡುವ ಹಾಡುಗಳು ಮತ್ತು ದೇವರ ಹಾಡುಗಳನ್ನು ಹಾಡಲಾಗುತ್ತದೆ. ಈ ಪದ್ಧತಿ ಪ್ರತಿವರ್ಷವೂ ಆಚರಿಸಿಕೊಂಡು ಬರಲಾಗುತ್ತದೆ. ಬುದ್ಧ, ಬಸವ, ಅಂಬೇಡ್ಕರ್ ಜೀವನ ಚರಿತ್ರೆಯ, ಶಿಶುನಾಳ ಶರೀಫ ಸಾಹೇಬರ ತತ್ವಪದಗಳು, ಪಂಡಿತ ಪುಟ್ಟರಾಜ ಗವಾಯಿಗಳ ಹಾಡುಗಳನ್ನು ಹೆಚ್ಚು ಹಾಡಲಾಗುತ್ತದೆ. ಬೆಳಗಿನಜಾವ ಮಂಗಳಾರತಿಪದ ಹಾಡುವುದರೊಂದಿಗೆ ಜಾಗರಣೆ ಮುಗಿಯುತ್ತದೆ. ನಂತರ ಸಹಪಂಕ್ತಿ ಭೋಜನ ಇರುತ್ತದೆ..

೬.೪.೨. ಕರಿಲಕ್ಷ್ಮಿ ಪೂಜೆ

ಛಲವಾದಿ ಸಮುದಾಯದವರು ಪ್ರತಿವರ್ಷವೂ ದೀಪಾವಳಿಯ ಸಂದರ್ಭದಲ್ಲಿ ಲಕ್ಷ್ಮಿಯ ವ್ರತವನ್ನು ಆಚರಿಸುತ್ತಾರೆ. ಒಂದೇ ಮನೆತನಕ್ಕೆ ಸೇರಿದ ಕುಟುಂಬದ ಎಲ್ಲಾ ಸದಸ್ಯರು, ರಕ್ತ ಸಂಬಂಧಿಕರು ಸೇರಿ ಈ ಕಾರ್ಯವನ್ನು ಮಾಡುತ್ತಾರೆ. ದೇವಿ ಪೂಜೆಗೆ 'ಕರಿಗಡಬಿನ' ಎಡೆಯನ್ನು ಇಟ್ಟು ಆರತಿ ಮಾಡಲಾಗುತ್ತದೆ.

೬.೪.೩. ಪ್ರತಿನಿತ್ಯದ ಪೂಜೆ

ಪ್ರತಿದಿನವೂ ಎಲ್ಲ ಮನೆಗಳಲ್ಲಿ ಹುಲಿಗೆಮ್ಮ, ಎಲ್ಲಮ್ಮ, ಮೈಲಾರಲಿಂಗೇಶ್ವರ, ಶಿವ, ಪಾರ್ವತಿ, ಬಸವಣ್ಣ, ಮುಂತಾದ ದೇವರನ್ನು ಪೂಜಿಸಲಾಗುವುದು. ಮುಂಜಾನೆ ಸ್ನಾನದ ನಂತರ ನಿತ್ಯ ಅಂಗಳಕ್ಕೆ ನೀರು ಹಾಕುವರು. ಮಂಗಳವಾರ, ಶುಕ್ರವಾರ ಹಾಗೂ ಭಾನುವಾರಗಳಂದು ವಿಶೇಷವಾಗಿ ಸಗಣಿಯಿಂದ ಮನೆಯ ಹೊರಗಿನ ನೆಲ ಸಾರಿಸುವರು. ಹೊರಗೆ ರಂಗವಲ್ಲಿ ಹಾಕಿ ಮನೆಯಲ್ಲಿರುವ ತಮ್ಮ ಇಷ್ಟದೇವರ ಪೂಜೆ ಸಾಂಗವಾಗಿ ಮಾಡುತ್ತಾರೆ.

೬.೪.೪. ರೋಗ ನಿವಾರಕ ಆಚರಣೆ

ಕುಟುಂಬದಲ್ಲಿ ಚಿಕ್ಕಮಕ್ಕಳಿಂದ ಹಿರಿಯರವರೆಗೂ ಯಾರಿಗಾದರೂ ಕಾಯಿಲೆ-ಕಸಾಲೆಗಳು ಬಂದರೆ ವೈದ್ಯರಿಗಿಂತ ಮೊದಲು ದೇವರ ಸಾನಿಧ್ಯದಲ್ಲಿ ಬೇಡಿಕೊಳ್ಳುವರು. ಕೆಲವು ವೇಳೆ ರೋಗಗಳು ವಾಸಿಯಾಗದಿದ್ದಾಗ ಜನರು ತಮ್ಮ ಇಷ್ಟದೇವರ ಮೊರೆಹೋಗಿ ಹರಕೆ ಹೊರುತ್ತಾರೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಆಯಾ ದೇವತೆಗಳಿಗೆ ಬಲಿ ಕೊಡುವ ರೂಢಿಯಿದೆ. ಪ್ಲೇಗು, ಗಂಟಲುಬೇನೆ, ಕಾಲರ, ಅಮ್ಮ ಮುಂತಾದ ರೋಗಗಳಿಗೆ ಒಂದೊಂದು ಅಧಿದೇವತೆಯನ್ನು ಪೂಜಿಸಿ ತೃಪ್ತಿಪಡಿಸಿದರೆ ಬಂದ ರೋಗ ರುಜಿನ ನಿವಾರಣೆಯಾಗುವುದೆಂಬ ನಂಬಿಕೆ ಇದೆ.

೬.೪.೫ ಮಳೆ-ಬೆಳೆ-ಭೂಮಿ ಸಂಬಂಧ ಆಚರಣೆಗಳು

ಪ್ರತಿಯೊಂದು ಸಮುದಾಯದಲ್ಲಿಯೂ ಪ್ರಾಕೃತಿಕ ಅಂಶಗಳ ಕುರಿತು ಪೂಜೆ-ಪುನಸ್ಕಾರ ಮಾಡುವ ಸಂಪ್ರದಾಯವಿದೆ. ಇದು ಛಲವಾದಿ ಸಮುದಾಯದವರಿಂದ ಹೊರತಾಗಿಲ್ಲ. ಇವರಲ್ಲಿ ಭೂಮಿಗೆ ಸಂಬಂಧಿಸಿ ಅನೇಕ ಆಚರಣೆಗಳನ್ನು ಮಾಡುವುದು ಕಂಡುಬರುತ್ತದೆ. ಮಳೆ ಬಂದರೆ ಬೆಳೆ ಬರುವುದು ಎಂದು ಹಲವಾರು ಆಚರಣೆ ಮಾಡಲಾಗುತ್ತದೆ. ಸಕಾಲದಲ್ಲಿ ಮಳೆ ಬರದಿದ್ದಾಗ ಗುರ್ಜಿ ಪೂಜೆ ಮಾಡುವುದು, ಉಡಿತುಂಬುವುದು ಮಾಡಲಾಗುತ್ತದೆ. ಯಾವುದೇ ಬಗೆಯಲ್ಲಿ ತೊಂದರೆ ಉಂಟಾದರೆ, ಮಳೆಯಾಗದಿದ್ದರೆ ದೇವಿ ಸಿಟ್ಟಾಗಿದ್ದಾಳೆಂದು ಭಾವಿಸಲಾಗುತ್ತದೆ. ಆಗ ಐದು ಮಂಗಳವಾರ ಅಥವಾ ಶುಕ್ರವಾರ, ಇಲ್ಲವೆ ಎರಡೂ ವಾರ ಸೇರಿಸಿ ಆಚರಣೆ ಮಾಡಲು ಗ್ರಾಮದಲ್ಲಿ ಡಂಗುರ ಸಾರಿಸುತ್ತಾರೆ. ಆ ವಾರದ ದಿನದಂದು ವ್ಯವಸಾಯದ ಕೆಲಸ ಮಾಡುವಂತಿಲ್ಲ; ರೊಟ್ಟಿ ಮಾಡುವಂತಿಲ್ಲ ಎಂದು ಡಂಗುರ ಹಾಕುತ್ತಾರೆ. ಇದನ್ನು ಮೀರಿದವರಿಗೆ ದಂಡ ಹಾಕಲಾಗುವುದು. ಕೊನೆವಾರ ದೇವಿಗೆ ಹೊಸ ಸೀರೆ ತೊಡಿಸಿ, ಆಭರಣಗಳನ್ನು ತೊಡಿಸಿ, ಗುಡಿಗೆ ಸುಣ್ಣ ಹಚ್ಚಿದ ಬಳಿಕ ಕಳಸವನ್ನಿಡುತ್ತಾರೆ. ಮಂಗಳ ವಾದ್ಯಗಳೊಂದಿಗೆ ಎಲೆ, ಅಡಕಿ, ಅಕ್ಕಿ, ಅರಿಶಿಣ, ಕುಂಕುಮ ಮತ್ತು ಬಾಳೆಹಣ್ಣುಗಳನಿಟ್ಟು ಉಡಿ ತುಂಬುವ ಕಾರ್ಯ ನಡೆಯುತ್ತದೆ.

ಇನ್ನೂ ಕೆಲವು ಪೂಜೆ ವೃತ್ತಿಗೆ ಸಂಬಂಧಿಸಿವೆ. ಅವು ಎತ್ತಿನ ಪೂಜೆ, ಕೂರಗಿಪೂಜೆ, ನೇಗಿಲುಪೂಜೆ, ಮಂಡಿ ಪೂಜೆ, ಕೊಡಲಿ ಪೂಜೆ, ಗಳೆಪೂಜೆ, ಕುಡುಗೋಲುಪೂಜೆ, ಎಡದಿಂಡು ಪೂಜೆ, ನಗಪೂಜೆ, ಸಲಕಿ ಪೂಜೆ, ಬೆಡಗಿನ ಪೂಜೆ, ಗುದ್ದಲಿ ಪೂಜೆ ಮುಂತಾದವು. ಕೃಷಿಗೆ ಸಂಬಂಧಿಸಿದ ಹಲವು ಆಚರಣೆಗಳನ್ನು ಒಕ್ಕಲತನ ಮಾಡುವವರು ಆಚರಿಸುತ್ತಾರೆ.

೬.೫ ಜಾತ್ರೆಗಳು

ನಿರ್ದಿಷ್ಟ ಜನರ ಗುಂಪೊಂದು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ಕಾರಣಕ್ಕಾಗಿ ದೈವವೊಂದಕ್ಕೆ ಸಾಂಪ್ರದಾಯಿಕ ಪೂಜೆ ಪುನಸ್ಕಾರಾದಿ ಆಚರಣೆಗಳಿಂದ ನಡೆದುಕೊಳ್ಳುವುದಕ್ಕೆ 'ಜಾತ್ರೆ' ಎಂದು ಹೆಸರು.

"ಜಾತ್ರೆ ವಿವಿಧ ಜಾತಿಮತ ಗುಂಪುಗಳ ಮಧ್ಯೆ ಪರಸ್ಪರ ಬಾಂಧವ್ಯ ಕಲ್ಪಿಸುವ ಮಾರ್ಗವಾಗಿದೆ. ದೂರದ ಬಂಧುಗಳೆಲ್ಲರೂ ಒಂದೆಡೆ ಸೇರಿ ಕಷ್ಟ ಸುಖಗಳನ್ನು ಹಂಚಿಕೊಳ್ಳಲು, ಹಲವು ಪ್ರದೇಶಗಳ ಬಂಧು ಬಳಗದೊಂದಿಗೆ ವಿಚಾರವಿನಿಮಯ ಮಾಡಿಕೊಳ್ಳಲು, ತಮ್ಮ ಬಾಂಧವ್ಯ ಗಟ್ಟಿಗೊಳಿಸಿಕೊಳ್ಳಲು ಜಾತ್ರೆ ಮತ್ತು ಉತ್ಸವಗಳು ಪ್ರಮುಖ ಸಾಧನಗಳಾಗಿವೆ. ವಿವಿಧ ಜಾತಿಯ ಜನ ಒಂದೆಡೆ ಸೇರಿ ದೈವ ಕಲಾಪಗಳಲ್ಲಿ ಭಾಗವಹಿಸುವುದರಿಂದ ಸಾಮಾಜಿಕ ಹೊಂದಾಣಿಕೆ ಸಾಧಿತವಾಗುತ್ತದೆ. ಸಾಮಾಜಿಕ, ರಾಜಕೀಯ ಬಾಂಧವ್ಯಗಳು ಉತ್ತಮಗೊಳ್ಳುತ್ತವೆ. ಇಂದು ಕೂಡ ಜಾತ್ರೆ ಉತ್ಸವಗಳು ದೈವ ಆರಾಧನೆಯ ಜೊತೆಗೆ ಎಲ್ಲರೂ ಒಂದಾಗುವ ಕಾರಣದಿಂದ ಅರ್ಥಪೂರ್ಣ ಎನಿಸಿವೆ. ಸರ್ವ ಜಾತಿಯ ಜನರೆಲ್ಲ ಸರ್ವಾನುಮತದಿಂದ ಒಪ್ಪಿಗೆ ನೀಡಿದ ಮೇರೆಗೆ ಜಾತ್ರೆಯ ದಿನ ವರ್ಷದ ದಿನದಂದು ನಿಗದಿಯಾಗುತ್ತದೆ. ಆ ದಿನ ಜಾತ್ರೆ ವೈಭವದಿಂದ ಜರುಗುತ್ತದೆ. ನೃತ್ಯ ಮತ್ತು ಕಲಾ, ಭಜನೆ, ಕುದುರೆ ಕುಣಿತ, ನವಿಲು, ಕರಡಿ ಮಜಲು, ಜಗ್ಗಲಿಗೆ ಮೇಳ, ಬ್ಯಾಂಡ್ ಮೇಳ, ಡೊಳ್ಳುಕುಣಿತ ವೈವಿಧ್ಯಪೂರ್ಣವಾದ ಪ್ರದರ್ಶನಗಳು ನಡೆಯುತ್ತವೆ."[೩]

ಪಾರಂಪರಿಕವಾಗಿ ಒಂದೇ ಮನೆತನದವರು ದೇವರ ಅಥವಾ ದೇವಿಯ ಪೂಜಾರಿಯಾಗಿರುತ್ತಾನೆ. ಕೆಲವು ಸಂದರ್ಭಗಳಲ್ಲಿ ಕಾರಣಾಂತರಗಳಿಂದ ಬದಲಾಗಬಹುದು. ಜಾತ್ರೆ ನಡೆಯುವ ಸ್ಥಳದಲ್ಲಿ ದೇವಿ ಗುಡಿಯ ಹೊರ ಆವರಣದಲ್ಲಿ ಮರಗಳ ಅಡಿಯಲ್ಲಿ ಬಿಡಾರ ಹೂಡಿ ದೇವರಿಗೆ ಶ್ರದ್ಧೆ ನಿಷ್ಠೆಯಿಂದ ಪೂಜಿಸುತ್ತಾರೆ. ಗ್ರಾಮದ ಯಾವುದೇ ಜಾತ್ರೆ ಇರಲಿ ಛಲವಾದಿಯವರು ದೇವಾಲಯ ಪ್ರವೇಶಿಸದೆ ಹೊರಗಿನಿಂದಲೇ ಭಯ ಭಕ್ತಿಯಿಂದ ದೇವರನ್ನು ಪೂಜಿಸುವದು ಕಂಡುಬರುತ್ತದೆ. ಪ್ರತಿಯೊಂದು ಗ್ರಾಮದಲ್ಲಿ ಛಲವಾದಿಯವರು ದುರ್ಗಾದೇವಿಯ ದೇವಸ್ಥಾನ ಸ್ಥಾಪಿಸಿಕೊಂಡು ಪ್ರತಿ ವರ್ಷ ಮಹಾನವಮಿ ಜಾತ್ರೆಯನ್ನು ಮಾಡುತ್ತಾರೆ.

೬.೬ ಗ್ರಾಮದೇವತೆಗಳು

ಗ್ರಾಮೀಣ ಜನರ ಬದುಕಲ್ಲಿ ಅನಾದಿ ಕಾಲದಿಂದಲೂ ಹಾಸು ಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದ ಬದುಕಿನ ಅವಿಭಾಜ್ಯ ಅಂಗವಾಗಿವೆ. ಜನಪದ ಸಂಸ್ಕೃತಿ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವವರು ಗ್ರಾಮದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಸಮುದಾಯದ ಬಗ್ಗೆ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ನಿರ್ದಿಷ್ಟ ದೇವತೆಯ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನೆ, ವಿಧಾನಗಳು ಅನಾವರಣಗೊಳ್ಳುತ್ತ ಹೋಗುತ್ತವೆ. ವಿವಿಧ ಜ್ಞಾನಶಿಸ್ತುಗಳಾದ ಇತಿಹಾಸ, ಮನಃಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಮತ್ತಿತರ ಶಿಸ್ತುಗಳ ಸಹಾಯವನ್ನು ಈ ಬಗೆಯ ಅಧ್ಯಯನದಲ್ಲಿ ಪಡೆಯಬಹುದು.

೬.೭ ದೇವತೆಗಳ ವರ್ಗೀಕರಣ

ವಿಭಿನ್ನ ಪರಿಸರದ ಪ್ರೇರಣೆ, ನಂಬಿಕೆ, ಸಂಪ್ರದಾಯಗಳು ದೇವತೆಯ ಹುಟ್ಟಿಗೆ ಕಾರಣವಾಗಿವೆ. ಇಂಥ ದೇವತೆಯನ್ನು ನಿರ್ದಿಷ್ಟ ಕ್ರಮದಲ್ಲಿ ಅಧ್ಯಯನ ಮಾಡಬೇಕಾಗಿರುವುದು ಅತ್ಯಂತ ಮುಖ್ಯವಾಗಿದೆ. ದೇವತೆಗಳನ್ನು ೧.ಅನುಗ್ರಹ ದೇವತೆಗಳು, ೨.ಕ್ಷುದ್ರ ದೇವತೆಗಳು ಎಂದು ವರ್ಗೀಕರಿಸಬಹುದು.

೬.೭.೧. ಅನುಗ್ರಹ ದೇವತೆಗಳು

ವರ ಕೊಡುವ ಮೂಲಕ ಜನರ ಕಷ್ಟಗಳನ್ನು ಪರಿಹರಿಸುವ ದೇವತೆಗಳೆ ಅನುಗ್ರಹ ದೇವತೆಗಳು. ಉದಾ : ಶಿವ, ವಿಷ್ಣು, ಇಂದ್ರ, ಈ ದೇವತೆಗಳು ನೈವೇದ್ಯದಿಂದ ತೃಪ್ತಿ ಪಡುವ ದೇವತೆಗಳಾಗಿವೆ. ಇವನ್ನು ಮೇಲ್ವರ್ಗದ ಜನರು ಪೂಜಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಛಲವಾದಿಯವರು ಶಿವನನ್ನು ಕೂಡ ಪೂಜಿಸುತ್ತಾರೆ.

೬.೭.೨. ಕ್ಷುದ್ರ ದೇವತೆಗಳು

ಭಯಂಕರ ರೋಗಗಳನ್ನು ಹರಡುವ ಮೂಲಕ ಜನರಲ್ಲಿ ಭಯ ಹುಟ್ಟಿಸಿ ಭಕ್ತಿಯನ್ನು ಪಡೆಯುವ ದೇವತೆಗಳು ಕ್ಷುದ್ರ ದೇವತೆಗಳೆಂದು ಕರೆಯಿಸಿಕೊಳ್ಳುತ್ತವೆ. ಇವನ್ನು ಕೆಳ ವರ್ಗದವರ ದೇವತೆಗಳೆಂದು ಕರೆಯಲಾಗುತ್ತದೆ. ಮೂಲತಃ ಈ ಕ್ಷುದ್ರ ದೇವತೆಗಳು ಕುರಿ, ಕೋಣ, ಕೋಳಿ ಮೊದಲದ ಪ್ರಾಣಿಬಲಿ ಕೇಳುತ್ತವೆ.

ಛಲವಾದಿ ಸಮುದಾಯದವರು ಕ್ಷುದ್ರ ದೇವತೆಗಳನ್ನು ಪೂಜಿಸುತ್ತಾರೆ. ಮಾರಮ್ಮ, ಹುಲಿಗೆಮ್ಮ, ದುರ್ಗಾದೇವಿ, ಎಲ್ಲಮ್ಮ ಮುಂತಾದ ಸ್ತ್ರೀ ದೈವಗಳೆಲ್ಲ ಕ್ಷುದ್ರ ದೇವತೆಗಳೇ ಆಗಿವೆ.

೬.೭.೩. ಸಾಧು ದೇವತೆಗಳು

ಸಾಧು ದೇವತೆಗಳು ತಾವಿರುವ ಸ್ಥಳದಿಂದ ತನ್ನ ಸುತ್ತಮುತ್ತಲಿನ ಪ್ರದೇಶಗಳಿಗೂ ಪ್ರಭಾವ ಬೀರಿ ಭಕ್ತರನ್ನು ಬರಮಾಡಿಕೊಳ್ಳುತ್ತವೆ. ಅಂತಹ ದೇವತೆಗಳಾದ ಮಲೆಮಾದೇಶ್ವರ, ಮಂಟೇಸ್ವಾಮಿ, ಸವದತ್ತಿ ಎಲ್ಲಮ್ಮ, ಮೈಲಾರಲಿಂಗೇಶ್ವರ, ಮೈಸೂರು ಚಾಮುಂಡಿ, ತುಳಜಾಪುರದ ಭವಾನಿ, ಧರ್ಮಸ್ಥಳ ಮಂಜುನಾಥ, ಲಿಂಗಬಸವದೇವರು, ಬದಾಮಿ ಬನಶಂಕರಿದೇವಿ ಇತ್ತೀಚಿನ ದಿನಗಳಲ್ಲಿ ಬಸವೇಶ್ವರ, ಹನುಮಂತ, ಪಂಢರಪುರ, ತಿರುಪತಿ ವೆಂಕಟೇಶ, ಅಯ್ಯಪ್ಪ ಸ್ವಾಮಿ, ನಾಯಕನಟ್ಟಿ ತಿಪ್ಪೇಸ್ವಾಮಿ, ಮಾರಮ್ಮ, ಶಿರಡಿ ಸಾಯಿಬಾಬಾ ಮೊದಲದ ದೇವರನ್ನು ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಕುಟುಂಬಗಳು ದೇವಮಾನವರಾದ ಬುದ್ಧ, ಬಸವ, ಅಂಬೇಡ್ಕರ್‌ರನ್ನು ಭಯ ಭಕ್ತಿಯಿಂದ ಪೂಜಿಸುತ್ತಾರೆ.

೬.೭.೪. ಕುಲದೇವತೆ

ಪ್ರಾಚೀನ ಕಾಲದಿಂದಲೂ ನಾನಾ ಸಮುದಾಯಗಳು ಬೇರೆ ಬೇರೆ ಸ್ಥಳಗಳಲ್ಲಿ ತಮಗೆ ಸರಿಬಂದ ಅಥವಾ ತಮ್ಮ ಕಷ್ಟ–ಸುಖಗಳಿಗೆ ಸ್ಪಂದಿಸುವ ದೈವ ವನ್ನೇ ಕುಲದೇವರೆಂದು ಆರಾಧಿಸುವರು. ಪಾರಂಪರಿಕವಾಗಿ ಹಿರಿಯರು ತಮಗೆ ಸರಿಕಂಡ ಕಷ್ಟ–ಸುಖಗಳನ್ನು ಪರಿಹರಿಸಿದ ದೇವರನ್ನೆ ಮೂಲ ಮನೆತನದ ದೇವರೆಂದು ನಂಬಿಕೊಂಡು ಆರಾಧಿಸುವರು. ಈ ದೈವದ ನಂಬಿಕೆ ಮುಂದಿನ ಪೀಳಿಗೆಗೆ ಮುಂದುವರೆಯುವುದು. ಪ್ರತಿಯೊಂದು ಸಮುದಾಯ ಪ್ರಾಣಿ, ಸಸ್ಯ, ಗ್ರಹನಕ್ಷತ್ರವನ್ನೆ ತನ್ನ ಕುಲದೈವವೆಂದು ಪರಿಗಣಿಸಿ ತಮ್ಮ ವಂಶದ ಮುಂದಿನ ಪೀಳಿಗೆಯವರಿಗೂ ಅನುಸರಿಸಿಕೊಂಡು ಹೋಗುವಂತೆ ಮಾರ್ಗದರ್ಶನ ನೀಡುತ್ತದೆ. ಛಲವಾದಿ ಸಮುದಾಯದಲ್ಲಿ ಎಲ್ಲಮ್ಮ, ಹುಲಿಗೆಮ್ಮ, ಮೈಲಾರಲಿಂಗ, ಲಿಂಗಬಸವದೇವರನ್ನು ಮನೆ ದೇವತೆಯನ್ನಾಗಿ ಮಾಡಿಕೊಂಡು ಪೂಜಿಸಿಕೊಂಡು ಬರಲಾಗುತ್ತಿದೆ.

೬.೭.೫. ಇಷ್ಟ ದೇವತೆಗಳು

ಜನಸಾಮಾನ್ಯರು ತಮ್ಮ ಇಚ್ಛೆಗೆ ಅನುಸಾರವಾಗಿ ದೇವತೆಯನ್ನು ಆರಾಧಿಸುತ್ತಾರೆ. ಈ ದೇವತೆಯನ್ನು ಇಷ್ಟದೇವತೆ ಎಂದು ಕರೆಯಲಾಗುತ್ತದೆ. ಕುಷ್ಠ ರೋಗ, ಕ್ಷಯ ರೋಗ, ಕ್ಯಾನ್ಸರ್ ಮೊದಲಾದ ರೋಗ ರುಜಿನಗಳು ಒದಗಿಬಂದಾಗ ಇಷ್ಟದೇವರ ಮೊರೆ ಹೋಗುತ್ತಾರೆ. ಕುಲದೇವತೆ ಹಾಗೂ ಗ್ರಾಮದೇವತೆ ಅವರನ್ನು ಕಷ್ಟದಿಂದ ಪಾರುಮಾಡಲಾರದೆ ಅಸಮರ್ಥತೆಯನ್ನು ತೋರಿಸುತ್ತದೆ. ಆಗ ತಮಗೆ ತಿಳಿದ ರೀತಿಯಲ್ಲಿ ತಮಗಿಷ್ಟವಾದ ದೈವವನ್ನು ಪೂಜಿಸುವ ವಾಡಿಕೆಯಿದೆ.

೬.೭.೬. ಗೃಹ ದೇವತೆಗಳು

ಮನೆಯ ಬಾಗಿಲಲ್ಲಿ ಅಥವಾ ಮನೆಯ ಮುಂದಿನ ಪ್ರದೇಶದಲ್ಲಿ ಪ್ರತಿಷ್ಠಾಪನೆ ಮಾಡಲಾಗಿರುವ ದೇವರನ್ನು ಗೃಹ ದೇವತೆಯೆನ್ನುತ್ತಾರೆ. ಹಲವಾರು ಮನೆಯಲ್ಲಿ ತೆಂಗಿನಕಾಯಿ ಹುಗಿದಿಡುತ್ತಾರೆ. ಆ

ಸ್ಥಳವನ್ನು ಗೃಹಲಕ್ಷ್ಮಿ ಎಂದು ಪೂಜಿಸುವರು. ಈ ರೀತಿ ಪಾರಂಪರಿಕವಾಗಿ ನಂಬಿಕೊಂಡು ಬಂದ ದೇವತೆಗಳಿಗೆ ಗೃಹದೇವತೆ ಎಂದು ಕರೆಯುವ ಸಂಪ್ರದಾಯವಿದೆ. ಪ್ರತಿಯೊಂದು ಮನೆಯ ಮುಂದೆ ದೇವತೆಗಳಿದ್ದರೆ ಅದೊಂದು ಪವಿತ್ರ ಸ್ಥಳವಿದ್ದಂತೆ ಎಂಬುದು ಜನರ ನಂಬಿಕೆಯಾಗಿದೆ. ಇಂದು ಪ್ರತಿ ಮನೆಯ ಅಂಗಳದಲ್ಲಿ 'ತುಳಸೀ' ಗಿಡ ಇರುವುದನ್ನು ನೋಡಬಹುದು. ಇಲ್ಲಿ ಲಕ್ಷ್ಮಿದೇವತೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ.

೬.೭.೭ ಸಸ್ಯಹಾರಿ ದೇವತೆಗಳು

ಮನುಷ್ಯ ತಾನು ತಿನ್ನುವ ಆಹಾರದ ಆಧಾರದ ಮೇಲೆ ದೇವರನ್ನು ಮಾಂಸಾಹಾರಿ, ಕೆಲವನ್ನು ಸಸ್ಯಹಾರಿ ದೇವತೆಗಳನ್ನಾಗಿ ವಿಭಾಗಿಸಲಾಗಿದೆ. ಬಸವರಾಜ ನೆಲ್ಲಿಸರ ಅವರು ೧. ಪೌರಾಣಿಕ ದೇವರುಗಳು, ೨. ಜನಪದರ ದೇವರುಗಳು ಎಂದು ವಿಭಾಗ ಕ್ರಮ ಮಾಡಿದ್ದಾರೆ. ಚನ್ನಣ್ಣ ವಾಲೀಕಾರ ಅವರು ತಮ್ಮ ಹೈದ್ರಾಬಾದ ಕರ್ನಾಟಕ ಗ್ರಾಮ ದೇವತೆಗಳು ಎಂಬ ಕೃತಿಯಲ್ಲಿ ೧. ಮನೆ ದೇವತೆ, ೨. ಕುಲ ದೇವತೆ, ೩. ಧರ್ಮದೇವತೆ, ೪. ಗ್ರಾಮದೇವತೆ ಎಂದು ವಿಂಗಡಿಸಿದ್ದಾರೆ. ದಲಿತ ಕವಿ ಸಿದ್ಧಲಿಂಗಯ್ಯ ೧. ರಾಷ್ಟ್ರೀಯ ದೇವತೆಗಳು, ೨. ಪ್ರಾಂತೀಯ ದೇವತೆಗಳು, ೩. ಸ್ಥಳೀಯ ದೇವತೆಗಳು ಎಂದು ವರ್ಗೀಕರಿಸಿದ್ದಾರೆ.

೬.೭.೮ ಮಾಂಸಾಹಾರಿ ದೇವತೆಗಳು

ಮಾನವ ಪ್ರಾರಂಭದಲ್ಲಿ ಮಾಂಸಹಾರಿಯಾಗಿದ್ದ. ಬೇಸಾಯ ಗೊತ್ತಿರದ ಕಾಲದಲ್ಲಿ ಮಾಂಸಾಹಾರ ಪದ್ಧತಿ ಅನಿವಾರ್ಯವಾಗಿತ್ತು. ಮಾಂಸಹಾರವನ್ನು ತನ್ನ ಇಷ್ಟ ದೇವತೆಗಳಿಗೂ ನೈವೇದ್ಯ ಮಾಡುತ್ತಿದ್ದ. ಪ್ರಾಣಿಬಲಿ ಮೂಲಕ ದುಷ್ಟದೇವತೆಯನ್ನು ಸುಲಭವಾಗಿ ಒಲಿಸಿಕೊಳ್ಳ ಬಹುದೆಂದು ನಂಬಿದ್ದ. ಹಾಗಾಗಿ ಗ್ರಾಮಗಳಲ್ಲಿ ಮಾಂಸಹಾರಿ ಪದ್ಧತಿಯೇ ಹೆಚ್ಚಾಗಿದೆ. ಛಲವಾದಿ ಸಮುದಾಯದಲ್ಲಿ ಸಸ್ಯಹಾರಿಗಳೂ ಇದ್ದಾರೆ, ಮಾಂಸಹಾರಿಗಳೂ ಇದ್ದಾರೆ. ಈ ಎರಡೂ ದೇವತೆಗಳನ್ನು ಆರಾಧಿಸುವ ಕ್ರಮ ಇವರಲ್ಲಿದೆ. ಪ್ರಾಚೀನ ಕಾಲದಿಂದಲೂ ಇವರು ಶೈವ ವೈಷ್ಣವ ಪಂಥಗಳೆರಡನ್ನೂ ಆರಾಧಿಸುತ್ತಾರೆ.

೬.೮ ದೇವತೆಗಳು ಹಾಗೂ ಜಾತ್ರೆ ಉತ್ಸವಗಳು

ನಾಡದೇವತೆಯೆ ಇರಲೀ ಗ್ರಾಮದೇವತೆಯೆ ಇರಲೀ ಜನಸಾಮಾನ್ಯರು ತಮ್ಮ ಆರಾಧ್ಯ ದೈವವೆಂದು ಸರಳವಾಗಿ ಪೂಜಿಸುವ ಕ್ರಮ ನಮ್ಮಲ್ಲಿವೆ. ಆದರೆ ನಿರ್ದಿಷ್ಟ ಸಮುದಾಯ ಆರಾಧಿಸುವ ದೈವವನ್ನು ಪ್ರತ್ಯೇಕವಾಗಿ ಗುರ್ತಿಸುವುದು ಸಮಂಜಸವಲ್ಲ. ಹಾಗಾಗಿ ದೇವತೆಗಳನ್ನು ವರ್ಗೀಕರಿಸುವುದು ಅಷ್ಟೊಂದು ಸುಲಭದ ಮಾರ್ಗವಲ್ಲ.

ಛಲವಾದಿಯವರ ಕೇರಿಗಳಲ್ಲಿ ಕೆಲವೊಂದು ದೇವತೆಗಳು ನೆಲೆ ನಿಂತಿವೆ. ಇದರಿಂದ ಬಹುಪಾಲು ಛಲವಾದಿ ಜನ ಭಯ-ಭಕ್ತಿಯಿಂದ ನಡೆದುಕೊಳ್ಳುತ್ತರೆ. ಉಗ್ರ ಸ್ವರೂಪದ ಮಾಂಸಹಾರಿ ಆಚರಣೆಗಳ

ಹಿನ್ನೆಲೆಯಲ್ಲಿ ಗ್ರಾಮದೇವತೆಗಳು ಹುಟ್ಟಿಕೊಂಡಿವೆ. ಆ ದೇವತೆಗಳನ್ನು ಬಹಳ ನಿಯಮ ನಿಷ್ಠೆಯಿಂದ ಆರಾಧಿಸುತ್ತಾರೆ. ಗದಗ ಜಿಲ್ಲೆಯ ಛಲವಾದಿ ಸಮುದಾಯ ಆರಾಧಿಸುವ ಕೆಲವು ಸ್ತ್ರೀ ಮತ್ತು ಪುರುಷ ದೇವತೆಗಳನ್ನು ನೋಡಬಹುದಾಗಿದೆ.

೬.೯ ಸ್ತ್ರೀ ದೇವತೆಗಳು

ಸಾಮಾನ್ಯವಾಗಿ ಈ ಸಮುದಾಯ ಸ್ತ್ರೀ ದೇವತೆಗಳನ್ನು ಹೆಚ್ಚಾಗಿ ಆರಾಧಿಸುತ್ತಾರೆ. ಅಂಥಹವಲ್ಲಿ ಎಲ್ಲಮ್ಮ, ದುರಗಮ್ಮ, ಮಾತಂಗಿ, ಕರಿಕೆಂಚವ್ವ, ಹುಲಿಗೆಮ್ಮ ಮುಂತಾದವು ಇವೆ.

೬.೯.೧ ಬೊಮ್ಮಸಾಗರದ ದುರಗವ್ವ

ರೋಣ ತಾಲೂಕಿನಲ್ಲಿ ನಾಲ್ಕು ಸಾವಿರ ಜನಸಂಖ್ಯೆಯ ಬೊಮ್ಮಸಾಗರ ಹಳ್ಳಿಯು ಗುಡ್ಡ ಸಾಲುಗಳ ಮಧ್ಯದಲ್ಲಿದೆ. ಇಲ್ಲಿಗೆ ಹೊಂದಿಕೊಂಡಂತೆ ಪಾರ್ವತೆವ್ವನ ಕೊಳ್ಳ ಎಂಬ ಸರೋವರ ಇದೆ. ಈ ಗ್ರಾಮದ ದುರುಗವ್ವನ ಬಗ್ಗೆ ಒಂದು ಕಾಲ್ಪನಿಕ ಕತೆಯಿದೆ.

ಈ ಗ್ರಾಮದ ಕುರುಬರು ಪ್ರತಿದಿನ ಕುರಿಗಳನ್ನು ಮೇಯಿಸಿಕೊಂಡು ಬರುತ್ತಿದ್ದರು. ಒಂದು ದಿನ ಕುರಿಗಳನ್ನು ನಿಲ್ಲಿಸಿದಾಗ ದೇವಿಯ ಆಕಾರದ ಸಣ್ಣ ಕಲ್ಲು ಕುರಿಗಳ ಮಧ್ಯ ಬಂದು ಕುಳಿತಿತ್ತು. ಅದನ್ನು ಮರುದಿನ ನೋಡಿದ ಕುರುಬರು ಹೊರಗೆಸೆದರು. ಮರುದಿನ ಮತ್ತೆ ಕುರಿಗಳನ್ನು ಹಟ್ಟಿಗೆ ತಂದು ಬಿಟ್ಟಾಗ ಆ ಕಲ್ಲು ಅಲ್ಲೇ ಇತ್ತು. ಸಣ್ಣ ವಿಗ್ರಹರೂಪದಲ್ಲಿದ್ದ ಆ ಕಲ್ಲು ದಿನೇ ದಿನೇ ಬೆಳೆದು ಎರಡು ವರ್ಷದಲ್ಲಿ ದೊಡ್ಡದಾಯಿತು. ಕೊನೆಗೊಮ್ಮೆ ಅದು ಗ್ರಾಮದ ಮುಖ್ಯಸ್ಥ ಸಿದ್ದಪ್ಪ ಸುಂಕದ ಎಂಬ ಕುರುಬನ ಹಟ್ಟಿಯಲ್ಲಿ ಬಂದು ಕುಳಿತಿತ್ತು. ಆ ಸಮಯದಲ್ಲಿ ಸಿದ್ದಪ್ಪ ತನ್ನ ಹಟ್ಟಿಯಿಂದ ಅದನ್ನು ತೆಗೆದು ಹಾಕಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ದೇವಿ ಅವನ ಮೈಮೇಲೆ ಬಂದು 'ನಾನು ದುರುಗವ್ವ, ನಿಮ್ಮ ಊರನ್ನು ಬಿಟ್ಟು ಹೋಗುವುದಿಲ್ಲ. ನೀವು ನನ್ನನ್ನು ಇಲ್ಲಿಯೇ ಪ್ರತಿಷ್ಠಾಪನೆ ಮಾಡಿರಿ' ಎಂದು ಹೇಳಿದಳಂತೆ. ಅಂದಿನಿಂದ ಗ್ರಾಮದ ಜನರೆಲ್ಲ ಸೇರಿ ಗುಡಿಯನ್ನು ಕಟ್ಟಿಸಿ ಅಲ್ಲಿ ದುರುಗವ್ವಳನ್ನು ಪ್ರತಿಷ್ಠಾಪಿಸಿ ಭಯಭಕ್ತಿಯಿಂದ ಪೂಜಿಸಲು ಪ್ರಾರಂಭಿಸಿದರು.

ದುರ್ಗವ್ವನಮೂರ್ತಿಯು ಕರಿಯ ಕಲ್ಲಿನಲ್ಲಿದೆ. ಇದಕ್ಕೆ ಕಣ್ಣ ಬಟ್ಲು ಹಚ್ಚಲಾಗಿದೆ. ಮೂರ್ತಿಯ ಸುತ್ತಲೂ ಸೀರೆ ತೊಡಿಸಿದೆ. ಪ್ರತಿದಿನ ಕುರುಬ ಸಮುದಾಯದ ಪೂಜಾರಿ ಶ್ರದ್ಧೆಯಿಂದ ಪೂಜೆ ಸಲ್ಲಿಸುತ್ತಾನೆ. ಆ ಮೂರ್ತಿಗೆ ಪಕ್ಕದ ಪಾರ್ವತವ್ವನ ಸರೋವರದಿಂದ ಪ್ರತಿನಿತ್ಯ ನೀರು ತಂದು ಮಡಿಯಿಂದ ದೇವಿಗೆ ನೀರು ಹಾಕಿ ಹೂವು ದೀಪಗಳೊಂದಿಗೆ ಅಲಂಕರಿಸಿ ಭಕ್ತಿಯಿಂದ ಪೂಜೆ ಮಾಡುತ್ತಾರೆ. ಇಲ್ಲಿ ಈ ದೇವಿಯ ದರ್ಶನ ಕೇವಲ ಹಗಲಲ್ಲಿ ಮಾತ್ರ ಇದೆ. ರಾತ್ರಿ ಎಂಟರ ನಂತರ ದೇವಿಯ ದರ್ಶನ ನಿಷಿದ್ಧವಾಗಿದೆ.

ಈ ದೇವಿಯ ಜಾತ್ರೆ ಭಾರತ ಹುಣ್ಣಿಮೆಯಂದು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಜಾತ್ರೆಗೆ ನಾಲ್ಕು ದಿನ ಮೊದಲೆ ರಥವನ್ನು ಕಟ್ಟಿ, ಅಲಂಕಾರ ಮಾಡಲಾಗುತ್ತದೆ. ಅದರಲ್ಲಿ ದೇವಿಯ

ಮೂರ್ತಿ ಪ್ರತಿಷ್ಠಾಪಿಸಿ ತೇರನ್ನು ಎಳೆಯುತ್ತಾರೆ. ದೇವಿ ಪೂಜಾರಿಯು ಮೈದುಂಬಿ ವರ್ಷದ ಆಗುಹೋಗುಗಳನ್ನು ಹೇಳುತ್ತಾಳೆ. ಛಲವಾದಿಯವರಲ್ಲಿ ಕೆಲವರು ಜಾತ್ರೆಗೆ ಪ್ರತಿ ವರ್ಷ ಹೋಗಿ ತಮ್ಮ ಹರಕೆ ಸಲ್ಲಿಸಿ ಬರುವ ಸಂಪ್ರದಾಯವಿದೆ.

೬.೯.೨ ಕನಕಮ್ಮದೇವಿ

ಗದಗ ಜಿಲ್ಲೆಯ ಹೊಂಬಳ ಗ್ರಾಮದ ಛಲವಾದಿಯವರ ಕೇರಿಯಲ್ಲಿ ಕನಕವ್ವಳ ದೇವಸ್ಥಾನ ಇದೆ. ಈ ದೇವತೆಗೆ ವಿಶೇಷವಾಗಿ ಹೆಣ್ಣು ಪೂಜಾರಿಯಿದ್ದಾಳೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ಎರಡೂ ಹೊತ್ತು ಪೂಜೆ ನಡೆಯುತ್ತದೆ. ಭಕ್ತರು ಭಯ ಭಕ್ತಿಯಿಂದ ಎಲೆ, ಅಡಿಕೆ, ಕಾಯಿ, ಕರ್ಪೂರದೊಂದಿಗೆ ಶ್ರದ್ಧೆಯಿಂದ ದೇವಿಯನ್ನು ಪೂಜಿಸುತ್ತಾರೆ. ಪ್ರತಿವರ್ಷ ಮಹಾನವಮಿಯಂದು ಹಬ್ಬ ಮಾಡಿ ಈ ದೇವಿಗೆ ಪ್ರಾಣಿ ಬಲಿ ಕೊಡುತ್ತಾರೆ. ಒಂಬತ್ತು ದಿನಗಳ ವರೆಗೆ ಘಟ್ಟಕ್ಕೆ ಹಾಕಿ ನಂದಾದೀಪ ಹಚ್ಚುತ್ತಾರೆ. ಅಷ್ಟೂ ದಿನ ದೀಪ ನಂದದಂತೆ ಕಾಯುತ್ತಾರೆ. ಕೊನೆಯ ದಿನ ಪೂಜೆ ಮಾಡಿ, ಪಲ್ಲಕ್ಕಿ ಹೊತ್ತು, ಊರ ಹೊರಗಿರುವ ಬನ್ನಿ ಗಿಡದ ಬಳಿ ಇಳಿಸಿ, ಮರಕ್ಕೆ ಕುಂಕುಮ–ಅರಿಶಿನ ಹಚ್ಚಿ, ಕಾಯಿ ಕರ್ಪೂರ ಬೆಳಗಿ ನಂತರ ಮರಳಿ ಬರುತ್ತಾರೆ. ಈ ಸಂದರ್ಭದಲ್ಲಿ ಭಕ್ತರು ನಿಷ್ಠೆಯಿಂದ ಪೂಜಿಸಿ ತಮಗೆ ಅನಿಸಿದ್ದು ಬೇಡಿಕೊಂಡರೆ ನೆರವೇರುತ್ತದೆ ಎಂಬ ಬಲವಾದ ನಂಬಿಕೆ ಈ ಭಾಗದಲ್ಲಿದೆ.

ಅಚ್ಚೇರ ಬಂಗಾರ ಕಿರು ಬೆರಳಿಗುಂಗುರ
ಗಚ್ಚೀನ ಬಾವಿ ಇಳದಾಳ ಕನಕಮ್ಮ
ಪಾತಾಳದ ನೀರ ತಂದಾಳ

ಎಂದು ಕನಕವ್ವಳ ಕುರಿತು ಭಕ್ತಿಯಿಂದ ಹಲವು ಹಾಡುಗಳನ್ನು ಹಾಡುತ್ತಾರೆ.

೬.೯.೩ ದ್ಯಾಮವ್ವ

ಒಂದೇ ದೇವಸ್ಥಾನದಲ್ಲಿ ದ್ಯಾಮವ್ವ ಮತ್ತು ದುರುಗಮ್ಮ ದೇವತೆಗಳು ಸಾಮಾನ್ಯವಾಗಿ ನೆಲೆಸಿರುವುದು ಕಂಡು ಬರುತ್ತದೆ. ದೇವಿಯ ಮೂರ್ತಿಯನ್ನು ಕಟ್ಟಿಗೆಯಲ್ಲಿ ಕೆತ್ತಿರುತ್ತಾರೆ. ಸಿಂಹದ ಮೇಲೆ ಕೂತಿರುತ್ತಾಳೆ. ಈ ದೇವತೆಗೆ ಹತ್ತು ಕೈಗಳಿರುತ್ತವೆ. ಈ ದೇವಿಯ ಪೂಜಾರಿ ಬಡಿಗೇರ ಕುಲದವನಾಗಿರುತ್ತಾನೆ. ಪ್ರತಿದಿನ ದೇವಿಗೆ ಸ್ನಾನಮಾಡಿಸಿ ಅರಿಶಿನ, ಕುಂಕುಮ ಗಂಧಹಚ್ಚಿ ಸೀರೆ ಉಡಿಸಿ ಅಲಂಕಾರ ಮಾಡಿ ನಗಾರಿ, ಗಂಟೆಗಳನ್ನು ಬಾರಿಸುತ್ತಾ ಆರತಿ ಮಾಡಿ ಉಡಿ ತುಂಬುತ್ತಾರೆ. ಬಾಳೆಹಣ್ಣು, ಹಾಲು, ಜೋಳದ ಅನ್ನವನ್ನು ನೈವೇದ್ಯ ಮಾಡಿ ದೇವಿಗೆ ಅರ್ಪಿಸುತ್ತಾರೆ. ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಸಕಾಲಕ್ಕೆ ಸರಿಯಾಗಿ ಮಳೆಯಾಗದೆ ಇದ್ದಾಗ, ದನಕರುಗಳಿಗೆ ರೋಗ ರುಜಿನ ಬಂದಾಗ, ಮಕ್ಕಳಿಗೆ ಜ್ವರ ಬಂದಾಗ ದುರುಗವ್ವ ದ್ಯಾಮವ್ವನ ವಾರವೆಂದು ಐದು ವಾರಗಳನ್ನು

ಮಾಡುವರು. ಈ ಎಲ್ಲ ದೇವತೆಗಳು ಗ್ರಾಮ ದೇವತೆಯೂ ಕುಲದೇವತೆಯೂ ಆಗಿದ್ದು ಕುರಿ, ಕೋಣ, ಕೋಳಿಗಳನ್ನು ಬಲಿಕೊಡುತ್ತಾರೆ.

ಸಾವಿರದ ನೀ ಡೊಳ್ಳನಾಲಿಟ್ಟ ಬಡಿವಾಗ
ಎತ್ತವ್ವ ನಿನ ಕಿವಿಯ ಕಿವುಡೇನ
ಹರಿಬ್ರಹ್ಮರ ಹಿರಿಮಗಳ ಬಂದೇರ ರಥವ
ಆದಿಶಕ್ತಿ ಗುಡಿಯಿಂದ ದ್ಯಾಮವ್ವನ
ಏರಿಗೆ ಹಚ್ಚುವ ಪಾಳಿ ಬಂದೈತಿ
ದ್ಯಾಮವ್ವ ಅಂತಾ ಲೋಕ ಎಲ್ಲ ಇಕೀಗ ಅಂತೈತಿ

ಎಂದು ಭಕ್ತಿಯಿಂದ ದ್ಯಾಮವ್ವನ ಕುರಿತು ಹಾಡುವರು.

೬.೯.೪ ಕರಿ ಕೆಂಚವ್ವ

ಈ ದೇವತೆ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದ ಹೊರ ವಲಯದಲ್ಲಿ ನೆಲೆಸಿದೆ. ಈ ದೇವತೆಗೆ ಕೇರಿ ಕೆಂಚವ್ವ ಎಂದು ಕರೆಯುತ್ತಾರೆ. ಈಕೆ ಛಲವಾದಿಯವರ ವಂಶದವಳೆಂದು ಹೇಳುತ್ತಾರೆ. ಛಲವಾದಿ ಸಮುದಾಯದ ಜನರು ಓಣಿಯಲ್ಲಿ ಶುಭ ಕಾರ್ಯ ನಡೆದರೆ ತಪ್ಪದೆ ಈ ದೈವವನ್ನು ಪೂಜಿಸುತ್ತದೆ. ಈ ದೇವಿಯ ಬಗ್ಗೆ ಪುರಾಣ ಕತೆಯಿದೆ.

ಬ್ರಿಟಿಷರ ಕಾಲದಲ್ಲಿ ಕೆರೆಯೊಂದನ್ನು ಕಟ್ಟಿಸಿದರು. ಅದರಲ್ಲಿ ನೀರು ನಿಲ್ಲಲಿಲ್ಲ. ಗ್ರಾಮದ ಹಿರಿಯರೆಲ್ಲ ಸೇರಿ ಜೋಯಿಸರನ್ನು ಕೇಳಿದಾಗ ಕೆರೆಗೆ ಹಾರ ಕೊಡಬೇಕು, ಆಗ ಮಾತ್ರ ನೀರು ನಿಲ್ಲುತ್ತದೆ ಎಂದು ಹೇಳಿದರು. ಈ ವಿಚಾರ ಗ್ರಾಮದ ಪ್ರಮುಖರಲ್ಲಿ ಆತಂಕ ಉಂಟುಮಾಡಿತು. ಮನುಷ್ಯನನ್ನು ಕೆರೆಗೆ ಹಾರ ಕೊಡುವದು ಅತ್ಯಂತ ದುಸ್ಸಾಹಸದ ಕೆಲಸವಾಗಿತ್ತು. ಆ ವಿಷಯವನ್ನೆ ಚರ್ಚೆ ಮಾಡುತ್ತ ಛಲವಾದಿ ಓಣಿಯಲ್ಲಿ ಹಾಯ್ದು ಹೋಗುತ್ತಿದ್ದಾಗ ಅಲ್ಲಿ ದೇವದಾಸಿ ಹೆಣ್ಣೊಬ್ಬಳಿಗೆ ಹೆರಿಗೆಯಾಯಿತು. ಆಕಸ್ಮಿಕವಾಗಿ ಆಕೆ ಮನೆ ಹೊರಗೆ ಬಂದಾಗ ಅವಳನ್ನು ಗ್ರಾಮದ ಪ್ರಮುಖರು ಕೇಳಿಕೊಂಡರು. ಆಕೆ ತಾನು ಹೇಳಿದಂತೆ ನಡೆದುಕೊಂಡರೆ ಮಾತ್ರ ಈ ಕೆರೆಗೆ ಹಾರವಾಗುತ್ತೇನೆಂದು ಹೇಳಿದಳು. ಊರ ಹತ್ತಿರ ಇರುವ ಗದ್ದೆಯನ್ನು ನನ್ನ ಜಾತಿಯವರಿಗೆ ಕೊಡಬೇಕು ಮತ್ತು ಕೇರಿಯ ಯಾವ ಮನೆಯಲ್ಲಿ ಶುಭಕಾರ್ಯ ನಡೆದರೂ ಕೆರೆ ದೇವತೆಗೆ ಐದು ತರಹದ ಅಡುಗೆ ನೈವೇದ್ಯ ಮೊದಲು ಮಾಡಬೇಕು, ನಂತರ ತಮ್ಮ ಕಾರ್ಯ ಮಾಡಿಕೊಳ್ಳಬೇಕೆಂಬ ಬೇಡಿಕೆ ಇಟ್ಟಳು. ಗ್ರಾಮ ಪ್ರಮುಖರು ಅವಳ ಬೇಡಿಕೆ ಒಪ್ಪಿಕೊಂಡ ಮೇಲೆ ಅವಳು ಸಂತೋಷದಿಂದ ಕೆರೆಗೆ ಹಾರವಾದಳು.

"ಛಲವಾದಿಯವರ ಕೇರಿಯಲ್ಲಿ ಇಂದಿಗೂ ಶುಭಕಾರ್ಯಗಳಾದರೆ ಮೊದಲು ಕೆರೆ ಕೆಂಚವ್ವಳಿಗೆ ನೈವೇದ್ಯ ಮಾಡುತ್ತಾರೆ. ಈ ಆಚರಣೆಯನ್ನು ಸಂಬಂಧ ಪಟ್ಟವರು ಅನುವಂಶಿಕವಾಗಿ ನಿರ್ವಹಿಸುತ್ತ

ಬಂದಿದ್ದಾರೆ. ಇದೇ ಗ್ರಾಮದ ಐಕ್ಯತೆ, ಸಾಮರಸ್ಯದ ಜೀವಾಳವಾಗಿದೆ. ಈ ಗ್ರಾಮದೇವತೆ ಪರೋಕ್ಷವಾಗಿ ವ್ಯಕ್ತಿ ಮತ್ತು ಗ್ರಾಮ ಸಮೂಹದ ಮಾನಸಿಕ ನಿಯಂತ್ರಣ ಶಕ್ತಿಯಾಗಿದ್ದಾಳೆ. ಗ್ರಾಮೀಣ ಜನ ಗ್ರಾಮದೇವತೆಯನ್ನು ಅಚಲವಾದ ನಂಬಿ ಹಬ್ಬ-ಜಾತ್ರೆ ಆಚರಿಸಿ ಸಂತೋಷಪಡುತ್ತಾರೆ. ತಮ್ಮ ಜೀವನದಲ್ಲೆದುರಾದ ಕಂಟಕಗಳ ನಿವಾರಣೆಗೆ ವಿಧಿ ವಿಧಾನಗಳನ್ನು ನೆರವೇರಿಸುತ್ತಾರೆ.[೨೯]

ಗ್ರಾಮೀಣ ಜನ ತಮ್ಮ ಸಮುದಾಯದವರು ಅಗತ್ಯಕ್ಕನುಗುಣವಾಗಿ ಒಂದೊಂದು ದೇವತೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಎಲ್ಲದಕ್ಕೂ ಮೊದಲು ಊರಿಗೆ ಮಳೆ ಬೆಳೆ ತರುವ ದೇವತೆಯಾಗಿ ದ್ಯಾಮವ್ವ ಹುಟ್ಟಿಕೊಂಡಳು. ಈಕೆ ಮೂಲತಃ ಕೃಷಿ ದೇವತೆಯಾಗಿದ್ದಾಳೆ. ಜನಸಂಖ್ಯೆ ಹೆಚ್ಚಿ ಗ್ರಾಮ ವಿಸ್ತಾರವಾದಂತೆ ಮಾನವ ತನ್ನ ಸುಖಶಾಂತಿ ಸಮೃದ್ಧಿಗಳಿಗಾಗಿ ಮರುಗಮ್ಮ, ದುರುಗಮ್ಮ, ಕಾಳಮ್ಮ, ಚೌಡಮ್ಮ, ಪಾಲಕವ್ವೆ, ದ್ಯಾಮವ್ವ, ಎಲ್ಲಮ್ಮ ಮೊದಲಾದವರನ್ನು ಸ್ಥಾಪಿಸಿಕೊಂಡರು.

ಇವರನ್ನು ಜನಪದರು ಏಳು ಮಂದಿ ಅಕ್ಕ ತಂಗಿಯರೆಂದೇ ಗುರ್ತಿಸುತ್ತಾರೆ. ಅಥವಾ ಇವರನ್ನು ಸಪ್ತಮಾತೃಕೆಯರೆಂದು ಕರೆದಿದ್ದಾರೆ. ಇವರನ್ನು ಬ್ರಹ್ಮಿ, ಮಹೇಶ್ವರಿ, ವೈಷ್ಣವಿ, ಕುಮಾರಿ, ಇಂದ್ರಾಣಿ, ವರಾಹಿ ಮತ್ತು ಚಾಮುಂಡಿ ಎಂದೂ ಹೆಸರಿಸಿದ್ದಾರೆ.

ಈ ಏಳು ಮಂದಿ ಅಕ್ಕ ತಂಗಿಯರಲ್ಲಿ ಮೊದಲ ಆರು ಜನ ಒಂದೊಂದು ರೀತಿಯಲ್ಲಿ ಹೆಸರಾದವರು. ದ್ಯಾಮವ್ವ ಬೀಜ ಬಿತ್ತುವಾಗ ಇಲ್ಲವೆ ಬೆಳೆಕೊಯ್ಯುವ ಸಂದರ್ಭದಲ್ಲಿ ಆಚರಿಸುವ ದೇವತೆಯಾಗಿದ್ದರೆ, ಮರುಗಮ್ಮ- ರೋಗರುಜಿನ ಸಾವು ನೋವು ಉಂಟಾದಾಗ ಜನರನ್ನು ರಕ್ಷಿಸಲು ಹುಟ್ಟಿದ ದೇವತೆಯಾಗಿದ್ದಾಳೆ. ಪಾಲಕಮ್ಮ ಅಥವಾ ಪೋಷಮ್ಮ ಹೆಣ್ಣು ಮಕ್ಕಳು ಪುರುಷರ ಜೊತೆಗೆ ಹೊಲದ ಕೆಲಸಕ್ಕೆ ಹೋದಾಗ ಅವರ ಮಕ್ಕಳನ್ನು ಪಾಲಿಸುವ ಪೋಷಿಸುವ ದೇವತೆಗೆ ಈ ಹೆಸರು ಬಂದಿದೆ. ದುರುಗಮ್ಮ ಹಲವಾರು ಗ್ರಾಮಗಳನ್ನು ಒಂದು ಪ್ರದೇಶವಾಗಿ ಆಳುವ ಸಾಮಂತರು, ಮಾಂಡಲೀಕರು ತಮ್ಮ ರಕ್ಷಣೆಗಾಗಿ ದುರ್ಗಗಳನ್ನು ನಿರ್ಮಿಸಿದಾಗ ಹುಟ್ಟಿಕೊಂಡ ದೇವತೆಯಾಗಿದ್ದಾಳೆ. ಈಕೆ ಮೊದಲು ಬುಡಕಟ್ಟು ಜನಾಂಗದ ದೇವತೆಯಾಗಿದ್ದಳು. ಗ್ರಾಮದೊಳಗೆ ದುಷ್ಟ ಶಕ್ತಿಗಳ ಪ್ರವೇಶ ನಿರ್ಬಂಧಿಸಲು ಇವಳನ್ನು ಹುಟ್ಟುಹಾಕಲಾಯಿತು. ಚೌಡಮ್ಮ ಬುಡಕಟ್ಟಿನ ಜನರು ಚೇಳಿನಿಂದ ಪಾರಾಗಲು ಚೋಳಮ್ಮ ಎಂಬ ದೇವತೆಯನ್ನು ಆರಾಧಿಸುತ್ತಾ ಬಂದರು. ಕೊನೆಗೆ ಆಕೆ ಎಲ್ಲಮ್ಮಳಾದಳು.

೬.೯.೫ ಎಲ್ಲಮ್ಮ

ಉಳಿದ ಆರುಮಂದಿ ಅಕ್ಕತಂಗಿಯರು ಗ್ರಾಮದಲ್ಲಿದ್ದು ಗ್ರಾಮದೇವತೆಗಳಾದರೆ ಎಲ್ಲಮ್ಮ ಮಾತ್ರ ತನ್ನ ಹೆಸರಿಗೆ ತಕ್ಕಂತೆ ಎಲ್ಲೆಯ ದೇವತೆ. ಕಾಡಿನಲ್ಲಿರುವ ಸೀಮೆಯ ದೇವತೆ. ಈಕೆ ಇತರ ದೇವತೆಗಳಂತೆ ಬುಡಕಟ್ಟಿನವರಿಂದ ಹುಟ್ಟಿದಾಕೆ. ಬುಡಕಟ್ಟಿನವರು ತಮ್ಮ ಕ್ಷೇತ್ರದ ವ್ಯಾಪ್ತಿಯನ್ನು ಗುರ್ತಿಸಲು ಕಾಡಿನಲ್ಲಿ ಗಡಿಸೀಮೆಯ ಕಲ್ಲನ್ನು ನೆಟ್ಟರು. ಈ ಕಲ್ಲನ್ನು ದೇವಿಯೆಂದು ಪೂಜಿಸತೊಡಗಿದ ಮೇಲೆ ಮುಂದೆ ಇವಳೇ ಎಲ್ಲೆಯ ದೇವತೆಯಾದಳು ಎಂಬ ನಂಬಿಕೆಯಿದೆ.

ಬುಡಕಟ್ಟಿನ ಜನ ಕಾಲಕ್ರಮೇಣ ಕೃಷಿಕರಾದರು. ಗ್ರಾಮದ ಸೀಮೆಯನ್ನು ಗುರ್ತಿಸಲು ಎಲ್ಲಮ್ಮನನ್ನು ಸ್ಥಾಪಿಸಲಾಯಿತು. ಗ್ರಾಮ ದೇವತೆಯ ಶಕ್ತಿ ಸಾಹಸವನ್ನು ಈಕೆಗೂ ಅರ್ಪಿಸಿ ತಮ್ಮ ಅಭಿಲಾಷೆ ಈಡೇರಿಸಿಕೊಳ್ಳುತ್ತ, ಪೂಜೆ ಉತ್ಸವಾದಿ ನಡೆಸುತ್ತ. ಈಕೆಯ ಸುತ್ತ ಪುರಾಣ ಸೃಷ್ಟಿ ಮಾಡಿದರು.

"ಕಾಲ ಗತಿಸಿದಂತೆ ಎಲ್ಲಮ್ಮ ಕೇವಲ ಸೀಮೆ ದೇವತೆಯಾಗಿ ಉಳಿಯಲಿಲ್ಲ. ಅವಳು ಜನಪದ ದೇವತೆಯಾಗಿಯೂ ಉಳಿಯಲಿಲ್ಲ. ಶಿಷ್ಟ ದೇವತೆಯಾಗಿ ಬೆಳೆದು ಪುರಾಣ ಕತೆಗಳನ್ನು ಕಟ್ಟಿದರು. ಅದರಲ್ಲಿ ಎಲ್ಲಮ್ಮನಿಗೂ ರೇಣುಕೆಗೂ ಅವಿಭಾಜ್ಯ ಸಂಬಂಧ ಬೆಳೆಸಿದರು. ಕೃತಯುಗದಲ್ಲಿ ರೇಣುಕಾ, ತ್ರೇತಾಯುಗದಲ್ಲಿ ಸೀತಾ, ದ್ವಾಪರಯುಗದಲ್ಲಿ ದ್ರೌಪದಿ, ಹಾಗೂ ಕಲಿಯುಗದಲ್ಲಿ ಎಲ್ಲಮ್ಮಳಾಗಿ ಇರುವಳೆಂದು ಕಥೆ ಕಟ್ಟಿದರು. ಜೈನರು, ಶೈವರು ಬ್ರಾಹ್ಮಣರು ಈಕೆಯ ಮೇಲೆ ತಮ್ಮ ತಮ್ಮ ಧರ್ಮದಂತೆ ಕತೆ ಕಟ್ಟಿ ತಮ್ಮ ದೇವತೆಯನ್ನಾಗಿ ಮಾಡಿಕೊಂಡರು. ಹೀಗೆ ಎಲ್ಲಮ್ಮ ಜನಪದ ವರ್ಗ ಹಾಗೂ ಶಿಷ್ಟವರ್ಗದವರಿಗೆ ಆರಾಧ್ಯ ದೈವ ಎನಿಸಿದಳು."[3]

ಅ. ಜೈನರ ಎಲ್ಲಮ್ಮ

ಎಲ್ಲಮ್ಮ ಜೈನರ ಪದ್ಮಾವತಿ ಇರಬಹುದೆಂದು ಕೆಲ ವಿದ್ವಾಂಸರು ತರ್ಕಿಸಿದ್ದಾರೆ. ಇದನ್ನು ಬಿಳಿ ಉಡುಗೆ, ಹಾಗೂ ಬೆತ್ತಲೆ ಸೇವೆಗಳ ಮೂಲಕ ಸ್ಪಷ್ಟ ಪಡಿಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಚುಂಚೂರು ಮಾಪುರ ತಾಯಿ ಹಾಗೂ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಆರೋಲಿ ಗ್ರಾಮದ ಹುಲಿಗೆಮ್ಮ ಉತ್ಸವದಲ್ಲಿ ಈ ಆಚರಣೆಗಳನ್ನು ಕಾಣಬಹುದು.

ಆ. ಶೈವರ ಎಲ್ಲಮ್ಮ

ಎಲ್ಲಮ್ಮ ಪಾರ್ವತಿಯ ಸ್ವರೂಪವೆಂದು ಬಿಂಬಿಸಲಾಗಿದೆ. ಅದಕ್ಕಾಗಿ ಆಕೆಯ ಕೊರಳಲ್ಲಿ ಲಿಂಗ ರುದ್ರಾಕ್ಷಿ ಹಾಕಿ ಹಣೆಗೆ ವಿಭೂತಿ ಹಚ್ಚಲಾಗಿದೆ. ಎಲ್ಲಮ್ಮನ ಗುಡ್ಡದಲ್ಲಿ ರೇವಣಸಿದ್ಧೇಶ್ವರನ ಗುಡಿಯಿರುವುದರಿಂದ ಈಕೆ ಶೈವರವಳು ಎನ್ನಲು ಆಧಾರವೊದಗಿಸಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮನ ಪೂಜಾರಿಗಳು ಹಾಗೂ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಾಗಾವಿ ಎಲ್ಲಮ್ಮನ ಪೂಜಾರಿಗಳು ವೀರಶೈವರಿದ್ದಾರೆ.

ಕ. ಬ್ರಾಹ್ಮಣರ ಎಲ್ಲಮ್ಮ

ಎಲ್ಲಮ್ಮನ ಸಂಬಂಧವನ್ನು ರೇಣುಕಾದೇವಿ ಜಮದಗ್ನಿಯರ ಕಥೆಗೆ ವೈದಿಕ ಪರಂಪರೆಯಲ್ಲಿ ತಳಕು ಹಾಕಿ ಬ್ರಾಹ್ಮಣ ದೇವತೆಯನ್ನಾಗಿ ಮಾಡಿದ್ದಾರೆ. ಮಹಾಭಾರತ, ಭಾಗವತ, ಹರಿವಂಶ, ವಾಯುಪುರಾಣಗಳಲ್ಲಿ ರೇಣುಕೆಯ ಕುರಿತು ಕಥೆಗಳು ಸೇರಿವೆ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಬಳ್ಳಡಗಿ ಎಲ್ಲಮ್ಮನ ಪೂಜಾರಿಗಳು ಬ್ರಾಹ್ಮಣರಿದ್ದಾರೆ.

೬.೧೦ ಕರ್ನಾಟಕದಲ್ಲಿ ಎಲ್ಲಮ್ಮನ ಪ್ರಮುಖ ಆರಾಧನಾ ಕೇಂದ್ರಗಳು

ಸವದತ್ತಿ ಎಲ್ಲಮ್ಮನನ್ನು 'ಏಳುಕೊಳ್ಳದೆಲ್ಲಮ್ಮ'ನೆಂದು ಕರೆಯಲಾಗಿದೆ. ಇದಕ್ಕೆ ಅಲ್ಲಿರುವ ಬೋರೆಸಾಬನ ಕೊಳ್ಳ, ಗೊರವನ ಕೊಳ್ಳ, ತಮ್ಮಣನ ಕೊಳ್ಳ, ಸಂಗ್ಯಾನ ಕೊಳ್ಳ, ಪರಸಗಡ ಕೊಳ್ಳ ಹಾಗೂ ಮಾವಿನಕೊಳ್ಳಗಳು ಕಾರಣವಾಗಿವೆ.

ನಾಡಿನ ಪ್ರತಿ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಎಲ್ಲಮ್ಮನ ಪರಂಪರೆಯ ದೇವತೆಗಳಿದ್ದರೂ ಪ್ರಸಿದ್ಧ ಕೇಂದ್ರಗಳುಂಟು. ಅವುಗಳೆಂದರೆ ಸವದತ್ತಿ ಎಲ್ಲಮ್ಮ, ಅರೋಲಿ ಹುಲಿಗೆಮ್ಮ, ಹುಲಿಗಿಯ ಹುಲಿಗೆಮ್ಮ, ಚುಂಚೂರು ಮಾಪುರತಾಯಿ, ಬಗದುರಿ ಎಲ್ಲಮ್ಮ, ಚಂದ್ರಗುತ್ತಿಯ ರೇಣುಕಾ ಎಲ್ಲಮ್ಮ ಅಥವಾ ಗುತ್ತೆಮ್ಮ, ಕೊಕಟನೂರು ಎಲ್ಲಮ್ಮ, ಉಚ್ಚಂಗಿದುರ್ಗದ ಕೆಂಚಮ್ಮ ಅಥವಾ ಉಚ್ಚಂಗೆಮ್ಮಾ ಎಂದು ಗುರುತಿಸಬಹುದು. ಇಲ್ಲಿಯ ಪವಾಡಗಳು ಕಥೆಗಳು, ಆಚರಣೆಗಳು, ನಂಬಿಕೆಗಳು, ಐತಿಹ್ಯಗಳು ಬಹುಪಾಲು ಸಮಾನ ರೀತಿಯವಾಗಿವೆ.

೬.೧೦.೧ ಸವದತ್ತಿ ಎಲ್ಲಮ್ಮ

ಎಲ್ಲಮ್ಮ ಪರಂಪರೆಯ ಕೇಂದ್ರ ಬಿಂದು ಸವದತ್ತಿ ಎಲ್ಲಮ್ಮ ಎನ್ನಬಹುದು. ಇದು ಬೆಳಗಾವಿ ಜಿಲ್ಲೆಯಲ್ಲಿದೆ. ಎಲ್ಲಮ್ಮನ ಗಂಡ ಜಮದಗ್ನಿ ಸತ್ತ ಬನದ ಹುಣ್ಣಿಮೆ (ಹೊಸ್ತಿಲ ಹುಣ್ಣಿಮೆ)ಗೆ ರಂಡೆ ಹುಣ್ಣಿಮೆ ಎಂದೂ ಮತ್ತೆ ಎಲ್ಲಮ್ಮ ಮುತ್ತೈದೆಯಾಗಿ ಹಿಂದಿನ ಸ್ಥಾನಮಾನ ಪಡೆದದ್ದು ಭಾರತ ಹುಣ್ಣಿಮೆಯೆಂದೂ ಪ್ರಸಿದ್ಧಿಯಿದೆ. ಈ ಎರಡು ಹುಣ್ಣಿಮೆಗಳಿಗೆ ಛಲವಾದಿ ದೇವದಾಸಿಯರು ಸವದತ್ತಿ ಎಲ್ಲಮ್ಮನ ದರ್ಶನ ಮಾಡಿಕೊಂಡು ಬರುತ್ತಾರೆ. ಅಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಛಲವಾದಿ ಜನರು ಹೋಗಿ ತಮ್ಮ ತಮ್ಮ ಹರಕೆಗಳನ್ನು ಸಲ್ಲಿಸಿ ಬರುತ್ತಾರೆ.

೬.೧೦.೨ ಅರೋಲಿ ಹುಲಿಗೆಮ್ಮ : ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿದೆ.

೬.೧೦.೩ ಹುಲಗಿ ಹುಲಿಗೆಮ್ಮ : ಕೊಪ್ಪಳ ಜಿಲ್ಲೆಯ ಮುನಿರಾಬಾದದ ಬಳಿಯ ಹುಲಿಗಿಯಲ್ಲಿದೆ.

೬.೧೦.೪ ಚುಂಚೂರು ಮಾಪುರತಾಯಿ : ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಬರುವ ದೇವತೆ.

೬.೧೦.೫ ಬಗದೂರಿ ಎಲ್ಲಮ್ಮ : ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಈಕೆಯ ಪೀಠವಿದೆ. ಬಗದೂರಿ ಎಂದರೆ ಹುಲಿಯನ್ನೇರಿದ್ದರಿಂದ ಈಕೆಯನ್ನು 'ಸವಾರೆಮ್ಮ'ನೆಂದೂ ಕರೆಯುತ್ತಾರೆ. ಈಕೆ ಕೂಡ ಸೀಮೆಯ ದೇವತೆ. ಘಾಟಿಹಿಪ್ಪರಗಾ ಮತ್ತು ಬಗದೂರಿಯ ಗಡಿಗಳಲ್ಲಿ ನೆಲಸಿದ್ದಾಳೆ. ಈಕೆಯ ಉತ್ಸವ ಸಂಕ್ರಮಣ ಕಾಲದಲ್ಲಿ ನಡೆಯುತ್ತದೆ. ಈಕೆ ಕೆಂಡದಂತಾಕೆ ಎಂಬುದು ಜನರ ನಂಬಿಕೆಯಾಗಿದೆ.

೬.೧೦.೬ ಚಂದ್ರಗುತ್ತಿಯ ಗುತ್ತೆವ್ವ : ಚಂದ್ರಗುತ್ತಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿದೆ. ಇಲ್ಲಿಯ ಎಲ್ಲಮ್ಮನನ್ನು ಗುತ್ತೆವ್ವ ಎನ್ನುತ್ತಾರೆ.

೬.೧೦.೭ ಕೊಕಟನೂರ ಎಲ್ಲಮ್ಮ : ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿರುವ ಕೊಕಟನೂರು ಗ್ರಾಮ ಅಥಣಿಯಿಂದ ಸುಮಾರು ಇಪ್ಪತ್ತೆರಡು ಕಿ.ಮೀ. ದೂರದಲ್ಲಿದೆ. ಆ ಪ್ರಾಂತ್ಯದ ಸುತ್ತಮುತ್ತ 'ಕೊಕಟ' (ಕುಕ್ಕಟ) ಪಕ್ಷಿ ಹೆಚ್ಚಾಗಿರುವುದರಿಂದ ಇದಕ್ಕೆ ಕೊಕಟನೂರು ಎಂಬ ಹೆಸರು ಬಂತೆಂದು ಜನಪದರು ಹೇಳುತ್ತಾರೆ. ಸವದತ್ತಿ ಎಲ್ಲಮ್ಮ ಇಲ್ಲಿ ನೆಲಸಿದ ಕುರಿತು ಐತಿಹ್ಯವಿದೆ. ಮಹಾರಾಷ್ಟ್ರದ ದಾದಾಸಾಹೇಬ ಎಲ್ಲಮ್ಮನ ನಿಷ್ಠಾವಂತ ಭಕ್ತನಾಗಿದ್ದನು. ಅವನ ಭಕ್ತಿಗೆ ಮೆಚ್ಚಿದ ಎಲ್ಲಮ್ಮ 'ನಾನು ನಿನ್ನೊಂದಿಗೆ ಬರುತ್ತೇನೆ. ಆದರೆ ನಾನು ಹೇಳುವವರೆಗೆ ನೀನು ತಿರುಗಿ ನೋಡಬಾರದು' ಎಂದಳಂತೆ. ಅದರಂತೆ ಅವನು ಮುಂದೆ, ದೇವಿ ಹಿಂದೆ ಹೀಗೆ ಯಾತ್ರೆ ಪ್ರಾರಂಭವಾಯಿತು. ಕೊಕಟನೂರು ಬಂದಾಗ ಸಿಡಿಲಿನ ಶಬ್ದವಾಗಲು ಬೆಚ್ಚಿ ಹಿಂತಿರುಗಿ ನೋಡಿದಾಗ ದೇವಿ ವೃದ್ಧೆಯ ವೇಷದಲ್ಲಿದ್ದಾಕೆ 'ನಾನಿಲ್ಲೆ ಶಿಲೆಯಾಗಿದ್ದೇನೆ' ಎಂದು ಕಲ್ಲಾದಳಂತೆ. ಎಲ್ಲಮ್ಮ ತಂದೆ ರೇಣುಕಾರಾಜ ರಾಮಶೃಂಗಕ್ಕೆ ಬರುವಾಗ ಕೊಕಟನೂರನ್ನು ಸಂದರ್ಶಿಸಿದನೆಂಬ ಇನ್ನೊಂದು ಐತಿಹ್ಯವೂ ಇದೆ.

೬.೧೦.೮ ಉಚ್ಚಂಗೆಮ್ಮ : ಉಚ್ಚಂಗಿದುರ್ಗ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿ ಒಂದು ಗುಡ್ಡದ ಮೇಲಿರುವ ಹಳ್ಳಿ. ಇಲ್ಲಿ ನೆಲೆಸಿರುವ ಎಲ್ಲಮ್ಮನನ್ನು ಉಚ್ಚಂಗೆಮ್ಮ ಎಂದು ಕರೆಯುತ್ತಾರೆ.

೬.೧೧ ಇತರೆ ವಿಶೇಷತೆಗಳು

೬.೧೧.೧. ವಾರಗಳು : ಮಂಗಳವಾರ ಮತ್ತು ಶುಕ್ರವಾರ ಎಲ್ಲಮ್ಮನ ವಾರಗಳಾಗಿವೆ. ಮಂಗಳವಾರ ರೋಗ-ರುಜನೀಯ ನಿವಾರಕವೆಂದೂ ಶುಕ್ರವಾರ ಸಂಪತ್ತು ಸಮೃದ್ಧಿಯ ವಾರವೆಂದೂ ಗುರುತಿಸಲಾಗಿದೆ. ಸ್ತ್ರೀ ದೇವತೆಗಳಿಗೆಲ್ಲ ಈ ವಾರಗಳೇ ಪೂಜಾ ದಿನಗಳೆಂಬುದು ಗಮನಿಸಬಹುದು.

೬.೧೧.೨. ಉಟ್ಟಿಗೆ ಉಡುವುದು : ಬೇವು ಮತ್ತು ಲಕ್ಕಿಯಿಂದ ಮಾಡಿದ ಉಟ್ಟಿಗ (ಉಡುಗೆ) ಧರಿಸುತ್ತಾರೆ. ಆದಿ ಕಾಲದಲ್ಲಿ ಗರ್ಭವತಿಯ ಹೊಟ್ಟೆಯನ್ನು ಪೂಜಿಸುತ್ತಿದ್ದರು. ಕ್ರಮೇಣ ಅದು ಬಿಟ್ಟುಹೋದ ನಂತರ ಕೊಡದ ಪೂಜೆ ಆರಂಭಿಸಿದರು. 'ಕೊಡ' ಶಬ್ದದ ಮೂಲ ಸಂಸ್ಕೃತದ 'ಘಟ'ವಾಗಿದೆ. ಅದಕ್ಕೆ ಶರೀರವೆಂಬ ಅರ್ಥವೂ ಇದೆ. ಪ್ರಸ್ತುತ ದಿನಗಳಲ್ಲಿ ಈ ರೀತಿಯ ಸಂಪ್ರದಾಯ ಆಚರಣೆಗಳು ಛಲವಾದಿ ಸಮುದಾಯದಲ್ಲಿ ಕ್ರಮೇಣ ಕಡಿಮೆಯಾಗುತ್ತಾ ಬಂದಿದೆ.

೬.೧೧.೩. ಪಡಲಿಗೆ ತುಂಬಿಸುವುದು ಮತ್ತು ಬಲಿ : ಎಲ್ಲಮ್ಮನ ವಿಶೇಷ ಪೂಜೆಯಲ್ಲಿ ಪಡಲಿಗೆ (ಪಡಗೀಲ) ತುಂಬಿಸುವುದು ಒಂದಾಗಿದೆ. ಉಂಡೆ, ಹೋಳಿಗೆ, ಭಾಜಿ ಮುಂತಾದುದನ್ನು ಬಿದಿರಿನ ತಟ್ಟೆಯಲ್ಲಿ ತುಂಬಿಸುವುದೇ 'ಹಡಗಿಲು' (ಪಡಲಿಗೆ) ಎನಿಸಿಕೊಳ್ಳುತ್ತದೆ. ಬದನೆಕಾಯಿ ಕದ್ದು, ಉದ್ದಟನಾದ ಬಕ್ಷನಿಗೆ ಎಲ್ಲಮ್ಮ ಪಾಠ ಕಲಿಸಿದ ನೆನಪಿಗೆ ಬದನೆಕಾಯಿಯನ್ನು ತಪ್ಪದೆ ತುಂಬುತ್ತಾರೆ. ದೇವಿಗೆ ಹರಕೆ ಹೊತ್ತವರು ಹೋತ ಬಲಿ ನೀಡುವುದು ಇದೆ. ಪ್ರಥಮವಾಗಿ ಜೋಗುಳಬಾವಿ ಸತ್ಯವ್ವಳ ದರ್ಶನ ಮಾಡಿಕೊಂಡ ನಂತರವೇ ಎಲ್ಲಮ್ಮನ ದರ್ಶನ ಪಡೆಯುವ ಸಂಪ್ರದಾಯವಿದೆ.

೬.೧೧.೪. ಜಗ ಹೊರುವಿಕೆ : ಎಲ್ಲಮ್ಮನ ಮುಖವನ್ನು ಫಲೋತ್ಪತ್ತಿ ಸೂಚಕವಾದ ಕೊಡದಲ್ಲಿಟ್ಟು ಮೆರೆಸುವುದು ಅಲ್ಲದೇ ಮುಚ್ಚಳವಿಲ್ಲದಿರುವ ಬಿದಿರಿನ ಬುಟ್ಟಿಯಲ್ಲಿ ದೇವಿಯ ಮುಖವನ್ನಿಟ್ಟಿರುತ್ತಾರೆ. ಅದು ಇಡೀ ಜಗತ್ತಿನ ಸಂಕೇತವಾಗಿದೆ.

೬.೧೧.೫. ಭಂಡಾರ : ಮರಗಮ್ಮ, ದುರುಗಮ್ಮ, ಪಾಲಕಮ್ಮರಂತೆ ಈಕೆ ಭಂಡಾರದ ದೇವತೆ. ಭಂಡಾರ ಯೌವ್ವನದ ಸಮೃದ್ಧಿಯ ಸಂಕೇತವಾಗಿದೆ. ಇದು ನಿತ್ಯ ಸುಮಂಗಲಿ ಸ್ಥಿತಿಯನ್ನು ಸೂಚಿಸುತ್ತದೆ. ದಸರೆಯಲ್ಲಿ 'ಬನ್ನಿ ಕೊಟ್ಟು ಬಂಗಾರರಾಗಿರೋಣ' ಎನ್ನುವ ಹಾಗೆ ಈ ಅರಿಶಿನ ಪುಡಿಗೆ ಹಣದ ಸಂಗ್ರಹಕ್ಕಿರುವ ಭಂಡಾರದ ಹೆಸರು ಬಂದಿದೆ.

೬.೧೧.೬. ಜಲಕ್ಕಿರುವ ಮಹತ್ವ : ಸವದತ್ತಿಯಲ್ಲಿ ಅರಿಶಿಣಹೊಂಡ, ಕುಂಕುಮ ಹೊಂಡ, ಎಣ್ಣೆ ಹೊಂಡಗಳಿರುವಂತೆ ಮಲಾಪಹಾರಿ ಮಲಪ್ರಭಾ ನದಿಯಿದೆ. ಪರಶುರಾಮನು ತಂದೆಯ ಶ್ರಾದ್ಧಕ್ಕಾಗಿ ಮೂರು ಬಾಣಗಳಿಂದ ಮೂರು ಕುಂಡಗಳನ್ನು ತೆಗೆದೆನೆಂಬ ಐತಿಹ್ಯ ಸವದತ್ತಿಯಲ್ಲಿದೆ. ಹಾಗೆಯೇ ಎಲ್ಲಮ್ಮನ ಪರಂಪರೆಯ ಎಲ್ಲಾ ಕೇಂದ್ರಗಳಲ್ಲೂ ನದಿ ಅಥವಾ ಹೊಳೆಗಳಿಗೆ ಮಹತ್ವವಿದೆ. ಮಗನಿಂದ ಪಾರಾಗಲು ಚಂದ್ರಗುತ್ತಿಗೆ ಓಡಿಬಂದ ಎಲ್ಲಮ್ಮ ವರದಾ ನದಿಯಲ್ಲಿ ಮುಳುಗಿ ಕೊಂಚಕಾಲ ಕಳೆದಳೆಂಬ ಐತಿಹ್ಯವಿದೆ. 'ನೀರು ನನಗೆ ಮೀಸಲು, ಹೂವು ನನಗೆ ಮೀಸಲು' ಎಂಬ ಗೀತೆಯಲ್ಲಿ ಜಲ ಸಂಪ್ರದಾಯಕ್ಕಿರುವ ಮಹತ್ವ ತಿಳಿಯುತ್ತದೆ.

೬.೧೧.೭. ವೃಕ್ಷಾರಾಧನೆಯ ಪ್ರಭಾವ : ಎಲ್ಲಮ್ಮ ವೃಕ್ಷ ಸಂಪ್ರದಾಯದ ದೇವತೆಯೆಂಬ ಅಭಿಪ್ರಾಯವನ್ನು ಹಲವಾರು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಇದು ಆರ್ಯರ ಪ್ರಭಾವ ಗಾಢವಾಗಿ ಉಳಿದಿರುವುದರ ಸೂಚನೆಯಾಗಿದೆ. ಸವದತ್ತಿ ಎಲ್ಲಮ್ಮನ ಗುಡಿಯಲ್ಲಿ ಗಿಡವೊಂದಿದೆ ಎಂಬುದು ಕೆಲವರ ಅಭಿಪ್ರಾಯ. ಯಕ್ಷಿ ಪದ್ಮಾವತಿ ದೇವಿಗೆ ಲಕ್ಕಿ ಗಿಡ ಪ್ರಿಯವೆಂಬ ಅಂಶವನ್ನು ಇಲ್ಲಿ ಉಲ್ಲೇಖಿಸಬಹುದು. ಎಲ್ಲಮ್ಮನ ಎಲ್ಲ ಕೇಂದ್ರಗಳಲ್ಲಿ ಬೇವಿನ ಗೊಂಚಲು ಧರಿಸುವ ಆಚರಣೆಯಿದೆ. ಈ ಸಂಪ್ರದಾಯ ಇಂದಿಗೂ ಪ್ರಚಲಿತದಲ್ಲಿದೆ ಎಂದೇ ಹೇಳಬಹುದು.

೬.೧೧.೮. ಜೋಗತಿ ಸಂಪ್ರದಾಯ : 'ಜೋಗಿ' 'ಯೋಗಿ' ಶಬ್ದದ ತದ್ಭವರೂಪವಾಗಿದೆ. ಇಲ್ಲಿ ನಾಥ ಪಂಥದ ಪ್ರಭಾವ ಗಾಢವಾಗಿದೆ. ಈ ದೀಕ್ಷೆಗೆ ಗಂಡು ಹೆಣ್ಣೆಂಬ ಭೇದವಿಲ್ಲ. ಜೋಗಪ್ಪ, ಜೋಗಮ್ಮರನ್ನು ಎಲ್ಲಮ್ಮನ ಮೂರ್ತರೂಪವೆಂದೆ ಪರಿಗಣಿಸಿ ಗೌರವಿಸಲಾಗುತ್ತಿದೆ. ಬಿಸಿಲಲ್ಲಿದ್ದವರನ್ನು ನೆರಳಿಗೆ ಕರೆಯುವುದು. ಹಸಿದವರಿಗೆ ಊಟ ನೀಡುವುದು, ಸುಳ್ಳಾಡದಿರುವುದು ಮುಂತಾದ ವಚನಗಳನ್ನು ಅವರು ಪಾಲಿಸಬೇಕು. ಈ ಜೋಗತಿ ಸಂಪ್ರದಾಯ ಛಲವಾದಿ ಸಮುದಾಯದಲ್ಲಿ ಈ ಮೊದಲು ಇತ್ತು. ಆದರೆ ಇಂದು ನಾಗರೀಕತೆಯ ಪ್ರಭಾವದಿಂದ, ಆಧುನಿಕತೆ ಹಾಗೂ ಶಿಕ್ಷಣದ ಪ್ರಭಾವದಿಂದ ಜೋಗತಿ ಆಗುವ ಪ್ರಸಂಗಗಳು ತುಂಬಾ ಕಡಿಮೆಯಾಗಿವೆ. ಇಂದು ನೌಕರಸ್ಥ ಕುಟುಂಬಗಳು ಪ್ರತಿವರ್ಷ ಸವದತ್ತಿ ಎಲ್ಲಮ್ಮನಿಗೆ ಹರಕೆ ಸಲ್ಲಿಸಿ ದರ್ಶನ ಪಡೆದುಕೊಂಡು ಬರುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ.

೬.೧೧.೯. **ಮೈತುಂಬುವಿಕೆ** : ಎಲ್ಲಮ್ಮ ಸಾಧಾರಣವಾಗಿ ಹುಣ್ಣಿಮೆ ಹಾಗೂ ಶುಕ್ರವಾರದಂದು ಮೈತುಂಬುತ್ತಾಳೆ. ದೇವಿಯ 'ಕುದುರೆಗೆ' (ವಾದಿರೆಗೆ) ಜಳಕದ ನಂತರ ಸನ್ನಿ ಉಂಟಾಗುತ್ತದೆ. ಆ ಸಂದರ್ಭದಲ್ಲಿ ಕಾಲಜ್ಞಾನಿಗಳಂತೆ ಭವಿಷ್ಯ ಹೇಳುವುದು ಉಂಟು. ಕ್ರಮೇಣ ಬೊಟ್ಟು ಮುರಿಯುತ್ತ (ನೆಟಿಗೆ ತೆಗೆಯುತ್ತಾ), ಆಕಳಿಸುತ್ತ, ಕಣ್ಣೀರು ಸುರಿಸುತ್ತಾ ದೇವಿ ಕುದುರೆಯಿಂದ ದೂರ ಸರಿಯುತ್ತಾಳೆ ಎನ್ನಲಾಗುತ್ತದೆ. ಇಂತಹ ಸಂದರ್ಭದಲ್ಲಿ ದೇವಿ ಮೈಮೇಲೆ ಬಂದು ಕೂಗಾಡುವುದು ಕುಣಿಯುವುದು ಮಾಡುತ್ತಾಳೆ. ಈ ಸನ್ನಿವೇಶವನ್ನು ಸ್ಪಷ್ಟವಾಗಿ ದೇವಿಯ ಜಾತ್ರಾ ಉತ್ಸವದಲ್ಲಿ ಕಾಣಬಹುದು. ಭಕ್ತರು ದೇವಿಯಲ್ಲಿ ಬೇಡಿಕೆ ಇಟ್ಟಾಗ ಅಥವಾ ಸಮಸ್ಯೆ ಹೇಳಿಕೊಂಡಾಗ ಆಕೆ ಸೂಕ್ತ ಪರಿಹಾರವನ್ನೂ ನೀಡುತ್ತಾಳೆ. ಇದರಿಂದ ಜನರಿಗೆ ಬಂದ ಕಷ್ಟ-ತೊಂದರೆಗಳು ತೊಲಗುತ್ತವೆ.

೬.೧೧.೧೦. **ಮುತ್ತು ಕಟ್ಟುವುದು** : "ಮೀಸಲು ಮುರಿಯುವ ಅಥವಾ ಹೆಣ್ಣು ಮಾಡುವ ಕ್ರಿಯೆಗೆ ಪೂರ್ವ ಭಾವಿಯಾದ ಅಗತ್ಯ ಆಚರಣೆ ಇದಾಗಿದೆ. ಅಪ್ರಾಪ್ತ ವಯಸ್ಸಿನ ಬಾಲಕಿಯರಿಗೆ ಅಂದರೆ ಹೆಣ್ಣಾಗುವ ಮೊದಲೇ ಇದನ್ನು ಜರುಗಿಸಲಾಗುವುದು. ಅಲ್ಲಿಂದಾಚೆಗೆ ಮುತ್ತು ಕಟ್ಟಿದ ಹೆಣ್ಣು ಮದುವೆಯಾಗುವಂತಿಲ್ಲ. ಈ ಆಚರಣೆ ಛಲವಾದಿ ಸಮುದಾಯದ ಯಲ್ಲಮ್ಮನ ನಿಷ್ಠಾವಂತ ಭಕ್ತರು ಹಿಂದಿನ ಕಾಲದಲ್ಲಿ ಆಚರಿಸುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಜನರಲ್ಲಿ ವೈಚಾರಿಕ ಪ್ರಜ್ಞೆಮೂಡಿ ಅದೊಂದು ಮೂಢನಂಬಿಕೆಯೆಂದೂ ಹೆಣ್ಣನ್ನು ಮಾನಸಿಕವಾಗಿ, ಶಾರೀರಿಕವಾಗಿ ಅಧಃಪತನಗೊಳಿಸುವ ಗೊಡ್ಡು ಸಂಪ್ರದಾಯವೆಂದೂ ಈ ಆಚರಣೆಯನ್ನು ನಿಲ್ಲಿಸಿದ್ದಾರೆ. ಜೊತೆಗೆ ಹೆಣ್ಣಿಗೆ ಶಿಕ್ಷಣ ಕೊಡಿಸುವ ಮೂಲಕ ಅವಳನ್ನು ಸಬಲಗೊಳಿಸಲಾಗುತ್ತಿದೆ. ಹೆಣ್ಣನ್ನು ಹೋಲಿಸಿ 'ಹೆಣ್ಣು ಜಗದ ಕಣ್ಣು', 'ತೊಟ್ಟಿಲು ತೂಗುವ ಕೈ ಜಗತ್ತೆ ತೂಗುತ್ತದೆ' ಎಂಬ ಹಾಡುಗಳಿವೆ."[೬]

೬.೧೧.೧೧. **ಬತ್ತಲೆಸೇವೆ** : ಸವದತ್ತಿಯಲ್ಲಿ ಬತ್ತಲೆ ಸೇವೆಯಿಲ್ಲ. ಹಿಂದೆ ಈ ಮಾದರಿಯ ಬೆತ್ತಲೆ ಸೇವೆ ಇತ್ತು. ಆದರೆ ಇತ್ತೀಚೆಗೆ ಇಂತಹವು ನಡೆಯುವುದಿಲ್ಲ. ಗೌರಿ ಹುಣ್ಣಿಮೆಯ ಹಿಂದಿನ ರಾತ್ರಿ ಗೋಪ್ಯವಾಗಿ ಈ ಸೇವೆ ನಡೆಯುತ್ತದೆ ಎಂಬ ವದಂತಿಯಿದೆ. ಸಾಮಾನ್ಯವಾಗಿ ಈ ಸಂಪ್ರದಾಯ ನಿಂತು ಬಹಳ ದಿನಗಳಾಗಿವೆ. ಇದನ್ನು ಈ ಸಮುದಾಯ ಸಂಪೂರ್ಣ ನಿಷಿದ್ಧಗೊಳಿಸಿದೆ. ಆದರೆ ಮೈತುಂಬ ಹೊಸ ಬಟ್ಟೆ ತೊಟ್ಟು ಮೈತುಂಬ ಅರಶಿಣ, ಕಾಡಿಗೆ, ಬಾಯಲ್ಲಿ ದೇವರ ತಪ್ಪಲು, ಟೊಂಕಿಗೆ ಬೇವಿನ ತಪ್ಪಲು ಕಟ್ಟಿಕೊಂಡು ಪ್ರದಕ್ಷಿಣೆ ಹಾಕುವ ಪದ್ಧತಿ ಈ ಸಮುದಾಯದಲ್ಲಿ ಕಂಡುಬರುತ್ತದೆ.

೬.೧೧.೧೨. **ಬಸವಿ ಬಿಡುವುದು** : ಸಮಾಜದಲ್ಲಿ ಇದೊಂದು ಅನಿಷ್ಟ ಪದ್ಧತಿ. ದಲಿತ ಸಮುದಾಯದಲ್ಲಿ ಪ್ರಾಚೀನ ಕಾಲದಿಂದಲೂ ಈ ಪದ್ಧತಿ ಇತ್ತು. ಆದರೆ ಇತ್ತೀಚೆಗೆ ತುಂಬಾ ಕಡಿಮೆಯಗಿದೆ. ಮಾನವ ಧರ್ಮದ ಹೆಸರಿನಲ್ಲಿ ಕೈಗೊಂಡ ಸ್ವೇಚ್ಚಾಚಾರ ಪದ್ಧತಿಗೆ ಇದು ಉತ್ತಮ ಉದಾಹರಣೆಯಾಗಿದೆ. ಈ ಹಿಂದೆ ಛಲವಾದಿ ಸಮುದಾಯದವರಲ್ಲಿ ಈ ಪದ್ಧತಿ ಇತ್ತು. ಇಂದಿನ ಆಧುನಿಕ ಕಾಲದಲ್ಲಿ ಇದನ್ನು ಸಂಪೂರ್ಣ ನಿಷೇಧಿಸಲಾಗಿದೆ.

ಯಲ್ಲಮ್ಮನನ್ನು ಪೂಜಿಸುವ ಜಿಲ್ಲೆಯ ಛಲವಾದಿ ಸಮುದಾಯದವರು ಮನೆ ದೇವತೆಯಂತೆ ಶ್ರದ್ಧೆ, ಭಯ, ಭಕ್ತಿಯಿಂದ, ಪೂಜೆಯನ್ನು ಸಲ್ಲಿಸುತ್ತಿದೆ. ಪ್ರತಿವರ್ಷ ಎಲ್ಲಮ್ಮನ ಜಾತ್ರೆಗೆ ಎತ್ತಿನಗಾಡಿ, ಟ್ಯಾಕ್ಟರ್ ಮೂಲಕ ಹೋಗಿ ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ.

೬.೧೨ ಮೈಲಾರಲಿಂಗೇಶ್ವರ

ದಕ್ಷಿಣ ಒಳನಾಡಿನಲ್ಲಿ ಶ್ರೀಗಿರಿ ಎಂಬ ಪರ್ವತವಿತ್ತು. ಅಲ್ಲಿ ಅತ್ರಿಕ ಮುನಿ, ಕಪಿಲಮುನಿ, ಪುರುಷಮುನಿ, ಜೋಕುಮುನಿ ಎಂಬ ಋಷಿಗಳು ಯಜ್ಞ ಮಾಡುತ್ತಿದ್ದರು. ಕೊಂಕಣ ದೇಶದ ಮಣಿಕಾಸುರ, ಮಲ್ಲಾಸುರರರೆಂಬ ರಾಕ್ಷಸರು ಯಜ್ಞ ಕೆಡಿಸಲು ಬಂದರು. ಋಷಿಗಳು ಅವರ ದರ್ಪವನ್ನು ನೋಡಲಾರದೆ ಶಿವನನ್ನು ನೆನೆದರು. ರಾಕ್ಷಸರನ್ನು ಧ್ವಂಸಮಾಡಲು ಪ್ರತ್ಯಕ್ಷನಾದ ಶಿವ ಭೂಲೋಕದಲ್ಲೇ ನೆಲೆನಿಂತು ಮೈಲಾರಲಿಂಗ ಎನಿಸಿಕೊಂಡಿದ್ದಾನೆ.

ಕರಿಕಂಬಳಿ, ಕರಿಟೊಪ್ಪಿಗೆ, ಕೈಯಲ್ಲಿ ಡಮರುಗ ಹಿಡಿದು ಭಂಡಾರ ಹಚ್ಚಿರುತ್ತಾರೆ. ವೀರಭದ್ರನನ್ನು ಸುಲಿದು ಮಚ್ಚಿಗೇರಿಯಲ್ಲಿ ಮಾಲೆ ಹಾಕಿದ ಹೆಬ್ಬುಲಿಯಂತೆ ಹಾಲುವಂಶ ಕುಲದ ಜಂಬುಲಿಂಗೇಶ್ವರ ಎನಿಸಿಕೊಳ್ಳುತ್ತಾನೆ. ಕಪ್ಪಲ ಮುನೀಶ್ವರ, ಅಡ್ಡಗುಡ್ಡದ ಮಲ್ಲ, ಮಹೋಗುಡ್ಡರ ಮಲ್ಲ ಎಂದು ಅವನಿಗೆ ನೂರೆಂಟು ಹೆಸರುಗಳಿವೆ. ಆತ ಹಾಲಿನ ಬಟ್ಟೆಯ ಮೇಲೆ ಆಡುತ್ತ, ತುಪ್ಪದ ಬಟ್ಟೆಯ ಮೇಲೆ ಆಡುತ್ತ, ಮುಸುಕಿನ ಬಟ್ಟೆಯ ಮೇಲೆ ಮೆರಗುತ್ತ ಬರುತ್ತಾನೆಂದು ನಂಬಲಾಗುತ್ತದೆ. ಆಕಾಶಕ್ಕೆ ಒಂದು ಕಾಲಿಟ್ಟು ಭೂಮಿಗೆ ಒಂದು ಕಾಲಿಟ್ಟು ನೆಲವಿಲ್ಲದೆ ನಾಟ್ಯವಾಡಿ, ಮೀನಗುಂದಿ ಜಲಗ್ಸಿಯ ವಿಭೂತಿ ರುದ್ರಾಕ್ಷಿಯಲ್ಲಿ ಶಿವಲಿಂಗ ಹುಟ್ಟುತ್ತದೆ. ಆ ಲಿಂಗ ಆರು ಖಂಡುಗ ಭಂಡಾರವನ್ನು ಅಡ್ಡಧರಿಸಿ ಮೂರು ಖಂಡುಗ ಭಂಡಾರವನ್ನು ಇಟ್ಟು, ಮಾಯಾದ ಕುದುರೆಯೇರಿ ಸಪ್ತ ನದಿಗಳನ್ನು ದಾಟಿ ಮಣಿಯಲ್ಲಿ ಪುರವೆಂಬ ಪುರದಲ್ಲಿ ಮಣಿ ಮಲ್ಲ ನೆನಸಿಕೊಂಡಿದ್ದಾನೆ. ಪಾರ್ವತಿದೇವಿ ಮಾಳ್ಳಮ್ಮಳಾಗಿ ನೆಲೆ ನಿಂತಿದ್ದಾಳೆ. ಉಗ್ರ ಚರ್ಮವನ್ನು ಧರಿಸಿ, ಇಹದ ಕೊಂಬುಕೆತ್ತಿ, ಭಾರದ ಭಟ್ಟಂಡ ಧರಿಸಿ, ತೊಡೆಯಲ್ಲಿ ಪಾರ್ವತಿಯನ್ನು ತಲೆಯಲ್ಲಿ ಗಂಗೆಯನ್ನು ಧರಿಸಿದ್ದಾನೆ. ಮುನ್ನೂರ ಮೂವತ್ತು ಕೋಟಿ ದೇವತೆಗಳನ್ನು ಪೊಯ್ಯದು, ಆರು ನೂರಾ ಅರವತ್ತಕೋಟಿ ರಾಕ್ಷಸರನ್ನು ಧ್ವಂಸಮಾಡಿ, ಮಣಿಕಾಸುರ ಮಲ್ಲಾಸುರರೆಂಬ ರಾಕ್ಷಸರನ್ನು ನಾಶಮಾಡಿ, ಸಪ್ತನದಿಗಳನ್ನು ದಾಟಿ ಮಣಿಮಲ್ಲಸುರನೆಂಬ ನಾಮ ಹೊಂದಿದ್ದಾನೆ.

"ಮೈಲಾರಲಿಂಗ ಜಾತ್ರೆಗೆ ಜಾತಿ ಭೇದವಿಲ್ಲದೆ ಸುತ್ತಲಿನ ಜನರೆಲ್ಲಾ ಸೇರುತ್ತಾರೆ. ಭಾನುವಾರ ಮೈಲಾರನ ವಾರವಿದ್ದರಿಂದ ಅಂದು ಸಿಹಿ ಅಡುಗೆ ಮಾಡಿ ನೈವೇದ್ಯ ಮಾಡುತ್ತಾರೆ. ಈ ಜಾತ್ರೆಯಲ್ಲಿ ಅಷ್ಟ ದಿಕ್ಕಿನ ಜನ ಸೇರುತ್ತಾರೆ. ಕಂಚಾ ವೀರರು; ದಪ್ಪನಾದ ಸರಪಣಿಯನ್ನು ಕೈಯಲ್ಲಿಯೇ ತುಂಡು ಮಾಡುವ ಪವಾಡ ಪುರುಷರು; ಕುತನೀಯ ಅಂಗಿ, ಕುತನೀಯ ಟೊಪ್ಪಿಗೆ ಕಟ್ಟಿಕೊಂಡಿರುತ್ತಾರೆ. ಗೂಟದ ಪವಾಡವನ್ನೂ ಮಾಡುತ್ತಾರೆ".[೬]

ಮೈಲಾರಲಿಂಗ ತನ್ನ ಜೀವಿತಾವಧಿಯಲ್ಲಿ ಅನೇಕ ಪವಾಡಗಳನ್ನು ಮಾಡಿದ್ದು ಅದರಿಂದ ಸಾಮಾನ್ಯ ಜನರನ್ನು ರಕ್ಷಿಸಿ ಪೋಷಿಸಿದ್ದಾನೆ. ಮೈಲಾರಲಿಂಗನಿಗೆ ಸಂಬಂಧಿಸಿದ ಅನೇಕ ದಂತಕತೆಗಳು, ಐತಿಹ್ಯ, ಪುರಾಣಗಳಿವೆ. ಕೆಲವೊಂದು ಕತೆಗಳಲ್ಲಿ ಮೈಲಾರಲಿಂಗ ಮಾಡಿದ ಪವಾಡಗಳನ್ನು ಹೇಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಮೈಲಾರ ಲಿಂಗ ಅತಿ ಹೆಚ್ಚು ಪೂಜೆ ಮಾಡುವ ಪುರುಷ ದೈವ ಆಗಿದ್ದಾನೆ.

“ಮೈಲಾರಲಿಂಗನನ್ನು ಛಲವಾದಿ ಸಮುದಾಯ ಪೂಜಿಸುತ್ತಿದ್ದು, ತಮ್ಮ ಮನೆ ದೇವರನ್ನಾಗಿಯೂ ಮಾಡಿಕೊಂಡಿದ್ದಾರೆ. ಪ್ರತಿವರ್ಷ ಮೈಲಾರದ ಮೈಲಾರಲಿಂಗ ಜಾತ್ರೆಯಲ್ಲಿ ನಡೆಯುವದು. ಈ ಜಾತ್ರೆಯಲ್ಲಿ ಪೂಜಾರಿ ಕಾರಣಿಕ ಹೇಳುತ್ತಾನೆ. ಅಂದಿನಿಂದ ಮುಂದಿನ ಮೈಲಾರ ಜಾತ್ರೆಯವರೆಗೆ ವರ್ಷ ಭವಿಷ್ಯ ನುಡಿಯುವುದನ್ನು ‘ಕಾರಣಿಕ’ ಎನ್ನುತ್ತಾರೆ. ಇಡೀ ಜನಸಮೂಹ ಎದುರಿಸಬಹುದಾದ ತೊಂದರೆ, ಅನುಭವಿಸಬೇಕಾದ ಕಷ್ಟಕೋಟಲೆಗಳನ್ನು ಒಂದೆರೆಡು ವಾಕ್ಯದಲ್ಲಿ ಕಾರಣಿಕ ಹೇಳಲಾಗುತ್ತದೆ. ಆ ವರ್ಷದ ಮಳೆ ಬೆಳೆ, ರೋಗರುಜಿನ, ಪ್ರಕೃತಿ ವಿಕೋಪಗಳಿಗೆ ಸಂಬಂಧಿಸಿದ ನುಡಿಗಳ ಮೇಲೆ ಆ ವರ್ಷದ ಇಡೀ ಜನರ ಬದುಕು ಅವಲಂಬಿತವಾಗಿರುತ್ತದೆ.

* ಮುತ್ತಿನ ಮಳೆ ಸುರಿದಿತಲೇ ಬಹುಪರಾಕ್
* ಅಂಬಲಿ ಹಳಸಿತಲೇ ಪರಾಕ್
* ಆಕಾಶಕ್ಕೆ ಸಿಡ್ಲು ಬಡಿತಲೇ ಬಹುಪರಾಕ್
* ಮತಹ್ಯಕ್ಕೆ ಮಬ್ಬುಗವಿತಲೇ ಬಹುಪರಾಕ್
* ಸವನನಿದಿ ಆತಲೆ ಪರಾಕ್
* ಮುತ್ತು ಒಡೆದು ಮಾಲಿ ಆತಲೇ ಪರಾಕ್
* ಮುತ್ತಿನ ರಾಶಿ ದುಂಡಗಾತಲೇ ಪರಾಕ್
* ಸರಪಳಿ ಹರಿದು ಚೂರಾತಲೇ ಪರಾಕ್”[೮]

ಇವು ಆಯಾ ವರ್ಷದ ಲೋಕದ ಸ್ಥಿತಿಗತಿಯನ್ನು ಭವಿಷ್ಯತ್ತಿನ ದಿನಗಳಲ್ಲಿ ಸಂಭವಿಸುವ ಘಟನೆಗಳನ್ನು, ಮಳೆ, ಬೆಳೆಗಳನ್ನು ಕುರಿತ ಕಾರಣಿಕ ನುಡಿಗಳಾಗಿವೆ. ಇದನ್ನಾಧರಿಸಿ ಜನರು ಒಳ್ಳೆಯದು, ಕೆಟ್ಟದ್ದನ್ನು ಪರಿಗಣಿಸುತ್ತಾರೆ. ಪ್ರತಿವರ್ಷವೂ ವಿವಿಧ ವಾಹನಗಳಾದ ಎತ್ತಿನ ಬಂಡಿ, ಲಾರಿ. ಟ್ರ್ಯಾಕ್ಟರ್, ಬಸ್ಸುಗಳ ಮೂಲಕ ಜಾತ್ರೆಗೆ ಹೋಗಿಬರುತ್ತಾರೆ. ಮನೆಯಲ್ಲಿ ಯಾವುದೇ ಶುಭಕಾರ್ಯ ನಡೆದಲ್ಲಿ ಮೈಲಾರಲಿಂಗನಿಗೆ ಪ್ರಥಮ ಹರಕೆ ಮುಟ್ಟಿಸಿ, ನಂತರ ಮುಂದಿನ ಕಾರ್ಯಕ್ರಮ ಛಲವಾದಿ ಸಮುದಾಯದವರು ಮಾಡುತ್ತಾರೆ.

೬.೧೩ ಹುಲಿಗೆಮ್ಮ

ಜಿಲ್ಲೆಯ ಛಲವಾದಿ ಸಮುದಾಯ ಹುಲಿಗೆಮ್ಮಳನ್ನೂ ಅಷ್ಟೇ ನಿಷ್ಠೆಯಿಂದ ಪೂಜಿಸುತ್ತಾರೆ. ಇಂದಿನ ಕೊಪ್ಪಳ ಜಿಲ್ಲೆ ಮುನಿರಾಬಾದ ಹತ್ತಿರವಿರುವ ಹುಲಿಗೆಯ ಹುಲಿಗೆಮ್ಮ ಮುನಿರಾಬಾದ್ ಹುಲಿಗೆಮ್ಮ ಆಗಿದ್ದಾಳೆ. ದೇವಿಯ ಉತ್ಸವ ಭಾರತ ಹುಣ್ಣಿಮೆಯಂದು ನಡೆಯುತ್ತದೆ. ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ ಚಿಕ್ಕ ಹುಲಿಗೆಮ್ಮಳಾದರೆ ಈಕೆ ಹಿರೇ ಹುಲಿಗೆಮ್ಮನೆಂದೆ ಪ್ರಸಿದ್ಧಿ ಪಡೆದಿದ್ದಾಳೆ. ಈ ದೇವಿಯ ಬಗೆಗೂ ಸಾಕಷ್ಟು ಪುರಾಣ ಕತೆಗಳಿವೆ.

ಎಲ್ಲಮ್ಮ ದೇವಿಯೇ ಹುಲಿ ಸವಾರಿ ಮಾಡಿಬಂದು ಮುನಿರಾಬಾದಿನ ಹಿರೇಹುಲಿಗೆಯಲ್ಲಿ ನೆಲೆಸಿದ್ದರಿಂದ ಆಕೆಗೆ ಹಿರೇಹುಲಿಗೆಮ್ಮ ಎಂದು ಹೆಸರು ಬಂದಿದೆ. ಎಲ್ಲಮ್ಮನೇ ಹುಲಿಗೆಮ್ಮನೆಂದು ಎಲ್ಲಮ್ಮನ ಹೆಸರಿನಲ್ಲಿರುವ ಜೋಗತಿಯರು, ಬಸವಿಯರು ಪೂಜಿಸುತ್ತಾರೆ. ಜಗಹೊತ್ತು ಕುಣಿಯುವ, ಕೊಡ ಹೊತ್ತು ಕುಣಿಯುವ ಜೋಗತಿಯರನ್ನು ಇಲ್ಲಿ ಕಾಣಬಹುದು. ಇಲ್ಲಿ ಜನಪದ ಕತೆಯೊಂದು ಹೀಗಿದೆ.

"ಹಿಂದಿನ ಕಾಲದಲ್ಲಿ ನಾಗಜೋಗಿ, ಬಸವಜೋಗಿ ಎಂಬ ಅಂಬಿಗರ ಜನಾಂಗದ ಅಣ್ಣ ತಮ್ಮಂದಿರು ಇದ್ದರಂತೆ. ಅವರು ತುಂಗಬದ್ರೆಯ ನದಿಯ ದಡದಲ್ಲಿ ವಾಸಿಸುತ್ತಿದ್ದರಂತೆ. ಒಮ್ಮೆ ಸವದತ್ತಿ ಎಲ್ಲಮ್ಮ ದೇವಿಗೆ ಹೋಗುವಾಗ ಮಲ್ಲಪ್ರಭಾ ನದಿ ತುಂಬಿ ನಿಂತಿದ್ದರಿಂದ ಅವರಿಗೆ ದೇವಿ ದರುಶನಕ್ಕೆ ಹೋಗದಂತಾಯಿತು. ಆಗ ಅವರಿಬ್ಬರು ಎಲ್ಲಮ್ಮ ದೇವತೆಯ ಕುರಿತು ಸ್ತುತಿ ಮಾಡಿದರಂತೆ. ಆಗ ತುಂಬಿ ಹರಿಯುವ ಮಲಪ್ರಭಾ ನದಿ ಎರಡು ಭಾಗವಾಗಿ ದಾರಿಮಾಡಿ ಕೊಟ್ಟಿತ್ತಂತೆ. ದಾರಿ ಸಿಕ್ಕಾಗ ತಾಯಿಯ ಹತ್ತಿರ ಹೋಗಿ ದರುಶನ ಪಡೆದುಕೊಂಡು ಬಂದರಂತೆ. ಅವರು ತಮ್ಮ ಆಯುಷ್ಯದುದ್ದಕ್ಕೂ ಮೈಯಲ್ಲಿ ಶಕ್ತಿ ಇರುವತನಕ ದೇವಿಯ ದರುಶನಕ್ಕೆ ನಡೆದುಕೊಂಡು ಹೋಗಿ ಬಂದರಂತೆ. ಕೆಲವು ವರ್ಷ ಗತಿಸಿದ ಮೇಲೆ ಮುಪ್ಪು ಆವರಿಸಿತು. ಆ ಸಮಯದಲ್ಲಿ ಸವದತ್ತಿ ಎಲ್ಲಮ್ಮನ ದರುಶನ ಪಡೆಯುವುದು ಅಸಾಧ್ಯವಾಯಿತು. ಆಗ ದೇವಿಯ ಕುರಿತು ಶ್ರದ್ಧೆ ಭಕ್ತಿಯಿಂದ ಪ್ರಾರ್ಥಿಸಿದರು. ಈರ್ವರ ಪ್ರಾರ್ಥನೆಗೆ ಮೆಚ್ಚಿ ದೇವಿ ಕನಸಿನಲ್ಲಿ ಬಂದು, ನೀವು ಕಷ್ಟಪಟ್ಟು ಇಲ್ಲಿಗೆ ಬರುವುದು ಬೇಡ; ನಾನೇ ನಾಳೆ ಹುಲಿಗೆಯಲ್ಲಿ ನೆಲೆಸುವುದಾಗಿ ಹೇಳಿದಳಂತೆ. ಮರುದಿನ ಎದ್ದು ನೋಡುವುದರಲ್ಲಿಯೇ ತಾವಿದ್ದ ಸ್ಥಳದಲ್ಲಿ ಭೂಮಿಯೊಳಗಿಂದ ಒಂದು ಕಲ್ಲು ಉದ್ಭವಿಸಿ ನಿಂತಿತಂತೆ. ಅದೇ ಕಲ್ಲಿಗೆ ಸವದತ್ತಿ ಎಲ್ಲಮ್ಮ ದೇವಿಯೆಂದು ಪೂಜಿಸಲು ಆರಂಭಿಸಿದರಂತೆ. ಸವದತ್ತಿ ಎಲ್ಲಮ್ಮ ಹುಲಿಗಿಯಲ್ಲಿ ಬಂದು ನೆಲೆಸಿದ್ದರಿಂದ ಹುಲಿಗೆಮ್ಮ ಆದಳೆಂದು ಈ ಕಥೆ ಹೇಳುತ್ತದೆ. ನಾಗಜೋಗಿ, ಬಸವಜೋಗಿಯರು ತಮ್ಮ ಜೀವಮಾನ ಇರುವತನಕ ದೇವಿ ಸೇವೆ ಮಾಡಿಕೊಂಡು ಪರಸ್ಪರರು ಒಂದು ತೀರ್ಮಾನಕ್ಕೆ ಬಂದಾಗ ಗುಡಿಯಾಯಿತಂತೆ. ಅವರೆಲ್ಲರ ಆಚಾರ ವಿಚಾರಗಳು ಪೂಜೆ ಮಾಡುವ ವಿಧಿ ವಿಧಾನಗಳು ಬೆಳೆದು ಬಂತೆಂದು ಈ ಕಥೆ ಹೇಳುತ್ತದೆ". [೯]

ಹೀಗೆ ದಂತಕಥೆಗಳಿಂದ ಕೂಡಿದ ಹುಲಿಗೆಮ್ಮ ಜನಸಾಮಾನ್ಯರ ಮನದಲ್ಲಿ ಒಬ್ಬ ಶಕ್ತಿ ದೇವತೆಯಂತೆ ನೆಲೆಸಿದ್ದಾಳೆ. ಈ ದೇವಿಯನ್ನು ಮನೆ ದೇವವಾಗಿ ಪೂಜಿಸುವರಲ್ಲಿ ಜಿಲ್ಲೆಯ ಛಲವಾದಿ ಸಮುದಾಯ ಕೂಡ ಸೇರಿದೆ.

೬.೧೪ ಪುರುಷ ದೇವತೆಗಳು

ಹನುಮಪ್ಪ, ಮೈಲಾರಲಿಂಗ, ಪಾಂಡುರಂಗ, ವಿಠೋಬಾ ಇನ್ನೂ ಮುಂತಾದ ಪುರುಷ ದೇವತೆಗಳ ಆಚರಣೆ ಮಾಡಿ ಭಯಭಕ್ತಿಯಿಂದ ಪೂಜಿಸುವ ಕ್ರಮ ಛಲವಾದಿ ಸಮುದಾಯದಲ್ಲಿದೆ.

೬.೧೪.೧ ಹನುಮಪ್ಪ (ಹನುಮಂತ)

ಜಿಲ್ಲೆಯ ರೋಣ ತಾಲೂಕಿನ ಕರಮಡಿ ಗ್ರಾಮದಲ್ಲಿ ಹನುಮಪ್ಪನ ಗುಡಿ ಕಂಡುಬರುತ್ತದೆ. ಹನುಮಂತ ದೇವರ ಕಂಡರೆ ಜನರಿಗೆ ಬಹಳ ಭಯ, ಭಕ್ತಿಯಿದ್ದು ಈ ಊರಿನ ಗ್ರಾಮದೇವನಾಗಿದ್ದಾನೆ. ಈ ದೇವರ ಬಗ್ಗೆ ಕಂಡುಬರುವ ಕತೆ ಹೀಗಿದೆ. ಕರಮಡಿ ಗ್ರಾಮದ ಮುಂದೆ ಒಂದು ಹಳ್ಳವಿದೆ. ಅಲ್ಲಿ ಪ್ರತಿದಿನ ಹೆಣ್ಣುಮಕ್ಕಳು ಬಟ್ಟೆ ತೊಳೆಯುವುದು ಸಾಮಾನ್ಯ ಸಂಗತಿಯಾಗಿತ್ತು. ಒಮ್ಮೆ ಆ ಹೆಣ್ಣುಮಕ್ಕಳಿಗೆ

ನಾನೂ ನಿಮ್ಮೊಂದಿಗೆ ಬರುತ್ತೇನೆ ಎಂಬ ಅಶರೀರವಾಣಿ ಕೇಳಿಬಂತು. ಸುತ್ತ ಎತ್ತ ನೋಡಿದರೂ ಯಾರೂ ಕಾಣಿಸಲಿಲ್ಲವಾದ್ದರಿಂದ ಅವರಿಗೆ ಇದೇನೋ ಭ್ರಮೆ ಇರಬೇಕೆಂದುಕೊಂಡು ಸುಮ್ಮನಾಗಿಬಿಟ್ಟರು. ನಂತರ ಮತ್ತೊಂದು ದಿನ ಸಂಜೆ ಒಬ್ಬ ಹೆಣ್ಣುಮಗಳು ಬಟ್ಟೆ ತೊಳೆಯಲು ಹಳ್ಳಕ್ಕೆ ಬಂದಾಗ ಮತ್ತೆ ಅದೇ ಧ್ವನಿ ಅದೇ ರೀತಿಯಲ್ಲಿ ಕೇಳಿಬಂತು. ನಂತರ ಆ ಹೆಣ್ಣಮಗಳ ಮೈಯೊಳಗೆ ಸೇರಿಕೊಂಡು ಅದೇ ಸ್ಥಳದಲ್ಲಿ ಕುಳಿತುಬಿಟ್ಟಿತು. ಎಷ್ಟು ಹೊತ್ತಾದರೂ ಅವಳು ಮನೆಗೆ ಹಿಂದಿರುಗದಿದ್ದಾಗ, ಮನೆಯವರು ಬಂದು ಹಳ್ಳದಲ್ಲಿ ಕುಳಿತ ಅವಳನ್ನು ಕಂಡು ಕರೆಯುತ್ತಾರೆ. ಆಗ ಅವಳ ಮೈತುಂಬಿದ್ದ ಹನುಮಪ್ಪ ಹೀಗೆ ಹೇಳುತ್ತಾನೆ. 'ನಾನು ಹನುಮಂತ ನಾನು ಉಸುಕಿನಲ್ಲಿ ಸಿಕ್ಕು ಬಿದ್ದಿದ್ದೇನೆ. 'ನನ್ನನ್ನು ಇಲ್ಲಿಂದ ತೆಗೆದು ನಿಮ್ಮ ಗ್ರಾಮದಲ್ಲಿ ಪ್ರತಿಷ್ಠಾಪನೆ ಮಾಡಿದರೆ ನಿಮ್ಮ ಊರಿಗೆ ಒಳ್ಳೆಯದಾಗುತ್ತದೆ'. ಅದರಂತೆ ಊರಿನ ಜನರೆಲ್ಲ ಸೇರಿ ಆ ಉಸುಕಿನಲ್ಲಿದ್ದ ಹನುಮಂತ ದೇವರನ್ನು ತೆಗೆದು ಅಲ್ಲಿಯೇ ಪ್ರತಿಷ್ಠಾಪನೆ ಮಾಡಿ ಗುಡಿ ಕಟ್ಟಿಸಿದರು. ಅಂದಿನಿಂದ ಅಲ್ಲಿ ಪೂಜೆ ಪುನಸ್ಕಾರಗಳು ನಿರಂತರ ನಡೆಯುತ್ತ ಬಂದಿವೆ. ಈ ಹನುಮಪ್ಪನಿಗೆ ಲಿಂಗಾಯತ ಸಮುದಾಯದ ಪೂಜಾರಿ ಪ್ರತಿದಿನ ಮಡಿಬಟ್ಟೆಯಲ್ಲಿ ಬಂದು ದೇವರಿಗೆ ಹಣ್ಣು ಕಾಯಿ ಹೂಗಳಿಂದ ಅಲಂಕಾರಗೊಳಿಸಿ ಅನಂತ ಭಕ್ತಿಯಿಂದ ಪೂಜಿಸುತ್ತಾನೆ. ಈ ಹನುಮಪ್ಪನಿಗೆ ಪ್ರತಿವರ್ಷ ದವನದ ಹುಣ್ಣಿಮೆಗೆ ಜಾತ್ರೆ ನಡೆಯುತ್ತದೆ. ಈ ಜಾತ್ರೆ ತೇರು ಉತ್ಸವ ಪಲ್ಲಕ್ಕಿಗಳಿಂದ ಗ್ರಾಮದ ಎಲ್ಲ ವರ್ಗದ ಜನ ಸೇರಿ ಐದು ದಿನಗಳವರೆಗೆ ಆಚರಿಸಲಾಗುತ್ತದೆ. ರಥೋತ್ಸವದ ಮರುದಿನ ಓಕುಳಿಯಾಟ ನಡೆಯುತ್ತದೆ. ತೇರು ಎಳೆದ ಒಂಬತ್ತನೆಯ ದಿನ ಕಡುಬಿನ ಕಾಳಗ ಆಚರಿಸುತ್ತಾರೆ. ಪೂಜಾರಿ ಮನೆಯಲ್ಲಿ ತಯಾರಿಸಿದ ಜೋಳದ ಕಡಬುಗಳನ್ನು ರಾತ್ರಿ ಎಂಟುಗಂಟೆಯ ಸುಮಾರಿಗೆ ಬಂದು ಹನುಮಪ್ಪನಿಗೆ ಪೂಜೆ ಮಾಡಿ ಪ್ರಸಾದವೆಂಬಂತೆ ಎಸೆಯುತ್ತಾನೆ. ಎಸೆದ ಕಡುಬು ಹಿಡಿಯಲು ಪಡುವ ಹರಸಾಹಸವನ್ನು ಕಡುಬು ಕಾಳಗವೆಂದು ಕರೆಯುತ್ತಾರೆ. ಛಲವಾದಿ ಸಮುದಾಯದ ಕೆಲವು ಗ್ರಾಮಗಳ ಜನರು ಆರಾಧ್ಯ ದೈವವನ್ನಾಗಿ ಮಾಡಿಕೊಂಡಿದ್ದಾರೆ.

೬.೧೫ ದೇವತೆಗಳ ಉಡುಗೆ ತೊಡುಗೆಗಳು

ಸ್ತ್ರೀ ದೇವತೆಗಳಿಗೆ ಹೆಚ್ಚಾಗಿ ಉಡುಗೆ ತೊಡುಗೆ ಹಾಕುವುದನ್ನು ಕಾಣಬಹುದು. ದೈವಕ್ಕೆ ಆರುಮೊಳ, ಮೂರುಮೊಳದ ಸೀರೆ ತೊಡಿಸುವರು. ಜನಪದರು ಹಾಕಿಕೊಳ್ಳುವ ಉಡುಗೆಗಳನ್ನು ಹಾಕುತ್ತಾರೆ. ಜೊತೆಗೆ ಕಣ್ಣುಬಟ್ಟು, ಬಳೆ, ಗೆಜ್ಜೆ, ಪಟ್ಟಿ, ಮೂಗುತಿ, ಹಣೆಪಟ್ಟಿ, ಕಿವಿಯೋಲೆ, ಸರ ಇತ್ಯಾದಿ ಆಭರಣಗಳಿಂದ ಸ್ತ್ರೀ ದೇವತೆಯನ್ನು ಸಿಂಗರಿಸುತ್ತಾರೆ. ಹಿರಿಯ ಕಿರಿಯರಿಗೆ ಪ್ರಾಣಿ ಪಕ್ಷಿಗಳಿಗೆ ಯಾವುದೇ ರೀತಿಯ ರೋಗ ರುಜಿನ ತೊಂದರೆಗಳು ಕಾಡದಿರಲಿ ಎಂದು ಸ್ತ್ರೀ ದೇವತೆಗೆ ಹರಕೆ ಹೊತ್ತು ಆಭರಣ ಮಾಡಿಸಿ ಹಾಕುತ್ತಾರೆ. ಹಳ್ಳಿಗಳಲ್ಲಿ ಚಿಕ್ಕಮಕ್ಕಳಿಗೆ ಹಿರಿಯರಿಗೆ ಏನಾದರೂ ತೊಂದರೆ ಬಂದರೆ ಮಹಿಳೆಯರು ಧರಿಸುವ ಉಡಿಗೆ-ತೊಡಿಗೆಯನ್ನು ಕೊಡುವೆನೆಂದು ಹರಕೆ ಹೊರುವರು.

೬.೧೬ ದೇವತೆಗಳ ಆಹಾರ

ಸಾಮಾನ್ಯವಾಗಿ ಪುರುಷದೇವತೆಗಳು ಸಿಹಿ ಅಡುಗೆಗಳನ್ನು ಇಷ್ಟಪಡುತ್ತಾರೆ. ಸ್ತ್ರೀ ದೇವತೆಗಳು ಮಾಂಸ-ರಕ್ತವನ್ನು ಇಷ್ಟಪಡುತ್ತವೆ. ಸಿಹಿ ಅಡುಗೆಗಳೆಂದರೆ ಹೋಳಿಗೆ, ತುಪ್ಪ, ಕರಿಗಡುಬು, ಪಾಯಸ ಮುಂತಾದವು. ಇನ್ನೂ ಮಾಂಸಾಹಾರ ಎಂದರೆ ಪ್ರಾಣಿಬಲಿ ನೀಡಿದ ಕುರಿ-ಕೋಳಿ, ಕೋಣ

ಮಾಂಸದಿಂದ ಸಿದ್ಧಪಡಿಸಿದ ಆಹಾರ ಪದಾರ್ಥವಾಗಿದೆ. ದುಷ್ಟ ಶಕ್ತಿ ದೇವತೆಗಳಿಗೆ ಮಾಂಸಹಾರ ಅಥವಾ ಪ್ರಾಣಿಗಳ ರಕ್ತ ಮಾಂಸ ತುಂಬಾ ಇಷ್ಟವೆಂದು ನಂಬಿಕೆಯಿದೆ. ಹೀಗೆ ದೇವರುಗಳು ಸಸ್ಯಹಾರವನ್ನು ಮತ್ತು ಮಾಂಸಾಹಾರವನ್ನು ತಮ್ಮ ಆಹಾರ ಕ್ರಮವನ್ನಾಗಿ ಮಾಡಿಕೊಂಡಿವೆ. ಗದಗ ಜಿಲ್ಲೆಯ ಛಲವಾದಿ ಕೇರಿಗಳಲ್ಲಿ ಶಾಖಾಹಾರ ಹಾಗೂ ಮಾಂಸಾಹಾರದ ದೇವತೆಗಳು ಇದ್ದಾರೆ. ಆಯಾ ಸಂದರ್ಭಕ್ಕೆ ತಕ್ಕಂತೆ ಆಹಾರ ತಯಾರಿಸಿ ದೇವರಿಗೆ ಅರ್ಪಿಸುವರು.

೬.೧೭ ದೇವತಾರಧನೆ

ದೇವತೆ ಆರಾಧನೆ ಎಂದರೆ ದೇವತೆಗೆ ಪ್ರತಿನಿತ್ಯ ಕ್ರಮಬದ್ಧವಾಗಿ ಪೂಜಿಸುವ ಒಂದು ನಿಯಮ. ದೇವತಾರಾಧನೆಯ ಅಗತ್ಯಗಳನ್ನು ಕ್ರಮಬದ್ಧವಾಗಿ ಪೂರೈಸಲು ಪುರುಷ ಪೂಜಾರಿಗಳನ್ನು ನೇಮಿಸಿಕೊಳ್ಳುವುದು ಬಹುತೇಕ ಕಡೆ ಕಂಡುಬರುತ್ತದೆ. ಕೆಲವು ಕಡೆ ಒಂದೇ ಮನೆತನದವರು ಪೂಜೆ ಮುಂದುವರೆಸಿಕೊಂಡು ಬರುತ್ತಾರೆ. ಮತ್ತೆ ಕೆಲವು ಕಡೆ ವರ್ಷಕ್ಕೊಬ್ಬರನ್ನು ನೇಮಕ ಮಾಡಿಕೊಂಡು ಬರಲಾಗಿದೆ. ಮತ್ತೆ ಕೆಲವು ಗುಡಿಗಳಿಗೆ ಪೂಜಾರಿಗಳೇ ಇರುವುದಿಲ್ಲ. ಪೂಜೆ ಮಾಡಲು ಹೋದವರೇ ದೇವರಿಗೆ ಕಾಯಿ ಒಡೆದುಕೊಂಡು ಬರಬೇಕು. ಮತ್ತೆ ಕೆಲವು ದೇವರಿಗೆ ಸ್ತ್ರೀ ಪೂಜಾರಿಗಳಿರುತ್ತಾರೆ. ಆದರೆ ಇದು ಬಹಳ ವಿರಳವಾಗಿದೆ. ಕೆಲವು ಗ್ರಾಮಗಳಲ್ಲಿ ಮೇಲ್ವರ್ಗದ ದೇವರುಗಳಾದ ಬಸವೇಶ್ವರ, ನರಸಿಂಹಸ್ವಾಮಿ, ವೀರಭದ್ರೇಶ್ವರ, ವಿರುಪಾಕ್ಷ, ಹುಲಿಬಸವೇಶ್ವರಂತಹ ಮೇಲ್ವರ್ಗದವರು ಆರಾಧಿಸುವ ಈ ದೇವರ ಗುಡಿಗಳು ಊರೊಳಗಿರುತ್ತವೆ. ಇವುಗಳ ಒಳಗೆ ಹೋಗಲು ಛಲವಾದಿ ಸಮುದಾಯದವರಿಗೆ ನಿಷೇಧವಿದೆ. ಹೊರಗಿನಿಂದಲೇ ಕೈಮುಗಿದುಕೊಂಡು ಹೋಗುವ ಅಮಾನುಷವಾದ ಪದ್ಧತಿ ಕೆಲವು ಕಡೆ ಕಂಡುಬರುತ್ತದೆ. ಮೇಲ್ವರ್ಗದ ದೇವರಿಗೆ ಕೆಳವರ್ಗದವರು ನೈವೇದ್ಯ ತೆಗೆದುಕೊಂಡು ಹೋಗುವಂತಿಲ್ಲ. ಆದರೆ ಮೇಲ್ವರ್ಗದವರು ಕೆಳವರ್ಗದ ದೇವರುಗಳಿಗೆ ನೈವೇದ್ಯ ಕೊಟ್ಟರೆ ನಡೆಯುತ್ತದೆ. ಅವರು ಮನೆಗೆ ಸಿದ್ಧಮಾಡಿದ ಆಹಾರವನ್ನೇ ದೇವರಿಗೆ ನೈವೇದ್ಯ ಮಾಡಿದರೂ ನಡೆಯುತ್ತದೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ಸ್ತ್ರೀ ದೇವತೆಗಳ ವಾರವೆಂದು ಪೂಜಿಸುತ್ತಾರೆ. ಮೈಲಾರಲಿಂಗನನ್ನು ಭಾನುವಾರ, ಹನುಮಂತನನ್ನು ಶನಿವಾರ ಪೂಜಿಸಲಾಗುತ್ತದೆ. ಪ್ರತಿಯೊಂದು ದೇವತೆಗಳಿಗೂ ನಿರ್ದಿಷ್ಟ ವಾರವೆಂಬುದಿದ್ದು ಆ ದಿನಗಳಂದೇ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಹರಕೆ ಕಾಣಿಕೆಗಳನ್ನು ಜಾತ್ರೆ, ಉತ್ಸವ, ಹಬ್ಬ, ಹರಿದಿನಗಳಲ್ಲಿ ಸಲ್ಲಿಸಲಾಗುತ್ತದೆ. ಭಕ್ತರಿಗೆ ಬಂದ ತೊಂದರೆ ಕಷ್ಟಗಳನ್ನು ದೇವರು ನಿವಾರಣೆ ಮಾಡಿದ ಫಲವಾಗಿ ಭಕ್ತರು ತಮಗೆ ತೋಚಿದ ಕಾಣಿಕೆಯನ್ನು ದೇವರಿಗೆ ಅರ್ಪಿಸುತ್ತಾರೆ. ಸ್ತ್ರೀ ದೇವತೆಗಳಾದರೆ ಛತ್ರಿ, ಸೀರೆ, ಬಳೆ, ಗಂಟೆ, ಒಡವೆಗಳನ್ನು ಮಾಡಿಸಿಕೊಡುತ್ತಾರೆ. ಪುರುಷ ದೇವರಿಗಾದರೆ ಗಂಟೆ, ಛತ್ರಿ, ಕಡಗ, ಮುಂತಾದ ಒಡವೆಗಳನ್ನು ಮಾಡಿಸಿ ಹಾಕುತ್ತಾರೆ. ಭಕ್ತರು ತಮಗೆ ತಿಳಿದಂತೆ ತಮ್ಮ ಶಕ್ತ್ಯಾನುಸಾರ ಕಾಣಿಕೆ ನೀಡುವ ಮೂಲಕ ದೇವರನ್ನು ಆರಾಧಿಸುವ ಪದ್ಧತಿ ಇವರಲ್ಲಿದೆ.

೬.೧೮ ಹೋಳಿ ಹಬ್ಬ

ಹೋಳಿಹಬ್ಬ ಛಲವಾದಿ ಸಮುದಾಯದವರು ಆಚರಿಸುವ ಅತಿ ಮುಖ್ಯ ಹಬ್ಬವಾಗಿದೆ. ಇದರ ಜೊತೆಗೆ ಯುಗಾದಿ, ದಸರಾ, ದೀಪಾವಳಿ, ಸಂಕ್ರಮಣ, ಮೋಹರಂ, ಗೌರಿಹುಣ್ಣಿಮೆ, ನಾಗರ ಪಂಚಮಿ ಮುಂತಾದ ಹಬ್ಬಗಳನ್ನು ಸಹ ಆಚರಿಸುತ್ತಾರೆ.

ಕಾಮನ ದಹನ ಮಾಡುವುದು, ನಂತರ ಬಣ್ಣದ ಓಕುಳಿ ಆಡುವುದನ್ನೆ ಹೋಳಿ ಹಬ್ಬವೆಂದು ಕರೆಯುತ್ತಾರೆ. ಕಾಮನನ್ನು ಸುಡುವ ಮೂಲಕ ಹಬ್ಬ ಆಚರಿಸುತ್ತಾರೆ. ಇದರದೇ ಪುರಾಣವಿದೆ. ಅದೆಂದರೆ "ಗೌರಿ (ಪಾರ್ವತಿ) ಇಹಲೋಕದ ಗಂಡನನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲದಿಂದ ಶಿವನಲ್ಲಿಗೆ ಬರುತ್ತಾಳೆ. ಆದರೆ ಅಲ್ಲಿ ಶಿವ ಜಗವನ್ನು ಮರೆತು ತಪಸ್ಸಿನಲ್ಲಿ ಮಗ್ನನಾಗಿರುತ್ತಾನೆ. ಹೇಗಾದರೂ ಮಾಡಿ ಅವನನ್ನು ಎಚ್ಚರಗೊಳಿಸಿ ನನ್ನ ಪ್ರೇಮವನ್ನು ನಿವೇದಿಸಿಕೊಳ್ಳಬೇಕೆಂದು ಮನ್ಮಥನನ್ನು ಕರೆಸಿ ಶಿವನ ಮೇಲೆ ಪ್ರೇಮ ಬಾಣ ಬಿಡಿಸುತ್ತಾಳೆ. ಇದರಿಂದ ತಪೋಭಂಗವಾಗಿ ಶಿವನು ಮನ್ಮಥನನ್ನು ತನ್ನ ಮೂರನೇ ಕಣ್ಣಿನಿಂದ ಸುಟ್ಟು ಭಸ್ಮಮಾಡುತ್ತಾನೆ. ಈ ಅನಾಹುತ ಕಂಡ ಗೌರಿ ಶಿವನಲ್ಲಿ ಮನ್ಮಥನದೇನೂ ತಪ್ಪಿಲ್ಲ ಎಂದು ಬೇಡಿಕೊಂಡಾಗ ಶಿವ ಅವನನ್ನು ಬದುಕಿಸುತ್ತಾನೆ.

ಮನ್ಮಥ ದಹನ ನಂತರ ರತಿ ಪಟ್ಟ ವೇದನೆಯನ್ನು ಜನ ಅತ್ತು ಕರೆದು ಗೋಳಾಡುತ್ತಾರೆ. ನಂತರ ಮನ್ಮಥನು ಮತ್ತೆ ಹುಟ್ಟಿದ್ದಕ್ಕಾಗಿ ಸಂತೋಷದಿಂದ ಓಕುಳಿಯಾಡುತ್ತ ಹಬ್ಬ ಆಚರಿಸುತ್ತಾರೆ. ಅದೇ ಸಂದರ್ಭದಲ್ಲಿ 'ಕಾಮಣ್ಣನ ಮಕ್ಕಳು ಕಳ್ಳ ಸೂಳೆ ಮಕ್ಕಳು' ಎಂದು ಹಾಡುತ್ತಾ ಒಬ್ಬ ವ್ಯಕ್ತಿಯನ್ನು ಚಟ್ಟದ ಮೇಲೆ ಸತ್ತಂತೆ ಮಲಗಿಸಿ ಅವನನ್ನು ಊರೆಲ್ಲಾ ಹೊತ್ತೊಯ್ದು ಮೆರವಣಿಗೆ ಮಾಡುತ್ತ ಬಾಯಿ ಬಾಯಿ ಬಡಿದುಕೊಳ್ಳುತ್ತಾ ಹೋಗುತ್ತಾರೆ. ಮೆರವಣಿಗೆ ಹೋದ ಸಂದರ್ಭದಲ್ಲಿ ಪ್ರತಿಯೊಂದು ಮನೆಯಲ್ಲಿ ಕಳವುಮಾಡಿ ತಂದ ಕಟ್ಟಿಗೆ ರಾಶಿಯಲ್ಲಿ ಮನ್ಮಥನ ಪ್ರತಿರೂಪ ಇಟ್ಟು ಸುಡುತ್ತಾರೆ. ಆ ಮೂಲಕ ಕಾಮನಹಬ್ಬ ಅಥವಾ ಹೋಳಿ ಹಬ್ಬವನ್ನು ಆಚರಿಸಲಾಗುತ್ತದೆ.

ಪ್ರತಿಯೊಂದು ಹಬ್ಬ ಹೆಂಗಸರಿಗಾಗಿ ಬರುತ್ತವೆ. ಗಂಡಸರಿಗಾಗಿ ಯಾವ ಹಬ್ಬವೂ ಇಲ್ಲವೆಂದು ಮನುಷ್ಯರೆಲ್ಲ ಶಿವನನ್ನು ಕೇಳಿಕೊಂಡಾಗ 'ನಿಮಗೋಸ್ಕರ ಹೋಳಿ ಹಬ್ಬ ಆಚರಿಸಿ' ಎಂದು ಹೇಳಿದನಂತೆ. ಅದರಿಂದಾಗಿ ಪುರುಷರಷ್ಟೇ ಈ ಹಬ್ಬದಲ್ಲಿ ಭಾಗವಹಿಸುವುದನ್ನು ಕಾಣಬಹುದು. ಈ ರೀತಿ ಶಿವನ ಆಶೀರ್ವಾದದಿಂದ ಹುಟ್ಟಿಕೊಂಡದ್ದು ಹೋಳಿ ಹಬ್ಬವೆಂದು ಹೇಳುತ್ತಾರೆ.

ಈ ಹಬ್ಬವನ್ನು ಇತ್ತೀಚಿನ ದಿನಗಳಲ್ಲಿ ಹೆಣ್ಣು ಗಂಡು ಎನ್ನದೆ ಎಲ್ಲ ಜಾತಿಯ ಜನ ಓಕುಳಿಯಾಡಿ ಹಬ್ಬವನ್ನು ಅದ್ದೂರಿಯಿಂದ ಆಚರಿಸುತ್ತಾರೆ. ಚಿಕ್ಕವರು ದೊಡ್ಡವರೆನ್ನದೆ ಎಲ್ಲರೂ ಪಾಲ್ಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಹಾಡುವ ಹಾಡು ಹೀಗಿದೆ.

ಕಾಮ ಕಲ್ಲಿಗೆ ಸತ್ತ ಭೀಮ ಬಿಲ್ಲಿಗೆ ಸತ್ತ
ರಾವಣ ಸತ್ತ ರಣದಾಗ ನಮ್ಮೂರ
ತಳವಾರ ಸತ್ತ ತಳದಾಗ
ಆನಿಗಂಬಾರಿ ಚಂದ ಕುದುರಿಗೆ ತಡಿ ಚಂದ

ಸದರೀಗ ಚಂದ ಕಾಮಣ್ಣ ಬಗಲಾಗ
ರೂಪಕ ಚಂದ ರತಿದೇವಿ
ಅಳುವ ಬಾಯಿಯ ಕಂಡು ಕಳವಳವೋ ಸಭದಾಗ
ಅಳಬ್ಯಾಡ ರತಿಯ ಮನಿಸೋಸಿಯೇ ಕಾಮಣ್ಣ
ಮನದಾಗ ಮೂಡಿ ಬರತಾನ

ಈ ಸಮುದಾಯವು ಹೋಳಿ ಹಬ್ಬದ ಜೊತೆಗೆ ಯುಗಾದಿ ಮುಂತಾದ ಹಿಂದೂಧರ್ಮದ ಹಬ್ಬಗಳನ್ನೆಲ್ಲ ಆಚರಿಸುತ್ತದೆ.

೬.೧೯ ಮೋಹರಂ ಹಬ್ಬ

ಮೇಲು ಕೀಳೆನ್ನದೆ ಆ ಧರ್ಮ ಈ ಧರ್ಮವೆನ್ನದೆ ಎಲ್ಲಾ ಧರ್ಮದವರು ಸಮಾನ ಮನಸ್ಸಿನಿಂದ ಕೂಡಿ ಒಂದಾಗಿ ಆಚರಿಸುವ ಹಬ್ಬವೇ ಈ ಮೋಹರಂ ಹಬ್ಬವಾಗಿದೆ. ಹಬ್ಬದ ದಿನ ಎಲ್ಲರಂತೆ ಮಸೀದಿಗಳಿಗೆ ಹೋಗಿ ಪೂಜೆ ಮಾಡಿಸುತ್ತಾರೆ ಹಾಗೂ ಬೆಂಕಿ ತುಳಿಯುತ್ತಾರೆ. ಇದರಿಂದ ತಮ್ಮ ದೈವ ಭಕ್ತಿ ತಿಳಿಯುವಂತೆ ಮಾಡುತ್ತಾರೆ. ಅದಲ್ಲದೆ ದೇವರಿಗೆ ವಡವೆ ವಸ್ತ್ರ, ಹೂವಿನ ಹಾರ, ಬಾಳೆಹಣ್ಣು, ಕೊಬ್ಬರಿ, ಹಾರ ತುರಾಯಿ ಮುಂತಾದ ರೂಪದಲ್ಲಿ ಕಾಣಿಕೆ ಸಲ್ಲಿಸುತ್ತಾರೆ. ಬೆಂಕಿ ಕುಣಿಯ ಸುತ್ತ ಕುಣಿಯುತ್ತಾರೆ. ಈ ಹಬ್ಬವನ್ನು ಕುಡಿದು ಕುಣಿದು ಕುಪ್ಪಳಿಸಿ ಸಂತೋಷ ಸಡಗರದಿಂದ ಆಚರಿಸುತ್ತಾರೆ. ಕೆಲವರು ಹುಲಿ ವೇಶ ಹಾಕುತ್ತಾರೆ ಮತ್ತು ಮೊಹರಂ ಕುಣಿತ ಕುಣಿಯುತ್ತಾರೆ.

ಮೂಲತಃ ಮೊಹರಂ ಮುಸ್ಲಿಂ ಧರ್ಮದ ಆಚರಣೆಯಾದರೂ ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವಯಂ ಪ್ರೇರಿತರಾಗಿ ಪಾಲ್ಗೊಂಡು ಆಚರಣೆ ಮಾಡುತ್ತಾರೆ. ಹೀಗಾಗಿ ಅದನ್ನು 'ಧರ್ಮ ಸಮನ್ವಯತೆಯ ಹಬ್ಬ' ಎಂದು ಹೇಳಬಹುದು. ಛಲವಾದಿ ಸಮುದಾಯದವರು ಧಾರ್ಮಿಕ ಸಮನ್ವಯತೆ ರೂಢಿಸಿಕೊಂಡಿದ್ದಾರೆ. ಹೀಗಾಗಿ ಮೊಹರಂ ಹಬ್ಬದಲ್ಲಿ ಮೊಹರಂ ಹೆಜ್ಜೆ ಕುಣಿತ, ಹುಲಿ ವೇಶ ಮಾಡಿಕೊಂಡು ಕುಣಿದು ಭಕ್ತಿಯಿಂದ ಹರಕೆಗಳನ್ನು ಸಲ್ಲಿಸುತ್ತಾರೆ.

೬.೨೦ ಪಂಡಿತ ಪುಟ್ಟರಾಜ ಗವಾಯಿಯವರು

೧೬-೧೭ನೇ ಶತಮಾನದಲ್ಲಿ ಕುಮಾರವ್ಯಾಸ ಮತ್ತು ಇತ್ತೀಚಿನ ದಿನಗಳಲ್ಲಿ ಪಂಡಿತ್ ಪುಟ್ಟರಾಜ ಗವಾಯಿ ನೆಲೆಸಿದ ಸ್ಥಳವೆಂದು ಗದಗನ್ನು ಗುರ್ತಿಸಲಾಗುತ್ತದೆ. ಪಂಡಿತ್ ಪುಟ್ಟರಾಜ ಗವಾಯಿ ಮಾನವ ಧರ್ಮವನ್ನು ಎತ್ತಿ ಹಿಡಿದವರು. ಅನೇಕ ಧಾರ್ಮಿಕ, ಮಾನವಿಕ ಕಾರ್ಯಗಳನ್ನು ತಮ್ಮ ನಿಷ್ಪಕ್ಷಪಾತವಾಗಿ ಮಾಡಿದ್ದಾರೆ. ಇವರ ಅಂಧ ಮತ್ತು ಅನಾಥ ಮಕ್ಕಳಿಗಾಗಿ ಮಾಡಿದ ಸಾಮಾಜಿಕ ಸೇವೆ ಅಭೂತಪೂರ್ವವಾದುದು. ಗವಾಯಿಗಳ ಆಶ್ರಮದಲ್ಲಿ ಸಂಗೀತ, ಕಲೆ, ಶಿಕ್ಷಣ ಮುಂತಾದವನ್ನು ಪಡೆದುಕೊಂಡಿದ್ದಾರೆ. ಇವರಿಂದ ಶಿಕ್ಷಣ ಪಡೆದ ಬಹಳಷ್ಟು ಛಲವಾದಿ ಜನ ಸಂಗೀತ ಕ್ಷೇತ್ರದಲ್ಲಿ

ನಾಡಿನಾದ್ಯಂತ ಹೆಸರು ಗಳಿಸಿದ್ದಾರೆ. ಉದಾಹರಣೆಗೆ ಕುರ್ತಕೋಟಿಯ ಗ್ರಾಮದ ವೀರುಪಾಕ್ಷ ಗೂರನವರ, ನೀಲಗುಂದದ ಜಕ್ಕಮ್ಮನವರ ಮುಂತಾದವರು.

೬.೨೧ ಸರ್ವಧರ್ಮ ಸಮನ್ವಯದ ಶ್ರೀ ತೋಂಟದಾರ್ಯ ಮಠ

ಈ ಮಠ ಸರ್ವಧರ್ಮ ಸಮನ್ವಯಕ್ಕೆ ಹೆಸರಾದ ಮತ್ತೊಂದು ಕ್ಷೇತ್ರವಾಗಿದೆ. ಇಲ್ಲಿಯ ತೋಂಟದ ಡಾ॥ ಸಿದ್ಧಲಿಂಗ ಸ್ವಾಮಿಗಳು ದಲಿತ ದಲಿತೇತರ ಸಮುದಾಯಗಳಿಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡುತ್ತ ಬಂದಿದ್ದಾರೆ. ಶಿಕ್ಷಣ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅಪಾರವಾದುದು. ತಮ್ಮ ಮಠದ ಸ್ವಂತ ಖರ್ಚಿನಲ್ಲಿ ಉಪಯುಕ್ತ ಲೇಖಕರಿಂದ ಉಪಯುಕ್ತ ಪುಸ್ತಕಗಳನ್ನು ಮುದ್ರಿಸಿ ಸಮಾಜಕ್ಕೆ ತಲುಪಿಸಿದ್ದಾರೆ. ಪುಸ್ತಕದ ಮಠವೆಂದರೆ ಜಗದ್ಗುರು ತೋಂಟದಾರ್ಯ ಮಠವೆಂದೇ ಪ್ರಸಿದ್ಧಿಯಾಗಿದೆ. ಡಾ. ಬಿ. ಆರ್. ಅಂಬೇಡ್ಕರ ಮಹಾಪುರಾಣದಂಥ ಐತಿಹಾಸಿಕ ಗ್ರಂಥವನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಗ್ರಾಮೀಣ ಜನರಿಗೆ ತಿಳಿಯುವಂತೆ ಸರಳವಾದ ಮಾತುಗಳಲ್ಲಿ ಅಂಬೇಡ್ಕರ್ ಬಗ್ಗೆ ತಿಳಿಸಿದ್ದಾರೆ. ರಾಮಣ್ಣ ಬ್ಯಾಟಿಯವರಿಗೆ ಮಾರ್ಗದರ್ಶನ ನೀಡಿ ಒಳ್ಳೆಯ ಗ್ರಂಥ ಹೊರತಂದಿದ್ದಾರೆ. ಇವರಿಂದ ಶ್ರಾವಣ ತಿಂಗಳಲ್ಲಿ ಪ್ರತಿ ನಿತ್ಯವು ಅಂಬೇಡ್ಕರ ಪುರಾಣ ನಡೆಸಿರುವದು ಈ ಕೀರ್ತಿಯು ಈ ಮಠಕ್ಕೆ ಸಲ್ಲುತ್ತದೆ. ಶಿಕ್ಷಣ, ಉದ್ಯೋಗ, ಸಾಹಿತ್ಯ, ಧರ್ಮ, ನೆಲ, ಜಲ, ಭಾಷೆ, ಸಂಸ್ಕೃತಿ, ಜಾನಪದ ಹೀಗೆ ಕನ್ನಡಕ್ಕೆ ಸಂಬಂಧಿಸಿದ ವಿಷಯದಲ್ಲಿ ತಾರ್ಕಿಕವಾಗಿ ಮಾತನಾಡುತ್ತಾರೆ. ಹಿಂದೂ ಸಮಾಜದ ಜಾತಿ ಭೇದ ವ್ಯವಸ್ಥೆಗೆ ಬೇಸತ್ತ ಸಮುದಾಯ ಬೌದ್ಧ ಧರ್ಮದತ್ತ ವಾಲುತ್ತಿದೆ. ಅಂಬೇಡ್ಕರರನ್ನು ಅವರ ಜೀವನ ತತ್ವಗಳನ್ನು ಅನುಸರಿಸುತ್ತಿರುವ ಸಮುದಾಯ ಸ್ವಪ್ರಜ್ಞೆಯಿಂದ ಹಿಂದೂ ಧರ್ಮವನ್ನು ಬಿಟ್ಟು ಬೌದ್ಧ ಮತ್ತು ಕ್ರೈಸ್ತ ಧರ್ಮ ಅನುಸರಿಸುತ್ತಿದೆ. ಅನಾದಿಕಾಲದಿಂದಲೂ ಹಿಂದೂ ಧರ್ಮದ ಸಮಾಜದಲ್ಲಿ ಅವರಿಗೆ ಗೌರವ ಸ್ಥಾನವಿಲ್ಲದಿರುವುದು, ಮೇಲ್ವರ್ಗಗಳ ನಿರಂತರ ಶೋಷಣೆ ಇದಕ್ಕೆ ಕಾರಣವಾಗಿದೆ. ಮುಂದಿನ ನವಪೀಳಿಗೆ ಜಾತಿ ನಿಂದನೆ ಮತ್ತು ತಾರತಮ್ಯ ಪರಂಪರೆ ಮುಂತಾದ ಅನಿಷ್ಟಗಳಿಂದ ಮುಕ್ತಿ ಪಡೆಯಬೇಕೆಂದು ಸತತ ಪ್ರಯತ್ನ ಮಾಡುತ್ತಿದೆ. ಅನಾದಿಕಾಲದಿಂದ ತುಳಿತಕ್ಕೆ ಒಳಗಾದ ಸಮುದಾಯಗಳೆಲ್ಲ ಬದಲಾವಣೆಗೆ ಹಂಬಲಿಸುತ್ತಿವೆ. ಇಂದು ಪ್ರಚಲಿತದಲ್ಲಿರುವ ಶಿಕ್ಷಣ, ಉದ್ಯೋಗ ಅನುಸರಿಸಿ ತಮ್ಮ ಮೂಲ ಜೀವನ ಕ್ರಮವನ್ನು ಬದಲಾಯಿಸಿಕೊಂಡಿವೆ. ಅತ್ಯುನ್ನತ ಶಿಕ್ಷಣ ಪಡೆದು ಧಾರ್ಮಿಕತೆಗೆ ಒಳಗಾಗದೆ ತಮ್ಮ ಸ್ವಂತ ಪರಿಜ್ಞಾನದಿಂದ ಸಮಾಜದಲ್ಲಿ ಗೌರವ ಸ್ಥಾನಮಾನ ದೊರಕುವ ಆಚರಣೆಗಳನ್ನೆ ಅನುಸರಿಸುತ್ತಿರುವುದು ಕಂಡು ಬರುತ್ತದೆ. ಮಾನವ ಮೊದಲು ಶಿಕ್ಷಣ ಪಡೆಯಬೇಕು ಇಲ್ಲದಿದ್ದಲ್ಲಿ ತಾನು ನಿಂತ ನೆಲೆಯಿಂದ ಮುಂದುವರಿಯಲು ಸಾಧ್ಯವಿಲ್ಲವೆಂದು ಅಂಬೇಡ್ಕರ್ ಹೇಳುತ್ತಾರೆ.

ಛಲವಾದಿ ಸಮುದಾಯದ ಧಾರ್ಮಿಕ ನಂಬಿಕೆಗಳು, ಆಚರಣೆಗಳು ಪ್ರಸ್ತುತ ದಿನಗಳಲ್ಲಿ ಬದಲಾವಣೆಗೆ ಒಳಗಾಗಿವೆ. ಕೇವಲ ಧಾರ್ಮಿಕ ರಂಗದಲ್ಲಿ ಅಷ್ಟೇ ಅಲ್ಲದೆ ಸಾಮಾಜಿಕ, ಆರ್ಥಿಕ, ರಾಜಕೀಯ ಹಂತಗಳಲ್ಲೂ ಬದಲಾವಣೆಯ ಗಾಳಿ ಬೀಸತೊಡಗಿದೆ.

೬.೨೨ ಮೆಣಸಗಿಯ ಶ್ರೀ ಲಿಂಗಬಸವದೇವರ ಮಠ

ಲಿಂಗಬಸವ ದೇವರ ಜಾತ್ರೆ ಪ್ರತಿವರ್ಷ ಶ್ರಾವಣ ಮಾಸದಲ್ಲಿ ನಡೆಯುತ್ತದೆ. ಈ ಜಾತ್ರೆಯಲ್ಲಿ ಗ್ರಾಮದ ಎಲ್ಲಾ ಜಾತಿಯವರು ಪಾಲ್ಗೊಳ್ಳುತ್ತಾರೆ. ಜಿಲ್ಲೆಯ ಛಲವಾದಿ ಸಮುದಾಯ ಜನ ಪ್ರತಿವರ್ಷ ತಪ್ಪದೇ ಜಾತ್ರೆಗೆ ಬಂದು ಹರಕೆ ಸಲ್ಲಿಸುತ್ತಾರೆ. ಪರ ಗ್ರಾಮದ ಛಲವಾದಿ ಜನರಿಂದ ಹಣ, ದವಸ-ಧಾನ್ಯಗಳನ್ನು ಜಾತ್ರೆಯ ಪಟ್ಟಿಯನ್ನು ಶ್ರೀ ಮಠದ ಗುರುಗಳಾದ ಶ್ರೀ ಮುದಿಯಪ್ಪಜ್ಜನವರು ಪಡೆದು ಜಾತ್ರೆ ಮಾಡುತ್ತಾರೆ. ಇದುವರೆಗೂ ಛಲವಾದಿಯವರನ್ನು ಯಾವ ಮಠವೂ ಭಕ್ತಾದಿಯೆಂದು ಗೌರವಿಸಿಲ್ಲ. ಇಂದಿನ ದಿನಗಳಲ್ಲಿ ಹೆಚ್ಚಿನ ಮಠಗಳು ಅಸ್ಪೃಶ್ಯರನ್ನು ಮಠ ಪ್ರವೇಶಿಸುವ ಅವಕಾಶವನ್ನೆ ಮಾಡಿಕೊಟ್ಟಿಲ್ಲ. ಆದರೆ ಈ ಮಠ ಛಲವಾದಿ ಜನರನ್ನು ಭಕ್ತರನ್ನಾಗಿ ಸ್ವೀಕರಿಸಿದೆ. ಛಲವಾದಿ ಸಮುದಾಯದ ಅನುಯಾಯಿಗಳನ್ನು ಮಾಡಿಕೊಂಡು ಧಾರ್ಮಿಕ ಸಮಾನತೆ ಕಲ್ಪಿಸಿದೆ.

ಈ ಮಠಕ್ಕೆ ಛಲವಾದಿ ಸಮುದಾಯದವರು ಶ್ರದ್ಧೆ, ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ವಿವಿಧ ರೀತಿಯ ಹರಕೆಗಳಾದ ದೀಡ ನಮಸ್ಕಾರ (ದಂಡ ನಮಸ್ಕಾರ)ವನ್ನು ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ನದಿಯಿಂದ ಶ್ರೀ ಮಠದವರೆಗೆ ಹಾಕುತ್ತಾರೆ. ಈ ಮಠದ ಸ್ವಾಮಿಯ ತಪಸ್ಸು ಮುಗಿದಾಗ ಛಲವಾದಿ ಸಮುದಾಯದ ವ್ಯಕ್ತಿಯೊಬ್ಬ ಪ್ರಥಮವಾಗಿ ಭೇಟಿಯಾದನಾದ್ದರಿಂದ ಛಲವಾದಿಯನ್ನೆ ಭಕ್ತನಾಗಿ ಸ್ವೀಕರಿಸಲಾಯಿತು ಎಂದು ಹೇಳಲಾಗುತ್ತದೆ. ಹೀಗೆ ಛಲವಾದಿ ಸಮುದಾಯಕ್ಕೂ ಈ ಮಠಕ್ಕೂ ಹಿಂದಿನಿಂದಲೂ ಸಂಬಂಧವಿದ್ದು ಸಮುದಾಯದ ಜನರ ಮೇಲೆ ಪ್ರಭಾವ ಬೀರಿದೆ.

ಛಲವಾದಿ ಸಮುದಾಯದ ಜನರು ಜಾತ್ರೆಯಲ್ಲಿ ಸ್ವಚ್ಛತೆಯ ಕೆಲಸ ಮಾಡುತ್ತಾರೆ. ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಛಲವಾದಿ ಯುವಕರು ಭಾಗವಹಿಸಿ ಬಹುಮಾನ ಪಡೆಯುತ್ತಾರೆ. ಸಾಮೂಹಿಕ ವಿವಾಹ ಸಮಾರಂಭ ನಡೆಯುತ್ತದೆ. ಪ್ರತಿದಿನ ರಾತ್ರಿ ಗೀಗೀ ಪದ, ಭಜನೆ, ನಾಟಕ ಹಾಗೂ ಮನರಂಜನೆ ಕಾರ್ಯಕ್ರಮಗಳು ಜರುಗುತ್ತವೆ. ಸತತವಾಗಿ ಮೂರು ದಿವಸಗಳವರೆಗೆ ಛಲವಾದಿ ಸಮುದಾಯದವರಿಗೆ ಊಟದ ವ್ಯವಸ್ಥೆ ಇರುತ್ತದೆ. ಶ್ರೀಮಠದ ಜಾತ್ರೆಯಲ್ಲಿ ನೇರೆಯ ಜಿಲ್ಲೆಗಳಿಂದ ಅಲ್ಲದೆ ಜಿಲ್ಲಾ ಎಲ್ಲಾ ಛಲವಾದಿ ಜನರು ಪಾಲ್ಗೋಳ್ಳುತ್ತಾರೆ. ಮೆಣಸಗಿ, ಬೆಳವಣಿಕೆ, ದಾಟನಾಳ, ಶಲವಡಿ, ಲಿಂಗದಾಳ, ನಾವಳ್ಳಿ, ಬನ್ನೂರ, ಗುಡಿಸಾಗರ, ನಾಗನೂರ, ಸೊಟಕನಾಳ, ಹಾಳುಕುಸುಗಲ್ಲ, ಹೆಬ್ಬಾಳ, ತಿರ್ಲಾಪೂರ, ಕಾಲವಾಡ, ಶಿರಕೋಳ, ಪಡೆಸೂರ, ಯಮನೂರು, ಅಳಗವಾಡಿ ರಾಯರ ಹೆಬ್ಬಳ್ಳಿ, ಕಿತ್ತಲಿ, ಸುಳ್ಯ, ಬದಾಮಿ, ಕೆರೂರ, ಬಾಗಲಕೋಟಿ, ಪಟ್ಟದಕಲ್ಲ, ಬನ್ನಿಕೊಪ್ಪ, ಪೇಠಾಆಲೂರ, ಹದ್ಲಿ, ಯಾ.ಸ.ಹಡಗಲಿ, ಯಾವಗಲ್ಲ, ಕೌಜಗೇರಿ, ಅಸೂಟಿ, ಕರಿಮುಡಿ, ಹೊಳೆಆಲೂರ, ಕೊಣ್ಣೂರ, ರೋಣ, ಅರಹುಣಸಿ, ಹಿರೇಮಣ್ಣೂರ, ಹುಲ್ಲೂರ, ಮುದೇನಗುಡಿ, ಹೊಳೆಹಡಗಲಿ, ಡಂಬಳ, ಸಂಗಳ ಬೆನಕೊಪ್ಪ ಡೋಣಿ, ಹುಣಸಿಕಟ್ಟಿ, ಬಳಗಾನೂರ, ಹೊಂಬಳ, ಉಣಕಲ್ಲ, ಹುಬ್ಬಳ್ಳಿ, ಹಳ್ಳೂರ, ಸೂಡಿ, ಸವದತ್ತಿ, ಬನಹಟ್ಟಿ, ನಿಲಗುಂದ, ಹೊಸಳ್ಳಿ, ಮುಳಗುಂದ. ಯರಗೊಪ್ಪ, ಕುಂದಗೋಳ. ಹೊಳೆಮಣ್ಣೂರ. ಬೆನಹಾಳ. ಸಂದಿಗವಾಡಿ.

ಮದಗಣೂಕಿ, ರಡ್ಡೇರನಾಗನೂರು, ಬೆಳವಟಗಿ, ಗಾಡಗೋಳಿ, ಮೊರಬ, ಶಿರೂರ, ಕೊಂಡಿಕೊಪ್ಪ, ಹಾರೋ ಬೆಳವಟಗಿ, ಕೊಡಿಕೊಪ್ಪ, ಅಣ್ಣಿಗೇರಿ, ಇನಾಮಹೊಂಗಲ, ಚಿಮ್ಮಡ, ಜಕ್ಕಲಿ, ನರಗುಂದ, ಅಡ್ನೂರ, ಗದಗ, ಹೊಂಬಳವಾಡಿ, ಅಮೀನಗಡ ಮುಂತಾದ ಗ್ರಾಮದ ಛಲವಾದಿ ಜನ ಪಾಲ್ಗೊಳ್ಳುತ್ತಾರೆ. ಮೆರವಣಿಗೆಯಲ್ಲಿ ಕರಡಿ ಮಜಲು, ಭಜನ, ಕೋಲಾಟ, ಬ್ಯಾಂಜೋಮೇಳ ಮತ್ತು ಕುದುರೆ ಕುಣಿತ ಮುಂತಾದ ಕಲಾ ಪ್ರದರ್ಶನವನ್ನು ನೀಡಿ ಸೇವೆ ಸಲ್ಲಿಸುತ್ತಾರೆ.

ಪ್ರತಿವರ್ಷವೂ ಈ ಸಮುದಾಯು ಬುದ್ಧ, ಬಸವ, ಅಂಬೇಡ್ಕರ ಜಯಂತಿಗಳನ್ನೂ ಬುದ್ಧಪೂರ್ಣಿಮೆ, ಕೋರೆಗಾಂವ ವೀರ ಯೋಧರ ವಿಜಯೋತ್ಸವ, ಅಂಬೇಡ್ಕರ ಮಹಾಪರಿನಿರ್ವಾಣ ದಿನಾಚರಣೆಗಳನ್ನೂ ಹಿರಿಯರ ಹಾಗೂ ಯುವನಾಯಕರ ನೇತೃತ್ವದಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ.

೬.೨೩ ಬುದ್ಧ, ಬಸವ, ಅಂಬೇಡ್ಕರ ಜಯಂತಿ

ದಿನಾಂಕ ೧೪ನೇ ಏಪ್ರಿಲ್ ದಿನದಂದು ಛಲವಾದಿ ಸಮುದಾಯದ ಜನರು ಪ್ರತಿವರ್ಷ ಡಾ. ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸುತ್ತಾರೆ. ಕಾರ್ಮೋಡ ಕತ್ತಲೆಯಲ್ಲಿ ಜೀವನ ಕಳೆಯುತ್ತಿರುವ ಜನಕ್ಕೆ ಬೆಳದಿಂಗಳದ ಬೆಳಕಾಗಿ ಬಂದವರು ಡಾ. ಬಿ. ಆರ್ ಅಂಬೇಡ್ಕರ್ ಅವರು. ಇಂದಿನ ದಿವಸ ಈ ದೇಶದ ಶೋಷಿತ ಸಮುದಾಯಕ್ಕೆ ಸಂತೋಷದ ದಿನವಾಗಿದೆ. ಈ ಶುಭದಿನದಂದು ಜಿಲ್ಲೆ, ತಾಲೂಕು ಹಾಗೂ ಗ್ರಾಮಗಳಲ್ಲಿ ಜಯಂತಿಯನ್ನು ಆಚರಿಸುವುದು ಕಂಡುಬರುತ್ತದೆ. ಕೆಲವು ಗ್ರಾಮಗಳಲ್ಲಿ ೧೪ನೇ ಏಪ್ರಿಲ್ ತಿಂಗಳಿನಿಂದ ಪ್ರಾರಂಭವಾಗಿ ಬುದ್ಧಪೂರ್ಣಿಮೆವರೆಗೂ ಜಯಂತಿಯನ್ನು ಆಚರಿಸುತ್ತಾರೆ. ಡಾ. ಅಂಬೇಡ್ಕರರ ಬಗ್ಗೆ ಹೆಚ್ಚಾಗಿ ಓದಿಕೊಂಡವರನ್ನು ಮುಖ್ಯ ಅತಿಥಿಗಳನ್ನಾಗಿ ಕರೆಸಿಕೊಂಡು ಅವರ ಜೀವನ ಚರಿತ್ರೆ ಹಾಗೂ ಅವರ ವಿಚಾರ ಧಾರೆಗಳನ್ನು ಕುರಿತು ಉಪನ್ಯಾಸ ಕಾರ್ಯಕ್ರಮಗಳು ಜರುಗುತ್ತವೆ. ಈ ಜಯಂತಿಯ ಮುಕ್ತಾಯ ಕಾರ್ಯಕ್ರಮದ ನಂತರ ಓಣಿಯ ಎಲ್ಲ ಕುಟುಂಬದವರು ಕೂಡಿ ಪಂಕ್ತಿಭೋಜನ ಮಾಡುತ್ತಾರೆ. ಇನ್ನೂ ಕೆಲವು ಗ್ರಾಮಗಳಲ್ಲಿ ಡಾ. ಅಂಬೇಡ್ಕರ್ ಅವರ ಬಗೆಗೆ ತಿಳುವಳಿಕೆ ಇಲ್ಲದ ಕಾರಣ ಯಾವುದೇ ಜಯಂತಿಯನ್ನು ಆಚರಿಸುವುದು ಕಂಡುಬರುವುದಿಲ್ಲ.

೬.೨೪ ಬುದ್ಧ ಪೂರ್ಣಿಮಾ

ಕ್ರಿ. ಶ. ಪೂರ್ವ ೫೬೩ ರಲ್ಲಿ ವೈಶಾಖ ಹುಣ್ಣಿಮೆಯ ದಿವಸ ರಾಜ್ಯಸಿದ್ಧೋಧನ ಮತ್ತು ಮಹಾರಾಣಿ ಮಹಾಮಾಯಾ ಇವರ ಗರ್ಭದಿಂದ ಲುಂಬಣಿಯ ವನದಲ್ಲಿ ಸಿದ್ದಾರ್ಥ ಗೌತಮರು ಜನಿಸಿದರು. ಮಹಾಮಾನವತಾವಾದಿ ಮಹಾತ್ಮಾ ಗೌತಮ ಬುದ್ಧರು 'ಆಸೆಯೆ ದುಃಖಕ್ಕೆ ಕಾರಣ' ಎಂದು ಸಾರಿ ಹೇಳಿದರು. ಈ ದೇಶದ ಕಟ್ಟಕಡೆಯ ಸಮುದಾಯವನ್ನು ಮೊದಲು ಅಪ್ಪಿಕೊಂಡು ಅವರಿಗೆ ಸಾಮಾಜಿಕ, ಸಾಂಸ್ಕೃತಿಕ ತಿಳುವಳಿಕೆಯನ್ನು ಕೊಟ್ಟರು. ಇಂಥ ಮಹಾನ್ ಬೋಧಿಸತ್ವ ಗೌತಮ ಬುದ್ಧರ ಜನ್ಮ ದಿನಾಚರಣೆ ಪ್ರತಿ ವರ್ಷವೂ ಛಲವಾದಿ ಸಮುದಾಯದವರು ಆಚರಿಸುತ್ತಾರೆ. ಬುದ್ಧ ಪೂರ್ಣಿಮಾದಂದು ಅನೇಕ ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಶಾಲಾ ಕಾಲೇಜು ಮಕ್ಕಳಿಗೆ ಬುದ್ಧನ ವಿಚಾರಗಳನ್ನು ತಿಳಿಸಿಕೊಡುವಂತಹ ಕಾರ್ಯಕ್ರಮವನ್ನು ಕೂಡಾ ಮಾಡುತ್ತಾರೆ. ಇವರ ಜನ್ಮ ದಿನಾಚರಣೆಯನ್ನು ನೀಲಗುಂದ ಗ್ರಾಮದಲ್ಲಿ ಪ್ರತಿವರ್ಷ ಆಚರಿಸುವುದು ಕಂಡುಬರುತ್ತದೆ. ಕೆಲವರು ತಮ್ಮ ಮನೆಗಳಲ್ಲಿಯೇ ಬುದ್ಧ ಪೂರ್ಣಿಮಾ ಆಚರಿಸುತ್ತಾರೆ. ಕೆಲವರು ದಕ್ಷಿಣ ಭಾರತದಲ್ಲೇ ದೊಡ್ಡದಾದ ಗುಲ್ಬರ್ಗಾದ ಬುದ್ಧವಿಹಾರಕ್ಕೆ ಹೋಗಿ ಬುದ್ಧ ಪೂರ್ಣಿಮೆ ಆಚರಿಸಿಕೊಂಡು ಬರುತ್ತಾರೆ.

೬.೨೫ ಕೋರೆಗಾಂವ ವೀರಯೋಧರ ವಿಜಯೋತ್ಸವ

ಛಲವಾದಿ ಸಮುದಾಯದವರು ಆಚರಿಸುವ ದಿನವೆಂದರೆ ಮಹಾರ್ ವೀರಯೋಧರ ವಿಜಯೋತ್ಸವ ದಿನವಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರತಿ ವರ್ಷ ಜನೇವರಿ ೧ನೇ ದಿನಾಂಕದಂದು ಕೋರೆಗಾಂವ್ ಗ್ರಾಮಕ್ಕೆ ಹೋಗಿ ಮಹಾರ್ ವೀರ ಯೋಧರ ಸ್ತಂಭಕ್ಕೆ ತಮ್ಮ ನಮನಗಳನ್ನು ಸಲ್ಲಿಸುತ್ತಿದ್ದರು. ಈ ದಿನದಂದು ಛಲವಾದಿ ಜನರೆಲ್ಲರೂ ವೀರ ಯೋಧರು ವಿಜಯ ಹೊಂದಿದ್ದಕ್ಕಾಗಿ ಅವರನ್ನು ಸ್ಮರಿಸಿಕೊಂಡು ವಿಶೇಷವಾದ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಈ ದೇಶದಲ್ಲಿ ಛಲವಾದಿ ಸಮುದಾಯದ ಜನ ಸತ್ಯ, ನ್ಯಾಯ, ನಿಷ್ಠೆ, ಧರ್ಮ ಹಾಗೂ ಧೈರ್ಯವಂತರು ಎಂಬುದನ್ನು ಸಾದರಪಡಿಸಿದಂತಹ ದಿನವಾಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ.

ಮಹಾರಾಷ್ಟ್ರ ರಾಜ್ಯದ ಕರ್ನಾಟಕದ ನೆರೆಯ ಜಿಲ್ಲೆಗಳಲ್ಲಿ ಈ ದಿನಾಚರಣೆಯು ಕಂಡುಬರುತ್ತದೆ. ಪ್ರತಿವರ್ಷವೂ ಜಿಲ್ಲೆಯ ಕೆಲವು ಜನರು ಕೋರೆಗಾಂವಕ್ಕೆ ಹೋಗಿ ವೀರಯೋಧರಿಗೆ ನಮನಗಳನ್ನು ಸಲ್ಲಿಸಿ ಬರುತ್ತಾರೆ. ಈ ದಿನದಂದು ಕೆಲವು ನಾಯಕರು ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ ಹೋಗಿ ವಿದ್ಯಾರ್ಥಿಗಳಿಗೆ ಪುಸ್ತಕ, ಪೆನ್ನು, ನೋಟ್‌ಬುಕ್ಕು ಕೊಟ್ಟು ಸಿಹಿಯನ್ನು ಹಂಚಿ ಬರುತ್ತಾರೆ.

೬.೨೬ ಅಂಬೇಡ್ಕರ ಮಹಾಪರಿನಿರ್ವಾಣ ದಿನಾಚರಣೆ

ಪ್ರತಿವರ್ಷವೂ ದಿನಾಂಕ ಡಿಸೆಂಬರ್ ೬ರಂದು ಛಲವಾದಿ ಜನರು ಈ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಕೇವಲ ಛಲವಾದಿ ಸಮುದಾಯ ಮಾತ್ರವಲ್ಲ ದೇಶದ ಎಲ್ಲ ಶೋಷಿತ ಸಮುದಾಯಗಳು ಕೂಡಾ ಈ ದಿನಾಚರಣೆ ಆಚರಿಸುತ್ತಾರೆ. ಸ್ವತಂತ್ರ ಭಾರತದಲ್ಲಿಯ ಶೋಷಿತ ಜನಸಮುದಾಯಗಳಿಗೆ ಮೂಲಭೂತ ಹಕ್ಕುಗಳನ್ನು ಕೊಟ್ಟು ಅವರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಸಮಾನತೆ ಮುಂತಾದವುಗಳನ್ನು ಒದಗಿಸಿಕೊಟ್ಟ ಮಹಾನ್ ಧೀಮಂತ ನಾಯಕರು ಡಾ. ಬಿ. ಆರ್. ಅಂಬೇಡ್ಕರ್ ಅವರು. ಹೀಗಾಗಿ ಅವರು ಈ ದೇಶದ ದಲಿತರ ಏಳಿಗೆಗಾಗಿ ಅವರು ಬಿಟ್ಟು ಹೋಗಿರುವಂತಹ ವಿಚಾರಧಾರೆಗಳನ್ನು ಪಾಲಿಸುವಂತಹ ದಿನವಾಗಿರುತ್ತದೆ. ಸಮುದಾಯದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಅವರು ಹೇಳಿರುವಂತಹ

ತ್ರಿಸೂತ್ರಗಳಾದ ಶಿಕ್ಷಣ! ಸಂಘಟನೆ!! ಹೋರಾಟ!!!ವನ್ನು ಯುವಜನಾಂಗಗಳಿಗೆ ತಿಳಿಸಿಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದಾರೆ.

ಕೆಲವರು ಪ್ರತಿವರ್ಷ ತಪ್ಪದೆ ಮುಂಬಯಿಯ ಚೈತ್ಯ ಭೂಮಿಗೆ ಹೋಗಿ ಡಾ. ಅಂಬೇಡ್ಕರ್ ಅವರಿಗೆ ಜೈಭೀಮ ಪ್ರಣಾಮಗಳನ್ನು ಸಲ್ಲಿಸಿ ಬರುತ್ತಾರೆ.

೬.೨೭ ಬುದ್ಧ ವಂದನೆ ಕಾರ್ಯಕ್ರಮ

ಪ್ರತಿ ತಿಂಗಳು ಪೂರ್ಣಿಮ ದಿನದಂದು ಬುದ್ಧವಂದನೆ ಕಾರ್ಯಕ್ರಮಗಳನ್ನು ಈ ಸಮುದಾಯದವರು ಜಿಲ್ಲೆಯಲ್ಲಿ ನಡೆಸಿಕೊಂಡು ಬಂದಿದ್ದಾರೆ. ಈ ಕಾರ್ಯಕ್ರಮವನ್ನು ನಡೆಸುವ ಉದ್ದೇಶವೆಂದರೆ ಮಹಾನ್ ಮಾನವತಾವಾದಿಗಳಾದ ಬುದ್ಧನ ವಿಚಾರಗಳನ್ನು ತಿಳಿದುಕೊಳ್ಳುವುದು. ಈ ಸಮುದಾಯವು ಕೇವಲ ಜಯಂತಿ ಹಾಗೂ ಮಹಾಪರಿನಿರ್ವಾಣ ಕಾರ್ಯಕ್ರಮಗಳ ಹೊರತಾಗಿ ಯಾವ ಕಾರ್ಯಕ್ರಮಗಳನ್ನೂ ಮಾಡುತ್ತಿರಲಿಲ್ಲ. ಹೀಗಾಗಿ ಪ್ರತಿ ತಿಂಗಳಿಗೊಮ್ಮೆ ಪೂರ್ಣಿಮಾ ದಿವಸದಂದು ಛಲವಾದಿಯವರ ಕುಟುಂಬದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಅವರು ಪ್ರಸ್ತುತ ದಿನಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಅವುಗಳಿಗೆ ಪರಿಹಾರಗಳ ಬಗ್ಗೆ ಚರ್ಚಿಸುತ್ತಾರೆ. ಮಕ್ಕಳ ಶಿಕ್ಷಣ ಸಮಸ್ಯೆ, ಸಾಮಾಜಿಕ ಸಮಸ್ಯೆ, ಆರ್ಥಿಕ ಸಮಸ್ಯೆ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಈ ಕಾರ್ಯಕ್ರಮವನ್ನು ದಿನಾಂಕ ೨೭-೫-೨೦೧೦ ರಂದು ಎಸ್.ವಾಯ್. ಹೊನ್ನುಂಗರ ಅವರ ಮನೆಯಲ್ಲಿ, ದಿನಾಂಕ ೨೬-೬-೨೦೧೦ ರಲ್ಲಿ ಶ್ರೀ ನಾರಾಯಣಸ್ವಾಮಿ ಮನೆಯಲ್ಲಿ, ದಿನಾಂಕ ೨೬-೭-೨೦೧೦ ರಾಜೀವಗಾಂಧಿ ನಗರದಲ್ಲಿರುವ ಶ್ರೀ ಅಶೋಕ ಕಾಳೆಯವರ ಮನೆಯಲ್ಲಿ, ದಿನಾಂಕ ೨೪-೦೯-೨೦೧೦ ರಂದು ಗದಗ ತಾಲೂಕಿನ ಹುಯಿಲುಗೋಳ ಗ್ರಾಮದ ಶ್ರೀ ಸಣ್ಣಮಲಕಪ್ಪ ಎಸ್. ಕಾಳೆಯವರ ಮನೆಯಲ್ಲಿ ಬುದ್ಧ ವಂದನೆ ಕಾರ್ಯಕ್ರಮಗಳನ್ನು ಆಚರಿಸುತ್ತಾ ಬಂದಿದ್ದಾರೆ. ಇದರಿಂದ ಛಲವಾದಿ ಸಮುದಾಯದವರ ಒಬ್ಬರಿಗೊಬ್ಬರು ಪರಿಚಯವಾಗುತ್ತದಲ್ಲದೆ, ಪರಸ್ಪರ ಪ್ರೀತಿ ಸಹಕಾರ ಮನೋಭಾವನೆಗಳು ಮೂಡಿಬಂದು ಸಮುದಾಯದಲ್ಲಿ ಒಗ್ಗಟ್ಟು ಕಂಡುಬರುತ್ತದೆ ಎಂಬ ನಂಬಿಕೆಯಿಂದ ಈ ಕಾರ್ಯಕ್ರಮ ಮಾಡುತ್ತ ಬರುತ್ತಿದ್ದಾರೆ.

ಅಡಿಟಿಪ್ಪಣಿಗಳು :

೧) ಎಸ್. ಜಿ. ಚಿಕ್ಕನಗೌಡರ, ಸಮಾಜಶಾಸ್ತ್ರ, ಪುಟ-೨೫೯

೨) ಅದೇ, ಪು.೨೬೦

೩) ಡಾ. ಹನುಮಂತರಾವ್ ಬಿ. ದೊಡಮನಿ, ಚುಂಚೂರು ಮಾಪುರ ತಾಯಿ : ಒಂದು ಅಧ್ಯಯನ, ಪು.೧೦೮

೪) ಡಾ. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ-೧೨೦

೫) ಡಾ. ಕಮಲಾ ಹೆಮ್ಮಿಗೆ, ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿ : ಒಂದು ಸಾಂಸ್ಕೃತಿಕ ಅಧ್ಯಯನ, ಪು.೧೩

೬) ಅದೇ ಪು.೩೦

೭) ಡಾ. ಮಂಜುನಾಥ ಬೇವಿನಕಟ್ಟಿ, ಮೈಲಾರಲಿಂಗನ ಕಾವ್ಯ, ಪುಟ-೧೦, ೧೨.

೮) ಅದೇ ಪುಟ-೪೩೧.

೯) ಪುರುಷೋತ್ತಮ ಬಿಳಿಮಲೆ, ಹುಲಿಗೆಮ್ಮ, ಪುಟ-೬೬.

ಅಧ್ಯಾಯ – ೭

ಶಿಕ್ಷಣ ಮತ್ತು ರಾಜಕೀಯ ಜೀವನ

೭.೧ ಶಿಕ್ಷಣ

೭.೨ ರಾಜಕೀಯ ಜೀವನ

೭.೩ ಗ್ರಾಮ ಪಂಚಾಯ್ತಿ

೭.೪ ದಿ॥ ಶ್ರೀಮಾನ್ ರುದ್ರಪ್ಪ ಈರಪ್ಪ ದೊಡ್ಡಮನಿ

೭.೫ ಬಸವರಾಜ ಮುದಕಪ್ಪ ಕಡೇಮನಿ

೭.೬ ಜಿಲ್ಲೆಯ ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಯ ಸದಸ್ಯರು

ಅಧ್ಯಾಯ-೭

ಶಿಕ್ಷಣ ಮತ್ತು ರಾಜಕೀಯ ಜೀವನ

೭.೧ ಶಿಕ್ಷಣ

ಈ ದೇಶದಲ್ಲಿ ಪ್ರಾಚೀನ ಕಾಲದಿಂದ ಬ್ರಿಟಿಷರ ಆಗಮನವಾಗುವವರೆಗೆ ಶೂದ್ರರು ಮತ್ತು ಮಹಿಳೆಯರಿಗೆ ಶಿಕ್ಷಣವನ್ನು ಪಡೆಯುವದು ಸಾಧ್ಯವಾಗಿರಲಿಲ್ಲ. ಶಿಕ್ಷಣ ಕ್ಷೇತ್ರವು ಕೆಲವೇ ಕೆಲ ಜಾತಿಗಳಿಗೆ ಮೀಸಲಾಗಿತ್ತು. ಶಿಕ್ಷಣ ಪಡೆದು ಕೆಲವು ಜಾತಿಗಳು ಶಿಕ್ಷಣದ ಸ್ವಾಯತ್ತತೆ ಪಡೆದಿದ್ದವು. ಶತ-ಶತಮಾನಗಳ ಕಾಲದಿಂದಲೂ ಶಿಕ್ಷಣ ರಂಗದಿಂದ ದೂರ ಉಳಿದ ಈ ಸಮುದಾಯವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತು. ಇಂದು ಆಧುನಿಕ ಸಮಾಜದಲ್ಲಿ ಶಿಕ್ಷಣವು ಮೂಲಭೂತ ಬೇಡಿಕೆಗಳಲ್ಲಿ ಹೊಂದಾಗಿದೆ. ಸಮೂಹ ಜೀವನಕ್ಕೆ ತುಂಬಾ ಅವಶ್ಯಕತೆ ಇದೆ. ಹೆಚ್ಚು ಹೆಚ್ಚು ಉನ್ನತ ಶಿಕ್ಷಣವನ್ನು ಪಡೆದ ವ್ಯಕ್ತಿಯು ಸಮಾಜದಲ್ಲಿ ಉತ್ತಮವಾದ ಜೀವನವನ್ನು ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದ್ದಾನೆ. ಶಿಕ್ಷಣವು ವ್ಯಕ್ತಿಯ ಸ್ಥಾನ ಮಾನವನ್ನು ನಿರ್ಧರಿಸುವಲ್ಲಿ ಇಂದು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವ ವಿಕಾಸನಕ್ಕೆ ಎಷ್ಟು ಅವಶ್ಯವೊ, ಸಮುದಾಯದ ಪ್ರಗತಿಗೂ ಸಹ ಅಷ್ಟೇ ಅವಶ್ಯಕವಾಗಿದೆ. ವ್ಯಕ್ತಿಯು ಶಿಕ್ಷಣವನ್ನು ಪಡೆಯುತ್ತಾ ಹೋದಂತೆಲ್ಲ ಜ್ಞಾನವೃದ್ಧಿಯಾಗಿ ಗೊಡ್ಡು ಸಂಪ್ರದಾಯಗಳು ನಶಿಸುತ್ತವೆ. ಉತ್ತಮವಾದ ಸಂಸ್ಕೃತಿಯನ್ನು ಬೆಳೆದುಕೊಂಡು ಬರುವದಕ್ಕೆ ಸಹಕಾರಿಯಾಗುತ್ತದೆ.

ಭಾರತದಲ್ಲಿ ಪರಿಶಿಷ್ಠ ಜಾತಿ ಪರಿಶಿಷ್ಠ ಜನಾಂಗಗಳ ಶೈಕ್ಷಣಿಕ ಕಲ್ಯಾಣಕ್ಕಾಗಿ ಹತ್ತು ಹಲವಾರು ಸೌಲಭ್ಯಗಳನ್ನು ಹಾಗೂ ಯೋಜನೆಗಳು ಕಲ್ಪಿಸಲಾಗಿದೆ. ಆದರೂ ಈ ಸಮುದಾಯದ ಶೈಕ್ಷಣಿಕ ಪ್ರಗತಿ ನೀರಿಕ್ಷಿತ ಪ್ರಮಾಣದಲ್ಲಿ ತಲುಪಿಲ್ಲವೆಂದು ಹೇಳಬೇಕಾಗುತ್ತದೆ. ಸಮಾಜ ಸುಧಾರಕರ, ಚಿಂತಕರ ಹಾಗೂ ಸಂವಿಧಾನ ನಿರ್ಮಾಪಕರ ಅವಿರತ ಹೋರಾಟದ ಫಲದಿಂದ ಈ ಸಮುದಾಯಗಳಲ್ಲಿ ನಿಧಾನವಾಗಿ ಶೈಕ್ಷಣಿಕ ಶಿಕ್ಷಣದ ಕಡೆ ನಿಧಾನವಾಗಿ ಮುಖ ಮಾಡುತ್ತಿರುವದು ಕಂಡು ಬರುತ್ತದೆ.

ಆಧುನಿಕ ಯುಗದಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತವೆ. ಅದಕ್ಕಾಗಿ 'ಶಿಕ್ಷಣವೇ ಶಕ್ತಿ' ಎಂದು ಕರೆಯಲಾಗುತ್ತವೆ. ಶಿಕ್ಷಣವು ಸಮಾಜದಲ್ಲಿ ಅಭಿವೃದ್ಧಿಯನ್ನುಂಟು ಮಾಡುತ್ತದೆ. ಸಾಮಾಜಿಕ ಪರಿವರ್ತನೆಗೆ ಶಿಕ್ಷಣವು ಪ್ರಮುಖ ಅಸ್ತ್ರವಾಗಿದೆ ಶಿಕ್ಷಣದಿಂದಲೇ ವ್ಯಕ್ತಿ ಮತ್ತು ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗುತ್ತವೆ. ಶಿಕ್ಷಣವನ್ನು ಅಲಕ್ಷಿಸಿದ ಯಾವುದೇ ರಾಷ್ಟ್ರವು ಪ್ರಗತಿಯನ್ನು ಹೊಂದಲು ಯಾವುದೇ ಸಾಧ್ಯವಿಲ್ಲ. ಕುಟುಂಬದ ನಂತರ ಶಿಕ್ಷಣವು ವ್ಯಕ್ತಿಯ ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ವ್ಯಕ್ತಿಯಲ್ಲಿ ಉತ್ತಮವಾದ ಅಂಶಗಳನ್ನು ಬೆಳೆಸಿ ನಿಜಮಾನವನಾಗಿ ಬಾಳುವಲ್ಲಿ ಪ್ರೇರೇಪಿಸುತ್ತದೆ. ಮಾನವೀಯ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಅನುಕಂಪ, ದಯೆ, ಕರುಣೆ ಮುಂತಾದವುಗಳನ್ನು ಸಿದ್ಧಿಸುವಂತೆ ಮಾಡುತ್ತವೆ.

ಪ್ರತಿಯೊಬ್ಬರಿಗೂ ಇಂದು ಶಿಕ್ಷಣ ಅವಶ್ಯಕ. ತಲೆತಲಾಂತರದಿಂದ ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳು ಇಂದು ಶಿಕ್ಷಣ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಸರ್ಕಾರದ ಸಹಕಾರವೇ ಇದಕ್ಕೆ ಮೂಲಪ್ರೇರಣೆ. ಅರ್ಥದ ಅನ್ವೇಷಣೆಯೇ ಜ್ಞಾನದ ಮೂಲ. ಈ ಜ್ಞಾನವನ್ನು ಪಡೆಯುವ ವಿಧಾನವೇ ಶಿಕ್ಷಣ. ಆಧುನೀಕರಣ, ಜಾಗತೀಕರಣದ ಪರಿಸರದಲ್ಲಿ ಛಲವಾದಿ ಸಮುದಾಯದವರು ಹೊಸ ಬದುಕಿನತ್ತ ಸಾಗುತ್ತಿದ್ದಾರೆ. ಆದರೂ ಸಾಂಪ್ರದಾಯಿಕ ವೃತ್ತಿಯಲ್ಲಿ ತೊಡಗಿರುವ ಇವರು ತಮ್ಮ ಮಕ್ಕಳಿಗೆ ವೃತ್ತಿಯನ್ನು ಕಲಿಸಿಕೊಡುತ್ತಿಲ್ಲ. ಹಿಂದೆ ತಮ್ಮ ವೃತ್ತಿಯಲ್ಲಿ ಶ್ರಮವಹಿಸಿಯಾದರೂ ನೆಮ್ಮದಿಯಿಂದ ಬದುಕುತ್ತಿದ್ದರು. ಆದರೆ ಈಗ ಅಂಥ ಪರಿಸ್ಥಿತಿ ಉಳಿದಿಲ್ಲ. ಛಲವಾದಿ ಸಮುದಾಯದವರಲ್ಲಿ ಅನಕ್ಷರಸ್ಥರು, ಬಡವರು ಇದ್ದಾರೆ. ಶಿಕ್ಷಣದ ಬಗ್ಗೆ ಆಸಕ್ತಿ ಇಲ್ಲದಿರುವುದು ಬಹಳಷ್ಟು ಕಡೆ ಕಂಡುಬರುತ್ತದೆ. ಅದಕ್ಕೆ ನಗರದಲ್ಲಿ ವಾಸಿಸುವ ಛಲವಾದಿ ಸಮುದಾಯವೂ ಹೊರತಾಗಿಲ್ಲ.

"Education' being the key to all success in Life. Dr. Ambedkar attached great Importance to it and he always exharted his followers to give proper Education to their sons and daughters. He considered Education as the basic for a child future and opinioned that the parent could change the destiny of the children by getting them educated on proper cines."[1]

ಛಲವಾದಿ ಸಮುದಾಯದವರಿಗೆ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣದ ಮಹತ್ವ ಅರಿವಾಗುತ್ತಿದೆ. ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುವ ಪ್ರಮಾಣ ಅಧಿಕವಾಗುತ್ತಿದೆ. ಬಹುತೇಕ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವಲ್ಲಿ ಸಫಲರಾಗುತ್ತಿದ್ದಾರೆ. ಆದರೆ ಅವರಿಗೆ ಗುಣಮಟ್ಟದ ಶಿಕ್ಷಣ ಸಿಕ್ಕುತ್ತಿಲ್ಲವೆಂಬ ಅಂಶ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಇಂದಿನ ದಿನಗಳಲ್ಲಿ ಸರ್ಕಾರಿ ಶಾಲೆ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಮಧ್ಯೆ ಸ್ಪರ್ಧೆ ಏರ್ಪಟ್ಟಿದೆ. ಸರ್ಕಾರಿ ಶಾಲೆಗಳಲ್ಲಿ ಕೆಲವು ಶಿಕ್ಷಕರು ಉತ್ತಮ ಪಾಠ ಪ್ರವಚನ ಬೋಧನೆ ಮಾಡಿ ವಿದ್ಯಾರ್ಥಿಗಳನ್ನು ರಾಷ್ಟ್ರನಿರ್ಮಾಣದಲ್ಲಿ ಸತ್‌ಪ್ರಜೆಗಳನ್ನಾಗಿ ಮಾಡುತ್ತಿದ್ದಾರೆ. ಆದರೆ ಕೆಲವು ಶಿಕ್ಷಕರ ಸೋಮಾರಿತನದಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುತ್ತಿಲ್ಲ. ಶಾಲೆಯಲ್ಲಿ ಮಕ್ಕಳನ್ನು ದಂಡಿಸಿದರೆ ಪಾಲಕರ ವಿರೋಧ ಕಟ್ಟಿಕೊಳ್ಳಬೇಕಾದ ಆತಂಕ ಕೆಲ ಶಿಕ್ಷಕರಲ್ಲಿ ಕಾಣುತ್ತದೆ. ಶಿಕ್ಷಕರಿಗೆ ಇತ್ತೀಚಿಗೆ ಸಮೀಕ್ಷೆ ಕಾರ್ಯ, ಬಿಸಿಯೂಟ ಯೋಜನೆ ಮೊದಲಾದ ಹೆಚ್ಚುವರಿ ಕೆಲಸಗಳು ಶಿಕ್ಷಕರಿಗೆ ಹೊರೆಯಾಗುತ್ತಿವೆ. ಇನ್ನೂ ಅನೇಕ ಕಾರಣಗಳಿಂದ ಸರ್ಕಾರಿ ಶಾಲೆಗಳಲ್ಲಿ ಪರಿಣಾಮಕಾರಿಯಾದ ಶಿಕ್ಷಣ ದೊರೆಯುತ್ತಿಲ್ಲ. ಸ್ಥಿತಿವಂತ ಹಾಗೂ ಮೇಲ್ಜಾತಿ ಮಕ್ಕಳು ಖಾಸಗಿ ಶಾಲೆಯಲ್ಲಿ ಪಡೆಯುತ್ತಿರುವ ಶಿಕ್ಷಣ ಬಡ ಮತ್ತು ಕೆಳಜಾತಿ ಮಕ್ಕಳಿಗೆ ಸಿಗುತ್ತಿಲ್ಲ. ಖಾಸಗಿ ಶಾಲೆ ಸಂಸ್ಥೆಗಳಿಗೆ ಮಕ್ಕಳನ್ನು ಸೇರಿಸುವಂಥ ಉತ್ತಮ ಆರ್ಥಿಕ ಸ್ಥಿತಿ ಬಹುತೇಕ ಛಲವಾದಿಯವ ಜನರಿಗಿಲ್ಲ. ಛಲವಾದಿ ಕುಟುಂಬದ ಸುಮಾರು ಮಕ್ಕಳಿಗಂತೂ ಸರ್ಕಾರಿ ಶಾಲೆಗಳೇ ಆಸರೆ. ಖಾಸಗಿ ಸಂಸ್ಥೆಗಳಿಗೆ ಇಷ್ಟೊಂದು ಹಣ ಕೊಟ್ಟು ಹೋಗುವ ಸಾಮರ್ಥ್ಯ ಅವರಲ್ಲಿ ಇಲ್ಲ.

ಈ ಎಲ್ಲ ಕಾರಣಗಳಿಂದಾಗಿ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆದ ಮಕ್ಕಳೊಂದಿಗೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪೂರೈಸಿದ ಮಕ್ಕಳು ಸ್ಪರ್ಧೆ ಮಾಡಲು ಸಾಧ್ಯವಿಲ್ಲದ ಸ್ಥಿತಿ ಇಂದು ಇದೆ. ಈ ಮಕ್ಕಳಲ್ಲಿ ಬಹಳಷ್ಟು ಜನ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆದ ಛಲವಾದಿ ಸಮುದಾಯದ ಮಕ್ಕಳು ಮುಂದೆ ಶಾಲೆಯಿಂದ ಹೊರಗುಳಿಯುವ ಪರಿಸ್ಥಿತಿ ಕೂಡ ಇದೆ. ಇದರಲ್ಲಿ ಕೆಲವರು ಪ್ರೌಢ ಶಾಲೆ ಶಿಕ್ಷಣ, ಪದವಿಪೂರ್ವ, ಬೆರಳೆಣಿಕೆಯಷ್ಟು ಜನ ಪದವಿ ಶಿಕ್ಷಣ ಪಡೆದಿದ್ದಾರೆ. ಅದು ಆಧುನಿಕ ಜಗತ್ತಿನ ಅಗತ್ಯ ಪೂರೈಸುವ ಶಿಕ್ಷಣವಾಗಿರದೆ ಕೇವಲ ಅಕ್ಷರ ಜ್ಞಾನವಾಗಿ ಪರಿಣಮಿಸುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪ್ರಸ್ತುತ ಸಂದರ್ಭದಲ್ಲಿ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಇದೆ. ಕಂಪ್ಯೂಟರ್ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಮತ್ತು ವೃತ್ತಿಪರ ಶಿಕ್ಷಣ ಪಡೆದವರಿಗೆ ಈ ಸಂದರ್ಭದಲ್ಲಿ ಹೆಚ್ಚು ಅವಕಾಶಗಳು ದೊರಕಬಹುದಾಗಿದೆ. ಪ್ರಾಥಮಿಕ ಹಂತದಲ್ಲಿಯೆ ಪರಿಣಾಮಕಾರಿ ಶಿಕ್ಷಣ ದೊರೆಯದ ಛಲವಾದಿ ಸಮುದಾಯದ ಮಕ್ಕಳು ಆಧುನಿಕ ಜಗತ್ತಿನ ತೆಕ್ಕೆಗೆ ಸಿಲುಕುವುದು ತುಂಬಾ ಕಷ್ಟಕರವಾದ ಪರಿಸ್ಥಿತಿಯಿದೆ.

ಆಧುನಿಕತೆಯ ಭರಾಟೆಯಲ್ಲಿ ಗದಗ ಜಿಲ್ಲೆಯ ಛಲವಾದಿ ಸಮುದಾಯ ಪಡೆಯುತ್ತಿರುವ ಶಿಕ್ಷಣ ಮೌಲ್ಯಯುತವಾದುದಲ್ಲವೆಂಬ ಅಂಶ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಆಧುನಿಕ ಜಗತ್ತು ತೀವ್ರಗತಿಯಲ್ಲಿ ಮುಂದುವರಿಯುತ್ತಿದೆ. ಪ್ರತಿದಿನ ಶಿಕ್ಷಣ ಕ್ಷೇತ್ರದಲ್ಲಿ ಹೊಸತನ ಕಾಣಿಸಿಕೊಳ್ಳುತ್ತಿದೆ. ಇದರ ಬಗ್ಗೆ 'ಛಲವಾದಿ' ಸಮುದಾಯದ ಮಕ್ಕಳಿಗೆ ಅರಿವೂ ಕೂಡ ಇರುವುದಿಲ್ಲ. ಹೊಸ ಶಿಕ್ಷಣ ನೀತಿ ಸರ್ಕಾರ ಶಾಲೆಗಳಲ್ಲಿ ಅಳವಡಿಸಿಕೊಳ್ಳುವ ಹೊತ್ತಿಗೆ ಮುಂದುವರಿದ ಹೊಸ ಮಾದರಿ ಶಿಕ್ಷಣ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪರಿಚಯಗೊಳ್ಳುತ್ತವೆ. ಬದುಕಿನ ತೀವ್ರ ಬದಲಾವಣೆಯ ಗತಿಗೆ ತಕ್ಕಂತೆ ಸರಕಾರಿ ಶಿಕ್ಷಣ ಕ್ಷೇತ್ರವೂ ಬದಲಾಗಬೇಕಿದೆ.

ಇಂದಿನ ಅಗತ್ಯಕ್ಕೆ ಅನುಗುಣವಲ್ಲದ ಶಿಕ್ಷಣ ಪಡೆದುಕೊಳ್ಳುತ್ತಿರುವ ಛಲವಾದಿ ಸಮುದಾಯದ ಮಕ್ಕಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸ ಸಿಗದೆ ಸಾಂಪ್ರದಾಯಿಕ ವೃತ್ತಿ ಅನುಸರಿಸದೆ ನಗರದಲ್ಲಿ ಹೊರೆಯಾಗಿರುವ ಅನಿವಾರ್ಯತೆ ಉಂಟಾಗಿದೆ. ವಿದ್ಯಾವಂತ ಯುವಕರು ತಮ್ಮ ಕುಟುಂಬದಲ್ಲಿ ದುಡಿಮೆ ಮಾಡದ ಸದಸ್ಯರಾಗಿ ಉಳಿಯುತ್ತಿದ್ದಾರೆ. ಪರಿಣಾಮಕಾರಿ ಶಿಕ್ಷಣ, ಶಿಕ್ಷಣ ಮಟ್ಟದಲ್ಲಿ ಸುಧಾರಣೆ ಮಾತ್ರ 'ಛಲವಾದಿ' ಸಮುದಾಯ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಾಯಕವೆಂದು ಹೇಳಬಹುದು. ಕಾಲೇಜು ಶಿಕ್ಷಣ ಪಡೆದ ಯುವಕರು ಹಮಾಲಿ ಮಾಡಲು, ಪೌರ ಕಾರ್ಮಿಕರಾಗಿ ದುಡಿಯಲು, ಕಟ್ಟಡ ಕಾರ್ಮಿಕರಾಗಲು, ಇವಲ್ಲದೆ ಇತರೇ ಕೆಲಸ ಮಾಡಲು ಹಿಂಜರಿಯುವುದರಿಂದ ಕುಟುಂಬದ ಆರ್ಥಿಕ ಮಟ್ಟ ಕುಸಿಯುತ್ತಿದೆ. ಅಲ್ಲದೆ ಮುಂದಿನ ಹಂತದ ಶಿಕ್ಷಣವು ಸಹ ನಿಲ್ಲುತ್ತದೆ.

ಶಿಕ್ಷಣದ ಬಗ್ಗೆ ಅರಿವಿರುವ ಕುಟುಂಬಗಳ ಪರಿಸ್ಥಿತಿ ಹೀಗಿದೆ. ಶಿಕ್ಷಣದ ಬಗ್ಗೆ ಅರಿವು ಇಲ್ಲದ ಕುಟುಂಬಗಳ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಯಾವುದೇ ಶಿಕ್ಷಣ ಕೊಡಿಸದ ಕುಟುಂಬಗಳ ಮಕ್ಕಳು ದನ ಕಾಯಲು, ಕೂಲಿ ಕೆಲಸ ಮಾಡುವ ಪರಿಪಾಠ ಇದೆ. ಇದರಿಂದ ಸರ್ಕಾರಿ ಯೋಜನೆಗಳಾದ 'ಸರ್ವಶಿಕ್ಷಣ ಅಭಿಯಾನ', 'ಮರಳಿ ಬಾ ಶಾಲೆಗೆ' ಅಕ್ಷರ ದಾಸೋಹ ಇನ್ನಿತರ ಯೋಜನೆಗಳು ಯಾವ ರೀತಿಯಲ್ಲೂ ಯಶಸ್ಸು ಪಡೆಯಲು ಸಾಧ್ಯವಿಲ್ಲವೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ಈ ಜಿಲ್ಲೆಯಲ್ಲಿ ಸರ್ಕಾರ ದಿವ್ಯ ನಿರ್ಲಕ್ಷ್ಯ ತಾಳಿದೆ. ತಂದೆ-ತಾಯಿಗಳ ನಿರ್ಲಕ್ಷತೆ ಈ ಜಿಲ್ಲೆಯ ಮಕ್ಕಳ ಶಿಕ್ಷಣದಲ್ಲಿ ಕುಸಿತ ಉಂಟಾಗಲು ಮುಖ್ಯ ಕಾರಣವಾಗಿದೆ. ಸಮಾಜ ಕಲ್ಯಾಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಯೋಜನೆಗಳ ಪರಿಪೂರ್ಣವಾದ ಮಾಹಿತಿಗಳನ್ನು ಇವರಿಗೆ ಲಭ್ಯವಿಲ್ಲದಿರುವುದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂದುಳಿಯಲು ಕಾರಣವಾಗಿದೆ.

ಕೋಷ್ಟಕ ೭.೧ ಹಾಗೂ ೭.೨ರಲ್ಲಿ ಅಧ್ಯಯನ ಪ್ರದೇಶದ ಕುಟುಂಬ ಸದಸ್ಯರ ಶೈಕ್ಷಣಿಕ ಸ್ಥಿತಿಯನ್ನು ತಾಲೂಕಾವಾರು ವಿಂಗಡಿಸಲಾಗಿದೆ. ಇದರ ಪ್ರಕಾರ ಜಿಲ್ಲೆಯಲ್ಲಿ ಛಲವಾದಿ ಸಮುದಾಯದ ಅಕ್ಷರಸ್ಥರ ಪ್ರಮಾಣ ಪ್ರತಿಶತ ೩೨ರಷ್ಟು ಇದೆ. ಅನೇಕ ಸರಕಾರಿ ಸೌಲಭ್ಯಗಳ ನಡುವೆಯೂ ಈ ಸಮುದಾಯದ ಶಿಕ್ಷಣ ಅತ್ಯಂತ ಕಡಿಮೆ ಮಟ್ಟದಲ್ಲಿ ಇರುವುದು ಕಳವಳಕಾರಿಯಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯವರು ಕಾರ್ಯತತ್ಪರಾಗಿ ಶಿಕ್ಷಣ ಮಟ್ಟ ಸುಧಾರಿಸಲು ಕ್ರಮ ಕೈಗೊಳ್ಳುವುದು ಅತಿ ಅವಶ್ಯಕವಾಗಿದೆ. ಸಾಕ್ಷರತಾ ಪ್ರಮಾಣ ೭ ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮಾತ್ರ ಅನ್ವಯಿಸುತ್ತದೆ.

ತಾಲೂಕಾವಾರು ವಿಂಗಡನೆ ಪ್ರಕಾರ ಗದಗ ತಾಲೂಕಿನಲ್ಲಿ ಒಟ್ಟಾರೆ ಜಿಲ್ಲೆಗೆ ಹೋಲಿಸಲಾಗಿ ಪ್ರತಿಶತ ೪.೩ರಷ್ಟು ಹೆಚ್ಚು ಜನ ಅಕ್ಷರಸ್ಥರಾಗಿದ್ದಾರೆ (೩೬.೩ ಪ್ರತಿಶತ). ಮುಂಡರಗಿ ಅತ್ಯಂತ ಕಡಿಮೆ ಅಕ್ಷರಸ್ಥರನ್ನು ಹೊಂದಿರುವ ತಾಲೂಕು ಆಗಿದೆ. ಇಲ್ಲಿ ಕೇವಲ ೨೪.೫ ಪ್ರತಿಶತ ಜನ ಸಾಕ್ಷರರಾಗಿದ್ದಾರೆ. ಇನ್ನುಳಿದ ಶಿರಹಟ್ಟಿ, ನರಗುಂದ ಹಾಗೂ ರೋಣ ತಾಲೂಕುಗಳಲ್ಲಿ ಕ್ರಮವಾಗಿ ೩೧.೭, ೩೧.೨ ಹಾಗೂ ೨೯.೪ರಷ್ಟು ಮಾತ್ರ ಸಾಕ್ಷರರಿದ್ದಾರೆ.


ಕೋಷ್ಟಕ ೭.೧ : ತಾಲೂಕಾವಾರು ಸಾಕ್ಷರತಾ ಪ್ರಮಾಣದ ಶೇಕಡಾವಾರು ಹಂಚಿಕೆ

ತಾಲೂಕು	ಸಾಕ್ಷರತಾ ಸ್ಥಾನಮಾನ		ಒಟ್ಟು
	ಸಾಕ್ಷರರು	ಅನಕ್ಷರರು	
ಗದಗ	೧೪೧೫	೨೪೭೯	೩೮೯೪
	೩೬.೩	೬೩.೭	೧೦೦.೦
ರೋಣ	೧೧೩೫	೨೭೩೧	೩೮೬೬
	೨೯.೪	೭೦.೬	೧೦೦.೦
ನರಗುಂದ	೪೮೪	೧೦೬೫	೧೫೪೯
	೩೧.೨	೬೮.೮	೧೦೦.೦
ಮುಂಡರಗಿ	೧೭೪	೫೩೭	೭೧೧
	೨೪.೫	೭೫.೫	೧೦೦.೦
ಶಿರಹಟ್ಟಿ	೭೮.೦	೧೬೮.೦	೨೪೬.೦
	೩೧.೭	೬೮.೩	೧೦೦.೦
ಜಿಲ್ಲೆ	೩೨೮೬	೬೯೮೦	೧೦೨೬೬
	೩೨.೦	೬೮.೦	೧೦೦.೦

ಈ ವಿಶ್ಲೇಷಣೆಯಿಂದ ಕಂಡುಬರುವ ಮುಖ್ಯ ಅಂಶವೆಂದರೆ ಗದಗ ತಾಲೂಕು ಹೊರತುಪಡಿಸಿ ಉಳಿದೆಲ್ಲ ತಾಲೂಕುಗಳಲ್ಲಿ ಅಧ್ಯಯನಕ್ಕೊಳಪಟ್ಟ ಸಮುದಾಯದ ಜನರ ಸಾಕ್ಷರ ಪ್ರಮಾಣ ಜಿಲ್ಲೆಯ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಮುಂಡರಗಿ ಹಾಗೂ ರೋಣ ತಾಲೂಕುಗಳಲ್ಲಿ ಈ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದು ಈ ಎರಡೂ ತಾಲೂಕುಗಳಲ್ಲಿ ಸಾಕ್ಷರತೆಯ ನಿಟ್ಟಿನಿಂದ ಸೂಕ್ತ ಕ್ರಮ ಕೈಕೊಳ್ಳುವುದು ಅತ್ಯವಶ್ಯಕವಾಗಿದೆ.

ಕೋಷ್ಟಕ ೭.೨: ಲಿಂಗಕ್ಕನುಗುಣವಾದ ತಾಲೂಕಾವಾರು ಸಾಕ್ಷರತಾ ಪ್ರಮಾಣದ ಶೇಕಡಾವಾರು ಹಂಚಿಕೆ

ತಾಲೂಕು	ಸಾಕ್ಷರತಾ ದರ		
	ಪುರುಷರು	ಸ್ತ್ರೀಯರು	ಒಟ್ಟು
ಗದಗ	೩೮.೫	೩೪.೧	೩೬.೩
ರೋಣ	೩೨.೭	೨೫.೯	೨೯.೪
ನರಗುಂದ	೩೨.೦	೩೦.೪	೩೧.೨
ಮುಂಡರಗಿ	೨೬.೮	೨೧.೮	೨೪.೫
ಶಿರಹಟ್ಟಿ	೩೪.೭	೨೮.೭	೩೧.೭
ಜಿಲ್ಲೆ	೩೪.೪	೨೯.೫	೩೨.೦



ಕೋಷ್ಟಕ ೭.೩ ಹಾಗೂ ೭.೪ರಲ್ಲಿ ಲಿಂಗಕ್ಕನುಗುಣವಾಗಿ ತಾಲೂಕಾವಾರು ಸಾಕ್ಷರರ ಪ್ರಮಾಣವನ್ನು ಕೊಡಲಾಗಿದೆ. ಇಲ್ಲಿ ಪ್ರತಿಯೊಂದು ತಾಲೂಕುಗಳಲ್ಲಿ ಪುರುಷರ ಸಾಕ್ಷರ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತಾ ಪ್ರಮಾಣ ಕಡಿಮೆ ಇದೆ. ಗದಗ ಜಿಲ್ಲೆಯಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ೩೪.೪ ಪ್ರತಿಶತ ಹಾಗೂ ಮಹಿಳೆಯರ ಸಾಕ್ಷರತಾ ಪ್ರಮಾಣ ೨೯.೫ ಪ್ರತಿಶತ ಅಂದರೆ ಸುಮಾರು ೩ರಲ್ಲಿ ಒಬ್ಬ ಮಹಿಳೆ ಮಾತ್ರ ಸಾಕ್ಷರರಾಗಿದ್ದಾಳೆ. ಈ ಸಮುದಾಯದಲ್ಲಿ ಲಿಂಗಭೇದವಿಲ್ಲದೆ ಪ್ರತಿಯೊಬ್ಬರನ್ನೂ ಸಾಕ್ಷರರನ್ನಾಗಿಸುವ ಕಾರ್ಯಕ್ರಮ ಅತ್ಯಂತ ತ್ವರಿತಗತಿಯಲ್ಲಿ ಆಗಬೇಕಾಗಿದೆ.

ಕೋಷ್ಟಕ ೭.೩: ಲಿಂಗಕ್ಕನುಗುಣವಾದ ತಾಲೂಕಾವಾರು ಸಾಕ್ಷರತಾ ಪ್ರಮಾಣದ ಶೇಕಡಾವಾರು ಹಂಚಿಕೆ

ತಾಲೂಕು	ಲಿಂಗ	ಸಾಕ್ಷರತಾ ಸ್ಥಾನಮಾನ		ಒಟ್ಟು
		ಸಾಕ್ಷರರು	ಅನಕ್ಷರರು	
ಗದಗ	ಪುರುಷರು	೭೬೪	೧೨೨೧	೧೯೮೫
		೩೮.೫	೬೧.೫	೧೦೦.೦
	ಸ್ತ್ರೀಯರು	೬೫೧.೦	೧೨೫೮.೦	೧೯೦೯.೦
		೩೪.೧	೬೫.೯	೧೦೦.೦
	ಒಟ್ಟು	೧೪೧೫	೨೪೭೯	೩೮೯೪
		೩೬.೩	೬೩.೭	೧೦೦.೦
ರೋಣ	ಪುರುಷರು	೬೪೫	೧೩೩೦	೧೯೭೫
		೩೨.೭	೬೭.೩	೧೦೦.೦
	ಸ್ತ್ರೀಯರು	೪೯೦	೧೪೦೧	೧೮೯೧
		೨೫.೯	೭೪.೧	೧೦೦.೦
	ಒಟ್ಟು	೧೧೩೫	೨೭೩೧	೩೮೬೬
		೨೯.೪	೭೦.೬	೧೦೦.೦
ನರಗುಂದ	ಪುರುಷರು	೨೫೮	೫೪೮	೮೦೬
		೩೨.೦	೬೮.೦	೧೦೦.೦
	ಸ್ತ್ರೀಯರು	೨೨೬	೫೧೭	೭೪೩
		೩೦.೪	೬೯.೬	೧೦೦.೦
	ಒಟ್ಟು	೪೮೪.೦	೧೦೬೫.೦	೧೫೪೯.೦
		೩೧.೨	೬೮.೮	೧೦೦.೦
ಮುಂಡರಗಿ	ಪುರುಷರು	೧೦೨	೨೭೮	೩೮೦
		೨೬.೮	೭೩.೨	೧೦೦.೦
	ಸ್ತ್ರೀಯರು	೭೨.೦	೨೫೯.೦	೩೩೧.೦
		೨೧.೮	೭೮.೨	೧೦೦.೦
	ಒಟ್ಟು	೧೭೪.	೫೩೭	೭೧೧
		೨೪.೫	೭೫.೫	೧೦೦.೦
ಶಿರಹಟ್ಟಿ	ಪುರುಷರು	೪೩	೮೧	೧೨೪
		೩೪.೭	೬೫.೩	೧೦೦.೦
	ಸ್ತ್ರೀಯರು	೩೫	೮೭	೧೨೨
		೨೮.೭	೭೧.೩	೧೦೦.೦
	ಒಟ್ಟು	೭೮	೧೬೮	೨೪೬
		೩೧.೭	೬೮.೩	೧೦೦.೦
ಜಿಲ್ಲೆ	ಪುರುಷರು	೧೮೧೨	೩೪೫೮	೫೨೭೦
		೩೪.೪	೬೫.೬	೧೦೦.೦
	ಸ್ತ್ರೀಯರು	೧೪೭೪	೩೫೨೨	೪೯೯೬
		೨೯.೫	೭೦.೫	೧೦೦.೦
	ಒಟ್ಟು	೩೨೮೬	೬೯೮೦	೧೦೨೬೬
		೩೨.೦	೬೮.೦	೧೦೦.೦

ಈ ಕೋಷ್ಟಕದಲ್ಲಿನ ತಾಲೂಕಾವಾರು ಅಂಕಿ ಸಂಖ್ಯೆಗಳು ಒಟ್ಟಾರೆಯಾಗಿ ಸಾಕ್ಷರರ ಪ್ರಮಾಣದಲ್ಲಿ ಕಂಡುಬಂದ ಅಂಶಗಳನ್ನೇ ಕಾಣಿಸುತ್ತವೆ. ವಿಸ್ತಾರವಾದ ವಿಶ್ಲೇಷಣೆಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಕೋಷ್ಟಕ ೭.೪: ಶಿಕ್ಷಣಮಟ್ಟಕ್ಕನುಗುಣವಾಗಿ ಜನಸಂಖ್ಯೆಯ ತಾಲೂಕಾವಾರು ಪ್ರತಿಶತ ಹಂಚಿಕೆ

ತಾಲೂಕು	ಶೈಕ್ಷಣಿಕ ಮಟ್ಟ				
	ಪೂರ್ವ ಪ್ರಾಥಮಿಕ	ಪ್ರಾಥಮಿಕ	ಎಸ್. ಎಸ್.ಎಲ್.ಸಿ ಗಿಂತ ಕಡಿಮೆ	ಎಸ್. ಎಸ್.ಎಲ್.ಸಿ	ಪದವಿ ಪೂರ್ವ ಗಿಂತ ಕಡಿಮೆ
ಗದಗ	೫೫೬ ೩೮.೩	೧೭೨ ೧೧.೯	೨೨೭ ೧೫.೬	೧೯೭ ೧೩.೬	೨೮ ೧.೯
ರೋಣ	೪೯೫ ೪೧.೭	೯೫ ೮	೨೦೯ ೧೭.೬	೧೬೬ ೧೪	೧೧ ೦.೯
ನರಗುಂದ	೧೭೧ ೩೪.೮	೬೨ ೧೨.೬	೮೯ ೧೮.೧	೬೧ ೧೨.೪	೭ ೧.೪
ಮುಂಡರಗಿ	೮೫ ೪೭.೫	೨೨ ೧೨.೩	೨೩ ೧೨.೮	೨೧ ೧೧.೭	೨ ೧.೧
ಶಿರಹಟ್ಟಿ	೩೨ ೩೯	೫ ೬.೧	೧೧ ೧೩.೪	೧೦ ೧೨.೨	೨ ೨.೪
ಜಿಲ್ಲೆ	೧೩೩೯ ೩೯.೫	೩೫೬ ೧೦.೫	೫೫೯ ೧೬.೫	೪೫೫ ೧೩.೪	೫೦ ೧.೫

ತಾಲೂಕು	ಶೈಕ್ಷಣಿಕ ಮಟ್ಟ				
	ಪದವಿ ಪೂರ್ವ	ಪದವಿ ಶಿಕ್ಷಣ ಮುಗಿಸದವರು	ಪದವಿ ಶಿಕ್ಷಣ ಮುಗಿಸದವರು	ಪದವಿ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ	ಒಟ್ಟು
ಗದಗ	೧೬೫ ೧೧.೪	೩೮ ೨.೬	೫೦ ೩.೪	೧೮ ೧.೨	೧೪೫೧ ೧೦೦
ರೋಣ	೧೪೯ ೧೨.೬	೨೪ ೨	೨೬ ೨.೨	೧೧ ೦.೯	೧೧೮೬ ೧೦೦
ನರಗುಂದ	೮೧ ೧೬.೫	೮ ೧.೬	೧೧ ೨.೨	೧ ೦.೨	೪೯೧ ೧೦೦
ಮುಂಡರಗಿ	೧೮ ೧೦.೧	೩ ೧.೭	೩ ೧.೭	೨ ೧.೧	೧೭೯ ೧೦೦
ಶಿರಹಟ್ಟಿ	೧೭ ೨೦.೭	೧ ೧.೨	೪ ೪.೯	೦ ೦	೮೨ ೧೦೦
ಜಿಲ್ಲೆ	೪೩೦ ೧೨.೭	೭೪ ೨.೨	೯೪ ೨.೮	೩೨ ೦.೯	೩೩೮೯ ೧೦೦

ಕೋಷ್ಟಕ ೭.೪ರಲ್ಲಿ ತಾಲೂಕಾವಾರು ಜನಸಂಖ್ಯೆಯ ಆಧಾರಿತ ಶಿಕ್ಷಣ ಮಟ್ಟವನ್ನು ಕೊಡಲಾಗಿದೆ. ಅಧ್ಯಯನಕ್ಕೊಳಪಟ್ಟ ಸಮುದಾಯದಲ್ಲಿ ಗದಗ ಜಿಲ್ಲೆಯಲ್ಲಿ ಪ್ರತಿಶತ ೩೯.೫ ಜನ ಪ್ರಾಥಮಿಕ ಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣವನ್ನು, ಸುಮಾರು ೧೧ ಪ್ರತಿಶತ ಜನರು ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದಾರೆ. ಪ್ರತಿಶತ ೧೬.೫ ರಷ್ಟು ಜನರು ಪ್ರೌಢಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣವನ್ನು ೧೩.೪ ಪ್ರತಿಶತ ಜನ ಪ್ರೌಢಶಿಕ್ಷಣವನ್ನು ಪಡೆದಿದ್ದಾರೆ. ಪಿ.ಯು.ಸಿ. ಶಿಕ್ಷಣ ಮುಗಿಸಿದವರು ಕೇವಲ ೧೩ ಪ್ರತಿಶತ ಮಾತ್ರ ಇದ್ದಾರೆ. ಒಟ್ಟಾರೆಯಾಗಿ ಸುಮಾರು ೪ ಪ್ರತಿಶತ ಜನ ಮಾತ್ರ ಪದವಿ ಹಾಗೂ ಪದವಿಗಿಂತಲೂ ಹೆಚ್ಚಿನ ಶಿಕ್ಷಣವನ್ನು ಪಡೆದಿದ್ದಾರೆ. ಸುಮಾರು ೬೭ ಪ್ರತಿಶತ ಜನರು ಮೆಟ್ರಿಕ್ ಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣವನ್ನು ಪಡೆದಿದ್ದು, ಈ ಸಮುದಾಯ ಲಭ್ಯ ಶಿಕ್ಷಣ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿರುವುದನ್ನು ಕಾಣಿಸುತ್ತದೆ. ಇದಕ್ಕೆ ಈ ಸಮುದಾಯಕ್ಕಿರುವ ಶಿಕ್ಷಣ ಸೌಲಭ್ಯ ಕುರಿತ ಮಾಹಿತಿ ಕೊರತೆ ಹಾಗೂ ಪೂರಕ ವಾತಾವರಣ ಕೊರತೆ ಕಾರಣವಾಗಿರಬಹುದು. ಮುಂಡರಗಿ ತಾಲೂಕಿನಲ್ಲಿ ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚಿನ ಜನ (೪೭.೫ ಪ್ರತಿಶತ) ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿರುತ್ತಾರೆ. ಇದರ ನಂತರದ ಸ್ಥಾನಗಳನ್ನು ಕ್ರಮವಾಗಿ ರೋಣ, ಶಿರಹಟ್ಟಿ ಹಾಗೂ ಗದಗ ತಾಲೂಕುಗಳು ಪಡೆದುಕೊಂಡಿವೆ (೪೧.೭, ೩೯.೦ ಹಾಗೂ ೩೮.೩). ನರಗುಂದ ತಾಲೂಕಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಜನ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿರುವುದು ಕಂಡು ಬರುತ್ತದೆ. ಮೆಟ್ರಿಕ್‌ಗಿಂತ ಕಡಿಮೆ ಶಿಕ್ಷಣ ಮಟ್ಟವನ್ನು ಪಡೆದುಕೊಂಡಿರುವ ಜನ ಅತಿ ಹೆಚ್ಚಾಗಿ ಮುಂಡರಗಿ ತಾಲೂಕಿನಲ್ಲಿರುವುದನ್ನು ಕಾಣಬಹುದು. ಇದರ ನಂತರದ ಸ್ಥಾನಗಳನ್ನು ಕ್ರಮವಾಗಿ ರೋಣ (೬೭.೪ ಪ್ರತಿಶತ), ಗದಗ (೬೫.೮), ನರಗುಂದ (೬೫.೬) ಹಾಗೂ ಶಿರಹಟ್ಟಿ (೫೮.೫) ತಾಲೂಕುಗಳು ಪಡೆದುಕೊಂಡಿವೆ.

ಪದವಿಪೂರ್ವ ಹಾಗೂ ಅದಕ್ಕಿಂತ ಹೆಚ್ಚಿನ ಶಿಕ್ಷಣ ಮಟ್ಟ ತಲುಪಿದ ಪ್ರತಿಶತ ಜನಸಂಖ್ಯೆ ಗದಗ ಜಿಲ್ಲೆಯಲ್ಲಿ ಸುಮಾರು ೧೮.೬ ರಷ್ಟು ಇದೆ. ಈ ಪ್ರಮಾಣ ಶಿರಹಟ್ಟಿ ತಾಲೂಕಿನಲ್ಲಿ ಅತ್ಯಂತ ಹೆಚ್ಚಾಗಿದ್ದು, ಪ್ರತಿಶತ ೨೬.೮ ನಂತರದ ಸ್ಥಾನಗಳನ್ನು ಕ್ರಮವಾಗಿ ನರಗುಂದ (೨೦.೬), ರೋಣ (೧೭.೭) ಹಾಗೂ ಗದಗ ತಾಲೂಕು (೧೮.೭) ಪಡೆದುಕೊಂಡಿವೆ. ಮುಂಡರಗಿ ತಾಲೂಕಿನಲ್ಲಿ ಈ ಪ್ರಮಾಣ ಅತ್ಯಂತ ಕಡಿಮೆಯಾಗಿರುವುದು ಗಮನಿಸತಕ್ಕ ಅಂಶವಾಗಿದೆ.

ಕೋಷ್ಟಕ ೭.೫ : ಒಟ್ಟಾರೆ ಗದಗ ಜಿಲ್ಲೆಯಲ್ಲಿ ೩೩.೬೨ ಪ್ರತಿಶತ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದಾರೆ. ಅವರಲ್ಲಿ ೩೩.೪೮ ಪ್ರತಿಶತ ಪುರುಷರು ಮತ್ತು ೩೩.೮೦ ಪ್ರತಿಶತ ಮಹಿಳೆಯರು ಇದ್ದಾರೆ (ಒಟ್ಟು ೧೨೧೮ ಜನರಲ್ಲಿ ೬೬೯ ಪುರುಷರು ಮತ್ತು ೫೪೯ ಮಹಿಳೆಯರು).

ಕೋಷ್ಟಕ ೭.೫: ಶಿಷ್ಯವೇತನ ಪಡೆಯುವ ವಿದ್ಯಾರ್ಥಿಗಳ ತಾಲೂಕಾವಾರು ಪ್ರತಿಶತ ಹಂಚಿಕೆ

ಲಿಂಗ	ತಾಲೂಕು	ವಿದ್ಯಾರ್ಥಿ ವೇತನ			ಒಟ್ಟು
		ಇದೆ	ಇಲ್ಲ	ಗೊತ್ತಿಲ್ಲ	
ಪುರುಷರು	ಗದಗ	೨೫೦	೫೩೬	೨	೭೮೮
		೩೧.೭	೬೮.೦	.೩	೧೦೦.೦
	ರೋಣ	೨೫೩	೪೮೪	೧೦	೭೪೭
		೩೩.೯	೬೪.೮	೧.೩	೧೦೦.೦
	ನರಗುಂದ	೧೧೪	೧೫೯	೦	೨೭೩
		೪೧.೮	೫೮.೨	.೦	೧೦೦.೦
	ಮುಂಡರಗಿ	೩೪	೧೧೧	೦	೧೪೫
		೨೩.೪	೭೬.೬	.೦	೧೦೦.೦
	ಶಿರಹಟ್ಟಿ	೧೮	೨೭	೦	೪೫
		೪೦.೦	೬೦.೦	.೦	೧೦೦.೦
	ಜಿಲ್ಲೆ	೬೬೯	೧೩೧೭	೧೨	೧೯೯೮
		೩೩.೫	೬೫.೯	.೬	೧೦೦.೦
ಸ್ತ್ರೀಯರು	ಗದಗ	೨೧೯	೪೫೮	೦	೬೭೭
		೩೨.೩	೬೭.೭	.೦	೧೦೦.೦
	ರೋಣ	೧೮೮	೩೮೨	೪	೫೭೪
		೩೨.೮	೬೬.೬	.೭	೧೦೦.೦
	ನರಗುಂದ	೧೦೩	೧೩೩	೦	೨೩೬
		೪೩.೬	೫೬.೪	.೦	೧೦೦.೦
	ಮುಂಡರಗಿ	೨೦	೮೧	೦	೧೦೧
		೧೯.೮	೮೦.೨	.೦	೧೦೦.೦
	ಶಿರಹಟ್ಟಿ	೧೯	೧೭	೦	೩೬
		೫೨.೮	೪೭.೨	.೦	೧೦೦.೦
	ಜಿಲ್ಲೆ	೫೪೯	೧೦೭೧	೪	೧೬೨೪
		೩೩.೮	೬೫.೯	.೨	೧೦೦.೦
ಒಟ್ಟು		೧೨೧೮	೨೩೮೮	೧೬	೩೬೨೨
		೩೩.೬	೬೫.೯	೦.೪	೧೦೦.೦

ಕೋಷ್ಟಕ ೭.೫ ಪ್ರಕಾರ ತಾಲೂಕಾವಾರು ಮಾಹಿತಿ ಪ್ರಕಾರ ಗದಗ ತಾಲೂಕಿನಲ್ಲಿ ೩೮.೫ ಪ್ರತಿಶತ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದು, ೩೧.೭ ಪ್ರತಿಶತ ಪುರುಷರು ಮತ್ತು ೩೨.೩ ಪ್ರತಿಶತ ಮಹಿಳೆಯರು ಇದ್ದಾರೆ. ರೋಣ ತಾಲೂಕಿನಲ್ಲಿ ವಿದ್ಯಾರ್ಥಿವೇತನ ಪಡೆಯುವ ೩೬.೨ ಪ್ರತಿಶತ ವಿದ್ಯಾರ್ಥಿಗಳಲ್ಲಿ ೩೩.೯ ಪ್ರತಿಶತ ಪುರುಷರು ಹಾಗೂ ೩೨.೮ ಪ್ರತಿಶತ ಮಹಿಳೆಯರು ಇರುವರು. ನರಗುಂದ ತಾಲುಕಿನಲ್ಲಿ ೧೭.೮ ಪ್ರತಿಶತ ವಿದ್ಯಾರ್ಥಿಗಳಿಗೆ ಈ ಸೌಲಭ್ಯವಿದ್ದು ೪೧.೮ ಪ್ರತಿಶತ ಪುರುಷರು

೪೩.೬ ಪ್ರತಿಶತ ಮಹಿಳೆಯರಾಗಿರುವರು. ಮುಂಡರಗಿಯಲ್ಲಿ ೪.೪ ಪ್ರತಿಶತ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿವೇತನದಲ್ಲಿ ೨೩.೪ ಪ್ರತಿಶತದಷ್ಟು ಪುರುಷರು ೪೦.೪ ಪ್ರತಿಶತ ಮಹಿಳೆಯರು ಇದ್ದಾರೆ. ಇನ್ನು ಕೊನೆಯದಾಗಿ ಶಿರಹಟ್ಟಿಯಲ್ಲಿ ಕೇವಲ ೩.೦೩ ಪ್ರತಿಶತ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದು, ಪುರುಷರು ೪೦.೦ ಪ್ರತಿಶತ ಹಾಗೂ ೫೨.೮ ಪ್ರತಿಶತವಿರುವರು.

ಒಟ್ಟಾರೆಯಾಗಿ ಸಾಕ್ಷರ ಪ್ರಮಾಣ ಹಾಗೂ ಸಾಕ್ಷರರಲ್ಲಿ ಶಿಕ್ಷಣ ಮಟ್ಟ ಹೆಚ್ಚಿಸಲು ಈ ಸಮುದಾಯದ ಜನರಲ್ಲಿ ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಸಂಬಂಧಪಟ್ಟ ಎಲ್ಲ ಇಲಾಖೆಗಳು ಕೈಗೊಳ್ಳುವುದು ಅತಿ ಅವಶ್ಯಕವಾಗಿದೆ. ಈ ಸಮುದಾಯದ ಶೈಕ್ಷಣಿಕ ಚಿತ್ರವನ್ನು ರಾಜ್ಯಮಟ್ಟದ ಸಮೀಕ್ಷೆ ನಡೆಸಿ, ಸೂಕ್ತವಾದ ಕ್ರಮ ಕೈಕೊಳ್ಳುವುದು ಮತ್ತು ಈ ಸಂಬಂಧ ಉನ್ನತ ಅಧ್ಯಯನ ಕೈಗೊಳ್ಳುವುದು ಅವಶ್ಯಕವಿದೆ.

ಶಿಕ್ಷಣ ಪಡೆದ 'ಛಲವಾದಿ' ಸಮುದಾಯದ ಕುಟುಂಬದಲ್ಲಿ ಮತ್ತು ಶಿಕ್ಷಣದ ಗಾಳಿ ಸೋಂಕದ ಕುಟುಂಬಗಳ ಮಧ್ಯ ಅಂತರವಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ.

ಸಾಕಷ್ಟು ಜನಸಂಖ್ಯೆ ಇರುವ ಛಲವಾದಿ ಸಮುದಾಯದಲ್ಲಿ ಇದುವರೆಗೂ ಕೆಲವೇ ಜನ ಮಾತ್ರ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಪಡೆದಿದ್ದಾರೆ. ಕೆಲವರು ವೃತ್ತಿಪರ ಕೋರ್ಸ್‌ಗಳನ್ನು ಮುಗಿಸಿ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಬಹಳಷ್ಟು ಕಡಿಮೆ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ಪದವಿ ಶಿಕ್ಷಣ ಪಡೆದ ಯುವಕರು ನಿರುದ್ಯೋಗಿಗಳಾಗಿದ್ದಾರೆ. ಕೆಲವರು ಪದವಿಪೂರ್ವ ಶಿಕ್ಷಣ ಕಲಿಯುತ್ತಿದ್ದಾರೆ. ಪಿ.ಯು.ಸಿ.ವರೆಗಿನ ಶಿಕ್ಷಣ ಪಡೆದವರ ಸಂಖ್ಯೆಯಲ್ಲಿ ಹೆಚ್ಚಳವಿರುವುದು ಕಂಡುಬರುತ್ತದೆ.

ವೈದ್ಯಕೀಯ, ಕಂಪ್ಯೂಟರ್‌ನಂತಹ ಮಹತ್ವದ ಕೋರ್ಸ್‌ಗಳನ್ನು ಪಡೆಯುವಲ್ಲಿ ಈ ಸಮುದಾಯ ಇನ್ನು ಸಫಲರಾಗಿಲ್ಲ. ಆದರೆ ಮೂರು ಜನ ಇಂಜಿನೀಯರ್ ಕೋರ್ಸ್ ಮುಗಿಸಿ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇನ್ನು ತಾಂತ್ರಿಕ ಶಿಕ್ಷಣಗಳಾದ ಐ.ಟಿ.ಐ., ಡಿಪ್ಲೋಮೊ ಅಂತಹ ಕೋರ್ಸ್‌ಗಳನ್ನು ಬೆರಳೆಣಿಕೆಯಷ್ಟು ಯುವಕರು ಕಲಿಯುತ್ತಿದ್ದಾರೆ.

೭.೨ ರಾಜಕೀಯ ಜೀವನ

ದಲಿತ ಸಮೂಹದ ಪುನರ್‌ಸಂಘಟನೆ, ಪ್ರಗತಿ, ವಿವಿಧ ಕಾರ್ಯಕ್ರಮಗಳು ಇತ್ಯಾದಿಗಳನ್ನು ಒಂದೆಡೆ ಕಾಣುತ್ತಿದ್ದರೆ, ಇನ್ನೊಂದೆಡೆ ಈ ಸಮೂಹಗಳು ಒಡೆದು ಹೋಳಾಗಿ ಗತಕಾಲದಂತೆ ಮತ್ತೆ ಸಮಾನತೆಗಾಗಿ ಸಂವಿಧಾನ ಬದ್ಧ ಮೀಸಲಾತಿಗಾಗಿ, ಸೌಲಭ್ಯಗಳಿಗಾಗಿ, ರಾಜಕೀಯ ಸ್ಥಾನಮಾನಗಳಿಗಾಗಿ ಹೋರಾಟ ಪ್ರಾರಂಭಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕಾರಣ ಪರಿಶಿಷ್ಟ ಜಾತಿ ಸಮೂಹ ಎಡಗೈ-ಬಲಗೈ ಎಂಬ ತೀರಾ ಹಳೆಯ ಸಾಮಾಜಿಕ ಕಾಯಿಲೆಯಿಂದ ನರಳತೊಡಗಿವೆ. ಒಳಜಾತಿಗಳ ಭೇದದಿಂದ

ಸಂಘಟನೆಯು ಅಪಾಯಕಾರಿಯ ದಾರಿ ಹಿಡಿದಿದೆ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿಗಳಲ್ಲಿಯ ತೀರಾ ಹಿಂದುಳಿದ ಸಮುದಾಯಗಳಲ್ಲಿ ಛಲವಾದಿ ಸಮುದಾಯವನ್ನು ಗಮನಿಸಲಾಗಿದೆ. ರಾಜ್ಯದ ಪ್ರಸ್ತುತ ಸುಮಾರು ೭೫ ರಿಂದ ೮೦ ಲಕ್ಷ ಸಮುದಾಯದ ಉತ್ತಮ ಬಲ ಪಡೆದಿದ್ದರೂ ಈ ಸಮುದಾಯದವರಲ್ಲಿ ಬಹುತೇಕ ಜನರು ಇಲ್ಲಿಯವರೆಗೂ ಅನಕ್ಷರಸ್ಥರು, ಮುಗ್ಧರು, ಅವಿದ್ಯಾವಂತರಾಗಿ ಉಳಿದಿರುವುದು ದುರಂತವಾಗಿದೆ. ಹೀಗಾಗಿ ಈ ಸಮುದಾಯದವರೂ ಇನ್ನು ಹೆಚ್ಚು ಹೆಚ್ಚು ಶಿಕ್ಷಣವಂತರಾಗುವದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ. ಈ ಸಮುದಾಯದ ಪ್ರಗತಿಗಾಗಿ ಶ್ರಮಿಸುವ ರಾಜಕೀಯ ನಾಯಕರ ಸಹಾಯ ಸಹಕಾರವೂ ಇನ್ನೂ ಹೆಚ್ಚು ಹೆಚ್ಚಾಗಿ ಅಪೇಕ್ಷಿಸುವಂತಿದೆ.

ರಾಜ್ಯದ ಬೇರೆ ಪ್ರಾದೇಶಿಕವಾಗಿ ಹೋಲಿಸಿ ನೋಡಿದಾಗ ರಾಜಕೀಯ ರಂಗದಲ್ಲಿ ಬಹಳಷ್ಟು ಹಿಂದಿದ್ದಾರೆ. ಗದಗ ಜಿಲ್ಲೆಯ ಛಲವಾದಿ ಸಮುದಾಯದವರಿಗೆ ರಾಜಕೀಯ ಕ್ಷೇತ್ರದಲ್ಲಿ ಇವರಿಗೆ ದೊರಕಿರುವ ಸ್ಥಾನಮಾನಗಳು, ಅವರಿಗೆ ಕೊಟ್ಟಿರುವ ರಾಜಕೀಯ ಸ್ಥಾನಮಾನವು ತುಂಬಾ ಕಡಿಮೆ ಇವೆ. ಯಾಕೆಂದರೆ ಇಲ್ಲಿಯ ಛಲವಾದಿಯವರಿಗೆ ಸಿಗಬೇಕಾದ ರಾಜಕೀಯ ಅವಕಾಶಗಳು ಇಲ್ಲದೆ ವಂಚಿತರಾಗುತ್ತ ಬಂದಿದ್ದಾರೆ. ಬೇರೆ ಜಿಲ್ಲೆಗಳಲ್ಲಿರುವಂತೆ ರಾಜಕೀಯ ಮುಖಂಡರು ಹಾಗೂ ಕಾರ್ಯಕರ್ತರು ಗದಗ ಜಿಲ್ಲೆಯ ಛಲವಾದಿ ಸಮುದಾಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಇದ್ದರೂ, ಅವರ ಸೇವೆಯನ್ನು ಕಡೆಗಣಿಸಿ ರಾಜಕೀಯ ಪಕ್ಷಗಳು ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಅವಕಾಶಗಳನ್ನು ಕೊಟ್ಟಿಲ್ಲ ಎಂಬ ಸಂಗತಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.

ತಮ್ಮ ಜಾತಿಯನ್ನು ಸಂಘಟನೆ ಮಾಡುವವರು ರಾಜಕೀಯ ಪ್ರಾತಿನಿಧ್ಯವನ್ನು ಪಡೆಯಲು ಹಲವು ಸಂಘಟನೆಗಳನ್ನು ಛಲವಾದಿ ಸಮುದಾಯದವರು ಅಸ್ತಿತ್ವಕ್ಕೆ ತಂದುಕೊಂಡಿದ್ದಾರೆ. ಆ ಸಂಘಟನೆಗಳ ವೇದಿಕೆಗಳ ಅಡಿಯಲ್ಲಿ ಛಲವಾದಿಗರ ಕೇರಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಅಂತಹ ಕಾರ್ಯಕ್ರಮಗಳಿಗೆ ರಾಜಕೀಯ ಮುಖಂಡರನ್ನು ಹೋರಾಟಗಾರರನ್ನು ಅಧಿಕಾರದಲ್ಲಿರುವ ವಿಧಾನಸಭೆ, ಲೋಕಸಭೆ ಸದಸ್ಯರನ್ನು, ಮಂತ್ರಿಗಳನ್ನು, ಮಾಜಿ ಶಾಸಕರನ್ನು, ಮಾಜಿ ಪ್ರತಿನಿಧಿಗಳನ್ನು ಆಹ್ವಾನಿಸಿ ಅವರುಗಳ ಗಮನಕ್ಕೆ ತಮ್ಮ ಜನಸಂಖ್ಯೆ ಬಲವನ್ನು ತೋರಿಸುವ ಮೂಲಕ ತಮಗೂ ರಾಜಕಾರಣದಲ್ಲಿ ದೊರೆಯಬೇಕಾದ ಅವಕಾಶಗಳನ್ನು ಕೊಡುವಂತೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದರೂ ಇಲ್ಲಿಯವರೆಗೂ ರಾಜಕೀಯ ರಂಗದಲ್ಲಿ ಇವರಿಗೆ ಪ್ರಮುಖವಾದ ಹುದ್ದೆಗಳು ದೊರಕಿರುವುದಿಲ್ಲ.

ಗದಗ ನಗರವು ಜಿಲ್ಲಾ ಕೇಂದ್ರವಾಗಿದ್ದರೂ ಕೂಡಾ ಇಂದಿಗೂ ಬಹಳಷ್ಟು ಹಿಂದುಳಿದಿರುವುದರಿಂದ ಛಲವಾದಿ ಸಮುದಾಯಕ್ಕೆ ರಾಜಕೀಯದ ಪ್ರಜ್ಞೆ ಪರಿಪೂರ್ಣವಾಗಿ ತಿಳಿದಿಲ್ಲ. ಅವರಲ್ಲಿ ಬಹುತೇಕರು ಅವಿದ್ಯಾವಂತರಾಗಿದ್ದು ರಾಜಕೀಯದಲ್ಲಿ ಆಗುವ ವಿದ್ಯಮಾನಗಳನ್ನು ಅರಿತುಕೊಳ್ಳ ದವರಾಗಿದ್ದಾರೆ. ಇಂತಹ ಅವರ ಅಜ್ಞಾನವನ್ನು ರಾಜಕಾರಣಿಗಳು ತುಂಬಾ ಜಾಗರೂಕತೆಯಿಂದ ಚುನಾವಣೆ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಮತದಾನ ಮಾಡುವದು ಪ್ರತಿಯೊಬ್ಬರ

ಕರ್ತವ್ಯವಾಗಿದ್ದು, ಅಂತಹ ಸಂದರ್ಭಗಳಲ್ಲಿ ರಾಜಕಾರಣಿಗಳು ಈ ಸಮುದಾಯಕ್ಕೆ ಹಣ, ಹೆಂಡ ಇನ್ನಿತರ ಆಮಿಷ ತೋರಿಸಿ ಅವರ ಮತಗಳನ್ನು ಪಡೆಯುತ್ತಾರೆ. ಆನಂತರ ಈ ಸಮುದಾಯದ ಕಡೆ ನೋಡದೆ ಇರುವ ಸಂದರ್ಭಗಳು ಹೆಚ್ಚಾಗಿ ಇವೆ. ಈ ಛಲವಾದಿ ಸಮುದಾಯದಲ್ಲಿ ಹಿಂದೆ ರೋಣ ತಾಲ್ಲೂಕಿನ ದಿ. ದೊಡಮನಿಯವರು ಪ್ರಥಮವಾಗಿ ವಿಧಾನಸಭೆ ಚುನಾವಣೆಗೆ ನಿಂತು ಆಯ್ಕೆಗೊಂಡಿದ್ದರು. ಆ ದಿನಗಳಲ್ಲಿ ಸಮುದಾಯಕ್ಕೆ ಸಹಾಯ ಮಾಡಿದ್ದಾರೆ. ಕೆಲವರು ಮಾತ್ರ ಜಿಲ್ಲಾ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡಿದ್ದು, ಸಮುದಾಯದ ಏಳ್ಗೆಗಾಗಿ ಅಲ್ಪ ಸೇವೆ ಸಲ್ಲಿಸಿದ್ದಾರೆ. ಇಲ್ಲಿಯವರೆಗೂ ನಗರ ಸಭೆಗೆ ಛಲವಾದಿ ಸಮುದಾಯದ ಒಂದಿಬ್ಬರನ್ನು ಬಿಟ್ಟರೆ ಇಲ್ಲಿಯವರೆಗೆ ನಗರಸಭೆ ಸದಸ್ಯರಾಗಿರುವುದಿಲ್ಲ ದಿರುವದು ದೊಡ್ಡ ದುರಂತವೆಂದು ಹೇಳಲಾಗಿದೆ.

ಒಟ್ಟಾರೆ ಗದಗ ಜಿಲ್ಲೆಯ ಛಲವಾದಿ ಸಮುದಾಯದವರು ಒಂದು ಅಸಂಘಟಿತವಾದ ಸಮಾಜವಾಗಿದ್ದು ಸಮಾಜವನ್ನು ಮುನ್ನಡೆಸಿಕೊಂಡು ಹೋಗುವ ಒಬ್ಬ ಸಮರ್ಥ ನಾಯಕನ ಕೊರತೆ ಎದ್ದು ಕಾಣುತ್ತದೆ. ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ವಿದ್ಯಾವಂತರು ಬರಲು ಪ್ರಾರಂಭಿಸಿದ್ದಾರೆ. ಸಮಾಜೀಕರಣದ ಪ್ರಭಾವದಿಂದ ಛಲವಾದಿ ಸಮುದಾಯದವರಲ್ಲಿ ಜಾಗೃತಿ ಮೂಡಿಸಿ ಸರ್ಕಾರಿ ಸೌಲಭ್ಯಗಳನ್ನು ಮೀಸಲಾತಿ ತಳಹದಿಯಲ್ಲಿ ಬಳಸಿಕೊಳ್ಳುವ ಗುರಿಯತ್ತ ಇತ್ತೀಚಿನ ದಿನಗಳಲ್ಲಿ ಸಾಗುತ್ತಿದ್ದಾರೆ.

ರಾಜಕೀಯ ಚರಿತ್ರೆಯ ವಿಷಯ ಕೋಶದಲ್ಲಿ ಪ್ರಜಾಪ್ರಭುತ್ವ ಎಂಬ ಪದವು ಜನರನ್ನು ಆವೇಶಭರಿತರನ್ನಾಗಿ ಮಾಡುವ ಮೋಹಗೊಳಿಸುವ ಮತ್ತು ಪ್ರೇರೇಪಿಸುವ ಶಕ್ತಿಯನ್ನು ಪಡೆದುಕೊಂಡಿದೆ. ಇದು ಪೆರಿಕ್ಲಿಸ್‌ನ ಕಾಲದಿಂದ ಇಂದಿನವರೆಗೂ ಮಾನವ ಕುಲವನ್ನು ಮರಳು ಮತ್ತು ಚಕಿತಗೊಳಿಸುತ್ತಾ ಬಂದಿದೆ. ಇಡೀ ಪ್ರಪಂಚದಲ್ಲಿಯೇ ಇದು ಬಹಳ ಜನಪ್ರಿಯವಾದ ಚಿತ್ತಾಕರ್ಷಕವಾದ, ಪದ ಬಳಕೆಯಾಗಿದ್ದು, ವಿಶಿಷ್ಟ ಶಕ್ತಿಯನ್ನು ಪಡೆದುಕೊಂಡಿದೆ. ಅಲ್ಲದೆ ಈ ಪದ ಪ್ರಖರವಾದ, ಅತ್ಯುತ್ತಮ ರಾಜಕೀಯ ಪರಿಕಲ್ಪನೆಯಿಂದೊಡಗೂಡಿದೆ. ಈ ಪ್ರಜಾ ಪ್ರಭುತ್ವವೆಂಬ ಪದವನ್ನು ಸುಮಾರು ಇಪ್ಪತ್ತೈದು ಶತಮಾನಗಳ ಹಿಂದೆಯೇ ಉಪಯೋಗಿಸಲಾಯಿತು. ಈ ಪದವು ಪ್ರಥಮವಾಗಿ ಹಿರೋಡಾಟಸನ 'ಹಿಸ್ಟೋರಿಯಾ' ಗ್ರಂಥದಲ್ಲಿ 'ಐಸೋನೊಮಿಯಾ' ಎಂಬ ಭಾವನೆಗೆ ಸಂಬಂಧ ಪಟ್ಟಂತೆ ವಿವರಿಸಲ್ಪಟ್ಟಿದೆ. (ಪುವ)ಐಸೋನೊಮಿಯಾ 'ನ್ಯಾಯದ ದೃಷ್ಟಿಯಲ್ಲಿ ಎಲ್ಲರೂ ಸಮಾನರು' ಎಂಬ ಪರಿಕಲ್ಪನೆ ಹೊಂದಿದೆ. ಇತಿಹಾಸದ ಆರಂಭದಿಂದ ಇಂದಿನವರೆಗೂ ಬೇರೆ ಬೇರೆ ರಾಜಕೀಯ ವ್ಯವಸ್ಥೆಯಿಂದ ಮರೆಯಾಗದೇ ಒಂದು ಪ್ರಭಾವಶಾಲಿ ಭಾಗವಾಗಿ ಮುಂದುವರೆದಿದೆ. ಪುರಾತನ ಕಾಲದಲ್ಲಿ ಪ್ರಜಾಪ್ರಭುತ್ವ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗದಿದ್ದರೂ ಅಂದಿನ ಗ್ರೀಕ್ ಮತ್ತು ರೋಮ್ ನಗರ ರಾಜ್ಯಗಳಲ್ಲಿ ಅದು ಕಾಣಿಸಿಕೊಂಡಿತ್ತು. ಅಂದಿನ ನಗರ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ಒಂದು ನಿರ್ದಿಷ್ಟ ಪರಿಕಲ್ಪನೆಯಾಗಿಯೂ ರೂಪುಗೊಂಡಿತ್ತು. ರಾಜಕೀಯ ಆರ್ಥಿಕ, ಮತ್ತು ಸಾಮಾಜಿಕ ಶಕ್ತಿಗಳು ನೈತಿಕ ತತ್ವಗಳು, ಸರಕಾರದ

ಒಂದು ತತ್ವ ರಾಜ್ಯದ ಒಂದು ಕ್ರಮ ಜೀವನದ ಒಂದು ರೀತಿ ಎಂಬಂತೆ ವಿವಿಧವಾದ ಅರ್ಥ ವಿಶ್ಲೇಷಣೆಗೆ ಪ್ರಜಾಪ್ರಭುತ್ವವನ್ನು ಒಳಪಡಿಸಲಾಗಿದೆ. ಹೀಗೆ ವೈವಿಧ್ಯಮಯವಾಗಿ ಜಾರಿಗೆ ಬಂದಿರುವ ಪ್ರಜಾಪ್ರಭುತ್ವವು ವಿವಾದಗ್ರಸ್ತವು, ಅಸ್ಪಷ್ಟವೂ, ಅನಿರ್ದಿಷ್ಟವೂ ಹಾಗೂ ಒಂದೇ ವಾಕ್ಯದಲ್ಲಿ ಅರ್ಥೈಸಲು ಕಷ್ಟಕರವಾದುದಾಗಿದೆ. ಉತ್ತಮ ಗುಣಗಳ ಜೊತೆಗೆ ಅನೇಕ ಅವಗುಣಗಳನ್ನು ಹೊಂದಿದೆ. ಆದರೆ ಅವಗುಣಗಳನ್ನು ಗುಣಗಳನ್ನಾಗಿ ಮಾರ್ಪಾಡಿಸಿಕೊಳ್ಳುವ ಜವಾಬ್ದಾರಿ ಆಯಾ ರಾಷ್ಟ್ರಗಳಿಗಿದೆ.

"ಡೆಮಾಕ್ರಸಿ ಎಂಬ ಪದವು 'ಡೆಮೋಸ್' ಹಾಗೂ 'ಕ್ರಾಷಿಯಾ' ಎಂಬ ಎರಡು ಗ್ರೀಕ್ ಪದಗಳ ಸಂಯೋಗದಿಂದ ನಿಷ್ಪತ್ತಿಯಾಗಿದೆ. ಆಂಗ್ಲ ಭಾಷೆಯ 'ಡೆಮಾಕ್ರಸಿ' ಎಂಬ ಕನ್ನಡ ಪದದ ಅರ್ಥ 'ಪ್ರಜಾಪ್ರಭುತ್ವ'. 'ಡೆಮೋಸ್' ಅಂದರೆ 'ಪ್ರಜೆ', 'ಕ್ರಾಷಿಯಾ' ಎಂದರೆ 'ಅಧಿಕಾರ' ಅಥವಾ 'ಶಕ್ತಿ' ಎಂದರ್ಥ."[೨]

೧೯೪೭ ಅಗಸ್ಟ್ ೧೫ರಂದು ದೇಶ ಸ್ವಾತಂತ್ರ್ಯ ಹೊಂದಿದ ನಂತರ ಸಂವಿಧಾನ ರಚನೆಯಾಯಿತು. ಈ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕನ್ನು ದೊರಕಿಸಿಕೊಟ್ಟಿತು. ಜೊತೆಗೆ ಕೆಲವೊಂದು ರಾಜಕೀಯ ಹಕ್ಕುಗಳನ್ನು ಮೀಸಲಾತಿಯ ಮೂಲಕ ಶೋಷಿತ ಜಾತಿಗಳಿಗೆ ನೀಡಿದ್ದರಿಂದ ಇಂದು ರಾಜಕಾರಣದಲ್ಲಿ ಭಾಗವಹಿಸಲು ಅವಕಾಶವಾಗಿದೆ. ಇದರಿಂದಾಗಿ ಅನೇಕ ಕೆಳಜಾತಿಗಳ ಪ್ರತಿನಿಧಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯ ಸಂಸ್ಥೆಗಳಲ್ಲಿ ಇರುವಂತಾಯಿತು. ಈ ರೀತಿ ರಾಜಕೀಯ ಹಕ್ಕುಗಳನ್ನು ಸಂವಿಧಾನಾತ್ಮಕ ಗೊಳಿಸಿದ್ದರಿಂದ ಮುಂದೆ ಅದು ಜಿಲ್ಲೆ. ತಾಲೂಕು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಕೆಲವು ವಿಶೇಷ ಸೌಲಭ್ಯ ಕಲ್ಪಿಸಿಕೊಟ್ಟಿದೆ.

ಡಾ. ಬಿ. ಆರ್. ಅಂಬೇಡ್ಕರರವರ ಪ್ರಕಾರ ರಾಜಕೀಯದ ಬೇರೆ ಬೇರೆ ಸ್ಥಾನಗಳಲ್ಲಿ ಮೀಸಲಾತಿಯ ಮುಖಾಂತರ 'ಅಸ್ಪೃಶ್ಯರು' ಪ್ರತಿನಿಧಿಸುವಂತೆ ಮಾಡುವುದರಿಂದ ಒಂದು ನಿರ್ದಿಷ್ಟವಾದ ಗುರಿಯನ್ನಾದರೂ ತಲುಪಬಹುದೆಂದು ಅವರು ಕಂಡುಕೊಂಡಿದ್ದರು. ಸಂಪ್ರದಾಯ ಬದ್ಧವಾಗಿ ಯಾವ ಒಂದು ರಾಜಕೀಯ ಶಕ್ತಿ ಮೇಲುಜಾತಿಯವರ ಸಾರ್ವಭೌಮತ್ವಕ್ಕೆ ಒಳಗಾಗಿದೆಯೋ ಅಂಥದರಲ್ಲಿ ಪ್ರವೇಶಿಸಿ ಅಧಿಕಾರವನ್ನು ಅಸ್ಪೃಶ್ಯರು ಪಡೆಯುವುದಕ್ಕೆ ಇದೊಂದು ಒಳ್ಳೆಯ ಅವಕಾಶವೆಂದು ಅವರು ಯೋಚಿಸಿದ್ದರು. ಅಸ್ಪೃಶ್ಯ ಜಾತಿಗಳ ಪ್ರಗತಿಗೆ ಅನುಕೂಲವಾಗುತ್ತದೆ. ಅಸ್ಪೃಶ್ಯರನ್ನು ಈಗ ಹಾಲಿ ಇರುವ ಕೀಳು ಮಟ್ಟದಿಂದ ಮೇಲಕ್ಕೆ ಎತ್ತುವುದಲ್ಲದೆ ಬಹು ಸಂಖ್ಯಾತ ಭಾರತದ ಜನತೆಯೊಂದಿಗೆ ಸಮಾನವಾಗಿ ಬಾಳುವ ಅವಕಾಶ ಕಲ್ಪಿಸಿಕೊಡುವುದು ಅಂಬೇಡ್ಕರರ ಕನಸಾಗಿತ್ತು. ಕೆಳವರ್ಗದ ಜನರಿಗೆ ರಾಜಕೀಯ ಸ್ಥಾನಗಳನ್ನು ಕಾಯ್ದಿಡುವ ಆಧಾರದ ಮೇಲೆ ಸಾಮಾಜಿಕ ಅಸಮಾನತೆಯಂತಹ ಯಾವ ನಾಯಕತ್ವ ಬೆಳೆಯಲು ಸಾಧ್ಯವಾಗುವುದಿಲ್ಲವೋ ಅಂತದ್ದನ್ನು ರಾಜಕೀಯ ಸ್ಥಾನವನ್ನು ಮೀಸಲಿಡುವುದರ ಮೂಲಕ ಒತ್ತಾಯವಾಗಿ ಬೆಳೆಸಲು ಸಾಧ್ಯ. ರಾಜಕೀಯ ಪ್ರಾತಿನಿಧ್ಯ ದಲಿತರ ಬದುಕಿನಲ್ಲಿ ಅಳವಡಿಸುವುದರ ಮೂಲಕ ಅವರು ಡೆಮಾಕ್ರಸಿ ಎಂದರೆ 'ಪ್ರಜೆಗಳ ಪ್ರಭುತ್ವ' ಅಥವಾ 'ಪ್ರಜಾ ಸರ್ಕಾರ' ಅಥವಾ

'ಪ್ರಜಾಧಿಕಾರ' ಅಥವಾ 'ಪ್ರಜಾಶಕ್ತಿ' ಎಂದು ಅರ್ಥೈಸಬಹುದು. ಇದನ್ನು ಪ್ರಜೆಗಳು ಬಯಸಿದಂತೆ ಆಡಳಿತ ನಡೆಸುವ ಸರ್ಕಾರದ ಕ್ರಮ ಎಂದು ಕರೆಯುತ್ತಾರೆ.

ಈ ವ್ಯವಸ್ಥೆಯಲ್ಲಿ ಆಳುವವರಿಗೂ ಆಳಿಸಿಕೊಳ್ಳುತ್ತಿರುವವರಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. 'ಪ್ರಜೆಗಳೇ ಪ್ರಭುಗಳು' 'ಸರ್ವರೂ ಸಮಾನರು'. ಜನತೆಯು ತನಗೆ ಸರಿ ಅನಿಸಿದವರನ್ನು ಅಧಿಕಾರದ ಗದ್ದುಗೆಗೆ ಏರಿಸುವ ಪ್ರಜಾಹಿತವನ್ನು ಹಾಗೂ ಕೆಳಗಿಳಿಸುವ ತಂತ್ರವಾಗಿರುತ್ತದೆ. ಪ್ರಜಾಪ್ರಭುತ್ವವೆಂಬ ಪದ್ಧತಿಯಲ್ಲಿ ಪ್ರಜಾಪ್ರಭುತ್ವದ ಅರ್ಥ. ಸ್ವರೂಪ, ಮತ್ತು ವ್ಯಾಪ್ತಿಯನ್ನು ತಿಳಿದುಕೊಳ್ಳಬೇಕಾದರೆ ಹಲವಾರು ರಾಜ್ಯ ಶಾಸ್ತ್ರಜ್ಞರು ತಮ್ಮದೇ ಆದ ಅಭಿಪ್ರಾಯಗಳನ್ನು ಹೇಳಿದ್ದಾರೆ. ಅಂತವರಲ್ಲಿ ಕೆಲವರು ಮುಖ್ಯವಾದುವರೆಂದರೆ.

* ಅಬ್ರಾಹಾಂ ಲಿಂಕನ್ – "ಪ್ರಜೆಗಳಿಗಾಗಿ ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ನಡೆಯುವ ಸರಕಾರವೇ ಪ್ರಜಾಪ್ರಭುತ್ವ".
* ಪೆರಿಕ್ಲಿಸ್ – "ಪ್ರಜಾಪ್ರಭುತ್ವವು ಹಲವರ ಆಡಳಿತ, ಕೆಲವರದಲ್ಲ".
* ಮೆಝಿನಿ – "ಎಲ್ಲರ ಅಭಿವೃದ್ಧಿಗಾಗಿ ದುಡಿಯುವ ಉತ್ತಮ ಹಾಗೂ ಜ್ಞಾನಿಗಳ ಸರ್ಕಾರವೇ ಪ್ರಜಾಪ್ರಭುತ್ವ".

ಪ್ರಜಾತಂತ್ರ ಅಥವಾ ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಸರಕಾರ ಅಥವಾ ಪ್ರಜೆಗಳ ಆಳ್ವಿಕೆ ಎನ್ನುವ ಅರ್ಥ ಬರುತ್ತದೆ. ಈ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜನಾಭಿಪ್ರಾಯ, ಅಧಿಕಾರ, ವಿಕೇಂದ್ರೀಕರಣ, ಹಾಗೂ ಶಾಸನ ಪ್ರಭುತ್ವ ಎನ್ನುವ ಉತ್ತಮ ಅಂಶಗಳು ಮೌಲ್ಯಗಳಾಗಿ ಪ್ರಜಾಸರ್ಕಾರಕ್ಕೆ ಅಪಾರ ಗೌರವವನ್ನು ತಂದುಕೊಟ್ಟಿದೆ.

ಸಂವಿಧಾನ ಪ್ರಸ್ತಾವನೆಯು "ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಸರ್ವಧರ್ಮ, ಸಮನ್ವಯದ ಪ್ರಜಾಪ್ರಭುತ್ವದ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರೀಕರಿಗೆ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಅಭಿವ್ಯಕ್ತಿ, ವಿಶ್ವಾಸ ಧರ್ಮ ಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃತ್ವದ ಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ ನಮ್ಮ ಸಂವಿಧಾನ ಸಭೆಯಲ್ಲಿ ೧೯೪೯ನೆಯ ನವೆಂಬರ್ ೨೬ನೇ ದಿನ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿಸಿ ಅರ್ಪಿಸಿದ್ದೇವೆ. ನಮ್ಮ ಸಂವಿಧಾನದ ತಳಹದಿಯಾಗಿರುವ ಸಮಾನತೆಯ ಪ್ರಾಶಸ್ತ್ಯವನ್ನು ನೀಡಿದೆ. ಸಂವಿಧಾನದ ಪ್ರಸ್ತಾವನೆ. ನೀತಿ ನಿರ್ದೇಶಕ ತತ್ವಗಳನ್ನು ಅದರ ಆತ್ಮ ಎಂದು ಮತ್ತು ಮೂಲಭೂತ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಅದರ ಹೃದಯ ಭಾಗವೆಂದು ಹೇಳಲಾಗುತ್ತದೆ.

ಸಂವಿಧಾನದ ಉಪಬಂಧಗಳ ಸಂಬಂಧದಲ್ಲಿ ಸಂದಿಗ್ಧತೆ ಉಂಟಾದ ಸನ್ನಿವೇಶಗಳಲ್ಲಿ ಅದರ ಪ್ರಸ್ತಾವನೆಯೇ ದಿಕ್ಸೂಚಿ ಮತ್ತು ಮಾರ್ಗದರ್ಶಿ. ಪ್ರಸ್ತಾವನೆಯು ಸಂವಿಧಾನದ ಒಂದು ಅವಿಭಾಜ್ಯ ಅಂಗ ಮತ್ತು ಮೂಲರಚನೆ. ಸಂವಿಧಾನದ ಪ್ರಸ್ತಾವನೆಯು ಕೇವಲ ಶಬ್ದ ಭಂಡಾರ ಹಾಗೂ ಪಾಲಿಸುವ ದಿಸೆಯಲ್ಲಿ ಒಂದು ಆದರ್ಶ ಮಾರ್ಗದರ್ಶಿಯಾಗಿದೆ.

ಸಂವಿಧಾನವೆಂಬುದು ಅದರಲ್ಲಿ ಲಿಖಿತ ಸಂವಿಧಾನವುದೊಂದು. ಒಂದು ರಾಜಕೀಯ ವ್ಯವಸ್ಥೆಯ ವ್ಯವಹಾರಗಳನ್ನು ನಿಯಂತ್ರಿಸಲು ಮಾಡಿಕೊಂಡಿರುವ ವ್ಯವಸ್ಥೆ. ಸ್ವಾತಂತ್ರ್ಯ ಮತ್ತು ಸ್ಥಿರತೆಯು ದೀರ್ಘಾನ್ವೇಷಣೆಯಲ್ಲಿ ಅನೇಕ ವ್ಯವಸ್ಥೆಗಳನ್ನು ರೂಪಿಸಿದೆ. ಎಲ್ಲಾ ದೇಶಗಳಲ್ಲೂ ಇಂತಹುದೊಂದು ಏರ್ಪಾಟು ಇರುತ್ತದೆ. ಅದರ ಪರಿಪೂರ್ಣತೆ ಮತ್ತು ಪ್ರಜಾಪ್ರತೆಯ ಪ್ರಮಾಣ ಪ್ರದೇಶದಿಂದ ಪ್ರದೇಶಕ್ಕೆ, ಯುಗದಿಂದ ಯುಗಕ್ಕೆ ಸರ್ವವಿಧಿತವಾದಂತ ಹಕ್ಕುಗಳನ್ನು ಈ ದಸ್ತಾವೇಜುಗಳಲ್ಲಿ ಸೇರಿಸಿ ಅವನ್ನು ನ್ಯಾಯಾಂಗದ ನಿಷ್ಕರ್ಷೆಗೆ ಒಡ್ಡುವದು ಸಾಧ್ಯವಿಲ್ಲವಾದರೂ ಒಂದು ಸ್ಥಾನವನ್ನು ನೀಡಲಾಗಿದೆ. ನಮ್ಮ ಮಾತೃಭೂಮಿಯ ರಾಜರುಗಳ ರಾಜ್ಯಗಳಿಗೆ ಕಳುಹಿಸಿದ ಗವರ್ನರ್‌ಗಳಿಗೂ ಪ್ರಥಮ ವಲಸಿಗರಿಗೂ ವಸಹಾತುಗಳನ್ನು ಸ್ಥಾಪಿಸಿದವರಿಗೂ ಸಂಘರ್ಷ ಏರ್ಪಟ್ಟಿತ್ತು. ಗವರ್ನರ್‌ಗಳು ಮತ್ತು ಅವರ ಮೇಲಿನವರು ರಚಿಸಿದ ಕಾನೂನುಗಳು ದಮನಕಾರಿಯೆಂದು ಭಾವಿಸಲಾಯಿತು. ಎಲ್ಲ ಲಿಖಿತ ಸಂವಿಧಾನಗಳಿಗೂ ತಪ್ಪದೇ ಅನ್ವಯವಾಗುವ ತತ್ವವೆಂದರೆ ಸಂವಿಧಾನಗಳಿಗೆ ವಿರುದ್ಧವಾದ ಕಾನೂನುಗಳು ಅಸಿಂಧು ಎಂದು ನಿರ್ಣಯವಾಗಿದೆ. ಸಂವಿಧಾನವೆಂಬುದು 'ಆತ್ಮವೇ ಇಲ್ಲದ ಮಗ್ಗಿ ಪುಸ್ತಕವಲ್ಲ ಅಥವಾ ತರ್ಕದ ಕಸರತ್ತು ಅಲ್ಲ. ಅದಕ್ಕೊಂದು ಮೆದುಳು ಇರುತ್ತದೆ. ಹೃದಯ, ಕೈಕಾಲು ಇರುತ್ತದೆ. ಎಲ್ಲಕ್ಕೂ ಮಿಗಿಲಾಗಿ ಆತ್ಮವಿರುತ್ತದೆ'. ಈ ಭಾಗಗಳೆಲ್ಲಾ ಅರೆ ಜೈವಿಕವಾದ ಪರಂಪರೆಗಳನ್ನು ಹೊಂದಿರುತ್ತವೆ. ಮತ್ತು ತಮ್ಮ ಸುತ್ತಲಿನ ಪರಿಸರದಿಂದ ಬಲಗೊಳ್ಳುತ್ತವೆ.[೩]

ಭಾರತದ ಸಂವಿಧಾನವು ಈ ಆದರ್ಶಗಳೊಂದಿಗೆ ವರ್ಗೀಕರಿಸಿ ಇತರೆ ಸಂದೇಶಗಳನ್ನು ಅವಲೋಕಿಸುವ ಹಾಗೂ ಚರ್ಚೆಗಳಿಗೆ ಅವಕಾಶ ನೀಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಂತಹ ಅಂತರ್ಗತ ಸಂದೇಶ ಎಲ್ಲಾ ಭಾರತೀಯ ಪ್ರಜೆಗಳ ಅನುಕೂಲಕ್ಕಾಗಿ ಇದೆ. ಇತರರಲ್ಲಿ ತಾವು ಒಬ್ಬರು ಎಂದು ಭಾವಿಸಿಕೊಳ್ಳುವಂತೆ ಮಾಡಬಹುದಲ್ಲದೆ ಅವರ ಸಾಮಾಜಿಕ ಸ್ಥಾನಮಾನ ಸುಧಾರಿಸುವಂತೆ ಮಾಡಬಹುದು. ಎಂಬುದು ಅಂಬೇಡ್ಕರರ ಅಭಿಪ್ರಾಯವಾಗಿದೆ.

೭.೩ ಗ್ರಾಮ ಪಂಚಾಯ್ತಿ

"ಸಂಘ ಜೀವಿಯಾಗಿ ಬದುಕತೊಡಗಿದ ಮಾನವ ತನ್ನ ಜೀವನ ವ್ಯವಸ್ಥೆಗೊಂದು ಕಟ್ಟುಪಾಡನ್ನು ರೂಪಿಸಿಕೊಂಡು, ಆರಂಭದಲ್ಲಿ ಆಡಳಿತದ ಒಂದು ನಿಯಂತ್ರಣ ಎಂದು ಭಾವಿಸದೆ ಅಘೋಷಿತ ಶಿಸ್ತಿಗೆ ಒಳಪಟ್ಟ, ಈ ಶಿಸ್ತು ಕಾಲಾಂತರ ಕ್ರಮವನ್ನು ಆಡಳಿತವನ್ನು ರೂಪಿಸಿಕೊಂಡಿತು. ವಿವಿಧ ಸಮೂಹಗಳಾಗಿ ಕಾಡು-ನಾಡಿನಲ್ಲಿ ಬದುಕುತ್ತಿದ್ದ ಮನುಷ್ಯ ತನ್ನಲ್ಲಿಯ ಅವ್ಯವಸ್ಥೆಗೊಂದು ವ್ಯವಸ್ಥೆ ಅಳವಡಿಸಿಕೊಂಡ. ಆ

ವ್ಯವಸ್ಥೆಯೇ ಕಾಲಾಂತರದಲ್ಲಿ ಆಡಳಿತ, ಆಡಳಿತ ಪದ್ಧತಿ, ಅಧಿಕಾರ, ಕರ್ತವ್ಯಗಳಾಗಿ ಹೆಸರು ಪಡೆದುಕೊಂಡವು. ಈ ಆಡಳಿತವು ಒಂದು ಸಾಮಾನ್ಯ ಸಂಘದಿಂದ ಹಿಡಿದು ರಾಷ್ಟ್ರಪತಿ ಕಛೇರಿವರೆಗೂ ಸಿದ್ಧಗೊಂಡಿದೆ.

ಭಾರತದ ಪರೋಕ್ಷ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳು ತಮ್ಮ ಪ್ರತಿನಿಧಿಯನ್ನು ಆಯ್ಕೆಮಾಡಿ ಅದರ ಮೂಲಕ ಆಡಳಿತ ನಡೆಸುತ್ತಾರೆ. ಪ್ರಜಾಪ್ರಭುತ್ವವು ರಾಷ್ಟ್ರದ ಕನಿಷ್ಠ ಘಟಕವಾದ ಗ್ರಾಮದಲ್ಲಿ ಬೇರೂರಿದಾಗ ಅದು ರಾಷ್ಟ್ರ ಮಟ್ಟದಲ್ಲಿ ಬಲಿಷ್ಠವಾಗುತ್ತದೆ. ಸ್ಥಳೀಯ ಸರ್ಕಾರಗಳು ಜನರಿಗೆ ರಾಜಕೀಯ ಪ್ರಜ್ಞೆ, ಜವಾಬ್ದಾರಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಸಮಾಜದ ಕೆಳಗಿನ ಹಂತದಿಂದ ಮೇಲಿನ ಹಂತದವರೆಗೆ ಎಲ್ಲ ವರ್ಗದ ಜನರು ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸುವುದರಿಂದ ರಾಜಕೀಯ ವ್ಯಕ್ತಿಗಳ ಮತ್ತು ಅಧಿಕಾರಿಗಳ ನಿರಂಕುಶತ್ವ ತಡೆಗಟ್ಟುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಾಗಿಲಿಗೆ ತಂದ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತವೆ. ಈ ಕಾರಣಕ್ಕಾಗಿ ಗ್ರಾಮಗಳಲ್ಲಿ ಗ್ರಾಮಪಂಚಾಯ್ತಿ ಆಡಳಿತವನ್ನು ಕಾರ್ಯರೂಪಕ್ಕೆ ತರಲಾಗಿದೆ.”[೪] ರಾಧಾ ಕಮಲ್ ಮುಖರ್ಜಿ ತಮ್ಮ ‘ಲೋಕಲ್ ಸೆಲ್ಫ್ ಗೌರ್ವನ್‌ಮೆಂಟ್ ಎನ್ಷಿಯಂಟ್ ಇಂಡಿಯಾ’ ಎಂಬ ಗ್ರಂಥದಲ್ಲಿ ಪ್ರಾಚೀನ ಭಾರತದಲ್ಲಿದ್ದ ವೈಶಿಷ್ಟ್ಯ ಪೂರ್ಣ ಅದ್ವಿತೀಯ ರಾಜಕೀಯ ವ್ಯವಸ್ಥೆಯತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ಅವರ ಪ್ರಕಾರ ಪ್ರಾಚೀನ ಭಾರತದಲ್ಲಿ ರಾಜ್ಯ ಮತ್ತು ಸಮಾಜಗಳೆರಡೂ ಸ್ವತಂತ್ರ ರಚನೆಯನ್ನು ಹೊಂದಿದ್ದವು. ಅವುಗಳು ನಿರ್ದಿಷ್ಟವಾಗಿ, ನಿಖರವಾಗಿ, ವ್ಯಾಖ್ಯಾನಿಸಲ್ಪಟ್ಟ ರಚನೆ ಮತ್ತು ಕಾರ್ಯಗಳನ್ನು ಪಡೆದಿದ್ದವು. ರಾಜ್ಯದ ಕಾರ್ಯವ್ಯಾಪ್ತಿಯ ನಿರ್ದಿಷ್ಟವಾದ ರೀತಿ, ಅಥವಾ ವ್ಯಾಪ್ತಿಯನ್ನು ಹೊಂದಿತ್ತು. ರಾಜ್ಯವು ಗ್ರಾಮೀಣ ಸಂಘಟನೆಯ ಪಂಚಾಯ್ತಿ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಮಧ್ಯ ಪ್ರವೇಶಿಸುತ್ತಿರಲಿಲ್ಲ. ಮಧ್ಯಪ್ರವೇಶಿಸುತ್ತಿರುವ ನೀತಿಯನ್ನು ಪರಸ್ಪರ ಗೌರವಿಸಿ ಅನುಸರಿಸಲಾಗುತ್ತಿತ್ತು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾಮಾಜಿಕ ಜೀವನವನ್ನು ರಾಜ್ಯವೇ ಪೂರ್ತಿಯಾಗಿ ನಿಯಂತ್ರಿಸುತ್ತಿತ್ತು. ಮೊದಲಿಗೆ ಸಮಾಜದ ನಿಯೋಗಿಯಾಗಿ ಕಾರ್ಯನಿರತವಾಗಿದ್ದ ರಾಜ್ಯ, ನಂತರ ಸಮಾಜದ ಒಡೆಯನಾಗಿ ಹೊರ ಹೊಮ್ಮಿತು. ಅಲ್ಲಿ ರಾಜ್ಯ ಕೇವಲ ರಾಜ್ಯದ ಮುಖ್ಯಸ್ಥನಾಗಿರದೆ ಸಮಾಜದ ಯಜಮಾನನೂ ಆಗಿದ್ದ. ಆದರೆ ಭಾರತದಲ್ಲಿ ವ್ಯವಸ್ಥಿತ ಸ್ಥಳೀಯ ಸ್ವಯಂ ಸರ್ಕಾರದ ಅಸ್ತಿತ್ವದಿಂದಾಗಿ ಅರಸು ಗ್ರಾಮೀಣ ಸಮುದಾಯಗಳ ಸಾರ್ವಭೌಮತ್ವದ ಹಕ್ಕುಗಳನ್ನು ಉಲ್ಲಂಘಿಸುತ್ತಿರಲಿಲ್ಲ. ಪಂಚಾಯ್ತಿ ವ್ಯವಸ್ಥೆ ಇತಿಹಾಸದುದ್ದಕ್ಕೂ ನಡೆದು ಬಂದ ಹಾದಿಯನ್ನು ಇಲ್ಲಿ ಗುರುತಿಸಲಾಗಿದೆ.

ವೇದಗಳ ಕಾಲದಲ್ಲಿ ಗ್ರಾಮೀಣ ಸಮುದಾಯದ ಅಧಿಕಾರವನ್ನು ಒಬ್ಬ ಗೌರವಾನ್ವಿತ ಅಧಿಕಾರಿ ನೋಡಿಕೊಳ್ಳುತ್ತಿದ್ದ. ಇವನಿಗೆ ಸಲಹೆ ಮತ್ತು ನಿರ್ದೇಶನವನ್ನು ಗ್ರಾಮದಲ್ಲಿನ ವಯೋವೃದ್ಧರ ಮಂಡಳಿಯೊಂದು ನೀಡುತ್ತಿತ್ತು. ವೇದಗಳಲ್ಲಿ ಸಮಿತಿ (ಸಂ+ಇತಿ) ಒಂದೆಡೆ ಸೇರುವುದು) ಮತ್ತು ಸಭಾ ಎಂಬ ವ್ಯವಸ್ಥೆಗಳ ಬಗ್ಗೆ ಉಲ್ಲೇಖವಿದೆ.

ರಾಮಾಯಣ ಕಾಲದಲ್ಲಿ ಪಂಚಾಯ್ತಿಗಳಿದ್ದವು. ಇವುಗಳ ಮುಖ್ಯಸ್ಥರನ್ನು ಪಂಚ ಪರವೇಶ್ವರರು, ಪಂಚರು ಎಂದು ಕರೆಯುತ್ತಿದ್ದರು. ಗ್ರಾಮದವರೆಲ್ಲ ಸೇರಿ ಇವರನ್ನು ಆಯ್ಕೆ ಮಾಡುತ್ತಿದ್ದರು ಎಂದು ಎಸ್. ಕೆ. ಡೇ 'ಪಂಚಾಯ್ತಿರಾಜ್' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ರಾಮಾಯಣ ಕಾಲದಲ್ಲಿ ಗ್ರಾಮದ ನಾಯಕನನ್ನು 'ಗ್ರಾಮೀಣ' ಎಂದು ಕರೆಯುತ್ತಿದ್ದರು. ಇವನ ಸ್ಥಾನಮಾನ ಉನ್ನತವಾಗಿತ್ತಲ್ಲದೆ ಅತಿ ಹೆಚ್ಚಿನ ಘನತೆಹೊಂದಿತ್ತು. ಗ್ರಾಮಿಣಿಯು ಗ್ರಾಮದ ರಕ್ಷಣೆಯನ್ನು ನೋಡಿಕೊಳ್ಳುತ್ತಿದ್ದನು.

ಮನುವಿನ ಕಾಲದಲ್ಲಿ ಗ್ರಾಮಾಡಳಿತದ ವ್ಯವಸ್ಥೆಯು ಅಧಿಕಾರಿಗಳ ಏಣಿಶ್ರೇಣಿ ತೆರನಾಗಿ ಕಂಡು ಬರುತ್ತದೆ.

ಗ್ರಾಮಿಕ – ಗ್ರಾಮಾಧಿಕಾರಿ

ವಿಶಾಂತ – ಹತ್ತು ಗ್ರಾಮಗಳ ಮುಖ್ಯಸ್ಥ

ಶತಗ್ರಾಮಾಧಿಪತಿ – ನೂರು ಗ್ರಾಮಗಳ ಮುಖ್ಯಸ್ಥ

ಸಹಸ್ರ ಗ್ರಾಮಪತಿ – ಸಾವಿರಾರು ಗ್ರಾಮಗಳ ಮುಖ್ಯಸ್ಥ

ಈ ಮೇಲಿನ ಗ್ರಾಮಾಧಿಕಾರಿಗಳನ್ನು ಮತ್ತು ಮುಖ್ಯಸ್ಥರನ್ನು ಯಾವ ರೀತಿ ನೇಮಿಸಲಾಗುತ್ತಿತ್ತು ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಆದರೆ ಕೆಲವು ಇತಿಹಾಸಕಾರರ ಪ್ರಕಾರ ಈ ಅಧಿಕಾರಿಗಳನ್ನು ರಾಜನೇ ನೇಮಿಸುತ್ತಿದ್ದ. ಕೆಲವರ ಪ್ರಕಾರ ಗ್ರಾಮೀಣ ಜನರೇ ತಮ್ಮ ಅಧಿಕಾರಿಗಳನ್ನು ಚುನಾಯಿಸುತ್ತಿದ್ದರು. ಇನ್ನೂ ಹಲವರ ಅಭಿಪ್ರಾಯದಲ್ಲಿ ಈ ಅಧಿಕಾರಿಗಳ ಸ್ಥಾನಗಳು ತಂದೆಯಿಂದ ಮಗನಿಗೆ ವಂಶಪಾರಂಪರ್ಯವಾಗಿ ಹಸ್ತಾಂತರವಾಗುತ್ತಿದ್ದವು.

ಕ್ರಿಪೂ. ಅನೇಕ ಶತಮಾನವು ಭಾರತದ ಪ್ರಾಚೀನ ಇತಿಹಾಸದಲ್ಲಿ ಇದೊಂದು ಮಹತ್ವದ ಘಟ್ಟ ಎನ್ನಬಹುದು. ಇದು ಬುದ್ಧನ ಕಾಲ ಪ್ರಾರಂಭವಾಗುತ್ತದೆ. ಮುಂದೆ ಚಂದ್ರಗುಪ್ತ ಮತ್ತು ಅಶೋಕನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿತು. ಈ ಅವಧಿಯಲ್ಲಿ ಗ್ರಾಮಪಂಚಾಯ್ತಿಗಳು, ಗ್ರಾಮ ಮಂಡಳಿ ನೇರ ನಿಯಂತ್ರಣದಲ್ಲಿದ್ದವು. ಗ್ರಾಮಿಕರ ಮಂಡಳಿಯು ಗ್ರಾಮೀಣ ಪ್ರದೇಶದ ಉಸ್ತುವಾರಿ ಮತ್ತು ನಿರ್ವಹಣೆಯನ್ನು ಮಾಡುತ್ತಿತ್ತು. ಗ್ರಾಮ ಮಂಡಳಿಯು ಈ ಉಸ್ತುವಾರಿ ಮತ್ತು ನಿರ್ವಹಣೆ ಒಂದೇ ಅದರ ಗೌರವಾನ್ವಿತ ಸ್ಥಾನವನ್ನು ಸೂಚಿಸುತ್ತದೆ. ಕಿಂಗ್‌ಸ್ಲೇ ಡೇವಿಸ್‌ರವರ ಪ್ರಕಾರ ಗ್ರಾಮವಾಸಿಗಳು ತಮ್ಮ ರೂಢಿ ಮತ್ತು ಸಂಪ್ರದಾಯಕ್ಕನುಗುಣವಾಗಿ ಗ್ರಾಮದ ಮುಖ್ಯಸ್ಥನನ್ನು ಆಯ್ಕೆ ಮಾಡುತ್ತಿದ್ದರು.

ಮಗಧರ ಕಾಲದಲ್ಲಿನ ಗ್ರಾಮೀಣ ಸರ್ಕಾರ ಆಡಳಿತ ಕುರಿತಂತೆ ಐತಿಹಾಸಿಕ ದಾಖಲೆ ಮತ್ತು ಮಾಹಿತಿಗಳ ಕೊರತೆಯಿದೆ. ಈ ಕಾಲದಲ್ಲಿಯೂ ಗ್ರಾಮೀಣ ಸಮುದಾಯಗಳು ತಮ್ಮ ಸಾಂಪ್ರದಾಯಿಕ ಸ್ವಾಯತ್ತತೆ, ಸಾರ್ವಭೌಮತ್ವವನ್ನು ಹಾಗೆ ಉಳಿಸಿಕೊಂಡು ಬಂದವು. ಈ ಕಾಲದಲ್ಲಿ ಗ್ರಾಮಗಳ ಸ್ವಯಂ

ಆಡಳಿತ ಮತ್ತು ಆಂತರಿಕ ವ್ಯವಹಾರದ ಕಾರ್ಯ ನಿರ್ವಹಣೆಗೆ ಹೊರಗಿನ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲವೆನ್ನಬಹುದು.

ಕೌಟಿಲ್ಯನ ಕಾಲದಲ್ಲಿದ್ದ ಸ್ವಾಯತ್ತ ಗ್ರಾಮೀಣ ಸಮುದಾಯಗಳ ಮೇಲೆ ಅವನು ಬರೆದ ಅರ್ಥಶಾಸ್ತ್ರ ಸಾಕಷ್ಟು ಬೆಳಕು ಚೆಲ್ಲುತ್ತದೆ. ಅವನ ಅರ್ಥಶಾಸ್ತ್ರವನ್ನು ಹಿಂದೂ ಅರಸರ ಆಡಳಿತ ನಿರ್ದೇಶನ ಗ್ರಂಥವೆಂದೇ ಪರಿಗಣಿಸಲಾಗಿದೆ. ಅವನ ಅರ್ಥಶಾಸ್ತ್ರದಲ್ಲಿ ಈ ಕೆಳಗಿನ ಗ್ರಾಮೀಣಾಡಳಿತ ಅಧಿಕಾರಿಗಳನ್ನು ಕುರಿತು ಉಲ್ಲೇಖಿಸಲಾಗಿದೆ.

ಗ್ರಾಮೀಣಾಡಳಿತಾಧಿಕಾರಿಗಳು :

ಅಧ್ಯಕ್ಷ–ಗ್ರಾಮದ ಮುಖ್ಯಸ್ಥ

ಸಂಖ್ಯಾಯಕ–ಲೆಕ್ಕ ಪತ್ರಾಧಿಕಾರಿ

ಸ್ಥಾನಿಕ–ಸ್ಥಳೀಯಧಿಕಾರಿ

ಅನಿಕಾಶ್ಥಾ–ಪಶುಚಿಕಿತ್ಸಕ

ಜಂಗಕಾರಿಕ–ಸಂದೇಶ ವಾಹಕ

ಚಿಕಿತ್ಸಕ–ಆರೋಗ್ಯಾಧಿಕಾರಿ

ಗುಪ್ತರ ಕಾಲದಲ್ಲಿ ಗ್ರಾಮಾಡಳಿತವು ಮೌರ್ಯರ ಕಾಲದಲ್ಲಿನ ಗ್ರಾಮಾಡಳಿತವನ್ನು ಹೋಲುತ್ತದೆ. ಉತ್ತರ ಮತ್ತು ದಕ್ಷಿಣ ಭಾರತದಲ್ಲಿನ ಬಹುತೇಕ ಗ್ರಾಮಗಳು ಸಾಂಪ್ರದಾಯಿಕ ನಾಯಕರನ್ನು ಹೊಂದಿದ್ದವು. ಗ್ರಾಮದ ಮುಖ್ಯಸ್ಥ ಮತ್ತು ಲೆಕ್ಕ ಪಟ್ಟಾಧಿಕಾರಿಯು ಗುಪ್ತರ ಕಾಲದಲ್ಲಿಯೂ ಮಹತ್ವ ಹೊಂದಿದ್ದಲ್ಲದೆ ಸಾಕಷ್ಟು ಕ್ರಿಯಾಶೀಲನಾಗಿದ್ದ.

ಪ್ರತಿಹಾರರು ನಿರಂಕುಶ ಪ್ರಭುತ್ವಕ್ಕೆ ಹೆಸರುವಾಸಿಯಾಗಿದ್ದರು. ಅಧಿಕಾರವು ತಮ್ಮ ಕೈಯಲ್ಲಿ ಕೇಂದ್ರೀಕರಿಸಿಕೊಳ್ಳಲು ಇವರು ಊಳಿಗಮಾನ್ಯ ಪದ್ಧತಿಯನ್ನು ಪ್ರೋತ್ಸಾಹಿಸಿದರು. ಇಂತಹ ಪ್ರತಿಕೂಲ ಪರಿಸ್ಥಿತಿ ಮಧ್ಯೆಯೂ ಗ್ರಾಮಗಳ ಸ್ವಯಂ ಆಡಳಿತ ಮುಂದುವರೆಯಿತು. ಪ್ರತಿಹಾರರ ಕಾಲದಲ್ಲಿನ ಗ್ರಾಮಾಧಿಕಾರಿಗಳು ಈ ರೀತಿಯಾಗಿದ್ದರು.

ಬಸಗ್ರಾಮಿಕ–೧೦ ಗ್ರಾಮಗಳ ಗರ್ವನರ್, ಆಡಳಿತಾಧಿಕಾರಿ

ಕ್ಷೇತ್ರಪ–ಕೃಷಿ ಮೇಲ್ವಿಚಾರಕ

ಮಹಾಬೋಗಿಕ–ಕಂದಾಯಾಧಿಕಾರಿ

ಸ್ವಯಂ ಅಧಿಕಾರ, ಸ್ವಾಯತ್ತತೆ ಹೊಂದಿದ ಪಂಚಾಯ್ತಿಗಳು ಮೊಗಲ ಮತ್ತು ಬ್ರಿಟೀಷರ ಕಾಲದಲ್ಲಿ ಅವನತಿಯತ್ತ ಸಾಗಿದವು. ಭೂಕಂದಾಯದ ನಿಗದಿ, ನ್ಯಾಯಾಲಯಗಳ ಸ್ಥಾಪನೆ, ಬ್ರಿಟೀಷರು ಅನುಸರಿಸಿದ ಅಧಿಕಾರ ಕೇಂದ್ರೀಕರಣ ಧೋರಣೆ ಮತ್ತು ಜಹಾಗೀರುದಾರರ ವ್ಯವಸ್ಥೆ ಇವೇ ಮುಂತಾದ ಕಾರಣಗಳಿಂದ ಪಂಚಾಯ್ತಿಗಳು ತಮ್ಮ ಮೊದಲಿನ ಮಹತ್ವ ಕಳೆದುಕೊಂಡವು.

ಜವಾಹರ್‌ಲಾಲ್ ನೆಹರೂ ತಮ್ಮ ದಿ ಡಿಸ್ಕವರಿ ಆಫ್ ಇಂಡಿಯಾ ಗ್ರಂಥದಲ್ಲಿ ಪಂಚಾಯ್ತಿಗಳ ಕಾರ್ಯವನ್ನು ಕುರಿತು ಹೇಳಿದ್ದಾನೆ. ಪ್ರಾಚೀನ ಕಾಲದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗದಂತೆ ಕಾರ್ಯ ನಿರ್ವಹಿಸುತ್ತಿದ್ದವು. ಗ್ರಾಮದಲ್ಲಿನ ಕೃಷಿಕರಿಂದ ಕಂದಾಯ ಸಂಗ್ರಹಿಸಿ ರಾಜ್ಯಕ್ಕೆ ಪಾವತಿಸುವ ಕೆಲಸವನ್ನು ಪಂಚಾಯ್ತಿಗಳು ಮಾಡುತ್ತಿದ್ದವೆಂದು ಹೇಳಿದ್ದಾರೆ.

ಅಲ್ಟೇಕರ್‌ರವರ ಪ್ರಕಾರ ಪ್ರತಿಯೊಂದು ಗ್ರಾಮೀಣ ಮಂಡಳಿ ತನ್ನ ಸಂವಿಧಾನವನ್ನು ತಾನೇ ರಚಿಸಿಕೊಳ್ಳುತ್ತಿತ್ತು. ಇವುಗಳ ಮುಖ್ಯ ಕಾರ್ಯವೆಂದರೆ ಭೂ ಕಂದಾಯವನ್ನು ಸಂಗ್ರಹಿಸುವುದು, ಗ್ರಾಮಗಳಲ್ಲಿ ಉದ್ಭವಿಸುವ ಜಗಳ ತಂಟೆಗಳನ್ನು ಬಗೆಹರಿಸುವುದು, ಸಾರ್ವಜನಿಕರಿಗೆ ಕಾಲುವೇ, ರಸ್ತೆ ಜಲಾಶಯ ಮುಂತಾದವುಗಳನ್ನು ನಿರ್ಮಿಸುವುದಾಗಿತ್ತು. ಹೀಗೆ ಜೀವನವನ್ನು ಸಮೃದ್ಧವಾಗಿ ಹಾಗೂ ವ್ಯವಸ್ಥಿತವಾಗಿ ನಡೆಸಲು ರಾಜಕೀಯ ಬಲವನ್ನು ಬಳಸಿಕೊಂಡು ಸಮಾಜವನ್ನು ಆರೋಗ್ಯಪೂರ್ಣವಾಗಿ ಮುನ್ನಡಿಸಿಕೊಂಡ ಬರೆದ ದಾಖಲೆಗಳನ್ನು ನಾವು ಕಾಣುತ್ತೇವೆ.

ಜಿಲ್ಲೆಯ ಛಲವಾದಿ ಸಮುದಾಯದ ರಾಜಕೀಯ ಕ್ಷೇತ್ರದಲ್ಲಿ ಬಹಳಷ್ಟು ಹಿಂದುಳಿದಿದ್ದಾರೆ. ಕೇವಲ ಕೆಲವರು ಮಾತ್ರ ಉನ್ನತ ಹುದ್ದೆಯನ್ನು ಪಡೆದುಕೊಂಡಿದ್ದಾರೆ. ಉಳಿದವರು ಕೇವಲ ಗ್ರಾಮ ಪಂಚಾಯತಿಗೆ ಮಾತ್ರ ಸೀಮಿತವಾಗಿ ಉಳಿದುಕೊಂಡಿದ್ದಾರೆ. ರಾಜಕೀಯ ರಂಗದಲ್ಲಿ ಸೇವೆಗೈದ ಮಹನೀಯರನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ಹೇಳಲಾಗಿದೆ.

೭.೪ ದಿ॥ ಶ್ರೀಮಾನ್ ರುದ್ರಪ್ಪ ಈರಪ್ಪ ದೊಡ್ಡಮನಿ

ಈರಪ್ಪ ಮತ್ತು ಲಕ್ಕವ್ವ ದಂಪತಿಗಳ ಸುಪುತ್ರರಾಗಿ ರೋಣ ತಾಲೂಕಿನಲ್ಲಿ ರುದ್ರಪ್ಪ ಹುಟ್ಟಿದರು. ಇವರು ಮುಂದೆ ರಾಜಕೀಯ ರಂಗ ಪ್ರವೇಶಿಸಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಆಗಿನ ಕಾಲದಲ್ಲಿ ಮಾಡಿದ್ದಾರೆ. ಪ್ರಥಮವಾಗಿ ಅವರು ತಾಲೂಕಾ ಡೆವಲಪ್‌ಮೆಂಟ ಬೋರ್ಡ್ ಸದಸ್ಯರಾಗಿ ಆಯ್ಕೆಗೊಂಡು ಸಾಕಷ್ಟು ಜನಪರ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅವರು ಧಾರವಾಡ ಜಿಲ್ಲೆ 'ಹರಿಜನ ಗಿರಿಜನ ಪರಿಷತ್ತು' ಇದರ ಉಪಾಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದಾರೆ. ನರಗುಂದ ತಾಲೂಕಿನ ಶಾಸಕರಾಗಿ ೧೯೬೯ರಲ್ಲಿ ಪ್ರಥಮವಾಗಿ ಆಯ್ಕೆಗೊಂಡರು. ಸಮುದಾಯಕ್ಕಾಗಿ ಹಗಲಿರುಳು ಸೇವೆ ಗೈದಿದ್ದಾರಲ್ಲದೆ ಜಿಲ್ಲೆ ಮತ್ತು ರಾಜ್ಯದಲ್ಲಿ ಒಳ್ಳೆಯ ಹೆಸರು ಉಳಿಸಿಕೊಂಡಿದ್ದಾರೆ.

೭.೫ ಬಸವರಾಜ ಮುದಕಪ್ಪ ಕಡೇಮನಿ

ಇವರು ಬಸವರಾಜ ಕಡೇಮನಿಯವರೆಂದೇ ಹೆಸರು ಪಡೆದಿದ್ದಾರೆ. ಮುದಕಪ್ಪ ಮತ್ತು ಭರಮವ್ವ ಇವರ ಮಗನಾಗಿ ೧೯೭೦ ಜುಲೈ ೨೦ರಂದು ಜನ್ಮ ತಾಳಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಲಕೇರಿಯಲ್ಲಿ ವ್ಯಾಸಂಗ ಮಾಡಿದ್ದಾರೆ. ಪ್ರೌಢಶಾಲಾ ಶಿಕ್ಷಣವನ್ನು ರೋಣದಲ್ಲಿ ಮುಗಿಸಿ, ಪಿ.ಯು.ಸಿ. ಶಿಕ್ಷಣವನ್ನು ತಿಮ್ಮಾಪುರದಲ್ಲಿ, ಸಿ.ಪಿ.ಎಡ್. ವ್ಯಾಸಂಗವನ್ನು ಗದುಗಿನ ಪ್ರಭುರಾಜೇಂದ್ರ ಕಾಲೇಜಿನಲ್ಲಿ ಮುಗಿಸಿ ಮುಂದೆ ಪದವಿಯನ್ನು ಎಂ.ಜಿ. ಕಾಲೇಜಿನಿಂದ ಪಡೆದಿದ್ದಾರೆ.

೧೯೯೩ರಲ್ಲಿ ರೋಣ ತಾಲೂಕಿನ ಹಾಲಕೇರಿ ಗ್ರಾಮದಲ್ಲಿ ಡಿ.ಎಸ್.ಎಸ್. ಗ್ರಾಮ ಶಾಖೆಯ ಸಂಚಾಲಕರಾಗಿ ಬುದ್ಧ, ಬಸವ, ಅಂಬೇಡ್ಕರ ಅವರ ಜಯಂತಿ ಅಂಗವಾಗಿ ೩೨ ಜೋಡಿಗಳಿಗೆ ಸಾಮೂಹಿಕ ವಿವಾಹ ಮಾಡಿದ್ದಾರೆ. ಇವರು ಸಮುದಾಯದ ಜನರಿಗೆ ಹಾಲಕೇರಿ ಗ್ರಾಮದಲ್ಲಿ ಹೊಟೆಲ್ ಹಾಗೂ ಕೆರೆಗಳಿಗೆ ಪ್ರವೇಶಿಸುವ ಅವಕಾಶ ಮಾಡಿಕೊಟ್ಟಿದ್ದಾರೆ. ೧೯೯೨ರಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ ಜಯಂತಿ ಅಂಗವಾಗಿ ಸುಮಾರು ಆರು ವರ್ಷಗಳ ಕಾಲ ಸಾಮೂಹಿಕ ಮದುವೆ ಹಾಗೂ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅಂಬೇಡ್ಕರ ಯುವ ಸೇನಾ ಸಮಿತಿಯ ರಾಜ್ಯ ಸಮಿತಿಯ ಉಪಾಧ್ಯಕ್ಷರಾಗಿ ೨೦೦೭ ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಗದಗ ಜಿಲ್ಲೆ ಸಮತಾ ಸೈನಿಕ ದಳದ ಜಿಲ್ಲಾ ಅಧ್ಯಕ್ಷರಾಗಿ ಪ್ರತಿವರ್ಷ ಡಿಸೆಂಬರ್ ೬ರಂದು ನಡೆಯುವ ಡಾ. ಬಿ. ಆರ್. ಅಂಬೇಡ್ಕರ್ ಮಹಾಪರಿನಿರ್ವಾಣ ಕಾರ್ಯಕ್ರಮಕ್ಕೆ ಗದಗ ಜಿಲ್ಲೆಯಿಂದ ೫೦೦ ಜನರನ್ನು ೬ ವರ್ಷಗಳ ಕಾಲ ಬಾಂಬೆ (ದಾದರ)ಗೆ ಕರೆದುಕೊಂಡು ಹೋಗಿದ್ದಾರೆ. ಹಾಲಕೇರಿ ಗ್ರಾಮದಲ್ಲಿ ೨೦೦೮ರಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ಸರಕಾರದಿಂದ ಪರಿಹಾರ ದೊರಕಿಸಿ ಕೊಟ್ಟಿದ್ದಾರೆ. ಈ ಸಮುದಾಯ ನೋವು-ಸಂಕಷ್ಟಗಳಿಂದ ಬಳಲುತ್ತಿರುವ ಸಂದರ್ಭದಲ್ಲಿ ಬೌದ್ಧ ಧರ್ಮದ ಬಂತೇಜಿಯವರನ್ನು ಗ್ರಾಮಕ್ಕೆ ಕರೆತಂದು ಶಾಂತಿ ಸಭೆ ನಡೆಸಿದ್ದಾರೆ. ಜಿಲ್ಲಾ ಯುವ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ, ೨೦೦೩ರಿಂದ ಗದಗ ಜಿಲ್ಲಾ ಪರಿಶಿಷ್ಟ ಜಾತಿ ಕಾಂಗ್ರೆಸ್ ವಿಭಾಗದ ಜಿಲ್ಲಾ ಅಧ್ಯಕ್ಷರಾಗಿ ಈವರೆಗೆ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳು ಮತ್ತು ಸಮುದಾಯದ ಜನರಿಗೆ ಸರಕಾರದ ಸಾಲಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಹಾಲಕೇರಿ ಗ್ರಾಮದಲ್ಲಿ ರಾಜ್ಯಮಟ್ಟದ ಕಬಡ್ಡಿ ಪಂದ್ಯಗಳನ್ನು ನಡೆಸಿದ್ದಾರೆ. ಜಿಲ್ಲೆಯ ಛಲವಾದಿ ಮಹಾಸಭಾದ ಅಧ್ಯಕ್ಷರಾಗಿ ಸಾಕಷ್ಟು ರಚನಾತ್ಮಕ ಕಾರ್ಯಕ್ರಮ ಹಮ್ಮಿಕೊಂಡಿರುವರಲ್ಲದೆ ಡಾ. ಬಿ. ಆರ್. ಅಂಬೇಡ್ಕರ ಅವರ ಜೀವನ ಚರಿತ್ರೆ ಬಗ್ಗೆ ಪುಸ್ತಕವನ್ನು ಬರೆದಿದ್ದಾರೆ.

ಶ್ರೀ ಫಕೀರಪ್ಪ ದೊಡ್ಡಮನಿ, ಜಿ.ಪಂ. ಸಾ॥ ಹದ್ಲಿ, ತಾ॥ ನರಗುಂದ ಇವರು, ಶ್ರೀಮತಿ ಅನ್ನಪೂರ್ಣ ಹುಚ್ಚಪ್ಪ ಛಲವಾದಿ, ಸಾ॥ ಡಂಬಳ, ತಾ॥ ಮುಂಡರಗಿ ಹಾಗೂ ಶ್ರೀ ಎಫ್. ವಾಯ್. ದೊಡ್ಡಮನಿ, ಮಾಜಿ

ಅಧ್ಯಕ್ಷರು, ಪುರಸಭೆ, ನರಗುಂದ ಇವರು ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ನಾನಾ ಕ್ಷೇತ್ರದಲ್ಲಿ ಅನುಭವ ಹೊಂದಿ ಶೋಷಿತ ಜನಾಂಗಗಳ ಸೇವೆಯಲ್ಲಿ ನಿರತರಾಗಿದ್ದಾರೆ.

೭.೬ ಜಿಲ್ಲೆಯ ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಯ ಸದಸ್ಯರು

ಜಿಲ್ಲೆಯ ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಯ ಸದಸ್ಯರು

ಅ.ನಂ	ಗ್ರಾಮ/ ತಾಲೂಕ ಪಂಚಾಯಿತಿ ಸದಸ್ಯರ ಹೆಸರು	ಗ್ರಾಮ ಪಂಚಾಯಿತಿ	ಶಿಕ್ಷಣ	ವಯಸ್ಸು	ಆಯ್ಕೆ	ಉದ್ಯೋಗ	ರಾಜಕೀಯ ಪಕ್ಷ
೧	ಶ್ರೀಮತಿ ಶೋಭಾ.ಎಚ್ಚರಪ್ಪ ಛಲವಾದಿ	ಹೊಳೆಆಲೂರು	೧೦ನೇ	೩೦	ಪ.ಜಾ	ಮನೆಕೆಲಸ	ಕಾಂಗ್ರೇಸ್
೨	ಶ್ರೀಮತಿ ಲಿಂಗವ್ವ ಯಲ್ಲಪ್ಪ ಛಲವಾದಿ	ಅಸೂಟಿ	ಇಲ್ಲ	೫೮	ಪ.ಜಾ	ಮನೆಕೆಲಸ	ಕಾಂಗ್ರೇಸ್
೩	ಶ್ರೀ ಬಸುರಾಜ ಹನಮಪ್ಪ ಛಲವಾದಿ	ಮೇಣಸಗಿ	ಪಿ.ಯು.ಸಿ	೪೨	ಪ.ಜಾ	ಒಕ್ಕಲತನ	ಬಿಜೆಪಿ
೪	ಶ್ರೀ ಮುತ್ತಪ್ಪ ಮುದಕಪ್ಪ ಕಡೆಮನಿ	ಹಾಳಕೇರಿ	೭ನೇ	೩೮	ಪ.ಜಾ	ಒಕ್ಕಲತನ	ಕಾಂಗ್ರೇಸ್
೫	ಶ್ರೀ ಬಸುವರಾಜ ಬಸಪ್ಪ ಛಲವಾದಿ	ಮಲ್ಲಾಪೂರ	೧೦ನೇ	೩೨	ಪ.ಜಾ	ಕವಲುಗಾರ	ಪಕ್ಷೇತರ
೬	ಶ್ರೀ ಸತ್ಯಪ್ಪ ಲಿಂಗಪ್ಪ ಛಲವಾಗಿ	ಡೋಣಿ	ಇಲ್ಲ	೬೦	ಪ.ಜಾ	ಮನೆಕೆಲಸ	ಕಾಂಗ್ರೇಸ್
೮	ಶ್ರೀಮತಿ ದುರಗವ್ವ ದೇವಪ್ಪ ಛಲವಾದಿ	ಡೋಣಿ	೬ನೇ	೪೫	ಪ.ಜಾ	ಮನೆಕೆಲಸ	ಕಾಂಗ್ರೇಸ್
೯	ಶ್ರೀಮತಿ ನಿಂಗವ್ವ ಯಲ್ಲಪ್ಪ್ ಛಲವಾದಿ	ಅಸೂಟಿ	೬ನೇ	೩೫	ಪ.ಜಾ	ಮನೆಕೆಲಸ	ಕಾಂಗ್ರೇಸ್
೧೦	ಶ್ರೀಮತಿ ಸುಸವ್ವ ನಾಗಪ್ಪ ಛಲವಾದಿ	ಚಿಕ್ಕನರಗುಂದ	ಇಲ್ಲ	೪೬	ಪ.ಜಾ	ಮನೆಕೆಲಸ	ಕಾಂಗ್ರೇಸ್
೧೧	ಶ್ರೀ ಬಸವರಾಜ ಜಕ್ಕಮ್ಮನವರ	ಚಿಂಚಲಿ	೫ನೇ	೩೫	ಪ.ಜಾ	ಒಕ್ಕಲತನ	ಕಾಂಗ್ರೇಸ್
೧೨	ಶ್ರೀಮತಿ ನೀಲವ್ವ ಸಿದ್ದಪ್ಪ ದೊಡ್ಡಮನಿ	ಬೆಳಹೊಡ	೨ನೇ	೪೨	ಪ.ಜಾ	ಮನೆಕೆಲಸ	ಕಾಂಗ್ರೇಸ್
೧೩	ಫಕ್ಕೀರವ್ವ ಕೋಳಪ್ಪ ಕಡಿಯವರು	ಹುಯಿಲಗೋಳ	೧ನೇ	೨೬	ಪ.ಜಾ	ಮನೆಕೆಲಸ	ಕಾಂಗ್ರೇಸ್
೧೪	ದೇವಕ್ಕ ಬಸಪ್ಪ ಕಡಿಯವರು	ಹುಯಿಲಗೋಳ	ಇಲ್ಲ	೫೫	ಪ.ಜಾ	ಕೃಷಿ ಕೆಲಸ	ಕಾಂಗ್ರೇಸ್
೧೫	ನಾಗರಾಜ ಎನ್. ನಡುಗಡ್ಡಿ	ಕದಡಿ	ಪಿ.ಯು.ಸಿ.	೨೯	ಪ.ಜಾ	ಕೃಷಿ ಕೆಲಸ	ಬಿ.ಜೆ.ಪಿ.

ಪಂಚಾಯಿತಿ ಆಯ್ಕೆಗೊಂಡ ಸದಸ್ಯರಿಗೆ ಸಂದರ್ಶಿದಾಗ ಕುಟುಂಬದ ಸಾಮಾಜಿಕ ಆರ್ಥಿಕ, ರಾಜಕೀಯ ಹಿನ್ನೆಲ್ಲೆ ಉದ್ಯೋಗ ಶಿಕ್ಷಣ, ನಿರ್ಣಯದ ಸಾಮರ್ಥ್ಯ, ಸಭೆಗಳಲ್ಲಿ ಭಾಗವಹಿಸುವಿಕೆ ಮತ್ತು ಪಂಚಾಯಿತಿಗಳಲ್ಲಿ ಸಧ್ಯ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳಲಾಯಿತು. ಬಹಳಷ್ಟು ಸದಸ್ಯರು ಅಕ್ಷರ ಜ್ಞಾನ ಇಲ್ಲದ ಕಾರಣ ಹಾಗೂ ಸಮರ್ಥವಾಗಿ ನಿರ್ಣಯ ತೆಗೆದುಕೊಳ್ಳುವುದು ಇವರಿಗೆ ಸಾಧ್ಯವಾಗಿಲ್ಲ, ಸರಕಾರ ಯೋಜನೆಗಳ ಬಗ್ಗೆ ತಿಳುವಳಿಕೆ ಇಲ್ಲದಿರುವದರಿಂದ ಮೇಲ್ಜಾತಿಯ ಗ್ರಾಮ

ಪಂಚಾಯಿತಿಯ ಅಧ್ಯಕ್ಷರ ಹಾಗೂ ಸದಸ್ಯರುಗಳ ಹಿಂಬಾಲಕರಾಗಿದ್ದಾರೆ. ಹೀಗಾಗಿ ಅವರು ಹೇಳಿದಂತೆ ರಾಜಕೀಯ ಮಾಡುತ್ತಾರೆ. ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಇವರಿಗೆ ಸಾಧ್ಯವಾಗಿಲ್ಲ. ಸಮುದಾಯಕ್ಕಾಗಿ ಕೆಲವು ಸದಸ್ಯರು ಕೆಲಸಗಳನ್ನು ಮಾಡಿದ್ದಾರೆ. ಬಹಳಷ್ಟು ಸದಸ್ಯರು ಸಮುದಾಯದ ಪ್ರಗತಿಗಾಗಿ ದುಡಿಯಲು ಹಿಂದೆ ಬಿದ್ದಿದ್ದಾರೆ. ಮುಖ್ಯವಾಗಿ ಇವರು ರಾಜಕೀಯ ಕ್ಷೇತ್ರದ ಸೇವೆಗೆ ಮಾತ್ರ ಸೀಮಿತವಾಗಿರದೆ ಕೆಲವರು ಕೃಷಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಅಡಿಟಿಪ್ಪಣಿಗಳು :

೧. Smt. Kasthori G. Belamagi, Dr. B. R Ambedker & His Viwes on Education –p-59

೨. ರೇವಯ್ಯಾ ಒಡೆಯರ – ಪ್ರಜಾಪ್ರಭುತ್ವ ಮತ್ತು ಚುನಾವಣೆ ಪದ್ಧತಿ ಪುಟ–೧–೫

೩. ಶ್ರೀಧರ – ಸವಿಂಧಾನ ಪ್ರಸ್ತಾವನೆಗಳು –ಪುಟ ೧–೪

೪. ಡಿ. ಶಿವರುದ್ರಪ್ಪ – ನಮ್ಮ ಗ್ರಾಮಾಡಳಿತ – ಪುಟ ೧,೨

ಅಧ್ಯಾಯ – ೮

ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳು

ಅಧ್ಯಾಯ-೮

ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳು

ಭಾರತ ದೇಶದಲ್ಲಿ ಹಲವಾರು ಸಮಸ್ಯೆಗಳಿವೆ. ಸಾಮಾಜಿಕ ಸಮಸ್ಯೆಗಳು ಎಲ್ಲಾ ಕ್ಷೇತ್ರಗಳಲ್ಲೂ ಕಾಣಬರುತ್ತವೆ. ಅವುಗಳನ್ನು ಪರಿಹರಿಸಲು ವಸ್ತುನಿಷ್ಠ ಅಧ್ಯಯನದ ಅಗತ್ಯವಿದೆ. ಈ ದಿಸೆಯಲ್ಲಿ ಸಮಾಜಶಾಸ್ತ್ರಜ್ಞರು ಕಾರ್ಯನಿರ್ವಹಿಸಬೇಕೆಂದು ಅಪೇಕ್ಷೆ ಪಡಲಾಗಿದೆ. ಆದರೆ ಈ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಅವರು ವಿಫಲರಾಗಿರುವದು ವಿಷಾದದ ಸಂಗತಿಯಾಗಿದೆ. ಅಧ್ಯಯನಗಳನ್ನು ಸ್ವಾರ್ಥ ರಾಜಕಾರಣದ ಹಿನ್ನೆಲೆಯಲ್ಲಿ ಕೈಕೊಳ್ಳಲಾಗುತ್ತಿದೆ. ಇಂದಿನ ಭಾರತೀಯ ಸನ್ನಿವೇಶದಲ್ಲಿ ವಸ್ತುನಿಷ್ಠ ಅಧ್ಯಯನ ಮಾತ್ರ ಸಮಸ್ಯೆಗಳಿಗೆ ವಿವಾದಾತೀತ ಪರಿಹಾರ ನೀಡಬಲ್ಲುದಾಗಿದೆ. ಕನಾಟಕದ ತಳಸಮುದಾಯಗಳಲ್ಲಿ ಒಂದಾದ ಛಲವಾದಿ ಸಮುದಾಯವು ಅನೇಕ ಸಮಸ್ಯೆಗಳ ಕೂಪದಲ್ಲಿದೆ. ಇತರೆ ಸಮುದಾಯದವರಂತೆ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಮುಂದುವರಿದಿಲ್ಲ. ಇವರಲ್ಲಿ ಸಂಘಟನೆ ಹಾಗೂ ವೈಚಾರಿಕ ಜಾಗೃತಿಯ ಮನೋಭಾವದ ಕೊರತೆ ಎದ್ದುಕಾಣುತ್ತದೆ.

೮.೧ ತಳವರ್ಗದ ಶಿಕ್ಷಣದ ಪ್ರಶ್ನೆ

ಉನ್ನತ ಜಾತಿಯ ಬಡಮಕ್ಕಳಿಗಾಗಿ ಶಿಕ್ಷಣದ ಬಾಗಿಲನ್ನು ಧಾರಾಳವಾಗಿ ತೆರೆದಿಡುವುದು ಅವಶ್ಯಕ. ಹಾಗೆಯೇ ಅವರು ತಳವರ್ಗದ ಅಧ್ಯಾಪಕರಿಂದ ಶಿಕ್ಷಣ ಪಡೆಯಲು ಉತ್ಸುಕರಾಗಿರಬೇಕು. ಬಡವರಿಗೆ ಶಿಕ್ಷಣ ನೀಡಲು ಸರಕಾರ ನಿರ್ಧರಿಸಿದ ಕ್ಷಣದಲ್ಲೆ ಇದುವರೆಗೆ ನಿಕೃಷ್ಟವಾಗಿ ಪರಿಗಣಿಸಿದ ಢೇಡ್, ಮಹಾರ್ ಮಕ್ಕಳಿಗೂ ಶಿಕ್ಷಣ ನೀಡಿ ಎಂದು ಕೇಳಿದರೆ ಅವರನ್ನು ನಿರ್ಲಕ್ಷಿಸುವುದು ಹೇಗೆ ಸಾಧ್ಯ?

ಯುರೋಪಿಯನ್ ಅಧಿಕಾರಿಗಳು ಅಸ್ಪೃಶ್ಯರ ಬಗ್ಗೆ ಹೊಂದಿದ್ದ ದ್ವೇಷ ಮನೋಭಾವವನ್ನು ಸಾರ್ವಜನಿಕ ಶಿಕ್ಷಣ ಸರಕಾರದ ಕರ್ತವ್ಯವೆಂದು ೧೮೫೪ರಲ್ಲಿ ಸ್ಪಷ್ಟಪಡಿಸಿದ ಟಿಪ್ಪಣಿಯ ಮೂಲಕ ಸರಕಾರದ ಕಾರ್ಯದರ್ಶಿ ಸರಿಪಡಿಸಿದುದು ತಿಳಿದುಬರುತ್ತದೆ.

ಅದಕ್ಕೂ ಮೊದಲು ಸಾರ್ವಜನಿಕ ಶಿಕ್ಷಣದ ಜವಾಬ್ದಾರಿ ಸರಕಾರದ್ದೆಂದು ಗುರುತಿಸಿದರೂ ಅದರಿಂದ ತಳವರ್ಗದ ಜನರಿಗೆ ಯಾವ ಉಪಯೋಗವೂ ಆಗಿರಲಿಲ್ಲ. ವಿವಿಧ ಜಿಲ್ಲೆಗಳಲ್ಲಿ ಜನಸಾಮಾನ್ಯರಿಗಾಗಿಯೆ ಅನೇಕ ಶಾಲೆಗಳು ಸ್ಥಾಪನೆಯಾಗಿದ್ದವು. ಆದರೂ ಆ ಶಾಲೆಗಳಲ್ಲಿ ತಳವರ್ಗದ ಮಕ್ಕಳಿಗೆ ಪ್ರವೇಶ ನೀಡುವ ಸಮಸ್ಯೆ ಬಗೆಹರಿದಿರಲಿಲ್ಲ. ಈ ಸಮಸ್ಯೆ ೧೮೫೬ರಲ್ಲಿ ತಲೆದೋರಿತಾದರೂ ಸರಕಾರದ ನಿರ್ಧಾರ ತಳವರ್ಗದ ಪರವಾಗಿರಲಿಲ್ಲವೆಂಬುದನ್ನು ಮುಂಬೈ ಪ್ರಾಂತದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸಿದ್ಧಪಡಿಸಿದ್ದ ೧೮೫೬-೫೭ನೇ ವರದಿಯಲ್ಲಿ ಕಂಡುಬರುವುದು.

೮.೨ ಶೋಷಿತ ಜಾತಿ ಮತ್ತು ಬುಡಕಟ್ಟು ಸಮುದಾಯಗಳಿಗಾಗಿ ಶಾಲೆಗಳು

ಶೋಷಿತ ಜಾತಿಯ ಜನರಿಗಾಗಿ ಸರಕಾರ ಯಾವುದೇ ಶಾಲೆ ತೆರೆಯಲಿಲ್ಲ ಮತ್ತು ಸರ್ವೋಚ್ಚ ಸರಕಾರ ಇಂತಹ ಶಾಲೆಗೆ ಮಾನ್ಯತೆ ಕೂಡ ನೀಡಲಿಲ್ಲ. ಸೈದ್ಧಾಂತಿಕವಾಗಿ ಸರಕಾರದ ಸಾಮಾನ್ಯ ಶಾಲೆಗಳಲ್ಲಿ ಎಲ್ಲ ಜಾತಿಯ ಜನರಿಗೆ ಪ್ರವೇಶದ ಅವಕಾಶವಿದೆ. ಆದರೂ ೧೮೫೫-೫೬ರ ವರದಿ ಗಮನಿಸಿದ ಸರಕಾರ ಆಜ್ಞೆಯೊಂದನ್ನು ಹೊರಡಿಸಿತು. ೧೮೫೬ ಜೂನ್‌ದಲ್ಲಿ ಧಾರವಾಡದ ಸರಕಾರಿ ಶಾಲೆಯಲ್ಲಿ ತನಗೆ ಪ್ರವೇಶ ನೀಡಬೇಕೆಂದು ಮಹಾರ್ ಜಾತಿಯ ವಿದ್ಯಾರ್ಥಿಯೊಬ್ಬ ಮನವಿ ಸಲ್ಲಿಸಿದ್ದ. ಆತ ನಿಯಮದ ಪ್ರಕಾರ ಶಾಲೆಗೆ ನೀಡಬೇಕಾದ ಫೀಯನ್ನು ಕೊಡಲು ಸಿದ್ಧನಿದ್ದು ತನಗೆ ಪ್ರವೇಶ ನೀಡಲು ಕೋರಿದ್ದ. ಇದು ಸರಕಾರದ ಶಾಲೆಯಲ್ಲಿ ಅದುವರೆಗೂ ಶೋಷಿತ ಜಾತಿಯ ವಿದ್ಯಾರ್ಥಿಯೊಬ್ಬ ಪ್ರವೇಶ ಬಯಸಿದ್ದರಿಂದ ಉಂಟಾದ ಏಕಮಾತ್ರ ಸಮಸ್ಯೆಯಾಗಿದೆ.

೮.೩ ಭಾರತ ಸರಕಾರ ಅಸ್ಪೃಶ್ಯರನ್ನು ಏಕೆ ನಿರ್ಲಕ್ಷಿಸಿತು?

೧೯೧೬ರಲ್ಲಿ ಇಂಪಿರೀಯಲ್ ಲೆಜಿಸ್ಲೇಟಿವ್ ಕಾನ್ಸಿಲ್‌ನಲ್ಲಿ ಸರ್ ಮಾನೇಕಜಿ ದಾದಾಭಾಯಿ ಗೊತ್ತುವಳಿಗೆ ಸರಕಾರದ ಪರವಾಗಿ ಉತ್ತರಿಸುತ್ತ ಅಸ್ಪೃಶ್ಯರ ವಿಷಯಕ್ಕೆ ಸರಕಾರ ಯಾವ ನಿಲುವು ತೆಗೆದುಕೊಂಡಿತೆಂದು ಹೇಳಿ, ಅಪರಾಧ ರೂಪದ ಅಲಕ್ಷ್ಯತನಕ್ಕೆ ಸರ್ ರೆಜಿನಾಲ್ಡ್ ಕ್ರ್ಯಾಡೋಕ್ ವಿವರಣೆ ನೀಡಿದ್ದಾರೆ.

"ಶಾಲೆಗಳಲ್ಲಿರುವ ಅನೇಕ ತೊಂದರೆಗಳನ್ನು ನಾನು ಬಲ್ಲೆ. ಮಹಾರ್ ಜಾತಿಯ ಹುಡುಗರು ಪ್ರವೇಶಿಸದಂತಹ ಅನೇಕ ಶಾಲೆಗಳಿರುತ್ತವೆ. ವರ್ಾಂಡದಲ್ಲಿ ಮಾತ್ರ ಪ್ರವೇಶಿಸಿ ಶಿಕ್ಷಕರ ಲಕ್ಷ್ಯದ ಅಲ್ಪ ಮಾತ್ರ ಲಾಭ ಪಡೆಯಬಹುದು ಅಥವಾ ಪೂರ್ತಿ ಹೊರಗೆ ಹಾಕಲ್ಪಡಬಹುದು. ಈ ತೊಂದರೆಯನ್ನು ಕ್ರಮೇಣವಾಗಿ ನಿವಾರಿಸಲು ಮಾತ್ರ ಸಾಧ್ಯ. ನಾನು ಈ ಸಮಸ್ಯೆಯನ್ನು ಬಿಟ್ಟುಬಿಡದೆ ಸ್ಥಳದಲ್ಲಿಯೇ ಬಗೆಹರಿಸಿದ್ದೇನೆ. ಜನರೊಂದಿಗೆ ಮಾತಾಡಿದ್ದೇನೆ. (ಅವರಲ್ಲಿ) ನಿಮ್ಮಂತೆ ಅವರೂ ತೆರಿಗೆ ತೆರುವವರಿದ್ದಾರೆ. ಅವರಿಗೆ ಒಳಗೆ ಬರಲು ಬಿಡಿ ಅಥವಾ ನೀವು ನಿಮ್ಮ ಪೂರ್ವಗ್ರಹಿಕೆಗಳಿಗೆ ಅಂಟಿಕೊಳ್ಳಬಯಸಿದರೆ, ನಿಮ್ಮ ಪೂರ್ವಗ್ರಹಿಕೆಗಳು ನಿಮಗೆ ಸರಿ ಎನಿಸಿರಬಹುದು. ಇದರಿಂದ ಅವರು ತಮಗಾಗಿ ಒಂದು ಪ್ರತ್ಯೇಕ ಶಾಲೆಯನ್ನು ಕೇಳಬಯಸಲು ನೀವು ಸಹಾಯ ಮಾಡಿದಂತಾಗುವುದಿಲ್ಲವೇ? ಎಂದು ಜನರಿಗೆ ತಿಳಿಹೇಳಿದ್ದೇನೆ. ಕೆಲವು ಉತ್ತಮರು ಬಾವಿ ಮತ್ತು ಶಾಲೆಗಳ ವಿಷಯದಲ್ಲಿ ದಲಿತರಿಗೆ ಸಹಾಯ ಮಾಡಲು ಮುಂದೆ ಬಂದಿರುತ್ತಾರೆ. ಅವರು ಸಹಾಯ ಮಾಡಿದ್ದಾರೆ ಮತ್ತು ತೊಂದರೆಗಳನ್ನು ನಿವಾರಿಸಿದ್ದಾರೆ."[೧]

"ಹಲವಾರು ಬಗೆಯ ಸಮಸ್ಯೆಗಳ ಆಗರವಾಗಿರುವ ಭಾರತದಲ್ಲಿ ಈ ಸಮಸ್ಯೆ ಕುರಿತ ಅಧ್ಯಯನ ಮಾಡುವ, ಅವುಗಳ ಕಾರಣ ಕಂಡುಹಿಡಿದು ಪರಿಹಾರ ಸೂಚಿಸುವ ಹೊಣೆಗಾರಿಕೆ ಸಮಾಜಶಾಸ್ತ್ರಜ್ಞರ ಮೇಲಿದೆ. ಕೆಲವು ಸಮಸ್ಯೆಗಳ ಬಗ್ಗೆ ಅವರು ಅಧ್ಯಯನ ಮಾಡುವ ಪ್ರಯತ್ನ ನಡೆಸಿದ್ದಾರೆ. ಆದರೆ

ಇತ್ತೀಚಿನ ವರ್ಷಗಳಲ್ಲಿ ಕಾಣಿಸಿಕೊಂಡು ವ್ಯಾಪಕವಾಗಿ ಪಸರಿಸಿ ಆತಂಕ ಮೂಡಿಸಿರುವ ಹಲವಾರು ಸಮಸ್ಯೆಗಳ ಬಗ್ಗೆ ಸಮಾಜ ಶಾಸ್ತ್ರಜ್ಞರು ಅನಾಸಕ್ತರಾಗಿದ್ದಾರೆ. ಸಮಾಜ ಶಾಸ್ತ್ರಜ್ಞರು ಸೂಕ್ತವಾಗಿ ಮತ್ತು ಸಕಾಲಿಕವಾಗಿ ಸ್ಪಂದಿಸಲು ವಿಫಲವಾದಂತಹ ಹಲವಾರು ಸನ್ನಿವೇಶಗಳು, ಸಂದರ್ಭಗಳು ಇವೆ. ಉದಾಹರಣೆಗೆ– ಮೀಸಲಾತಿ ನೀತಿಯ ವಿರುದ್ಧ ಗುಜರಾತ, ದೆಹಲಿ, ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ಆಂಧ್ರಪ್ರದೇಶಗಳಲ್ಲಿ ನಡೆದ ಹೋರಾಟಗಳು.[೨]

ಗದಗ ಜಿಲ್ಲೆಯಲ್ಲಿ ಹಂಚಿಹೋದ ಛಲವಾದಿ ಜನಸಮುದಾಯದ ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಛಲವಾದಿಗಳ ಮೂಲಭೂತ ಸಮಸ್ಯೆಗಳು, ಸಮುದಾಯದ ಸಂಘ ಸಂಸ್ಥೆಗಳ ಉದ್ದೇಶಗಳು ಮತ್ತು ಕೈಗೊಂಡ ಕಾರ್ಯಗಳು, ಅವುಗಳ ಪ್ರಭಾವ, ಪರಿಣಾಮ ಮತ್ತು ಪರಿಹಾರೋಪಾಯಗಳನ್ನು ಚರ್ಚಿಸಲಾಗಿದೆ. ಅವರ ಭೌಗೋಳಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕೆಲವೊಂದು ಪ್ರದೇಶದ ಮುಖ್ಯ ಸಮಸ್ಯೆಗಳು ಮತ್ತು ಅಂಕಿ ಸಂಖ್ಯೆಗಳನ್ನು ಸಾಧ್ಯವಾದ ಮಟ್ಟಿಗೆ ಕೊಡಲಾಗಿದೆ.

೮.೪ ಶೈಕ್ಷಣಿಕ ಸಮಸ್ಯೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ವಿವಿಧ ಶೈಕ್ಷಣಿಕ ಯೋಜನೆಗಳನ್ನು ಜಾರಿಯಲ್ಲಿ ತಂದಿವೆ. ದೇಶದಲ್ಲಿ ತಳಸಮುದಾಯಗಳು ಶತಶತಮಾನಗಳಿಂದ ಶಿಕ್ಷಣ ಕ್ಷೇತ್ರದಿಂದ ದೂರ ಉಳಿದಿವೆ. ಬಡತನ, ಅಜ್ಞಾನ ಮೂಢನಂಬಿಕೆಗಳು ಮೊದಲಾದ ಕಾರಣಗಳಿಂದ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಕೂಲಿ ಕೆಲಸ, ದನ ಕಾಯುವ ಕೆಲಸಗಳಿಗೆ ತಂದೆ–ತಾಯಿಗಳು ಕಳಿಸುತ್ತಾರೆ. ನಿರಕ್ಷರ ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿಂಜರಿಯುತ್ತಾರೆ. ಅವರ ನಿರ್ಲಕ್ಷ್ಯತನದಿಂದ ಮಕ್ಕಳು ಶಾಲೆ ಬಿಡುವ ರೂಢಿಗೆ ಬಿದ್ದಿದ್ದಾರೆ. ಜೀತ ಪದ್ಧತಿ ಸಮಸ್ಯೆ ಮತ್ತು ಬಾಲಕಾರ್ಮಿಕ ಸಮಸ್ಯೆ ಪರಸ್ಪರ ತಳಕು ಬಿದ್ದಿರುವುದು ಕಂಡುಬರುತ್ತದೆ. ಮಕ್ಕಳಿಗೆ ತಮ್ಮ ಜೊತೆಯಲ್ಲಿ ಹೊಲದ ಕೆಲಸಕ್ಕೆ ತೊಡಗಿಸುತ್ತಾರೆ. ಕೃಷಿ ಪ್ರಧಾನ ಕುಟುಂಬಗಳಲ್ಲಿ ಮಕ್ಕಳ ಶ್ರಮದ ಅವಶ್ಯಕತೆಯಿದೆ. ಅವಿಭಕ್ತ ಕುಟುಂಬಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವರ ಲಿಂಗ ವಯಸ್ಸು ಮತ್ತು ಪ್ರತಿಭೆಗೆ ತಕ್ಕಂತೆ ಕೆಲಸವಿರುತ್ತದೆ. ಚಿಕ್ಕವರು, ಚಿಕ್ಕಮಕ್ಕಳನ್ನು ಎತ್ತಿಕೊಳ್ಳುವದು, ಮಕ್ಕಳನ್ನು ಆಡಿಸುವದು, ದನಕರುಗಳಿಗೆ ಮೇವು, ನೀರು, ತರುವುದು. ಹೊಲ ತೋಟಗಳಲ್ಲಿ ದುಡಿಯುವರಿಗೆ ಬುತ್ತಿ ಕೊಟ್ಟು ಬರುವದು ಮುಂತಾದ ಕೆಲಸ ಕಾರ್ಯಗಳಿರುತ್ತವೆ.

ಛಲವಾಧಿಯರ ಅಕ್ಷರಸ್ಥರ ಪ್ರಮಾಣ ಪ್ರತಿಶತ ೩೨ರಷ್ಟು ಇದ್ದರೂ ಸರಕಾರಿ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಈ ಸಮುದಾಯದ ಶೈಕ್ಷಣಿಕ ಮಟ್ಟ ಅತ್ಯಂತ ಕಡಿಮೆ ಇದೆ. ಪುರುಷರಿಗಿಂತ ಮಹಿಳೆಯರ ಸಾಕ್ಷರ ಪ್ರಮಾಣ ಕಡಿಮೆ ಕಂಡರೂ ಒಟ್ಟಾರೆ ಗಂಡು–ಹೆಣ್ಣಿನ ಸಾಕ್ಷರ ಪ್ರಮಾಣವೆ ತುಂಬಾ ಕಡಿಮೆಯಿದೆ. ಸಮುದಾಯದಲ್ಲಿ ಶಿಕ್ಷಣದ ಅರಿವು ತುಂಬಾ ಕಡಿಮೆಯಿದೆ.

ಗದಗ ಜಿಲ್ಲೆಯನ್ನು ಮೈಸೂರು ಬೆಂಗಳೂರು, ಮಂಗಳೂರು, ಶಿವಮೊಗ್ಗ ಹಾಗೂ ನೆರೆಯ ಧಾರವಾಡ, ಬೆಳಗಾವಿ, ಕಾರವಾರ, ಕೊಪ್ಪಳ, ಬಾಗಲಕೋಟ, ವಿಜಾಪೂರ, ಗುಲಬರ್ಗಾ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಶಿಕ್ಷಣ ಕ್ಷೇತ್ರದಲ್ಲಿ ಈ ಛಲವಾದಿ ಸಮುದಾಯದ ಜನ ಬಹಳಷ್ಟು ಹಿಂದುಳಿದಿದ್ದಾರೆ.

೮.೫ ಭೂಮಿ ಸಮಸ್ಯೆ ಹಾಗೂ ಪ್ರವಾಹ ಸಮಸ್ಯೆ

ಅನೇಕ ಬೆಟ್ಟಗುಡ್ಡಗಳಿಂದ ಕೂಡಿರುವ ಗದಗ ಜಿಲ್ಲೆ ಫಲವತ್ತಾದ ಭೂಪ್ರದೇಶವಾಗಿದೆ. ಛಲವಾದಿಯರ ಪ್ರಮುಖ ಉದ್ಯೋಗ ಕೃಷಿ ಕೂಲಿ ಆಗಿದೆ. ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದಲ್ಲಿ ಅವರ ಹೆಚ್ಚು ಕುಟುಂಬಗಳು ನೆಲೆಸಿದ್ದು, ಇಡೀ ತಾಲ್ಲೂಕಿನ ಕೃಷಿ ಕೂಲಿ ಜನ ಇಲ್ಲಿ ಕಂಡುಬರುತ್ತಾರೆ. ಇದಕ್ಕೆ ಇಲ್ಲಿನ ಫಲವತ್ತಾದ ಭೂಮಿಯೆ ಕಾರಣವಾಗಿದೆ. ಭೌಗೋಳಿಕ ಅಂಶಗಳು ಮಾನವನಿಗೆ ವರವಾಗಿರುವಂತೆ ಶಾಪವೂ ಆಗಿದ್ದು ಸಾಮಾಜಿಕ ಜೀವನದ ಮೇಲೆ ಪರಿಣಾಮ ಉಂಟು ಮಾಡುತ್ತಿದೆ. ಜಿಲ್ಲೆಯ ಸಮುದಾಯ ಸಮುದಾಯದ ಜನರಿಗೆ ಸ್ವಂತ ಭೂಮಿಗಳು ಇಲ್ಲ ಆದ ಕಾರಣ ಕೃಷಿ ಕಾರ್ಮಿಕರಾಗಿ, ಕೂಲಿಕಾರರಾಗಿ, ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ಪಶು ಸಂಪತ್ತು ಇವರಲ್ಲಿ ತುಂಬಾ ಕಡಿಮೆ ಇರುವದಕ್ಕೆ ಪ್ರಬಲ ಕಾರಣವೆಂದರೆ ಸ್ವಂತ ಭೂಮಿ ಇಲ್ಲದಿರುವದಾಗಿದೆ.

ಆಹಾರ, ಉಡುಪು, ಭಾಷೆ, ದೈಹಿಕ ಲಕ್ಷಣ, ರೀತಿ ನೀತಿಗಳು, ವೈವಾಹಿಕ, ಕೌಟುಂಬಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮೊದಲಾದವುಗಳ ಮೇಲೆ ಭೌಗೋಳಿಕ ಪರಿಸರದ ಪ್ರಭಾವ ಎದ್ದು ಕಾಣುತ್ತದೆ. ಬರಗಾಲ, ಅತಿವೃಷ್ಠಿ ಅನಾವೃಷ್ಠಿ, ಪ್ರವಾಹ, ನೈಸರ್ಗಿಕ ವಿಕೋಪಗಳಿಂದ ತಮ್ಮ ವೃತ್ತಿ, ವಸತಿ ಮತ್ತು ಜೀವನ ವ್ಯವಸ್ಥೆಯಲ್ಲಿ ಸಾಕಷ್ಟು ಪರಿವರ್ತನೆ ಕಂಡುಕೊಂಡಿದ್ದಾರೆ. ಮಳೆ ಬರದಿದ್ದರೆ ಬೇರೆ ರಾಜ್ಯಗಳಿಗೆ ಕೂಲಿ ಹುಡುಕಿಕೊಂಡು ವಲಸೆ ಹೋಗುವದು ಇವರಲ್ಲಿ ಸಾಮಾನ್ಯವಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆ ಇವರ ಜೀವನಾಡಿಯಾಗಿದೆ.

ಈ ಸಮುದಾಯದಲ್ಲಿ ಸಾಕುಪ್ರಾಣಿಗಳಾದ ಎತ್ತು, ಆಕಳು, ಕರು, ಎಮ್ಮೆ, ಕುರಿ, ಮೇಕೆ ಹಾಗೂ ಕೋಳಿ ಮೊದಲಾದವು ತುಂಬಾ ಕಡಿಮೆ ಕಂಡುಬರುತ್ತದೆ. ಸ್ವಂತ ಭೂ ಹಿಡುವಳಿ ಸಂಖ್ಯೆ ಪ್ರಮಾಣ ಕಡಿಮೆಯಿರುವುದು ಇದಕ್ಕೆ ಮುಖ್ಯ ಕಾರಣ. ಪರಸ್ಪರ ಸಂಬಂಧ ಹೊಂದಿರುವ ಬಡತನ ಮತ್ತು ನಿರುದ್ಯೋಗ ಸಮಸ್ಯೆ ಈ ಸಮುದಾಯದಲ್ಲಿ ಬೇರು ಬಿಟ್ಟಿದೆ.

ಪ್ರತಿ ವರ್ಷ ನದಿಯ ಪ್ರವಾಹದಿಂದ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ಪ್ರವಾಹವು ಇವರು ವಾಸಿಸುವ ಮನೆಗಳಿಗೆ ಮತ್ತು ಹೊಲಗಳಿಗೆ ತುಂಬಾ ಹಾನಿಯನ್ನುಂಟು ಮಾಡುತ್ತದೆ. ಇವರ ಆಸ್ತಿಗಳಾದ ಕುರಿ, ಕೋಳಿ, ಹಸು, ಕರು, ಎತ್ತು, ಎಮ್ಮೆ ಹಾಗೂ ದವಸ ಧಾನ್ಯಗಳು ಹಾಳಾಗುತ್ತದೆ. ಪ್ರವಾಹದ ಪರಿಣಾಮವಾಗಿ ಇವರ ಆರ್ಥಿಕ ಪ್ರಗತಿಯು ಮತ್ತೊಷ್ಟು ಹಿಂದುಳಿಯಲು ಕಾರಣವಾಗುತ್ತದೆ. ಪ್ರವಾಹ ಪೀಡಿತ ಗ್ರಾಮಗಳು ಸ್ಥಳಾಂತರಗೊಂಡಿವೆ. ಆದರೆ ಅಲ್ಲಿ ಇನ್ನೂ ಇವರಿಗೆ ಮನೆಗಳ ಸೌಲಭ್ಯ

ಇವರಿಗೆ ದೂರಕಿರುವದಿಲ್ಲ. ಇದರಿಂದ ಚಿಕ್ಕ ಮಕ್ಕಳ ಹಾಗೂ ಶಾಲಾ ಮಕ್ಕಳಿಗೂ ಸಾಕಷ್ಟು ತೊಂದರೆಯಾಗುತ್ತಿದೆ.

೮.೬. ಬಡತನ ಸಮಸ್ಯೆ

ಛಲವಾದಿ ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡವರಾಗಿದ್ದಾರೆ. ಇವರು ಹೆಚ್ಚಾಗಿ ಕೃಷಿ ಮೇಲೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ವರ್ಷ ಪೂರ್ತಿ ಕೆಲವೊಂದು ವೇಳೆ ಕೆಲಸ ಇಲ್ಲದೆ ಇರಬೇಕಾಗಿರುವುದರಿಂದ ನಿರುದ್ಯೋಗ ಸಮಸ್ಯೆಯು ಕೂಡಾ ಎದುರಿಸುತ್ತಿದ್ದಾರೆ. ಬಡತನ ಹಾಗೂ ನಿರುದ್ಯೋಗ ಎರಡು ಸಮಸ್ಯೆಗಳು ಇವರನ್ನು ಸಾಕಷ್ಟು ಸಂಕಟಕ್ಕೀಡುಮಾಡಿದೆ. ಇವರು ಕೃಷಿಯೇತರ ಕೆಲಸಗಳಲ್ಲಿ ದುಡಿಯುವದಿಲ್ಲ. ಇದಕ್ಕೆ ಮುಖ್ಯ ಕಾರಣ ಎಂದರೆ ವಿವಿಧ ಬಗೆ ಜ್ಞಾನ ಹಾಗೂ ಶಿಕ್ಷಣ ಇಲ್ಲದಿರುವದು ಪ್ರಮುಖ ಕಾರಣವಾಗಿದೆ. ಈ ಬಡತನದ ಸಮಸ್ಯೆ ಪರಿಹರಿಸಿಕೊಳ್ಳಲು ಪ್ರತಿ ವರ್ಷ ಬೇರೆ ರಾಜ್ಯಗಳಿಗೆ ಹೋಗಿ ಕೂಲಿ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇದಲ್ಲದೆ ಸರಕಾರದಿಂದ ಬಡತನ ನಿವಾರಣೆಗೆ ಜಾರಿಯಲ್ಲಿ ಬಂದಂತಹ ಯೋಜನೆಗಳು ಈ ಸಮುದಾಯಕ್ಕೆ ಸರಿಯಾಗಿ ಸಿಗದೇ ಇರದ ಕಾರಣ ಬಡತನ ಸಮಸ್ಯೆಯಿಂದ ಈ ಸಮುದಾಯ ಬಳಲುತ್ತಿದೆ ಎನ್ನಬಹುದು.

೮.೭. ಅಸ್ಪೃಶ್ಯತಾ ಸಮಸ್ಯೆ

ಅಸ್ಪೃಶ್ಯರ ಹುಟ್ಟಿನ ಬಗ್ಗೆ ಹೊಸ ಸಿದ್ಧಾಂತವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಸವರ್ಣೀಯರು ಮತ್ತು ಅಸ್ಪೃಶ್ಯರ ನಡುವೆ ಯಾವ ಜನಾಂಗೀಯ ಅಂತರ ಇಲ್ಲ.

೨. ಅಸ್ಪೃಶ್ಯತೆ ಹುಟ್ಟಿಕೊಳ್ಳುವ ಮುಂಚೆ, ಸವರ್ಣೀಯರ ಮತ್ತು ಅಸ್ಪೃಶ್ಯರ ನಡುವಿನ ಭಿನ್ನತೆ ಮೂಲದಲ್ಲಿ ಬುಡಕಟ್ಟಿನ ಜನರು ಮತ್ತು ಬುಡಕಟ್ಟುಗಳಿಂದ ಒಡೆದು ಬಂದ ಪರಕೀಯ ಬಿಡಿಜನರ ನಡುವಿನದಾಗಿತ್ತು. ಪರಕೀಯ ಪಂಗಡಗಳಿಂದ ಸಿಡಿದ ಜನರೇ ಮುಂದಕ್ಕೆ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟರು.

೩. ಅಸ್ಪೃಶ್ಯತೆ ಹೇಗೆ ಜನಾಂಗೀಯ ಭಿನ್ನತೆಯನ್ನು ಆಧರಿಸಿಲ್ಲವೋ ಹಾಗೆಯೆ ವೃತ್ತಿ ಭಿನ್ನತೆಯನ್ನೂ ಆಧರಿಸಿಲ್ಲ.

೪. ಅಸ್ಪೃಶ್ಯತೆ ಎರಡು ಮೂಲಗಳಿಂದ ಹುಟ್ಟಿದೆ.

ಅ) ಪರಕೀಯ ಪಂಗಡಗಳಿಂದ ಸಿಡಿದವರ ಬಗೆಗೆ ತಿರಸ್ಕಾರ ಮತ್ತು ದ್ವೇಷ.

ಬ) ಉಳಿದವರು ಗೋಮಾಂಸ ಭಕ್ಷಣ ತ್ಯಜಿಸಿದ ಮೇಲೂ ಈ ಬಿಡಿ ಜನರು ಗೋಮಾಂಸ ಭಕ್ಷಣವನ್ನು ಮುಂದುವರಿಸಿದುದು.

೫. ಅಸ್ಪೃಶ್ಯತೆಯ ಮೂಲವನ್ನು ಅರಸುವಾಗ ಹೊಲೆಯರಿಂದ ಅಸ್ಪೃಶ್ಯರನ್ನು ಬೇರ್ಪಡಿಸುವ ಜಾಗರೂಕತೆ ವಹಿಸಬೇಕು. ಎಲ್ಲ ಸಂಪ್ರದಾಯಸ್ಥ ಹಿಂದೂ ಲೇಖಕರು ಹೊಲೆಯರು ಮತ್ತು ಅಸ್ಪೃಶ್ಯರು ನಡುವೆ ಅಭಿನ್ನತೆ ಗುರುತಿಸಿದ್ದಾರೆ. ಇದು ತಪ್ಪು. ಅಸ್ಪೃಶ್ಯರು ಹೊಲೆಯರಿಗಿಂತ ಸ್ಪಷ್ಟವಾಗಿ ಭಿನ್ನರಾಗಿಯೆ ಇದ್ದಾರೆ.

೬. ಹೊಲೆಯರ ವರ್ಗ ಧರ್ಮಸೂತ್ರಗಳ ಸಮಯಕ್ಕೆ ಅಸ್ತಿತ್ವದಲ್ಲಿ ಬಂದಿದ್ದರೆ ಅಸ್ಪೃಶ್ಯರು ಬಹಳ ತಡವಾಗಿ ಅಂದರೆ ಕ್ರಿಪೂ. ೪೦೦ರ ನಂತರ ಅಸ್ತಿತ್ವದಲ್ಲಿ ಬಂದಿದ್ದಾರೆ.

ಅಸ್ಪೃಶ್ಯರು ಬಿಡಿ ಜನರಾಗಿದ್ದರೆಂದು ತೋರಿಸುವ ಎರಡನೆಯ ಪ್ರಕಾರದ ಸಾಕ್ಷಿ ಮಾಹರ್ ಜನರ ಸ್ಥಿತಿಗೆ ಸಂಬಂಧಿಸಿದೆ. ಮಹಾರಾಷ್ಟ್ರದಲ್ಲಿ ಮಾಹರ್ ಸಮಾಜ ಮುಖ್ಯ ಅಸ್ಪೃಶ್ಯ ಸಮಾಜವಾಗಿದೆ. ಮಹರ್ ಮತ್ತು ಸರ್ವಣೀಯ ಹಿಂದೂಗಳ ನಡುವಿನ ಸಂಬಂಧ ತೋರಿಸುವ ಕೆಳಗಿನ ಸಂಗತಿಗಳು ಗಮನಾರ್ಹ. ೧. ಮಹರರು ಪ್ರತಿಯೊಂದು ಗ್ರಾಮದಲ್ಲಿ ಸಿಗುತ್ತಾರೆ. ೨. ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಗ್ರಾಮ ಸುತ್ತ ದೊಡ್ಡಗೋಡೆ ಇರುತ್ತಿದ್ದು ಅದರ ಹೊರಗೆ ಮಾಹರ್ ವಾಸವಾಗಿರುತ್ತಿದ್ದರು. ೩. ಗ್ರಾಮ ಪರವಾಗಿ ಮಾಹರ್ ಪಾಳೆಯ ಪ್ರಕಾರ ಕಾವಲು ಕೆಲಸ ಮಾಡುತ್ತಿದ್ದರು. ೪. ಹಿಂದೂಗಳ ವಿರುದ್ಧ ಮಹರರು ೫೨ ಹಕ್ಕುಗಳನ್ನು ಸಾದಿಸಿದ್ದರು.

ಅವುಗಳಲ್ಲಿ ಮುಖ್ಯವಾದವು–

೧. ಗ್ರಾಮಸ್ಥರಿಂದ ಆಹಾರ ಸಂಗ್ರಹಿಸುವ ಹಕ್ಕು

೨. ಸುಗ್ಗಿಯ ಸಮಯದಲ್ಲಿ ಪ್ರತಿಯೊಬ್ಬ ನಾಗರೀಕನಿಂದ ಧಾನ್ಯ ಸಂಗ್ರಹಿಸುವ ಹಕ್ಕು

೩. ಗ್ರಾಮದವರ ದನ ಸತ್ತರೆ ಅದನ್ನು ವಶಪಡಿಸಿಕೊಳ್ಳುವ ಹಕ್ಕು.

ಮಾಹರ್ ಸ್ಥಿತಿಗತಿ ಮಹಾರಾಷ್ಟ್ರಕ್ಕೆ ಸೀಮಿತವಾಗಿದೆ ನಿಜ. ಭಾರತದ ಬೇರೆ ರಾಜ್ಯಗಳಲ್ಲಿಯೂ ಇಂಥ ಉದಾಹರಣೆ ಸಿಗುತ್ತದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಿದೆ. ಆದರೆ ಮಾಹರ್ ಉದಾಹರಣೆಯನ್ನು ಭಾರತದ ಅಸ್ಪೃಶ್ಯರ ಮಾದರಿ ಎಂದು ತೆಗೆದುಕೊಳ್ಳಬಹುದು. ಭಾರತದ ಇತಿಹಾಸದಲ್ಲಿ ಬೇರೆ ಪಂಗಡಗಳಿಗೆ ಸೇರಿದ ಬಿಡಿ ಜನರು ನೇರವಾಗಿ ಪಂಗಡದ ಬಳಿಗೆ ಬಂದು ಕೊಡುಕೊಳ್ಳುವುದು ವ್ಯವಹಾರದ ಕ್ರಮವಾಗಿದೆ. ಬಿಡಿಜನರು ಗ್ರಾಮ ದಂಡೆಗುಂಟ ವಾಸಿಸಲು ಅನುಮತಿ ಪಡೆದಿದ್ದರು. ಅವರು ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಆ ಸೇವೆಗಳಿಗೆ ಪ್ರತಿಯಾಗಿ ಕೆಲವು ಹಕ್ಕುಗಳನ್ನು ಅವರು ಪಡೆದರು. ಮಹಾರಾಷ್ಟ್ರದಲ್ಲಿ ಮಾಹರ್ ಕೇಳಿದ ೫೨ ಹಕ್ಕುಗಳನ್ನು ಸಂಸ್ಥಾನದ ಮುಸಲ್ಮಾನ ಅರಸರು ಕೊಟ್ಟ ಪದ್ಧತಿ ಇದೆ. ಇದರರ್ಥ ಈ ಹಕ್ಕುಗಳು ಬಹಳ ಪ್ರಾಚೀನ ಕಾಲದವಾಗಿದ್ದು ಅವನ್ನು ಮುಸಲ್ಮಾನ ಅರಸರು ದೃಢೀಕರಿಸಿದರು.

ಇಂಥ ಸಂಗತಿ ತೀರ ಕಡಿಮೆ ಇದ್ದರೂ ಅಸ್ಪೃಶ್ಯರು ಆರಂಭದಿಂದ ಗ್ರಾಮ ಹೊರಗೆ ವಾಸಿಸುತ್ತಿದ್ದರೆನ್ನುವ ಸಿದ್ಧಾಂತವನ್ನು ಪುಷ್ಟೀಕರಿಸುವ ಸಾಕ್ಷಿಗಳು ಒದಗುತ್ತವೆ. ಅವರನ್ನು ಮೊದಲು ಅಸ್ಪೃಶ್ಯರೆಂದು ಸಾರಿ ಆ ಕಾರಣದಿಂದ ಊರ ಹೊರಗೆ ಹಾಕಿದ್ದಲ್ಲ. ಅವರು ಪ್ರಾರಂಭದಿಂದಲೂ ಗ್ರಾಮ ಹೊರಗೇ ವಾಸಿಸುತ್ತಿದ್ದರು. ಏಕೆಂದರೆ ಅವರು ಗ್ರಾಮಗಳಲ್ಲಿ ನೆಲೆಸಿರುವ ಪಂಗಡಕ್ಕಿಂತ ಭಿನ್ನವಾದ ಬೇರೆ ಪಂಗಡಕ್ಕೆ ಸೇರಿದ ಬಿಡಿ ಜನರಾಗಿದ್ದರು.

ಈ ವಿವರಣೆಯನ್ನು ಒಪ್ಪುವಲ್ಲಿ ಒಂದು ಮುಖ್ಯ ತೊಂದರೆ ಎಂದರೆ ಅಸ್ಪೃಶ್ಯರು ಯಾವಾಗಲೂ ಅಸ್ಪೃಶ್ಯರಾಗಿದ್ದರೆಂಬ ತಿಳುವಳಿಕೆಯಾಗಿದೆ. ಒಂದು ಕಾಲಕ್ಕೆ ಸದ್ಯದ ಅಸ್ಪೃಶ್ಯರ ಪೂರ್ವಜರು ಅಸ್ಪೃಶ್ಯರಾಗಿರದೆ ಕೇವಲ ಬಿಡಿಜನರಾಗಿದ್ದರು. ಅವರ ಮತ್ತು ಗ್ರಾಮದವರ ನಡುವಣ ವ್ಯತ್ಯಾಸಕ್ಕೆ ಕಾರಣ ಅವರು ಬೇರೆ ಬೇರೆ ಪಂಗಡಗಳಿಗೆ ಸೇರಿದ್ದವರಾಗಿದ್ದರು ಎಂಬ ಅಂಶವನ್ನು ನೆನಪಿನಲ್ಲಿಟ್ಟರೆ, ಈ ತೊಂದರೆ ನಿವಾರಣೆ ಆಗುವುದು.

ಮನುಷ್ಯನು ಇಂದು ಕ್ಷಣಾರ್ಧದಲ್ಲಿ ವಿಶ್ವದಲ್ಲಿ ನಡೆಯುವ ಘಟನೆಗಳನ್ನು ತಿಳಿಯಬಲ್ಲವನಾಗಿದ್ದಾನೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ವಾಸಿಸುತ್ತಿದ್ದಾನೆ. ಆದರೆ ಕೆಲವು ಸಂಪ್ರದಾಯಗಳು ಮೂಢನಂಬಿಕೆಗಳನ್ನು ಬಿಟ್ಟುಕೊಡಲು ಸಾಧ್ಯವಾಗಿಲ್ಲ. ಅಸ್ಪೃಶ್ಯತೆ ಸಮಸ್ಯೆಯು ನಗರ, ಪಟ್ಟಣ ಪ್ರದೇಶಗಳಲ್ಲಿ ಸ್ವಲ್ಪ ಕಡಿಮೆ ಇರಬೇಕು. ಆದರೆ ಗ್ರಾಮಗಳಲ್ಲಿ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಪದ್ಧತಿಯ ಆಚರಣೆಯನ್ನು ಕಂಡುಬರುತ್ತದೆ. ಇಂದು ಛಲವಾದಿ ಸಮುದಾಯ ಎದುರಿಸುವ ಪ್ರಮುಖ ಸಮಸ್ಯೆ ಇದಾಗಿದೆ. ಜಿಲ್ಲೆಯಲ್ಲಿ ಬರುವ ಗ್ರಾಮಗಳ ಪ್ರಮುಖ ದೇವಾಲಯಗಳಲ್ಲಿ ಇವರಿಗೆ ಪ್ರವೇಶಿಸಲು ಅವಕಾಶಗಳಿಲ್ಲ. ಹೊಟೆಲ್‌ಗಳ ಪ್ರವೇಶವು ನಿಷೇಧಿಸಲಾಗಿದೆ. ಈ ಜನರಿಗೆ ಕೊಡುವ ಕಪ್ಪು-ಗ್ಲಾಸು ಪ್ರತ್ಯೇಕವಾಗಿ ಇಟ್ಟಿರುವುದು ಕಂಡುಬರುತ್ತದೆ. ಮೇಲ್ಜಾತಿಯ ಜನರು ಉಪಯೋಗಿಸುವ ಬಾವಿ, ಕೆರೆ, ನಳ, ಇವುಗಳನ್ನು ಮುಟ್ಟುವಂತಿಲ್ಲ. ಮೇಲ್ಜಾತಿ ಮನೆಗಳ ಒಳಗಡೆ ಪ್ರವೇಶವಿಲ್ಲ. ಇವರಿಗೆ ಕೊಟ್ಟ ಕೆಲಸಗಳು ಮನೆ ಹೊರಗಡೆ ಮಾಡುವಂಥ ಕೆಲಸಗಳಾಗಿವೆ. ಜಾತ್ರೆ, ಉತ್ಸವಗಳಲ್ಲಿ ದೇವರ ಹರಕೆಗಳು, ಪೂಜೆ-ಪುನಸ್ಕಾರಗಳು ಹೊರಗೆ ನಿಂತು ಸಲ್ಲಿಸುತ್ತಾರೆ. ಸಾರ್ವತ್ರಿಕವಾಗಿ ಪಂಕ್ತಿ ಭೋಜನ ಇವರಿಗೆ ನಿಷೇಧಿಸಲಾಗಿದೆ.ಸರ್ಕಾರಿ ಶಾಲೆಗಳಲ್ಲಿ ಛಲವಾದಿ ಹೆಣ್ಣುಮಗಳನ್ನು ಅಡಿಗೆ ಮಾಡಲು ನೇಮಿಸಿಕೊಳ್ಳುವಾಗ ವಿರೋಧಿಸುತ್ತಾರೆ. ನಾಗರಿಕ ಸೇವಾ ಸೌಲಭ್ಯಗಳಿಂದ ಕೂಡ ವಂಚಿತರಾಗಿದ್ದಾರೆ. ಇಂದಿಗೂ ಗ್ರಾಮೀಣ ಭಾಗದಲ್ಲಿ ಕ್ಷೌರಿಕ ಮತ್ತು ಬಟ್ಟೆಗಳ ಇಸ್ತ್ರಿ ಮಾಡುವವರು ಹಾಗೂ ಇತರ ಸೇವೆ ಮಾಡುವವರು ಮೇಲ್ಜಾತಿಯವರಿಗೆ ಮಾಡುವಂತೆ ಛಲವಾದಿಯವರ ಸೇವೆ ಮಾಡುವದಿಲ್ಲ.

೮.೮. ಮದ್ಯಪಾನ ಸಮಸ್ಯೆ

ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ಸಾವಿನ ಸಂದರ್ಭಗಳಲ್ಲಿ ಮತ್ತು ವಿಶೇಷ ಕಾರ್ಯಕ್ರಮಗಳಲ್ಲಿ ಮಧ್ಯಪಾನ ಮಾಡುವ ರೂಢಿ ಇವರಲ್ಲಿ ಕಂಡುಬರುತ್ತದೆ. ಇಂದು ಹಗಲು ರಾತ್ರಿ

ಕುಡಿದು ಹಾಳಾದ ಕುಟುಂಬಗಳಿವೆ. ಮೂರು ದಶಕಗಳ ಹಿಂದೆ ದೇಶದ ೩೦೦ ಜನರಲ್ಲಿ ಒಬ್ಬ ಕುಡುಕನಿರುತ್ತಿದ್ದ. ಇಂದು ಈ ಚಿತ್ರಣ ಬದಲಾಗಿದ್ದು ಇಂದು ೧೦ ಜನರಲ್ಲಿ ಒಬ್ಬ ಕುಡುಕನಾಗಿರುವ ಸ್ಥಿತಿ ಇದೆ. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕುಡುಕರ ಜಾಲಕ್ಕೆ ಸೇರಿಕೊಳ್ಳುತ್ತಿರುವುದು ಈ ಶತಮಾನದ ಬಹುದೊಡ್ಡ ದುರಂತವಾಗಿದೆ.

"ಮಾನವನ ನಾಗರೀಕತೆಯುದ್ದಕ್ಕೂ ಬೆಳೆದಿರುವ ಮಧ್ಯಪಾನ ಇಂದಿನ ಆಧುನಿಕ ಯುಗದಲ್ಲಿ ಬಹಳ ಅಪಾಯಕಾರಿ ಮಟ್ಟ ತಲುಪಿದೆ. ಅತಿಯಾದ ಕುಡಿತ ಅಥವಾ ಮಿತಿ ಮೀರಿದ ಮದ್ಯಪಾನವೆಂಬುದು ಹಣ-ಮಾನ ಹಾಗೂ ಪ್ರಾಣವನ್ನು ಅಂತಿಮವಾಗಿ ಆಹುತಿ ತೆಗೆದುಕೊಳ್ಳುವ ಜೊತೆಗೆ ಸಾಮಾಜಿಕ ಬದುಕನ್ನು ಛಿದ್ರವಾಗಿಸುತ್ತದೆ, ಅಸಹನೀಯವಾಗಿಸುತ್ತದೆ. ಅದೊಂದು ಚಟವಾದರೂ ಅದರ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳುವುದೇ ದುಸ್ತರವಾಗಿದೆ."[೩]

ಹಗಲಿರುಳು ಕಠಿಣ ಶ್ರಮ ವಹಿಸಿ ಕೆಲಸ ಕಾರ್ಯಗಳನ್ನು ಮಾಡುವದರಿಂದ ರಾತ್ರಿ ಸಮಯದಲ್ಲಿ ಮದ್ಯಪಾನ ಇವರಿಗೆ ಬೇಕು. ದುಡಿದ ಅತ್ಯಲ್ಪ ಹಣದಲ್ಲಿ ಕುಡಿಯಲಿಕ್ಕೆ ಬಳಸುತ್ತಾರೆ. ಇವರ ಕುಡಿತದ ದುಷ್ಪರಿಣಾಮ ಹೆಂಡತಿ-ಮಕ್ಕಳ ಮೇಲೆ ಪ್ರಭಾವಿಸುತ್ತದೆ. ಇವರು ವಾಸಿಸುವ ಪ್ರದೇಶದ ಹತ್ತಿರದಲ್ಲಿ ಸೆರೆ ಅಂಗಡಿಗಳು ಇರುವದರಿಂದ ಹೆಚ್ಚಿನ ಕುಡುಕರಾಗುವ ಸಾಧ್ಯತೆಗಳು ಕಂಡುಬರುತ್ತವೆ.

೮.೯ ವಸತಿ ಸಮಸ್ಯೆ

ಛಲವಾದಿಯರು ನೆಲೆಸಿರುವ ಓಣಿಗಳಲ್ಲಿ ಛಲವಾದಿ ಓಣಿ ಅಥವಾ 'ಅಂಬೇಡ್ಕರ್ ನಗರ' 'ಹೊಲಗೇರಿ', 'ಭೀಮನಗರ' ಮೊದಲಾದ ಹೆಸರುಗಳಿರುತ್ತವೆ. ಅವು ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಗ್ರಾಮದ ದಕ್ಷಿಣ ದಿಕ್ಕಿನ ಅಂಚಿಗೆ ಇರುತ್ತವೆ. ಇಂದು ಸರಕಾರದಿಂದ ಕೊಡುವ ನಿವೇಶನಗಳು ನಗರದಲ್ಲಿ ಇತರ ಜಾತಿಯ ಮನೆಗಳೊಂದಿಗೆ ಅಂಟಿಕೊಂಡಿರುತ್ತವೆ. ಆದರೆ ಹಳ್ಳಿಗಳಲ್ಲಿ ಛಲವಾದಿ, ಮಾದಿಗರಿಗೆ ಕೊಡಬಹುದಾದ ನಿವೇಶನಗಳನ್ನು ಒಂದೆಡೆ ಪ್ರತ್ಯೇಕವಾಗಿ ಕೊಡಲಾಗುತ್ತದೆ. ಮೇಲು-ಕೀಳು-ಅಸ್ಪೃಶ್ಯ ಎಂಬ ಭೇದಭಾವ ತೊಲಗದೆ ಬೇರೆ ಸಮುದಾಯಗಳೊಂದಿಗೆ ಬಾಳುವೆ ಮಾಡಲು ಸಾಧ್ಯವಿಲ್ಲ. ಆಯಾ ಸಮುದಾಯದ ನಾಯಕನನ್ನು ಅದೇ ಜಾತಿ ಜನ ತಮ್ಮವರೇ ವಾಸಿಸುವಂತೆ ಮಾಡುತ್ತಾರೆ. ಅಂಬೇಡ್ಕರ್‌ನಗರದಲ್ಲಿ ಕೇವಲ ಪ.ಜಾ/ಪ.ಪಂ.ಗಳಿಗೆ ನಿವೇಶನ ಕೊಡುತ್ತಾರೆ. ಬಸವೇಶ್ವರ ನಗರದಲ್ಲಿ ಲಿಂಗಾಯತರು, ಕನಕದಾಸ ನಗರದಲ್ಲಿ ಕುರುಬರು, ರಾಘವೇಂದ್ರ ಕಾಲನಿಗಳಲ್ಲಿ ಬ್ರಾಹ್ಮಣರು ಜಾತಿವಾರು ನಿವೇಶನ ಹಂಚಿಕೆ ಮಾಡಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಹೆಚ್ಚಿನ ಕುಟುಂಬಗಳಿಗೆ ವಸತಿ ಸೌಲಭ್ಯ ಇಲ್ಲದಿರುವುದು ಗಮನಿಸತಕ್ಕ ಅಂಶವಾಗಿದೆ. ಒಟ್ಟು ಕುಟುಂಬಗಳಲ್ಲಿ ಅತಿ ಹೆಚ್ಚಿನ ಕುಟುಂಬಗಳು ವಾಸವಾಗಿರುವ ಮನೆಯ ನಮೂನೆ ಎಂದರೆ ಮಣ್ಣಿನ ಮನೆ, ತಗಡಿನ, ಗುಡಿಸಲಿನ, ಮನೆಯಾಗಿವೆ. ಈ ಸಮುದಾಯದ ಕುಟುಂಬಗಳಿಗೆ ಸೂಕ್ತ ವಸತಿ ಸೌಲಭ್ಯ ಇಲ್ಲದಿರುವದು ತುಂಬಾ ಕಳವಳಕಾರಿ ವಿಷಯವಾಗಿದೆ. ರೋಣ ಮತ್ತು ನರಗುಂದ ತಾಲ್ಲೂಕುಗಳ ಬೆಣ್ಣಿ

ಹಳ್ಳದಲ್ಲಿ ಪ್ರವಾಹ ಉಕ್ಕಿ ಅದರಿಂದ ಸಾಕಷ್ಟು ಸಮಸ್ಯೆಗಳನ್ನು ಈ ಸಮುದಾಯ ಎದುರಿಸುತ್ತಿದ್ದುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಪ್ರತಿವರ್ಷ ಪ್ರವಾಹದಿಂದ ವಸತಿಗಳು ಮುಳುಗಡೆಯಾಗುವ ಸಂಭವ ಇಲ್ಲಿ ಹೆಚ್ಚಾಗಿದೆ. ಪ್ರವಾಹದಲ್ಲಿ ಮನೆ ಕಳೆದುಕೊಂಡವರು ಚಿಕ್ಕಮಕ್ಕಳು, ವಿದ್ಯಾರ್ಥಿಗಳು, ವಯಸ್ಸಾದ ವಯೋವೃದ್ಧರನ್ನು ಕರೆದುಕೊಂಡು ದೂರದ ತಗಡಿನ ಶೆಡ್ಡಿನಲ್ಲಿ ಎರಡು ಮೂರು-ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಇವರಿಗೆ ಸರ್ಕಾರ ಯಾವುದೆ ನಾಗರಿಕ ಸೌಲಭ್ಯ ಒದಗಿಸಿಲ್ಲ. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಯ ಕಾಲದಲ್ಲಿ ಇವರು ಅನುಭವಿಸುವ ತೊಂದರೆಗಳು ಶೋಚನೀಯವಾಗಿದೆ. ಪುನರ್ವಸತಿ ಪ್ರದೇಶಗಳಲ್ಲಿ ಆದಷ್ಟು ಬೇಗ ಮನೆಗಳನ್ನು ಕೊಡುವದು ಸರ್ಕಾರದ ಜವಾಬ್ದಾರಿಯಾಗಿದೆ.

ನಗರ ಪ್ರದೇಶಗಳಲ್ಲಿ ಈ ಸಮುದಾಯದ ಜನರಿಗೆ ಮೇಲ್ಜಾತಿಯ ಜನರು ಭಾಡಿಗೆ ಮನೆ ಕೊಡುವದಿಲ್ಲ. ಸಮುದಾಯದವರು ವಾಸಿಸುವ ಓಣಿಯಲ್ಲಿ ಭಾಡಿಗೆ ಕೊಟ್ಟು ಇರಬೇಕು ಎಂದರೆ ಒಳ್ಳೆಯ ಸುಸಜ್ಜಿತ ಮನೆಗಳಿಲ್ಲ. ಹೀಗಾಗಿ ನೌಕರಸ್ಥ ಛಲವಾದಿ ಸಮುದಾಯದ ಜನರು ನಗರ ಪ್ರದೇಶಗಳಲ್ಲಿ ಸಾಕಷ್ಟು ಸಮಸ್ಯ ಎದುರಿಸುತ್ತಿದ್ದಾರೆ. ಈ ಹಿಂದೆ ಇದ್ದಂತಹ ಗ್ರಾಮಗಳ ಕೊನೆ ಹಂಚಿನಲ್ಲಿ ವಾಸಿಸುವಂತೆ ಅದರ ಹಾಗೆನೇ ಇಂದು ಇವರು ನಗರದ ಹೊರವಲಯದಲ್ಲಿ ಕೊಳಗೇರಿಗಳಲ್ಲಿ ವಾಸಿಸುತ್ತಿರುವರು. ಛಲವಾದಿ ಸಮುದಾಯದ ಆರ್ಥಿಕ ಪರಿಸ್ಥಿತಿ ತುಂಬ ಶೋಚನೀಯವಾಗಿದೆ. ಗ್ರಾಮ ಪಂಚಾಯತಿಯ ಸದಸ್ಯರು ವಸತಿ ಸೌಲಭ್ಯ ದೊರಕಿಸಿಕೊಡುವಲ್ಲಿ ವಿಫಲರಾಗಿದ್ದಾರೆ.

ಛಲವಾದಿ ಜನರ ವಾಸಿಸುವ ಮನೆಯ ಪ್ರಕಾರಗಳಲ್ಲಿ ಶೇ. ೨೩.೯ ರಷ್ಟು ಮಣ್ಣಿನ ಭಾವಣಿ ಇರುವ ಮನೆಗಳಿವೆ. ಆಶ್ರಯ ಮನೆಗಳು, ತಗಡಿನ ಮನೆಗಳು ಹಂಚಿನ ಮನೆಗಳು, ಬಾಡಿಗೆಯ ಮನೆಗಳು, ಹಾಗೂ ಗುಡಾರ ಅಥವಾ ಗುಡಿಸಲ ಮನೆಗಳಲ್ಲಿ ಕ್ರಮವಾಗಿ ಶೇ. ೨೧.೨, ೧೫.೬, ೧೪.೫, ೪.೯, ೫.೪ ಮನೆಗಳಿವೆ. ವಾಸದ ಮನೆಗಳಲ್ಲಿ ಪ್ರತಿಶತ ೮೮೦ ಕುಟುಂಬಗಳಿಗೆ ನೀರು ಒದಗಿಸುವ ನಳದ ಸೌಕರ್ಯವಿದ್ದರೆ ಶೇ. ೯೧ ರಷ್ಟು ಪ್ರತಿಶತ ಕುಟುಂಬಗಳಿಗೆ ಸ್ನಾನಗ್ರಹ ಹಾಗೂ ೯೫.೩ ಕುಟುಂಬಗಳಿಗೆ ಶೌಚಾಲಯ ಸೌಲಭ್ಯಗಳಿಲ್ಲದೆ ಇರುವದು ಕಂಡುಬಂದಿದೆ.

ಇದಕ್ಕೆ ಕಡು ಬಡತನದ ಪ್ರಮಾಣ ಹೆಚ್ಚಿರುವುದೆ ಕಾರಣವಾಗಿದೆ. ಮಳೆಯಾಧಾರಿತ ಕೃಷಿ ಪ್ರದೇಶದಲ್ಲಿ ಕೂಲಿಗಳಾಗಿರುವ ಇವರು ಅರೆ ನಿರುದ್ಯೋಗಿಗಳಾಗಿದ್ದಾರೆ. ವರ್ಷದ ಎಲ್ಲ ಕಾಲಗಳಲ್ಲಿಯೂ ಕೂಲಿ ಸಿಗದ ಈ ಜಿಲ್ಲೆಯಲ್ಲಿ ನೆಲೆಸಿರುವ ಹೆಚ್ಚಿನ ಕುಟುಂಬಗಳು ನಿರಕ್ಷರಿಗಳಾಗಿವೆ. ಶಿಕ್ಷಣದಲ್ಲಿ ತುಂಬಾ ಹಿಂದುಳಿದಿದ್ದರೂ ಕೃಷಿಯೇತರ ಕೂಲಿಗಳೂ ಮಾಡುವವರು ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಇವರ ಆರ್ಥಿಕ ಸ್ಥಿತಿ ಬಡತನದ ಮಟ್ಟಕ್ಕಿಂತ ಕೆಳಗಿದೆ. ಎರಡು ಅಥವಾ ಒಂದು ಕೋಣೆಯ ಮನೆಗಳೆ ಹೆಚ್ಚು ಕಂಡು ಬರುತ್ತವೆ. ಹೀಗಾಗಿ ನೀರಿನ ಸಮಸ್ಯೆ ಮತ್ತು ಶೌಚಾಲಯ ಸಮಸ್ಯೆ ಗಂಭೀರವಾಗಿದೆ. ಸಾಮಾನ್ಯವಾಗಿ ಬಯಲು ಜಾಗದಲ್ಲಿ ಬಹಿರ್ದೆಶೆಗೆ ಹೋಗುತ್ತಾರೆ. ಕೆಲವು ಗ್ರಾಮಗಳಲ್ಲಿ ಓಣಿಯ

ಸಮೀಪದಲ್ಲಿಯೆ ಶೌಚಾಲಯಗಳಿವೆ. ಹೀಗಾಗಿ ಅರಹುಣಸಿ ಹಾಗೂ ಬೆಟಗೇರಿ ಗ್ರಾಮಗಳ ಓಣಿಯಲ್ಲಿ ಕೆಟ್ಟ ದುರ್ನಾತ ತುಂಬಿಕೊಂಡಿದೆ. ಹೊಳೆ ಆಲೂರು ಮೊದಲಾದ ಗ್ರಾಮಗಳಲ್ಲಿ ಸಾರ್ವಜನಿಕ ಶೌಚಾಲಯ ಕಂಡು ಬರುತ್ತದೆಯಾದರೂ ಸ್ವಚ್ಛತೆ ಇಲ್ಲದೆ ಉಪಯೋಗಿಸಲಾಗದ ಸ್ಥಿತಿ ತಲುಪಿವೆ.

ವಿದ್ಯುತ್ ಸೌಕರ್ಯ ಹಾಗೂ ಪಡಿತರ ಚೀಟಿ ಸೌಲಭ್ಯವನ್ನು ಹೆಚ್ಚಿನ ಕುಟುಂಬಗಳು ಹೊಂದಿದ್ದರೂ ಬಹಳಷ್ಟು ಕುಟುಂಬಗಳು ಇದರಿಂದ ವಂಚಿತವಾಗಿವೆ. ವಲಸೆಯಿಂದಾಗಿ ಗ್ರಾಮೀಣ ಯುವ ಪೀಳಿಗೆ ವಿವಿಧ ವೃತ್ತಿಗಳ ಕೇಂದ್ರಸ್ಥಾನವಾಗಿರುವ ನಗರದ ಕಡೆಗೆ ಮುಖ ಮಾಡಿದೆ. ಹಾಗಾಗಿ ಕೈಗಾರಿಕೆಗಳಲ್ಲಿ ಅಥವಾ ಸರ್ಕಾರಿ ಇಲಾಖೆಗಳಲ್ಲಿ, ಖಾಸಗಿ ಸಂಘ ಸಂಸ್ಥೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಿಂದ ವಲಸೆ ಬಂದ ಛಲವಾದಿ ಜನ ಇಂದು ಕೊಳಗೇರಿಯಲ್ಲಿ ನೆಲೆ ನಿಂತಿದ್ದಾರೆ.

೮.೧೦. ದೇವದಾಸಿ ಸಮಸ್ಯೆ

ಕರ್ನಾಟಕ ಬೆಳಗಾವಿಯ ಸವದತ್ತಿ ಗುಡ್ಡದ ಮೇಲಿರುವ 'ರೇಣುಕಾದೇವಿ' (ಎಲ್ಲಮ್ಮ) ಹೆಸರಿನಲ್ಲಿ ಈಗಲೂ ಕಾನೂನಿನ ಕಣ್ಣುತಪ್ಪಿಸಿ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿ ಮಾಡಲಾಗುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿವೆ. ಎಲ್ಲಮ್ಮನ ಹೆಸರಿನಲ್ಲಿ 'ಜೋಗತಿ'ಯರಾಗಿರುವ ಹೆಣ್ಣುಮಕ್ಕಳನ್ನು ತಲೆ ಹಿಡುಕರು, ದಲ್ಲಾಳಿಗಳು ಹಾಗೂ ವೃದ್ಧ ವೇಶ್ಯೆಯರು ಬೊಂಬಾಯಿ, ಪೂನಾ ಹಾಗೂ ಕಲ್ಕತ್ತಾ ವೇಶ್ಯಾಗೃಹಗಳಿಗೆ ಮಾರಾಟ ಮಾಡುತ್ತಾರೆ. ಬೊಂಬಾಯಿ ವೇಶ್ಯೆಯರಲ್ಲಿ ಕನಿಷ್ಠ ಶೇ. ೨೫ ರಿಂದ ೩೨ ಮಂದಿ 'ದೇವದಾಸಿ' ಅಥವಾ 'ಜೋಗತಿ' ರೂಪದಲ್ಲಿ ಆ ವೃತ್ತಿಗೆ ಕಾಲಿಟ್ಟಿದ್ದಾರೆಂದು ತಿಳಿದು ಬಂದಿದೆ.

ಜಿಲ್ಲೆಯ ಐದು ತಾಲೂಕಿನಲ್ಲಿ ದೇವದಾಸಿಯರು ಕಂಡು ಬರುತ್ತಾರೆ. ಇವರು ೪೫ರಿಂದ ೫೦ ವರ್ಷದ ವಯೋಮಾನದವರಾಗಿದ್ದು ಮೊದಲಿನಿಂದಲೂ ಸಾಕಷ್ಟು ಸಮಸ್ಯೆ ಎದುರಿಸುತ್ತ ಜೀವನ ಸಾಗಿಸುತ್ತಿದ್ದಾರೆ; ಮತ್ತು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಸರ್ಕಾರದ ಸೌಲಭ್ಯಗಳು ಇವರಿಗೆ ಸಕಾಲದಲ್ಲಿ ದೊರೆಯದಂತಾಗಿ ತಮ್ಮ ಆರ್ಥಿಕ ತೊಂದರೆಯಿಂದಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗಿಲ್ಲ. ಸರಕಾರವು ದೇವದಾಸಿಯರಿಗೆ ಕೊಡುವ ಪ್ರತಿ ತಿಂಗಳ ಮಾಸಾಶನದಿಂದ ಕುಟುಂಬ ನಡೆಸಿಕೊಂಡು ಹೋಗುವದು ಅಸಾಧ್ಯವಾಗಿದೆ. ಕೆಲವು ದೇವದಾಸಿಯರು ಕೃಷಿ ಕೂಲಿಕಾರರಾಗಿ ಜೀವನ ಸಾಗಿಸುತ್ತಿದ್ದಾರೆ. ಇವರ ಮಕ್ಕಳ ಶಿಕ್ಷಣವು ಬಹಳಷ್ಟು ಕೆಳಮಟ್ಟದಲ್ಲಿವೆ. ಇವರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಿಲ್ಲ. ಅದರಂತೆ ಸರಕಾರದ ಸೌಲಭ್ಯದ ಬಗ್ಗೆ ತಿಳುವಳಿಕೆ ಇಲ್ಲದಿರುವದರಿಂದ ಇವರು ಸಾಕಷ್ಟು ಸಮಸ್ಯಗಳಿಂದ ಬಳಲುತ್ತಿದ್ದಾರೆ.

೮.೧೧. ಆರೋಗ್ಯ ಮತ್ತು ನೈರ್ಮಲ್ಯ ಸಮಸ್ಯೆ

ಪ್ರಾರಂಭದಿಂದಲೂ ಛಲವಾದಿ ಸಮುದಾಯ ಅನೇಕ ಸಾಂಕ್ರಾಮಿಕ ರೋಗಗಳಿಗೆ ಬಲಿ ಆಗುತ್ತಿತ್ತು. ಪರಿಸರ ನೈರ್ಮಲ್ಯದ ಕೊರತೆ, ಸತ್ತ ದನಗಳ ಮಾಂಸ ತಿನ್ನುವದು, ಪ್ರತಿಯೊಂದು ಋತುಮಾನದಲ್ಲಿ ಮಾಂಸ ಒಣಗಿಸಿ ತಿನ್ನುವುದು, ಶುದ್ಧನೀರಿನ ಅಭಾವ ಇದರ ಸಾಮಾನ್ಯ ಕಾರಣವಾಗಿತ್ತು. ಮನುಷ್ಯನಿಗೆ ಏನಾದರೂ ಕಾಯಿಲೆ ಬಂದರೆ ಆಸ್ಪತ್ರೆಗೆ ಹೋಗುವ ಬದಲಾಗಿ ಮೂಢನಂಬಿಕೆಗೆ ಮಹತ್ವಕೊಟ್ಟು ಮಾಟ-ಮಂತ್ರಗಳ ಮಾಡಿಸುತ್ತಿದ್ದರು. ಹಿಂದಿನ ದಿನಗಳಲ್ಲಿ ಬಾಣಂತನವನ್ನು ಹಿರಿಯ ಅನುಭವಿ ಸೂಲಗಿತ್ತಿಯರು ಮಾಡುತ್ತಿದ್ದರು. ಇವರ ವಾಸದ ಮನೆಗಳಲ್ಲಿ ಸರಿಯಾದ ಕಿಟಕಿ, ಬಾಗಿಲು, ಗಾಳಿ ಬೆಳಕು, ನೀರಿನ ವ್ಯವಸ್ಥೆ ಇರುವುದಿಲ್ಲ. ಮನೆಯ ಸುತ್ತ ದನಕರು, ಕುರಿ ಮೇಕೆ ದೊಡ್ಡಿ, ತಿಪ್ಪೆಗುಂಡಿ, ಗಲೀಜು ವಾತಾವರಣದಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಮನೆ ಬಳಕೆಯ ಬಟ್ಟೆ, ಅಡಿಗೆ ಸಾಮಾಗ್ರಿಗಳು, ಆಹಾರ ಸಾಮಾಗ್ರಿಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಿಲ್ಲ. ಕೆರೆಬಾವಿಯ ನಿಂತ ನೀರನ್ನು ಉಪಯೋಗಿಸುವದು, ದನ ಕರುಗಳ ಮೈ ತೊಳೆಯುವದು, ಕಕ್ಕಸ ತೊಳೆಯುವದು ಮತ್ತು ಸ್ವಚ್ಛವಿಲ್ಲದ ನೀರನ್ನು ಅಡಿಗೆಗೆ ಬಳಸುವದರಿಂದ ಹಲವಾರು ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಇವರಲ್ಲಿ ಪೌಷ್ಟಿಕ ಆಹಾರ ಬಳಕೆ ತುಂಬಾ ಕಡಿಮೆ ಇದೆ. ಕೆಲವೊಂದು ಗ್ರಾಮಗಳಲ್ಲಿ ಸ್ತ್ರೀ ಶೌಚಾಲಯಗಳು, ಮದ್ಯಪಾನದ ಅಂಗಡಿಗಳು ಓಣಿಯ ಹತ್ತಿರವೇ ಕಂಡುಬರುತ್ತವೆ. ಇವರು ಮಾಡುವ ಕೆಲಸಗಳು ಹೆಚ್ಚಾಗಿ ಅಶುಚಿತ್ವದಿಂದ ಕೂಡಿರುತ್ತವೆ. ಪೌರ ಕಾರ್ಮಿಕರು, ಕಸ ಗೂಡಿಸುವವರು, ಹೆಚ್ಚಾಗಿ ಮೇಲಿಂದ ಮೇಲೆ ಜ್ವರ, ಕೆಮ್ಮು, ಅಸ್ತಮಾ ಮುಂತಾದ ರೋಗಗಳಿಂದ ಬಳಲುತ್ತಿದ್ದಾರೆ.

೮.೧೨ ಧಾರ್ಮಿಕ ಸಮಸ್ಯೆ

ಈ ಸಮುದಾಯದವರು ಶೈವ ಮತ್ತು ವೈಷ್ಣವ ಪಂಥಗಳನ್ನು ನಂಬಿದ್ದಾರೆ. ಎಲ್ಲಾ ದೇವರುಗಳಿಗೂ ಭಯ-ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಪ್ರಮುಖವಾಗಿ ಲಿಂಗಬಸವ, ಹನುಮಂತ, ಎಲ್ಲಮ್ಮ, ಹುಲಿಗೆಮ್ಮ, ಮಾರಮ್ಮ, ದುರ್ಗಾದೇವಿ, ಮೈಲಾರಲಿಂಗಪ್ಪರನ್ನು ಪೂಜಿಸುತ್ತಾರೆ. ದೇವರ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವುದು, ಧರ್ಮ ಕಾರ್ಯಗಳಿಗಾಗಿ ದುಂದು ವೆಚ್ಚ ಮಾಡುವುದು, ಮದುವೆ ಕಾರ್ಯದಲ್ಲಿ ಕೋಳಿ-ಕುರಿ ಕೊಯ್ದು ಹರಕೆ ಸಲ್ಲಿಸುವುದು ಕಂಡುಬರುತ್ತದೆ. ಗ್ರಾಮೀಣ ಸಮುದಾಯದಲ್ಲಿ ಛಲವಾದಿ ಜನರಿಗೆ ದೇವಾಲಯ, ಮಠ-ಮಾನ್ಯಗಳಲ್ಲಿ ಇಂದಿಗೂ ಪ್ರವೇಶಿಸಲು ಮೇಲ್ಜಾತಿಯವರಂತೆ ದೇವರುಗಳನ್ನು ಭಯ-ಭಕ್ತಿಯಿಂದ ಪೂಜಿಸಿದರೂ ಸಹ ಹೊರಗಿನಿಂದಲೇ ಪೂಜೆ ಪುನಸ್ಕಾರ ಮಾಡುವದು ಕಂಡುಬರುತ್ತದೆ. ಹಲವು ದೇವ ದೇವತೆಗಳಿಗೆ ಹರಿಕೆ ಸಲ್ಲಿಸಿದರು ಸಹ ಯಾವ ದೇವರು ಇವರಿಗೆ ಪ್ರವೇಶಿಸುವ ಅವಕಾಶ ನೀಡಿರುವದಿಲ್ಲ. ಅದರಂತೆ ಸವಿಂಧಾನದ ಕಾಯ್ದೆ ಕಾನೂನುಗಳು ಇದ್ದರು ಸಹ ಇವರಿಗೆ ದೇವಾಲಯ ಪ್ರವೇಶದ ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವದಿಲ್ಲ.

೮.೧೩. ರಾಜಕೀಯ ಸಮಸ್ಯೆ

ಛಲವಾದಿ ಸಮುದಾಯದವರು ರಾಜಕೀಯ ಕ್ಷೇತ್ರದಲ್ಲಿ ಬಹಳಷ್ಟು ಹಿಂದುಳಿದಿದ್ದಾರೆ. ಗ್ರಾಮ ಮಟ್ಟದ ಪಂಚಾಯಿತಿಯಿಂದ ಹಿಡಿದು ಲೋಕಸಭೆಯವರೆಗೆ ಯಾವದೇ ಮಹತ್ತರವಾದ ಸ್ಥಾನಮಾನವನ್ನು ಪಡೆದಿಲ್ಲ. ಗ್ರಾಮಪಂಚಾಯತಿಗಳಲ್ಲಿ ಕೆಲವು ಸದಸ್ಯರು ಆಯ್ಕೆಗೊಂಡಿದ್ದಾರೆ. ಕೆಲವು ತಾಲೂಕುಗಳಲ್ಲಿ ಸದಸ್ಯರ ಸಂಖ್ಯೆ ತುಂಬಾ ಕಡಿಮೆ ಇದೆ. ತಾಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಇಲ್ಲಿಯವರೆಗೆ ಮೂರ್‍ನಾಲ್ಕು ಜನ ಮಾತ್ರ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಈ ಸಮುದಾಯದವರಲ್ಲಿ ಈ ಹಿಂದೆ ಒಂದು ಸಲ ರೋಣ ತಾಲೂಕಿನಲ್ಲಿ ಶ್ರೀ ದೊಡಮನಿಯವರು ಆಯ್ಕೆಗೊಂಡಿರುತ್ತಾರೆ. ಇದರ ನಂತರದಲ್ಲಿ ಎಂ.ಎಲ್.ಎ., ಎಂ.ಎಲ್.ಸಿ. ಮತ್ತು ಎಂ.ಪಿ.ಗಳಾಗಲು ಯಾರೊಬ್ಬರಿಗೂ ಯಾವ ರಾಷ್ಟ್ರೀಯ ಪಕ್ಷಗಳು ಕೂಡಾ ಟಿಕೆಟ್ ಕೊಟ್ಟು ಚುನಾವಣೆಗೆ ಸ್ಪರ್ಧಿಸುವ ಅವಕಾಶ ಮಾಡಿಕೊಟ್ಟಿಲ್ಲ. ಸಮಾಜದ ಎಲ್ಲಾ ಕ್ಷೇತ್ರದ ನಿಯಂತ್ರಣದ ಶಕ್ತಿಯು ರಾಜಕೀಯ ಶಕ್ತಿಯಾಗಿದೆ. ಈ ಶಕ್ತಿಯು ಇವರಿಗೆ ಇಲ್ಲದಿರುವದರಿಂದ ಇಂದು ಇವರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಈ ಸಮುದಾಯದವರು ಆರ್ಥಿಕ, ಸ್ಥಿತಿವಂತ ಇಲ್ಲದಿರುವದರಿಂದ ರಾಜಕೀಯ ನಿರಾಸಕ್ತಿ ಪ್ರಮುಖವಾದ ಕಾರಣವಾಗಿದೆ. ಇಂದು ಆಯ್ಕೆಗೊಂಡಂಥ ಗ್ರಾಮಪಂಚಾಯತಿ ಕೆಲವು ಸದಸ್ಯರು ಕೂಲಿ ಕೆಲಸಗಳನ್ನು ಮಾಡಿ ಉಪಜೀವನ ಸಾಗಿಸುತ್ತಿದ್ದಾರೆ. ಅಂದರೆ ಇವರ ರಾಜಕೀಯ ಸ್ಥಾನಮಾನ ಸ್ಥಿತಿಗತಿಗಳು ಯಾವ ರೀತಿಯಾಗಿವೆ ಎಂಬುದು ಅರ್ಥಮಾಡಿಕೊಳ್ಳಬಹುದು. ಆಯ್ಕೆಯಾದ ಬಹುಪಾಲು ಸದಸ್ಯರು ನಿರಕ್ಷರಿಗಳಾಗಿದ್ದಾರೆ. ಹೀಗಾಗಿ ಪಂಚಾಯತಿ ಬಗ್ಗೆ ಸರಕಾರಿ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿಗಳು ಇಲ್ಲದಿರುವುದರಿಂದ ತಮ್ಮ ಅಧಿಕಾರದ ಆಡಳಿತವನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗಿಲ್ಲ ಎಂದು ಕೆಲವರು ತಿಳಿಸುತ್ತಾರೆ. ಆದರೆ ಇವರು ಉಪಜೀವನಕ್ಕಾಗಿ ಶ್ರೀಮಂತ ಮಾಲೀಕರ ಹತ್ತಿರ ದುಡಿಯುವ ಸ್ಥಿತಿ ಇರುವದರಿಂದ ಇವರು ಮಾಲಿಕನಿಗೆ ವಿರುದ್ಧವಾಗಿ ಕ್ರಮಕೈಗೊಳ್ಳಲು ಸಾಧ್ಯವಾದೀತೆ ? ಎನ್ನುವ ಪ್ರಶ್ನೆ ಕಾಡುತ್ತಿದೆ. ಮೇಲ್ಜಾತಿಗಳ ಕೈಗೊಂಬೆಗಳಾಗಿ ದುಡಿಯುವವರೆಗೆ ಮಾತ್ರ ಸದಸ್ಯರನ್ನಾಗಿ ಆಯ್ಕೆ ಮಾಡುವ ಸಂಭವ ಹೆಚ್ಚಾಗಿ ಕಂಡುಬರುತ್ತದೆ. ವಿದ್ಯಾವಂತರಿಗೆ ಗ್ರಾಮಪಂಚಾಯತಿ ಸದಸ್ಯರನ್ನಾಗಿ ಆಯ್ಕೆ ಮಾಡುವದು ತುಂಬಾ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತದೆ. ಜಿಲ್ಲಾ ಮಟ್ಟದಲ್ಲಿ ಸಹ ಪ್ರಬಲ ರಾಜಕೀಯ ನಾಯಕರ ನಾಯಕತ್ವದ ಕೊರತೆಯಿಂದ, ಸದಸ್ಯರ ವೈಯಕ್ತಿಕ ಹಿತಾಸಕ್ತಿಗಳಿಂದ ಇವರ ಸಮುದಾಯದ ಪ್ರಗತಿ ಕುಂಠಿತಗೊಂಡಿದೆ.

೮.೧೪ ಸಂಘಟನೆಗಳು

ಇಂದು ಎಲ್ಲ ಸಮುದಾಯಗಳು ತಮ್ಮದೆ ಸಂಘಗಳನ್ನು ಕಟ್ಟಿಕೊಂಡು ಸಂಘಟಿತರಾಗುತ್ತಿದ್ದಾರೆ. ಪ್ರತಿಯೊಂದು ಸಂಘದ ಸದಸ್ಯರಲ್ಲಿ ಸಮಾನ ಆಸಕ್ತಿ, ಸಂಘದ ನಿಯಮಗಳ ಪಾಲನೆ, ಪರಸ್ಪರ

ಸಹಕಾರದೊಂದಿಗೆ ತಮ್ಮ ಹತ್ತು ಹಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ವೈಯಕ್ತಿಕ ಬೇಡಿಕೆಗಳಿಗಿಂತ ಸಾಮೂಹಿಕ ಬೇಡಿಕೆಗಳಿಗೆ ಬಹಳ ಮಹತ್ವವಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಬಲ ಜಾತಿ ಸಮುದಾಯಗಳು ಸಂಘಟಿತರಾಗಿ ಸಂಘ ಸ್ಥಾಪಿಸಿಕೊಂಡಿದ್ದು ತಳಜಾತಿಗಳು ಜಾತಿ ಹೆಸರಿನಲ್ಲಿ ಸಂಘಟಿತರಾಗಲು ಪ್ರೇರೇಪಣೆ ನೀಡಿವೆ.

ಕರ್ನಾಟಕದಲ್ಲಿ ಹಿಂದುಳಿದ ಮತ್ತು ದಲಿತ ಚಳವಳಿಗಳು ಪ್ರವೇಶ ಪಡೆಯಲು ಮತ್ತು ವ್ಯವಸ್ಥಿತವಾಗಿ ಆರಂಭಗೊಳ್ಳಲು ಮಹಾರಾಷ್ಟ್ರದಲ್ಲಿ ನಡೆದ ಸುಧಾರಣಾ ಹೋರಾಟಗಳು ಪರೋಕ್ಷವಾಗಿ ಕಾರಣವೆಂದು ಹೇಳಲಾಗಿದೆ.

"ಆಧುನಿಕ ಭಾರತದ ಮೊಟ್ಟಮೊದಲ ಮಹಾತ್ಮಾ ಜ್ಯೋತಿಬಾ ಪುಲೆ 'ಸತ್ಯಮೇವ ಜಯತೆ' ಮಂತ್ರಶಕ್ತಿ ತುಂಬಿದ ಮೊದಲ ಸತ್ಯಶೋಧಕ. ೧೮೭೩ರಲ್ಲಿ 'ಸತ್ಯ ಶೋಧಕ ಸಮಾಜ' ಆರಂಭಿಸಿ ಶೋಷಿತರನ್ನು ಶೋಷಣೆಯಿಂದ ಮುಕ್ತಗೊಳಿಸುವ ದಿಸೆಯಲ್ಲಿ ಚಳವಳಿ ಸ್ವರೂಪದ ಚಟುವಟಿಕೆಗಳಿಗೆ ಈತ ನಾಂದಿ ಹಾಡಿದ. ಜಾತಿ ವ್ಯವಸ್ಥೆಯನ್ನು ತೊಡೆದು ಹಾಕುವ ಕ್ರಾಂತಿ ಇಂಗ್ಲಿಷ ಕಲಿಕೆಯಿಂದ ಆಗಲಿಲ್ಲವೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಿದೆ. ಪುಲೆಯವರು ಈ ವಿಚಾರದಲ್ಲಿ ಯಶಸ್ಸಿನ ಹಾದಿಯಲ್ಲಿ ಮುನ್ನುಗ್ಗಿದ್ದರು."[೪]

"ಮೈಸೂರು ಮಹಾರಾಜರ ಕಾಲದಲ್ಲಿ ಬ್ರಾಹ್ಮಣೇತರ ಸಂಘಗಳು ಸ್ಥಾಪನೆಯಾದವು. ೧೮೮೧ರಲ್ಲಿ ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ರೈತ ಮತ್ತು ವರ್ತಕ ವರ್ಗಗಳ ಪ್ರತಿನಿಧಿಗಳು ಪ್ರಮುಖವಾಗಿದ್ದುದು ಒಂದು ವಿಶೇಷ. ಆದ್ದರಿಂದ ಒಕ್ಕಲಿಗರು ಮತ್ತು ವೀರಶೈವರು ಒಟ್ಟಾಗಿರಲು ಸಹಜವಾಗಿ ಸಾಧ್ಯವಾಯಿತು. ಶೈಕ್ಷಣಿಕವಾಗಿ ಮುಂದುವರೆದ ವೀರಶೈವರು ೧೯೦೫ರಲ್ಲಿ 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಘ', ಆನಂತರ ೧೯೦೬ರಲ್ಲಿ ಬೆಂಗಳೂರಿನಲ್ಲಿ 'ಒಕ್ಕಲಿಗರ ಸಂಘ' ಸ್ಥಾಪಿಸಿಕೊಂಡರು."[೫]

ದಲಿತ ಸಮುದಾಯಗಳ ಪರವಾಗಿ ಹೋರಾಡಲು ವಿವಿಧ ದಲಿತ ಒಕ್ಕೂಟಗಳು ಅಸ್ತಿತ್ವಕ್ಕೆ ಬಂದುದು ತಳವರ್ಗಗಳ ಸಂಘಟನೆ ಮತ್ತು ಚಳವಳಿಗಳಲ್ಲಿ ಮುಖ್ಯ ಘಟ್ಟವಾಗಿದೆ. ೧೯೨೦ರ ನಂತರ ಆದಿ ಕರ್ನಾಟಕ ಚಳವಳಿಗಳು ನಡೆಯಲು ಆರಂಭವಾದುದನ್ನು ನೋಡಬಹುದು. ಈ ವೇಳೆಗೆ ಆದಿ ದ್ರಾವಿಡ ಅಭಿವೃದ್ಧಿ ಸಂಘ ಮತ್ತು ಮಾದಿಗರ ಪ್ರಾತಿನಿಧ್ಯವುಳ್ಳ ಆದಿ ಜಾಂಬವ ಸಂಘಗಳು ಅಸ್ತಿತ್ವಕ್ಕೆ ಬಂದವು. [೬]

೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿಯ ಹುಟ್ಟಿನೊಡನೆ ದಲಿತ ಲೇಖಕ ಕಲಾವಿದರ ಬಳಗ, ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ನೌಕರ ಒಕ್ಕೂಟ, ದಲಿತ ಕಲಾ ಮಂಡಳಿ ಮುಂತಾದ ಸಂಘಟನೆಗಳ ಉದಯವಾದವು.[೭]

ಕರ್ನಾಟಕ ರಾಜ್ಯದಲ್ಲಿ ಛಲವಾದಿ ಸಮುದಾಯಗಳು ಕನಿಷ್ಠ ಜೀವನ ಸಾಗಿಸಲಾರದೆ ಹಿಂದುಳಿದಿದ್ದಾರೆ. ಅದರಲ್ಲೂ ಗದಗ ಜಿಲ್ಲೆಯ ಛಲವಾದಿ ಸಮುದಾಯದ ಜನ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಉದ್ಯೋಗ ಕ್ಷೇತ್ರದಲ್ಲಿ ತುಂಬ ಕೆಳಮಟ್ಟದಲ್ಲಿದ್ದಾರೆ. ಇವರ ಸಂಘಗಳು ಸೂಕ್ತಮಟ್ಟದಲ್ಲಿ ಬೆಳವಣಿಗೆ ಕಾಣದೆ ಮೊದಲಿನಿಂದಲೂ ಅಸಂಘಟಿತರಾಗಿದ್ದಾರೆ. ಪ್ರತಿಗ್ರಾಮದಲ್ಲಿ ಎರಡು ಮೂರು ಗುಂಪುಗಳು ಪರಸ್ಪರ ಅಸೂಯೆ, ದ್ವೇಷ, ಹೊಟ್ಟೆಕಿಚ್ಚು ಪಡುವುದರಲ್ಲಿ ತೊಡಗಿರುವ ಕಾರಣದಿಂದ ಒಕ್ಕಟ್ಟಿನ ಜೀವನ ದುಸ್ತರವಾಗಿದೆ. ಬೇರೆ ಜಾತಿ ಜನರ ಹಿಂಬಾಲಕರಾಗಿ ತಮ್ಮ ಅಸ್ತಿತ್ವ ಕಳೆದುಕೊಂಡಿದ್ದಾರೆ.

ಈ ಸಮುದಾಯ ನಿರಂತರ ದಬ್ಬಾಳಿಕೆ ದೌರ್ಜನ್ಯಗಳಿಗೆ ಒಳಗಾಗಿದೆ. ಇವನ್ನು ಇಲ್ಲಿಯವರೆಗೆ ಮೂಕಪ್ರೇಕ್ಷಕರಂತೆ ಅನುಭವಿಸುತ್ತ ಬಂದಿದ್ದಾರೆ. ಇವರ ಬೌದ್ಧಿಕ ಸಾಮರ್ಥ್ಯಕ್ಕೆ ಸಮರ್ಥವಾದ ಚಾಲನೆ ನೀಡಬಲ್ಲ ಸಂಘಟನೆಯ ಅಭಾವ ಗಣನೀಯವಾಗಿದೆ. ಇವರಲ್ಲಿ ಸಂಘಟನಾತ್ಮಕ ಕೊರತೆ ಹೆಚ್ಚಾಗಿ ಕಂಡುಬರುತ್ತದೆ. ಡಾ॥ ಬಾಬ ಸಾಹೇಬ ಅಂಬೇಡ್ಕರ ಅವರು ಕೇಳಿದಂತೆ ಶಿಕ್ಷಣ ಸಂಘಟನೆ ಹೋರಾಟ ಇವರಲ್ಲಿ ಕಂಡು ಬರುವದಿಲ್ಲ. ಹೀಗಾಗಿ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಇಲ್ಲಿಯವರೆಗೆ ಜಿಲ್ಲೆ ತಾಲೂಕಾ, ಗ್ರಾಮಗಳ ಮಟ್ಟದಲ್ಲಿ ಅವರ ಸಂಘದ ಅಡಿಯಲ್ಲಿ ಸಮ್ಮೇಳನ, ವಿಚಾರ ಸಂಕ್ರಿರ್ಣಗಳನ್ನು ಮಾಡಲು ಇವರಿಗೆ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಶಿಕ್ಷಣ ಹಾಗೂ ನಾಯಕತ್ವದ ಕೋರತೆ ಕಂಡು ಬರುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ನಾಡಿನ ಸಮುದಾಯದ ಚಿಂತಕರ ಪ್ರತಿಫಲವಾಗಿ ಛಲವಾದಿ ಮಹಾಸಭಾ ಹುಟ್ಟಿಕೊಂಡಿದೆ. ಕಳಕಳಿಯುಳ್ಳ ಹಿತಚಿಂತಕರಿಂದ ಸಾಕಷ್ಟು ಕಾರ್ಯಕ್ರಮಗಳು ರೂಪುಗೊಂಡಿವೆ. ಐ.ಎ.ಎಸ್. ಅಧಿಕಾರಿಗಳಾದ ಕೆ. ಶಿವರಾಮ್ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ ಪ್ರಥಮ ಹಾಗೂ ಬೆಂಗಳೂರಿನಲ್ಲಿ ಎರಡನೆಯ ಐತಿಹಾಸಿಕ ಮಹಾಸಮ್ಮೇಳನ ಜರುಗಿವೆ. ಇಂದು ಗದಗ ಜಿಲ್ಲೆಯ ಸಾಕಷ್ಟು ಯುವ ನಾಯಕರು ಸಮುದಾಯದ ಏಳ್ಗೆಗಾಗಿ ಹಗಲಿರುಳು ದುಡಿದು ವಿವಿಧ ರೀತಿಯ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮುದಾಯದ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಛಲವಾದಿ ಸಮುದಾಯದ ಸಂಘಟನೆ ಹಾಗೂ ನಾಯಕರು

ರಾಜ್ಯದಲ್ಲಿ ಛಲವಾದಿ ಜನಾಂಗದ ಸಂಘಟನೆ ಹುಟ್ಟಿಕೊಳ್ಳುವುದಕ್ಕೂ ಮೊದಲು ಗದಗ ಜಿಲ್ಲೆಯಲ್ಲಿ ಛಲವಾದಿ ಜನಾಂಗದ ಚಿಂತಕರಾದ ಪೌರ ಸೇವಾ ನೌಕರರ ಸಹಕಾರಿ ಸೊಸೈಟಿ ಚೇರಮನ್ನರಾದ ಬಿ. ಎನ್ ಸಿಂಗಾಡಿಯವರ ಮಾರ್ಗದರ್ಶನದಲ್ಲಿ ಅಖಿಲ ಕರ್ನಾಟಕ ಛಲವಾದಿ ಸಂಘ ಎಂಬ ಹೆಸರಿನ ಸಂಘಟನೆಯೊಂದು ಸಮಾಜ ಸೇವೆ ಮಾಡುತ್ತ ಸಂಘಟಿಸುತ್ತ, ಸಂಘಟನೆ ಕಟ್ಟಿ ಬೆಳೆಸುವಲ್ಲಿ ತೊಡಗಿಸಿಕೊಂಡಿತು. ಯುವನಾಯಕ, ಸಮಾಜ ಚಿಂತಕ ಬಸವರಾಜ ಮುದಕಪ್ಪ ಕಡೇಮನಿ ಹಾಗೂ ಛಲವಾದಿ ಸಮಾಜದಲ್ಲಿ ಪ್ರಥಮ ಪತ್ರಕರ್ತರಾದ ಸಿದ್ದಪ್ಪ ನಿಂಗಬಸಪ್ಪ ಲಿಂಗದಾಳ ಗದಗ ಜಿಲ್ಲೆಯ

ಛಲವಾದಿ ಸಮಾಜದ ಸಂಘಟನೆಯಲ್ಲಿ ಆರಂಭಿಕ ನಾಯಕರಾಗಿದ್ದರು. ರೋಣದ ಬಸವರಾಜ ದೊಡ್ಡಮನಿ, ಗದುಗಿನ ಫಕ್ಕೀರೇಶ ಹೊಸಮನಿ, ಯಲಬುರ್ಗಾ ತಾಲೂಕಿನ ಮ್ಯಾಗೇರಿಯ ಮಲ್ಲೇಶ ಛಲವಾದಿ, ಗದಗಿನ ಮಲ್ಲಿಕಾರ್ಜುನ ಚೌಡನ್ನವರ, ಗದಗ ಅಂಬೇಡ್ಕರ್ ನಗರದ ಬಿ. ಜಿ. ಕರಬಸಣ್ಣವರ್ ಮೊದಲಾದವರೆಲ್ಲರೂ ಸಂಘಟನೆಯ ಹುಟ್ಟಿಗೆ ಪ್ರಮುಖ ಕಾರಣರಾಗಿದ್ದಾರೆ.

ಹುಯಿಲಗೋಳ ಗ್ರಾಮದ ಅತ್ಯುತ್ತಮ ಕಬಡ್ಡಿ ಕ್ರೀಡಾಪಟು ಪ್ರಕಾಶ ಚಂದಪ್ಪ ಕಾಳೆ ಅಧ್ಯಕ್ಷರಾಗಿ ಮತ್ತು ಪತ್ರಕರ್ತರಾದ ಸಿದ್ದಪ್ಪ ಎನ್. ಲಿಂಗದಾಳ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡು ಅಖಿಲ ಕರ್ನಾಟಕ ಮಹಾಸಂಘದ ನೋಂದಣಿಯಿಂದ ಅಸ್ತಿತ್ವಕ್ಕೆ ಬಂದಿತು. ಈ ಸಂಘಟನೆ ಹುಟ್ಟಿಗೆ ಕಾರಣರಾದ ಪಿ. ಎನ್. ಸಿಂಗಾಡೆಯವರ ಮಾರ್ಗದರ್ಶನದಲ್ಲಿ ಡಿ.ಎಸ್.ಎಸ್. ರೋಣ ತಾಲೂಕು ಸಂಚಾಲಕರಾಗಿದ್ದ ಪ್ರಕಾಶ ಕೇಲೂರ, ಮಲ್ಲಾಪುರದ ಮೂಕಪ್ಪ ಛಲವಾದಿ, ಕುರ್ತಕೋಟಿ ಗ್ರಾಮಪಂಚಾಯತಿ ಅಧ್ಯಕ್ಷರಾದ ಅಂದಪ್ಪ ಮೀಶಣ್ಣವರ, ಡೋಣಿ ಗ್ರಾಮಪಂಚಾಯತಿ ಅಧ್ಯಕ್ಷರಾದ ಮಹಾದೇವಪ್ಪ ಸಾಲಿ, ಹುಯಿಲಗೋಳ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದ ದೇವಪ್ಪ ಕಡಿಯವರ, ಹೊಂಬಳ ಗ್ರಾಮ ಪಂಚಾಯತಿ ಸದಸ್ಯರಾಗಿದ್ದ ಮಾರುತೆಪ್ಪ ಬಾಳಮ್ಮನವರ, ಮುನಸಿಪಲ್ ಕಾಲೇಜಿನ ನೌಕರರಾದ ಎಚ್. ವಾಯ್. ಕರಿಬಸಣ್ಣವರ, ರಾಜ್ಯ ಸರಕಾರಿ ನೌಕರರಾದ ಶ್ರೀ ಶಿವು ದೊಡಮನಿ ಮುಂತಾದವರು ಮುಖಂಡರಾದರು.

೨೦೦೦ ಜನವರಿ ೧೬ರಂದು ನಗರಸಭಾ ಭವನದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಕೆ. ಶರಣಪ್ಪ ಕೊಪ್ಪಳ ಇವರನ್ನು ಕರ್ನಾಟಕ ರಾಜ್ಯ ಛಲವಾದಿ ಮಹಾಸಂಘದಿಂದ ಸನ್ಮಾನಿಸಲಾಯಿತು. ಜಿ. ಪರಮೇಶ್ವರ, ಶ್ರೀಮತಿ ಮೋಟಮ್ಮ, ನೆಹರೂ ಓಲೇಕಾರ, ನೀರಜ ಪಾಟೀಲ, ಸುಭಾಷ ಭರಣಿ, ಎಚ್. ಬಿ. ದೊಡಮನಿ, ಮಾವಳ್ಳಿ ಶಂಕರ, ಪ್ರಾಚಾರ್ಯರೂ ಸಿಂಡಿಕೇಟ್ ಸದಸ್ಯರೂ ಆದ ಬಿ. ಎಚ್. ಹಾದಿಮನಿ ಮೊದಲಾದವರನ್ನು ಸನ್ಮಾನಿಸಿತು.

ಅಖಿಲ ಕರ್ನಾಟಕ ಛಲವಾದಿ ಮಹಾಸಭಾ

೨೦೦೦ ಡಿಸೆಂಬರ್ ೩೦ರಂದು ಗದಗ-ಬೆಟಗೇರಿ ನಗರ ಸಭಾಭವನದಲ್ಲಿ ಮಾಜಿ ಮಂತ್ರಿ ಬಿ. ಬಸವಲಿಂಗಪ್ಪ ಅವರ ಎಂಟನೆಯ ಮಹಾಪರಿನಿರ್ವಾಣ ಹಾಗೂ ಸಮತಾ ಸೈನಿಕ ದಳದ ಸಮಾವೇಶವಾಗಿ ಮಾರ್ಪಟ್ಟಿತ್ತು. ಮುಖ್ಯ ಅತಿಥಿಗಳಾಗಿ ಡರ್ಬಾನ್‌ನಲ್ಲಿ ನಡೆದ ವಿಶ್ವಸಂಸ್ಥೆ ಸಮ್ಮೇಳನದಲ್ಲಿ ಭಾಗವಹಿಸಿದ ರಾಷ್ಟ್ರೀಯ ಕಾರ್ಮಿಕ ಮುಖಂಡರಾದ ಎಫ್. ಎಚ್. ಜಕ್ಕಪ್ಪನವರ, ಬಿ. ಬಸಲಿಂಗಪ್ಪ ಅವರ ಪುತ್ರ ಯಲಹಂಕ ಶಾಸಕ ಬಿ. ಪ್ರಸನ್ನಕುಮಾರ ಉಪಸ್ಥಿತರಿದ್ದರು.

೨೦೦೮ರಲ್ಲಿ ಗದಗ ನಗರಸಭೆ ಆವರಣದಲ್ಲಿ ನಡೆದ ಐತಿಹಾಸಿಕ ಡಾ. ಬಿ. ಆರ್. ಅಂಬೇಡ್ಕರ ಮಹಾಪರಿನಿರ್ವಾಣ ನಿಮಿತ್ಯ ಅನ್ನಸಂತರ್ಪಣೆಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಉದ್ಘಾಟನೆ ಮಾಡಿದರು. ಡಾ. ಬಿ. ಆರ್. ಅಂಬೇಡ್ಕರ ಮಹಾಪರಿನಿರ್ವಾಣ ಆಚರಣೆ ಕಾರ್ಯಕ್ರಮವನ್ನು ಮಾಜಿ ಶಾಸಕ ಡಿ. ಆರ್. ಪಾಟೀಲ ಹಾಗೂ ಸಿ.ಎಂ.ಎಸ್. ರಾಜ್ಯಾಧ್ಯಕ್ಷರಾದ ಎಚ್. ಕೆ. ಬಸವರಾಜ

ಉದ್ಘಾಟಿಸಿದರು. ಕೆ.ಎಸ್.ಆರ್.ಟಿ.ಸಿ. ಅಧ್ಯಕ್ಷರಾದ ಡಿ. ಪ್ರಸಾದ, ಸುಭಾಸ ಸೋಂಪುರ ಮೊದಲಾದ ಗಣ್ಯಮಾನ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಛಲವಾದಿ ಮಹಾಸಭಾದಿಂದ ಹಮ್ಮಿಕೊಂಡ ಇತರ ಕಾರ್ಯಕ್ರಮಗಳು :

೧. ಪ್ರತಿಯೊಂದು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮದಲ್ಲಿ ಶಾಖೆ ಪ್ರಾರಂಭಿಸುವುದು.

೨. ಪ್ರತಿವರ್ಷ ಅಂಬೇಡ್ಕರ ಜಯಂತಿ ಆಚರಿಸುವುದು.

೩. ಪ್ರತಿವರ್ಷ ಡಿಸೆಂಬರ್ ೬ರಂದು ಮುಂಬಯಿಗೆ ಜನರನ್ನು ಕರೆದುಕೊಂಡು ಹೋಗಿ ಡಾ. ಅಂಬೇಡ್ಕರ ಮಹಾಪರಿನಿರ್ವಾಣ ದಿನವನ್ನು ಆಚರಿಸುವುದು.

೪. ಬುದ್ಧ ವಂದನೆ ಕಾರ್ಯಕ್ರಮ ಮಾಡುವದು.

೫. ವನಮಹೋತ್ಸವ ಆಚರಣೆ.

೬. ಸಿ.ಎಂ.ಎಸ್. ಮಹಾಸಮ್ಮೇಳನ ನಡೆದ ಶಿವಮೊಗ್ಗ, ಗುಲಬರ್ಗಾ ಹಾಗೂ ಬೆಂಗಳೂರು ಜಿಲ್ಲೆಗಳಿಗೆ ಸಮುದಾಯದ ಜನರನ್ನು ಕರೆದುಕೊಂಡು ಹೋಗಿ ಕರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ.

೭. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವರನ್ನು ಸನ್ಮಾನಿಸುವುದು.

ಈ ರೀತಿ ಸಮುದಾಯದ ಪ್ರಗತಿಗಾಗಿ ಹತ್ತುಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುಂದುವರಿಯುತ್ತಿದ್ದಾರೆ. ಗ್ರಾಮೀಣ ಸಮುದಾಯದ ಛಲವಾದಿಯವರಿಗೆ ಇರುವಂತ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಶ್ಯಕತೆ ಇದೆ.

ಸತೀಶ ಹುಚ್ಚಪ್ಪ ಹೂಲಿ

ಹುಚ್ಚಪ್ಪ ಮತ್ತು ಕರಿಬಸವ್ವ ದಂಪತಿಗಳ ಮಗನಾಗಿ ದಿ.೧-೬-೧೯೭೨ ರಂದು ಸತೀಶ ಹೂಲಿ ಜನ್ಮ ತಾಳಿದರು. ಇವರ ಶಿಕ್ಷಣ ಪಿ.ಯು.ಸಿ. ವರೆಗೆ ನಡೆದಿದೆ. ಇವರು ೨೦೧೧-೧೨ ರಿಂದ ಛಲವಾದಿ ಮಹಸಭಾದ ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರ ೨೦೦೦ರಲ್ಲಿ ಗದಗ ಜಿಲ್ಲಾ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರಾಗಿ, ಹಾಗೂ ೨೦೦೫ರಲ್ಲಿ ಜಿಲ್ಲಾ ಛಲವಾದಿ ಮಹಾಸಭಾ ತಾಲೂಕು ಉಪಾಧ್ಯಕ್ಷರಾಗಿ ಸಮಾಜದ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ೨೦೦೯ರಲ್ಲಿ ಜಿಲ್ಲಾ ಛಲವಾದಿ ಮಹಾಸಭಾ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಗೊಂಡು ಗ್ರಾಮೀಣ ಭಾಗದ ಹಿಂದುಳಿದ, ಛಲವಾದಿ ಸಮುದಾಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಾಗೂ ನಿರುದ್ಯೋಗಿ ಯುವಕ ಯುವತಿಯರಿಗೆ ಸರಕಾರಿ ಸೌಲಭ್ಯ ದೊರಕಿಸಿಕೊಡುವಲ್ಲಿ ಅವಿರತ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಛಲವಾದಿ ಜನರ ಪ್ರಥಮ ಸಮಾವೇಶದಲ್ಲಿ ಜಿಲ್ಲೆಯಿಂದ ಜನರನ್ನು ಕರೆದುಕೊಂಡು ಹೋಗಿ ಸಮಾವೇಶ ಯಶಸ್ವಿಗೊಳಿಸಿದ್ದಾರೆ. ಡಿಸೆಂಬರ್ ೬ ರಂದು ನಗರಸಭೆ ಆವರಣದಲ್ಲಿ ಜಿಲ್ಲಾ

ಛಲವಾದಿ ಮಹಾಸಭಾದಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ಕಾರ್ಯಕ್ರಮವನ್ನು ಹಮ್ಮಿಕೊಂಡು ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ೨೧೧೦ರಲ್ಲಿ ರೋಣ ತಾಲೂಕಿನ ಬೆನಹಾಳ ಹಾಗೂ ಗದಗ ತಾಲೂಕಿನ ಹೊಸಳ್ಳಿ ಗ್ರಾಮಗಳಲ್ಲಿ ಸಿ.ಎಂ.ಎಸ್. ಶಾಖೆ ಪ್ರಾರಂಭಿಸಿದ್ದಾರೆ. ಸಮುದಾಯದ ಪ್ರಗತಿಗಳು ಹಗಲಿರುಳು ದುಡಿಯುತ್ತಿದ್ದಾರೆ.

ಎನ್. ನಾರಾಯಣ ಸ್ವಾಮಿ

ಎನ್. ನಾರಾಯಣ ಸ್ವಾಮಿ ಅವರು ಗದಗ ಜಿಲ್ಲೆಯ ಛಲವಾದಿ ಮಹಾಸಭಾದ ಅಧ್ಯಕ್ಷರಾಗಿ ನೇಮಕಗೊಂಡು ಅನೇಕ ಸಮುದಾಯಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ ಜಯಂತಿ ಹಾಗೂ ಇತರ ಮಹಾಮಾನವತಾವಾದಿಗಳ ಜಯಂತಿಗಳನ್ನು ಅಲ್ಲದೆ ಬುದ್ಧ ಪೂರ್ಣಿಮಾ ಹಾಗೂ ಬುದ್ಧವಂದನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದಾರೆ.

ಜಾತಿ ಸಮಾಜದಲ್ಲಿ ಅಸ್ಪೃಶ್ಯರು ಛಲವಾದಿಯರನ್ನು ದ್ವಿತೀಯ ದರ್ಜೆ ಪ್ರಜೆಗಳೆಂದು ಪರಿಗಣಿಸುವ ಜೊತೆಗೆ ಶೋಷಣೆಗೆ ಒಳಪಡಿಸಿದೆ. ಸಮಾಜ ಸುಧಾರಣೆ ಮಾರು ದೂರ ಉಳಿದಿದೆ. ದಿನೇ ದಿನೇ ಸಂಕೀರ್ಣಗೊಳ್ಳುತ್ತಿರುವ ರಾಜಕೀಯ ಬಿಕ್ಕಟ್ಟುಗಳಿಂದ ಸಂವಿಧಾನ ಬದ್ಧ ಸಾಮಾಜಿಕ ಪರಿವರ್ತನೆ ಮಾಯವಾಗಿ ಆ ಸ್ಥಾನವನ್ನು ಕೈಗಾರಿಕಾ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಮಹಿಳಾ ವಿಮೋಚನೆ, ಪರಿಸರ ಸಮತೋಲನ ಮುಂತಾದ ನಗರ ಸಂವೇದನೆಗಳು ಆಕ್ರಮಿಸಿ ಕೊಂಡಿವೆ. ಇಂದು ಸ್ವಲ್ಪಮಟ್ಟಿಗೆ ಆತ್ಮಸ್ಥೈರ್ಯ ತಂದುಕೊಡುವ ನಿಟ್ಟಿನಲ್ಲಿ ಬದಲಾವಣೆಯಾಗುತ್ತಿದೆ. ಛಲವಾದಿ ಸಮುದಾಯ ಇತರೆ ಸಮುದಾಯಗಳಂತೆ ಸಾಮಾಜಿಕವಾಗಿ ಬದುಕಲು ಪ್ರಯತ್ನಿಸುತ್ತಿದ್ದಾರೆ.

ಹಿಂದಿನ ಕಾಲದಲ್ಲಿ ಈ ಸಮುದಾಯ ಇತರ ಜಾತಿ ಸಮುದಾಯಗಳಿಂದ ಬಹಳಷ್ಟು ದೂರ ಉಳಿದಿತ್ತು. ಅದರೆ ಇಂದು ಕಾಲ ಬದಲಾಗಿದೆ. ಜೀವನ ವಿಧಾನದಲ್ಲಿ ಊಟ, ಉಪಚಾರ, ಆಚಾರ ಪದ್ಧತಿ, ವಾಸಸ್ಥಾನ, ವಿವಾಹ ಪದ್ಧತಿಯ, ಶೈಕ್ಷಣಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬದಲಾವಣೆಯ ಗಾಳಿಯು ಈ ಸಮುದಾಯದಲ್ಲಿ ಕಂಡುಬರುತ್ತದೆ.

೮.೧೫ ಪರಿಹಾರೋಪಾಯಗಳು

"ಕರ್ನಾಟಕದ ಛಲವಾದಿ ಸಮುದಾಯವು ಗ್ರಾಮೀಣ ಭಾಗದಲ್ಲಿ ಅನೇಕ ಸಮಸ್ಯೆಗಳ ಸುಳಿಯಲ್ಲಿ ಬದುಕುತ್ತಿದೆ. ಸರ್ಕಾರ ಹಾಗೂ ಸಂಘ ಸಂಸ್ಥೆಗಳ ಸಹಾಯಸಹಕಾರದಿಂದ ಇವರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಇಂದು ಮಾಡುವ ಅಗತ್ಯವಿದೆ. "ಅಸ್ಪೃಶ್ಯತೆ ಇಷ್ಟೊಂದು ಘೋರವಾಗಿ ಆಚರಿಸುತ್ತ ಬಂದಿರುವ ಭಾರತದಲ್ಲಿ ಈ ಆಚರಣೆಯ ವಿರುದ್ಧ ಧಾರ್ಮಿಕ ನೇತಾರರು, ಬರಹಗಾರರು, ವಿಚಾರವಾದಿಗಳು ಧ್ವನಿ ಎತ್ತುತ್ತ ಬಂದಿದ್ದಾರೆ. ಬುದ್ಧ ಮಹಾವೀರನ ಕಾಲದಿಂದಲೇ ಈ ಪರಂಪರೆ ಆರಂಭವಾಯಿತು. ಬ್ರಾಹ್ಮಣ-ಶೂದ್ರ, ಸ್ಪೃಶ್ಯ-ಅಸ್ಪೃಶ್ಯ, ಪುರುಷ-ಸ್ತ್ರೀ, ಬಡವ-ಶ್ರೀಮಂತ ಎಂಬ

ಭೇದವಿಲ್ಲದೆ ಯಾರು ಕೂಡ ತಾವು ತುಳಿದ ಪಥಗಳನ್ನು ಅನುಸರಿಸಬಹುದು ಎಂದು ಭಗವಾನ ಬುದ್ಧ ಹಾಗೂ ಮಹಾವೀರರು ಕ್ರಿ.ಪೂ. ೬ನೇ ಶತಮಾನದಲ್ಲಿಯೇ ಹೇಳಿದ್ದರು."[೮] ಪ್ರಾಚೀನ ಕಾಲದಿಂದಲೂ ದೇವಮಾನವ ಸ್ವರೂಪಿಗಳಾದ ಹಲವು ಚಿಂತಕರು ದಲಿತ ಸವಾದಾಯದ ಅಭಿವೃದ್ಧಿಯ ಕುರಿತು ಚಿಂತಿಸಿದ್ದಾರೆ. ಹೀಗಾಗಿ ಪ್ರಗತಿಪರ ಚಿಂತರರೂ ಸಹ ಇಂತಹ ಕೆಳಮಟ್ಟದ ಸಮುದಾಯದ ಬೆಳವಣಿಗೆಯ ಬಗೆಗೆ ಚಿಂತಿಸಬೇಕಾಗಿದೆ.

"ಭಕ್ತಿ ಪಂಥದವರಾದ ಚೋಕಮೇಳಮಹಾರ, ಕನಕದಾಸ ಕುರುಬರು, ಕಬೀರದಾಸ ತಿರುಪಾಣಿ, ಅಂಡಾಳ ನಮ್ಮಳ್ವಾರ, ಶಿವಶರಣ ಚೆನ್ನಯ್ಯ ಮತ್ತು ಶ್ರೀ ನಾರಾಯಣ ಗುರು ಮುಂತಾದವರು ಜಾತಿ ಹಾಗೂ ಅಸ್ಪೃಶ್ಯತೆ ಇವುಗಳನ್ನು ಹೊಡೆದೊಡಿಸಲು ಪ್ರಯತ್ನಪಟ್ಟರು. ಅಸ್ಪೃಶ್ಯತೆಯ ವಿರುದ್ಧ ಜನಜಾಗೃತಿ ಮೂಡಿಸುವಲ್ಲಿ ಶಂಕರಾಚಾರ್ಯರು, ಮಧ್ವಾಚಾರ್ಯರು, ಮತ್ತು ರಾಮಾನುಜಾಚಾರ್ಯರು ಕ್ರಿ.ಶ. ೧೨ ಶತಮಾನದಲ್ಲಿಯೇ 'ಕಾಯಕವೇ ಕೈಲಾಸ' ವೆಂದು ಕರೆಕೊಟ್ಟು ಜಾತಿ, ಮತ, ಪಂಥ, ಕುಲಗೋತ್ರಗಳ ಆಧಾರದ ಮೇಲೆ ತಾರತಮ್ಯ ಮಾಡುವುದು ಸರಿಯಾದುದಲ್ಲಾ ಹೇಳಿ ಅಸ್ಪೃಶ್ಯತೆಯನ್ನು ಖಂಡಿಸಿ ಸಮಾನತೆಯ ಕ್ರಾಂತಿ ಕಹಳೆಯನ್ನೂದಿದರು."[೯]

"ಆಧುನಿಕ ಯುಗದಲ್ಲಿ ರಾಜಾರಾಮ ಮೋಹನರಾಯ, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ಶ್ರದ್ಧಾನಂದ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮುಂತಾದವರು ಕೇವಲ ವ್ಯಕ್ತಿಗತ ಪ್ರಯತ್ನ ಮಾತ್ರವಲ್ಲದೆ, ಸಂಸ್ಕೃತಿ, ಸಂಘಟನಾತ್ಮಕ, ಸಾಧನಗಳ ಮೂಲಕವೇ ಅಸ್ಪೃಶ್ಯತೆಯ ನಿವಾರಣೆಗಾಗಿ ಪ್ರಯತ್ನ ಮಾಡಿದರು.[೧೦] ಸ್ವಾತಂತ್ರ್ಯ ನಂತರ ಅನೇಕ ಜನ ಹೋರಾಟಗಾರರು ದಲಿತರಿಗಾಗಿ ಅವರ ಅಭಿವೃದ್ಧಿಗಾಗಿ ಶ್ರಮಿಸಿದರು.

ಅಸ್ಪೃಶ್ಯತೆಯ ನಿವಾರಣೆಯಲ್ಲಿ ಗಾಂಧೀಜಿಯವರ ಹಾಗೂ ಡಾ. ಬಿ.ಆರ್.ಅಂಬೇಡ್ಕರ ಪಾತ್ರ ಪ್ರಮುಖವಾದುದು. ಈ ದೇಶದ ಅಸ್ಪೃಶ್ಯತೆಗಾಗಿ ಅಂಬೇಡ್ಕರವರ ಹೇಳಿದ ಪಂಚಸೂತ್ರಗಳು (೧) ಸ್ವಸುಧಾರಣೆ (೨)ಸ್ವ ಏಳ್ಗೆ, (೩)ಸ್ವಾವಲಂಬನೆ, (೪)ಸ್ವಾಭಿಮಾನ (೫) ಸ್ವ ನಂಬಿಕೆ ಮುಂತಾದವುಗಳನ್ನು ಅಳವಡಿಸಿಕೊಂಡು ಬದಲಾವಣೆ ಸಾಧ್ಯವೆಂದಿದ್ದಾರೆ. ಅಲ್ಲದೇ ಶಿಕ್ಷಣ, ಸಂಘಟನೆ, ಹೋರಾಟ, ತ್ರಿಸೂತ್ರಗಳನ್ನು ಪಾಲಿಸಿಕೊಂಡು ಜೀವನ ಉತ್ತಮ ಪಡೆಯಿಸಿಕೊಳ್ಳಿರಿ ಎಂದು ಕರೆಕೊಟ್ಟರು. ಅಂಬೇಡ್ಕರ ಚಿಂತನೆಗಳನ್ನು ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಪಾಲಿಸಿದರೆ ದಲಿತರ ಬದುಕು ಹಸನಾಗಬಹುದು.

"ಮಹಾತ್ಮ ಗಾಂಧೀಜಿಯವರ ಅಸ್ಪೃಶ್ಯತೆ ನಿವಾರಣೆಯ ದೃಷ್ಟಿಯಿಂದ ನಡೆಸಿದ ಹೋರಾಟ ಮತ್ತು ಪರಿಶ್ರಮ ಅಮೋಘವಾಗಿದೆ. ಅಸ್ಪೃಶ್ಯತೆ ಜಾತಿಗಳಿಗೆ ಹೇಳಿರುವಂತೆ ಸ್ವಚ್ಛತೆ ಹಾಗೂ ನೈರ್ಮಲ್ಯದ ಅರಿವು ಮೂಡಿಸಬೇಕು. ಅಸ್ಪೃಶ್ಯತೆಯನ್ನೂ ಎಲ್ಲರೂ ಎಲ್ಲ ರೀತಿಗಳಿಂದಲೂ ಪರಸ್ಪರ ಬಹಿಷ್ಕರಿಸಬೇಕು ಮುಂತಾದ ವಿಚಾರಗಳನ್ನು ಹೇಳಿದ್ದಾರೆ. ಅಲ್ಲದೇ ಅಸ್ಪೃಶ್ಯತೆಯ ನಿವಾರಣೆಗಾಗಿ ಕಾಂಗ್ರೆಸ್ ಸಂಸ್ಥೆಯ ಮೂಲಕ ಪ್ರಯತ್ನ ಮಾಡಿದ್ದಾರೆ. ೧೯೩೧ರ ಕರಾಚಿ ಅಧಿವೇಶನದಲ್ಲಿ ಮೂಲಭೂತ ಹಕ್ಕಿಗಳಿಗೆ

ಸಂಬಂಧಿಸಿದ ನಿರ್ಣಯವೊಂದನ್ನು ಸ್ವೀಕರಿಸಿ ಜಾತಿ, ಮತ, ಪಂಥ, ಲಿಂಗಭೇದಗಳ ಹೊರತಾಗಿ ಎಲ್ಲರೂ ಸಮಾನರು ಎಂದು ಘೋಷಿಸಲಾಯಿತು."[೧೧]

"ನಾಗರಿಕತೆ ಅನರ್ಹತೆಗಳ ಹಾಗೂ ದೇವಾಲಯ ಪ್ರವೇಶ ನಿಷೇಧದ ನಿವಾರಣೆ ಪ್ರಯತ್ನ 'ನಾಗರಿಕ ಅನರ್ಹತೆಗಳ ನಿರ್ಮೂಲನೆ ಕಾಯ್ದೆ ೧೯೩೮ ರಲ್ಲಿ ಮದ್ರಾಸ ಶಾಸನ ಸಭೆಯು 'ನಾಗರಿಕ ಅನರ್ಹತೆಗಳ ನಿರ್ಮೂಲನೆ ಕಾಯ್ದೆ ಮಾಡಿ ಯಾವುದೇ ಅಸ್ಪೃಶ್ಯನಿಗೆ ಸಾಮಾಜಿಕ ಮತ್ತು ಸಾರ್ವಜನಿಕವಾದ ಸವಲತ್ತು ಸೌಲಭ್ಯಗಳನ್ನು ನಿರಾಕರಿಸುವಂತಿಲ್ಲ ಎಂದು ಸಾರಿ ಹೇಳಿತು. ಅಲ್ಲದೆ 'ಮಲಬಾರು ದೇವಾಲಯ ಕಾಯ್ದೆ ೧೯೩೮ ರಲ್ಲಿ ಜಾರಿಗೆ ತಂದರು. ಹೀಗಾಗಿ ಅಸ್ಪೃಶ್ಯತೆ ಜಾತಿಗಳು, ಸಾರ್ವಜನಿಕ ಹಾಗೂ ಸಾರ್ವಜನಿಕವಾಗಿ ಬದಲಾವಣೆ ತಂದರು.[೧೨]

ಭಾರತ ಸರ್ಕಾರವು ಪರಿಶಿಷ್ಟ ಜಾತಿಗಳ ಉನ್ನತಿಗಾಗಿ ಸಂವಿಧಾನಿಕ ಹಾಗೂ ಶಾಸನಾತ್ಮಕ ಕ್ರಮಗಳು ಮತ್ತು ಕಲ್ಯಾಣ ಕಾರ್ಯಗಳು ಹಾಗೂ ಯೋಜನೆಗಳು ಮುಂತಾದವುಗಳ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳನ್ನು ಸರಿಯಾಗಿ ಜಾರಿಗೆ ತಂದರೆ ಆರ್ಥಿಕವಾಗಿ ದುರ್ಬಲರಾದ ಛಲವಾದಿ ಸಮುದಾಯ ಅಭಿವೃದ್ಧಿ ಹೊಂದಲು ಸಾಧ್ಯ.

೧. ಭಾರತದ ಸಂವಿಧಾನವು ತನ್ನ ಪ್ರಸ್ತಾವನೆಯಲ್ಲಿ ಭಾರತದ ಎಲ್ಲಾ ಪ್ರಜೆಗಳಿಗೂ ಯಾವುದೇ ಪಕ್ಷಪಾತ ಮಾಡದೆ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನೀಡುವುದೆಂದು ಎಲ್ಲರಿಗೂ ಸಮಾನವಾಗಿ, ಸಾಮಾಜಿಕ, ಆರ್ಥಿಕ, ಶಿಕ್ಷಣ ಹಾಗೂ ರಾಜಕೀಯ ನ್ಯಾಯವನ್ನು ಕೊಡುವುದೆಂದು ಭರವಸೆ ನೀಡುವುದು. ಸಂವಿಧಾನ ೧೫, ೧೬, ೧೭, ೩೮ ಮತ್ತು ೪೬ನೇ ವಿಧಿಗಳ ಪ್ರಕಾರ ಧರ್ಮ, ಜಾತಿ, ಹುಟ್ಟು ಜನ್ಮಸ್ಥಳ, ಭಾಷೆ, ಲಿಂಗ ಮುಂತಾದವುಗಳ ಆಧಾರದ ಮೇಲೆ ಪ್ರಜೆಗಳಲ್ಲಿ ಭೇದ ಕಲ್ಪಿಸುವುದಿಲ್ಲವೆಂದು ಹೇಳಲಾಗಿದೆ.

೨. ಸಂವಿಧಾನದ ೧೭ನೇ ವಿಧಿಯ ಪ್ರಕಾರ ಅಸ್ಪೃಶ್ಯತೆಯನ್ನು ಯಾವುದೇ ರೂಪದಲ್ಲಿ ಆಚರಿಸುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ.

೩. ಸಂವಿಧಾನದ ೨೫ನೇ ಪ್ರಕಾರ ಅಸ್ಪೃಶ್ಯತೆಯನ್ನು ಯಾವುದೇ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ.

೪. ಸಂವಿಧಾನದ ೨೫ನೇ ವಿಧಿಯ ಪ್ರಕಾರ ಎಲ್ಲ ವರ್ಗಗಳಿಗೆ ಮುಕ್ತ ಅವಕಾಶಗಳನ್ನು ಕಲ್ಪಿಸಿಕೊಡತಕ್ಕದ್ದು.

೫. ಸಂವಿಧಾನದ ೧೫ನೇ ವಿಧಿಯ ಪ್ರಕಾರ ಸಾರ್ವಜನಿಕ ವಸತಿ ಗೃಹಗಳನ್ನು ಹೋಟೆಲ್‌ಗಳು ಮತ್ತು ಸಾರ್ವಜನಿಕ ಮನೋರಂಜನೆಯ ಸ್ಥಳಗಳನ್ನು, ಸರ್ಕಾರಿ ಧನ ಸಹಾಯದಿಂದ ಪಡೆಯುತ್ತಿರುವ ಮತ್ತು ಸಾರ್ವಜನಿಕ ಉಪಯೋಗಕ್ಕಾಗಿ ಎಂದು ಘೋಷಿಸಲಾಗಿರುವ ಎಲ್ಲಾ ಬಾಪಿಗಳ, ನೀರಿನ

ತೊಟ್ಟಿಗಳ, ಕೆರೆಕಟ್ಟೆಗಳ, ನೀರಿನ ನಲ್ಲಿಗಳ, ಸ್ನಾನದ ಘಟ್ಟಗಳ ಸ್ಮಶಾನದ ಹಾಗೆಯೇ ಸಾರ್ವಜನಿಕ ನೈರ್ಮಲ್ಯದ ಸಾಧನಗಳು, ರಸ್ತೆಗಳ ಮತ್ತು ಚಿಕ್ಕಪುಟ್ಟ ಗಲ್ಲಿಗಳ ಬಳಕೆ ಮಾಡುವುದರ ಬಗೆಗಿನ ಎಲ್ಲಾ ಬಗೆಯ ನಿರ್ಬಂಧಗಳನ್ನು ಮತ್ತು ಅನರ್ಹತೆಗಳನ್ನು ತೆಗೆದುಹಾಕಲಾಗಿದೆ.

೬. ಸಂವಿಧಾನದ ೨೯ನೇ ವಿಧಿಯಂತೆ ಸರ್ಕಾರದಿಂದ ನಡೆಸಲ್ಪಡುತ್ತಿರುವ ಅಥವಾ ಸರ್ಕಾರದ ಅನುದಾನ ಪಡೆಯುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿಯೂ ಯಾವುದೇ ಕಾರಣಕ್ಕಾಗಿ ಪ್ರವೇಶವನ್ನು ನಿರ್ಬಂಧಿಸುವಂತಿಲ್ಲ.[೧೩]

೮.೧೫.೧ ಶಾಸನಾತ್ಮಕ ಕ್ರಮಗಳು

"ಭಾರತ ಸರ್ಕಾರವು ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತ ಬಂದಿದೆ. ಭಾರತದ ಸಂವಿಧಾನದ ೧೧೨ ವಿಧಿಯ "ಅಸ್ಪೃರ್ಶಯತೆಯನ್ನು ತೆಗೆದುಕಹಾಕಲಾಗಿದೆ" ಅಸ್ಪೃಶ್ಯತೆಯ ಅಪರಾಧಗಳ ಕಾಯ್ದೆ (೧೯೫೫), ನಾಗರಿಕ ಹಕ್ಕುಗಳ ಸಂರಕ್ಷಣೆಯ ಕಾಯ್ದೆ ೧೯೭೪ ಪ.ಜಾ / ಪ.ಪಂ.ಗಳ ವಿರುದ್ಧದ ದೌರ್ಜನ್ಯ ಪ್ರತಿಬಂಧಕ ಕಾಯ್ದೆ (೧೯೮೯)"[೧೪]

೮.೧೫.೨ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಯೋಜನೆಗಳು

ಸರ್ಕಾರವು ಹಲವಾರು ಸಂವಿಧಾನಿಕ ಹಾಗೂ ಶಾಸನಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಅಲ್ಲದೇ ಅವರ ಸರ್ವಾಂಗೀಣ ಏಳ್ಗೆಯನ್ನು ಸಾಧಿಸಲು ಕಾರಣದಿಂದ ಹಲವಾರು ಕಲ್ಯಾಣ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

೧. ಪರಿಶಿಷ್ಟ ಜಾತಿ ಕಲ್ಯಾಣಕ್ಕಾಗಿ ಕಮೀಷನರ್

ಪರಿಶಿಷ್ಟ ಜಾತಿಗಳ ಕಲ್ಯಾಣವನ್ನು ಸಾಧಿಸಲು ಕೇಂದ್ರ ಸರ್ಕಾರವು ೧೯೮೦ ರಲ್ಲಿ ಮಾಡಲಾದ ಸಂವಿಧಾನದ ೬೫ನೇ ತಿದ್ದುಪಡಿಯಂತೆ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಕಮೀಷನರವರನ್ನು ನೇಮಿಸಿರುವಂತೆ ಪ್ರತಿಯೊಂದು ರಾಜ್ಯದಲ್ಲಿಯೂ ಕೂಡಾ "ಪ್ರಾದೇಶಿಕ ಸಹಾಯಕ ಕಮೀಷನರಗಳಿರುತ್ತತಾರೆ" ಪ್ರತಿಯೊಂದು ರಾಜ್ಯದಲ್ಲಿಯೂ ಪರಿಶಿಷ್ಟ ಕಲ್ಯಾಣಕ್ಕಾಗಿ 'ಸಲಹಾ ಮಂಡಳಿಗಳಿದ್ದು ಅವರ ಕಲ್ಯಾಣ ಸಾಧಿಸಿರುವ ಕಾರ್ಯದಲ್ಲಿ ರಾಜ್ಯ ಸರ್ಕಾರವು ಸಹಾಯ ಮಾಡುತ್ತದೆ.

೨. ಸಾಂಸಧಿಕ ಸಮಿತಿಗಳು

ಪ.ಜಾ / ಪಂ. ಗಳ ಕಲ್ಯಾಣಕ್ಕಾಗಿ ಹಾಗೂ ಅವರ ಸಂರಕ್ಷಣೆಗಾಗಿ ಕೈಗೊಳ್ಳಲಾಗಿರುವ ಸಂವಿಧಾನಿಕ ಕ್ರಮಗಳ ಅನುಷ್ಟಾನವು ಹೇಗೆ ನಡೆಯುತ್ತದೆ ಎಂಬುದಕ್ಕೆ ಪರಿಶೀಲಿಸಲು ಕೇಂದ್ರ ಸರ್ಕಾರವು ಅನುಕ್ರಮವಾಗಿ ೧೯೬೬, ೧೯೭೧, ಹಾಗೂ ೧೯೭೩ ರಲ್ಲಿ ಸಾಂವಿಧಾನಿಕ ಸಮಿತಿಗಳನ್ನು ರಚಿಸಿತ್ತು.

೧೯೭೬ ರಲ್ಲಿ ಪ.ಜಾ / ಪಂ. ಗಳ ಆಯೋಗವೆಂದು ಒಬ್ಬರು ಅಧ್ಯಕ್ಷರು ಮತ್ತು ನಾಲ್ಕು ಜನ ಸದಸ್ಯತ್ವದಲ್ಲಿ ಹಗೆಯೇ ೧೯೭೬ ರಲ್ಲಿ ಇನ್ನೊಂದು ವಿಶೇಷ ಸಮಿತಿಯನ್ನು ರಚಿಸಿದ್ದು, ಇವರನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೊಡುತ್ತಾ ಬಂದಿರುವ ಯೋಜನೆಗಳು ಮತ್ತು ಸೌಲಭ್ಯಗಳು ಅವರನ್ನು ತಲುಪುತ್ತಿವೆಯೇ ಎಂಬುದನ್ನು ಪರಿಶೀಲಿಸುವ ಯತ್ನವೇ ನಡೆದಿದೆ.

೮.೧೫.೩ ಶೈಕ್ಷಣಿಕ ಅವಕಾಶಗಳು

ಪರಿಶಿಷ್ಟ ಜಾತಿಗಳ ಕಲ್ಯಾಣದಲ್ಲಿ ಶಿಕ್ಷಣಕ್ಕೆ ವಿಶೇಷವಾದ ಪ್ರಾಮುಖ್ಯವಿದೆ. ವೈದ್ಯಕೀಯ ತಾಂತ್ರಿಕ, ಮತ್ತಿತರ ವೃತ್ತಿ ಸಂಬಂಧಿತ ಶಿಕ್ಷಣ ಸಂಸ್ಥೆಗಳನ್ನೊಳಗೊಂಡಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಅವರಿಗೆ ಸ್ಥಳಾವಕಾಶವನ್ನು ಕಾಯ್ದಿರಿಸಲಾಗಿದೆ. ಶುಲ್ಕ ರಿಯಾಯತಿ, ಬುಕ್‌ಬ್ಯಾಂಕ್ ಸೌಲಭ್ಯ, ವಿದ್ಯಾರ್ಥಿವೇತನ, ಪುಸ್ತಕ–ಸ್ಟೇಷನರಿ ಮುಂತಾದ ಸಲಕರಣೆಗಳ ಉಚಿತ ಹಂಚಿಕೆ, ಮಧ್ಯಾಹ್ನದ ಊಟದ ಸೌಲಭ್ಯ, ವಿದ್ಯಾರ್ಥಿ ನಿಲಯಗಳಲ್ಲಿ ಉಚಿತ ಪ್ರವೇಶ ಮುಂತಾದ ರಿಯಾಯಿತಿ ಹಾಗೂ ಸೌಲಭ್ಯಗಳನ್ನು ಅವರಿಗೆ ಕಲ್ಪಿಸಲಾಗಿದೆ. ಪ್ರಾಥಮಿಕ ಮಟ್ಟದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಪುಸ್ತಕ, ಸ್ಲೇಟ್, ಬಟ್ಟೆ–ಬರೆ, ಕೊಡೆ, ಸಮವಸ್ತ್ರ ರೇನಕೋಟ, ಸಹಿತ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪರಿಶಿಷ್ಟ ಜತಿ, ಪಂಗಡ, ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ವ್ಯವಸ್ಥೆ, ಪುಸ್ತಕ ಬ್ಯಾಂಕ ಸೌಲಭ್ಯ, ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಗಳ ಮೆಟ್ರಿಕ್ ನಂತರದ ಶಿಕ್ಷಣಕ್ಕಾಗಿ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉನ್ನತ ಮಟ್ಟದ ವಿದೇಶಿ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಕಗೆ ನೆರವು. ಮುಂತಾದ ಇಂತಹ ಸಾಕಷ್ಟು ಸೌಲಭ್ಯಗಳನ್ನು ಪಡೆದುಕೊಂಡು ಬದಲಾವಣೆಯನ್ನು ಹೊಂದುತ್ತಿದ್ದಾರೆ.

೮.೧೫.೪ ಆರ್ಥಿಕ ಅವಕಾಶಗಳು

ಆರ್ಥಿಕ ಮತ್ತು ಶೋಷಣೆಯನ್ನು ತಪ್ಪಿಸಲು ಇವರಿಗಾಗಿ ಸರ್ಕಾರವು ಹಲವು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಗ್ರಾಮೀಣ ಸಮುದಾಯದಲ್ಲಿ ಭೂಮಿ ರಹಿತ ಪರಿಶಿಷ್ಟ ಜಾತಿ ಕೃಷಿ ಕಾರ್ಮಿಕರಿಗೆ ಜಮೀನನ್ನು ಕೊಟ್ಟು ಸಾಗುವಳಿಗಾಗಿ ಎತ್ತು, ಮರಮುಟ್ಟುಗಳು, ಬೀಜಗೊಬ್ಬರ, ಮುಂತಾದವುಗಳನ್ನು ಬಡ್ಡಿಯಿಲ್ಲದೆ ದೀರ್ಘಾವಧಿ ಸಾಲ ಕೊಡುವ ವ್ಯವಸ್ಥೆಯಿದೆ. ಈ ಹಣದಿಂದ ಅವರು ದನಕರು, ಕೋಳಿ, ಕುರಿ, ಆಡುಗಳನ್ನು ಸಾಕುವುದಕ್ಕೆ, ನೀರಾವರಿ, ಸೌಕರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ.

೮.೧೫.೫ ಉದ್ಯೋಗಾವಕಾಶಗಳು

ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿಗಳ ಜನರ ಸೇರ್ಪಡೆಯು ಗಣನೀಯವಾಗಿ ಹೆಚ್ಚುತ್ತಿದೆ. ಆದರೂ ಸಹ ಸರ್ಕಾರಿ ಉದ್ಯೋಗದ ಯಾವುದೇ ಕ್ಷೇತರದಲ್ಲಿಯೂ ಕೂಡ ಬಹಳ ಮೇಲ್ಮಟ್ಟದ ಸ್ಥಾನಗಳಲ್ಲಿ ಪ.ಜಾತಿಯವರ ಸಂಖ್ಯೆಯು ಇಂದಿಗೂ ಬಹಳ ಕಡಿಮೆಯಿದೆ.

೮.೧೫.೬ ವಸತಿ ಸೌಲಭ್ಯಗಳು

ಅನಾರೋಗ್ಯದಿಂದ ಗುಡಿಸಲುಗಳಲ್ಲಿ ಹಾಗೂ ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಇವರಿಗಾಗಿ ವಸತಿ ಸಮಸ್ಯೆಯತನ್ನು ಪರಿಹರಿಸುವ ದೃಷ್ಟಿಯಿಂದ ಸರ್ಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

ಪಂಚವಾರ್ಷಿಕ ಯೋಜನೆಗಳ ಸ್ವತಂತ್ರ ಭಾರತ ಸರ್ಕಾರವು ಹಮ್ಮಿಕೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಇವರ ಕಲ್ಯಾಣದ ಬಗಗೆ ಬಹಳಷ್ಟು ಮಹತ್ವ ನೀಡಲಾಗಿದೆ. ಕುಡಿಯುವ ನೀರಿನ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಜೀತದಾಳುಗಳ ಮುಕ್ತಿ.

ಭಾರತೀಯ ಸಮಾಜದಲ್ಲಿರುವ ಅಸ್ಪೃಶ್ಯತೆ ಹಾಗೂ ಜಾತಿಪದ್ಧತಿ ಹೋಗಲಾಡಿಸಲು ಸಾಕಷ್ಟು ಮಹಾಮಾನವತಾವಾದಿಗಳು, ಸಾಮಾಜಿಕ ಚಿಂತಕರು, ಧಾರ್ಮಿಕ, ನೇತಾರರು ಹೋರಾಟ ಫಲದಿಂದ ಛಲವಾದಿಯವರಿಗೆ ಮೊದಲಿನಂತೆ ಜೀವನವಿರದೆ ಸ್ವಲ್ಪ ಮಟ್ಟಿನಲ್ಲಿ ಪರಿಹಾರ ಕಂಡುಕೊಂಡಿದ್ದಾರೆ. ಇಂದು ಸಾಮಾಜಿಕ,, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬದಲಾವಣೆ ಹೊಂದುತ್ತಿದ್ದಾರೆ. ಅವರಿಗಾಗಿ ತಂದಂತಹ ಕಲ್ಯಾಣ ಯೋಜನೆಗಳು ಪಡೆದುಕೊಂಡು ಆರ್ಥಿಕವಾಗಿ ಸುಧಾರಿಸುವ ನಿಟ್ಟಿನಲ್ಲಿದ್ದಾರೆ ಮೊದಲಿನಂತಹ ಕೆಲಸ ಕಾರ್ಯಗಳನ್ನು ಬಿಟ್ಟು ಹೊಸ ಹೊಸ ಉದ್ಯೋಗಗಳನ್ನು ಪಡೆಯುತ್ತಿದ್ದಾರೆ.

೮.೧೫.೭ ಸರ್ಕಾರಿ ಸೌಲಭ್ಯಗಳು

"ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಸುಮಾರು ೪೨ ಕಾರ್ಯಕ್ರಮಗಳನ್ನು ಜಾರಿಗೆ ತಂದು ಅವುಗಳನ್ನು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಡಾ. ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ ಎಂಬ ಸಂಸ್ಥೆಗಳನ್ನು ಸ್ಥಾಪಿಸಿ, ಇದರ ಮೂಲಕ ಅನುಷ್ಠಾನದಲ್ಲಿ ತಂದಿದೆ.

೮.೧೫.೮ ಸ್ವಯಂ ಉದ್ಯೋಗ ಯೋಜನೆ

ಸ್ವಂತ ಉದ್ಯೋಗ ಕೈಗೊಳ್ಳಬೇಕೆನ್ನುವ ನಿರುದ್ಯೋಗಿಗಳು ಈ ಯೋಜನೆಯ ಫಲಾನುಭವಿಗಳು

ಸಣ್ಣ ಕೈಗಾರಿಕೆ, ಸೇವೆ ಮತ್ತು ವ್ಯಾಪಾರಕ್ಕಾಗಿ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಸೌಲಭ್ಯಗಳನ್ನು ಒದಗಿಸಿದೆ. ನಿಗಮವು ಆ ಸಾಲದ ಶೇಕಡಾ ೫೦ ರಷ್ಟನ್ನು ಗರಿಷ್ಠ ರೂ. ೧೦,೦೦೦ ಗಳವರೆಗೆ ಸಹಾಯ ಧನ ನೀಡುತ್ತದೆ. ಮೊದಲಾದ ಯೋಜನೆಗಳ ಲಾಭ ಪಡೆಯುವಲ್ಲಿ ವಿಫಲವಾಗಿದೆ. ಏಕೆಂದರೆ ಶಿಕ್ಷಣ ಅಭಾವ, ನಿರ್ಲಕ್ಷತನ, ಅಸಮರ್ಥ ನಾಯಕತ್ವದಿರೂ ಹಲುವ ಕ್ಷೇತ್ರಗಳಲ್ಲಿ ಹಿಂದುಳಿದ್ದಾರೆ. ಆದರೂ ಸಹ ಕೆಲವು ಗ್ರಾಮದಲ್ಲಿ ಕೆಲವು ಈ ಸಮುದಾಯದ ಕುಟುಂಬಗಳು ಜನರ ಅಲ್ಪ ಸ್ವಲ್ಪ ಯೋಜನೆಗಳ ಲಾಭಗಳನ್ನು ಪಡೆದುಕೊಂಡು ಮುಂದೆವರೆಯುತ್ತಿದ್ದಾರೆ."[೧೫]

೮.೧೬ ಸಾಧನೆಗಳು

ಸ್ವಾತಂತ್ರ್ಯ ಬಂದ ನಂತರ ನಮ್ಮ ಸಂವಿಧಾನದಲ್ಲಿ ಅಳವಡಿಸಿರುವ ಕೆಲವು ಅಂಶಗಳು ಇತರೆ ಕಾನೂನುಗಳು ಮತ್ತು ಯೋಜನೆಗಳು ಪರಿಣಾಮವಾಗಿ ಈ ಸಮುದಾಯದ ಸ್ಥಿತಿಗತಿಗಳಲ್ಲಿ ಸ್ವಲ್ಪ ಸುಧಾರಣೆ ಹಾಗೂ ಅಭಿವೃದ್ಧಿಯನ್ನು ನಾವು ಕಾಣುತ್ತವೆ.

ಇವರು ಇಂದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹಾಗೂ ರಂಗಗಳಿಗೆ ಸಮುದಾಯದಲ್ಲಿರುವ ಒಂದಷ್ಟು ಜನರಿಗೆ ಶಿಕ್ಷಣ, ಉದ್ಯೋಗ, ಮನೆ, ಭೂಮಿ, ಇತ್ಯಾದಿಗಳು ಲಭ್ಯವಾಗಿ ಇವರ ಜೀವನದಲ್ಲಿ ಸ್ವಲ್ಪಮಟ್ಟಿಗೆ ಅಭಿವೃದ್ಧಿಯನ್ನು ನಾವು ಕಾಣುತ್ತೇವೆ. ಇಂದು ಇವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರವೇಶಿಸಿಸುವ ಪ್ರಯತ್ನ ಮಾಡುವವರಾಗಿರುವದರಿಂದ ತಮ್ಮ ಜೀವನಮಟ್ಟವನ್ನು ಉತ್ತಮವಾಗಿರಿಸಿ ಕೊಳ್ಳುತ್ತಿದ್ದಾರೆ.

ಅಡಿಟಿಪ್ಪಣಿಗಳು :

೧) ಎ. ಎಂ. ರಾಜಶೇಖರ, ಡಾ. ಬಾಬಾಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ಸಂ. ೧೨, ಭಾಗ-೧, ಪುಟ-೧೪೭,೧೯೧

೨) ಚ. ನ. ಶಂಕರರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ಪುಟ-೨೬, ೪೦, ೪೧.

೩) ಚ. ನ. ಶಂಕರರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ಪುಟ-೨೩೮.

೪) ಚ. ನ. ಶಂಕರರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ಪುಟ-೨೩೯

೫) ಪ್ರೊ. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು, ಪುಟ-೧೪.

೬) ಅದೇ ಪುಟ-೨೪, ೨೫.

೭) ಅದೇ ಪುಟ-೭೫

೮) ಅದೇ ಪುಟ-೮೬

೯) ಚ. ನ. ಶಂಕರರಾವ್, ಸಮಕಾಲೀನ ಭಾರತೀಯ ಸಮಾಜದ ಅಧ್ಯಯನ, ಪುಟ-೬೬.

೧೦) ಅದೇ ಪುಟ-೬೬.

೧೧) ಅದೇ ಪುಟ-೬೭

೧೨) ಅದೇ ಪುಟ-೨೦

೧೩) ಅದೇ ಪುಟ-೭೫

೧೪) ಅದೇ ಪುಟ-೭೬-೮೧

೧೫) ಎಚ್. ಎನ್. ನಾಗಮೋಹನದಾಸ, ಅಸ್ಪೃಶ್ಯತೆ ಮತ್ತು ಕಾನೂನು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ಪು.೫೬

ಅಧ್ಯಾಯ–೯

ಸಮಾರೋಪ

ಅಧ್ಯಾಯ–೯

ಸಮಾರೋಪ

ಕರ್ನಾಟಕದ ಜಿಲ್ಲಾವಾರು ಅನೇಕ ಸಮುದಾಯಗಳು ವಾಸಿಸಿವೆ. ಅವುಗಳಲ್ಲಿ ಕೆಲವರು ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರಾಗಿರುವರು. ಹಾಗೆ ಗದಗ ಜಿಲ್ಲೆಯಲ್ಲಿ ಅನೇಕ ಸಮುದಾಯಗಳು ನೆಲೆಸಿವೆ. ಲಿಂಗಾಯತ ಮತ್ತು ರೆಡ್ಡಿ ಸಮುದಾಯಗಳು ಪ್ರಬಲ ಜಾತಿ ಸಮುದಾಯಗಳಾಗಿವೆ. ಈ ಜಿಲ್ಲೆಯ ಛಲವಾದಿ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಈಗಲೂ ಈ ಜನಾಂಗ ಹಲವಾರು ಕ್ಷೇತ್ರಗಳಲ್ಲಿ ಪ್ರಾವೀಣ್ಯತೆ ಹೊಂದಿರುವದು ಕಾಣುತ್ತದೆ. ವಿದ್ಯಾವಂತರಾಗಿ, ಸೈನಿಕರಾಗಿ, ರಾಜಕಾರಣಿ, ಅಧಿಕಾರಿ, ಕರಕುಶಲಕರ್ಮಿ, ಡೊಳ್ಳು, ಬಾಜಿ ಭಜಂತ್ರಿ, ಕಾಳಿ, ಕರಡಿಮಜಲು, ಸಂಗೀತ, ನೃತ್ಯ, ಕಲೆಗಳಲ್ಲಿ ಮಾಟ–ಮಂತ್ರ, ಗಾರುಡಿ ವಿದ್ಯೆಯಲ್ಲಿಯೂ ನಾಟಿ ವೈದ್ಯರಾಗಿ, ನೇಕಾರರಾಗಿ, ಜನಪದ ಹಾಡುಗಾರರಾಗಿ ಹೆಸರು ಗಳಿಸಿದ್ದಾರೆ.

ಇವರು ಬಹುದೇವತಾ ಆರಾಧಕರಾಗಿದ್ದು, ಇವರಲ್ಲಿ ಬಹುಪತ್ನಿತ್ವ ವಿವಾಹ ಪದ್ಧತಿ ಕಂಡುಬರುತ್ತದೆ. ಸದ್ಯ ಏಕಪತ್ನಿ ವಿವಾಹಕ್ಕೆ ಮಹತ್ವವಿದ್ದು, ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದಾರೆ.

ಇವರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕವಾಗಿ ಶೋಷಣೆಗೊಳಗಾದ ಸಮಾಜವಾಗಿದೆ. ಜ್ಯೋತಿಬಾ ಫುಲೆ, ಛತ್ರಪತಿ ಸಾಹುಮಹಾರಾಜ, ಸಹಾಜಿರಾವ ಗಾಯಕವಾಡ, ಬುದ್ಧ, ಬಸವ, ಅಂಬೇಡ್ಕರವರ ಹೋರಾಟ ಫಲವಾಗಿ ಇತ್ತೀಚೆಗೆ ಸರ್ವ ಸೌಲಭ್ಯಗಳು ಸಿಗುತ್ತಿದ್ದರೂ ಸಂವಿಧಾನತ್ಮಕ ಸೌಲಭ್ಯಗಳು ಇಲ್ಲಿಯ ತನಕವೂ ಸರಿಯಾಗಿ ದೊರೆತಿಲ್ಲ.

ಇಂದು ಗ್ರಾಮಗಳಲ್ಲಿ ಇವರನ್ನು ಕೀಳಾಗಿ ನಡೆಸಿಕೊಳ್ಳುತ್ತಿದ್ದು ಇಂದಿಗೂ ದೇವಸ್ಥಾನದಲ್ಲಿ, ಕೆರೆ, ಬಾವಿ, ಹೋಟಲುಗಳಲ್ಲಿ ಪ್ರವೇಶವಿಲ್ಲ.

ಗ್ರಾಮಪಂಚಾಯತಿಯಿಂದ ಲೋಕಸಭೆಯವರೆಗೆ ಜನಪ್ರತಿನಿಧಿಗಳು ಸಮುದಾಯದ ಜ್ವಲಂತ ಸಮಸ್ಯೆಗಳ ಪರಿಹರಿಸಲು ಶ್ರಮಿಸಬೇಕಾಗಿದೆ. ಆಡಳಿತ ನಡೆಸುವ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ನ್ಯಾಯೋಚಿತವಾಗಿ ಸಿಗಬೇಕಾದ ಸರ್ಕಾರಿ ಸೌಲಭ್ಯಗಳನ್ನು ದೊರಕಿಸಿಕೊಡಬೇಕಾಗಿದೆ. ಸಮುದಾಯ ಪ್ರತಿನಿಧಿಸುವ ಪ.ಜಾತಿ ರಾಜಕೀಯ ನಾಯಕರು ಈ ಸಮುದಾಯದ ಏಳಿಗೆಗಾಗಿ ಹಗಲಿರುಳು ದುಡಿಯಬೇಕಾಗಿದೆ. ಇದಕ್ಕಿಂತಲೂ ಮುಖ್ಯವಾಗಿ ನೋವಿರುವವರು ತಮ್ಮ ನೋವು ನಿವಾರಿಸಿಕೊಳ್ಳಲು ಸಮುದಾಯ ಸಂಘಟನೆಗಾಗಿ ದುಡಿಯಬೇಕಿದೆ. ಇದು ಇಂದಿನ ಅತಿ ಅವಶ್ಯವಾದ ಕೆಲಸವಾಗಿದೆ.

ಅಧ್ಯಯನದ ಫಲಿತಗಳು

೧. ಹಲವು ಜನ ಸಾಹಿತಿಗಳಿಗೆ ಕವಿಪುಂಗವರನ್ನು ಜನ್ಮ ನೀಡಿದ ಗದಗ ಜಿಲ್ಲೆಯು ಮಹತ್ವದ ನೆಲೆಯಾಗಿದೆ. ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಜಿಲ್ಲೆಯು ತನ್ನದೇ ಸ್ಥಾನಮಾನವನ್ನು ಹೊಂದಿದೆ. ಇಲ್ಲಿ ನೀರಾವರಿ, ಭೂಮಿ, ಪಶು ಸಂಗೋಪನೆ, ಮೀನುಗಾರಿಕೆ, ಖನಿಜ ಸಂಪತ್ತು ಒಳಗೊಂಡಿದೆ. ನಾಡಿನ ಚರಿತ್ರೆಯನ್ನು ಕಟ್ಟಲು ಇಲ್ಲಿಯ ಹಲವು ಪ್ರಾಚೀನ ಅವಶೇಷಗಳು ದೊರೆಯುತ್ತಿವೆ.

೨. ಕರ್ನಾಟಕದ ಇತಿಹಾಸದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಕಾಪಾಡಿಕೊಂಡ ಗದಗ ಜಿಲ್ಲೆಯು ಐತಿಹಾಸಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕವಾದಂತಹ ಅಪಾರ ಕೊಡುಗೆಯನ್ನು ಈ ನಾಡಿಗೆ ನೀಡಿದೆ.

೩. 'ಸಹಕಾರಿ ರಂಗದ ಜನ್ಮಭೂಮಿ' ಎಂದೇ ಹೆಸರು ಪಡೆದ 'ಗದಗ ಜಿಲ್ಲೆಯು ಕೃಷಿ ಹಾಗೂ ಕೈಗಾರಿಕೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಕೃಷಿಯೂ ಇಲ್ಲಿಯ ಜನರ ಜೀವಾಳವಾಗಿದೆ. ಜನತೆಗೆ ಆಹಾರ, ಜಾನುವಾರುಗಳಿಗೆ ಮೇವು, ಕೈಗಾರಿಕೆ, ವ್ಯಾಪಾರ ಮತ್ತು ಸಾರಿಗೆ ರಂಗದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಜಿಲ್ಲಾದ್ಯಂತ ನೆಲಸಿರುವ ಛಲವಾದಿ ಸಮುದಾಯದವರು ತಮಗೆ ಅನುಕೂಲಕ್ಕೆ ತಕ್ಕಂತೆ ಕೆಲವು ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಕೃಷಿಯೇತರ ವೃತ್ತಿಗಳಲ್ಲಿ ತೊಡಗಿದ್ದಾರೆ. ಕೃಷಿಕರಾಗಿ, ಕೂಲಿ ಕಾರ್ಮಿಕರಾಗಿ ಬದುಕನ್ನು ಕಟ್ಟಿಕೊಂಡ ಇವರಲ್ಲಿ ಹಲವು ಜನಪದೀಯ ಕಲಾಕಾರರಾಗಿದ್ದಾರೆ. ಹೀಗಾಗಿ ಜಿಲ್ಲೆಯ ಭೌಗೋಳಿಕ ಪರಿಸರವು ವಿಭಿನ್ನ ಸ್ವರೂಪದಲ್ಲಿದೆ.

೪. ಕರ್ನಾಟಕದ ಛಲವಾದಿ ಸಮುದಾಯದ ಮೂಲದ ಬಗೆಗೆ ಸಾಹಿತ್ಯಿಕ, ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯಲ್ಲಿ ಅನೇಕ ರೀತಿಯ ಅಂಶಗಳು ಹೊರಬರುತ್ತಿವೆ. ಅವುಗಳೆಲ್ಲವನ್ನು ಅಧ್ಯಯನದಲ್ಲಿ ನಿರೂಪಿಸಿದ್ದೇನೆ. 'ಹೊಲೆಯ', 'ಛಲವಾದಿ' ಎಂಬ ಪದದ ನಿಷ್ಪತ್ತಿಯ ಕುರಿತು ಪೌರಾಣಿಕ ನೆಲೆಯಲ್ಲಿ ಚರ್ಚಿಸಲಾಗಿದೆ.

೫. ಯಾವದೇ ಸಮುದಾಯ ಇಡೀ ಮಾನವ ಕುಲಕ್ಕೆ ತನ್ನದೇ ಆದ ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆ ನೀಡಿರುವಂತೆ ಛಲವಾದಿ ಸಮುದಾಯವು ತನ್ನ ಮಹತ್ತರ ಕೊಡುಗೆಯನ್ನು ನೀಡಿದೆ. ತನ್ನ ಪಾರಂಪರಿಕ ಬದುಕಿನೊಂದಿಗೆ ಆಧುನಿಕ ಸನ್ನಿವೇಶಕ್ಕೆ ಒಳಪಟ್ಟು ಸಮುದಾಯದ ಮೂಲ ಚಹರೆಗಳು ಇಂದು ಬದಲಾಗಿದೆ. ಹೀಗೆ ಬದಲಾಗುವಿಕೆ ಸಮುದಾಯಕ್ಕೆ ಬೇಕಾಗಿರುವ ಅಂಶವಾಗಿದೆ. ಭಾರತೀಯ ಸಮಾಜದಲ್ಲಿ ಉಚ್ಚ, ನೀಚ ಸಮುದಾಯಗಳೆಂದು ಪರಿಭಾವಿಸಿದೆ. ಉತ್ತಮ ಕೆಲಸ ಮಾಡುವವರೆಲ್ಲರೂ ಉಚ್ಚ ಕುಲದವರು, ತೀರ ಕೆಳಮಟ್ಟದ ಕೆಲಸ ಮಾಡುವವರು ನೀಚರೆಂಬ

ಪರಿಕಲ್ಪನೆ ಭಾರತೀಯ ಸಂಸ್ಕೃತಿಯಲ್ಲಿ ಮನೆ ಮಾಡಿದೆ. ಕಸುಬಿನ ಹಿನ್ನೆಲೆಯಲ್ಲಿ ಮಾನವ ಸಮಾಜವನ್ನು ಶ್ರೇಣಿಗಳಲ್ಲಿ ಅಳೆಯಲಾಗಿದೆ. ಅದರಲ್ಲಿ ಛಲವಾದಿ ಸಮುದಾಯವು ತಳಸಮುದಾಯವೆಂದು ಪರಿಗಣಿಸಿದೆ. ಈ ಸಮುದಾಯ ಮುಖ್ಯ ವಾಹಿನಿಗೆ ಬರಬೇಕಾದರೆ ಇವರಲ್ಲಿ ಶಿಕ್ಷಣ, ಸಂಘಟನೆ ಹಾಗೂ ಜಾಗೃತೆ ಮೂಡಿಸಬೇಕಾದ ಅನಿವಾರ್ಯತೆ ಇವರನ್ನು ಕಾಡುತ್ತಿದೆ.

೬. ಮೇಲ್ವರ್ಗದವರಿಂದ ಛಲವಾದಿ ಸಮುದಾಯಗಳಲ್ಲದೆ ತಳವರ್ಗದ ಅನೇಕ ಸಮುದಾಯಗಳು ಅವರ ಶೋಷಣೆಯಿಂದ ಇನ್ನೂ ಸಹ ಮುಕ್ತರಾಗಿಲ್ಲ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗದಲ್ಲಿ ಇವರ ಶೋಷಣೆ ಅಧಿಕವಾಗಿದೆ. ದೇವಸ್ಥಾನ, ಹೋಟೆಲು ಮುಂತಾದ ಮೇಲ್ವರ್ಗಕ್ಕೆ ಸೀಮಿತವಾದ ಸ್ಥಳಗಳಿಗೆ ಈ ತಳವರ್ಗಗಳು ಹೋಗುವಂತಿಲ್ಲ. ಇಂತಹ ವಿಷಯಗಳ ಕುರಿತು ಪ್ರತಿನಿತ್ಯದ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಆಗೊಮ್ಮೆ ಈಗೊಮ್ಮೆ ಬರುತ್ತಿರುತ್ತವೆ. ಮೇಲ್ನೋಟಕ್ಕೆ ಹಾಗೂ ಸರ್ಕಾರದ ದಾಖಲೆಗಳಲ್ಲಿ ತಳಸಮುದಾಯಗಳು ಬದಲಾಗಿವೆ ಎಂಬಂತೆ ಬಿಂಬಿಸುತ್ತವೆ. ಆದರೆ ಗ್ರಾಮೀಣ ಭಾಗದ ಛಲವಾದಿ ಹಾಗೂ ಇತರೆ ತಳಸಮುದಾಯಗಳ ಸ್ಥಿತಿ ಚಿಂತಾಜನಕವಾಗಿದೆ. ಇವುಗಳ ಕುರಿತು ಕ್ಷೇತ್ರಕಾರ್ಯಗಳ ಸಂದರ್ಭದಲ್ಲಿ ಗಮನಿಸಿ ಅಧ್ಯಯನದಲ್ಲಿ ಒಳಪಡಿಸಿದ್ದೇನೆ.

೭. 'ಛಲವಾದಿ' ಎಂದರೆ ಹಿಂಜರಿಯದ, ಪಟ್ಟುಹಿಡಿದ, ಮೊಂಡುತನ ಉಳ್ಳವನು ಎಂಬ ಅರ್ಥ ಕಲ್ಪಿಸುತ್ತವೆ. ಈ ಛಲವಾದಿ ಎಂಬುವದು ನಾಮಪದವಾಗಿದ್ದು, ವಾದ್ಯಗಳನ್ನು ಛಲದಿಂದ ವಾದನ(ನುಡಿಸುವಿಕೆ) ಮಾಡುವದರಿಂದ ಈ ಪದ ಬಂದಿದೆ ಎನ್ನುವರು. ಈ 'ಛಲವಾದಿ' ಎಂಬ ಪದಕ್ಕೆ ನಾಡಿನಲ್ಲಿ ಹಲವು ಕಡೆ ಪರ್ಯಾಯ ಹೆಸರುಗಳ ಬಗೆಗೆ ಅಧ್ಯಯನದಲ್ಲಿ ತಿಳಿಯಪಡಿಸಲಾಗಿದೆ.

೮. ಈ ನಾಡಿನ ಮೂಲ ನಿವಾಸಿಗಳಾದ ಹೊಲೆಯರು, ಕೃಷಿ ಕಾಯಕದ ಮೂಲ ಪುರುಷರೆಂದು ಹಲವು ಮಂದಿ ವಿದ್ವಾಂಸರ ಅಭಿಪ್ರಾಯ. ಹೊಲವನ್ನು ಉಳುಮೆ ಮಾಡುವವರಾದ್ದರಿಂದ ಇವರಿಗೆ ಹೊಲೆಯ ಎಂಬ ನಾಮಧೇಯ ಲಭಿಸಿತ್ತೆಂದು ಕೆಲವರ ಅಭಿಮತವನ್ನು ಅಧ್ಯಯನದಲ್ಲಿ ಗಮನಿಸಿದ್ದೇನೆ. ಏಕೆಂದರೆ ಹಿಂದೆ ಹೆಚ್ಚು ಭೂಮಿಯನ್ನು ಹೊಂದಿದವರಾಗಿದ್ದರು. ಮೈಸೂರು ಸಂಸ್ಥಾನಕ್ಕೆ ಅಧಿಕ ಪ್ರಮಾಣದ ತೆರಿಗೆಯನ್ನು ಹೊಲೆಯ ಸಮುದಾಯವೇ ಕಟ್ಟಿದೆಯೆಂದು ಉಲ್ಲೇಖಗಳಿವೆ.

೯. ಹೊಲೆಯರು ಈ ನಾಡನ್ನು ಆಳಿದವರು, ರಕ್ಷಿಸಿ ಕಾಪಾಡಿದವರಾಗಿದ್ದಾರೆ. ಆದರೆ ಇಂದು ಹೊಲೆಯನ ಬದುಕು ಹೋಳಾಗಿದೆ. ಸಾಮಾಜಿಕವಾಗಿ ನೈಜ ಸ್ಥಾನಮಾನಗಳಿಲ್ಲದೆ ಮಾನವ ಸಮಾಜದಿಂದ ದೂರೀಕರಿಸಲ್ಪಟ್ಟಿದ್ದಾನೆ. ನಿಜವಾದ ಸಮಾನತೆ, ಒಡೆತನ ಇನ್ನೂ ಇವರಿಗೆ ದೊರಕಿಲ್ಲ.

೧೦. ಕರ್ನಾಟಕದಲ್ಲಿ ಹಲವು ಸಮುದಾಯಗಳು ತಮ್ಮದೇ ಆದ ಪಾರಂಪರಿಕ ನೆಲೆಯಲ್ಲಿ ಸಾಗುತ್ತಾ ಬಂದಿವೆ. ಇವುಗಳು ತಾವು ನಿರ್ಮಿಸಿದ ಚೌಕಟ್ಟಿನ ಅಡಿಯಲ್ಲಿ ಬದುಕಲು ಪ್ರಯತ್ನಿಸುತ್ತಿವೆ. ಆದರೂ

ಸಮುದಾಯ ಸಮುದಾಯಗಳ ನಡುವೆ ಪರಸ್ಪರ ಕೊಡುಕೊಳ್ಳುವಿಕೆಯಿಂದ ಸಾಂಸ್ಕೃತಿಕ ಆಚರಣೆಗಳು ಕೆಲವೊಮ್ಮೆ ಪಲ್ಲಟಗೊಳ್ಳುತ್ತವೆ. ಗದಗ ಜಿಲ್ಲೆಯ ಛಲವಾದಿ ಸಮುದಾಯದ ಸಾಮಾಜಿಕ ಬದುಕಿನ ಸಾಂಸ್ಕೃತಿಕ ಪರಿಸರವನ್ನು ಅಧ್ಯಯನದಲ್ಲಿ ನಿರೂಪಿಸಿದ್ದು, ನನ್ನ ಅಧ್ಯಯನದಫಲಿತಗಳಲ್ಲಿ ಒಂದಾಗಿದೆ.

೧೧. ಜಿಲ್ಲೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಮುದಾಯದ ಆಚಾರ, ವಿಚಾರ, ರೂಢಿ–ಸಂಪ್ರದಾಯಗಳ ಕುರಿತು ಅಧ್ಯಯನದಲ್ಲಿ ನಿರೂಪಿಸಲಾಗಿದೆ. ಇಲ್ಲಿ ಹುಟ್ಟಿನಿಂದ ಸಾಯುವವರೆಗೆ ಸಮುದಾಯದಲ್ಲಿ ನಡೆಯುವ ಪಾರಂಪರಿಕ ಆಚರಣೆ ಕುರಿತು ವಿವರಿಸಲಾಗಿದೆ.

೧೨. ಜಿಲ್ಲೆಯ ಛಲವಾದಿ ಸಮುದಾಯದವರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಪ್ರಗತಿ ಕುರಿತು ಕೋಷ್ಟಕ ರೂಪದಲ್ಲಿ ಅಧ್ಯಯನದಲ್ಲಿ ನೀಡಲಾಗಿದೆ. ಇವುಗಳ ಆಧಾರದ ಮೂಲಕ ಆಯಾ ವಲಯದಲ್ಲಿ ಸಮುದಾಯದ ಬೆಳವಣಿಗೆಯನ್ನು ಕಾಣಲು ಸಾಧ್ಯವಾಗುತ್ತದೆ. ಜಿಲ್ಲೆಯ ಛಲವಾದಿ ಸಮುದಾಯವುಅಭಿವೃದ್ಧಿ ದೃಷ್ಟಿಯಿಂದ ತುಂಬಾ ಹಿಂದುಳಿದಿದೆ. ಬಡತನ, ಶಿಕ್ಷಣ, ಅಜ್ಞಾನ ಇವುಗಳಿಗೆ ಕಾರಣ. ಸರಕಾರದ ಸಹಾಯ ಸಹಕಾರದಿಂದ ಅಲ್ಪ–ಸ್ವಲ್ಪ ವೈಚಾರಿಕವಾಗಿ ಬದಲಾಗಿದ್ದಾರೆ. ಇವರಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಗತಿ ತುಂಬಾ ಕಡಿಮೆ. ಶಿಕ್ಷಣ ಮಟ್ಟ ಇವರಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಮೊಟಕುಗೊಳಿಸಲಾಗುತ್ತದೆ. ಬೆರಳೆಣಿಕೆಯ ಮಹಿಳೆಯರು ಮಾತ್ರ ಉನ್ನತ ಶಿಕ್ಷಣಕ್ಕೆ ಬರುವಂತಾಗಿದೆ. ಇವೆಲ್ಲವೂ ಕ್ಷೇತ್ರಕಾರ್ಯದ ಮೂಲಕ ಅಧ್ಯಯನದಲ್ಲಿ ಚರ್ಚಿಸಿದ್ದೇನೆ.

೧೩. ಅತ್ಯಂತ ಬಡತನದಲ್ಲಿರುವ ಈ ಸಮುದಾಯದ ಗ್ರಾಮೀಣ ಭಾಗದ ಜನತೆಯ ಸ್ಥಿತಿ ಚಿಂತಾಜನಕವಾಗಿದೆ. ಕೃಷಿ ಕೂಲಿಯನ್ನೇ ನಂಬಿ ಬದುಕುವ ಇವರಿಗೆ ಶ್ರಮಕ್ಕೆ ತಕ್ಕಂತೆ ನಿಜವಾದ ಕೂಲಿ ದೊರೆಯದ ಕಾರಣ ಇವರಲ್ಲಿ ವಲಸೆ ಅಥವಾ ಗುಳೆ ಹೋಗುವ ವ್ಯವಸ್ಥೆ ಇವರಲ್ಲಿದೆ. ದೂರದ ಬೇರೆ ಜಿಲ್ಲೆ ಅಥವಾ ರಾಜ್ಯಗಳಿಗೆ ಕೂಲಿ ಕೆಲಸ ಹುಡುಕಿಕೊಂಡು ಹೋಗುವರು. ಇವುಗಳಿಂದ ಮಕ್ಕಳ ಶಿಕ್ಷಣ ಕುಂಠಿತಗೊಂಡು ಮತ್ತಷ್ಟು ಸಮಾಜ ಹಿಂದುಳಿಯುತ್ತ ಹೋಗುತ್ತದೆ. ಹೀಗಾಗಿ ಇವರಲ್ಲಿ ಜಾಗೃತಿ ಮೂಡಿಸುವುದು ಇಂದು ಅವಶ್ಯಕವಾದ ಸಂಗತಿಯಾಗಿದೆ.

೧೪. ಛಲವಾದಿ ಸಮುದಾಯದ ಮೂಲ ಕಸಬನ್ನು ಜಿಲ್ಲಾದ್ಯಂತ ಪಾಲನೆ ಮಾಡಿಕೊಂಡು ಬರುತ್ತಿವೆ. ಕಹಳೆ ವೃತ್ತಿಯನ್ನು ಉತ್ಸವ, ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಅಲ್ಲದೆ ಸಾವಿನ ಸಂದರ್ಭದಲ್ಲಿ ಸಹ ಈ ಕಹಳೆಯನ್ನು ಊದುವರು. ಈ ಪಾರಂಪರಿಕ ವೃತ್ತಿಯನ್ನು ಕೆಲವೊಂದು ಕುಟುಂಬಗಳು ಮಾತ್ರ ಪಾಲಿಸಿಕೊಂಡು ಬಂದಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಛಲವಾದಿಯವರ ಅಭಿವೃದ್ಧಿಗಾಗಿ ಸಲಹೆ ಸೂಚನೆಗಳು

೧. ಛಲವಾದಿಯವರ ಅಭಿವೃದ್ಧಿಗಾಗಿ ರೂಪಿಸಿದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಫಲಾನುಭವಿಗಳಿಗೆ ಸಿಗುವಂತಾಗಬೇಕು.

೨. ಬಡತನ ಮತ್ತು ನಿರುದ್ಯೋಗದ ಸಮಸ್ಯೆ ನಿವಾರಿಸುವ ಪ್ರಯತ್ನವಾಗಬೇಕಿದೆ.

೩. ಸಮುದಾಯದ ಪ್ರತಿಯೊಬ್ಬ ನಿರುದ್ಯೋಗ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಕೈಗೊಳ್ಳುವಂತೆ ಗುಡಿಕೈಗಾರಿಕೆಗಳನ್ನು ಸ್ಥಾಪಿಸುವಂತೆ ಪ್ರೇರೇಪಿಸಬೇಕಾಗಿದೆ.

೪. ಮಹಿಳೆಯರ ಅಭಿವೃದ್ಧಿಗಾಗಿ ಮಹಿಳಾ ಸಂಘಟನೆಗಳು ಸ್ಥಾಪಿಸಿ ಸ್ತ್ರೀಶಕ್ತಿ ಸಂಘಗಳು ಸಕ್ರೀಯವಾಗಿ ಕಾರ್ಯನಿರ್ವಹಿಸುವಂತೆ ಅನುಕೂಲ ಮಾಡಿಕೊಡಬೇಕು.

೫. ಸಮುದಾಯದವರು ವಾಸಿಸುವ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲವೆ ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪಿಸಬೇಕು.

೬ ಛಲವಾದಿ ಸಮುದಾಯದ ಶೈಕ್ಷಣಿಕ ಮತ್ತು ಅವರ ಕ್ಷೇಮಾಭಿವೃದ್ಧಿಯ ಬಗ್ಗೆ ಸರ್ಕಾರವು ಪ್ರತ್ಯೇಕವಾದ ನಿರ್ದೇಶನಾಲಯವನ್ನು ಸ್ಥಾಪಿಸಬೇಕು.

೭. ಸರ್ಕಾರದಿಂದ ಸುವ್ಯವಸ್ಥಿತವಾದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯ ಕಲ್ಪಿಸಿಕೊಡಬೇಕು.

೮. ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದೊರಕಿಸಸಬೇಕು.

೯. ಪ್ರತಿಯೊಂದು ಛಲವಾದಿಯ ಕುಟುಂಬಕ್ಕೆ ಸ್ವಂತ ಭೂಮಿಯನ್ನು ಒದಗಿಸಬೇಕು.

೧೦. ಪ್ರತಿಯೊಂದು ಗ್ರಾಮದಲ್ಲಿ ಸಭೆ ಸಮಾರಂಭ ನಡೆಸಲು ಸಮುದಾಯ ಭವನ ಒದಗಿಸಬೇಕು.

೧೧. ಸರ್ಕಾರಿ ಶಾಲೆಗಳಲ್ಲಿದ್ದಂತೆ ಖಾಸಗಿ ಶಾಲೆಗಳಲ್ಲಿಯು ಸಹ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಪ್ರವೇಶ ಸಿಗುವಂತಾಗಬೇಕು.

೧೨. ಪ್ರತಿಯೊಂದು ವಸತಿ ನಿಲಯದಲ್ಲಿ ಕಡ್ಡಾಯವಾಗಿ ಟ್ಯೂಶನ್ ವ್ಯವಸ್ಥೆ ಹಾಗೂ ಸ್ಪರ್ಧಾತ್ಮಕಗಳಿಗಾಗಿ ತರಬೇತಿ ಕೊಡಬೇಕು.

೧೩. ಪ್ರತಿಯೊಂದು ವಸತಿ ಶಾಲೆಯಲ್ಲಿ ಹಾಗೂ ವಸತಿ ನಿಲಯಗಳಲ್ಲಿ ಒಬ್ಬ ವಿದ್ಯಾರ್ಥಿಗಳಿಗೆ ಒಂದು ಕೋಣೆ ವ್ಯವಸ್ಥೆ ಮಾಡಬೇಕು.

೧೪. ಕಲಾವಿದರನ್ನು ಸರಿಯಾಗಿ ಗುರ್ತಿಸಿ ಅವರಿಗೆ ಸರ್ಕಾರದಿಂದ ಇರುವ ಸೌಲಭ್ಯವನ್ನು ಒದಗಿಸಿಕೊಡಬೇಕು.

೧೫. ಗ್ರಾಮಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ, ದೇವಾಲಯಗಳಲ್ಲಿ ಕೆರೆ, ಕಟ್ಟೆಗಳಲ್ಲಿ ಶೌಚಾಲಯಗಳಲ್ಲಿ ಇವರಿಗೆ ಪ್ರವೇಶ ಒದಗಿಸಬೇಕು.

೧೬. ಅಸ್ಪೃಶ್ಯತೆ ಆಚರಿಸುವವರನ್ನು ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಒಳಪಡಿಸಬೇಕು

೧೭. ಅಸ್ಪೃಶ್ಯತೆ ಸಮಸ್ಯೆ ನಿವಾರಿಸುವಲ್ಲಿ ಪ್ರತಿ ವರ್ಷವೂ ಜನರಿಗೆ ತಿಳುವಳಿಕೆ ಕೊಡುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೧೮. ದೇವದಾಸಿಯರಿಗೆ ಸರ್ಕಾರಿ ಸೌಲಭ್ಯಗಳು ಒದಗಿಸಬೇಕು. ಅವರ ಮಕ್ಕಳಿಗೆ ಶಿಕ್ಷಣ ಮತ್ತು ನೌಕರಿ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

೧೯. ಈ ಸಮುದಾಯದ ಮಕ್ಕಳಿಗೆ ವಸತಿ ಶಾಲೆ, ಕಾಲೇಜುಗಳನ್ನು ಸ್ಥಾಪಿಸಬೇಕು.

೨೦. ಮಹಾಪ್ರವಾಹದಿಂದ ಹಾನಿಯಾದ ಕೃಷಿಕರಿಗೆ ಪರಿಹಾರ ನೀಡಬೇಕು.

೨೧. ಮಹಾಪ್ರವಾಹ ಪೀಡಿತ ಗ್ರಾಮಗಳನ್ನು ಸ್ಥಳಾಂತರ ಮಾಡಿ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕು.

೨೨. ಜಿಲ್ಲೆಯಲ್ಲಿ ಅಂಬೇಡ್ಕರ ಕಲ್ಯಾಣ ಮಂಟಪ ಸ್ಥಾಪಿಸಿ ಕೊಡಬೇಕು.

೨೩. ಛಲವಾದಿಯವರು ವಾಸಿಸುತ್ತಿರುವ ಪ್ರತಿಯೊಂದು ಗ್ರಾಮದಲ್ಲಿ ಇವರಿಗೆ ಸ್ಮಶಾನ ಭೂಮಿ ಒದಗಿಸಿಕೊಡಬೇಕು.

೨೪. ಬಿಟ್ಟಿ ಚಾಕರಿ ಕೆಲಸಗಳನ್ನು ನಿಲ್ಲಿಸಬೇಕು. ಇದನ್ನು ಮಾಡಿಸಿಕೊಳ್ಳುವವರ ವಿರುದ್ಧ ಹಾಗೂ ಪ್ರೋತ್ಸಾಹಿಸಿಕೊಡುವವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಬೇಕು. ಅವರು ಸ್ವಾಭಿಮಾನಿಗಳಾಗಿ ಜೀವನ ನಡೆಸಲು ಆರ್ಥಿಕ ಸಹಾಯವನ್ನು ಸರ್ಕಾರ ಕಲ್ಪಿಸಬೇಕು.

೨೫. ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರನ್ನು ಶೀಘ್ರವಾಗಿ ಕಾಯಂಗೊಳಿಸಬೇಕು. ಅಲ್ಲದೆ ಇವರಿಗಾಗಿ ಪ್ರತೇಕ ಆಸ್ಪತ್ರೆಯನ್ನು ಸ್ಥಾಪಿಸಬೇಕು. ಅಲ್ಲದೆ ವಿವಿಧ ಹ್ಯಾಂಡ್ ಗ್ಲೌಜ್ ಬಟ್ಟೆ ಇನ್ನಿತರ ವಸ್ತುಗಳನ್ನು ಒದಗಿಸಬೇಕು.

೨೬. ಪ್ರತಿಯೊಂದು ಗ್ರಾಮದಲ್ಲಿ ಇವರ ಸಮಗ್ರ ಕಲ್ಯಾಣಕ್ಕಾಗಿ ಕಮ್ಯುನಿಟಿ ಕೌನ್ಸಿಲರ್‌ರನ್ನು ನೇಮಿಸಬೇಕು.

೨೭. ಸ್ವಾತಂತ್ರ್ಯ ಬಂದ ನಂತರ ಛಲವಾದಿಯವರಿಗೆ ಮೀಸಲಾತಿಯಿಂದಾದ ವಂಚನೆಯನ್ನು ಸರಿಪಡಿಸಬೇಕು. ಹಾಗೂ ಒಳಮಿಸಲಾತಿ ಸೌಲಭ್ಯವನ್ನು ಕೊಡಬೇಕು.

೨೮. ಸರ್ಕಾರಿ, ಅರೆಸರಕಾರಿ, ಕಾರ್ಪೋರೇಶನ್‌ಗಳಲ್ಲಿ, ನಿಗಮ ಮಂಡಳಿಗಳಲ್ಲಿ ನೌಕರಿ ಸಿಗುವಂತಾಗಬೇಕು.

೨೯. ಮೀಸಲಾತಿಯ ಸೌಲಭ್ಯವನ್ನು ಖಾಸಗಿ ಕ್ಷೇತ್ರಗಳಿಗೂ ಕಡ್ಡಾಯವಾಗಿ ಜಾರಿಗೆಗೊಳಿಸಬೇಕು.

೩೦. ವಿದ್ಯಾವಂತರಿಗೆ ಉದ್ಯೋಗಾವಕಾಶಗಳು ಒದಗಿಸಬೇಕು.

೩೧. ವಿದ್ಯಾವಂತ ನಿರುದ್ಯೋಗ ಯುವಕರಿಗೆ ತಿಂಗಳಿಗೆ ಧನಸಹಾಯ ಒದಗಿಸಬೇಕು.

೩೨. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸರ್ಕಾರಿ ವಸತಿ ಶಾಲೆ ನಿರ್ಮಿಸಿ ಶಿಕ್ಷಣ ಕೊಡಬೇಕು.

೩೩. ವೈದ್ಯಕೀಯ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ಉಚಿತವಾಗಿ ನೀಡಬೇಕು.

೩೪. ವಿದ್ಯಾಸಂಸ್ಥೆ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಈ ಸಮುದಾಯದವರಿಗೆ ಪ್ರಾತಿನಿಧ್ಯ ಕೋಡಬೇಕು. ಅದರಂತೆ ನಿವೇಶನಕ್ಕಾಗಿ ಸಹಾಯಧನವನ್ನು ಒದಗಿಸಬೇಕು

೩೫. ನಗರ ಪಟ್ಟಣಗಳಲ್ಲಿ ವಾಸಿಸುವ ಛಲವಾದಿ ಸಮುದಾಯದವರಿಗೆ ನಗರ, ಪಟ್ಟಣಗಳಲ್ಲಿ ವಾಸಿಸುವ ಛಲುವಾದಿ ಸಮುದಾಯದವರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರನ್ನು ಉಚಿತ ನಿವೇಶನಗಳನ್ನು ಕೊಡಬೇಕು.

೩೬. ವಿವಿಧ ಸ್ಥರದ ಪಂಚಾಯತಿ ಸಂಸ್ಥೆಗಳಲ್ಲಿ ಆಯ್ಕೆಗೊಂಡ ಸದಸ್ಯರಿಗೆ ಸಂವಿಧಾನದ ಬಗ್ಗೆ ಸಂಪೂರ್ಣ ಜ್ಞಾನ ಒದಗಿಸಬೇಕು.

೩೭. ಸಮುದಾಯದ ಪ್ರಗತಿಗಾಗಿ ಜಾರಿಗೆ ತಂದಂತ ಸರ್ಕಾರದ ಯೋಜನೆಗಳ ಬಗ್ಗೆ ತಿಳುವಳಿಕೆ ನೀಡಬೇಕು.

೩೮. ರಾಷ್ಟ್ರೀಕೃತ ಬ್ಯಾಂಕ್‌ಗಳು ಇವರ ಸ್ವಂತ ಉದ್ಯೋಗಕ್ಕಾಗಿ ಸಾಲ ಕೊಡುವದರಲ್ಲಿ ವಿಳಂಬ ಮಾಡುತ್ತಿವೆ. ಅಲ್ಲದೆ ಅವರ ಮಕ್ಕಳ ಶಿಕ್ಷಣ ಸಾಲವನ್ನು ಕೂಡಲು ನಿರಾಕರಿಸುತ್ತಿವೆ. ಈ ತರಹದ ಸಮಸ್ಯೆ ಬರಲಾರದ ಹಾಗೆ ಅವರಿಗೆ ಅನುಕೂಲವಾಗುವಂತೆ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು.

೩೯. ವಯೋವೃದ್ಧರ, ವಿಕಲಚೇತನರಿಗೆ, ಹಾಗೂ ವಿಧವೆಯರಿಗೆ ಪ್ರತಿ ತಿಂಗಳು ಸರಿಯಾದ ಕ್ರಮದಲ್ಲಿ ಮಾಸಿಕ ವೇತನ ಕೊಡಬೇಕು.

೪೦. ಶಾಸಕರು, ಸಂಸದರು ಹಾಗೂ ಮಂತ್ರಿಗಳು ಇವರ ಏಳಿಗೆಗಾಗಿ ವಿವಿಧ ಯೋಜನೆಗಳ ಅನುಕೂಲತೆಗಳನ್ನು ಒದಗಿಸಬೇಕು.

೪೧. ಸರ್ಕಾರದ ಗೋಮಾಳ ಭೂಮಿಯನ್ನು ಇವರಿಗೆ ದೊರೆಯುವಂತೆ ಮಾಡಬೇಕು.

೪೨. ಶಾಲೆ-ಕಾಲೇಜುಗಳು ಪ್ರಾರಂಭವಾಗುವ ದಿನದಂದು ಪ್ರತಿಯೊಂದು ವಸತಿ ನಿಲಯಗಳು ಪ್ರಾರಂಭಗೊಂಡು ಊಟದ ವ್ಯವಸ್ಥೆಯನ್ನು ಕಲ್ಪಿಸಬೇಕು.

೪೩. ಸಣ್ಣ ಮತ್ತು ಅತಿಸಣ್ಣ ಕೃಷಿಕರಿಗೆ ಆರ್ಥಿಕ ಸಹಾಯ ಒದಗಿಸಬೇಕು.

೪೪. ಅಂತರಜಾತಿಯ ವಿವಾಹ ಮಾಡಿಕೊಂಡ ದಂಪತಿಗಳಿಗೆ ಹೆಚ್ಚಿನ ಧನಸಹಾಯ ಜೊತೆಗೆ ನೌಕರಿಯನ್ನು ಕೊಡಬೇಕು.

೪೫. ಅಂಬೇಡ್ಕರ ಜಯಂತಿ ದಿನದಂದು ಈ ಸಮುದಾಯದ ಏಳಿಗೆಗಾಗಿ ದುಡಿಯುತ್ತಿರುವ ವ್ಯಕ್ತಿಗಳಿಗೆ, ಸಂಘ-ಸಂಸ್ಥೆಗಳಿಗೆ ಗುರುತಿಸಿ ಅವರಿಗೆ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಬೇಕು.

೪೬. ಈ ಸಮುದಾಯದವರಿಗೆ ಸಿಗುವ ಕೂಲಿ ದರ ತುಂಬಾ ಕಡಿಮೆ ಇದೆ. ಆದ್ದರಿಂದ ಕೂಲಿ ದರ ಹೆಚ್ಚಿಸಬೇಕು. ಹಾಗೂ ವರ್ಷಪೂರ್ತಿವರೆಗೆ ಕೆಲಸ ಮಾಡುವ ಅನುಕೂಲತೆಗಳನ್ನು ಸರ್ಕಾರವು ಮಾಡಬೇಕು.

೪೭. ಯಾವುದೇ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಗ್ರಂಥಾಲಯದ ಸೌಲಭ್ಯಗಳನ್ನು ಒದಗಿಸಬೇಕು.

೪೮. ಯಾವುದೇ ಸಹಕಾರಿ ಸಂಘಗಳ ಸ್ಥಾಪಿಸುವಾಗ ಇವರಿಗೆ ಸದಸ್ಯತ್ವದ ಪ್ರಾತಿನಿಧ್ಯ ಕೊಡಬೇಕು.

೪೯. ಪ್ರತಿಯೊಬ್ಬ ವಿದ್ಯಾವಂತ ಹಾಗೂ ನೌಕರಸ್ಥರೆಲ್ಲರು ಪರಸ್ಪರ ಗೌರವಿಸಿ, ಸಂಘಟಿತರಾಗಿ ತಾವು ಹುಟ್ಟಿ ಬೆಳೆದ ಸಮುದಾಯಕ್ಕಾಗಿ ಜ್ಞಾನ, ಸಮಯ ಮತ್ತು ಹಣವನ್ನು ಕೊಡುವಂತಹ ಮನೋಭಾವನೆ ಬೆಳೆಸಿಕೊಳ್ಳಬೇಕು.

ಈ ಸಮುದಾಯ ಸಂಘಟನೆಯಾಗಲು ಬುದ್ಧಿಜೀವಿಗಳು, ಜನಪ್ರತಿನಿಧಿಗಳು, ವಿದ್ಯಾರ್ಥಿಗಳು, ಯುವಕರು ಆಸಕ್ತಿ ವಹಿಸಿ ಯಶಸ್ವಿಯಾದ ರಾಜ್ಯ ಸಂಘಟನೆಯನ್ನು ಕಟ್ಟಬೇಕು.

ಸಮುದಾಯದ ಸಮಗ್ರ ಬದುಕಿನ ಇತಿಹಾಸವನ್ನು ತಿಳಿದುಕೊಂಡಾಗಲೆ ಹೆಚ್ಚು ಅರ್ಥಪೂರ್ಣವಾದ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರಕಾರ್ಯವನ್ನು ಅವಲಂಬಿಸಿರುವುದರಿಂದ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿ ಇವರು ವಾಸಿಸುತ್ತಿರುವ ಗ್ರಾಮಗಳಿಗೆ ಭೇಟಿ ನೀಡಿ ವಕ್ತೃಗಳಿಂದ ಹಲವಾರು ವಿಷಯ ಸಂಗ್ರಹಣೆ ಪಡೆಯಲಾಗಿದೆ. ವಿದ್ವಾಂಸರಿಂದ, ಅಧಿಕಾರಿಗಳಿಂದ ಸಮುದಾಯ ನಾಯಕರುಗಳಿಂದ ಅವರ ಸಹಾಯ-ಸಹಕಾರದಿಂದಲೇ ಮಾಹಿತಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ವಿವಿಧ ಭಾವಚಿತ್ರ, ಸಾಹಿತ್ಯ ಹಾಗೂ ಸಂಶೋಧನ ಪ್ರಬಂಧಗಳು ಹಾಗೂ ಇತರ ಪುಸ್ತಕಗಳು, ವಿಶ್ವಕೋಶಗಳ ಹಾಗೂ ಪತ್ರಿಕೆಗಳ ವಿವರ ಕೊಡಲಾಗಿದೆ. ಪರಂಪರೆಯಿಂದ ಬಂದ ಸಮುದಾಯದ ಜೀವನವನ್ನು ಅರಿತುಕೊಂಡಲ್ಲಿ ಸದ್ಯದ ಜೀವನವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಪರಂಪರಾಗತವಾಗಿ ಬಂದ ಅಂಧಶ್ರದ್ಧೆ, ಸಂಪ್ರದಾಯ, ಮೂಢನಂಬಿಕೆಗಳು, ಮತ್ತಿತರ ಲೋಪದೋಷಗಳನ್ನು ತಿದ್ದಿಕೊಂಡು ಸಮಸ್ಯೆಗಳನ್ನು ನಿವಾರಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಂಡಲ್ಲಿ ಸ್ವಲ್ಪಮಟ್ಟಿಗಾದರೂ ಸಹಾಯವಾದರೆ ಸಾರ್ಥಕವಾಗುತ್ತದೆ.

***

ಅನುಬಂಧಗಳು

೧) ನಕಾಶೆ

೨) ಪರಾಮರ್ಶನ ಗ್ರಂಥಗಳು

೩) ಮಾಹಿತಿದಾರರು

೪) ಪ್ರಶ್ನಾವಳಿ

೫) ಭಾವಚಿತ್ರಗಳು

೧. ನಕಾಶೆ

ಕರ್ನಾಟಕ ರಾಜ್ಯ ನಕ್ಷೆ



೨. ಪರಾಮರ್ಶನ ಗ್ರಂಥಗಳು

೧. ಎ.ಎಸ್. ಪ್ರಭಾಕರ	ಕರ್ನಾಟಕದ ಡೊಂಬರು : ಒಂದು ಅಲೆಮಾರಿ ಸಮುದಾಯದ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೬
೨. ಎಡ್ಗರ್ ಥರ್‍ಸ್ಟನ್,	ದಿ ಕಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ ಸಂಪುಟ-೩, ಅಲಿಜೆಪ್ಬೋ ವಿಶ್ವವಿದ್ಯಾಲಯ, ದೆಹಲಿ, ೧೯೯೫
೩. ಅರ್ಜುನ ಗೊಳಸಂಗಿ	ದಲಿತರ ಬದುಕು ಮತ್ತು ಸಂಸ್ಕೃತಿಯ ಜಾನಪದೀಯ ಅಧ್ಯಯನ ಪ್ರ. ದೇವದಾಸಿ ವಿಮೋಚನಾ ಸಂಸ್ಥೆ, ಅಥಣಿ, ೨೦೦೦
೪. ಎ. ಎಸ್. ಪ್ರಭಾಕರ	ಹೆಳವರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೧೦
೫. ಅರ್ಜುನ ಗೊಳಸಂಗಿ	ಗ್ರಾಮೀಣ ಪ್ರದೇಶದಲ್ಲಿ ಒಕ್ಕಲುತನ ಸಮಸ್ಯೆ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೬. ಅರ್ಜುನ ಗೊಳಸಂಗಿ	ಡೊಳ್ಳಿನ ಪದಗಳು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೮
೭. ಅನಂತಕೃಷ್ಣ ಐಯ್ಯರ್	ಮೈಸೂರಿನ ಜಾತಿ ಮತ್ತು ಬುಡಕಟ್ಟುಗಳು-ಸಂ.-೩, ಮಿಥಲ್ ಪ್ರಕಾಶನ,ದೆಹಲಿ-೧೯೯೪
೮. ಎ. ಡಿ. ಕೃಷ್ಣಯ್ಯ	ಛಲವಾದಿ ಜನಾಂಗ ಹೇಮಂತ ಪ್ರಕಾಶನ ವಿ. ವಿ. ಕ್ವಾರ್ಟರ್ಸ್, ಆದಿಕವಿ ಪಂಪ ರಸ್ತೆ, ಮೈಸೂರು-೧೯೭೯.
೯. ಎ. ಎಂ. ರಾಜಶೇಖರ (ಸಂ.)	ಡಾ. ಬಾಬಾಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು ಸಂ.೧೨, ಭಾಗ-೧, ೧೯೯೯
೧೦. ಎ.ಎಂ. ರಾಜಶೇಖರಯ್ಯ (ಸಂ.),	ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ.೫-೧೯೯೯
೧೧. ಅಂಬೇಡ್ಕರ ಇಂಡಿಯಾ(ಹಿಂದಿ ಮಾಸಪತ್ರಿಕೆ)	ಪ್ರಕಾಶನ : ತುಮಕುಹಿರಾಜ, ಕುಶಿನಗರ, ಉತ್ತರ ಪ್ರದೇಶ, -೨೦೧೧

೧೨. ಬಿ. ಎಂ. ಪುಟ್ಟಯ್ಯ — ಸಂಶೋಧನೆ ತಾತ್ವಿಕ ಆಯಾಮಗಳು,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ–ವಿದ್ಯಾರಣ್ಯ–೨೦೦೮

೧೩. ಭಗವಾನದಾಸ, — ಅನ್‌ಟಚಬಲ್ ಸೋಲ್ಜರ್ಸ್,
ಗೌತಮ ಬುಕ್ ಸೆಂಟರ್, ದಿಲ್ಲಿ–೨೦೦೮

೧೪. ಬಸವರಾಜ ಪೋಲಿಸಪಾಟೀಲ — ಹರದೇಶಿ ನಾಗೇಶಿ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ,
ಜೆ.ಸಿ. ರಸ್ತೆ, ಬೆಂಗಳೂರು–೨೦೦೬

೧೫. ಬಸವರಾಜ ಸಬರದ — ಜನಪದ ದೈವಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ–೨೦೦೯.

೧೬ ಬಿ. ಸಿ. ಪಾಟೀಲ — ಗ್ರಾಮದೇವತೆಗಳು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–
೧೯೯೬

೧೭ ಬಸವರಾಜ ಎಸ್. ನಾಯ್ಕರ — ದ ಫೋಕ ಥೇಟರ್ ಆಫ್ ನಾರ್ತ್ ಕರ್ನಾಟಕ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೧೯೯೬

೧೮ ಬಿ. ಆರ್. ಅಂಬೇಡ್ಕರ — ಬುದ್ಧ ಆ್ಯಂಡ್ ಹೀಜ್ ಧಮ್ಮ
ಪ್ರದೀಪ ಲತಿಕಾಬಾಯಿ ಗಾಯಕವಾಡ
ಬುದ್ಧ ಆ್ಯಂಡ್ ಹೀಜ್ ಧಮ್ಮ ಸೊಸೈಟಿ, ಸಮತಾ
ಸೈನಿಕದಳ, ನಾಗಪುರ–೨೦೦೮

೧೯. ಬಿ. ಮುನಿವೆಂಕಟಪ್ಪ (ಸಂ) — ಅಂಬೇಡ್ಕರವಾದ ಅರುಹು–ಕುರುಹ ಪ್ರಕಾಶನ
ಮೈಸೂರು –೨೦೧೦

೨೦. ಬಾಲಸುಬ್ರಹ್ಮಣ್ಯ (ಸಂ.)
ಸಿ. ಎಸ್. ವಾಸುದೇವನ್ (ಸಂ.) — ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ
ಕನ್ನಡ ವಿಶ್ವವಿದ್ಯಾಲಯ,
ಹಂಪಿ–೨೦೦೭

೨೧ ಬಿ. ಸುಜ್ಞಾನಮೂರ್ತಿ (ಕ) — ದಲಿತ ತತ್ವ
ಲಡಾಯಿ ಪ್ರಕಾಶನ, ಗದಗ–೨೦೦೯

೨೨ ಚಲುವರಾಜು — ಡಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು– ೧೯೯೩.

೨೩. ಚಿದಾನಂದ ಮೂರ್ತಿ — ಸಂಶೋಧನೆ ಪ್ರ. ಡಿ.ವ್ಹಿ.ಕೆ. ಮೂರ್ತಿ,
ಕೃಷ್ಣಮೂರ್ತಿಪುರಂ ಮೈಸೂರು–೨೦೦೨

೨೪. ಚ. ನ. ಶಂಕರರಾವ್ — ಸಮಕಾಲೀನ ಭಾರತೀಯ ಸಮಾಜ ಅಧ್ಯಯನ
ಜೈ ಭಾರತ ಪ್ರಕಾಶನ,
ಶ್ರೀ ಗೌರಿ, ಭಜನಾ ಮಂದಿರ ರಸ್ತೆ, ಬಿಜೈ,
ಮಂಗಳೂರು-೨೦೦೨

೨೫. ಚ. ನ. ಶಂಕರರಾವ್ — ಸಾಮಾಜಿಕ ಸಂಶೋಧನೆ ಕೈಪಿಡಿ,
ಜೈ ಭಾರತ ಪ್ರಕಾಶನ, ಮಂಗಳೂರು-೨೦೦೫

೨೬. ಚಂದ್ರಶೇಖರ ವಸ್ತ್ರದ
ಅರ್ಜುನ ಗೊಳಸಂಗಿ — ಕ್ರತಪುರ
ಪ್ರ. ಅಧ್ಯಕ್ಷರು, ಜಿಲ್ಲಾ ಕ.ಸಾ.ಪ. ಗದಗ ಜಿಲ್ಲೆ-೨೦೦೮

೨೭. ಚಂದ್ರಶೇಖರ ವಸ್ತ್ರದ (ಸಂ.) — ಸಮೀಕ್ಷೆ
ಪ್ರ. ಅಖಿಲ ಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ,
ಗದಗ-೨೦೧೦

೨೮. ಚಂದ್ರಕಾಂತ ಪೋಕಳೆ, — ರಾಜರ್ಷಿ ಸಾಹು ಛತ್ರಪತಿ, ಜೈಸಿಂಗ್ ರಾವ್ ಪವಾರ,
೨೦೧೦

೨೯. ಸಿ. ವಿ. ಕೆರಿಮನಿ (ಸಂ.) — ಬೆಳ್ವೊಲ ಬೆಳಕು-ಸ್ಮರಣ ಸಂಚಿಕೆ
ಪ್ರ. ಅಖಿಲ ಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ,
ಗದಗ-೨೦೧೦

೩೦ ಸಿ.ಎನ್. ಗೊಳಸಂಗಿ — ಬಿಜಾಪುರ ಜಿಲ್ಲೆಯ : ಹೊಲೆಯರ ಸಾಂಸ್ಕೃತಿಕ
ಒಂದು ಅಧ್ಯಯನ, ೨೦೦೮

೩೧. ಚ. ನ. ಶಂಕರರಾವ್ — ಭಾರತೀಯ ಸಮಾಜದ ಪ್ರಚಲಿತ ಸಾಮಾಜಿಕ ಸಮಸ್ಯೆಗಳು
ಜೈಭಾರತ ಪ್ರಕಾಶನ, ಮಂಗಳೂರು-೨೦೦೨

೩೨. ಸಿ. ಕೆ. ಮಹೇಶ — ದಲಿತ ಚರಿತ್ರೆ ಮತ್ತು ಬುದ್ಧ ಧಮ್ಮ
ವಿಮೋಚನಾ ಪ್ರಕಾಶನ,ಜೆ. ಜೆ. ಹಟ್ಟಿ, ಚಿತ್ರದುರ್ಗ-೨೦೦೬

೩೩. ಚೆನ್ನಣ್ಣ ವಾಲೀಕಾರ — ಮಹಾರಾಷ್ಟ್ರ ರಾಜ್ಯದ ತುಂಬ ಹರಿಯುತ್ತಿರುವ ವೇಶ್ಯಾ
ಸೋದರಿಯರ ಕಣ್ಣೀರು
ಕಡಲಿನ ಕೋಗಿಲೆಗಾನ, ದಲಿತ ಬಂಡಾಯ ಸಾಹಿತ್ಯ
ಪ್ರಕಾಶನ ಕೇಂದ್ರ, ಎಲ್. ಐ. ಜಿ. ೧೨೦,
ಬಂಡೇಪುರ ಕಾಲೋನಿ, ಸೇಡಂ ರಸ್ತೆ,
ಗುಲಬರ್ಗಾ.-೧೯೯೬

೩೪. ಸಿ. ಪಾರ್ವತಮ್ಮ — ಆದಿವಾಸಿ ಸಮುದಾಯಗಳ ಅಭಿವೃದ್ಧಿ
ಕನ್ನಡ ವಿ.ವಿ., ಹಂಪಿ, ೨೦೦೭

೩೫. ಚಾಂಡಾಳ, — ಕರ್ನಾಟಕ ದಲಿತ ಚಳುವಳಿ ಮತ್ತು ಡಾ. ಅಂಬೇಡ್ಕರ ಪ್ರಭಾವ, ಚೈತ್ರ ಪ್ರಕಾಶನ, ಚಿಕ್ಕ ತಿರುಪತಿ, ಕೋಲಾರ, ೨೦೦೨

೩೬. ಸಿ. ಸೋಮಶೇಖರ, — ಸಿದ್ದಿಯರ ಸಾಮಾಜಿಕ ಸ್ಥಿತ್ಯಂತರಗಳು, ಕ.ವಿ.ವಿ.ಮ ಹಂಪಿ, ೨೦೧೦

೩೭. ಚಲವಾದಿ ಬಸವರಾಜು — ಸಿಕ್ಕಲಿಗರು ಒಂದು ಸಾಮಾಜಿಕ ಅಧ್ಯಯನ ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೬

೩೮. ಡಾ. ಬಿ. ಡಿ. ಗಟ್ಟೆನ್ನವರ — ದಲಿತರ ಸಂಪ್ರದಾಯ ಹಾಗೂ ಆಚರಣೆಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೨೦೦೨

೩೯. ಡಾ. ಎಚ್. ಟಿ. ಪೋತೆ — ಬಿ. ಶ್ಯಾಮಸುಂದರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೧೨

೪೦. ಡಾ. ಸಿದ್ರಾಮ ಕಾರಣಿಕ — ಹೋರಾಟದ ಬದುಕು ಸಾಮ್ರಾಟ ಪ್ರಕಾಶನ ಎಂ. ಜಿ. ರಸ್ತೆ, ವೈಭವ ನಗರ, ಬೆಳಗಾವಿ-೨೦೦೮

೪೧. ಡಾ. ಎನ್. ಆರ್. ಶಿವರಾಮ — ಡಾ. ಅಂಬೇಡ್ಕರ ದರ್ಶನ ಜೈ ಭೀಮ ಪ್ರಕಾಶನ, ನಗರನಹಳ್ಳಿ, ಹಾಸನ ಜಿಲ್ಲೆ-೨೦೧೧

೪೨. ದೇವೇಂದ್ರಕುಮಾರ ಹಕಾರಿ (ಸಂ.) ಕೆ. ಆರ್. ಸಂಧ್ಯಾರೆಡ್ಡಿ — ಗ್ರಾಮೀಣ ವೃತ್ತಿಗಳು ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೨೦೦೦.

೪೩. ಡಾ. ಬಿ. ಎಂ. ಪುಟ್ಟಯ್ಯ — ದಲಿತರು ಮತ್ತು ಭೂಮಿಯ ಪ್ರಶ್ನೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೮

೪೪. ಡಾ. ದೇವೇಂದ್ರಕುಮಾರ ಹಕಾರಿ — ಹಂತಿ ಹಾಡುಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೧೯೯೬

೪೫. ದೇವಪ್ಪ ಲಿಂಗದಾಳ (ಸಂ.) — ಲಿಂಗೇಶವಾಣಿ ವಾರಪತ್ರಿಕೆ (೩-೧೦-೨೦೧೧) ರಾಜೀವಗಾಂಧಿ ನಗರ, ಗದಗ-೨೦೧೧

೪೬. ಡಾ. ಗೀತಾ ನಾಗಭೂಷಣ — ದುರಗ-ಮುರಗಿ ಅವರ ಸಂಸ್ಕೃತಿ ಕರ್ನಾಟಕ ಸಂಸ್ಕೃತಿ ಅಕಾಡೆಮಿ, ಬೆಂಗಳೂರು- ೧೯೯೩

೪೭ ಡಿ. ಬಿ. ರಾಮಚಂದ್ರಾಚಾರ್ಯ — ದಮ್ಮಪದ ಸಾರ
ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು-೨೦೦೮

೪೮. ಡಾ.ಎಮ್.ಎಮ್.ರಾಜಶೇಖರಯ್ಯ(ಸಂ,) — ಡಾ. ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು
ಭಾಷಣಗಳು (ಅಪ್ರಕಟಿತ ಬರಹಗಳು) (ಸಂಪುಟ ೧೨)
ಭಾಗ-೧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು-೧೯೯೯

೪೯. ಡಾ. ಎಮ್.ಎಮ್.ರಾಜಶೇಖರಯ್ಯ(ಸಂ,) — ಡಾ. ಬಾಬಾಸಾಹೇಬ ಅಂಬೇಡ್ಕರ ಬರಹಗಳು ಮತ್ತು
ಭಾಷಣಗಳು (ಸಂಪುಟ-೪)
(ಅಪ್ರಕಟಿತ ಬರಹಗಳು) ಹಿಂದು ಧರ್ಮದ ಒಗಟುಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೧೯೯೫

೫೦. ಡಾ. ಎಚ್. ಟಿ. ಪೋತೆ — ನೀರನೆಳಲು ಅಂಬೇಡ್ಕರ ಚಿಂತನೆಯ ಅಧ್ಯಯನಾತ್ಮಕ
ಲೇಖನಗಳು, ಪ್ರ. ಶ್ರೀಮತಿ ಲಲಿತಾ ಎಚ್. ಪೋತೆ,
ವಿಶ್ವವಿದ್ಯಾಲಯ ಗುಲಬರ್ಗ-೨೦೦೯

೫೧. ಡಾ. ವಿಜಯ ಆರ್. ಕಾಂಬಳೆ (ಅನು.) — ಮರಾಟಿ ದಲಿತರ ಕತೆಗಳು ಮನುಷ್ಯರನ್ನು ಹೊಡುಕುತ್ತ
ಮೂಲ, ಡಾ : ಬಾಬುರಾವ ಗಾಯಕವಾಡ, ಲಡಾಯಿ
ಪ್ರಕಾಶನ, ಗದಗ-೨೦೧೦

೫೨. ಡಾ. ವಿ. ಮುನಿವೆಂಕಟಪ್ಪ — ದಲಿತ ಚಳುವಳಿ ಒಂದು ಅವಲೋಕನ
ವಿಚಾರವಾದಿ ಪ್ರಕಾಶನ, ಕುವೆಂಪು ನಗರ
ಮೈಸೂರು-೨೩, ೧೯೯೮

೫೩ ಡಾ. ಮಲ್ಲಿಕಾರ್ಜುನ ಉೂಡ್ಲೆಗೇರೆ — ಭೂಸುಧಾರಣೆ ಕಾನೂನು ಮತ್ತು ಪ್ರಕ್ರಿಯೆಗಳು
ಪ್ರ. ಕರ್ನಾಟಕ ಕಾನೂನು ಮತ್ತು ಸಂಸದೀಯ
ಸುಧಾರಣೆ ಸಂಸ್ಥೆ, ಬೆಂಗಳೂರು-೨೦೦೯

೫೪. ಡಾ. ಎನ್. ಚಿನ್ನಸ್ವಾಮಿ ಸೋಸಲೆ — ದಲಿತರ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು
ಯಾಜಿ ಪ್ರಕಾಶನ, ಭೂಮಿ, ಎಂ.ಪಿ. ಪ್ರಕಾಶ ನಗರ
ಹೊಸಪೇಟೆ, ೨೦೧೨

೫೫. ಡಾ. ಸಿದ್ಧಲಿಂಗಯ್ಯ — ಜನ ಸಂಸ್ಕೃತಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೬. ಡಾ. ಕೆ. ಎಮ್ ಮೈತ್ರಿ — : ಬುಡಕಟ್ಟು ಕುಲ ಕಸುಬುಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೨

೫೭. Dr.B.R.Ambedkar — `State and Minorities', What are their rights and how to secure Them in the consitution of Free India, Publisher : Siddarth Books, Delhi-1947

೫೮. Dr.B.R.Ambedkar — Annihilation of Caste Kousalya Prakashana Aurangabad-2003

೫೯. ದಲಿತ ಟುಡೆ (ಹಿಂದಿ ಮಾಸಪತ್ರಿಕೆ) — ಪ್ರಕಾಶನ : ಎಕ್ಸಪ್ರೆಸ್ ಪ್ರಿಂಟರ್ಸ್ ೪೧ ಅರ್ಜುನ ನಗರ, ಗಾಜಿಯಾಬಾದ- ನವೆಂಬರ್, ೨೦೧೧

೬೦. ಡಾ. ಬಿ. ಪಿ. ರಾಮಯ್ಯ — ದಕ್ಷಿಣ ಕರ್ನಾಟಕದ ಕೊರಮರು-ಒಂದು ಸಾಂಸ್ಕೃತಿಕ ಅಧ್ಯಯನ, ಮಾನಸ ಪ್ರಕಾಶನ ಕುಮಟಾ (ಉ.ಕ) (೨೦೦೨)

೬೧. ಡಾ. ಎಚ್. ಎಸ್. ಅನುಪಮ (ಸಂ), — ಅಸಮಾನ ಭಾರತ, ಜಾತಿ ಗಣತಿ ಮೀಸಲಾತಿಯ ವಿಶ್ಲೇಷಣೆ, ಲಡಾಯಿ ಪ್ರಕಾಶನ, ಗದಗ-೨೦೧೦

೬೨. ದೇಜಗೌ — ಗದುಗಿನ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೬

೬೩. ಜಿ. ಎಲ್. ಬಡಿಗೇರ — ಸಮಾಜಶಾಸ್ತ್ರ ಪರಿಚಯ ಆಕಳವಾಡಿ ಬುಕ್ ಡಿಪೋ, ಧಾರವಾಡ-೧೯೯೬

೬೪. ಗಂಗಾಧರ ದೈವಜ್ಞ — ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೧೨

೬೫. ಗಂಗಾಧರ ಮೂರ್ತಿ — ನಾಗಸಂದ್ರ ಭೂ ಆಕ್ರಮಣ ಚಳುವಳಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕೋಲಾರ ಜಿಲ್ಲಾ ಶಾಖೆ, ಕೋಲಾರ-೧೯೮೯

೬೬. ಜಿ. ರಾಜಶೇಖರ — ದಾರು ಪ್ರತಿಮಾ ನ ಪೂಜಿವೇ ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-೧೯೯೩

೬೭. ಗಂಗತಮ್ಮಯ್ಯ — ಹಿಂದು ಧರ್ಮ ಮತ್ತು ದಲಿತ ವರ್ಗ ಗೀತಾ ಪ್ರಕಾಶ, ಬೆಂಗಳೂರು-೧೯೯೨

೬೮. ಎಚ್. ಬಿ. ದೊಡ್ಡಮನಿ — ಚುಂಚೂರು ಮಾಮರತಾಯಿ ಒಂದು ಅಧ್ಯಯನ ಶಾಂತಕುಮಾರ ಪ್ರಕಾಶನ, ಮಲ್ಲಾಬಾದ, ತಾ. ಅಫಜಲಪುರ, ಜಿ. ಗುಲಬರ್ಗಾ-೨೦೦೯

೧೯. ಹೆಚ್. ಕೆ. ನಾಗೇಶ — ಕೊಡವರ ಮದುವೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ-೧೯೯೯

೨೦. ಎಚ್. ಎನ್. ನಾಗಮೋಹನದಾಸ — ಅಸ್ಪೃಶ್ಯತೆ ಮತ್ತು ಕಾನೂನು
ಕನ್ನಡ ಅಭಿವೃದ್ಧಿ ಪ್ರಾಧಿಕಾರ,
ವಿಧಾನಸೌಧ, ಬೆಂಗಳೂರು-೧

೨೧ ಹಿ. ಚಿ. ಬೋರಲಿಂಗಯ್ಯ — ಕುಣಬಿಯರು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ-೨೦೧೦

೨೨. ಹೀ. ಚಿ. ಬೋರಲಿಂಗಯ್ಯ — ಕರ್ನಾಟಕ ಜನಪದ ಕಲೆಗಳ ಕೋಶ (ಸಂ)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ-ಹಂಪಿ,
ವಿದ್ಯಾರಣ್ಯ- ೧೯೯೬

೨೩. ಹನಮಂತ ಬಿ. ದೊಡ್ಡಮನಿ — ಜಾನಪದ ತೊಟ್ಟಿಲು
ಶಾಂತಕುಮಾರ ಪ್ರಕಾಶನ, ಮಲ್ಲಾಬಾದ, ತಾ. ಅಫಜಲಪುರ,
ಜಿ. ಗುಲಬರ್ಗಾ-೨೦೦೯.

೨೪. ಹನಮಂತ ಬಿ. ದೊಡ್ಡಮನಿ — ದೇವಿಕಾರ್ಯ
ಶಾಂತಕುಮಾರ ಪ್ರಕಾಶನ ಮಲ್ಲಾಬಾದ, ತಾ. ಅಫಜಲಪುರ,
ಜಿ. ಗುಲಬರ್ಗಾ-೧೯೯೭

೨೫. ಹರಿಲಾಲ ಪವಾರ — ಜನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆ ಕೊಡುಗೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ-೨೦೦೨

೨೬ ಹಿ. ಚಿ. ಬೋರಲಿಂಗಯ್ಯ,
ಎ. ಎಸ್. ಪ್ರಭಾಕರ್ (ಸಂ) — ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ-೨೦೦೪

೨೭ Justice P. S. Narayana's — The Schedule castes & Schedule Tribes
(Prevention of Attrocities)
Published by K. C. GOGIA
For M/s. Gogia Publication,
Hyderabad-2004

೨೮. ಜೋಗನ್ ಶಂಕರ — ದೇವದಾಸಿ ಸಂಪ್ರದಾಯ
ವಿಮೋಚನಾ ಪ್ರಕಾಶನ, ಅಥಣಿ,
ಜಿ. ಬೆಳಗಾವಿ-೧೯೯೩

೨೯. ಕಾ. ವೆಂ. ಶ್ರೀನಿವಾಸಮೂರ್ತಿ (ಸಂ.) — ಹೋರಾಟದ ನೂರು ಹಾಡುಗಳು
ಕರ್ನಾಟಕ ಜನಶಕ್ತಿ, ಕೊಟ್ಟಿಗೆ ಪಾಳ್ಯಂ,
ಬೆಂಗಳೂರು- ೨೦೧೧

೮೦. ಕಮಲಾ ಹೆಮ್ಮಿಗೆ — ಸವದತ್ತಿ ಎಲ್ಲ ಹಾಗೂ ದೇವದಾಸಿ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ
ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ, ಜಿ. ಬೆಳಗಾವಿ-೧೯೯೮

೮೧. ಕೆ. ಜಿ. ಗುರುಮೂರ್ತಿ — ಧರ್ಮ ಮತ್ತು ರಾಜಕೀಯ
ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ, ಜಿ. ಬೆಳಗಾವಿ-೧೯೯೬

೮೨. ಕೆ. ರವೀಂದ್ರನಾಥ — ಅಧ್ಯಯನದ ವಿಧಿ-ವಿಧಾನಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೮

೮೩. ಕೇಶವನ್ ಪ್ರಸಾದ್ — ಕಪ್ಪೆ ಹೊಲೆಯರ ಸಂಸ್ಕೃತಿ-ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೮೪. ಲಿಂಗಣ್ಣ ಸತ್ಯಂಪೇಟೆ — ಶವಶರಣೆ ಸೂಳೆ ಸಂಕವ್ವೆ ಮತ್ತು ಇತರರು
ಅನುಪಮ ಪ್ರಕಾಶನ, ಸಾವಿತ್ರಿ ಸದನ, ಸತ್ಯಪ್ರಮೋದ ನಗರ, ಅಥಣಿ, ಜಿ. ಬೆಳಗಾವಿ-೧೯೯೮

೮೫. ಲಕ್ಷ್ಮೀಕಾಂತ ಹುಚ್ಚಪ್ಪ — ಕರ್ನಾಟಕದ ದಲಿತ ಮತಮಾನ್ಯಗಳು: ಒಂದು ಸಂಸ್ಕೃತಿ ಅಧ್ಯಯನ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೨೦೧೧

೮೬. ಲಕ್ಷ್ಮಣ ತೆಲಗಾವಿ — ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು-೧೯೯೯

೮೭. ಎಂ. ಚಂದ್ರ ಪೂಜಾರಿ — ಸಂಶೋಧಕರು ಮತ್ತು ಕ್ಷೇತ್ರ ಕಾರ್ಯ,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೫

೮೮. ಎಂ. ಚಂದ್ರಪೂಜಾರಿ — ಸಂಶೋಧನಾ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೮

೮೯. ಎಂ. ಚಂದ್ರಪೂಜಾರಿ — ಸಮಾಜ ಸಂಶೋಧನೆ,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-ವಿದ್ಯಾರಣ್ಯ-೨೦೦೫

೯೦. ಎಂ. ನಂಜುಂಡಸ್ವಾಮಿ — ಹೊಲೆಯರು-ಮಾದರು-ರಾಜರು
ಮಾಳವ ಫಿಲೋಲಾಜಿಕಲ್ ಅಕಾಡೆಮಿ, ಬೆಂಗಳೂರು-೨೦೧೨

೯೧. ಎಂ. ನಂಜುಂಡಸ್ವಾಮಿ — ಭಾರತದ ಮೊದಲನೆಯ ದೊರೆಗಳು

ಮಾಳವ ಫಿಲೋಲಾಜಿಕಲ್ ಅಕಾಡೆಮಿ,
ಬೆಂಗಳೂರು-೨೦೧೨

೯೨. ಮಾರುತಿ ಆಯ್. — ದಿ ಹೊಲೆಯಾಸ್ ಸೋಶಿಯಲ್ ಚೇಂಜ್
ಮಂಗಲಾ ಪಬ್ಲಿಕೇಶನ್, ಮ್ಯೂಜಿಯಂ ರಸ್ತೆ,
ಮಂಗಳೂರು-೨೦೦೩

೯೩. ಮಲ್ಲಿಕಾರ್ಜುನ ದ. ಜಾವಾ — ಗುಲ್ಬರ್ಗಾ ಜಿಲ್ಲೆ ದಲಿತ ತತ್ವ ಪದಕಾರರು
ಒಂದು ಅಧ್ಯಯನ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೯೪. ಮಂಜುನಾಥ ಬೇವಿನಕಟ್ಟಿ — ಮೈಲಾರಲಿಂಗನ ಕಾವ್ಯ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ

೯೫. ಎಂ. ವೆಂಕಟಸ್ವಾಮಿ — ಅಸ್ಪೃಶ್ಯರು ಒಂದು ಪರಿಶೀಲನೆ
ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ. ಲಿ. ಎಂಬೆಸಿ ಸೆಂಟರ್
ರಸ್ತೆ, ಬೆಂಗಳೂರು-೨೦೦೩

೯೬. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು — ಗದಗ ಜಿಲ್ಲೆಯ ಅಂಕಿ-ಅಂಶಗಳ ನೋಟ,
ಜಿಲ್ಲಾ ಪಂಚಾಯತ, ಗದಗ-೨೦೦೯-೧೦

೯೭ ಮೊಗಳ್ಳಿ ಗಣೇಶ — ದಲಿತ ಚಿಂತನ,
ಪ್ರಸಾರಾಂಗ, ಕನ್ನಡ ವಿಶ್ವವಿಧ್ಯಾಲಯ ಹಂಪಿ-೨೦೦೫

೯೮. ಎಂ. ಎಸ್. ನರೇಗಲ್ಲ — ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ
ರವಿ ರಶ್ಮಿ ಪ್ರಾಶನ, ಗದಗ-೨೦೦೯

೯೯. ಮುಖ್ಯಕಾರ್ಯನಿರ್ಹಾಹಕ ಅಧಿಕಾರಿಗಳು — ಗದಗ ಜಿಲ್ಲೆಯ ಅಂಕಿ-ಅಂಶಗಳ ನೋಟ
೨೦೦೮-೨೦೦೯

೧೦೦. ಎನ್. (ಪ್ರ) ಚಂದ್ರಪ್ಪ — ಎಲ್ಲಮ್ಮ
ಮುಂಡ ಪ್ರಕಾಶನ, ನಂ. ೧೧೩, ವಿನಾಯಕ ನಗರ,
ಇಮ್ಮಡಿಹಳ್ಳಿ ಅಂಚೆ, ಬೆಂಗಳೂರು-೨೦೦೨.

೧೦೧. ನಾಗರಾಜ ಹೊಸುರಕರ್ — ಮೈಲಾರಲಿಂಗನ ಆಚರಣೆ : ಒಂದು ಸಾಂಸ್ಕೃತಿಕ ಅಧ್ಯಯನ
ಎಂ.ವಿ.ಸಿ. ಸ್ನಾತಕೋತ್ತರ ಸಂಶೋಧನಾ ಸಂಸ್ಥೆ,
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೨೦೦೮.

೧೦೨. ಪ್ರಕಾಶ ಖಾಡೆ — ಛಲವಾದಿ ಗೌರಮ್ಮ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜ. ತೋಂಟದಾರ್ಯ ಸಂಸ್ಥಾನ ಮಠ, ಗದಗ

೧೦೩. ಪುರುಷೋತ್ತಮ ಬಿಳಿಮಲೆ — ಹುಲಿಗೆಮ್ಮ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ- ೧೯೯೯

೧೦೪. ಪ್ರೊ. ಡಿ. ಶಿವರುದ್ರಪ್ಪ — ನಮ್ಮ ಗ್ರಾಮಾಡಳಿತ
ಕರ್ನಾಟಕ ಕಾನೂನು ಮತ್ತು ಸಂಸದೀಯ
ಸುಧಾರಣೆ ಸಂಸ್ಥೆ, ಬೆಂಗಳೂರು-೨೦೦೮

೧೦೫. ಪ್ರೊ. ಒಡೆಯರ ಡಿ. ಹೆಗ್ಗಡೆ — ಜಾತಿ ಶ್ರೇಣಿಕರಣ ಮತ್ತು ಅಸ್ಪೃಶ್ಯತೆ :
ಒಂದು ಐತಿಹಾಸಿಕ ವಿಶ್ಲೇಷಣೆ, ಲಕ್ಷ್ಮೀ ಪ್ರಿಂಟಿಂಗ್ &
ಪಬ್ಲಿಷರ್ ಹೌಸ್, ಮೈಸೂರು, ೨೦೧೦

೧೦೬ ಪ್ರೊ. ಲಕ್ಷ್ಮಣ ತೆಲಗಾವಿ — ಚಿತ್ರದುರ್ಗದ ಒನಕೆಯ ಓಬವ್ವ- ಚಾರಿತ್ರಿಕ ವಿಶ್ಲೇಷಣೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೦೭ ರಂಗಾರೆಡ್ಡಿ ಕೋಡಿರಾಂಪುರ, — ತತ್ವಪದಗಳು
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು-೨೦೦೯

೧೦೮ ರಾವು, — ಜಾತಿ ವ್ಯವಸ್ಥೆ ಉಗಮ ವಿಕಾಸ ವಿನಾಶ
ಸುಮೇದ ಪ್ರಕಾಶನ,
ಗುಲಬರ್ಗಾ, ೨೦೧೦

೧೦೯ ರಾಮಣ್ಣ ದೊಡ್ಡಪ್ಪ ಬ್ಯಾಟಿ, — ಡಾ. ಅಂಬೇಡ್ಕರ ಪುರಾಣ, ಜಗದ್ಗುರು ತೋಟದಾರ್ಯ
ಸಂಸ್ಥಾನಮಠ, ಡಂಬಳ-ಜಿಲ್ಲಾ ಗದಗ-೨೦೧೦

೧೧೦ ರಾಮ ಅಹುಜಾ, — ರಿಸರ್ಚ್ ಮೆಥಡ್, ರೇವತ್ ಪಬ್ಲಿಕೇಶನ್,
ಜೈಪುರ, ಇಂಡಿಯಾ-೨೦೦೭

೧೧೧ ರಹಮತ್ ತರಿಕೆರೆ — ಕನ್ನಡ ಸಂಶೋಧನೆ ತಾತ್ವಿಕ ವಿಚಾರ,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ-೨೦೦೯

೧೧೨ ಆರ್. ಗೋಪಾಲ (ಸಂ.) — ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಮೈಸೂರು-೨೦೦೬

೧೧೩. ಎಸ್. ಕಾಂಬಳೆ — ಲಿಂಗಾಯತ ಅಸ್ಪೃಶ್ಯರು ಒಂದು ಅಧ್ಯಯನ;
ಉರಿಲಿಂಗ ಪೆದ್ದಿ ಸಂಪ್ರದಾಯದ ಅಧ್ಯಯನ ವೀರಶೈವ
ಅಧ್ಯಯನ ಸಂಸ್ಥೆ, ಶ್ರೀ ಜ. ತೋಂಟದಾರ್ಯ ಸಂಸ್ಥಾನ ಮಠ,
ಗದಗ-೨೦೦೩.

೧೧೪. ಎಸ್. ಆರ್. ಸಿಂಗೆ — ಹೊಲೆಯರ ಒಂದು ಅಧ್ಯಯನ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧೫. ಶಿವರಾಮ ಅಸುಂಡಿ — ದಲಿತ ಸಾಂಸ್ಕೃತಿಕ ಲೋಕ
ಪ್ರ. ಸಚಿನ ಪಬ್ಲಿಕೇಶನ್, ಬೆಂಗಳೂರು-೨೦೦೭

೧೧೬. ಶ್ರೀಮತಿ ಹೇಮಲತಾ ಗಣಪತರಾವ — ಬೀದರ ಜಿಲ್ಲೆ ಟೋಕರಿಕೋಳಿ ಬುಡಕಟ್ಟು : ವಡ್ಡೆ ಒಂದು
ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ,
ಹಂಪಿ-ವಿದ್ಯಾರಣ್ಯ-೨೦೦೨

೧೧೭. ಶಿವರುದ್ರ ಕೆ. ಕಲ್ಲೋಳಿಕರ — ಹೊಲಗೇರಿ ರಾಜಕುಮಾರ, ಪ್ರ. ಅರಹತ್ ಪ್ರಕಾಶನ,
ಧಾರವಾಡ-೧೯೯೪

೧೧೮. ಎಸ್. ಎಸ್. ಹಿರೇಮಠ — ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ (ಭಾಗ-೨)
ಜಾತ್ರೆಗಳು, ಹೊಸಪೇಟೆ ಸಮತಾ ಪ್ರಕಾಶನ-೧೯೯೩.

೧೧೯. ಎಸ್. ಎಸ್. ಹಿರೇಮಠ, — ಜನಪದ ಸಮಾಜ, ಸಂಸ್ಕೃತಿ, ಪ್ರ. ಸೂರ್ಯ ಪ್ರಕಾಶನ,
ಚಿತ್ರದುರ್ಗ ಜಿಲ್ಲೆ-೨೦೦೫

೧೨೦. ಸ್ಮರಣ ಸಂಚಿಕೆ — ಲಕ್ಕುಂಡಿ ಉತ್ಸವ
ಪ್ರ. ಸುಬೋಧ ಯಾದವ,
ಜಿಲ್ಲಾಧಿಕಾರಿಗಳು, ಗದಗ-೨೦೦೯

೧೨೧. ಸುಭಾಸ ಭರಣಿ — ಧರೆಗೆ ದೊಡ್ಡವರು
ದ್ರಾವಿಡ ಪಬ್ಲಿಕೇಶನ್, ಮೈಸೂರು-೨೦೦೫

೧೨೨. ಶಶಿಕಲಾ ಮೋಲ್ದಿ — ಉತ್ತರ ಕರ್ನಾಟಕದ ಮದುವೆ ಹಾಡುಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

೧೨೩. ಎಸ್. ಜಿ. ಚಿಕ್ಕನಗೌಡರ — ಸಮಾಜಶಾಸ್ತ್ರ, ವಿದ್ಯಾನಿಧಿ ಪ್ರಕಾಶನ,
ಗದಗ-೧೯೯೭

೧೨೪. ಸಿದ್ಧಲಿಂಗಯ್ಯ — ಗ್ರಾಮದೇವತೆಗಳು
ಅಂಕಿತ ಪ್ರಕಾಶನ, ೫೩, ಶ್ಯಾಮಸಿಂಗ್ ಕಾಂಪ್ಲೆಕ್ಸ್, ಗಾಂಧಿ
ಬಜಾರ್ ಮುಖ್ಯರಸ್ತೆ, ಬಸವನಗುಡಿ,
ಬೆಂಗಳೂರು-೧೯೯೭

೧೨೫. ಸಿದ್ದಣ್ಣ ಬಿ. ಉತ್ನಾಳ — ಶರಣ ಸೌರಭ
ಅನುಪಮ ಪ್ರಕಾಶನ, ಸಾವಿತ್ರಿ ಸದನ, ಸತ್ಯಪ್ರಮೋದ ನಗರ,
ಅಥಣಿ, ಜಿ. ಬೆಳಗಾವಿ-೧೯೯೮

೧೨೬. ಎಸ್. ಎನ್. ವೆಂಕಟಾಪುರ — ಡಾ. ಪುಟ್ಟರಾಜ ಗವಾಯಿಗಳು ಜೀವನ-ಸಾಹಿತ್ಯ
ಪ್ರಭುದೇವ ಪ್ರಕಾಶನ, ಹೊಸಹಳ್ಳಿ, ತಾ.ಜಿ. ಗದಗ-೨೦೧೦

೧೨೭. ಶ್ರೀ ಅಂಬೇಕರ ಗುರೂಜಿ — ಭಾರತ ಋಷಿಮುನಿಗಳು
ಡಾ. ಬಾಬಾಸಾಹೇಬ ಅಂಬೇಡ್ಕರ ವಿಚಾರ ವೇದಿಕೆ
ಬಿಜಾಪುರ

೧೨೮. ಶ್ರೀಮತಿ ಕಸ್ತೂರಿ ಜಿ. ಬೆಳಮಗಿ — ಅಂಬೇಡ್ಕರ ಆ್ಯಂಡ್ ಹೀಜ್ ವೀವ್ಸ್ ಆನ್
ಎಜ್ಯುಕೇಶನ್, ಗು.ವಿ.ವಿ. ಗುಲಬರ್ಗಾ-೧೯೯೫

೧೨೯. ಸಂಕಿಪ್ತ ಕನ್ನಡ ನಿಘಂಟು, — ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು-೨೦೧೦

೧೩೦. ಸಿದ್ಧಲಿಂಗಯ್ಯ ಹಕ್ಕಿನೋಟ — ಕಲ್ಯಾಣಿ ಪ್ರಕಾಶನ, ಬನಶಂಕರಿ ೧ನೇ ಹಂತ,
ಬೆಂಗಳೂರು, ೧೯೯೦

೧೩೧ ಸೋಶಿಯಲ್ ಸೈನ್ಸ್ ಗೆಝುಟೀಯರ್ — ಜರ್ನಲ್ ಆಫ್ ಇಂಡಿಯನ್ ಸೋಶಿಯಲ್ ಸೈನ್ಸ್
ಅಸೋಸಿಯೇಶನ್ ವಾಲ್ಯೂಮ್ -೧ ಜನವರಿ
ಮತ್ತು ಜೂನ್, ೨೦೦೬

೧೩೨ ಸಮಾಜ ಶೋಧನ (Vol.14) — ಜರ್ನಲ್ ಆರ್ಫ ದಿ ಮಂಗಳೂರು ಸೋಶಿಯೋಲೊಜಿಕ್
ಅಸೋಶಿಯೇಶನ್, ಮಂಗಳೂರು,
ಮಾರ್ಚ ಮತ್ತು ಅಕ್ಟೋಬರ್, ೨೦೦೩

೧೩೩. ಟಿ. ಎಂ. ಭಾಸ್ಕರ — ಬೀದರ ಜಿಲ್ಲೆ ದಲಿತರ ಸಂಪ್ರದಾಯಗಳು,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೧೯೮೮

೧೩೪. T. A. Parthasarathy — Gazzetteer of India, Karnataka State,
Dharwad Dist.-2002

೧೩೫. ಟಿ. ಎಂ. ಭಾಸ್ಕರ — ಮುತ್ತಿನಹಾರ ಮಾಲಿಕೆ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು, ೨೦೦೯

೧೩೬. ಟಿ. ಕೆ. ಮೇಟಿ — ಗ್ರಾಮಾಭ್ಯುದಯದ ಯೋಜನಾಂಗಗಳು
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೧೯೭೨

೧೩೭ ಟಿ. ಎಂ. ಭಾಸ್ಕರ, — ಕಸುಬಿನ ಹಾಡುಗಳು ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೨೦೦೯

೧೩೮. ಟಿ. ಆರ್. ಚಂದ್ರಶೇಖರ (ಸಂ.) ದಲಿತ ಅಧ್ಯಯನ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೫

೧೩೯. ತುಷಾರ ಪತ್ರಿಕೆ ಮಾರ್ಚ್-೨೦೧೦ ಸಂ.೩೭, ಸಂ.೧೨

೧೪೦. ಟಿ. ಆರ್. ಚಂದ್ರಶೇಖರ (ಸಂ.) ಅಭಿವೃದ್ಧಿ ಅಧ್ಯಯನ ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦

೧೪೧. ವಿಜಯಶ್ರೀ ಇಟ್ಟಣ್ಣವರ ಹದಿನೆಂಟು ಜಾತಿಗಳು,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೨೦೧೧

೩. ಮಾಹಿತಿದಾರರು

ಅನಂ	ಹೆಸರು	ವಯಸ್ಸು	ಗ್ರಾಮ/ನಗರ
೧.	ರಾಮಚಂದ್ರ ಛಲವಾದಿ	(೫೯)	ಗದಗ
೨.	ದೊಡ್ಡಹನುಮಂತಪ್ಪ ಫಕೀರಪ್ಪ ಕಾಳಿ	(೬೪)	ನೀಲಗುಂದ
೩.	ನೀಲಪ್ಪ ಫಕೀರಪ್ಪ ಛಲವಾದಿ	(೬೪)	ಚಿಂಚಲಿ
೪.	ಯಲ್ಲಪ್ಪ ಹಣಮಂತ ಕಾಳೆ	(೬೪)	ಮುಳಗುಂದ
೫.	ಹನಮಂತ ದು. ಸಂಕಣ್ಣವರ	(೬೦)	ಮಲ್ಲಸಮುದ್ರ
೬.	ಮೈಲಾರೆಪ್ಪ ಯಮನಪ್ಪ ಛಲವಾದಿ	(೬೦)	ನಾಗಾವಿ
೭.	ರಾಮಪ್ಪ ಚನ್ನಪ್ಪ ದಿಂಡೆನವರ	(೫೦)	ಕುರ್ತಕೋಟಿ
೮.	ಗಿರಿಯಪ್ಪ ಲಿಂಗಬಸಪ್ಪ ಮಿಶೆಣ್ಣವರ	(೬೬)	ಕುರ್ತಕೋಟಿ
೯.	ಬೂದಪ್ಪ ದುರಗಪ್ಪ ಕೋಟಗಾರ	(೬೦)	ಹೊಸಳ್ಳಿ
೧೦.	ವಿರೂಪಕ್ಷಪ್ಪ ಬಸಪ್ಪ ಗುರನವರ	(೪೫)	ಕುರ್ತಕೋಟಿ
೧೧.	ಮಲಕಪ್ಪ ತಾಯಿ ಯಲ್ಲವ್ವ ಜಕ್ಕಮನವರ	(೬೪)	ನೀಲಗುಂದ
೧೨.	ಅನಸೂಯಾ ತಾಯಿ ದುರಗವ್ವ ಗಟ್ಟೆನವರ	(೬೨)	ಮದಗಾನೂರ
೧೩.	ಎಲ್. ಎಚ್. ನಾಗನಾಥ	(೬೯)	ಗದಗ
೧೪.	ಯಲ್ಲಪ್ಪ ಕೆ. ಅಡವಿ	(೫೯)	ಕೊಪ್ಪಳ
೧೫.	ತಿಮ್ಮಪ್ಪ ಕಾಳೆ	(೬೫)	ಗದಗ
೧೬.	ಸೋಮವ್ವ ಸಿದ್ದಪ್ಪ ಛಲವಾದಿ ದೇವದಾಸಿ	(೪೫)	ಮುಂಡರಗಿ
೧೭.	ಚಂದ್ರಶೇಖರ ಗಾಡಗೊಳ್ಳಿ	(೫೫)	ಕೌಜಗೇರಿ
೧೮.	ಶ್ರೀಮತಿ ಕಮಲಾ ಉಮೇಶ ಛಲವಾದಿ	(೪೦)	ಹೊಳೆಮಣ್ಣೂರ
೧೯.	ಮೈಲಾರಪ್ಪ ಹ. ಛಲವಾದಿ	(೩೫)	ಹೊನ್ನಮುರ
೨೦.	ದಾನಮ್ಮ ರಾಮಪ್ಪ ಛಲವಾದಿ	(೪೫)	ಯಾಸಹಡಗಲಿ
೨೧.	ನಿಂಗಪ್ಪ ಯ. ಛಲವಾದಿ	(೬೫)	ನಿಡಗುಂದಿ
೨೨.	ಯಲ್ಲಪ್ಪ ಛಲವಾದಿ	(೩೫)	ಮೆಣಸಗಿ

೨೩. ಫಕೀರಪ್ಪ ಯಲ್ಲಪ್ಪ ಕಾಳೆ	(೫೦)	ಮಾಳವಾಡ
೨೪. ಶ್ರೀಮತಿ ಅನ್ನಪೂರ್ಣ ಛಲವಾದಿ	(೪೭)	ಡಂಬಳ
೨೫. ಬಸವರಾಜ ಛಲವಾದಿ	(೩೦)	ಶಿರಹಟ್ಟಿ
೨೬. ವಾಯ್. ಎನ್. ಛಲವಾದಿ	(೬೨)	ಹುಲ್ಲೂರು
೨೭. ಶ್ರೀಮತಿ ಅಕ್ಕವ್ವ ಬಸವಂತಪ್ಪ ದೊಡಮನಿ	(೫೦)	ಕೊಣ್ಣೂರು
೨೮. ಸೋಮಪ್ಪ ನೀಲಪ್ಪ ಛಲವಾದಿ	(೫೬	ಕಪ್ಪಲಿ
೨೯. ಯಲ್ಲಪ್ಪ ನಿಂಗನಬಸಪ್ಪ ಛಲವಾದಿ	(೬೦)	ನಾಗನೂರ
೩೦. ಮಾರ್ತಾಂಡಪ್ಪ ಕರಿಯಪ್ಪ ಛಲವಾದಿ	(೬೦)	ಹದ್ಲಿ
೩೧. ಅನಸವ್ವ ಲಿಂಗಬಸಪ್ಪ ಛಲವಾದಿ	(೫೦)	ಗಂಗಾಪೂರ
೩೨. ಮಾದೇವಪ್ಪ ರಂಗಪ್ಪ ಛಲವಾದಿ	(೬೮)	ಬೈರನಹಟ್ಟಿ
೩೩. ಗುರುನಾಥ ಮಾರುತಿ ಛಲವಾದಿ	(೩೦)	ಬೈರನಹಟ್ಟಿ
೩೪. ಸಿದ್ದಪ್ಪ ಛಲವಾದಿ	(೫೦)	ಹುಲ್ಲೂರು.
೩೫. ಷಣ್ಮುಖಪ್ಪ ಸಿಪಾಯಿ	(೩೦)	ಚಿಕ್ಕನರಗುಂದ
೩೬. ಪರಶುರಾಮ ಕಳಕಪ್ಪ ಛಲವಾದಿ	(೩೮)	ಗಜೇಂದ್ರಗಡ
೩೭. ದುರಗಪ್ಪ ಮಲ್ಲಪ್ಪ ಛಲವಾದಿ	(೩೦)	ಸೂಡಿ
೩೮. ನಾಗಪ್ಪ ಶೇಖಪ್ಪ ಛಲವಾದಿ	(೬೦)	ಬೆನಕೊಪ್ಪ
೩೯. ತಿಪ್ಪಣ್ಣ ಕಾಳಿ	(೪೦)	ಸೂರಣಗಿ
೪೦. ಸಂಗನಬಸಪ್ಪ ದೊಡಮನಿ	(೫೦)	ಗದಗ
೪೧. ಸಿದ್ದಪ್ಪ ಹನಮಂತ ಛಲವಾದಿ	(೫೪)	ನರೇಗಲ್ಲ
೪೨. ಫಕೀರಪ್ಪ ಸಂಗಪ್ಪ ಛಲವಾದಿ	(೫೫)	ಮುಳಗುಂದ
೪೩. ವಸಂತ ಪರಸಪ್ಪ ಪಟಗೂರ	(೫೦)	ಮುಳಗುಂದ
೪೪. ಬಸಪ್ಪ ಸಣ್ಣಹಣಮಂತ ಕಾಳಿ	(೫೦)	ಮುಳಗುಂದ
೪೫. ಬಸಪ್ಪ ಪರಸಪ್ಪ ಛಲವಾದಿ	(೪೯)	ಕೊಣ್ಣೂರು
೪೬. ಶಿವಾನಂದ ಶಾಂತಮ್ಮ ಛಲವಾದಿ	(೪೬)	ಕೊಣ್ಣೂರು

೪೭. ಬಿ. ಬಿ. ನರಗುಂದ	(೬೦)	ಕಪ್ಪಲಿ
೪೮. ಮುದಿಪ್ಪಜ್ಜ ನಿಂಗಬಸಪ್ಪ	(೫೦)	ಬೆನ್ನಕೊಪ್ಪ
೪೯. ಮುಪ್ಪನಿಂಗ ಬಸಪ್ಪ ಛಲವಾದಿ	(೬೫)	ರಡ್ಡೇರ ನಾಗನೂರ
೫೦. ಯಲ್ಲಪ್ಪ ಶಿವಪ್ಪ ಛಲವಾದಿ	(೫೦)	ಬನಹಟ್ಟಿ
೫೧. ಯಲ್ಲಪ್ಪ ಛಲವಾದಿ	(೪೦)	ಬನಹಟ್ಟಿ
೫೨. ಬಸಪ್ಪ ಕೆಂಚಪ್ಪ ಛಲವಾದಿ	(೪೦)	ಚಿಕ್ಕನರಗುಂದ
೫೩. ಫಕೀರಪ್ಪ ಭರಮಪ್ಪ ಛಲವಾದಿ	(೫೫)	ಹದ್ಲಿ
೫೪. ಮಿಲಿಂದ ಯಲ್ಲಪ್ಪ ಛಲವಾದಿ	(೪೯)	ಹದ್ಲಿ
೫೫. ಸಿದ್ದಪ್ಪ ಹಣಮಂತ ಛಲವಾದಿ	(೪೮)	ನರೇಗಲ್ಲ
೫೬. ಬಸವರಾಜ ಸತ್ಯೆಪ್ಪ ಛಲವಾದಿ	(೪೮)	ನರೇಗಲ್ಲ
೫೭ ವೀರಪ್ಪ ಫಕೀರಪ್ಪ ಪೂಜಾರಿ	(೫೬)	ನರೇಗಲ್ಲ
೫೮. ಎಮ್. ಎಲ್. ಹಾದಿಮನಿ	(೪೫)	ರೋಣ
೫೯. ಶಕುಂತಲಾ ಸಿದ್ಧಲಿಂಗಪ್ಪ ದೊಡ್ಡಮನಿ	(೪೫)	ರೋಣ
೬೦. ವಸಂತ ತಿಪ್ಪಣ್ಣ ಛಲವಾದಿ	(೩೮)	ರೋಣ
೬೧. ಎಫ್. ವಾಯ್. ದೊಡ್ಡಮನಿ	(೫೦)	ನರಗುಂದ

ಗದಗ ಜಿಲ್ಲೆಯ ಛಲವಾದಿ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ
(ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ)

I ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ :
ಬಿ. ಬುಡಕಟ್ಟು :
ಸಿ. ಮಾತೃಭಾಷೆ :
ಡಿ. ಮನೆದೇವರು :
ಇ. ಗೋತ್ರ/ಬೆಡಗು/ಬಳಿ/ಕುಲ :

ಎಫ್. ಕುಲಚಿಹ್ನೆ :
ಜಿ. ಮನೆತನದ ಹೆಸರು :
ಎಚ್. ಮನೆ ಸಂಖ್ಯೆ :
ಐ. ಗ್ರಾಮ/ಪಟ್ಟಣ/ನಗರ :
ಜೆ. ವಾರ್ಡ :
ಕೆ. ಪಂಚಾಯತಿ :
ಎಲ್. ತಾಲೂಕು :

ಎಂ. ಜಿಲ್ಲೆ :
ಎನ್. ಭೂಹಿಡುವಳಿ (ಎಕರೆಗಳಲ್ಲಿ)
೧. ಒಣ :
೨. ನೀರಾವರಿ :
ಒ. ನಿವೇಶನ, ಮನೆ ಇಲ್ಲ :
ಪಿ. ನಿವೇಶನ ಇದೆ, ಮನೆ ಇಲ್ಲ :

II. ವೈಯಕ್ತಿಕ ಮಾಹಿತಿ

ಕ್ರ.ಸಂ.	ಕುಟುಂಬದ ಸದಸ್ಯರ ಹೆಸರು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಕುಟುಂಬ ಯೋಜನೆ	ಸರಕಾರಿ ಸೌಲಭ್ಯಗಳು				
									ಒಟಿನ ಕಾರ್ಡ	ವಿಧವೆ	ಅಂಗವಿಕಲ	ವೃದ್ಧಾಪ್ಯ ವೇತನ	ಶಿಷ್ಯವೇತನ
i	i	iii	iv	v	vi	vii	viii	ix	x	xi	xii	xiii	xiv
೧.													
೨.													
೩.													
೪.													
೫.													
೬.													
೭													
೮.													
೯.													
೧೦.													

ಕ್ಯೂ. ಪಶು ಸಂಪತ್ತು (ಸಂಖ್ಯೆ)
೧. ಎತ್ತು, ಹೋರಿ :
೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :

ಆರ್. ಮನೆ ವಿವರ
೧. ಗುಡಾರ
೨. ಗುಡಿಸಲು
೩. ಟಿನ್ ಮನೆ
೪. ದಾದಾ ಮಾಳಿಗೆ
೫. ಆರ್.ಸಿ.ಸಿ. ಮನೆ
೬. ಹಂಚಿನ ಮನೆ
೭. ಆಶ್ರಯ ಮನೆ
೮. ಬಾಡಿಗೆ ಮನೆ
೯.
೧೦. ನಿವೇಶನ
ಅ) ಸ್ವಂತದ್ದು
ಬ) ಸರಕಾರದ್ದು
೧೧. ಮನೆ
ಅ) ಸ್ವಂತದ್ದು
ಬ) ಸರಕಾರದ್ದು
೧೨. ವಿದ್ಯುತ್
ಅ) ಸ್ವಂತದ್ದು
ಬ) ಸರಕಾರದ್ದು
೧೩. ಇತರ ಸೌಲಭ್ಯಗಳು
೧. ಪಡಿತರ ಚೀಟಿ
೨. ಗ್ಯಾಸ್
೩. ನಲ್ಲಿ
೪. ಶೌಚಾಲಯ
೫. ಸ್ನಾನಗೃಹ
೬. ಸೈಕಲ್
೭. ರೇಡಿಯೋ
೮. ಟೇಪ್‌ರಿಕಾರ್ಡರ್
೯. ಟಿ.ವಿ.
೧೦. ದೂರವಾಣಿ

ಶ್ರೀ ಎಸ್. ವಾಯ್. ಹೊನ್ನುಂಗರ, ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ. ಚಲುವರಾಜು, ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

೫. ಭಾವಚಿತ್ರಗಳು



ಛಲವಾದಿ ಸಮುದಾಯದ ವಧೂ-ವರರು



ಛಲವಾದಿ ಸಮುದಾಯದ ಹಿರಿಯ ಮಹಿಳೆಯರೊಂದಿಗೆ ಸಂಶೋಧಕ



ಛಲವಾದಿಯವರು ವಾಸಿಸುವ ಗುಡಿಸಲು



ಮಹಾಪ್ರವಾಹದಿಂದ ಕುಸಿದಿರುವ ಛಲವಾದಿಯವರ ಮನೆ



ಛಲವಾದಿ ಮಹಾಸಭಾದ ಅಧ್ಯಕ್ಷರಿಂದ ಬಹುಮಾನ ಪಡೆಯುತ್ತಿರುವ ಜಿಲ್ಲೆಯ ಶ್ರೇಷ್ಠ ಕಲಾವಿದ



ಗಂಟೆ ಬಟ್ಟಲು ಹೊತ್ತುಕೊಂಡು ತಿರುಗುವ ಛಲವಾದಿ ಹಿರಿಯ



ಛಲವಾದಿಯವರ ಕುಟುಂಬದ ಪಶುಸಂಪತ್ತು



ದಲಾಲಿ ಅಂಗಡಿಯಲ್ಲಿ ಹಮಾಲಿ ಕೆಲಸದಲ್ಲಿ ನಿರತ ಛಲವಾದಿ ಪುರುಷ ಮತ್ತು ಮಹಿಳೆ



ಕೃಷಿ ಕೂಲಿಯ ಕೆಲಸ ಮಾಡುತ್ತಿರುವ ಛಲವಾದಿ ಮಹಿಳೆಯರು



ಸಣ್ಣಪುಟ್ಟ ಕಾಯಿಪಲ್ಯೆ ವ್ಯಾಪಾರ ಮಾಡುತ್ತಿರುವ ಛಲವಾದಿ ಮಹಿಳೆಯರು



ಮಳೆಗಾಲದಲ್ಲಿ ಕೃಷಿ ಕೆಲಸಕ್ಕೆ ಹೋಗಲು ಸಿದ್ಧವಾಗಿ ನಿಂತಿರುವ ಛಲವಾದಿ ಮಹಿಳೆ



ಒಂಟೆತ್ತಿನಿಂದ ಹಮಾಲಿ ಕೆಲಸ ಮಾಡುವ ಛಲವಾದಿ



ಭಜನೆ ಮಾಡುತ್ತಿರುವ ಛಲವಾದಿ ಬಾಂಧವರು



ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷರು ಹಾಗೂ ಸದಸ್ಯರು



ದೇವದಾಸಿಯರು



ಆರ್ಥಿಕ ಸಮಸ್ಯೆಯಿಂದ ಪೂರ್ಣ ಶಿಕ್ಷಣ ಮುಗಿಸದ ಮಕ್ಕಳು



ಛಲವಾದಿಯವರ ಮನೆ ದೇವತೆಯಾದ ಸವದತ್ತಿ ಎಲ್ಲಮ್ಮನ ದೇವಸ್ಥಾನ



ಶ್ರೀಲಿಂಗ ಬಸವನ ಜಾತ್ರೆಯಲ್ಲಿ ಪ್ರತಿ ವರ್ಷ ಪಾಲ್ಗೊಳ್ಳುವ ಛಲವಾದಿ ಸಮುದಾಯದವರು



ಬ್ಯಾಂಜೋ ಬಾರಿಸುತ್ತಿರುವ ಛಲವಾದಿ ಸಮುದಾಯದ ಯುವಕರು



ಛಲವಾದಿ ಸಮುದಾಯದವರು ಪೂಜಿಸುವ ಜೋಗುಳಬಾಯಿ ಸತ್ಯವ್ವನ ಕೊಳ



ಡಾ. ಬಿ.ಆರ್. ಅಂಬೇಡ್ಕರ್ ಪುರಾಣ ಗ್ರಂಥವನ್ನು ಹೊತ್ತಿರುವ ಛಲವಾದಿ ಹಿರಿಯ ನಾಯಕ



ಕೋಡಿಹಳ್ಳಿ ಎಲ್ಲಮ್ಮನ ಪೂಜಾರ್ಥಿಯಾಗಿ ಸೇವೆ ಮಾಡುತ್ತಿರುವ ಛಲವಾದಿಯ ಮಹಿಳೆ



ಮೊಹರಂ ಹಬ್ಬದಲ್ಲಿ ಕಲಾಪ್ರದರ್ಶನ ಮಾಡುತ್ತಿರುವ ಛಲವಾದಿ ಯುವಕರು



ಡಾ. ಬಿ.ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಹಣಾ ಕಾರ್ಯಕ್ರಮದಲ್ಲಿ ಛಲವಾದಿ ಸಮುದಾಯದ ಮುಖಂಡರು



ಗ್ರಾಮೀಣ ಪ್ರದೇಶದಲ್ಲಿ ಅಂಬೇಡ್ಕರ ಅವರ ಜಯಂತಿಯನ್ನು ಆಚರಿಸುತ್ತಿರುವ ಛಲವಾದಿ ಬಾಂಧವರು



ಡಾ. ಬಿ.ಆರ್. ಅಂಬೇಡ್ಕರ ಅವರ ಜಯಂತಿಯಲ್ಲಿ ಛಲವಾದಿ ಮಹಾಸಭಾದ ನಾಯಕರು



ಕಹಳೆ ಊದುತ್ತಿರುವ ಛಲವಾದಿಯವರು



ಸೋಬಾನೆ ಪದವನ್ನು ಹಾಡುತ್ತಿರುವ ಛಲವಾದಿ ಮಹಿಳೆಯರು



ಡಾ. ಬಿ.ಆರ್. ಅಂಬೇಡ್ಕರ ಅವರ ಜಯಂತಿಯಲ್ಲಿ ಪಾಲ್ಗೊಂಡಿರುವ ಛಲವಾದಿ ಮಹಿಳೆಯರು



ಡಾ. ಅಂಬೇಡ್ಕರ್ ಅವರ ಮಹಾಪರಿವಾಣದ ಉದ್ಘಾಟನೆ ಮಾಡುತ್ತಿರುವ
ರಾಜ್ಯದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು(6-12-2008)



ಡೋಣಿ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಗ್ರಾಮದ ಪ್ರಮುಖರು
ಡಾ. ಬಿ.ಆರ್. ಅಂಬೇಡ್ಕರ ಅವರಿಗೆ ನಮನ ಸಲ್ಲಿಸುತ್ತಿರುವುದು



ಜಲ್ಲಾ ಛಲವಾದಿ ಮಹಾಸಭಾದಿಂದ ಶ್ರೀಮತಿ ಮೋಟಮ್ಮನವರನ್ನು ಸನ್ಮಾನಿಸುತ್ತಿರುವುದು



ಬೈಕ್ ರ್‍ಯಾಲಿಯಲ್ಲಿ ಅಂಬೇಡ್ಕರ್ ನಗರದ ಯುವಕರು



ಛಲವಾದಿ ಸಮುದಾಯದ ರಾಜ್ಯ ಹಿರಿಯ ನಾಯಕ ಕೆ. ಶಿವರಾಮರೊಂದಿಗೆ ಸಂಶೋಧಕ



ಡಾ. ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಜಿಯವರು ಡಾ. ಜಿ.ಪರಮೇಶ್ವರ ಅವರನ್ನು ಸನ್ಮಾನಿಸುತ್ತಿರುವುದು



ರಾಜ್ಯ ಹಿರಿಯ ಮುಖಂಡರಿಗೆ ಜಿಲ್ಲಾ ಛಲವಾದಿ ಮಹಾಸಭಾದಿಂದ ಸನ್ಮಾನ



ಸಮುದಾಯದ ಹಿರಿಯರೊಂದಿಗೆ ಛಲವಾದಿ ಮಹಾಸಭಾದ ನಾಯಕರು



ಬೆಂಗಳೂರಿನಲ್ಲಿ ನಡೆದ ದ್ವಿತೀಯ ಛಲವಾದಿ ಮಹಾಸಭಾದ ಸಮ್ಮೇಳನದಲ್ಲಿ ಭಾಗವಹಿಸಿದ ಸಮುದಾಯದ ಜನರು



ವಸತಿ ಸೌಲಭ್ಯಕ್ಕಾಗಿ ಸತ್ಯಾಗ್ರಹದಲ್ಲಿ ತೊಡಗಿರುವ ಸಮುದಾಯದ ಜನರು